ಬಳ್ಳಾರಿ ಜಿಲ್ಲೆಯ ಜನಪದ ಆಚರಣೆಗಳು

ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ. ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು

ಎ.ಎಸ್. ಸಿದ್ದೇಶ್ವರಿ

ಮಾರ್ಗದರ್ಶಕರು

ಡಾ. ಸ.ಚಿ. ರಮೇಶ್

ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೩

545

ಬಳ್ಳಾರಿ ಜಿಲ್ಲೆಯ ಜನಪದ ಆಚರಣೆಗಳು

(ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ. ಪದವಿಗಾಗಿ
ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು
ಎ.ಎಸ್. ಸಿದ್ದೇಶ್ವರಿ

ಮಾರ್ಗದರ್ಶಕರು
ಡಾ. ಸ.ಚಿ. ರಮೇಶ್
ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೩

ಮಾರ್ಗದರ್ಶಕರ ದೃಢೀಕರಣ ಪತ್ರ

ಎ.ಎನ್. ಸಿದ್ದೇಶ್ವರಿ ಇವರು ಬಳ್ಳಾರಿ ಜಿಲ್ಲೆಯ ಜನಪದ ಆಚರಣೆಗಳು ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಜಾನಪದ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ : 9.10.17

(ಡಾ. ಸ.ಚಿ. ರಮೇಶ್)
ಮಾರ್ಗದರ್ಶಕರು ಮತ್ತು ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸಂಶೋಧಕರ ಪ್ರಮಾಣ ಪತ್ರ

ಬಳ್ಳಾರಿ ಜಿಲ್ಲೆಯ ಜನಪದ ಆಚರಣೆಗಳು ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಡಾ. ಸ.ಚಿ. ರಮೇಶ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : 09/10/2013

(ಎ.ಎನ್. ಸಿದ್ದೇಶ್ವರಿ)
ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿನಿ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಯಾರ‍್ಯಾರ ನೆನೆಯಲಿ

ಬಳ್ಳಾರಿ ಜಿಲ್ಲೆ ಭೌಗೋಳಿಕವಾಗಿ, ಚಾರಿತ್ರಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಕರ್ನಾಟಕ ಸಂಸ್ಕೃತಿಗೆ ತನ್ನದೇ ಆದ ಕೊಡುಗೆಯನ್ನು ನೀಡಿದೆ. ಹಲವಾರು ನಂಬಿಕೆ, ಪುರಾಣ, ಸಂಪ್ರದಾಯ, ಐತಿಹ್ಯಗಳನ್ನೊಳಗೊಂಡ ಆಚರಣೆಗಳು ಜಿಲ್ಲೆಯಲ್ಲಿ ಹಾಸುಹೊಕ್ಕಾಗಿವೆ. ಕಾಲದಿಂದ ಕಾಲಕ್ಕೆ, ವ್ಯಕ್ತಿಯಿಂದ ವ್ಯಕ್ತಿಗೆ ಹರಿದು ಬಂದು ಆಚರಿಸಲ್ಪಡುತ್ತಿರುವ ಸಂಸ್ಕೃತಿಯ ಪ್ರತಿಬಿಂಬಗಳಂತಿರುವ ಆಚರಣೆಗಳನ್ನು ಕೂಲಂಕಷವಾಗಿ ಅಧ್ಯಯನಕ್ಕೆ ಒಳಪಡಿಸಿದಾಗ ಅವುಗಳಲ್ಲಿಯ ಮೌಲ್ಯಗಳನ್ನು ಅರಿಯಲು ಸಾಧ್ಯ. ಈ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ ಪಿಎಚ್.ಡಿ. ಅಧ್ಯಯನದ ಮಹಾಪ್ರಬಂಧ ಇದಾಗಿದೆ. ಈ ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟ ಕನ್ನಡ ವಿಶ್ವವಿದ್ಯಾಲಯದ ಹಿಂದಿನ ಕುಲಪತಿಗಳಾದ ಡಾ. ಎ. ಮುರಿಗೆಪ್ಪ ಮತ್ತು ಇಂದಿನ ಕುಲಪತಿಗಳಾದ ಡಾ. ಹಿ.ಚಿ. ಬೋರಲಿಂಗಯ್ಯ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ. ಹಾಗೆಯೇ ಹಿಂದಿನ ಕುಲಸಚಿವರಾದ ಡಾ. ಮಂಜುನಾಥ ಬೇವಿನಕಟ್ಟಿ ಮತ್ತು ಇಂದಿನ ಕುಲಸಚಿವರಾದ ಡಾ. ವಿಜಯ್ ಪೂಣಚ್ಚ ತಂಬಂಡ, ಅಧ್ಯಯನಾಂಗದ ನಿರ್ದೇಶಕರಾದ ಡಾ. ಎಫ್.ಟಿ. ಹಳ್ಳಿಕೇರಿ ಅವರನ್ನು ಗೌರವಪೂರ್ವಕವಾಗಿ ನೆನೆಯುತ್ತೇನೆ.

ಪ್ರಬಂಧದ ಮುಕ್ತಾಯದವರೆಗೂ ಆತ್ಮೀಯವಾಗಿ ತಾಳ್ಮೆಯಿಂದ ಮಾರ್ಗದರ್ಶನ ಮಾಡಿದ ಗುರುಗಳಾದ ಪ್ರೊ. ಸ.ಚಿ. ರಮೇಶ್ ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳು. ಅಧ್ಯಯನದ ಅವಧಿಯಲ್ಲಿ ಸೂಕ್ತ ಸಲಹೆ, ಸೂಚನೆಗಳನ್ನು ನೀಡಿದ ಜಾನಪದ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ. ಮೊಗಳ್ಳಿ ಗಣೇಶ್, ವಿಭಾಗದ ಪ್ರಾಧ್ಯಾಪಕರುಗಳಾದ ಡಾ. ಹೆಬ್ಬಾಲೆ ಕೆ. ನಾಗೇಶ್, ಡಾ. ಸಿ.ಟಿ. ಗುರುಪ್ರಸಾದ್ ಮತ್ತು ವಿಭಾಗದ ಸಿಬ್ಬಂದಿ ವರ್ಗದವರನ್ನು ಸ್ಮರಿಸುತ್ತೇನೆ.

ಅಧ್ಯಯನಕ್ಕೆ ಪೂರಕವಾದ ವಿಷಯವನ್ನು ಚರ್ಚೆಯ ಮೂಲಕ ವಿಭಿನ್ನ ರೀತಿಯ ನಿಲುವುಗಳಿಂದ ತಿಳಿಯಪಡಿಸಿದ ವಿಶ್ರಾಂತ ಪ್ರಾಧ್ಯಾಪಕರು, ಜಾನಪದ ತಜ್ಞರೂ ಆದ ಡಾ. ಬಸವರಾಜ ಮಲಶೆಟ್ಟಿ ಹಾಗೂ ಹಸ್ತಪ್ರತಿ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ಕೆ. ರವೀಂದ್ರನಾಥ ಅವರನ್ನು ನೆನೆಯುತ್ತೇನೆ. ಅಧ್ಯಯನದ ಪ್ರಗತಿಗೆ ಬೆನ್ನೆಲುಬಾಗಿ ನಿಂತು ಸಂಶೋಧನೆಯ ಪ್ರತಿ ಹಂತದಲ್ಲೂ ಚರ್ಚಿಸುತ್ತಾ ಪ್ರೋತ್ಸಾಹ ನೀಡಿದ ಹಾಗೂ ವಿಶೇಷವಾಗಿ ಮಹಾಪ್ರಬಂಧದ ಕರಡು ತಿದ್ದಿ ಸೂಕ್ತ ಸಲಹೆಗಳನ್ನು ನೀಡಿದ ಡಾ. ಎಸ್. ಮೋಹನ್‌ರವರಿಗೆ, ಕ್ಷೇತ್ರಕಾರ್ಯದಲ್ಲಿ ಮಾಹಿತಿ ನೀಡಿದ ವಕ್ತೃಬಾಂಧವರಿಗೂ ಅಭಾರಿಯಾಗಿದ್ದೇನೆ. ಸಂಶೋಧನಾ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ಆಶೀರ್ವದಿಸಿದ ಪರಮಪೂಜ್ಯ ಶ್ರೀ ಮ.ನಿ.ಪ್ರ. ಪ್ರಭುಸ್ವಾಮಿಗಳು ವಿರಕ್ತಮಠ, ಸಂಡೂರು ಇವರಿಗೆ ಭಕ್ತಿಪೂರ್ವಕ ನಮನಗಳು.

ಅಧ್ಯಯನದ ಹಲವು ಸಂದರ್ಭಗಳಲ್ಲಿ ಸೂಕ್ತ ಸಲಹೆ, ಸಹಕಾರಗಳನ್ನು ನೀಡಿದ ಬಳ್ಳಾರಿ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಸಚಿವ(ಮೌಲ್ಯಮಾಪನ)ರಾದ ಡಾ. ರಂಗರಾಜ ವನದುರ್ಗ, ಡಾ. ಕೆ. ಮಾಧವ ಪೆರಾಜೆ, ಡಾ. ಚಲುವರಾಜು, ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ಡಾ. ಮಲ್ಲಿಕಾರ್ಜುನ ವಣೇನೂರು, ಡಾ. ವಿಶ್ವೇಶ್ವರಪ್ಪ, ಡಾ. ಎ.ಎಂ. ರಾಜಶೇಖರಯ್ಯ, ಡಾ. ವೆಂಕಟಗಿರಿ ದಳವಾಯಿ, ಡಾ. ಜಾಜಿ ದೇವೇಂದ್ರಪ್ಪ, ಡಾ. ಚಂದ್ರಪ್ಪ ಸೊಬಟಿ ಮತ್ತು ಡಾ. ಚಂದ್ರಮೌಳಿ ಅವರ ಸಹಕಾರವನ್ನು ನಾನೆಂದೂ ಮರೆಯಲಾರೆ.

ನನ್ನ ಅಧ್ಯಯನಕ್ಕೆ ಪ್ರಮುಖ ಪ್ರೇರಕರಾಗಿ ಧೈರ್ಯ ನೀಡಿ ಮುನ್ನಡೆಸಿದ ಪತಿ ಶ್ರೀ ಎನ್. ಬಸವರಾಜ್ ಹಾಗೂ ಮಗ ಸಂದೀಪ್, ತಾಯಿ ಶ್ರೀಮತಿ ಬಿ. ಓಂಕಾರಮ್ಮ ಮತ್ತು ಮಗಳ ಪ್ರಗತಿಗೆ ಸದಾ ಹರ್ಷ ವ್ಯಕ್ತಪಡಿಸುತ್ತಿದ್ದ ಇತ್ತೀಚೆಗೆ ನಮ್ಮನ್ನಗಲಿದ ತಂದೆ ದಿವಂಗತ ಶ್ರೀ ಎ.ಎನ್. ತಿಪ್ಪೇಸ್ವಾಮಿ ಅವರನ್ನು ನೆನೆಯುತ್ತೇನೆ.

ನನ್ನ ಕುಟುಂಬದ ಎಲ್ಲಾ ಜವಾಬ್ದಾರಿಯನ್ನು ಹೊತ್ತು, ಅಧ್ಯಯನದ ಕೆಲಸಗಳಲ್ಲಿ ಬೇಸರವಿಲ್ಲದೆ ಸಹಕರಿಸಿದ ತಂಗಿ ಶ್ರೀಮತಿ ಎ.ಎನ್. ವಿದ್ಯಾವತಿ ವೀರೇಶ್, ಶ್ರೀ ಬಿ. ವೀರೇಶ್‌ರವರನ್ನು, ಕ್ಷೇತ್ರಕಾರ್ಯಕ್ಕೆ ಸಹಕರಿಸಿದ ಸಹೋದರ ಶ್ರೀ ಎ.ಎನ್. ಸುಧಾಕರ್‌ರವರನ್ನು, ಮಾವಂದಿರಾದ ಶ್ರೀ ಎನ್. ಷಡಾಕ್ಷರಪ್ಪ, ಶ್ರೀ ಎನ್. ವೀರಣ್ಣ ಹಾಗೂ ಅಕ್ಕ ಶ್ರೀಮತಿ ಶಾಂತಮ್ಮ ವೀರಣ್ಣ ಹಾಗೂ ನಡುವಲಮನೆ ಕುಟುಂಬ ವರ್ಗದವರನ್ನು, ನನ್ನ ಕೆಲಸದ ಉತ್ಸಾಹದ ಚಿಲುಮೆಗಳಾದ ವಿನಯ್, ಸಿಂಚನ ಅವರನ್ನು ಪ್ರೀತಿಯಿಂದ ನೆನೆಯುವೆ. ಅಚ್ಚುಕಟ್ಟಾಗಿ ಅಕ್ಷರ ಸಂಯೋಜನೆ ಮಾಡಿದ ಕಮಲಾಪುರದ ಸವಿತ ಗ್ರಾಫಿಕ್ಸ್‌ನ ಶ್ರೀ ಜೆ. ಬಸವರಾಜ ಮತ್ತು ಶ್ರೀ ಫೋಟೋ ಸ್ಟುಡಿಯೋ ಮತ್ತು ವಿಡಿಯೋದ ನಿಂಗಯ್ಯ ಚಿಕ್ಕಮಠ, ಕಮಲಾಪುರ ಅವರಿಗೆ ಹೃತ್ಪೂರ್ವಕ ಧನ್ಯವಾದಗಳು.

ಎ.ಎನ್. ಸಿದ್ದೇಶ್ವರಿ

ಬಳ್ಳಾರಿ ಜಿಲ್ಲೆ ನಕ್ಷೆ



ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಮತ್ತು ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಮತ್ತು ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಪ್ರಸ್ತಾವನೆ

ಜಾನಪದ ಜಗತ್ತು ವಿಶಾಲವಾದುದ್ದು; ವೈವಿಧ್ಯತೆಯಿಂದ ಕೂಡಿರುವಂಥದ್ದು. ಜಾನಪದದಲ್ಲಿ ಮನುಕುಲದ ಜೀವನ ಕ್ರಮಗಳಿವೆ. ಜನಪದರು ಜೀವನದಲ್ಲಿ ಹೊಂದಿರುವ ಆದರ್ಶಗಳೆಲ್ಲಾ ಸಹಜವಾಗಿ ಜಾನಪದದ ಮೂಲಕ ವ್ಯಕ್ತಗೊಂಡಿದೆ. ಆದಿಕಾಲದಿಂದಲೂ ಮನುಕುಲದ ಸ್ಥಿತ್ಯಂತರ ನಿಧಾನಗತಿಯಲ್ಲಿ ಸಾಗಿಬಂದಿದೆ. ಅದರೊಂದಿಗೆ ಜಾನಪದವೂ ಗುಪ್ತಗಾಮಿನಿಯಾಗಿ ಮುಂದುವರಿದಿದೆ. ಇಂದಿನ ಆಧುನಿಕ, ವೈಜ್ಞಾನಿಕ ಯುಗದಲ್ಲಿ ನಾವೆಲ್ಲಾ 'ನಾಗರಿಕ'ರೆಂದು ಕರೆಸಿಕೊಳ್ಳುತ್ತಿದ್ದೇವೆ. ನಾವು ಇಂದು ಜಾನಪದವನ್ನು 'ಮೂಢನಂಬಿಕೆ', 'ಅನಾಗರಿಕತೆ' ಎಂದು ಹಣೆಪಟ್ಟಿ ಕೊಡುವ ಮುನ್ನ ಆಲೋಚಿಸಬೇಕಿದೆ. ಯಾಕೆಂದರೆ ಇಂದು ಯಾವುದು ನಮ್ಮಿಂದ ವಿಜ್ಞಾನ ಎಂದು ಕರೆಯಲ್ಪಟ್ಟಿದೆಯೋ, ಅದರ ತಾಯಿಬೇರು 'ಮೌಢ್ಯತೆ' ಎಂದು ಕರೆಯಲ್ಪಡುವ ಜಾನಪದದಲ್ಲಿದೆ. ಜಾನಪದ ಸದಾ ಚಲನಶೀಲವಾದುದು. ಸಜೀವ ಪಳಿಯುಳಿಕೆಗಳು ಮಾತ್ರ ಅದರಲ್ಲಿವೆ. ಅವು ಕಾಲಮಾನದ ಅಗತ್ಯಕ್ಕೆ ಅನುಗುಣವಾಗಿ ಮಾರ್ಪಾಟಾಗಿವೆ. ಅಲ್ಲದೆ ಜೀವಂತ ಪಳಿಯುಳಿಕೆಗಳಾಗಿ ವರ್ತಮಾನಕ್ಕೆ ತಕ್ಕಂತೆ ಮುಂದುವರಿಯುತ್ತಿವೆ.

ಈ ಮೊದಲು ಪ್ರಸ್ತಾಪಿಸಿದಂತೆ ಸರ್ವಾತ್ಮಕವಾದ ಜಾನಪದದ ಒಡಲಲ್ಲಿ ಎಲ್ಲವೂ ಇದೆ. ನಡೆದಷ್ಟು ದಾರಿಗಳಿವೆ. ಇಂದು ಅವುಗಳನ್ನು ಸರಿಯಾದ ಕ್ರಮದಲ್ಲಿ ಗುರುತಿಸುವ ಮೂಲಕ ಪ್ರತಿಫಲ ಪಡೆಯಬೇಕಿದೆ. ಜನಪದರ ಸಾಹಿತ್ಯ, ಕಲೆ, ಸಂಸ್ಕೃತಿ, ನಡಾವಳಿ, ಸಂಪ್ರದಾಯ, ಆಚರಣೆ, ವೈದ್ಯ ವಿಜ್ಞಾನಗಳಲ್ಲಿ ಮಾನವ ಕುಲದ ಬೆಳವಣಿಗೆಗೆ ಬೇಕಾದ ಸೂಕ್ಷ್ಮ ಅಂಶಗಳು ಅಡಕವಾಗಿವೆ. ಅವು ಕಂಠಸ್ಥ (Oral Tradition) ಪರಂಪರೆಯ ಮೂಲಕ ಸಾವಿರಾರು ವರ್ಷಗಳಿಂದ ತಲೆಮಾರಿನಿಂದ ತಲೆಮಾರಿಗೆ ಸಾಗಿಬಂದಿವೆ. ಅವುಗಳ ಉಳಿಕೆಗೆ ಜನಪದರ ಶ್ರದ್ಧೆ ಕಾರಣವಾಗಿದೆ. ಯಾವುದೇ ವೈಜ್ಞಾನಿಕ ಸಲಕರಣೆಗಳನ್ನು ಬಳಸದೇ ಜನಪದರು ಸದೃಢ ಜೀವನ ನಡೆಸಿರುವುದನ್ನು ಗಮನಿಸಬೇಕು. ಜನಪದ ಸಂಸ್ಕೃತಿ ಜೀವಂತವಾಗಿ ಸಾಗುತ್ತಲೇ ಬಂದಿದೆ. ಅವು ಹಿಂದಿನಿಂದಲೂ ಮಾನವನ ಜೀವನ ರೂಪಿಸುವಲ್ಲಿ ಹಾಗೂ ಪೋಷಿಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ. ಅನಾಗರಿಕತೆ (ಅನಾಗರಿಕತೆಯಲ್ಲ : ಸ್ಥಿತ್ಯಂತರ)ಯಿಂದ ನಾಗರಿಕತೆಗೆ ಬರುವ ಹಾದಿ ಸುಗಮವಾದುದೇನಲ್ಲ.

ಆಗ ಉಂಟಾದ ತೊಡಕುಗಳನ್ನು ಪರಿಹರಿಸಿಕೊಳ್ಳಲು ಅವರು ಕಂಡುಕೊಂಡ ಮಾರ್ಗೋಪಾಯಗಳನ್ನು ತಿಳಿಯುವ ಅಗತ್ಯತೆ ಇಂದಿನ ಅಧ್ಯಯನಕಾರರಿಗಿರಬೇಕಾಗಿದೆ.

ಕಂಠಸ್ಥ ಪರಂಪರೆಯ ಒಂದು ಭಾಗವಾದ ಆಚರಣೆಗಳ ಬಗ್ಗೆ ಪ್ರಸ್ತುತ ಅಧ್ಯಯನ ಮಾಡಲಾಗಿದೆ. ದೇಜಗೌ ಅವರು ಹೇಳಿದಂತೆ "ಸಂಪ್ರದಾಯಗಳ ಮೊತ್ತವೇ ಸಮಾಜ. ಅವುಗಳ ಆಚರಣೆಯೇ ಜೀವನ" (೨೦೦೧, ಪು. ೫೫೭). ಮಾನವನ ಜೀವನವು ಹುಟ್ಟಿನಿಂದ ಸಾವಿನವರೆಗೂ ಒಂದಲ್ಲಾ ಒಂದು ರೀತಿಯ ಸಂಪ್ರದಾಯ, ಆಚರಣೆಗಳ ಮೂಲಕ ಸಾಗಿ ಬರಲೇಬೇಕು. ತಲೆಮಾರಿನಿಂದ ತಲೆಮಾರಿಗೆ ಹಿರಿಯರಿಂದ ಕಿರಿಯರಿಗೆ ವರ್ಗಾವಣೆಗೊಳ್ಳುತ್ತಾ ಬರುತ್ತಿದೆ. ಇದಕ್ಕೆ ಲಿಖಿತ ಶಾಸನಗಳಿಲ್ಲ, ಕಾನೂನುಗಳಿಲ್ಲ. ಆದರೂ ನಿರಾತಂಕವಾಗಿ ಸಾಗಿಬರುವ ಶಕ್ತಿ ಪಡೆದಿವೆ. ಜನಪದರ ಬದುಕಿಗೆ ಪೂರಕವಾದ ಅಂಶಗಳನ್ನು ಹೊಂದಿರುವುದೇ ಇದಕ್ಕೆ ಕಾರಣ. ಹಾಗಾಗಿ 'ಜಾನಪದಕ್ಕೆ ಎಂದೂ ಸಾವಿಲ್ಲ' ಎಂದು ವಿದ್ವಾಂಸ ಫಾಟರ್ ಹೇಳಿರುವುದು. ಇಂದಿನ ವೈಜ್ಞಾನಿಕ ಯುಗದಲ್ಲಿಯೂ ಜನಪದ ಆಚರಣೆಗಳಿಗೆ ಜೀವಂತಿಕೆಯಿದೆ. ಈ ಜೀವಂತಿಕೆಗೆ ಕಾರಣ ಅವುಗಳಲ್ಲಿಡಗಿದ ಜೀವಪೋಷಕ ಅಂಶಗಳು. ಪರಿಸರ ಪೂರಕ ಅಂಶಗಳಿರುವುದು ಮತ್ತು ಜಗತ್ತಿನ ಸಮಸ್ತ ಜೀವಕೋಟಿಯನ್ನು ಸಮಾನತೆಯಿಂದ ಕಾಣುವುದು. ಆಚರಣೆಗಳನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ಮಾತ್ರ ಅವುಗಳಲ್ಲಿಯ ಸತ್ಯಾಂಶಗಳನ್ನು ತಿಳಿಯಲು ಸಾಧ್ಯ. ಈ ಹಿನ್ನೆಲೆಯಲ್ಲಿ "ಬಳ್ಳಾರಿ ಜಿಲ್ಲೆಯ ಜನಪದ ಆಚರಣೆಗಳು" ಎಂಬ ಶೀರ್ಷಿಕೆಯಡಿಯಲ್ಲಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಜನಪದರು ಹುಟ್ಟಿನಿಂದ ಸಾವಿನವರೆಗೂ ಚಾಚೂ ತಪ್ಪದೆ ಆಚರಣೆಗಳನ್ನು ರೂಢಿಸಿಕೊಂಡು ಬಂದಿದ್ದಾರೆ. ಆಚರಣೆಗಳಿಗೆ ಸಮಾಜವನ್ನು ಒಂದುಗೂಡಿಸುವ, ವ್ಯಕ್ತಿಗಳನ್ನು ಅಡ್ಡದಾರಿಗೆ ಹೋಗದಂತೆ ತಡೆಯುವ ಶಕ್ತಿಯಿದೆ. ವಿಧಿನಿಷೇಧಗಳು ಮಾನವನಲ್ಲಿ ಭಕ್ತಿಯ ಜೊತೆ ಭಯ ಮೂಡಿಸಿ, ವ್ಯವಸ್ಥಿತವಾಗಿ ಆಚರಣೆಗಳು ಏರ್ಪಡುವಲ್ಲಿ ಸಹಾಯಕವಾಗಿವೆ. ವೈಜ್ಞಾನಿಕವಾಗಿ ಎಷ್ಟೇ ಮುಂದುವರಿದರೂ ಜಾತಕಕ್ಕೆ ಮೊರೆಹೋಗುತ್ತಿರುವುದು ಗಮನಾರ್ಹ. ದೈವೀ ಭಯದ ಹಿನ್ನೆಲೆಯಲ್ಲಿ ಆಚರಣೆಗಳು ಇಂದಿಗೂ ಸಮಾಜದ ಶಾಂತಿಯನ್ನು ಕಾಪಾಡುತ್ತಿವೆ. ಸಾಮರಸ್ಯದ ಬದುಕಿಗೆ ನಾಂದಿಯಾಗಿವೆ. ಸಮಸ್ತ ಜನರ ಭಾಗವಹಿಸುವಿಕೆಯಿಂದ ಸಾಮೂಹಿಕ ಪ್ರಜ್ಞೆ ಮೂಡುತ್ತಿದೆ. ಹೀಗೆ ಪರಸ್ಪರ ಸಹಕಾರ ಭಾವ ಹೊಂದಲು ಹಾಗೂ ಒಗ್ಗಟ್ಟನ್ನುಂಟುಮಾಡಿ ನೆಮ್ಮದಿಯಿಂದಿರಲು ಆಚರಣೆಗಳಲ್ಲಿ ಹಲವಾರು ಮಾರ್ಗೋಪಾಯಗಳು ಹಾಗೂ ರೀತಿನೀತಿಗಳುಂಟು. ಇಂದಿನ ಜ್ಞಾನಶಾಖೆಗಳನ್ನು ಮೀರಿಸುವ ಪರಂಪರಾಗತ ಜ್ಞಾನವು ಗುಪ್ತಗಾಮಿನಿಯಾಗಿ ಆಚರಣೆಯಲ್ಲಿ ಸಾಗಿಬಂದಿದೆ. ಆಚರಣೆಗಳು ಜನಪದರ ಬಾಳಿನ ಸಮೃದ್ಧಿಗೆ ಸೂತ್ರಗಳಿದ್ದಂತೆ.

ಕೆ.ವೈ. ನಾರಾಯಣಸ್ವಾಮಿಯವರ ಪ್ರಕಾರ ಜನಪದರ ಜೀವನ ಭೂಮಿ, ಗಾಳಿ, ನೀರು, ಬೆಂಕಿ ಮತ್ತು ಆಕಾಶದ ಜೊತೆ ಅನನ್ಯ ಸಂಬಂಧ ಪಡೆದುಕೊಂಡಿವೆ (೨೦೦೦, ಪು. ೪೪). ಇಂದು ಅವುಗಳನ್ನು ಪಂಚಭೂತಗಳೆಂದು ವ್ಯಾಖ್ಯಾನಿಸಲಾಗುತ್ತಿದೆ. ಆದರೆ ಜನಪದರು ಈ ರೀತಿಯ ವ್ಯಾಖ್ಯಾನಗಳಿಲ್ಲದೇ ಬಿಡಿ ಬಿಡಿಯಾಗಿ ಪ್ರಾಕೃತಿಕ ವಸ್ತುಗಳನ್ನು ಪೂಜಿಸಿ ಗೌರವಿಸುತ್ತಾ ಬಂದಿದ್ದಾರೆ. ಅವು ಜನಪದರ ಬದುಕಲ್ಲಿ ಸರ್ವಸ್ವವಾಗಿವೆ. ಪ್ರಕೃತಿಯ ಮಡಿಲಲ್ಲಿನ ಬದುಕು ಸಹಜವಾಗಿ ಪ್ರಕೃತಿಯ ಬಗ್ಗೆ ಕಾಳಜಿ ಹೊಂದುವಂತೆ

ಮಾಡಿದೆ. ಇಂದು ಬದಲಾದ ಜೀವನ ಕ್ರಮಗಳಿಂದ ಅವು ದುರ್ಬಲಗೊಳ್ಳುತ್ತಿವೆ. ಜೀವನ ಚಕ್ರ ಸರಪಳಿ ಏರುಪೇರಾಗುತ್ತಿದೆ. ಪ್ರಕೃತಿದತ್ತವಾದ ವಸ್ತುಗಳನ್ನು ಗೌರವಿಸಿ ಮಿತವಾಗಿ ಬಳಸಿದ್ದೇ ಆದರೆ ಇಂದೂ ಜೀವನ ಸರಪಳಿ ಸರಿಪಡಿಸಲು ಸಾಧ್ಯವಿದೆ. ಜನಪದರು ಅವುಗಳ ರಕ್ಷಣೆಗೆ ಹತ್ತಾರು ಹಬ್ಬ ಆಚರಣೆ, ವಿಧಿ, ನಿಷೇಧ, ನಂಬಿಕೆಗಳನ್ನು ರೂಢಿಗೆ ತಂದು ಸರ್ವರಿಗೂ ಸಮಪಾಲು-ಸಮಬಾಳು ಎಂಬಂತೆ ಬಾಳಿ ತೋರಿಸಿಕೊಟ್ಟಿರುವುದನ್ನು ಅಲ್ಲಗಳೆಯುವಂತಿಲ್ಲ.

ಜನಪದ ಆಚರಣೆಗಳ ಮೂಲ ಆಶಯ ಕೃಷಿ ಅಭಿವೃದ್ಧಿಯ ಮೂಲಕ ಸರಳ ಸಹಜ ಬದುಕು ಹೊಂದುವುದಾಗಿದೆ. ಆಚರಣೆಗಳು ಭೂಮಿ, ಮಳೆ, ಬೀಜ, ಪ್ರಕೃತಿಯೊಂದಿಗೆ ಗಾಢ ಸಂಬಂಧ ಹೊಂದಿವೆ. ಗ್ರಾಮ ಸಮುದಾಯದೊಂದಿಗೆ ಸಮಗ್ರತೆಯನ್ನು ಕಾಯ್ದುಕೊಂಡಿವೆ. ಕೃಷಿ ಚಟುವಟಿಕೆಯ ಪ್ರತಿಹಂತದಲ್ಲೂ ಪರಸ್ಪರ ಸಾಮರಸ್ಯದ ಆಶಯ ಹೊಂದಿ ಆಚರಿಸಲ್ಪಡುತ್ತಿವೆ. ನಮ್ಮ ನೆಲಕ್ಕೆ ಮಳೆ ಬರಲಿ ಎನ್ನುತ್ತಾರೆಯೇ ಹೊರತು ನನ್ನ ಹೊಲಕ್ಕೆ ಮಳೆಯಾಗಲೆಂದು ಯಾರೂ ಕೇಳುವುದಿಲ್ಲ. ಅವರ ಬಯಕೆಗಳಲ್ಲಿರುವ ಸಮಷ್ಟಿ ಹಿತಕ್ಕೆ ಪೂರಕವಾದ ಆಶಯಗಳನ್ನು ಗಮನಿಸಬೇಕು. ಪೂರ್ವಿಕರ ಅನುಭವಗಳಿಂದ ಅನುಷ್ಠಾನಗೊಂಡ ಬೇಸಾಯಕ್ರಮ, ಜ್ಞಾನ ಶ್ರದ್ಧೆಗಳನ್ನು ಆಚರಣೆಗಳು ಜತನವಾಗಿ ಕಾಪಾಡಿಕೊಂಡು ಬಂದಿವೆ. ಅವು ವ್ಯವಸ್ಥಿತ ರೀತಿಯಲ್ಲಿ ಮುಂದೆ ಸಾಗಬೇಕಿದೆ. ಆಗ ಮಾತ್ರ ಅದರ ಫಲಶ್ರುತಿ ಪಡೆಯಲು ಸಾಧ್ಯ. ಎಂ.ಜಿ. ಈಶ್ವರಪ್ಪನವರ ಪ್ರಕಾರ "ಸಮುದಾಯ ಒಂದು ನಿರ್ದಿಷ್ಟ ಜಾಗದಲ್ಲಿ, ನಿರ್ದಿಷ್ಟ ಕಾಲದಲ್ಲಿ ಕ್ರಮಬದ್ಧವಾಗಿ ನಡೆಸುವ ವಿಧಿಯೇ ಆಚರಣೆ" (೧೯೯೯, ಪು. ೫೦). ಇಲ್ಲಿ ಒಂದು ಆಚರಣೆ ನೆರವೇರಲು ಕಾಲ, ಸ್ಥಳ ಹಾಗೂ ವಿಧಿವಿಧಾನಗಳು ಮುಖ್ಯವಾಗುತ್ತವೆ. ಅವುಗಳಲ್ಲಿ ದೈವೀ ಭಯದ ಜೊತೆಗೆ ಧಾರ್ಮಿಕ ಶ್ರದ್ಧೆಯೂ ಅತ್ಯಗತ್ಯ. ಅವು ಕೇವಲ ಆಚರಣೆಯಾಗಿರದೇ ಬದುಕಿನ ಭಾಗವಾಗಿದ್ದಾಗ ಮಾತ್ರ ಅದು ಸಾಧ್ಯ. ವರ್ಷವೆಲ್ಲಾ ಕೃಷಿಕರು ಆಚರಣೆಗಳ ಮೂಲಕ ಕೃಷಿ ಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ. ಕೃಷಿಕರ ಬದುಕಲ್ಲಿ ಆಚರಣೆಗಳು ಬೆಸುಗೆಯಾಗಿವೆ. ಅವುಗಳಿಗೆ ಸ್ಥಳ, ಕಾಲ, ವಿಧಿ, ನಿಯಮ, ಆಹಾರ ಪದ್ಧತಿ, ಸಮಷ್ಟಿಹಿತಗಳು ಕೊಂಡಿಯಾಗಿರುತ್ತವೆ. ಕೊಂಡಿ ಕಳಚುವಿಕೆಯಿಂದ ಜೀವನ ಪಲ್ಲಟಗೊಳ್ಳಲು ಸಾಧ್ಯವಿದೆ. ಆಗ ಸಹಜವಾಗಿ ಆಚರಣೆಗಳು ಸ್ಥಿತ್ಯಂತರಕ್ಕೆ ಒಳಪಡುತ್ತವೆ ಹಾಗೂ ಜನಪದರ ಜೀವನ ಕ್ರಮಗಳು ಅತಂತ್ರ ಸ್ಥಿತಿ ತಲುಪುವ ಸಾಧ್ಯತೆಗಳಿವೆ.

ಜನಪದ ದೈವಗಳು ಮಾತೃಸ್ವರೂಪದ ನೆಲೆಯಿಂದ ಆರಂಭಗೊಂಡಿರಬೇಕು. ತನಗೆ ಗೋಚರವಾದ ವಸ್ತುಗಳಲ್ಲಿ ಮಾತೃಸ್ವರೂಪದ 'ಅಮ್ಮ' ಎಂಬ ಕಲ್ಪನೆಯಿದೆ. ಇವನ್ನು ಸ್ತ್ರೀದೈವಗಳ ಹೆಸರುಗಳಿಂದಲೇ ಕರೆಯಲಾಗುತ್ತದೆ. ಇಲ್ಲಿ ಅಮ್ಮ ಎಂದರೆ ತಾಯಿಯೂ ಹೌದು ವೈದ್ಯೆಯೂ ಹೌದು. ಅಮ್ಮನ ಆಚರಣೆಗಳಲ್ಲಿ ಮಕ್ಕಳ ಪೋಷಣೆ ಮತ್ತು ಆರೋಗ್ಯಪಾಲನಾತತ್ತ್ವ, ಔಷಧೋಪಚಾರಗಳು ನಡೆಯುತ್ತಿರುತ್ತವೆ. ಕೂಡ್ಲಿಗಿಯಲ್ಲಿ ಅಮ್ಮನ ಆಚರಣೆಯಲ್ಲಿ ಗುಳೇ ಹೋಗುವ ಸಂಪ್ರದಾಯ ಇಂದಿಗೂ ಪ್ರಚಲಿತದಲ್ಲಿದೆ. ಒಂದು ದಿನದಮಟ್ಟಿಗೆ ಗ್ರಾಮ ತೊರೆಯುವ ಮೂಲಕ ಗ್ರಾಮ ನೈರ್ಮಲ್ಯ, ಸಾಂಕ್ರಾಮಿಕ ರೋಗನಿವಾರಣೆ, ಪರಸ್ಪರ ಸಾಮೂಹಿಕ ವನ ಭೋಜನ ಹೀಗೆ ಆಚರಣೆಯ ನೆಪದಲ್ಲಿ ಮಾನವ ಸಂಬಂಧಗಳನ್ನು ಬೆಸೆಯುವ ಆಶಯಗಳು ಕಂಡುಬರುತ್ತವೆ.

ಜನಪದರಿಗೆ ಹಿಂದಿನಿಂದಲೂ ಸಸ್ಯಸಂಕುಲದ ಬಗ್ಗೆ ಭಕ್ತಿ, ಗೌರವ, ಭಯದ ಜೊತೆಗೆ ಅಷ್ಟೇ ಕಾಳಜಿ ಇದೆ. ಹಾಗಾಗಿ ದೇವರ ಕಾಡು, ದೇವರ ವನಗಳೆಂದು ಕರೆಯಲ್ಪಡುವ ವನ್ಯಸಂಪತ್ತು, ದೈವೀ ಭಯದ ನೆರಳಲ್ಲಿ ಆಚರಣೆಗಳ ಮೂಲಕ ಕಾಪಾಡಿಕೊಂಡಿದ್ದಾರೆ. ಹೀಗೆ ಜನಪದರ ಆಚರಣೆಗಳು ಪರಿಸರ ರಕ್ಷಣೆಯ ಸಮತೋಲನವನ್ನು ಕಾಪಾಡುವ ಆಶಯ ಹೊಂದಿದವುಗಳಾಗಿವೆ. ಇಂದು ಪರಿಸರ ಕಲುಷಿತಗೊಳ್ಳುತ್ತಿದೆ; ಮಾರಾಟದ ಸರಕಾಗುತ್ತಿದೆ. ಉಸಿರುಕಟ್ಟುವ ವಾತಾವರಣ ಸೃಷ್ಟಿಗೊಳ್ಳುತ್ತಿದೆ. ಅಮೂಲ್ಯವಾದ ಪ್ರಕೃತಿದತ್ತ ಸಂಪತ್ತು ಕಣ್ಮರೆಯಾಗುವ ಹಂತ ತಲುಪುತ್ತಿದೆ. ಇದಕ್ಕೆ ಆಧುನಿಕ ಮಾನವನ ಐಷಾರಾಮಿ ಜೀವನ ಕಾರಣವಾಗಿದೆ. ಪರಿಸರವನ್ನು ಅಸಡ್ಡೆಯಿಂದ ಕಾಣುವುದು, ನಾಶಪಡಿಸುವುದು, ಅದರ ಮೇಲೆ ತನ್ನ ಒಡೆತನವನ್ನು ಸ್ಥಾಪಿಸಿಕೊಳ್ಳುವುದು ಇಡೀ ಪರಿಸರವನ್ನು ತಾನೇ ಹತೋಟಿಯಲ್ಲಿಡಬಹುದೆಂಬ ಭ್ರಮೆಯಿಂದ ತಾನೇ ಅಧಃಪತನವಾಗುತ್ತಿರುವುದನ್ನು ಗಮನಿಸಬೇಕಾಗಿದೆ. ಮಾನವನ ಬದುಕಿಗೆ ಪರಿಸರ ಅತ್ಯಗತ್ಯ. ಆಹಾರ, ಉಡುಗೆ, ತೊಡುಗೆ, ಆಶ್ರಯಗಳಿಗೆ ಒಟ್ಟು ಮಾನವನ ಜೀವಕ್ಕೆ ಸಸ್ಯಸಂಪತ್ತು ಅನಿವಾರ್ಯ. ಪರಿಸರ ಮಾಲಿನ್ಯ ತಡೆಗಟ್ಟುವಲ್ಲಿ ಫಲವತ್ತತೆ ಹೆಚ್ಚಿಸುವಲ್ಲಿ, ರೋಗಗಳನ್ನು ತಡೆಗಟ್ಟುವಲ್ಲಿ ಸಸ್ಯಸಂಪತ್ತು ಮಾನವನಿಗೆ ಸಹಾಯಕವಾಗಿರುವುದನ್ನು ಮರೆಯುವ ಹಾಗಿಲ್ಲ.

ಕೃಷಿಕರ ಜೀವನಾಧಾರ ಜಾನುವಾರುಗಳು; ಅವುಗಳ ಸಂರಕ್ಷಣೆ, ಅವುಗಳ ಜೊತೆಗಿನ ಅನ್ಯೋನ್ಯ ಒಡನಾಟಕ್ಕೆ ಸಂಬಂಧಿಸಿದಂತೆ ಹಲವಾರು ಆಚರಣೆಗಳು ಇಂದಿಗೂ ಪ್ರಚಲಿತದಲ್ಲಿವೆ. ಜನಪದರು ತಮ್ಮ ಜಾನುವಾರುಗಳಿಗೆ ತೋರುವ ಗೌರವ, ಪೂಜನೀಯತೆ ಆಚರಣೆಗಳ ಪ್ರತೀ ಹಂತದಲ್ಲೂ ಕಂಡುಬರುತ್ತದೆ. ಕರೆ ಹರಿಯುವುದರೊಂದಿಗೆ ಜಾನುವಾರುಗಳ ಶೌರ್ಯ ಪ್ರದರ್ಶಿಸಲಾಗುತ್ತದೆ. ಮಣ್ಣೆತ್ತಾಗಿ ಪೂಜಿಸಲ್ಪಡುತ್ತವೆ. ಜಾತ್ರೆ, ಉತ್ಸವ ವಿಶೇಷ ದಿನಗಳಲ್ಲಿ ಬಲಿಷ್ಠ ಎತ್ತುಗಳು ಪ್ರದರ್ಶಿಸಲ್ಪಡುತ್ತವೆ. ಉತ್ತಮ ತಳಿ ಹೊಂದಲು ಜಾನುವಾರುಗಳನ್ನು ದೈವಕ್ಕೆ ಬಿಡಲಾಗುತ್ತದೆ. ರಂಜನಾತ್ಮಕ ಕಲೆಯ ಮೂಲಕ ಕೋಲೆ ಬಸವನ ಆಚರಣೆ ಪ್ರದರ್ಶಿಸಲ್ಪಡುತ್ತದೆ. ಈ ರೀತಿಯ ಆಚರಣೆಗಳು ಚಿಕ್ಕ ಚಿಕ್ಕ ಕ್ರಿಯೆಗಳಾಗಿದ್ದರೂ, ಕೃಷಿಕರ ಮನಸ್ಸಿಗೆ ಮುದನೀಡುವ, ಅವರ ಮನಸ್ಸಲ್ಲಿ ಆತ್ಮವಿಶ್ವಾಸ ಹೆಚ್ಚಿಸುವ ಆಶಯ ಹೊಂದಿವೆ. ಇಂಥ ಸಮಾಜಮುಖಿ ಆಚರಣೆಗಳಿಂದು ಶಾಶ್ವತವಾಗಿ ಮರೆಯಾಗುವ ಸ್ಥಿತಿ ತಲುಪಿವೆ. ಸಗಣಿ ಗೊಬ್ಬರದ ಬೇಡಿಕೆ ಕಡಿಮೆಯಾದಂತೆ ಜಾನುವಾರುಗಳ ಸಂಖ್ಯೆ ಕುಂಠಿತಗೊಳ್ಳುತ್ತಿದೆ. ಜಾನುವಾರುಗಳಿಗಾಗಿಯೇ ಸಾವಿರಾರು ವರ್ಷಗಳಿಂದ ಕಾಪಾಡಿಕೊಂಡು ಬಂದಂಥ ಗೋಮಾಳಗಳು ಕಣ್ಮರೆಯಾಗುತ್ತಿವೆ. ಕೃಷಿ ದೇಸೀ ಪದ್ಧತಿಗಳು ಇಲ್ಲವಾಗುತ್ತಿವೆ. ಇಂದು ಧಿಡೀರ್ ದುಪ್ಪಟ್ಟು ಫಸಲು ಬರಲು ಸಹಾಯಕವಾದ ರಾಸಾಯನಿಕ ಗೊಬ್ಬರಗಳು ಬಳಸಲ್ಪಡುತ್ತಿವೆ. ಕೃಷಿ ಭೂಮಿ ಇಂದು ಹೆಚ್ಚು ಇಳುವರಿ ನೀಡುತ್ತಿದೆ. ಆದರೆ ವಿಷಪೂರಿತ ಆಹಾರ ತಯಾರಿಕಾ ಕಾರ್ಖಾನೆಯಾಗಿ ಮಾರ್ಪಾಟಾಗುತ್ತಿದೆ. ಮಲ್ಲಿಕಾರ್ಜುನ ಹೊಸಪಾಳ್ಯ ಅವರು ಹೇಳಿದಂತೆ ದೇಸೀ ದನಕರುಗಳಿಂದು ಇಲ್ಲವಾಗಿವೆ. ಜಾನುವಾರುಗಳಿಲ್ಲದ ಸಂಕ್ರಾಂತಿ ಆಚರಣೆಯಲ್ಲಿ ಸಡಗರ ಇರಲು ಸಾಧ್ಯವಿಲ್ಲ. ಹಾಲು ಮಾತ್ರ ಹಿಂಡುವ ಸೀಮೆ ಹಸುಗಳನ್ನು ಹೆಚ್ಚಾಗಿ ಸಾಕಲಾಗುತ್ತದೆ. ಅವುಗಳನ್ನು ಕಿಚ್ಚು ಹಾಯಿಸುವಂತಿಲ್ಲ, ಬೆದರಿಸುವಂತಿಲ್ಲ(೨೦೦೮, ಪು. ೧೨೧).

ಇಂದು ಕೃಷಿಕರು ಅತಂತ್ರ ಸ್ಥಿತಿಗೆ ತಲುಪುತ್ತಿದ್ದಾರೆ. ಅದಕ್ಕೆ ಕಣ್ಮರೆಯಾಗುತ್ತಿರುವ ಸಾಂಪ್ರದಾಯಿಕ ವಾತಾವರಣ ಕಾರಣವೆಂಬುದನ್ನು ಮನಗಾಣಬೇಕು. ಜನಪದರು ಹಲವಾರು ವರ್ಷಗಳಿಂದ ತಮ್ಮ ಅನುಭವದ ನೆಲೆಯಲ್ಲಿ ಆಚರಣೆಗಳನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಇಂದು ಜಾಗತೀಕರಣದ ಅಬ್ಬರದಲ್ಲಿ ಕೃಷಿಕಾರ್ಯ ವಾಣಿಜ್ಯೀಕರಣಗೊಳ್ಳುತ್ತಿದೆ. ಯಾವ ಬೆಳೆ ಬೆಳೆಯಲು ಭೂಮಿ ಸೂಕ್ತವಾಗಿದೆ ಎಂಬ ಅಂಶವನ್ನು ಇಂದು ಹೆಚ್ಚಾಗಿ ಪರಿಗಣಿಸುತ್ತಿಲ್ಲ, ಉದ್ಯಮಿಗಳು ಬಯಸಿರುವುದನ್ನು ಮಾತ್ರ ಬೆಳೆದುಕೊಡುವ ಪರಿಸ್ಥಿತಿ ಕೃಷಿಕರದ್ದಾಗಿದೆ. ತಾವು ಬೆಳೆದುದನ್ನು ಮಾರಿ, ತಮಗೆ ಅಗತ್ಯವಾದುದನ್ನು ಖರೀದಿಸುವ ಕ್ರಮ ಬೆಳೆದಿದೆ. ಪರಸ್ಪರ ಧಾನ್ಯ ವಿನಿಮಯ ಪದ್ಧತಿಗಳಿಂದು ಕಣ್ಮರೆಯಾಗಿವೆ.

ಆಚರಣೆಗಳು ಕುಟುಂಬ, ಕುಲ, ಸಮುದಾಯ, ಊರು, ಪೀಳಿಗೆ, ಕಾಲ ಎಲ್ಲವನ್ನೂ ಒಳಗೊಂಡ ಸಂಸ್ಕೃತಿಯ ಭಾಗವಾಗಿರುತ್ತವೆ. ಕೆ.ವೈ. ನಾರಾಯಣಸ್ವಾಮಿಯವರ ಅಭಿಪ್ರಾಯದಂತೆ "ಆಚರಣೆಗಳ ಉದ್ದೇಶ ಸಾಮಾನ್ಯವಾಗಿ ವ್ಯಕ್ತಿ ಮತ್ತು ಸಮಾಜದ ಒಳಿತನ್ನು ಗುರಿಯಾಗಿಟ್ಟುಕೊಂಡು ರೂಪ ಪಡೆದಿರುತ್ತವೆ"(೨೦೦೦, ಪು. ೧೧೨). ಆದಿಮ ಹಂತದಿಂದಲೂ ಆಚರಣೆಗಳು ಸಮಷ್ಟಿಹಿತವನ್ನು ಕಾಪಾಡಿಕೊಂಡು ಬಂದಿವೆ. ಗ್ರಾಮ ಸಮುದಾಯದ ಸಹಭಾಗಿತ್ವ, ಪರಸ್ಪರ ಸಹಕಾರ ಭಾವ, ಹಂಚಿ ಉಣ್ಣುವ, ಅನುಸರಿಸಿ ಬಾಳುವ ನೀತಿಗಳು ಆಚರಣೆಯ ಪ್ರತಿ ಹಂತದಲ್ಲೂ ಅಂತರ್ಗತಗೊಂಡಿವೆ. ಅಚಲವಾದ ದೈವೀಭಯದ ಜೊತೆ ನಂಬಿಕೆ ವಿಧಿ-ನಿಷೇಧಗಳ ಮೂಲಕ ಸಾಗಿಬಂದ ಆಚರಣೆಗಳಲ್ಲಿ ಹಲವಾರು ಸಮಸ್ಯೆಗಳಿಗೆ ಪರಿಹಾರಗಳುಂಟು.

ಅಧ್ಯಯನದ ಉದ್ದೇಶ

ಜನಪದ ಸಂಸ್ಕೃತಿ ಆಚರಣೆಗಳ ಆಗರವಾಗಿದೆ. ಬದಲಾದ ಜೀವನ ಕ್ರಮಗಳಿಂದ ಆಚರಣೆಗಳು ಸ್ಥಿತ್ಯಂತರಗೊಳ್ಳುತ್ತಿವೆ. ಇಂದು ವಿಶ್ಲೇಷಣೆ, ವಿವೇಚನೆ, ಸಂಶೋಧನಾ ದೃಷ್ಟಿಯಿಂದ ಅವುಗಳನ್ನು ಪರಿಶೀಲಿಸಬೇಕಾದ ಅನಿವಾರ್ಯತೆ ಇದೆ. ಅವುಗಳನ್ನು ಅಧ್ಯಯನ ಮತ್ತು ಸಂಶೋಧನೆಗೆ ಒಳಪಡಿಸಿದಾಗ ಮಾತ್ರ ಅವುಗಳಲ್ಲಡಗಿದ ಮಾನವೀಯ ಮೌಲ್ಯಗಳನ್ನು ಕಾಣಲು ಸಾಧ್ಯ. ಆಚರಣೆಗಳಲ್ಲಿ ಕೂಡಿಬಾಳುವ ಗುಣವಿದೆ. ಹಂಚಿ ಉಣ್ಣುವ ನೀತಿ ಇದೆ. ವಿಜ್ಞಾನದ ತಂತ್ರಗಾರಿಕೆಯಿದೆ. ಜೀವಪೋಷಕ ಅಂಶಗಳಿವೆ. ತತ್ವಸಿದ್ಧಾಂತಗಳಿವೆ. ಅವು ಜನಪದರ ಮೌಖಿಕ ಶಾಸನಗಳಾಗಿದ್ದು, ಸೂಕ್ತ ಸಮಯದಲ್ಲಿ ಎಚ್ಚರಿಸಿ ಮಾರ್ಗದರ್ಶನ ನೀಡುತ್ತಿವೆ. ಇಷ್ಟೊಂದು ಜೀವಪರವಾದ ಆಚರಣೆಗಳಿಂದು ಯಾವ ಸ್ಥಿತಿಯಲ್ಲಿವೆ, ಯಾವ ರೀತಿ ಮಾನವ ಸಂಬಂಧವನ್ನು ಕಟ್ಟಿಕೊಡುತ್ತವೆ ಎಂಬುದು ಪ್ರಸ್ತುತ ಅಧ್ಯಯನದ ಉದ್ದೇಶಗಳಲ್ಲಿ ಒಂದು. ಈ ಹಿನ್ನೆಲೆಯಲ್ಲಿ ಅವುಗಳನ್ನು ಹೆಚ್ಚು ಹೆಚ್ಚು ಅಧ್ಯಯನಕ್ಕೆ ಒಳಪಡಿಸಿ ಚರ್ಚಿಸಿ, ಆಚರಣಾಕೇಂದ್ರಿತ ಉತ್ತರ ಕಂಡುಕೊಳ್ಳುವ ಪ್ರಯತ್ನ ಈ ಅಧ್ಯಯನದ್ದಾಗಿದೆ.

ಇಂದಿನ ಜಾಗತೀಕರಣದ ಅಬ್ಬರದಲ್ಲೂ, ಸಾಂಸ್ಕೃತಿಕವಾಗಿ ಆಚರಣೆಗಳು ತಮ್ಮ ಅಸ್ತಿತ್ವವನ್ನು ಕಾಪಾಡಿಕೊಂಡು ಆಚರಿಸಲ್ಪಡುತ್ತಿವೆ. ಇಂದಿನ ವೈಜ್ಞಾನಿಕ ಯುಗದಲ್ಲಿ ಬದುಕಿನ ಜೀವಂತಿಕೆಯ ನೆಲೆಯಾಗಿ ಆಚರಣೆಗಳು ಯಾವ ರೀತಿ ಪ್ರತಿನಿಧಿಸುತ್ತವೆಂಬುದನ್ನು ವಿಶ್ಲೇಷಿಸುವ ಉದ್ದೇಶ ಈ ಅಧ್ಯಯನದ್ದು.

ಕಾಲಮಾನಕ್ಕೆ ಅನುಗುಣವಾಗಿ ನಂಬಿಕೆ ನಿಷೇಧಗಳೊಂದಿಗೆ ವಂಶಪಾರಂಪರಿಕವಾಗಿ ಸಾಗಿಬಂದ ಜ್ಞಾನ ಪರಂಪರೆಗಳನ್ನು ಅರಿಯುವ ಪ್ರಯತ್ನ ಮಾಡಲಾಗಿದೆ. ಆಚರಣೆಗಳ ಸುತ್ತ ಕಥೆ, ಹಾಡು, ಗಾದೆ, ಒಗಟು, ನಂಬಿಕೆ, ವಿಧಿ-ನಿಷೇಧ, ಐತಿಹ್ಯಗಳಂತಹ ಭಿನ್ನ ಪ್ರಕಾರಗಳಿವೆ. ಸಾಮರಸ್ಯದ ಬದುಕಿಗೆ ಆಚರಣೆಗಳ ಮುನ್ನೆಡೆಗೆ, ಈ ಪ್ರಕಾರಗಳು ಹೇಗೆ ಸಹಕಾರಿಯಾಗಿವೆ ಎಂಬುದನ್ನು ಜನಪದರ ಅನುಭವದ ಮಾಹಿತಿಗಳ ಹಿನ್ನೆಲೆಯಲ್ಲಿ ಚರ್ಚಿಸುವ ಪ್ರಯತ್ನ ಮಾಡಲಾಗಿದೆ.

ಪೂರ್ವಿಕರ ಅನುಭವಗಳ ಹಿನ್ನೆಲೆಯಲ್ಲಿ ಉದಯಿಸಿದ ಬೇಸಾಯಕ್ರಮ, ಪರಂಪರಾಗತ ಅನುಭವಗಳು ಕಿರಿಯ ತಲೆಮಾರುಗಳಿಗೆ ಮಾರ್ಗಸೂಚಿಗಳಿದ್ದಂತೆ. ಈ ಅನುಭವಗಳು ಸರಿಯಾದ ರೀತಿಯಲ್ಲಿ ರವಾನೆಯಾದಾಗ ಮಾತ್ರ ಆಚರಣೆಗಳ ಪ್ರತಿಫಲ ಪಡೆಯಲು ಸಾಧ್ಯ. ಪ್ರಸ್ತುತ ಕಾಲಘಟ್ಟದಲ್ಲಿ ಜೀವನಕ್ರಮಕ್ಕೆ ಪೂರಕವಾಗಿ ಆಚರಣಾತ್ಮಕ ವಿಧಿವಿಧಾನಗಳು ಸರಿಯಾದ ಕ್ರಮದಲ್ಲಿ ರವಾನೆಯಾಗಬೇಕಾದರೆ ಕಂಡುಕೊಳ್ಳುವ ಮಾರ್ಗಗಳ ಬಗ್ಗೆ ಚರ್ಚಿಸುವುದು ಅಧ್ಯಯನದ ಉದ್ದೇಶಗಳಲ್ಲಿ ಪ್ರಧಾನವಾದುದಾಗಿದೆ.

ಬದಲಾದ ಜೀವನ ಕ್ರಮಗಳಿಂದ ಇಂದು ಆಚರಣೆಗಳು ಸ್ಥಿತ್ಯಂತರಗೊಳ್ಳುತ್ತಿವೆ. ಹೀಗೆ ಸ್ಥಿತ್ಯಂತರಕ್ಕೆ ಒಳಪಟ್ಟ ಆಚರಣೆಗಳು ಪ್ರಸ್ತುತ ಸಮಯದಲ್ಲಿ ಜನಪದರ ಬದುಕಲ್ಲಿ ಯಾವ ರೀತಿ ಪ್ರತಿನಿಧಿಸುತ್ತಿವೆ ಎಂಬುದು ಅಧ್ಯಯನದ ಉದ್ದೇಶಗಳಲ್ಲೊಂದು.

ಇಂದು ಜನಪದರ ಜ್ಞಾನ ಪರಂಪರೆಗಳು ತಿರಸ್ಕಾರಕ್ಕೆ ಒಳಪಡುತ್ತಿವೆ. ಹೀಗೆ ಮಾಡುವುದು ಬುದ್ಧಿವಂತಿಕೆಯ ಲಕ್ಷಣವೆಂದು ಯುವಪೀಳಿಗೆ ತಿಳಿಯಲಾಗುತ್ತಿದೆ. ಹೀಗೆ ತಿರಸ್ಕರಿಸುವ ಗುಣಗಳಿಂದ ನಾವಿಂದು ಮಹತ್ವದ ಅಂಶಗಳಿಂದ ವಂಚಿತರಾಗುತ್ತಿದ್ದೇವೆಂಬ ಅಂಶವೂ ಇಲ್ಲಿ ಪ್ರಮುಖವಾದುದು. ಹಿರಿಯರ ಅನುಭವದ ನೆಲೆಯಲ್ಲಿ ಉದಯಿಸಿದ ಆಚರಣೆಗಳಲ್ಲಿ ಇಂದಿನ ಹಲವಾರು ಸಮಸ್ಯೆಗಳಿಗೆ ಪರಿಹಾರ ನೀಡುವ ಶಕ್ತಿಯಿದೆ. ಇಂದಿಗೂ ಆಚರಣೆಗಳಲ್ಲಿ ಮೂಢನಂಬಿಕೆಗಳ ಲವಶೇಷವೂ ಇಲ್ಲ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಮೌಢ್ಯತೆಯಿರುವ ಅಂಶಗಳನ್ನು ತಳ್ಳಿಹಾಕಿ ಮೌಲ್ಯಯುತವಾದುದನ್ನು ಅನುಸರಿಸುವುದರಲ್ಲಿ ತಪ್ಪಿಲ್ಲವೆಂಬುದನ್ನು ನಿರೂಪಿಸಲು ಪ್ರಯತ್ನಿಸಲಾಗಿದೆ.

ಬಳ್ಳಾರಿ ಜಿಲ್ಲೆಯಲ್ಲಿರುವ ಪ್ರತಿಯೊಂದು ಆಚರಣೆಗಳು ಮಾನವೀಯ ಮೌಲ್ಯಗಳನ್ನು ಕಟ್ಟಿಕೊಡುತ್ತವೆಂದು ಹೇಳಲಾಗದು. ತಳಸಮುದಾಯದ ಶೋಷಣೆ, ಸ್ತ್ರೀಶೋಷಣೆ, ಮೂಢನಂಬಿಕೆಗಳಿರುವುದರಲ್ಲಿ ಅನುಮಾನವಿಲ್ಲ. ಸತಿಹೋದ ಮಹಿಳೆಯನ್ನು ದೈವತ್ವಕ್ಕೇರಿಸಿ ವೈಭವೀಕರಿಸಲ್ಪಡುವ ಆಚರಣೆಗಳನ್ನು ಇಂದಿಗೂ ಕಾಣುತ್ತೇವೆ. ಸಾರ್ವಜನಿಕರ ಜಾಗೃತಿ, ಸರ್ಕಾರದ ಕಾನೂನು-ಕಟ್ಟಳೆಗಳ ನಡುವೆ ಇಂದಿಗೂ ತೆರೆಮರೆಯಲ್ಲಿ ದೇವದಾಸಿ ಪದ್ಧತಿ ಪ್ರಚಲಿತದಲ್ಲಿರುವುದನ್ನು ಅಲ್ಲಗಳೆಯುವಂತಿಲ್ಲ.

ಪುರುಷಪ್ರಧಾನ ಸಂಪ್ರದಾಯದ ಚೌಕಟ್ಟಿನಲ್ಲಿ ಕೆಲವೊಂದು ಕಟ್ಟುಪಾಡುಗಳನ್ನು ಮಹಿಳೆಯರಿಗೆ ವಿಧಿಸಲಾಗಿದೆ. ಅಂಥವುಗಳನ್ನು ಆಚರಣಾ ಕೇಂದ್ರಿತ ಅಧ್ಯಯನಕ್ಕೆ ಒಳಪಡಿಸಿ, ಸಾಧ್ಯವಾದಮಟ್ಟಿಗೆ ಪರಾಮರ್ಶಿಸಲಾಗಿದೆ. ಅಂಥವುಗಳನ್ನು ಕೈಬಿಟ್ಟಲ್ಲಿ ಯಾವುದೇ ನಷ್ಟವಿಲ್ಲ ಎಂಬುದನ್ನು ಪ್ರತಿಪಾದಿಸುವ ಪ್ರಯತ್ನ ಮಾಡಲಾಗಿದೆ.

ಅಮ್ಮನ ಆಚರಣೆಗಳು ಭೌತಿಕ ಉಪಚಾರದ ಜೊತೆ ಮಾನಸಿಕ ಒತ್ತಡಗಳಿಂದ ಮುಕ್ತಿ ಹೊಂದುವ ಅಂಶಗಳನ್ನು ಒಳಗೊಂಡಿವೆ. ಅವುಗಳಲ್ಲಿ ದೇಹ ಸದೃಢವಾಗಿಸುವ ತಂತ್ರಗಾರಿಕೆಯಿದೆ. ಈ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ವಿಶೇಷವಾಗಿ ಸಾಗಿ ಬಂದ ಅಮ್ಮನ ಆಚರಣೆಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಅಭಿವೃದ್ಧಿಯ ಸಂಕೇತ ಹಾಗೂ ಜೀವಂತಿಕೆಯ ಲಕ್ಷಣ ಹೊಂದಿದ ಸಸ್ಯಸಂಪತ್ತು ಆಚರಣೆಯಲ್ಲಿ ಪ್ರಮುಖ ಪಾತ್ರವಹಿಸಿದೆ. ಹಲವೊಮ್ಮೆ ಆಚರಣೆಗಳೇ ಸಸ್ಯಸಂಕುಲದ ಅಳಿವಿಗೆ ಕಾರಣವಾಗುವ ಸಾಧ್ಯತೆಗಳಿವೆ. ಇಂದು ಆಚರಣೆಗಳ ನೆಪದಲ್ಲಿ ಅಗತ್ಯ ಮೀರಿ ಕಟ್ಟಿಗೆ ಬಳಸಲ್ಪಡುತ್ತಿದೆ. ಅಳಿವಿನ ಅಂಚಿನಲ್ಲಿರುವ ಸಸ್ಯಸಂಕುಲಗಳನ್ನು ಆಚರಣೆಯ ನೆಪದಲ್ಲಿ ಉಳಿಸುವ ಕ್ರಮಗಳನ್ನು ಮಾತ್ರ ಅನುಸರಿಸಬೇಕಿದೆ. ಅವುಗಳ ಉಳಿವಿಗೆ ಕಂಡುಕೊಳ್ಳುವ ಮಾರ್ಗೋಪಾಯಗಳನ್ನು ಆಚರಣೆಗಳ ಹಿನ್ನೆಲೆಯಲ್ಲಿ ಚರ್ಚೆಗೆ ಒಳಪಡಿಸಲಾಗಿದೆ.

ಜಾನುವಾರುಗಳೊಂದಿಗೆ ಮಾನವ ಸಂಬಂಧ ಬೆಸೆಯುವ ಅಂಶಗಳಿಗೆ ಆಚರಣೆಗಳಲ್ಲಿ ಕೊರತೆಯಿಲ್ಲ. ಜನಪದರು ಜಾನುವಾರುಗಳ ಬಗ್ಗೆ ವಹಿಸಿರುವ ಕಾಳಜಿ, ಪ್ರೀತಿ, ವಾತ್ಸಲ್ಯ, ಭಕ್ತಿ, ಶ್ರದ್ಧೆ, ಮಾನವೀಯತೆ ಜಾನುವಾರುಗಳಿಗೆ ಸಂಬಂಧಿಸಿದ ಆಚರಣೆಗಳಲ್ಲಿ ಅಭಿವ್ಯಕ್ತಗೊಂಡಿದೆ. ಈ ರೀತಿ ಆಚರಣೆಗಳನ್ನು ಸೂಕ್ಷ್ಮವಾಗಿ ಅಧ್ಯಯನಕ್ಕೆ ಒಳಪಡಿಸಿದಾಗ ಮಾತ್ರ ಜನ ಮತ್ತು ಜಾನುವಾರುಗಳ ನಡುವಿನ ಅವಿನಾಭಾವ ಸಂಬಂಧ ಅರಿಯಲು ಸಾಧ್ಯವಿದೆ. ಮಳೆಯ ವೈಪರೀತ್ಯ, ಆಧುನಿಕ ತಳಿಬೀಜಗಳ ಬಳಕೆ, ಅತೀ ಕಡಿಮೆ ಸಮಯದಲ್ಲಿ ಬೆಳೆ ನೀಡುವ ಪದ್ಧತಿ, ಕೃಷಿಕಾರ್ಯ ವಾಣಿಜ್ಯೀಕರಣಗೊಳ್ಳುವುದು ಆತಂಕಕಾರಿ ಸಂಗತಿಯಾಗಿದೆ. ಈ ರೀತಿಯ ಬದಲಾದ ಕೃಷಿಕ್ರಮಗಳಿಂದ ಆಚರಣೆಗಳಲ್ಲೂ ಬದಲಾವಣೆಗಳು ಉಂಟಾಗುತ್ತಿವೆ. ಈ ರೀತಿಯ ಸ್ಥಿತ್ಯಂತರಗಳು ಮಾನವನ ಬದುಕಿಗೆ ಪೂರಕವಾಗಿದ್ದಾಗ ಮಾತ್ರ ಜೀವನ ಸುಗಮವಾಗುತ್ತದೆ. ಈ ಹಿನ್ನೆಲೆಯಲ್ಲಿ ಸ್ಥಿತ್ಯಂತರಗಳಿಂದ ಉಂಟಾಗಬಹುದಾದ ಪರಿಣಾಮಗಳನ್ನು ವಿಶ್ಲೇಷಣೆಗೆ ಒಳಪಡಿಸುವುದು ಈ ಮಹಾಪ್ರಬಂಧದ ಉದ್ದೇಶಗಳಲ್ಲೊಂದಾಗಿದೆ.

ಹಬ್ಬ ಆಚರಣೆಗಳಲ್ಲಿ ತಮ್ಮದೇ ಆದ ಆಹಾರ ಪದ್ಧತಿಗಳನ್ನು ಅನುಸರಿಸಲಾಗುತ್ತದೆ. ಒಂದೆಡೆ ಸೇರಿ ಸಾಮೂಹಿಕ ಭೋಜನ ಮಾಡುವುದು ಸಾಮರಸ್ಯ ಬದುಕಿನ ಪ್ರತೀಕ. ನಿರ್ದಿಷ್ಟ ಸ್ಥಳದಲ್ಲಿ ನಿಯಮಕ್ಕೆ ಅನುಸಾರವಾಗಿ ಆಹಾರ ಸೇವಿಸುವ ಕ್ರಮಗಳುಂಟು. ಅವುಗಳಲ್ಲಿಯ ಆರೋಗ್ಯಪಾಲನಾ ತತ್ವಗಳನ್ನು ಅರಿಯಬೇಕಿದೆ. ಕಾರಣ ಅಂದು ಬಳಸಲ್ಪಡುವ ಆಹಾರದಲ್ಲಿನ ಅಂಶಗಳು, ಆ ಋತುಮಾನ ಪೂರ್ತಿ ಗ್ರಾಮದ ಜನತೆಯಲ್ಲಿ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುವ ಔಷಧೀಯ ಗುಣ ಹೊಂದಿರುತ್ತವೆ. ಈ ಹಿನ್ನೆಲೆಯಲ್ಲಿ ಯಾವ ಋತುಮಾನದಲ್ಲಿ ಯಾವ ರೀತಿಯ ಆರೋಗ್ಯಪಾಲನಾ ತತ್ವಗಳು ಆಚರಣೆಯಲ್ಲಿ ಅಂತರ್ಗತಗೊಂಡಿವೆ ಎಂಬುದನ್ನು ಜನಪದರ ಅನುಭವದ ನುಡಿಗಳಿಂದ ವಿಶ್ಲೇಷಿಸಲಾಗಿದೆ.

ಆಚರಣೆಗಳಲ್ಲಿ ಬಳಸಲ್ಪಡುವ ರಾಸಾಯನಿಕಗಳು, ಆಧುನಿಕ ಸಾಮಗ್ರಿಗಳ ಬಳಕೆ, ಜಗಮಗಿಸುವ ವಿದ್ಯುತ್ ಹಾಗೂ ಧ್ವನಿವರ್ಧಕಗಳ ಬಳಕೆಗಳಿಂದ ಆಚರಣೆಗಳು ವ್ಯಾಪಾರೀಕರಣಗೊಳ್ಳುತ್ತಿವೆ. ಈ ಹಿನ್ನೆಲೆಯಲ್ಲಿ ಶೋಕಸ್ಥಾಯಿಭಾವದಿಂದ ಉದಯಿಸಿದ ಆಚರಣೆಗಳು ರಂಗು ಪಡೆದುಕೊಳ್ಳುತ್ತಿವೆ. ಇದರಿಂದ ಸಾರ್ವಜನಿಕರ ಹಾಗೂ ಪರಿಸರದ ಮೇಲೆ ಉಂಟಾಗಬಹುದಾದ ಪರಿಣಾಮಗಳನ್ನು ಕುರಿತು ಚರ್ಚಿಸಲಾಗಿದೆ. ಶೌರ್ಯ

ಪ್ರದರ್ಶನ, ಮನೋರಂಜನೆ, ಪರಸ್ಪರ ಸಾಮರಸ್ಯ, ಸೌಹಾರ್ದತೆ, ಪ್ರೀತಿವಾತ್ಸಲ್ಯ ವೃದ್ಧಿಸುವ ಆಶಯಗಳನ್ನು ಹೊಂದಿದ ಆಚರಣಾತ್ಮಕ ಆಟಗಳು, ಕಲೆಗಳು ಯಾವ ಬಗೆಯಲ್ಲಿ ಸ್ಥಿತ್ಯಂತರಗೊಂಡಿವೆ ಎಂಬುದನ್ನು ವಿಶ್ಲೇಷಿಸಲಾಗಿದೆ.

ಉಗ್ರ ಬಲಿ ಆಚರಣೆಗಳಿಂದು ಸರಳ ಆಚರಣೆಗಳಾಗಿ ಸ್ಥಿತ್ಯಂತರಗೊಂಡಿರುವುದರ ಹಿಂದಿನ ಆಶಯವನ್ನು ಅವಲೋಕಿಸುವ ಪ್ರಯತ್ನ ಮಾಡಲಾಗಿದೆ. ಈ ನಿಟ್ಟಿನಲ್ಲಿ ಸರ್ಕಾರ ಹಾಗೂ ಸಾರ್ವಜನಿಕರು ಕೈಗೊಂಡ ಕ್ರಮಗಳ ಬಗ್ಗೆ ಚರ್ಚಿಸಲಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಬಳ್ಳಾರಿ ಜಿಲ್ಲೆಗೆ ಸೀಮಿತಗೊಂಡಂತೆ ಜನಪದರ ಆಚರಣೆಗಳನ್ನು ಈ ಕೆಳಕಂಡಂತೆ ಅಧ್ಯಾಯಗಳಾಗಿ ವಿಂಗಡಿಸಲಾಗಿದೆ.

ಒಂದನೆಯ ಅಧ್ಯಾಯವು ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪವನ್ನು ಒಳಗೊಂಡಿದೆ.

ಎರಡನೆಯ ಅಧ್ಯಾಯದಲ್ಲಿ ಸೂಕ್ಷ್ಮವಾಗಿ ಆಚರಣೆಗಳ ಉಗಮ-ಸ್ವರೂಪದ ಬಗ್ಗೆ ಮಾಹಿತಿ ನೀಡಲಾಗಿದೆ. ಹಾಗೆಯೇ ಆಚರಣೆಗಳ ಕಾಲ-ನಂಬಿಕೆಗಳ ಸಂಬಂಧದ ಬಗ್ಗೆ ಚರ್ಚಿಸಲಾಗಿದೆ. ನಂಬಿಕೆಗಳೇ ಸಂಪ್ರದಾಯ ಆಚರಣೆಗಳ ಸೃಷ್ಟಿಗೆ ಪ್ರಮುಖ ಕಾರಣ. ನಂಬಿಕೆಗಳಿಲ್ಲದ ಸಮಾಜವಿಲ್ಲ, ಸಮುದಾಯ - ಜನಾಂಗಗಳಿಲ್ಲ. ನಂಬಿಕೆಗಳು ಸಮಾಜದ ಸಮುದಾಯದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿರುವುದನ್ನು ಅನೇಕ ವಿದ್ವಾಂಸರು ಈಗಾಗಲೇ ನಮಗೆ ಮನವರಿಕೆ ಮಾಡಿಸಿದ್ದಾರೆ. ಯಾವುದೇ ರೀತಿಯ ತಂತ್ರಜ್ಞಾನ, ಆಧುನಿಕತೆಗಳು ಸೃಷ್ಟಿಯಾದರೂ ಅವುಗಳು ನಂಬಿಕೆಗಳಿಂದ ಹೊರತಾಗಿಲ್ಲ. ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದಂತೆ ಕಾಲ ಮತ್ತು ನಂಬಿಕೆಗಳ ಮೂಲಕ ಉಸಿರಾಡುತ್ತಿರುವ ಆಚರಣೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಧ್ಯಾಯ ಮೂರರಲ್ಲಿ ಪ್ರಕೃತಿ ಸಂಬಂಧಿ ಆಚರಣೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಬಹುತೇಕ ಆಚರಣೆಗಳು ಮಾನವನ ಒಳಿತಿಗಾಗಿ, ಪ್ರಕೃತಿಯ ಒಳಿತಿಗಾಗಿ ಅನೇಕ ಅಂಶಗಳನ್ನು ಒಳಗೊಂಡಿವೆ. ನೆಲ, ಜಲ, ವಾಯು, ಅಗ್ನಿ ಜನಪದರಿಗೆ ಪೂಜನೀಯವಾದುವು. ಅವುಗಳ ಒಡಲಲ್ಲಿರುವ ಪರಿಸರ ಸ್ನೇಹಿ, ಮಾನವ ಸ್ನೇಹಿ ಅಂಶಗಳನ್ನು ವಿಶ್ಲೇಷಿಸಲಾಗಿದೆ.

ಸಸ್ಯ ಮತ್ತು ಪ್ರಾಣಿಗಳಿಗೆ ಸಂಬಂಧಿಸಿದಂತೆ ಬಳ್ಳಾರಿ ಜಿಲ್ಲೆಯಲ್ಲಿ ಪ್ರಚಲಿತದಲ್ಲಿರುವ ಆಚರಣೆಗಳನ್ನು ನಾಲ್ಕನೆಯ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ. ಮಾನವನ ಸಹಜ ಜೀವನಕ್ಕೆ ಸಸ್ಯ ಮತ್ತು ಪ್ರಾಣಿಗಳ ಪಾತ್ರ ಪ್ರಮುಖವಾದುದಾಗಿದೆ. ಅವುಗಳ ಸಂರಕ್ಷಣೆಗಾಗಿ ವೈವಿಧ್ಯಮಯವಾಗಿ ಪ್ರಚಲಿತದಲ್ಲಿರುವ ಆಚರಣೆಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಅಧ್ಯಯನದಿಂದ ಕಂಡುಕೊಂಡ ಒಟ್ಟು ಫಲಿತಗಳನ್ನು ಅಧ್ಯಾಯ ಐದರ ಸಮಾರೋಪದಲ್ಲಿ ನೀಡಲಾಗಿದೆ. ಅನುಬಂಧದಲ್ಲಿ ಅಧ್ಯಯನದ ವ್ಯಾಪ್ತಿಗೆ ಪೂರಕವಾಗಿ ಬಳ್ಳಾರಿ ಜಿಲ್ಲೆ ಮತ್ತು ತಾಲೂಕುಗಳ ನಕ್ಷೆಗಳನ್ನು ನೀಡಲಾಗಿದೆ. ಹಾಗೆಯೇ ಜನಪದ ಆಚರಣೆಗಳ ಪರಾಮರ್ಶನ ಗ್ರಂಥಗಳು, ವಕ್ತೃವಿವರ, ಛಾಯಾಚಿತ್ರಗಳನ್ನು ನೀಡಲಾಗಿದೆ. ಬಳ್ಳಾರಿ ಬಹುಭಾಷಿಕ ಜನರಿರುವ, ಬಹುಸಮುದಾಯಗಳ ಜಿಲ್ಲೆಯಾಗಿದ್ದು ಪ್ರದೇಶದಿಂದ ಪ್ರದೇಶಕ್ಕೆ ಭಾಷೆಯಲ್ಲಿ ಭಿನ್ನತೆಯನ್ನು ಕಾಣುತ್ತೇವೆ. ಈ ಹಿನ್ನೆಲೆಯಲ್ಲಿ ಆಚರಣೆಗಳಿಗೆ ಸಂಬಂಧಿಸಿದಂತೆ ಸಾಂಸ್ಕೃತಿಕ ಪದಕೋಶವನ್ನು ಅನುಬಂಧದಲ್ಲಿ ನೀಡಲಾಗಿದೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮೌಖಿಕವಾಗಿ

ಉಳಿದುಕೊಂಡು ಬಂದಿರುವ ಜನಪದ ಆಚರಣೆಗಳಿಗೆ ಸಂಬಂಧಿಸಿದ ಹಾಡುಗಳನ್ನು ಸಂಗ್ರಹಿಸಿ ಯಥಾವತ್ತಾಗಿ ಅನುಬಂಧದಲ್ಲಿ ನೀಡಲಾಗಿದೆ.

ಅಧ್ಯಯನದ ವ್ಯಾಪ್ತಿ

ಬಳ್ಳಾರಿ ಜಿಲ್ಲೆ ಪ್ರಾಗೈತಿಹಾಸಿಕ ಕಾಲದಿಂದಲೂ ಗುರುತಿಸಲ್ಪಟ್ಟಿದೆ. ಪೌರಾಣಿಕ ಸ್ಥಳವಾದ ಕಿಷ್ಕಿಂದೆ ಬಳ್ಳಾರಿ ಜಿಲ್ಲೆಯ ಹಂಪಿ ಪ್ರದೇಶದಲ್ಲಿದೆ. ಭೌಗೋಳಿಕವಾಗಿ ಬಳ್ಳಾರಿ ಜಿಲ್ಲೆಯು ರಾಜ್ಯದ ಪೂರ್ವ ಭಾಗದಲ್ಲಿದೆ. ಜಿಲ್ಲೆಯು ಪೂರ್ವ-ಪಶ್ಚಿಮ ೧೬೧ ಕಿ.ಮೀ. ಉದ್ದ, ದಕ್ಷಿಣೋತ್ತರವಾಗಿ ೮೩.೭ ಕಿ.ಮೀ., ಅಗಲವನ್ನು ಹೊಂದಿದೆ. ಉತ್ತರ ಅಕ್ಷಾಂಶ ೩೦:೧೪-೧೫' ೫೦' ಮತ್ತು ಪೂರ್ವ ರೇಖಾಂಶ ೭೫' ೪೦'-೭೭' ೧೧' ರ ನಡುವೆ ಇದೆ. ಜಿಲ್ಲೆಯ ಒಟ್ಟು ವಿಸ್ತೀರ್ಣ ೯೮೯೮ ಚದರ ಕಿಲೋಮೀಟರ್‌ಗಳು. ಜಿಲ್ಲೆಯು ಆಂಧ್ರಪ್ರದೇಶ ರಾಜ್ಯದ ಅನಂತಪುರ, ಕರ್ನೂಲು ಜಿಲ್ಲೆಗಳ ಗಡಿಯನ್ನು ಹೊಂದಿದೆ. ಉತ್ತರಕ್ಕೆ ಕೊಪ್ಪಳ ಜಿಲ್ಲೆ, ದಕ್ಷಿಣಕ್ಕೆ ಚಿತ್ರದುರ್ಗ, ದಾವಣಗೆರೆ ಮತ್ತು ಪಶ್ಚಿಮಕ್ಕೆ ಗದಗ, ಹಾವೇರಿ ಜಿಲ್ಲೆಗಳ ಮೇರೆಯನ್ನು ಹೊಂದಿದೆ. ಬಳ್ಳಾರಿ, ಸಂಡೂರು, ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ, ಹೂವಿನಹಡಗಲಿ, ಹೊಸಪೇಟೆ ಮತ್ತು ಸಿರುಗುಪ್ಪ ಹೀಗೆ ಏಳು ತಾಲೂಕುಗಳನ್ನು ಹೊಂದಿದೆ. ಬಳ್ಳಾರಿ ಜಿಲ್ಲೆಯ ಏಳು ತಾಲೂಕುಗಳನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಬಳ್ಳಾರಿ, ಸಿರುಗುಪ್ಪ ಮತ್ತು ಹೊಸಪೇಟೆ ತಾಲೂಕುಗಳನ್ನು ಪೂರ್ವ ಭಾಗದ ತಾಲೂಕುಗಳೆಂದು, ಹೂವಿನಹಡಗಲಿ, ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ ತಾಲೂಕುಗಳನ್ನು ಪಶ್ಚಿಮ ಭಾಗದ ತಾಲೂಕುಗಳೆಂದು ವಿಭಾಗ ಮಾಡಲಾಗಿದೆ.

ಹಂಪಿ ಪ್ರದೇಶವು ದಕ್ಷಿಣದಿಂದ ಉತ್ತರಕ್ಕೆ ಇಳಿಜಾರಾದ ಬೆಟ್ಟದ ಸಾಲುಗಳಿಂದ ಆವೃತಗೊಂಡಿದೆ. ಸಂಡೂರಿನ ಕುಮಾರಸ್ವಾಮಿ, ಜಂಬುನಾಥ, ರಾಮಮಲೆ ಬೆಟ್ಟದ ಸಾಲುಗಳು ಎತ್ತರದ ಶಿಖರಗಳನ್ನು ಹೊಂದಿದ್ದು, ಇಲ್ಲಿಯ ಅರಣ್ಯ ಮಾನವನಿಗೆ ಅವಶ್ಯವಾದ ಹಣ್ಣು-ಹಂಪಲು, ಮರಮುಟ್ಟು, ಉರುವಲು, ಔಷಧಿಗೆ ಉಪಯುಕ್ತವಾದ ಗಿಡದನಾರು ಬೇರುಗಳನ್ನು ಒದಗಿಸುತ್ತವೆ. ಅಲ್ಲದೇ ಹೇರಳವಾದ ಖನಿಜ ಸಂಪತ್ತಿನಿಂದ ಕೂಡಿದೆ. ಪ್ರಾಚೀನ ಕಾಲದಿಂದಲೂ ಇಲ್ಲಿ ನೆರವೇರುವ ಜಾತ್ರೆ, ಉತ್ಸವಗಳು ಕೃಷಿಕರಿಗೆ ಅಗತ್ಯ ವಸ್ತುಗಳ ಪೂರೈಕೆಯ ವ್ಯಾಪಾರ ಕೇಂದ್ರಗಳಾಗಿ ಪ್ರಾಮುಖ್ಯತೆ ಪಡೆದಿವೆ. ಇಂದಿಗೂ ಸಂಡೂರು ಭಾಗದ ಬೆಟ್ಟದ ಸಾಲುಗಳಲ್ಲಿನ ನಿರ್ಜನ ಪ್ರದೇಶದಲ್ಲಿ ಸಮೃದ್ಧ ಮೂಲವಾದ ಆಚರಣೆಗಳಿವೆ. ಕೂಡ್ಲಿಗಿಯ ಜರಿಮಲೆ, ಗುಡೇಕೋಟೆ ಬೆಟ್ಟಸಾಲುಗಳು ಹಿಂದೆ ಪಾಳೇಗಾರ ಆಳ್ವಿಕೆಗೆ ಒಳಪಟ್ಟಿದ್ದು, ಇಂದಿಗೂ ಸಾಂಪ್ರದಾಯಿಕವಾಗಿ ಈ ಭಾಗದ ಆಚರಣೆಗಳಲ್ಲಿ ಪಾಳೇಗಾರರ ವಂಶಸ್ಥರ ಪಾಲ್ಗೊಳ್ಳುವಿಕೆ ಕಂಡುಬಂದಿದೆ. ಕುರುಗೋಡು ಪ್ರದೇಶವು ಹಲವು ಬೆಟ್ಟಸಾಲುಗಳನ್ನು ಹೊಂದಿದೆ. ಅಲ್ಲಿಯ ಬೆಟ್ಟ ಸಮೂಹವನ್ನು ಅತೀ ಎತ್ತರದಿಂದ ನೋಡಿದರೆ ಪೂರ್ವಾಭಿಮುಖವಾಗಿ ಕುಳಿತ ಬಸವನ ರೀತಿ ಕಾಣುತ್ತದೆಂಬ ನಂಬಿಕೆ ಇದೆ. ವಕ್ತೃಗಳ ಹೇಳಿಕೆಯ ಪ್ರಕಾರ ಹಂಪಿ ವಿರೂಪಾಕ್ಷನಿಗೆ ಎದುರಾಗಿ ಕುರುಗೋಡಿನ ಬಸವಮೂರ್ತಿ ಇರುವುದಾಗಿ, ವಿಜಯನಗರ ಸಾಮ್ರಾಜ್ಯದ ಕಾಲದಿಂದಲೂ ಇಲ್ಲಿ ಬಸವನ ಆಚರಣೆಗಳು ಪ್ರಚಲಿತದಲ್ಲಿವೆ. ಇಂದಿಗೂ ಹಂಪಿ ಜಾತ್ರೆ ಸಮಯದಲ್ಲಿ ಕುರುಗೋಡಿನಲ್ಲೂ ಆಚರಣೆಗಳು ನೆರವೇರುತ್ತವೆ. ಸಿರುಗುಪ್ಪ, ಬಳ್ಳಾರಿ ತಾಲೂಕುಗಳು ಜಿಲ್ಲೆಯ ಪೂರ್ವಭಾಗದ ಬಯಲು ಪ್ರದೇಶಗಳಾಗಿವೆ. ಇತ್ತೀಚೆಗೆ ಸಂಗನಕಲ್ಲು ಪ್ರದೇಶದಲ್ಲಿ

ನಡೆಸಿದ ಉತ್ಖನನದಲ್ಲಿ ಸಿಕ್ಕ ಮಾಹಿತಿಯ ಪ್ರಕಾರ ಸಂಗನಕಲ್ಲು, ತೆಕ್ಕಲಕೋಟೆ, ಕಪ್ಪಗಲ್ಲು, ಕುಡುತಿನಿ ಮೊದಲಾದ ಸ್ಥಳಗಳು ಶಿಲಾಯುಗದಿಂದಲೂ ಆದಿಮಾನವನ ವಾಸದ ನೆಲೆಗಳಾಗಿವೆ. ಎತ್ತು, ನವಿಲು, ಆನೆ, ಮನುಷ್ಯರ ಗೀರುಚಿತ್ರಗಳಿದ್ದು, ಅವು ಪ್ರಾಗೈತಿಹಾಸಿಕ ಕಾಲದಿಂದಲೇ ಜೀವಿಸುತ್ತಿದ್ದ ಪ್ರಾಣಿ, ಪಕ್ಷಿ, ಮಾನವನ ಜೀವನವನ್ನು ಪರಿಚಯಿಸುವ ಆಧಾರಗಳಾಗಿವೆ. ಹೀಗೆ ಬಳ್ಳಾರಿ ಜಿಲ್ಲೆ ಬಹುಪ್ರಾಚೀನಕಾಲದಿಂದಲೂ ಮಾನವನ ವಿಕಾಸದ ನೆಲೆಯಾಗಿ ಧಾರ್ಮಿಕ, ರಾಜಕೀಯ, ಸಾಂಸ್ಕೃತಿಕ ಕೇಂದ್ರದ ನೆಲೆವೀಡಾಗಿರುವುದನ್ನು ಇಂದಿನ ಸಂಶೋಧನೆಗಳು ಬೆಳಕಿಗೆ ತಂದಿವೆ. ಕೃಷಿಮೂಲ ಆಚರಣೆಗಳು ಜಿಲ್ಲೆಯಲ್ಲಿ ಹೆಚ್ಚಾಗಿ ಎಲ್ಲಾ ಭಾಗಗಳಲ್ಲೂ ಪ್ರಚಲಿತದಲ್ಲಿವೆ. ಬಳ್ಳಾರಿ ಜಿಲ್ಲೆಯು ಸ್ತ್ರೀದೈವದ ನೆಲೆಯಾಗಿದೆ. ಈ ಹಿನ್ನೆಲೆಯಲ್ಲಿ ಸಿಡಿಯಾಚರಣೆ, ಬಲಿಯಾಚರಣೆ, ಕುಂಭೋತ್ಸವಗಳು ನೆರವೇರುತ್ತವೆ. ಕೃಷಿಕರಿಗೆ ನೀರೇ ಮೂಲಾಧಾರ, ಕೃಷಿ ಚಟುವಟಿಕೆಯ ಪ್ರತೀ ಹಂತದಲ್ಲೂ ಹತ್ತಾರು ನೆಲ ಹಾಗೂ ಜಲಸಂಬಂಧಿ ಆಚರಣೆಗಳಿವೆ.

ಇಂದಿಗೂ ಆಚರಣೆಯ ನೆಪದಲ್ಲಿ ಹಂಪಿಗೆ ಕಾಲ್ನಡಿಗೆಯಲ್ಲಿ ಯಾತ್ರೆ ಕೈಗೊಳ್ಳಲಾಗುತ್ತದೆ. ಆಚರಣೆಯಲ್ಲಿ ಕೆಂಡ ತುಳಿಯುವುದು ಸಾಮಾನ್ಯ. ಆದರೆ ಬರಿಗೈಯಲ್ಲಿ ಕೆಂಡದ ರಾಶಿಯಲ್ಲಿ ಕೈಹಾಕಿ, ಕೆಂಡದ ಮಳೆ ಸುರಿಸುವ ಕೌತುಕದ ಆಚರಣೆಗಳು ಜಿಲ್ಲೆಯಲ್ಲಿವೆ. ಕೂಡ್ಲಿಗಿ ಭಾಗದಲ್ಲಿ ಜಾನುವಾರುಗಳ ಅಧಿದೇವತೆ ಲಕ್ಕಮ್ಮ. ಈ ದೈವದ ಜಾತ್ರೆಯಲ್ಲಿ ವಿಶೇಷವಾಗಿ ಗುಳೇ ಹೋಗುವ ಸಂಪ್ರದಾಯವಿದೆ. ಹಡಗಲಿ, ಹಗರಿಬೊಮ್ಮನಹಳ್ಳಿ ಭಾಗಗಳಲ್ಲಿ ಕೃಷಿಕರ ರಕ್ಷಣಾ ಮೂಲವಾದ ಮುಳ್ಳು ಆಚರಣೆಗಳಲ್ಲಿ ವಿಶೇಷತೆಯನ್ನು ಪಡೆದಿದೆ.

ಸೀತ್ನಾಪೂಜೆ, ಕಳಿವೆಮ್ಮ, ಹೋಳಿಗೆಮ್ಮ ಹೀಗೆ ವೈವಿಧ್ಯಮಯವಾದ ಗಾಳಿಸಂಬಂಧಿ ಆಚರಣೆಗಳು ಪ್ರಚಲಿತದಲ್ಲಿವೆ. ಮಹಾಸತಿ ಆಚರಣೆಗಳ ಪಳಿಯುಳಿಕೆಗಳಂತೆ ಕಂಡುಬರುವ, ಸ್ತ್ರೀಶೋಷಣೆಯನ್ನು ಪ್ರತಿನಿಧಿಸುವ ಆಚರಣೆಗಳು ಜಿಲ್ಲೆಯಲ್ಲಿ ಪ್ರಚಲಿತದಲ್ಲಿವೆ. ಬಹುಭಾಷಿಕ ಸಂಸ್ಕೃತಿಯನ್ನು ಒಳಗೊಂಡಂತೆ ನೈಸರ್ಗಿಕ ಸಂಪತ್ತಿನಿಂದ ಸಾಂಸ್ಕೃತಿಕ ಸಂಪತ್ತಿನಿಂದ ಐತಿಹಾಸಿಕ ಕ್ಷೇತ್ರಗಳನ್ನೊಳಗೊಂಡ ಜಿಲ್ಲೆ ಇದಾಗಿದೆ. ನೆರೆರಾಜ್ಯವಾದ ಆಂಧ್ರಪ್ರದೇಶದಿಂದಲೂ ಭಕ್ತರು ಆಚರಣೆಯಲ್ಲಿ ಪಾಲ್ಗೊಳ್ಳುವುದನ್ನು ಕ್ಷೇತ್ರಕಾರ್ಯದಲ್ಲಿ ಕಾಣಲಾಗಿದೆ. ಈ ಎಲ್ಲಾ ವೈಶಿಷ್ಟ್ಯಗಳನ್ನು ಹೊಂದಿದ ಬಳ್ಳಾರಿ ಜಿಲ್ಲೆ ಸಹಜವಾಗಿ ಜನಪದ ಆಚರಣೆಗಳ ಆಗರವೂ ಹೌದು. ಪ್ರಸ್ತುತ ಅಧ್ಯಯನದಲ್ಲಿ ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದಂತೆ ಸೀಮಿತವಾದ ಆಚರಣೆಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳಲಾಗಿದೆ. ನನ್ನ ಅಧ್ಯಯನದ ಕಾಲಮಿತಿ, ಅಧ್ಯಯನದ ವ್ಯಾಪ್ತಿ ಇದಕ್ಕೆ ಕಾರಣವಾಗಿದೆ. ಇನ್ನೂ ಸಾಕಷ್ಟು ಆಚರಣೆಗಳು ಬಳ್ಳಾರಿ ಜಿಲ್ಲೆಯಲ್ಲಿ ಪ್ರಚಲಿತದಲ್ಲಿದ್ದು ಮುಂದಿನ ಸಂಶೋಧಕರಿಗೆ ವಿಪುಲ ಅವಕಾಶಗಳಿವೆ. ಅಂತರ್‌ಶಿಸ್ತೀಯ ನೆಲೆಯಲ್ಲಿ ಅಧ್ಯಯನ ಕೈಗೊಳ್ಳುವವರಿಗೆ ಮತ್ತಷ್ಟು ಮೌಲ್ಯಯುತ ಅಂಶಗಳನ್ನು ಗುರುತಿಸಲು ಸಾಧ್ಯವಿದೆ.

ಅಧ್ಯಯನದ ಸ್ವರೂಪ

ಯಾವುದೇ ಜನಪದ ಆಚರಣೆಯಾಗಿರಲಿ, ಅದರ ಒಟ್ಟು ಆಶಯ ಕೇವಲ ಆಚರಣೆಯಾಗಷ್ಟೇ ಆಗಿರದೆ, ಅದರಲ್ಲಿ ಒಂದು ಸಮೂಹದ, ಒಂದು ಪರಿಸರದ, ಸಂಸ್ಕೃತಿಯ ಜೀವಂತ ಬೇರುಗಳಿರುತ್ತವೆ. ಸಮಾಜ ವ್ಯವಸ್ಥೆ ಸುಗಮವಾಗಲು ಹಲವಾರು ಆಚರಣೆಗಳು ರೂಪಗೊಂಡಿವೆ. ಕಾಲದ ಸ್ಥಿತ್ಯಂತರಗಳ ಮಧ್ಯೆ ಇಂದಿಗೂ

ನಿತ್ಯನೂತನವಾಗಿ ಆಚರಿಸಲ್ಪಡುತ್ತಿವೆ. ಈ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲೆಯನ್ನು ಕೇಂದ್ರವಾಗಿಟ್ಟುಕೊಂಡು ಆಚರಣೆಗಳ ಅಧ್ಯಯನ ಹಾಗೂ ಮಾಹಿತಿ ಸಂಗ್ರಹಣೆ ಕಾರ್ಯ ಕೈಗೊಳ್ಳಲಾಗಿದೆ. ಜಿಲ್ಲೆಯಲ್ಲಿ ಲಭ್ಯವಿರುವ ಹಾಗೂ ವಿಶೇಷವಾಗಿ ಕಂಡುಬರುವ ಆಚರಣೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅವುಗಳ ಹುಟ್ಟು, ಬೆಳವಣಿಗೆಗೆ ಸಂಬಂಧಿಸಿದಂತೆ ದಿನನಿತ್ಯದ ಜನಪದರ ಜೀವನದಲ್ಲಿ ಅವುಗಳ ಉಪಯೋಗಿ ತತ್ವಗಳೇನೆಂಬುದನ್ನು ಹಲವಾರು ವಕ್ತೃಗಳೊಂದಿಗೆ ಚರ್ಚಿಸಿ ಅವರ ಅಭಿಪ್ರಾಯಗಳನ್ನು ಬಳಸಿಕೊಳ್ಳಲಾಗಿದೆ.

ಕ್ಷೇತ್ರಕಾರ್ಯದಿಂದ ಪಡೆದ ಅನುಭವದ ಹಿನ್ನೆಲೆಯನ್ನು ಅವಲೋಕಿಸಿದಾಗ, ಆಚರಣೆಗಳ ಅಧ್ಯಯನ ತುಂಬಾ ಕುತೂಹಲಕಾರಿಯಾದುದಾಗಿದೆ. ಬಳ್ಳಾರಿ ಜಿಲ್ಲೆಯ ಏಳು ತಾಲೂಕುಗಳಲ್ಲಿ ಸಂಚರಿಸಿ ಮಾಡಿದ ಕ್ಷೇತ್ರಕಾರ್ಯದ ಅನುಭವಗಳು ಸಂಶೋಧನೆಗೆ ಪೂರಕವಾದ ಮಾಹಿತಿಯನ್ನು ಒದಗಿಸಿವೆ. ಆಚರಣೆಗಳಲ್ಲಿ ಪಾಲ್ಗೊಂಡ ಸಮಯದಲ್ಲಿ ಅಲ್ಲಿಯ ವಿಭಿನ್ನ ವೇಷಭೂಷಣಗಳು, ಅನುಸರಿಸಿದ ವಿಧಿ-ವಿಧಾನಗಳು, ಸಮುದಾಯದ ಪಾಲ್ಗೊಳ್ಳುವಿಕೆ, ಆಹಾರ ಪದ್ಧತಿ ಹೀಗೆ ಪ್ರತಿಯೊಂದು ಅಂಶಗಳು ಸಂಶೋಧನೆಯಲ್ಲಿ ಉಂಟಾದ ತೊಡಕುಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಸಹಾಯಕವಾಗಿವೆ.

ವಕ್ತೃವಿವರ, ಆಚರಣೆಗಳಿಗೆ ಸಂಬಂಧಿಸಿದ ಹಾಡುಗಳ ಧ್ವನಿ ಮುದ್ರಣ, ಛಾಯಾಚಿತ್ರ ಸಂಗ್ರಹಣೆಗಳನ್ನು ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ. ಹಾಗೆಯೇ ಆಚರಣೆಗಳಲ್ಲಿ ನೇರವಾಗಿ ಭಾಗಿಯಾಗಿರುವ ವ್ಯಕ್ತಿಗಳ ಅನುಭವಗಳನ್ನು ಪಡೆದುಕೊಳ್ಳಲಾಗಿದೆ. ಆನುಷಂಗಿಕ ಆಕರಗಳಾದ ವಿವಿಧ ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆಗಳಲ್ಲಿಯ ಬಿಡಿ ಲೇಖನಗಳು, ಹಲವಾರು ವಿದ್ವಾಂಸರು ಬರೆದ ಗ್ರಂಥಗಳು ಹಾಗೂ ಅವರ ಅಭಿಪ್ರಾಯಗಳನ್ನು ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ. ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ ಇಲ್ಲಿಯವರೆಗೆ ಪ್ರಕಟಗೊಂಡ ಕೃತಿಗಳು ಹಾಗೂ ಬಿಡಿಲೇಖನಗಳನ್ನು ಸಂಗ್ರಹಿಸಿ, ಅವುಗಳಲ್ಲಿಯ ಲಿಖಿತ ರೂಪದ ಆಚರಣೆಗೆ ಸಂಬಂಧಿಸಿದ ಸ್ವರೂಪವನ್ನು ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ. ಆಚರಣೆಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಪ್ರಚಲಿತದಲ್ಲಿರುವ ಐತಿಹ್ಯ, ಹಾಡು, ಒಗಟು, ಗಾದೆ, ಜನಪದರ ಪುರಾಣಗಳಂತಹ ಭಿನ್ನಪಠ್ಯಗಳಿಂದ ಅಧ್ಯಯನಕ್ಕೆ ಪೂರಕವಾದ ಮಾಹಿತಿಯನ್ನು ಪಡೆಯಲಾಗಿದೆ. ಗ್ರಾಮೀಣ ಭಾಗದಲ್ಲಿ ಜನಿಸಿದ ನನಗೆ ಸಂಪ್ರದಾಯ ಆಚರಣೆಗಳು ಹುಟ್ಟಿನಿಂದಲೂ ಪರಿಚಿತ. ನನ್ನ ಸ್ವ-ಅನುಭವಗಳು ಹಲವೊಮ್ಮೆ ಅಧ್ಯಯನದಲ್ಲಿ ಸಹಕಾರಿಯಾಗಿವೆ.

ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಜನಪದ ಸಾಹಿತ್ಯದ ಕುರಿತು ಜಾನಪ ವಿದ್ವಾಂಸರನೇಕರು ಕರ್ನಾಟಕದಾದ್ಯಂತ ಸುದೀರ್ಘವಾದ ಅಧ್ಯಯನವನ್ನು ನಡೆಸಿದ್ದಾರೆ. ಬಳ್ಳಾರಿ ಜಿಲ್ಲೆಯೂ ಇದಕ್ಕೆ ಹೊರತಾಗಿಲ್ಲ. ಬಳ್ಳಾರಿ ಜಿಲ್ಲೆಯ ಜಾನಪದ ಪರಂಪರೆ ಶ್ರೀಮಂತವಾದದ್ದು. ಜಿಲ್ಲೆಯ ನೂರಾರು ಗ್ರಾಮಗಳಲ್ಲಿ ದೈವ-ದೇವರುಗಳ ಜಾತ್ರೆ, ಉತ್ಸವ, ಹಬ್ಬಗಳು ವೈಭವದಿಂದ ಆಚರಿಸಲ್ಪಡುತ್ತವೆ. ಈಗಾಗಲೇ ಜಾನಪದ ಸಾಹಿತ್ಯಾಸಕ್ತರು, ಸಂಶೋಧಕರು ಮತ್ತು ವಿದ್ವಾಂಸರು ತಮ್ಮ ಕ್ಷೇತ್ರಕಾರ್ಯದ ಅನುಭವದ ನೆಲೆಯಲ್ಲಿ ಆಚರಣೆಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ಸಂಪನ್ಮೂಲವನ್ನು ಸಂಗ್ರಹಿಸಿದ್ದಾರೆ ಹಾಗೂ ಅಧ್ಯಯನಕ್ಕೊಳಪಡಿಸಿದ್ದಾರೆ. ಅವರ ಪರಿಶ್ರಮದ ಪ್ರತಿಫಲವಾಗಿ ಮೂಡಿಬಂದ ಕೃತಿಗಳ ಸ್ಥೂಲ ಸಮೀಕ್ಷೆಯನ್ನು ಇಲ್ಲಿ ಮಾಡಲಾಗಿದೆ.

ಯಡ್ರಾಮನಹಳ್ಳಿ ದೊಡ್ಡ ಭರಮಪ್ಪನವರ "ತೊಗಲು ಗೊಂಬೆಯಾಟ" (೧೯೮೮) ಕೃತಿಯು ಬಳ್ಳಾರಿ ಜಿಲ್ಲೆಯ ಪ್ರಸಿದ್ಧ ಜನಪದ ಕಲೆಯಾದ ತೊಗಲು ಗೊಂಬೆಯಾಟ ಕುರಿತಾಗಿದೆ. ಬಳ್ಳಾರಿ ಜಿಲ್ಲೆಯ ಜನಪದ ಪ್ರಕಾರಗಳನ್ನು ವಿವರಿಸುವ ಕೃತಿ 'ಮುತ್ತುಹವಳ'(೧೯೯೨). ಗುರುಮೂರ್ತಿ ಪೆಂಡಕೂರು ಮತ್ತು ಕೆ. ವಿರೂಪಾಕ್ಷಗೌಡ ಇವರು ಈ ಕೃತಿಯ ಸಂಗ್ರಹಕಾರರಾಗಿದ್ದಾರೆ. 'ಬಾಚಿಗೊಂಡನಹಳ್ಳಿ ಮತ್ತು ಏಣಗಿ ಬಸಾಪುರದ "ಜಾನಪದ ಗೀತೆಗಳು" (೧೯೯೨), ಕೃಷ್ಣಯ್ಯ ಎಸ್.ಎ. ಅವರಿಂದ ಸಂಗ್ರಹಿಸಲ್ಪಟ್ಟ ತಳಸಮುದಾಯಗಳ ಹಾಡುಗಳು. "ಮಳಲಿಯಮ್ಮ ನಿನ್ನಾಲ್ಕದೋ - ಉದೋ" (೧೯೯೪) ಕೃತಿಯಲ್ಲಿ ಡಾ. ಮಂಜುನಾಥ ಬೇವಿನಕಟ್ಟಿಯವರು ಹ್ಯಾರಡ ಗ್ರಾಮದ ಸ್ಥೂಲ ಪರಿಚಯದೊಂದಿಗೆ ಗ್ರಾಮದೇವತೆಯಾದ ಮಳಲಿಯಮ್ಮನ ಆಚರಣೆ ಹಾಗೂ ವಿಧಿ-ವಿಧಾನಗಳನ್ನು ಚರ್ಚಿಸಿದ್ದಾರೆ. "ಬಳ್ಳಾರಿ ಜಿಲ್ಲೆಯ ಬಯಲಾಟಗಳು" (೧೯೯೬) ಡಾ. ಕೆ.ಆರ್. ದುರ್ಗಾದಾಸ್‌ರವರ ಕೃತಿಯಾಗಿದ್ದು, ಒಂದು ಕ್ಷೇತ್ರದ ರಂಗಕಲೆಯ ಅಖಂಡ ಪ್ರಜ್ಞೆಯನ್ನು ವಿಸ್ತರಿಸುವುದರೊಂದಿಗೆ, ದೈವೀಪರಿಕಲ್ಪನೆ ಆಚರಣೆಗಳ ಪ್ರದರ್ಶನದ ಆರಂಭ ಹಾಗೂ ಮುಕ್ತಾಯಗಳಲ್ಲಿವೆಯೆಂಬುದನ್ನು ತಿಳಿಸುತ್ತದೆ. ಮಾದಿಗರ ದೈವವಾದ ಮಾತಂಗಿಯನ್ನು ಕುರಿತ ಪರಿಚಯಾತ್ಮಕ ಕೃತಿ 'ಮಾತಂಗಿ' (೧೯೯೬). ಡಾ. ಮಂಜುನಾಥ ಬೇವಿನಕಟ್ಟಿಯವರು ಮಾತಂಗಿಯ ಆಯ್ಕೆ ಹಾಗೂ ಮಾತಂಗಿತನಕ್ಕೆ ಒಪ್ಪಿಸುವ ವಿಧಿ-ವಿಧಾನ, ನಂಬಿಕೆ, ನಿಷೇಧಗಳನ್ನು ವಿವರಿಸಿದ್ದಾರೆ. "ಮೈಲಾರಲಿಂಗನ ಕಾವ್ಯ" (೧೯೯೭). ಇದು ಎಂ.ಬಿ. ನೇಗಿನಹಾಳ ಅವರು ಬಳ್ಳಾರಿ ಜಿಲ್ಲೆಯ ಹಿರೇಮೈಲಾರದ ಜಾತ್ರೆಯ ಸಂದರ್ಭದಲ್ಲಿ ಸಂಗ್ರಹಿಸಿದ ಕಾವ್ಯವಾಗಿದೆ. ಎಂ.ಎನ್. ವೆಂಕಟೇಶ್‌ರವರು "ಮೈಲಾರದ ಜಾತ್ರೆಗಳು" (೧೯೯೮) ಕೃತಿಯಲ್ಲಿ ಮೈಲಾರದ ಜಾತ್ರೆಯಲ್ಲಿ ನೆರವೇರುವ ಆಚರಣಾತ್ಮಕವಾದ ಸಂಪ್ರದಾಯಗಳ ಮಾಹಿತಿ ನೀಡಿದ್ದಾರೆ. ಗಾಳೆಮ್ಮ ಎನ್ನುವ ಗ್ರಾಮದೇವತೆಯ ನೆಲೆಗಳಲ್ಲಿ ಬಳ್ಳಾರಿ ಜಿಲ್ಲೆಯು ಒಂದಾಗಿದೆ ಎಂಬುದನ್ನು 'ಗಾಳೆಮ್ಮ' (೧೯೯೮) ಎಂಬ ಕೃತಿಯಲ್ಲಿ ಡಾ. ಎ. ಸುಬ್ಬಣ್ಣ ರೈ ಅವರು ನಿರೂಪಿಸಿದ್ದಾರೆ. ಡಾ. ಪುರುಷೋತ್ತಮ ಬಿಳಿಮಲೆ ಮತ್ತು ಚಲುವರಾಜು ಅವರು "ಹಂಪಿ ಜಾನಪದ" (೧೯೯೯) ಕೃತಿಯಲ್ಲಿ ಹಂಪಿ ಪರಿಸರದಲ್ಲಿ ಪ್ರಚಲಿತದಲ್ಲಿರುವ ಆಚರಣೆಗಳನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಡಾ. ಗುರಾಚಾರ್ಯ ಅವರು "ಉಪ್ಪಾರ ಹೊಸಳ್ಳಿಯ ಜಗದ್ಗುರು ಶ್ರೀ ಕರಸ್ಥಲ ನಾಗಲಿಂಗ ಸ್ವಾಮಿಗಳವರ ಚರಿತ್ರೆ"(೧೯೯೯)ಯಲ್ಲಿ ಸದ್‌ಮಠದಲ್ಲಿ ನಡೆಯುವ ಆಚರಣೆಗಳನ್ನು ಪರಿಚಯಿಸಿದ್ದಾರೆ. ಭೌಗೋಳಿಕವಾಗಿ ಕೊಪ್ಪಳ ಜಿಲ್ಲೆಗೆ ಸೇರ್ಪಡೆಯಾಗಿರುವ ಹುಲಿಗಿ ಕ್ಷೇತ್ರದ ಭಕ್ತರು ಹೆಚ್ಚಾಗಿ ಬಳ್ಳಾರಿ ಜಿಲ್ಲೆಯವರೇ ಆಗಿದ್ದಾರೆ. ಈಗಾಗಲೇ ವಿದ್ವಾಂಸರಾದ ಡಾ. ಪುರುಷೋತ್ತಮ ಬಿಳಿಮಲೆ ಅವರು 'ಹುಲಿಗೆಮ್ಮ' (೧೯೯೯) ಕೃತಿಯ ಮೂಲಕ ಸಮಗ್ರ ಸಂಶೋಧನೆಯನ್ನು ನಡೆಸಿದ್ದಾರೆ. ದರೋಜಿ ಈರಮ್ಮ ಹಾಡಿದ 'ಸ್ವಾಸಿ ಚಿನ್ನಮ್ಮನ ಕಾವ್ಯ' (೧೯೯೯) ಎಂಬ ಜನಪದ ಕಾವ್ಯವನ್ನು ಡಾ. ಸ.ಚಿ. ರಮೇಶ್ ಅವರು ಸಂಪಾದಿಸಿದ್ದಾರೆ.

'ಹಂಪಿಯ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು' (೨೦೦೦) ಎಂಬ ಕೃತಿಯಲ್ಲಿ ಚಲುವರಾಜು ಅವರು ಹಂಪಿ ಪರಿಸರದ ಸ್ಮಾರಕಗಳಲ್ಲಿರುವ ಜಾನಪದೀಯ ಅಂಶಗಳನ್ನು ಶೋಧಿಸಿದ್ದಾರೆ. ಡಾ. ಸಿ. ಮಹದೇವ, ಡಾ. ಎ. ಸುಬ್ಬಣ್ಣ ರೈ ಮತ್ತು ಡಾ. ಮಾಧವ ಪೆರಾಜೆಯವರ ಕ್ಷೇತ್ರಕಾರ್ಯ ಮುಖೇನ ಸಂಪಾದಿತ "ಹೊಸಪೇಟೆ ತಾಲ್ಲೂಕು ದರ್ಶನ" (೨೦೦೨) ಕೃತಿಯು ಹೊಸಪೇಟೆ ತಾಲೂಕಿನ ಸಮಗ್ರ ಮಾಹಿತಿ ನೀಡುವ ಗ್ರಂಥವಾಗಿದೆ. ಹೊಸಪೇಟೆ ತಾಲೂಕಿನ ಚರಿತ್ರೆ, ಸ್ಥಳ ಪುರಾಣ, ಐತಿಹ್ಯ, ಸ್ಥಳನಾಮ ಹೀಗೆ ಚಾರಿತ್ರಿಕ

ನೆಲೆಗಳನ್ನು ಆಮೂಲಾಗ್ರವಾಗಿ ನೀಡಲಾಗಿದೆ. ಹಾಗೆಯೇ ಗ್ರಾಮ ಸಂಸ್ಕೃತಿ ಎಂಬ ಅಧ್ಯಾಯದಲ್ಲಿ ತಾಲೂಕಿನ ಜಾತ್ರೆ, ಹಬ್ಬ-ಹರಿದಿನ, ಕ್ರೀಡೆ, ಸಮುದಾಯ ಹೀಗೆ ಎಲ್ಲಾ ಕ್ಷೇತ್ರಗಳ ಮಾಹಿತಿಗಳನ್ನು ನೀಡಿದ್ದಾರೆ.

ಡಾ. ಸಿ. ಮಹದೇವ ಅವರು ಸಂಪಾದಿಸಿದ 'ಮೈಲಾರ' (೨೦೦೨) ಕೃತಿಯಲ್ಲಿ ಡಾ. ಕೆ. ಕೇಶವನ್‌ಪ್ರಸಾದ್‌ರವರು ನಂಬಿಕೆ ಮತ್ತು ಆಚರಣೆಗಳನ್ನು ಕುರಿತು ವೈಜ್ಞಾನಿಕ ಚಿಂತನೆಯನ್ನು ನಡೆಸಿದ್ದಾರೆ. "ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ" (೨೦೦೨) ಕೃತಿಯಲ್ಲಿ ಜೆ.ಎಂ. ನಾಗಯ್ಯ ಅವರು ಇತಿಹಾಸದ ಹಿನ್ನೆಲೆಯಲ್ಲಿ ದುರುಗಮ್ಮನ ಆಚರಣೆಯ ಮೂಲವನ್ನು ಸರ್ವೇಕ್ಷಣೆ ಮಾಡಿದ್ದಾರೆ. "ಉಜ್ಜಯಿನಿ ಸದ್ಧರ್ಮ ಪೀಠದ ಸಾಂಸ್ಕೃತಿಕ ಅಧ್ಯಯನ (೨೦೦೩) ಕೃತಿಯಲ್ಲಿ ಡಾ. ಆರ್.ಎಂ. ಷಡಕ್ಷರಯ್ಯ ಅವರು ಉಜ್ಜಯಿನಿ ಸದ್ಧರ್ಮ ಪೀಠದ ಸಾಂಸ್ಕೃತಿಕ ಪರಂಪರೆಯ ಪರಿಚಯದೊಂದಿಗೆ ಅಲ್ಲಿ ನಡೆಯುವ ವಿಶೇಷ ಆಚರಣೆಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಕೂಡ್ಲಿಗಿ ತಾಲೂಕಿನ ಮಹಿಳೆಯರಿಂದ "ಕೆರೆ ಹೊನ್ನಮ್ಮನ" (೨೦೦೩) ಕಾವ್ಯವನ್ನು ಡಾ. ಸಿ.ಟಿ. ಗುರುಪ್ರಸಾದ್‌ರವರು ಸಂಗ್ರಹಿಸಿದ್ದಾರೆ. ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಅವರು "ಚಿನ್ನಹಗರಿ ಸಿರಿ" (೨೦೦೬) ಕೃತಿಯಲ್ಲಿ ಬಳ್ಳಾರಿ ಜಿಲ್ಲೆಯ ಗಡಿ ಭಾಗದಲ್ಲಿ ಹರಿಯುವ ಚಿನ್ನಹಗರಿ ಪರಿಸರದ ಬುಡಕಟ್ಟು ಸಂಸ್ಕೃತಿಗಳ ಚಾರಿತ್ರಿಕ ಅಧ್ಯಯನವನ್ನು ನಡೆಸಿದ್ದಾರೆ. ಡಾ. ಎಚ್.ಎಸ್. ಗುರುಪ್ರಸಾದ್‌ರವರು "ವಲಸಿಗರ ನೆಲೆ : ಮರಿಯಮ್ಮನಹಳ್ಳಿ" ಕೃತಿಯಲ್ಲಿ ಆ ಭಾಗದ ಆಚರಣೆಗಳನ್ನು ಸರಳ ರೀತಿಯಲ್ಲಿ ಪರಿಚಯಿಸಿದ್ದಾರೆ. ಡಾ. ಮಂಜುನಾಥ ಬೇವಿನಕಟ್ಟಿ ಅವರು ಸಂಪಾದಿಸಿದ 'ವ್ಯಾಧ ಚರಿತೆ' (೨೦೦೭) ಕೃತಿಯಲ್ಲಿ ಬಳ್ಳಾರಿ ಜಿಲ್ಲೆ ಮತ್ತು ರಾಜ್ಯಾದ್ಯಂತವಿರುವ ಬೇಡರ ಸಂಸ್ಕೃತಿ ಮತ್ತು ಚರಿತ್ರೆ, ವೈಶಿಷ್ಟ್ಯಗಳ ಕುರಿತ ಮಾಹಿತಿಗಳಿವೆ.

ಆರ್. ಕೃಷ್ಣವೇಣಿಯವರು 'ಹುಲಿಗೆಮ್ಮ' (೨೦೦೮) ಎಂಬ ಸಂಶೋಧನಾ ಕೃತಿಯಲ್ಲಿ ಹುಲಿಗೆಮ್ಮನ ಪರಂಪರೆ, ಆಚರಣೆಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದಾರೆ. 'ಬೇಡ ಬುಡಕಟ್ಟಿನ ಚರಿತ್ರೆ ಮತ್ತು ಸಂಸ್ಕೃತಿ' (೨೦೦೮) ಸಂಪಾದಿತ ಕೃತಿಯಲ್ಲಿ (ಸಂ: ವಿರೂಪಾಕ್ಷಿ ಪೂಜಾರಹಳ್ಳಿ) ಬೇಡ ಬುಡಕಟ್ಟಿನ ಸಂಸ್ಕೃತಿ ವೈಶಿಷ್ಟ್ಯಗಳನ್ನು ಪರಾಮರ್ಶಿಸಲಾಗಿದೆ. ಡಾ. ಸ.ಚಿ. ರಮೇಶ್ ಅವರ 'ಕರಾವು : ಜಾನಪದ ಅಧ್ಯಯನ ಲೇಖನಗಳು' (೨೦೦೮) ಕೃತಿಯಲ್ಲಿ ಬಳ್ಳಾರಿ ದುರ್ಗಮ್ಮ, ಹಂಪಿಯ ಪಟ್ಟಣದ ಎಲ್ಲಮ್ಮ ದೇವತೆಯ ಕುರಿತ ಸಂಶೋಧನಾತ್ಮಕ ಲೇಖನಗಳಲ್ಲಿ ಈ ದೇವತೆಗಳ ಬಗೆಗಿನ ಆಚರಣೆ-ಸಂಪ್ರದಾಯಗಳ ಮಾಹಿತಿಗಳಿವೆ. ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಅವರ 'ವಿಜಯನಗರ ಕಾಲದ ಸಂಸ್ಕೃತಿ' (೨೦೦೮) ಕೃತಿಯಲ್ಲಿ ಬೇಟೆ, ಪಶುಪಾಲನೆ ಮತ್ತು ಕೃಷಿಗೆ ಸಂಬಂಧಿಸಿದ ಹಬ್ಬ, ಆಚರಣೆಗಳ ಬಗೆಗಿನ ಮಾಹಿತಿಗಳಿವೆ. ಡಾ. ಸ.ಚಿ. ರಮೇಶ್ ಅವರು ನಾಡೋಜ ದರೋಜಿ ಈರಮ್ಮ ಹಾಡಿದ 'ಮಾರ್‍ವಾಡಿ ಶೇಠ್' (೨೦೧೦) ಎಂಬ ಜನಪದ ಕಾವ್ಯವನ್ನು ಸಂಪಾದಿಸಿದ್ದಾರೆ. "ಬಳ್ಳಾರಿ ಜಿಲ್ಲೆಯ ಜನಪದ ವೃತ್ತಿಗಾಯಕರು" (೨೦೧೦) ಕೃತಿಯಲ್ಲಿ ವೃತ್ತಿಗಾಯಕರ ಧಾರ್ಮಿಕ ಆಚರಣೆಗಳ ಸ್ವರೂಪವನ್ನು ಆರ್. ಚೇತನ್‌ಕುಮಾರ ಅವರು ವಿಶ್ಲೇಷಣೆಗೆ ಒಳಪಡಿಸಿದ್ದಾರೆ. "ಕರ್ನಾಟಕದ ಜನಪದ ಆಚರಣೆಗಳು" (೨೦೧೦) ಡಾ. ಸ.ಚಿ. ರಮೇಶ್‌ರವರ ಕೃತಿಯಾಗಿದ್ದು, ಬಳ್ಳಾರಿ ಜಿಲ್ಲೆಯಲ್ಲಿ ಪ್ರಚಲಿತದಲ್ಲಿರುವ ಕೆಲವು ಆಚರಣೆಗಳನ್ನು ಇದರಲ್ಲಿ ಪರಿಚಯಿಸಲಾಗಿದೆ. ಡಾ. ಎಲ್. ಶ್ರೀನಿವಾಸ ಅವರು 'ಹಂಪಿ ಪರಿಸರದ ಆದಿಮಾನವನ ನೆಲೆಗಳು' (೨೦೧೦) ಎಂಬ ಕೃತಿಯಲ್ಲಿ ಹಂಪಿ ಪರಿಸರದ ಸಂಪ್ರದಾಯ ಮತ್ತು ನಂಬಿಕೆಗಳ ಬಗ್ಗೆ ಸ್ಥೂಲ ಮಾಹಿತಿಯನ್ನು ನೀಡಿದ್ದಾರೆ. ಡಾ. ಮೊಗಳ್ಳಿ ಗಣೇಶ್ ಅವರು 'ಹಂಪಿ ಜೀವಜಾಲ ಜಾನಪದ'

(೨೦೧೧) ಕೃತಿಯಲ್ಲಿ ಹಂಪಿ ಪರಿಸರದ ಪ್ರಾಣಿ, ಪಕ್ಷಿ, ಸಸ್ಯ, ಜಲ, ಜಲಚರ ಜಾನಪದದ ವಿಚಾರಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದ್ದಾರೆ.

"ಹಂಪಸಾಗರದ ಗಂಗಾಂಬಿಕೆ ಚರಿತ್ರೆ, ಸಂಸ್ಕೃತಿ ಮತ್ತು ದೈವಗಳ ಅಧ್ಯಯನ" (೨೦೧೧) ಕೃತಿಯಲ್ಲಿ ಡಾ. ಕನ್ನಬಾಳ ಪನ್ನಂಗಧರ ಅವರು ಜಲಸಂಸ್ಕೃತಿಯ ಪ್ರತೀಕವಾದ ಗಂಗಾಂಬಿಕೆ ದೇವತೆಯ ತೆಪ್ಪೋತ್ಸವದ ಆಚರಣೆಯನ್ನು ಅತ್ಯಂತ ಮನೋಜ್ಞವಾಗಿ ಸಾದರಪಡಿಸಿದ್ದಾರೆ. ಎಂ. ಸೋಮೇಶ್ ಅವರು "ದಣಾಯಕನ ಕೆರೆ" (೨೦೧೧) ಎಂಬ ಕೃತಿಯಲ್ಲಿ ಮರಿಯಮ್ಮನಹಳ್ಳಿಯಲ್ಲಿರುವ ಕೆರೆಯೊಂದನ್ನು ಕೇಂದ್ರವಾಗಿಟ್ಟುಕೊಂಡು, ಅದಕ್ಕೆ ಸಂಬಂಧಿಸಿದ ಐತಿಹ್ಯ, ಹಾಡು, ನಂಬಿಕೆ, ಆಚರಣೆಗಳನ್ನು ಪರಿಚಯಿಸಿದ್ದಾರೆ. ಡಾ. ಹೆಬ್ಬಾಲೆ ಕೆ. ನಾಗೇಶ್‌ರವರ "ಮುಕ್ತ ಸಂಸ್ಕೃತಿ ಮತ್ತು ಹಂಪಿ ಪರಿಸರ" (೨೦೧೨) ಕೃತಿಯಲ್ಲಿ ಹಂಪಿ ಪರಿಸರದ ಹಲವು ಸಮುದಾಯಗಳ, ಆಚರಣೆಗಳ ವಿಶ್ಲೇಷಣೆ ಇದೆ. ಡಾ. ವಾಸುದೇವ ಬಡಿಗೇರ ಅವರ 'ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ' (೨೦೧೨) ಬಳ್ಳಾರಿ ಜಿಲ್ಲೆಯನ್ನು ಚಾರಿತ್ರಿಕ ಹಿನ್ನೆಲೆಯಲ್ಲಿ ನೋಡಿದ ಕೃತಿ. ರಾಜಮನೆತನಗಳು ದೇವಾಲಯಗಳು ಮತ್ತು ಸಾಂಸ್ಕೃತಿಕ ಪರಂಪರೆಯ ಕುರಿತ ವಿಶ್ಲೇಷಣೆಗಳಿವೆ.

"ಬಳ್ಳಾರಿ ಜಿಲ್ಲೆಯ ಬುಡಕಟ್ಟು ದೇವದಾಸಿಯರ ಅಧ್ಯಯನ" (೨೦೦೨) ಟಿ. ಕೊತ್ಲಮ್ಮ ಅವರ ಸಂಶೋಧನಾ ಪ್ರಬಂಧವಾಗಿದ್ದು, ದೇವದಾಸಿ ಸಂಪ್ರದಾಯದ ಸುಳಿಯಲ್ಲಿ ಸಿಲುಕಿದವರ ಹಾಗೂ ಕಾನೂನು ನಿಷೇಧ ಕಾಯ್ದೆ ಜಾರಿಗೊಂಡಿದ್ದರೂ ತೆರೆಮರೆಯಲ್ಲಿ ನಡೆಯುವ ಆಚರಣೆಗಳತ್ತ ಬೆಳಕು ಚೆಲ್ಲಿದೆ. "ಬಳ್ಳಾರಿ ಮತ್ತು ಆಂಧ್ರ ಗಡಿ ಭಾಗದ ಹಗಲುವೇಷಗಾರರು : ಒಂದು ಅಧ್ಯಯನ" (೨೦೦೨) ವೆಂಕನಗೌಡ ಅವರ ಸಂಶೋಧನಾ ಪ್ರಬಂಧವಾಗಿದ್ದು, ಈ ಸಮುದಾಯದಲ್ಲಿ ಪ್ರಚಲಿತದಲ್ಲಿರುವ ಆಚರಣೆ, ಹಾಡು, ಗಾದೆ, ಒಡಪು ಇತ್ಯಾದಿಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ. ಜಿ. ವೆಂಕಟೇಶ್ ಅವರ ಸಂಶೋಧನಾ ಪ್ರಬಂಧವಾದ "ಗುಡ್ಡದ ಮಲ್ಲಯ್ಯ (ಮೀನುಗುಂದಿ ಮಲ್ಲಯ್ಯ) ಆಚರಣೆ : ಒಂದು ಜಾನಪದೀಯ ಅಧ್ಯಯನ"(೨೦೦೩)ದಲ್ಲಿ ಗುಡ್ಡದ ಮಲ್ಲಯ್ಯನ ವಿಶೇಷ ಆಚರಣೆಗಳನ್ನು ಹಾಗೂ ಭೌಗೋಳಿಕವಾಗಿ ಆಂಧ್ರಪ್ರದೇಶದ ದೈವವಾಗಿದ್ದರೂ, ಬಳ್ಳಾರಿ ಜಿಲ್ಲೆಯ ಭಕ್ತರ ಪಾಲ್ಗೊಳ್ಳುವಿಕೆ ಬಗ್ಗೆ ವಿಶ್ಲೇಷಿಸಿದ್ದಾರೆ. "ಹೊಸಪೇಟೆ ತಾಲೂಕಿನ ಗರಡಿ ಸಂಪ್ರದಾಯ"(೨೦೦೪) ಯು. ಮಲ್ಲಿಕಾರ್ಜುನ ಅವರ ಸಂಶೋಧನಾ ಪ್ರಬಂಧವಾಗಿದ್ದು, ಜನಪದರ ಆಚರಣೆಗಳನ್ನು ಗರಡಿ ಸಂಪ್ರದಾಯದಲ್ಲೂ ಕಾಣಲಾಗಿದೆ. ಜಿ. ಕರಿಯಪ್ಪನವರು "ಬಳ್ಳಾರಿ ಜಿಲ್ಲೆಯ ಅವಧೂತರು" (೨೦೦೪) ಸಂಶೋಧನಾ ಪ್ರಬಂಧದಲ್ಲಿ ಅವಧೂತ ಪರಂಪರೆಯ ಮೂಲಕ ಜಿಲ್ಲೆಯಲ್ಲಿ ಪ್ರಚಲಿತದಲ್ಲಿರುವ ಜಾತ್ರೆ, ಉತ್ಸವ, ನಂಬಿಕೆ, ಸಂಪ್ರದಾಯ, ಪವಾಡಗಳ ಆಶಯಗಳನ್ನು ಗುರುತಿಸಿದ್ದಾರೆ.

"ಬುರ್ರಕಥಾ ಈರಮ್ಮ : ಒಂದು ಅಧ್ಯಯನ" (೨೦೦೬) ಸಾರಿಕಾದೇವಿ ಎಲ್. ಕಾಳಗಿ ಅವರ ಸಂಶೋಧನಾ ಪ್ರಬಂಧವಾಗಿದ್ದು, ಬುರ್ರಕಥಾ ಪರಂಪರೆಯಲ್ಲಿಯ ಕಥನಕಾವ್ಯಗಳ ಮಾಹಿತಿ ಸಂಗ್ರಹಿಸಿದ್ದಾರೆ. "ಬಳ್ಳಾರಿ ಜಿಲ್ಲೆಯ ಜನಪದ ವೈದ್ಯ : ಒಂದು ವೈಜ್ಞಾನಿಕ ಅಧ್ಯಯನ" (೨೦೦೭), ಬಿ.ಎಸ್. ಸುಧಾಕರರವರ ಸಂಶೋಧನಾ ಪ್ರಬಂಧವಾಗಿದ್ದು, ಜನಪದ ವೈದ್ಯ ಪರಂಪರೆ, ವೈಜ್ಞಾನಿಕ ನೆಲೆಯಲ್ಲಿ ಮೂಢನಂಬಿಕೆಗಳ ಅವಲೋಕನ, ಆಧುನಿಕತೆ ಮತ್ತು ಜಾನಪದ ವೈದ್ಯ ಪದ್ಧತಿ ಬಗ್ಗೆ ಬೆಳಕು ಚೆಲ್ಲಲಾಗಿದೆ. ಸಂಡೂರು

ತಾಲೂಕಿನ ಸಮಗ್ರ ಮಾಹಿತಿಯನ್ನು ಗಿರಿಜಾ ಅವರು "ಸಂಡೂರು ತಾಲ್ಲೂಕು ಒಂದು ಚಾರಿತ್ರಿಕ ಅಧ್ಯಯನ" (೨೦೦೭) ಎಂಬ ಸಂಶೋಧನಾ ಪ್ರಬಂಧದ ಮೂಲಕ ಕಟ್ಟಿಕೊಟ್ಟಿದ್ದಾರೆ. "ಮೈಲಾರಲಿಂಗನ ಆಚರಣೆ-ಒಂದು ಸಾಂಸ್ಕೃತಿಕ ಅಧ್ಯಯನ" (೨೦೦೮) ನಾಗರಾಜ ಹೊಸೂರಕರ್ ಅವರ ಸಂಶೋಧನಾ ಪ್ರಬಂಧವಾಗಿದ್ದು, ಮೈಲಾರದಲ್ಲಿ ನಡೆಯುವ ಸಾಂಸ್ಕೃತಿಕ ಅಂಶಗಳನ್ನೊಳಗೊಂಡ ದೈವದ ವಿಶಿಷ್ಟತೆ, ಆಚರಣೆಯ ವಿಧಿ-ವಿಧಾನಗಳನ್ನು ತಿಳಿಸಿದ್ದಾರೆ. "ಕಮಲಾಪುರ : ಒಂದು ಸಾಂಸ್ಕೃತಿಕ ಅಧ್ಯಯನ" (೨೦೦೮) ಡಾ. ಕೆ. ಶಿವಲೀಲಾ ಲೋಕೇಶ್‌ರವರ ಸಂಶೋಧನಾ ಪ್ರಬಂಧವಾಗಿದ್ದು, ಐದನೇ ಅಧ್ಯಾಯದಲ್ಲಿ ಜನಪದ ಆಚರಣೆ, ಆಟ, ಹಬ್ಬ, ಕಲೆ, ಜಾತ್ರೆ, ಉತ್ಸವ, ಗ್ರಾಮದೇವತೆಯ ವೈಶಿಷ್ಟ್ಯತೆಯ ಬಗ್ಗೆ ಚರ್ಚಿಸಿದ್ದಾರೆ. ಡಾ. ಜಗದೀಶ್ ಕುಮಾರ್‌ರವರು ತಮ್ಮ ಸಂಶೋಧನಾ ಪ್ರಬಂಧವಾದ "ಬೇಡ ಬುಡಕಟ್ಟಿನ ಬೇಟೆ ಆಚರಣೆ : ಒಂದು ಸಮಾಜಶಾಸ್ತ್ರೀಯ ಅಧ್ಯಯನ"ದಲ್ಲಿ ಕಾಮಲಾಪುರದ ಬೇಡ ಬುಡಕಟ್ಟಿನ ಬೇಟೆ ಹಾಗೂ ಬಲಿ ಆಚರಣೆಗಳ ಮಾಹಿತಿ ನೀಡಿದ್ದಾರೆ. "ಚೆಳ್ಳಗುರ್ಕಿ ಎರ್ರಿತಾತ : ಸಾಂಸ್ಕೃತಿಕ ಸಂಕಥನ" (೨೦೧೦) ಡಾ. ಹೆಚ್. ಮಲ್ಲಿಕಾರ್ಜುನ ಅವರ ಸಂಶೋಧನಾ ಪ್ರಬಂಧವಾಗಿದ್ದು, ಎರ್ರಿತಾತ ದೈವದ ಸಂಸ್ಕೃತಿಯಲ್ಲಿರುವ ಆಚರಣೆಗಳನ್ನು ಪರಿಚಯಿಸಿದ್ದಾರೆ.

"ಹೊಸಪೇಟೆ ತಾಲ್ಲೂಕಿನ ಗಂಡು ಜೋಗಮ್ಮರ ಅಧ್ಯಯನ" (೧೯೯೩) ಮಾಧವ ಪೆರಾಜೆಯವರ ಸಂಪ್ರಬಂಧವಾಗಿದೆ. ಸ.ಚಿ. ರಮೇಶ್‌ರವರ "ಹೊಸಪೇಟೆ ತಾಲೂಕು ಉಪ್ಪಾರರ ಮದುವೆ ಸಂಪ್ರದಾಯಗಳು" (೧೯೯೪) ಸಂಪ್ರಬಂಧದಲ್ಲಿ ಉಪ್ಪಾರ ಜನಾಂಗದ ಆಚರಣೆಗಳನ್ನು ಪರಿಚಯಿಸಿದ್ದಾರೆ. "ಕೊಟ್ಟೂರೇಶ್ವರ : ಒಂದು ಸಾಂಸ್ಕೃತಿಕ ಅಧ್ಯಯನ" (೧೯೯೬) ಎಂಬ ಸಂಪ್ರಬಂಧದಲ್ಲಿ ಎಂ. ಶರಣಪ್ಪ ಅವರು ಕೊಟ್ಟೂರೇಶ್ವರ ದೈವದ ಇತಿಹಾಸ, ಪವಾಡ, ನಂಬಿಕೆ, ಆಚರಣೆಗಳ ಬಗ್ಗೆ ವಿವರಿಸಿದ್ದಾರೆ. ಸಂಡೂರು ಪರಿಸರದ ಇತಿಹಾಸ, ಶಾಸನ, ದಾನ, ದತ್ತಿಗಳ ಬಗ್ಗೆ ಗಿರಿಜಾ ಅವರು "ಸಂಡೂರು ಪರಿಸರದ ಶಾಸನಗಳು ಮತ್ತು ಉಲ್ಲೇಖಿತ ದೇವಾಲಯಗಳು" (೨೦೦೩) ಸಂಪ್ರಬಂಧದಲ್ಲಿ ಮಾಹಿತಿ ನೀಡಿದ್ದಾರೆ. ಆರ್. ವಿಜಯಕುಮಾರ್ ಅವರು "ಮೊರಬದ ಶ್ರೀ ವೀರಭದ್ರೇಶ್ವರ ಸ್ವಾಮಿ : ಒಂದು ಸಾಂಸ್ಕೃತಿಕ ಅಧ್ಯಯನ" (೨೦೦೩) ಎಂಬ ಸಂಪ್ರಬಂಧದಲ್ಲಿ ದೈವಕ್ಕೆ ಸಂಬಂಧಿಸಿದ ವಿಶೇಷ ಆಚರಣೆಗಳ ಮಾಹಿತಿ ನೀಡಿದ್ದಾರೆ. "ಬಳ್ಳಾರಿ ಜಿಲ್ಲೆಯ ದುರುಗ ಮುರುಗಿಯರು : ಒಂದು ಸಮಾಜಶಾಸ್ತ್ರೀಯ ಅಧ್ಯಯನ" (೨೦೦೩) ಲೋಕರಾಜ ದೊಡ್ಡಮನಿ ಅವರ ಸಂಪ್ರಬಂಧವಾಗಿದ್ದು, ಬಳ್ಳಾರಿ ಜಿಲ್ಲೆಯಲ್ಲಿ ಪ್ರಚಲಿತದಲ್ಲಿರುವ ದುರುಗ ಮುರುಗಿ ಸಮುದಾಯದ ಆಚರಣೆಗಳನ್ನು ಕುರಿತು ಚರ್ಚಿಸಿದ್ದಾರೆ. ದೊಡ್ಡಮನಿ ಲೋಕರಾಜ ಎ.ಕೆ. ಅವರು "ಬಳ್ಳಾರಿ ಜಿಲ್ಲೆಯ ದುರುಗ ಮುರುಗಿಯರು : ಒಂದು ಸಮಾಜ ಶಾಸ್ತ್ರೀಯ ಅಧ್ಯಯನ" (೨೦೦೩) ಎಂಬ ಸಂಪ್ರಬಂದದಲ್ಲಿ ಈ ಸಮುದಾಯದಲ್ಲಿ ಪ್ರಚಲಿತದಲ್ಲಿರುವ ಆಚರಣೆಯ ಮುಖೇನ ನೆರವೇರುವ ನ್ಯಾಯ ಪದ್ಧತಿಯನ್ನು ಪರಿಚಯಿಸಿದ್ದಾರೆ. ಹೂವಿನಹಡಗಲಿ ತಾಲೂಕಿನಲ್ಲಿರುವ ಗುಗ್ಗುಳದ ಆಚರಣೆಯನ್ನು ಅನುಲಕ್ಷಿಸಿ ನೇತ್ರಾವತಿ ಪುಂಡಿಕಾಳು ಇವರು "ಗುಗ್ಗುಳದ ಆಚರಣೆ" (೨೦೦೩) ಎಂಬ ಸಂಪ್ರಬಂಧವನ್ನು ರಚಿಸಿದ್ದಾರೆ.

"ಬಳ್ಳಾರಿ ಜಿಲ್ಲೆಯ ಬೇಡ ಸಮುದಾಯದ ಕ್ರೀಡೆಗಳು" (೨೦೦೪) ಎಂಬ ಸಂಪ್ರಬಂಧದಲ್ಲಿ ಟಿ. ಗಂಗಾಧರ ಅವರು ಬುಡಕಟ್ಟಿನ ಕ್ರೀಡೆಗಳ ವರ್ಗೀಕರಣ, ಸ್ವರೂಪ ಮತ್ತು ಲಕ್ಷಣಗಳನ್ನು ತಿಳಿಸಿದ್ದಾರೆ.

ಸವಿತಾ ಅವರು "ಸಂಡೂರು ಪರಿಸರದ ಗ್ರಾಮ ದೈವಗಳು" (೨೦೦೫) ಸಂಪ್ರಬಂಧದಲ್ಲಿ ಸಂಡೂರಿನ ಭೌಗೋಳಿಕ ಹಿನ್ನೆಲೆಯೊಂದಿಗೆ ಅಲ್ಲಿಯ ಗ್ರಾಮದೈವದ ಜಾತ್ರೆ ಉತ್ಸವ, ಹಬ್ಬ, ಆಚರಣೆ, ನಂಬಿಕೆ, ಸಂಪ್ರದಾಯಗಳನ್ನು ಪರಿಚಯಿಸಿದ್ದಾರೆ. ಜಿ. ಹೇಮಲತ ಅವರು "ಸಂಡೂರಿನ ವೀರಶೈವ ಸಮುದಾಯದ ಆಚರಣೆಗಳು" (೨೦೦೬) ಎಂಬ ಸಂಪ್ರಬಂಧದಲ್ಲಿ ಈ ಸಮುದಾಯದಲ್ಲಿರುವ ಆಚರಣೆಗಳತ್ತ ಬೆಳಕು ಚೆಲ್ಲಿದ್ದಾರೆ. ಜೆ.ಎಂ. ಲೋಕೇಶ್ ಅವರು 'ಚನ್ನಹಗರಿ ನದಿ ಪರಿಸರದ ಚಾರಿತ್ರಿಕ ಅಧ್ಯಯನ" (೨೦೦೮) ಸಂಪ್ರಬಂಧದಲ್ಲಿ ಅಕ್ಕಮ್ಮನ ಆಚರಣೆಯನ್ನು ಪರಿಚಯಿಸಿದ್ದಾರೆ. "ಮೋಕಾ : ಒಂದು ಸಾಂಸ್ಕೃತಿಕ ಅಧ್ಯಯನ" (೨೦೦೯) ತಿಪ್ಪೇಸ್ವಾಮಿ ಬಿ. ಅವರ ಸಂಪ್ರಬಂಧವಾಗಿದ್ದು, ಮೋಕ ಗ್ರಾಮದಲ್ಲಿ ಪ್ರಚಲಿತದಲ್ಲಿರುವ ವೀರನಾಗಮ್ಮನ ಆಚರಣೆಯ ಸಾಂಸ್ಕೃತಿಕ ಅಧ್ಯಯನವನ್ನು ನಡೆಸಿದ್ದಾರೆ. ಪ್ರಸ್ತುತ ಆಚರಣೆಯ ಸ್ವರೂಪವನ್ನು ವಿಶ್ಲೇಷಿಸುವ ಪ್ರಯತ್ನವನ್ನು ಈ ಸಂಪ್ರಬಂಧದಲ್ಲಿ ಮಾಡಲಾಗಿದೆ. 'ಮೊರಿಗೆರೆ' (ಐತಿಹಾಸಿಕ ಹಾಗೂ ಸಾಂಸ್ಕೃತಿಕ ಅಧ್ಯಯನ) (೨೦೧೦) ಸಂಪ್ರಬಂಧದಲ್ಲಿ ಎಸ್.ಎಂ. ಸುಬ್ಬಯ್ಯ ಅವರು ಆ ಗ್ರಾಮದ ಜನರ ಬದುಕಿನ ಇತಿಹಾಸದ ಜೊತೆ ಸಂಸ್ಕೃತಿಯ ಅಧ್ಯಯನವನ್ನು ಮಾಡಿದ್ದಾರೆ. ಹೆಚ್. ನಾಗಭೂಷಣ ಅವರು "ಸಂಡೂರು ಕ್ಷೇತ್ರದ ಶ್ರೀ ಗಂಡಿ ಲಕ್ಷ್ಮೀನರಸಿಂಹಸ್ವಾಮಿ ಸಾಂಸ್ಕೃತಿಕ ಅಧ್ಯಯನ" (೨೦೦೯) ಸಂಪ್ರಬಂಧದಲ್ಲಿ ಬ್ಯಾಟಿಮರದ ಆಚರಣೆ, ಮುದ್ರೆ ಹಾಕುವ ಸಂಪ್ರದಾಯಗಳ ಕಿರುಪರಿಚಯ ಮಾಡಿದ್ದಾರೆ.

ಸಂಡೂರು ತಾಲ್ಲೂಕು ಪ್ರಥಮ ಸಾಹಿತ್ಯ ಸಮ್ಮೇಳನದ "ಲೋಹಾದ್ರಿಯ ಮಡಿಲು" (೨೦೦೪) ಸ್ಮರಣ ಸಂಚಿಕೆಯಲ್ಲಿ ಡಾ. ಮಲ್ಲಿಕಾ ಘಂಟಿಯವರು "ಸಂಡೂರು : ಮಹಿಳೆಯರ ಜನಪದ ಆಚರಣೆ ಮತ್ತು ಹಾಡುಗಳು" ಎಂಬ ಲೇಖನದ ಮೂಲಕ ಜನಪದರ ಸಂಸ್ಕೃತಿಯನ್ನು ಕಟ್ಟಿಕೊಟ್ಟಿದ್ದಾರೆ. ಬಳ್ಳಾರಿ ಜಿಲ್ಲಾ ೧೫ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸವಿನೆನಪಿನ ಕೃತಿ "ನಮ್ಮ ಜನಪದ" (೨೦೧೧). ಈ ಕೃತಿಯಲ್ಲಿರುವ ಎಲ್ಲಾ ಲೇಖನಗಳು ಬಳ್ಳಾರಿ ಜಿಲ್ಲೆಯ ಜನಪದರ ಬದುಕಿನ ಚಿತ್ರಣವನ್ನು ಪರಿಚಯಿಸುವಂತಿದ್ದು, "ಬಳ್ಳಾರಿ ಜಿಲ್ಲೆಯ ಜನಪದ ಆಚರಣೆಗಳ ಕಿರುನೋಟ" ಎಂಬ ಲೇಖನದ ಮೂಲಕ ಎ.ಎನ್. ಸಿದ್ದೇಶ್ವರಿಯವರು ಜಿಲ್ಲೆಯಲ್ಲಿ ಪ್ರಚಲಿತದಲ್ಲಿರುವ ವಿಶೇಷ ಆಚರಣೆಗಳನ್ನು ಪರಿಚಯಿಸಿದ್ದಾರೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ನಿಯತಕಾಲಿಕೆಗಳಲ್ಲಿ ಬಳ್ಳಾರಿ ಜಿಲ್ಲೆಯ ಆಚರಣೆಗಳಿಗೆ ಸಂಬಂಧಿಸಿದಂತೆ ಅನೇಕ ಸಂಶೋಧನಾತ್ಮಕ ಲೇಖನಗಳು ಪ್ರಕಟವಾಗಿವೆ. ರಾಜ್ಯದ ಪ್ರಮುಖ ವಾರಪತ್ರಿಕೆ, ದಿನಪತ್ರಿಕೆ, ಮಾಸಪತ್ರಿಕೆ, ವಿಶೇಷ ಸಂಚಿಕೆ ಮತ್ತು ಸ್ಮರಣ ಸಂಚಿಕೆಗಳಲ್ಲಿ ಜಿಲ್ಲೆಯ ಆಚರಣೆಗಳ ಪರಿಚಯಾತ್ಮಕ, ವಿಮರ್ಶಾತ್ಮಕ ಲೇಖನಗಳು ಪ್ರಕಟವಾಗಿವೆ.

ಹೀಗೆ ಬಳ್ಳಾರಿ ಜಿಲ್ಲೆಯ ಜನಪದ ಆಚರಣೆ-ಸಂಪ್ರದಾಯ, ಆಚಾರ-ವಿಚಾರಗಳಿಗೆ ಸಂಬಂಧಿಸಿದಂತೆ ಅಧ್ಯಯನಗಳು ನಡೆದಿವೆ, ನಡೆಯುತ್ತಿವೆ. ಇತ್ತೀಚಿನ ದಿನಮಾನಗಳಲ್ಲಿ ರಾಜ್ಯದ ಮತ್ತು ನೆರೆರಾಜ್ಯಗಳ ವಿಶ್ವವಿದ್ಯಾಲಯಗಳಲ್ಲಿ ಬಳ್ಳಾರಿ ಜಿಲ್ಲೆಯ ವಿದ್ಯಾರ್ಥಿಗಳು, ಸಂಶೋಧಕರು ಮತ್ತು ಅಧ್ಯಯನಾಸಕ್ತರು ಜಿಲ್ಲೆಗೆ ಸಂಬಂಧಿಸಿದ ಜನಪದ ಆಚರಣೆಗಳನ್ನು ಅಧ್ಯಯನಕ್ಕೆ ಒಳಪಡಿಸುತ್ತಿದ್ದಾರೆ. ಅಧ್ಯಯನಕಾರರು ಹಳ್ಳಿ ಹಳ್ಳಿಗಳಲ್ಲಿ ಕ್ಷೇತ್ರಕಾರ್ಯ ಮುಖೇನ ಅಧ್ಯಯನ ಮಾಡುತ್ತಿರುವುದನ್ನು ಕಾಣುತ್ತೇವೆ. ಆದರೂ ಪೂರ್ಣ ಪ್ರಮಾಣದಲ್ಲಿ ಜಿಲ್ಲೆಯ ಆಚರಣೆ-ಸಂಪ್ರದಾಯಗಳನ್ನು ಪರಿಚಯಿಸಲು, ವಿಶ್ಲೇಷಿಸಲು ಸಾಧ್ಯವಾಗಿಲ್ಲ. ಇದುವರೆಗೆ

ನಡೆದ ಅಧ್ಯಯನಗಳು ಇಂದಿನ-ಮುಂದಿನ ಅಧ್ಯಯನಕಾರರಿಗೆ ಮಾರ್ಗಸೂಚಿಯಾಗಿವೆ. ಇನ್ನೂ ಸಾಕಷ್ಟು ವಿಶೇಷ ಆಚರಣೆಗಳು ಜಿಲ್ಲೆಯಲ್ಲಿ ಪ್ರಚಲಿತದಲ್ಲಿವೆ. ಸಂಪೂರ್ಣ ಜಿಲ್ಲೆಯನ್ನು ಕೇಂದ್ರವಾಗಿಟ್ಟುಕೊಂಡು ಸಮಗ್ರ ಆಚರಣೆಗಳನ್ನು ಆಳವಾದ ಅಧ್ಯಯನಕ್ಕೆ ಒಳಪಡಿಸುವ ಅಗತ್ಯತೆ ಇದೆ. ಈ ಹಿನ್ನೆಲೆಯಲ್ಲಿ ಹೆಚ್ಚು ಸಮುದಾಯಗಳು ಪಾಲ್ಗೊಳ್ಳುವ, ವಿಶೇಷತೆ ವೈವಿಧ್ಯತೆಯಿಂದ ಕೂಡಿದ ಆಚರಣೆಗಳನ್ನು ಆಯ್ಕೆ ಮಾಡಿಕೊಂಡು ವಿಶ್ಲೇಷಣಾತ್ಮಕವಾಗಿ ಅಧ್ಯಯನಕ್ಕೊಳಪಡಿಸುವ ಪ್ರಯತ್ನವನ್ನು ಪ್ರಸ್ತುತ ಮಹಾಪ್ರಬಂಧದಲ್ಲಿ ಮಾಡಲಾಗಿದೆ.

❑❑❑

ಅಧ್ಯಾಯ : ಎರಡು

ಬಳ್ಳಾರಿ ಜಿಲ್ಲೆಯ ಜನಪದ ಆಚರಣೆಗಳು

ಅಧ್ಯಾಯ : ಎರಡು

ಬಳ್ಳಾರಿ ಜಿಲ್ಲೆಯ ಜನಪದ ಆಚರಣೆಗಳು

ಪೀಠಿಕೆ

ಬಳ್ಳಾರಿ ಜಿಲ್ಲೆಯು ಭೌಗೋಳಿಕ, ಐತಿಹಾಸಿಕ, ಪೌರಾಣಿಕ, ನೈಸರ್ಗಿಕ, ಆರ್ಥಿಕ, ಸಾಹಿತ್ಯಕವಾಗಿ ಕರ್ನಾಟಕ ಸಂಸ್ಕೃತಿಗೆ ತನ್ನದೇ ಆದ ವಿಶಿಷ್ಟ ಕೊಡುಗೆಯನ್ನು ನೀಡಿದೆ. ಪ್ರಸಿದ್ಧ ದೈವಗಳ ನೆಲೆಯಾಗಿದ್ದು, ಧಾರ್ಮಿಕ ಕ್ಷೇತ್ರದಲ್ಲೂ ವೈಶಿಷ್ಟ್ಯತೆಯಿದೆ. ಈ ಹಿನ್ನೆಲೆಯಲ್ಲಿ ಕನ್ನಡ ನಾಡಿನ ಸಾಂಸ್ಕೃತಿಕ ಪರಂಪರೆಯಲ್ಲಿ ಜಿಲ್ಲೆಗೆ ವಿಶೇಷ ಸ್ಥಾನವಿದೆ. ಆಚರಣೆ, ಐತಿಹ್ಯ, ನಂಬಿಕೆ, ನಿಷೇಧ, ಪುರಾಣ, ಪುಣ್ಯಕಥೆಗಳಿಂದ ಜನಪದ ಸಾಹಿತ್ಯ ಬೃಹದಾಕಾರವಾಗಿ ಬೆಳೆದು ಬಂದಿದೆ. ಹೀಗೆ ಮೌಖಿಕ ಪರಂಪರೆ, ಸಾಂಸ್ಕೃತಿಕ ದೈವ - ದೇವಾಲಯಗಳು, ಸಂತರ ಗುಡಿ ಗುಂಡಾರಗಳು, ಒಟ್ಟಾಗಿ ಜನಪದ ಸಂಸ್ಕೃತಿ ಸಮೃದ್ಧವಾಗಿದೆ. ಬಳ್ಳಾರಿಯ ಉಗ್ರದೇವತೆಯೆಂದು ಖ್ಯಾತಿ ಪಡೆದ ಬಳ್ಳಾರಿ ದುರುಗಮ್ಮ, ಗಾಳೆಮ್ಮ, ಬಲಕುಂದಿ ಬನ್ನಿಮಹಾಂಕಾಳಿ, ಮೈಲಾರ ಲಿಂಗೇಶ್ವರ, ಹಂಪಿ ವಿರುಪಾಕ್ಷೇಶ್ವರ, ಕೊಟ್ಟೂರೇಶ್ವರ, ಉಜ್ಜಯಿನಿಯ ಸಿದ್ಧೇಶ್ವರ, ಕುರುಗೋಡು ಬಸವೇಶ್ವರ, ಕುಮಾರಸ್ವಾಮಿ ಹೀಗೆ ನೂರಾರು ದೇವದೇವತೆಯರ ಜಾತ್ರೆ, ಉತ್ಸವ, ಆಚರಣೆಗಳು ಇಂದಿಗೂ ಜೀವಂತವಾಗಿವೆ. ಹಲವಾರು ರಾಜಮನೆತನಗಳ, ಪಾಳೆಯಗಾರರ ಕರ್ಮಭೂಮಿಯಾಗಿದ್ದು, ಗಂಡುಮೆಟ್ಟಿದ ನಾಡು ಎಂದು ಕರೆಯಲ್ಪಟ್ಟಿದೆ. ಕ್ರಿ.ಶ. ೧೪೧೧ರ ಪ್ರೌಢದೇವರಾಯನ ಕಾಲದ ಲಕ್ಷ್ಮೀಧರಮಾದಿತ್ಯನ ಶಾಸನದ ಪ್ರಕಾರ, ಈ ನಾಡಿನ ಜನರು ವೀರರು, ಧೀರರು, ಪರಾಕ್ರಮಶಾಲಿಗಳಾಗಿದ್ದು, ಎದುರಾಳಿಗಳಿಗೆ ಸಿಂಹಸ್ವಪ್ನವಾಗಿದ್ದರು. ಇದರೊಂದಿಗೆ ಸದ್ಗುಣಗಳು ಸರಳ ಸ್ವಭಾವದ ವ್ಯಕ್ತಿಗಳಾಗಿದ್ದರೆಂಬ ಪ್ರತೀತಿ ಇದೆ. ಇಂದಿಗೂ ಜಿಲ್ಲೆಯಲ್ಲಿ ನಡೆಯುವ ಕಡುಬಿನ ಕಾಳಗ, ಬಲಿ ಆಚರಣೆ, ಬೇಟೆ ಆಚರಣೆ ಹೀಗೆ ವೈವಿಧ್ಯಮಯವಾದ ಆಚರಣೆಗಳು ಈ ಮಾತಿಗೆ ಸಾಕ್ಷಿಯಾಗಿವೆ. ಜಿಲ್ಲೆಯಲ್ಲಿ ಹರಿಯುವ ತುಂಗಭದ್ರಾ ನದಿಯ ದಂಡೆಯಲ್ಲಿ ಹಲವಾರು ಜಲಸಂಬಂಧಿ ಆಚರಣೆಗಳು ನಡೆಯುತ್ತಿರುತ್ತವೆ. ಈ ನದಿಯನ್ನು ಪಂಪಾತೀರ್ಥವೆಂದು ಕರೆಯಲಾಗುತ್ತದೆ. ಪಂಪಾಂಬಿಕೆ-ಪಂಪಾಪತಿಯರ ವಿವಾಹ ಸ್ಥಳ ಹಂಪಿಯ ಹೇಮಕೂಟವೆಂದು ಪೌರಾಣಿಕ ಹಿನ್ನೆಲೆಯ ಇತಿಹಾಸ ಹೇಳುತ್ತದೆ. ಈ ಐತಿಹ್ಯದ ಹಿನ್ನೆಲೆಯಲ್ಲಿ ಹಂಪಿ ಜಾತ್ರೆ, ಫಲಪೂಜೆಯಂತಹ ಆಚರಣೆಗಳು ಇಂದಿಗೂ ಚಾಲ್ತಿಯಲ್ಲಿವೆ. ಕುರುಗೋಡು, ಕುರುವತ್ತಿ, ಅಮ್ಮನಕೆರೆ, ಸಿಡೇಗಲ್ಲು, ಗ್ರಾಮಗಳು ಬಸವಣ್ಣನ ಜಾತ್ರೆ, ಉತ್ಸವಗಳಿಗೆ ಪ್ರಸಿದ್ಧಿ ಪಡೆದಿವೆ. ಈ ಭಾಗಗಳಲ್ಲಿ ಕೃಷಿಕರಿಂದ ಹಲವಾರು ವೈವಿಧ್ಯಮಯವಾದ ಬಸವ ಸಂಬಂಧಿ ಆಚರಣೆಗಳು ಪ್ರಚಲಿತದಲ್ಲಿವೆ. ಸಂಡೂರಿನ ಲೋಹಾದ್ರಿಯ ಬೆಟ್ಟ ಸಾಲುಗಳು ನಿಸರ್ಗ ಸೌಂದರ್ಯ

ಹಾಗೂ ಖನಿಜ ಸಂಪತ್ತಿನಿಂದ ಪ್ರಸಿದ್ಧಿ ಹೊಂದಿವೆ. ಇವು ಜಿಲ್ಲೆಯನ್ನು ಪೂರ್ವ, ಪಶ್ಚಿಮವಾಗಿ ಎರಡು ಭಾಗಗಳನ್ನಾಗಿಸಿವೆ. ಈ ಬೆಟ್ಟ ಸಾಲುಗಳಲ್ಲಿ ದೈವಗಳ ಜಾತ್ರೆ, ಉತ್ಸವಗಳಲ್ಲಿ ಪ್ರಾಕೃತಿಕವಾಗಿ ಉದಯಿಸಿದ ಪರಿಸರ ಸಂಬಂಧಿ ಆಚರಣೆಗಳಿವೆ. ಅವು ಇಂದಿಗೂ ನಿರ್ಜನ ಪ್ರದೇಶಗಳಲ್ಲಿ ಸಾಂಪ್ರದಾಯಿಕವಾಗಿ ನಡೆದು ಬರುತ್ತಿವೆ.

ಈ ಎಲ್ಲಾ ವೈಶಿಷ್ಟ್ಯಗಳನ್ನು ಹೊಂದಿರುವ ಬಳ್ಳಾರಿ ಜಿಲ್ಲೆ ಸಹಜವಾಗಿಯೇ ಜನಪದ ಆಚರಣೆಗಳ ಆಗರವೂ ಹೌದು. ಭೌಗೋಳಿಕ, ನೈಸರ್ಗಿಕ ಸ್ವರೂಪದಿಂದ ಹಾಗೂ ಸಾಂಸ್ಕೃತಿಕ ಪರಂಪರೆಯಿಂದ ಇಂದಿಗೂ ನಿರಂತರತೆ ಹಾಗೂ ವೈವಿಧ್ಯತೆಯನ್ನು ಪಡೆದುಕೊಂಡಿವೆ.

೨.೧. ಜನಪದ ಆಚರಣೆಗಳ ಉಗಮ, ವಿಕಾಸ, ಸ್ವರೂಪ

ಉಗಮ

ಆದಿಮಾನವನ ವಾಸದ ನೆಲೆ ಸಂಪೂರ್ಣವಾಗಿ ಕಾಡಿನಲ್ಲೆ ಇತ್ತು. ತನ್ನ ಆಸೆ, ಆಕಾಂಕ್ಷೆಗಳನ್ನು ಏಕಾಂಗಿಯಾಗಿ ಈಡೇರಿಸಿಕೊಳ್ಳುತ್ತಿದ್ದ. ಆಗ ಪ್ರಕೃತಿಯಲ್ಲಿನ ವೈಪರೀತ್ಯಗಳು ಅಸಾಮಾನ್ಯವೆನಿಸುತ್ತಿದ್ದವು. ಗುಡುಗು, ಮಿಂಚು, ಮಳೆ, ಬೆಂಕಿ, ಕಾಡ್ಗಿಚ್ಚು, ಬಿರುಗಾಳಿ, ಚಂಡಮಾರುತ ಇತ್ಯಾದಿಗಳ ವಿರುದ್ಧ ಹೋರಾಡಬೇಕಿತ್ತು. ಅವುಗಳ ಹಿಂದೆ ಅಡಗಿದ ಕಾಣದ ಶಕ್ತಿಯನ್ನು ಸಂಪ್ರೀತಗೊಳಿಸಿದರೆ ಜೀವನ ನಿರಾಂತಕವಾಗುವುದೆಂದು ತಿಳಿದ. ನಿಸರ್ಗದ ಮಡಿಲಲ್ಲಿ ಮಾನವ ತನ್ನ ಅಸ್ತಿತ್ವಕ್ಕಾಗಿ ಹೋರಾಡುತ್ತ ಸೋತು ಅದಕ್ಕೆ ಶರಣಾಗತನಾದ. ಆಗ ಅದು ಅದ್ಭುತ ಶಕ್ತಿಯಾಗಿ, ಪ್ರಳಯಾಂತಕಾರಿಯಾಗಿ, ಶಾಂತಿಯ ನೆಲೆಯಾಗಿ ಗೋಚರಿಸಿತು. ಹೀಗೆ ಮನಸ್ಸಿಗೆ ಆಶ್ಚರ್ಯ, ಭಯಗಳನ್ನು ಕೆರಳಿಸಿದ ವಸ್ತುಗಳೆಲ್ಲಾ ಪೂಜನೀಯವಾದವು. ತನಗೆ ಸಹಾಯಕವಾದ ಪ್ರತಿಯೊಂದಕ್ಕೂ ವಿಧೇಯನಾಗಿ ಗೌರವಿಸಲು ಪ್ರಾರಂಭಿಸಿದ.

ಪ್ರಕೃತಿಯ ಪ್ರತಿಯೊಂದು ಘಟನೆಯ ಹಿಂದಿರುವ ಮಹತ್ತರವಾದ ಶಕ್ತಿಯ ಬೆಂಬಲ ಅವಶ್ಯವೆನಿಸಿತು. ಆ ಶಕ್ತಿಯನ್ನು ಒಲಿಸಿಕೊಳ್ಳುವ ಮೂಲಕ ತನ್ನ ಒಳಿತನ್ನು ಸಾಧಿಸಿಕೊಳ್ಳಬೇಕೆಂಬ ಉದ್ದೇಶ ಅವನದು. ಏಕೆಂದರೆ ನಿಸರ್ಗದ ಮಡಿಲಲ್ಲಿಯ ಜೀವನ ಸಹಜವಾಗಿ ಹಲವಾರು ಬಗೆಯ ಸಂಕಷ್ಟಗಳಿಗೆ ಗುರಿ ಮಾಡುತ್ತಿತ್ತು. ಆದರಿಂದ ಪಾರಾಗಲು ಅಗೋಚರ ಶಕ್ತಿಯ ಒಲಿಸಿಕೊಳ್ಳುವಿಕೆ ಅಗತ್ಯವೆಂಬುದು ಅವನ ತರ್ಕ. ತಾನು ದೈವ ಕೃಪೆಗೆ ಪಾತ್ರನಾಗಬೇಕೆಂಬ ಸ್ವಾರ್ಥಕ್ಕಿಂತ ತನಗೊದಗುವ ಕಷ್ಟಗಳಿಂದ ಪಾರಾಗಬೇಕೆಂಬ ಸಹಜ ಉದ್ದೇಶವದು. ಆಚರಣೆಗಳ ಉಗಮಕ್ಕೆ ಈ ರೀತಿಯ ನಿಸರ್ಗದೊಂದಿಗಿನ ಸಂಘರ್ಷಗಳು ಕಾರಣವಾದವು. ತಾನು ಜಯಿಸಬೇಕಾಗಿರುವ ನಿಸರ್ಗದ ಶಕ್ತಿಗಳನ್ನು ಮಣಿಸಲು ಹಾಗೂ ಒಲಿಸಿಕೊಳ್ಳುವ ಮಾನವನಲ್ಲಿಯ ಆರಂಭಿಕ ತರ್ಕ, ಯಾವ ಹಾದಿಗಳನ್ನು ಸೂಚಿಸಿತೋ ಅವೆಲ್ಲಾ ಆಚರಣೆಗಳಾಗಿ ರೂಪುಗೊಂಡಿವೆ. ದೈವಗಳ ಬಗೆಗಿನ ಪರಿಕಲ್ಪನೆ ಬೆಳೆಯಲು ಇಂಥ ಆಚರಣೆಗಳಲ್ಲಿಯ ನಂಬಿಕೆಗಳೇ ಕಾರಣ. ಮರ-ಗಿಡ, ನೆಲ-ಜಲ, ಸೂರ್ಯ-ಚಂದ್ರರು ವಿವಿಧ ಆಚರಣೆಗಳ ಮುಖೇನ ಆರಾಧನೆಗೆ ಭಾಜನವಾದವು. ಬೀಸುವ ಗಾಳಿ, ಉರಿಯುವ ಬೆಂಕಿ, ಸುರಿಯುವ ಮಳೆಯು ಅತಿಮಾನುಷ ಶಕ್ತಿಗಳಾಗಿ ಗೋಚರಿಸಿ ಪೂಜನೀಯ ಸ್ಥಾನ ಪಡೆದುಕೊಂಡವು.

ವಿಕಾಸ

ಇಂದು ಸಾಮಾನ್ಯ ಅರ್ಥದಲ್ಲಿ ನಿಸರ್ಗ ಎಂದು ಕರೆಯಲ್ಪಡುವುದು ಹಾಗೂ ಜನಪದರು ತನ್ನ ಹತೋಟಿಯಲ್ಲಿ ಇಟ್ಟುಕೊಳ್ಳಲು ಬಯಸುವುದು, ತನ್ನ ಗ್ರಹಿಕೆಗೆ ಸಿಗುವ ಸುತ್ತಮುತ್ತಲಿನ ಪರಿಸರವನ್ನು ಮಾತ್ರ. ಅದನ್ನೇ ಅಮೂರ್ತ ಕಲ್ಪನೆಯಲ್ಲಿ ನಿಸರ್ಗ ಎನ್ನಲಾಗುತ್ತದೆ. ನಿಸರ್ಗದಲ್ಲಿದ್ದುಕೊಂಡು ಆದಿಮಾನವ ಅನೇಕ ವಿಷಯಗಳನ್ನು ಕಲಿತ. ವಿಕಾಸದ ನೆಲೆಯನ್ನು ಕಂಡುಕೊಳ್ಳುತ್ತಾ, ತನ್ನ ಬೌದ್ಧಿಕ, ದೈಹಿಕ ವಿಚಾರಗಳನ್ನು ವೃದ್ಧಿಸಿಕೊಂಡ. ಮಾನವಾಧಿಪತ್ಯಕ್ಕೆ ಒಳಗಾದ ಕ್ಷೇತ್ರವನ್ನು ಮಾನವಾತೀತ ಶಕ್ತಿಗಳಿಂದ ಸಂರಕ್ಷಿಸಿಕೊಳ್ಳುವುದು ಆಚರಣೆಯ ಮೂಲ ಉದ್ದೇಶ. ಹೀಗೆ ಮಾಡದಿದ್ದರೆ, ಆತನ ಅಧಿಪತ್ಯವೇ ಕೊನೆಯಾಗಿ ಅವ್ಯವಸ್ಥೆ ಉಂಟಾಗುತ್ತಿತ್ತು. ಅವನ ಮೂಲಗಳಾದ ಕೃಷಿ ಭೂಮಿ, ಸಾಕು ಪ್ರಾಣಿ, ಕುಟುಂಬ ಅನಾಥವಾಗಿ ಬಿಡುತ್ತವೆಂಬ ಆತಂಕ. ಇಂದಿಗೂ ಕಾಡು-ನಾಡುಗಳ ನಡುವಣ ಸೀಮಾರೇಖೆ ಅಳಿಸಿ ಹೋಗದ ಎಚ್ಚರವೊಂದನ್ನು ಆಚರಣೆಗಳು ಸದಾ ಬೆಳೆಸಿಕೊಂಡು ಬಂದಿವೆ. ಯಥೇಚ್ಛವಾದ ಉತ್ಪನ್ನಶೀಲ ಪ್ರಕೃತಿಯು ಸಮೃದ್ಧ ಆಹಾರ ಮೂಲವಾಗಿ ಬಳಸಲ್ಪಟ್ಟಿದೆ. ಬೇಟೆಯಂತಹ ಆಚರಣೆಗಳಿಂದ ಕಾಡುಪ್ರಾಣಿಗಳ ದಮನ ಹಾಗೂ ಸಾಧ್ಯವಾಗದ ನಿಸರ್ಗದ ಜೀವಿಗಳನ್ನು ನಿಯಂತ್ರಿಸುವುದು ಮಾತ್ರವಲ್ಲ, ಒಲಿಸುವ ಹಂಬಲವನ್ನು ಆರಾಧನೆಗಳ ಮೂಲಕ ಮಾನವ ಪ್ರಕಟಿಸಿದ್ದಾನೆ.

ಮಾನವ ಆದಿಮ ಬದುಕಿನಿಂದ ಆಧುನಿಕ ಬದುಕಿನೆಡೆಗೆ ದಾಪುಗಾಲು ಹಾಕುತ್ತಿರುವ ಸಂದರ್ಭದಲ್ಲಿ ಹಲವಾರು ಸ್ಥಿತ್ಯಂತರಗಳಿಗೆ ಒಳಗಾಗಿದ್ದಾನೆ. ಭಯ ಮತ್ತು ಆತಂಕದ ಬದುಕಿನಿಂದ ಚೇತರಿಸಿಕೊಂಡು, ಕ್ರಮೇಣ ಪ್ರಕೃತಿಯನ್ನು ಅರಿತುಕೊಳ್ಳಲು ಪ್ರಾರಂಭಿಸಿದನು. ಆಗ ಅವನ ಬದುಕಿನಲ್ಲಿ ಮಹತ್ತರ ಬದಲಾವಣೆಗಳುಂಟಾದವು. ಪ್ರಕೃತಿದತ್ತವಾದ ಹಣ್ಣು, ಹಂಪಲುಗಳ ಸೇವನೆ, ಪಶು, ಪಕ್ಷಿಗಳ ಬೇಟೆ, ಬೇಟೆಗೆ ನಾಯಿಯ ಬಳಕೆ, ಬೆಂಕಿ ಅನ್ವೇಷಣೆ, ಆಹಾರ ಬೇಯಿಸಿ ತಿನ್ನುವುದರ ಕಲಿಕೆ, ಪಶುಪಾಲನೆ, ಕೃಷಿ ಪ್ರಾಣಿಗಳ ಬಳಕೆ. ಹೀಗೆ ಆದಿಮ ಮಾನವನಿಂದ ಆಧುನಿಕ ಮಾನವನವರೆಗೂ ಆರ್ಥಿಕ ಚಟುವಟಿಕೆಗಳು ಬೆಳೆದುಬಂದವು. ಈ ಹಿನ್ನೆಲೆಯಲ್ಲಿ ಹಲವಾರು ದೈವಗಳು, ಅವುಗಳ ಆರಾಧನಾಕ್ರಮಗಳು ಉಗಮಿಸಿದವು. ಕೃಷಿ ಅವಿಷ್ಕಾರದಿಂದ ಮಾನವ ನಾಗರಿಕನಾಗಲು ಸಾಧ್ಯವಾಯಿತು. ಬೇಟೆಯ ಹುಡುಕಾಟದಿಂದ ಅಲೆಮಾರಿಯಾಗಿದ್ದವನು ಒಂದೆಡೆ ನಿಲ್ಲಲು, ಆಲೋಚಿಸಲು, ತನ್ನದೇ ಆದ ಸಂಸ್ಕೃತಿಯನ್ನು ರೂಪಿಸಿಕೊಳ್ಳಲು ಪ್ರಾರಂಭಿಸಿದ. ಬಿಲ್ಲು ಬಾಣಗಳನ್ನು ಹಿಡಿದು ಕಾಡುಪ್ರಾಣಿಗಳ ಮೇಲೆ ಸವಾರಿ ಮಾಡುವ ದೈವಗಳು ಬೇಟೆಯ ಕಾಲದಲ್ಲಿ ಉಗಮಿಸಿದವು. ಕೃಷ್ಣನ ಬೆನ್ನ ಹಿಂದೆ ನಿಂತ ಹಸುವಿನ ಚಿತ್ರ ಪಶುಪಾಲನಾ ಹಂತವನ್ನು ಸಂಕೇತಿಸುತ್ತದೆ. ಇಲ್ಲಿ ದೈವಗಳು ಜಾನುವಾರುಗಳನ್ನು ಕಾಯುವ ವೃತ್ತಿಯನ್ನು ಆಯ್ಕೆ ಮಾಡಿಕೊಂಡಿರುವುದು ಪಶುಪಾಲಕ ಸಮಾಜದಲ್ಲಿಯ ದೈವೀಕಲ್ಪನೆಯನ್ನು ತಿಳಿಸುತ್ತದೆ. ಬೇಟೆಯ ಹಂತದಲ್ಲಾಗಲೀ, ಪಶುಪಾಲನಾ ಹಂತದಲ್ಲಾಗಲೀ, ದೈವ ಸಂಬಂಧಿಯಾದ ಆಚರಣೆಗಳು ಸೃಷ್ಟಿಯಾದದ್ದು, ಭಯಮಿಶ್ರಿತವಾದ ಗೌರವದಿಂದ. ಹೀಗೆ ತನಗೆ ಭಯ ಹುಟ್ಟಿಸುವ ಪ್ರಾಣಿಯನ್ನು, ಪ್ರಾಕೃತಿಕ ಸಂಗತಿಗಳನ್ನು ಮೂರ್ತರೂಪಕ್ಕಿಳಿಸಿ, ಅದನ್ನು ಓಲೈಸಿ, ಆರಾಧಿಸತೊಡಗಿದ. ಈ ರೀತಿಯ ನಿಸರ್ಗದ ರಹಸ್ಯವನ್ನು ಅರಿಯುವ ನೆಪದಲ್ಲಿ ಅಮೂರ್ತ ದೈವದ ಮೂರ್ತ ಪ್ರತಿಮೆಗಳು ಅವಿಷ್ಕಾರಗೊಂಡವು. ಕೃಷಿ

ಹಂತ ತಲುಪುವವರೆಗೂ ಬರೀ ಪುರುಷ ದೈವಗಳು ಪ್ರಾಬಲ್ಯತೆ ಪಡೆದಿದ್ದವು. ಸ್ತ್ರೀದೈವಗಳು ಗೌಣವಾಗಿದ್ದವು. ಕೃಷಿ ಸಂಸ್ಕೃತಿ ಪ್ರವರ್ಧಮಾನಕ್ಕೆ ಬಂದ ಕಾಲದಲ್ಲಿ ಸ್ತ್ರೀದೇವತೆಗಳು ಪ್ರವರ್ಧಮಾನಕ್ಕೆ ಬಂದವು. ಸ್ತ್ರೀಯ ಗರ್ಭಧಾರಣಾ ಶಕ್ತಿಗೂ, ಭೂಮಿಯ ಫಲವತ್ತತೆಗೂ ಸಂಬಂಧ ಏರ್ಪಟ್ಟು, ಕೃಷಿಯ ಎಲ್ಲಾ ಕೆಲಸಗಳು ಸ್ತ್ರೀಯಿಂದ ಆರಂಭಗೊಂಡಿವೆಯೆಂಬ ಶಂಕೆ ಉಂಟಾಯಿತು. ಆಕೆಯನ್ನು ಸಂಪ್ರೀತಗೊಳಿಸಲು ವಿವಿಧ ಬಗೆಯ ಸ್ತ್ರೀ ದೈವಸಂಬಂಧಿ ಆಚರಣೆಗಳು ಹುಟ್ಟಿಕೊಂಡವು. ಆಚರಣೆಗಳಲ್ಲಿ ಪುರುಷ ದೈವಗಳಿಂದ ಆಗದ ಕೆಲಸಗಳನ್ನು ಸ್ತ್ರೀ ದೈವಗಳು ಯಶಸ್ವಿಯಾಗಿ ನಿರ್ವಹಿಸತೊಡಗಿದವು. "ಮಾನವನ ಮಗುತನವೇ ಇಲ್ಲಿ ಸಾಂಸ್ಕೃತಿಕವಾಗಿ ಪುನಃ ಸೃಷ್ಟಿಯಾಗಿದೆ. ಇದರಿಂದ ಮಾನವನಿಗೆ ತಾಯಿಯ ಮಡಿಲು ಮತ್ತೆ ದೊರಕಿದಂತಾಗುತ್ತದೆ ಮತ್ತು ಇದರಿಂದ ಆತ ಭಯ ಮುಕ್ತವಾದ ಕ್ಷೇಮ ವಲಯದಲ್ಲಿ ಇದ್ದೇನೆಂದು ನಂಬುತ್ತಾನೆ".[೧] ಆದಿಮ ಸಂಸ್ಕೃತಿಯಿಂದಲೂ ಮಾತೃದೇವತೆಯ ಕಲ್ಪನೆ ಇದೆ. ಅದು ಹೆಚ್ಚು ಪ್ರವರ್ಧಮಾನಕ್ಕೆ ಬಂದದ್ದು ಮಾತೃಪ್ರಧಾನ ಕುಟುಂಬಗಳ ಅಸ್ತಿತ್ವದ ಕಾಲಘಟ್ಟದಲ್ಲಿ, ಮಾತೃತ್ವದ ಕಲ್ಪನೆಗಳು ವಿಸ್ತೃತವಾಗುತ್ತಾ ಹೋದಂತೆ ನಿಸರ್ಗದ ಪ್ರತಿಯೊಂದು ವಸ್ತುವೂ ದೈವತ್ವ ಪಡೆದುಕೊಂಡವು. ಹೀಗೆ ದೈವದ ಪರಿಧಿ ವಿಸ್ತೃತಗೊಳ್ಳುತ್ತಿದ್ದಂತೆ ಆಚರಣೆ, ನಂಬಿಕೆಗಳು ಹುಟ್ಟತೊಡಗಿದವು.

ಬೀಜವು ವೃಕ್ಷರೂಪ ಪಡೆಯುವಿಕೆಗೆ ಚಂದ್ರನ ವೃದ್ಧಿ ಕ್ಷಯಗಳೇ ಕಾರಣ. ಈ ರೀತಿಯ ಸೃಷ್ಟಿಕ್ರಿಯೆಯ ನಿರಂತರತೆಗೆ ಯಾವುದೋ ಅವ್ಯಕ್ತ ಶಕ್ತಿಯಿದೆ ಎಂದು ಪರಿಭಾವಿಸಿದ. ಮಾನವನಿಗೆ ನಿಸರ್ಗ ಮೊದಲು ಕಂಡದ್ದು ನಾಶ ಮಾಡುವ ಶಕ್ತಿಯಾಗಿ, ಅದನ್ನು ಒಲಿಸಿಕೊಳ್ಳುವ ಪ್ರಯತ್ನದಲ್ಲಿ ಅದಕ್ಕೊಂದು ರೂಪ ನೀಡಿದ. ಬೆಂಕಿ, ನೀರು, ಗಾಳಿ ಮೂಲದಲ್ಲಿ ನಾಶಪಡಿಸುವ ಗುಣ ಹೊಂದಿವೆ. ದೈವೀಭಯದ ಹಿನ್ನೆಲೆಯಲ್ಲಿ ಆಚರಣೆಗಳ ಮುಖೇನ ಸೂಕ್ತವಾಗಿ ಬಳಸಲ್ಪಟ್ಟಾಗ ಮಾತ್ರ ಅವುಗಳ ಸಂರಕ್ಷಣೆ ಸಾಧ್ಯವೆಂದರಿತ. ಆಕಾಶ ಗಂಡಾಗಿಯು, ಭೂಮಿ ಹೆಣ್ಣಾಗಿಯು ಕೃಷಿ ಸಮಾಜ ಪರಿಭಾವಿಸಿಕೊಂಡಿತ್ತು. ಗಂಡು ಹೆಣ್ಣಿನ ಪರಿಕಲ್ಪನೆಗಳು ಫಲವಂತಿಕೆಯ ಆಚರಣೆಗಳಲ್ಲಿ ಪ್ರಕಟಗೊಂಡಿವೆ. ಫಲವಂತಿಕೆಗೆ ರಕ್ತತರ್ಪಣ ನೀಡಬೇಕೆಂಬ ನಂಬಿಕೆ ಬೆಳೆಯತೊಡಗಿತು. ಭೂಮಿಯು ಮೂಲ ದ್ರವ್ಯದ ಸಂಕೇತ, ಆಕಾಶವು ಶುದ್ಧ ಚೈತನ್ಯದ ಸಂಕೇತ. ಇವೆರಡರ ಸಂಯೋಜನೆಯಲ್ಲಿ ಜೈವಿಕಲೋಕ ಮೈದಳೆದಿರುವುದನ್ನು ಆಚರಣೆಗಳು ದಾಖಲುಗೊಳಿಸುತ್ತವೆ. ಹೀಗೆ ಪ್ರಕೃತಿಯಲ್ಲಿನ ವೈಚಿತ್ರ್ಯಗಳನ್ನು ಬಿಡಿಸಲಾಗದ ನಿಗೂಢಗಳನ್ನು ಅರಿಯುವ ಪ್ರಯತ್ನದಲ್ಲಿ ತಾನು ಪಡೆದುಕೊಂಡ ಅನುಭವಗಳು ಆಚರಣೆಗಳಾಗಿ ಮುಂದಿನ ತಲೆಮಾರಿಗೆ ವರ್ಗಾವಣೆಗೊಂಡಿವೆ.

ಸ್ವರೂಪ

"ನಿರ್ದಿಷ್ಟ ಕಾಲದಲ್ಲಿ, ನಿರ್ದಿಷ್ಟ ಜಾಗದಲ್ಲಿ, ಪೂಜೆ ಪುನಸ್ಕಾರಗಳನ್ನು ಕ್ರಮಬದ್ಧವಾಗಿ ನಡೆಸುವ ವಿಧಿಯೇ ಆಚರಣೆ. ಅದು ಪರಂಪರೆಯ ಮೇಲಿನ ಶ್ರದ್ಧೆಯಿಂದ, ಧಾರ್ಮಿಕ ಪ್ರಜ್ಞೆಯಿಂದ, ದೈವ ಭಯದಿಂದ ನಡೆಯುತ್ತದೆ. ಅದು ಕೇವಲ ಪೂಜೆಯಾಗಿರದೆ ಅವರ ಬದುಕಿನ ಒಂದು ಅಂಗವಾಗಿ ಮುಂದುವರಿಯುತ್ತಿರುತ್ತದೆ".[೨] ಅವು ಜನಗಳಿಗೆ ಭರವಸೆ ಮೂಡಿಸುವಂಥ, ಆತ್ಮವಿಶ್ವಾಸ ಹೆಚ್ಚು ಮಾಡುವಂಥ ಅಂಶಗಳನ್ನು ಹೊಂದಿವೆ. ತಲೆ ತಲಾಂತರದಿಂದ ಭೂಮಿಯ ಜೊತೆಗಿನ ಸಂಪರ್ಕದಿಂದ ಉಂಟಾದ ಅನುಭವಗಳು ಆಚರಣೆಗಳ

ಮೂಲಕ ಮುಂದಿನ ತಲೆಮಾರಿಗೆ ವರ್ಗಾಯಿಸಲ್ಪಡುತ್ತವೆ. ಕೃಷಿಗೆ ಮುಖ್ಯವಾಗಿ ನೀರು, ಮಣ್ಣು, ಬೆಳಕು, ಗಾಳಿ, ಗೊಬ್ಬರಗಳು ಅಗತ್ಯ. ಆಚರಣೆಗಳಲ್ಲಿ ಅವುಗಳ ಬಗೆಗೆ ವಿಶೇಷ ಕಾಳಜಿ ವಹಿಸಿ, ಅವುಗಳನ್ನು ಸಂರಕ್ಷಿಸುವ ಕ್ರಿಯಾಶೀಲತೆ ಇದೆ. ಕೃಷಿಕರ ಜೀವನ ಮತ್ತು ಉತ್ಪಾದನೆಯಲ್ಲಿ ಬಳಸಲ್ಪಡುವ ವಸ್ತುಗಳು ಹಾಗೂ ಪ್ರಾಣಿಗಳನ್ನು ಸುಸ್ಥಿತಿಯಲ್ಲಿ ಇರಿಸುವ ಉದ್ದೇಶ ಆಚರಣೆಗಳಲ್ಲಿದೆ.

ಆಚರಣೆಗಳಲ್ಲಿ ದೈವೀಕಲ್ಪನೆ

ಮಾನವ ತನ್ನ ರಕ್ಷಣೆಗಾಗಿ, ತನ್ನವರ ರಕ್ಷಣೆಗಾಗಿ ತಾನು ನೆಲೆಸಿದ ಪ್ರದೇಶದಲ್ಲಿ ಇರುವ ಪ್ರಕೃತಿ ದೇವತೆಗಳಿಗೆ ಮಾರುಹೋಗಿ, ತನ್ನ ಕಲ್ಪನೆಯ ಆಳದಲ್ಲಿ ಅಡಗಿದ ದೈವಗಳಿಗೆ ಭಕ್ತಿ, ಗೌರವ, ಶ್ರದ್ಧೆಯಿಂದ ಆರಾಧಿಸತೊಡಗಿದ. ಗ್ರಾಮದಲ್ಲಿ ಜನ, ಜಾನುವಾರುಗಳಿಗೆ ಏನಾದರೂ ಕಾಯಿಲೆ ಸಂಭವಿಸಿದರೆ, ಸಾವು, ನೋವು ಉಂಟಾದರೆ, ತಾನು ಆಚರಿಸಲ್ಪಡುವ ದೈವದ ಕಾಟವೆಂದು ನಂಬಿ, ಅವುಗಳ ಮೊರೆಹೋಗುತ್ತಾನೆ. ಮಾನವನು ಸಮಾಜಜೀವಿ. ತನ್ನ ಬೌದ್ಧಿಕ ಶ್ರಮದಿಂದ ಇತರ ಪ್ರಾಣಿಗಳಿಗಿಂತಲೂ ಭಿನ್ನವಾಗಿ ಉನ್ನತಮಟ್ಟ ದಲ್ಲಿರುವವನು. ಅವನ ಪ್ರಗತಿಯಲ್ಲಿ ಮಾತೆಗೆ ಪ್ರಥಮ ಸ್ಥಾನ ನೀಡಲಾಗಿದೆ. ಆಚರಣೆಗಳು ಕಾಲಕ್ರಮೇಣ ಬದಲಾವಣೆಗೆ ಒಳಪಟ್ಟವು. ಕಾಡಿನಲ್ಲಿ ಪೂಜಿಸಲ್ಪಡುತ್ತಿದ್ದ ಹಲವು ದೈವಗಳು ತಾನು ವಾಸಿಸುವ ಹಟ್ಟಿಗಳಲ್ಲಿ ಪ್ರಮುಖ ದೈವಗಳಾಗಿ ಪ್ರಾಮುಖ್ಯತೆ ಪಡೆದುಕೊಂಡವು. ಆಗ ದೈವಗಳ ಆಚರಣೆಗಳಲ್ಲಿ ಸಾಮೂಹಿಕತೆ ಕಂಡುಬಂದಿತು. ಇಂದಿಗೂ ದೂರದಲ್ಲಿರುವ ಕಾಡಿನ ದೈವಗಳನ್ನು ವರ್ಷಕ್ಕೊಮ್ಮೆ ನಿಗದಿತ ಸಮಯದಲ್ಲಿ ಕುಟುಂಬದೊಂದಿಗೆ ಕಾಡಲ್ಲಿ ಆಚರಣೆ ಮಾಡುತ್ತಿರುವುದು ಕಂಡುಬಂದಿದೆ. ತಮ್ಮ ಜಾನುವಾರುಗಳಿಗೂ ಕೇಡಾಗದಿರಲೆಂಬ ಆಶಯದಿಂದ ಉಗ್ರದೇವತೆಗಳು ಹಾಗೂ ಅವುಗಳಿಗೆ ಬಲಿ ನೀಡುವ ಆಚರಣೆಗಳು ಪ್ರಾರಂಭಗೊಂಡವು. ಮಾನವ ನಿಸರ್ಗದಲ್ಲಿ ಎಲ್ಲಕ್ಕಿಂತ ಮಿಗಿಲಾದ ಅದ್ಭುತ ಶಕ್ತಿ ದೇವರೆಂದು ತಿಳಿದ. ಈ ನಂಬಿಕೆ ಬಲವಾಗಿ ಅದನ್ನು ಪ್ರತಿಮೆಗಳ ಮೂಲಕ ಸಾಕ್ಷಾತ್ಕರಿಸಿಕೊಂಡಿದ್ದಾನೆ.

ಸಾಮೂಹಿಕತ್ವ

ಒಬ್ಬ ವ್ಯಕ್ತಿಯ ಶಕ್ತಿ ಬಹಳ ಗೌಣ. ಏಕಾಂಗಿಯಾಗಿ ಏನನ್ನೂ ಮಾಡಲು ಸಾಧ್ಯವಿಲ್ಲ. ಅದಕ್ಕೆ ಮಿತಿಗಳಿರುತ್ತವೆ. ಸಾಂಘಿಕವಾಗಿ ಮಾತ್ರ ಶಕ್ತಿವಂತನಾಗಿರುತ್ತಾನೆ. ಸಮೂಹದಲ್ಲಿ ತಾನು ಒಬ್ಬನಾಗಿರಲು ಮುಂದಾಗುತ್ತಾನೆ. "ಒಬ್ಬನ ಇಷ್ಟಾರ್ಥವು ಹಲವಾರು ಜನರಲ್ಲಿ ಹರಡಿ, ಅದು ಸಾಮೂಹಿಕ ಬೇಡಿಕೆಯಾಗಿ ಒಂದು ಅನುಷ್ಠಾನ ರೂಪದಲ್ಲಿ ಪ್ರಕಟವಾದರೆ ಅದು ಆಚರಣೆ ಎನಿಸಿಕೊಳ್ಳುತ್ತದೆ".[೩] ಆಚರಣೆಗಳ ವೈಶಿಷ್ಟ್ಯತೆಯೆಂದರೆ ಸಾಮೂಹಿಕ ಹಿತಾಸಕ್ತಿ ಕಾಪಾಡುವಂಥದ್ದು. 'ನಮ್ಮೂರಿಗೆ ಮಳೆ ಬರಲಿ' ಎಂಬ ಆಶಯ ಇರುತ್ತದೆಯೇ ಹೊರತು 'ನನ್ನ ಹೊಲಕ್ಕೆ ಮಳೆ ಸುರಿಯಲಿ' ಎಂದು ಯಾರೂ ಕೇಳುವುದಿಲ್ಲ. ಜನಪದರ ಜೀವನ ಸಾಮೂಹಿಕವಾದದ್ದು, ಅಖಂಡವಾದದ್ದು. ಅದನ್ನು ಬಿಡಿ ಬಿಡಿಯಾಗಿ ನೋಡುವ ಆಲೋಚನಾಕ್ರಮ ಅವರದಲ್ಲ. ಸಾಮೂಹಿಕವಾದ ಆಲೋಚನೆ, ಆರಾಧನೆ, ನೃತ್ಯ, ಆಚರಣೆಗಳು ಮನಸ್ಸಿನಲ್ಲಿ ಸಾಹಸ ಛಲ, ಆಸೆ, ನಂಬಿಕೆಗಳನ್ನು ಜೀವಂತವಾಗಿ ಇರಿಸಿರುವಂಥವುಗಳು. ಈ ಅನುಭವಗಳು ವ್ಯಕ್ತಿಗತವಾಗಿ ಮತ್ತು ಸಾಮೂಹಿಕವಾಗಿ ಒಂದೇ. ಆದುದರಿಂದ ಇಡೀ ಜನಪದ ವೃಂದ ತನ್ನ ರಕ್ಷಣೆಗಾಗಿ, ಒಳಿತಿಗಾಗಿ, ಅಗೋಚರ

ಶಕ್ತಿಯನ್ನು ಗಾಢವಾಗಿ ನಂಬಿದೆ. ಅವುಗಳನ್ನು ದೈವೀಕರಣಗೊಳಿಸಿ ಪೂಜಿಸುವ, ಆರಾಧಿಸುವ ಪರಂಪರೆಗಳು ಆಚರಣೆಗಳಾಗಿ ಜನಪದ ಸಮುದಾಯದಲ್ಲಿ ವಿಶಿಷ್ಟ ಸ್ಥಾನ ಪಡೆದುಕೊಂಡಿವೆ.

ಆಚರಣೆಗಳಲ್ಲಿ ಪ್ರಕೃತಿ ಆರಾಧನೆ

ಪ್ರಕೃತಿ ಮತ್ತು ಮಾನವನ ಮುಖಾಮುಖಿಯಿಂದ ಹುಟ್ಟಿಕೊಂಡ ಅಗೋಚರ ಶಕ್ತಿಯ ಕಲ್ಪನೆಯು ದೈವತ್ವದ ಮೂಲಕ್ಕೆ ಕಾರಣ. ಮಾನವ ತನ್ನ ರಕ್ಷಣೆ, ಆಶ್ರಯ, ಅವಲಂಬನೆ ಹಾಗೂ ಅಸ್ತಿತ್ವಕ್ಕಾಗಿ ಸಸ್ಯವನ್ನು ದೇವತೆಯಾಗಿ ಪಡೆದು ಅಭಿವ್ಯಕ್ತಿಸಿದ್ದಾನೆ. ಹಲವಾರು ಬುಡಕಟ್ಟುಗಳು ಮರ, ಗಿಡ, ಸಸ್ಯ, ಪ್ರಾಣಿಗಳ ಹೆಸರಲ್ಲೇ ತಮ್ಮ ಕುಲ ಚಿಹ್ನೆಗಳನ್ನು ಹಿಂದಿನಿಂದಲೂ ಗುರುತಿಸಿಕೊಂಡು ಬಂದಿವೆ. ಆಯಾ ಕುಲದವರು ಅವನ್ನು ನಾಶ ಮಾಡುವಂತಿಲ್ಲ. ಹೀಗೆ ಪ್ರಕೃತಿಯಲ್ಲಿಯ ಹಲವಾರು ಬಗೆಯ ಸಸ್ಯಗಳು, ಪ್ರಾಣಿಗಳು ಪೂಜನೀಯ ಸ್ಥಾನ ಪಡೆದು ಇಂದಿಗೂ ಸುರಕ್ಷಿತವಾಗಿ ಆಚರಿಸಲ್ಪಡುತ್ತವೆ. ಆಚರಣೆಗಳ ನೆಪದಲ್ಲಿ ಉಪಕಾರಿ ಪ್ರಾಣಿ, ಪಕ್ಷಿ, ಸಸ್ಯ ಹಾಗೂ ಪ್ರಾಕೃತಿಕ ವಸ್ತುಗಳು ಪೂಜನೀಯವಾಗಿ ಕಂಡು ಪ್ರಕೃತಿ ಸಮತೋಲನ ಕಾಪಾಡಿಕೊಂಡಿವೆ.

ಅಸಾಮಾನ್ಯ (ಅತಿಮಾನುಷ) ಆಚರಣೆಗಳು

ವಾಸ್ತವದಲ್ಲಿ ಮಾನವ ಮತ್ತು ಪ್ರಕೃತಿ, ತನ್ನ ಸಾಮರ್ಥ್ಯವನ್ನು ಅರಿತುಕೊಂಡಿಲ್ಲ. ಎಲ್ಲವೂ ತಾನು ನಂಬಿದ ದೈವದಿಂದ ಮಾತ್ರ ಸಾಧ್ಯ ಎಂಬ ನಂಬಿಕೆಯಿದೆ. ದೈವದ ಹೆಸರಲ್ಲಿ ನಡೆಯುವ ಅಸಾಮಾನ್ಯವಾದ ಆಚರಣೆಗಳನ್ನು ಪವಾಡಗಳೆಂದು ಕರೆಯುವುದುಂಟು. ಇವು ಆಚರಣೆಯ ನೆಪದಲ್ಲಿ ನಡೆಯುವ ದೇಹದಂಡನೆಯ ಕ್ರಿಯಾವಿಧಿಗಳು. ತಾವು ನಂಬಿದ ದೈವ ಅಥವಾ ಸಾಂಸ್ಕೃತಿಕ ವೀರರ ಮೇಲಿನ ಅಪಾರ ವ್ಯಾಮೋಹ ಇಲ್ಲವೆ ಭಯ, ಭಕ್ತಿಯ ಪ್ರತೀಕವಾದ ಆಚರಣೆಗಳಾಗಿವೆ. ಇವು ಹಲವಾರು ಕಟ್ಟುಪಾಡುಗಳನ್ನು ಒಳಗೊಂಡಿದ್ದು, ಸಾಮಾನ್ಯ ದಿನಗಳಲ್ಲಿ ಮಾಡಲು ಸಾಧ್ಯವಾಗದ ಕೆಲಸ ಕಾರ್ಯಗಳು ಆ ಸಮಯದಲ್ಲಿ ನೆರವೇರುವುದುಂಟು. ಇವುಗಳಿಗೆ ದೈವೀ ಪ್ರೇರಣೆಯೇ ಕಾರಣವೆಂಬ ನಂಬಿಕೆಯಿದೆ. ಪ್ರಕೃತಿಯ ಜೊತೆಗಿನ ಹೋರಾಟದ ಭಾವನೆಯನ್ನು ಉದ್ದೀಪಿಸಲು, ಅದನ್ನು ಕೈವಶ ಮಾಡಿಕೊಳ್ಳಲು ಅಗತ್ಯವಾದ ಆತ್ಮವಿಶ್ವಾಸ ತುಂಬುವ ಶಕ್ತಿ ಹೊಂದಿವೆ. ಮಾನಸಿಕ ನೆಮ್ಮದಿ, ಉದ್ದೇಶಿತ ಫಲ ನೀಡಿಕೆಯ ನಿರ್ದಿಷ್ಟ ಕ್ರಮದಲ್ಲಿ ನಡೆಯುವ ಧಾರ್ಮಿಕ ಕ್ರಿಯೆಗಳಿವು. "ಇದು ಒಂದು ಬೇರೆಯೇ ಲೋಕ ಅಥವಾ ಪರಲೋಕವನ್ನು ಸೃಷ್ಟಿಸುವ ಪ್ರಯತ್ನವಾಗಿರದೆ, ನಿಸರ್ಗದ ಅಗೋಚರ ಶಕ್ತಿಗಳನ್ನು ಒಳಗೊಂಡು, ಅವುಗಳನ್ನು ನಿಯಂತ್ರಿಸುವ ಪ್ರಯತ್ನವಾಗಿದೆ".[೪] ಮಾನವನ ಅಸಹಾಯಕತೆ ಮತ್ತು ಭಯ ಕಾಣದ ಶಕ್ತಿಗೆ ಶರಣಾಗತನನ್ನಾಗಿಸಿದೆ; ತನ್ನಿಂದ ಸಾಧ್ಯವಾದ ರೀತಿಯಲ್ಲಿ ಆ ಶಕ್ತಿಯನ್ನು ಆರಾಧಿಸುತ್ತಾ ಬಂದಿದ್ದಾನೆ. ಹೀಗೆ ಮಾಡುವುದರಿಂದ ಆತನ ಮನಸ್ಸಿಗೆ ನೆಮ್ಮದಿ ದೊರಕಿ ತನ್ನ ಅನಿಸಿಕೆಗಳು ಈಡೇರುತ್ತವೆಂಬ ನಂಬಿಕೆಯಿದೆ. ಹಲವಾರು ಸಂದರ್ಭಗಳಲ್ಲಿ ಈ ನಂಬಿಕೆ, ನಿರೀಕ್ಷೆಗಳು ನಿಜವಾಗಿರುವ ಸಾಧ್ಯತೆಗಳುಂಟು. ಆಗ ಆ ಶಕ್ತಿಯ ಮೇಲೆ ಅಪಾರ ನಂಬಿಕೆ ಮೂಡುತ್ತದೆ. ಮೊದಲಿಗಿಂತಲೂ ಆರಾಧನಾಕ್ರಮ ತೀವ್ರಗೊಳ್ಳುತ್ತದೆ. ಆ ಶಕ್ತಿಗೋಸ್ಕರ ತನ್ನಿಂದ ಸಾಧ್ಯವಾದುದೆಲ್ಲವನ್ನು ಅರ್ಪಿಸಲು ಬಯಸುತ್ತಾನೆ. ತನ್ನನ್ನು ರಕ್ಷಿಸುವ ದೈವವನ್ನು ಸಂಪ್ರೀತಗೊಳಿಸಲು, ತನ್ನಿಷ್ಟದ ಆಹಾರ ಪದಾರ್ಥಗಳನ್ನು

ಸಲ್ಲಿಸುತ್ತಾ ಬಂದಿದ್ದಾನೆ. ಬೇಡಿಕೆ ಈಡೇರದಿದ್ದಾಗ ದುಃಖಪಟ್ಟಿರುವುದು, ಬೇಡಿಕೆ ಈಡೇರಿದಾಗ ಸಂತೋಷಪಟ್ಟಿರುವುದು; ಎರಡೂ ಆಚರಣೆಗಳ ಮೂಲಕ ಪ್ರಕಟಗೊಂಡಿವೆ. ಹೀಗೆ ನಿಸರ್ಗ ಶಕ್ತಿಯಿಂದ ಪಾರಾಗಲು ಹಾಗೂ ಶಮನಗೊಳಿಸಲು ಆಚರಣೆಗಳು ಉಗಮಗೊಂಡಿರಲು ಸಾಧ್ಯವಿದೆ.

ಜನಪದರ ಆಲೋಚನೆಯಿಂದ ಹೊರಹೊಮ್ಮಿದ ಆಚರಣಾ ವ್ಯವಸ್ಥೆಗಳು ಮಾನವ ಮತ್ತು ಪ್ರಕೃತಿಯ ಸಂಬಂಧಗಳನ್ನು ನಿಯಂತ್ರಿಸಲ್ಪಟ್ಟಿವೆ. ಅಲ್ಲದೆ ನಿಸರ್ಗದ ಮೇಲಿನ ಸಂಪೂರ್ಣ ನಿಯಂತ್ರಣದ ಭ್ರಮೆಯನ್ನು ಮಾನವನಲ್ಲಿ ಉಂಟುಮಾಡುತ್ತಿವೆ. ಈ ಹಿನ್ನೆಲೆಯಲ್ಲಿ ವಿಭಿನ್ನ ರೀತಿಯ ಕ್ರಿಯಾಚರಣೆಗಳು ರೂಪಗೊಂಡರೂ, ಹಲವಾರು ಸಂಸ್ಕಾರಗಳನ್ನು ಹೊಂದಿ ಉಳಿದು, ಬೆಳೆದು ಆಚರಣೆಗಳಾಗಿವೆ. ಅವು ಸಾಮಾಜಿಕ, ಧಾರ್ಮಿಕ, ಪೌರಾಣಿಕ, ಚಾರಿತ್ರಿಕ, ವೈಚಾರಿಕ ಘಟನೆಗಳಿಂದ ಪ್ರಭಾವಿತವಾಗಿ, ಜನಪದರ ಜೀವನದಲ್ಲಿ ನೆಲೆನಿಂತಿವೆ. ಸಾಂಸ್ಕೃತಿಕ ಸಂಘಟನೆ ಹೊಂದಲು, ವಿವೇಕ ಮತ್ತು ನೈತಿಕತೆಯಿಂದ ಬದುಕು ನಡೆಸಲು, ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಲು, ಪ್ರತಿನಿತ್ಯದ ಕೆಲಸ ಕಾರ್ಯಗಳಲ್ಲಿ ಹುರುಪು, ಚೈತನ್ಯ ತುಂಬಲು ಆಚರಣೆಗಳು ಅವಶ್ಯಕ. ತಾನು ನಂಬಿದ ಅಗೋಚರ ಶಕ್ತಿಯ ಪ್ರೀತಿಗೆ ಪಾತ್ರರಾಗಲು ಆಚರಣೆಗಳು ನಡೆಯುತ್ತಿರುತ್ತವೆ. ಈ ಹಿನ್ನೆಲೆಯಲ್ಲಿ ಆಚರಣೆಗಳು ನಡೆದು ಬಂದರೂ ಅವುಗಳಲ್ಲಿ ವೈಜ್ಞಾನಿಕ ಅಂಶಗಳು, ತತ್ವಸಿದ್ಧಾಂತಗಳು ಗರ್ಭೀಕರಿಸಿ ಕೊಂಡಿರುವುದನ್ನು ತಳ್ಳಿಹಾಕುವಂತಿಲ್ಲ. ಆಚರಣೆಗಳು ಸಮೃದ್ಧ ಬಾಳಿನ ಸೂತ್ರಗಳಿದ್ದಂತೆ, ಅವುಗಳಲ್ಲಿ ಆರೋಗ್ಯ, ಸ್ವಚ್ಛತೆ, ಸಹಬಾಳ್ವೆ, ಹಂಚಿ ಉಣ್ಣುವ ನೀತಿಗಳಿವೆ. ಸಂಬಂಧಗಳನ್ನು ಬೆಸೆಯುವ ಬೆಸುಗೆಯಿದೆ. ಚರ್ಚಿಸುವ ಗುಣ, ಸಹನೆ, ತರ್ಕ, ವಿನೋದ, ಜಾಣ್ಮೆ, ರಕ್ಷಣಾತ್ಮಕ ತತ್ವಗಳಿವೆ. ಜನರ ಬದುಕಿನ ಭಾಗವಾದ ಆಚರಣೆಗಳು ಶಾಸನದಂತೆ ಎಚ್ಚರಿಸಿ, ಮಾರ್ಗದರ್ಶನ ನೀಡುತ್ತಿರುತ್ತವೆ. ಕಾಲದ ಗಡಣದಲ್ಲಿ ನುಸುಳಿ, ಅದರ ಓರೆ-ಕೋರೆಗಳನ್ನು ಕಳಚಿಕೊಂಡು ಸ್ಥಿತ್ಯಂತರಕ್ಕೆ ಒಳಪಡುತ್ತಿರುತ್ತವೆ. ಸದಾ ಜೀವಪರವಾದ ಆಶಯಗಳಿಂದ ತುಂಬಿದ ಆಚರಣೆಗಳು ಉಳಿದು ತಲೆಮಾರಿನಿಂದ ತಲೆಮಾರಿಗೆ ವರ್ಗಾವಣೆಗೊಳ್ಳುತ್ತಿವೆ. ಕಲಿಯುಗ, ತಂತ್ರಜ್ಞಾನ ಯುಗಗಳಲ್ಲೂ ಆಚರಣಾತ್ಮಕವಾದ ಮಾನವನ ಚಿಂತನೆಗಳು ಬದಲಾಗಲಾರವು.

೨.೨. ಜನಪದ ಆಚರಣೆಗಳಲ್ಲಿ ನಂಬಿಕೆ ಮತ್ತು ಕಾಲದೊಂದಿಗಿನ ಸಂಬಂಧ

ಜನಪದ ಆಚರಣೆ ನಂಬಿಕೆಗಳ ಸಂಬಂಧ

ನಂಬಿಕೆಗಳು ವಿಶ್ವವ್ಯಾಪಿಯಾಗಿರುವುದು ಸರ್ವವಿಧಿತ. ಮಾನವನ ಜೀವನದಲ್ಲಿ ಅವು ಪ್ರಮುಖ ಪಾತ್ರ ವಹಿಸುವುದಲ್ಲದೆ, ಜನಪದರ ಬದುಕನ್ನು ನಿರ್ಧರಿಸುವ ಸಂವಿಧಾನಗಳಾಗಿವೆ. ಜನಪದರು ಆಚರಿಸುವ ಎಲ್ಲ ಆಚರಣೆಗಳಿಗೆ ನಂಬಿಕೆಯೇ ಜೀವಾಳ. ನಂಬಿಕೆಗಳನ್ನು ಅನಕ್ಷರಸ್ಥ ಸಮಾಜದ ಮೌಢ್ಯತೆಯೆಂದು ಅಲ್ಲಗಳೆಯುವಂತಿಲ್ಲ. ಮಾನವನ ಆಲೋಚನಾ ಶಕ್ತಿ ಜೊತೆ ನಂಬಿಕೆಗಳು ವಿಕಾಸಗೊಂಡು, ಜೀವನವನ್ನು ನಿಯಂತ್ರಿಸುವ ಪ್ರಬಲ ಶಕ್ತಿಗಳಾಗಿವೆ. ಜನಪದರ ನಿತ್ಯ ಬದುಕಿಗೂ ಮತ್ತು ನಂಬಿಕೆಗಳಿಗೂ ಗಾಢವಾದ ಸಂಬಂಧವಿದೆ. 'ನಂಬಿಕೆ ಬೆಟ್ಟವನ್ನಾದರೂ ಕದಲಿಸಬಲ್ಲದು' ಎನ್ನುವ ಮಾತು ನಂಬಿಕೆಯ ಪ್ರಾಬಲ್ಯವನ್ನು ತಿಳಿಸುತ್ತದೆ.

ಅನಾದಿಕಾಲದಿಂದ ಅನುಸರಿಸಿಕೊಂಡು ಬಂದ ಆಚರಣೆಗಳಿಗೆ ಸಂಸ್ಕೃತಿಯನ್ನು ರೂಪಿಸಲು, ಸಮಾಜವನ್ನು ಸುಸ್ಥಿತಿಯಲ್ಲಿ ಇಡಲು ನಂಬಿಕೆಗಳು ಸಹಾಯಕವಾಗಿವೆ. "ನಂಬಿಕೆಗಳ ಹುಟ್ಟಿಗೆ ಆದಿಮಾನವ ನೈಸರ್ಗಿಕ

ಚೇಷ್ಟೆಗಳ ಬಗೆಗೆ ತಾಳಿದ ಮನೋಭಾವವೇ ಕಾರಣವಾಗಿರಬೇಕೆಂದು ದೇಜಗೌ ಅಭಿಪ್ರಾಯಪಟ್ಟಿದ್ದಾರೆ"(೨೦೦೧, ಪು. ೩೨೪).

ಮನುಷ್ಯನ ಹುಟ್ಟು ಸಾವುಗಳಿಗೂ ಸಹ ಯಾವುದೋ ನಿಗೂಢ ಶಕ್ತಿಯ ಕೈವಾಡವಿರಬೇಕು ಎಂದು ಯೋಚಿಸಿದ. ತನ್ನ ಅನುಭವಗಳ ಗ್ರಹಿಕೆಗಳ ಹಿನ್ನೆಲೆಯಲ್ಲಿ ತೋರಿದ ಭಯ ಮತ್ತು ಭಾವನಾತ್ಮಕ ಪ್ರಗತಿಗಳಿಂದ ನಂಬಿಕೆಗಳು ಜನ್ಮ ತಾಳಿವೆ.

ಒಂದು ನಂಬಿಕೆಯು ಸಮಾಜದಲ್ಲಿ ನೆಲೆಯೂರಿ ಕಾರ್ಯರೂಪಕ್ಕೆ ಬಂದಿತೆಂದರೆ ಅರ್ಥ ಕಳೆದುಕೊಳ್ಳುವವರೆಗೂ ಮುಂದುವರಿಯುತ್ತಿರುತ್ತವೆ. ನಂಬಿಕೆಗಳು ನಿಂತ ನೀರಲ್ಲ, ಹರಿಯುವ ನದಿಯಂತೆ. ಅವು ಕಾಲಕ್ಕೆ ತಕ್ಕಂತೆ ಬದಲಾವಣೆಗೊಳ್ಳುತ್ತಿರುತ್ತವೆ. ಅನೇಕ ವೇಳೆ ನಂಬಿಕೆಗಳನ್ನು ಮೀರಿದರೆ ಕೆಡುಕಾಗುತ್ತದೆಂಬ ಭಯವೇ ಅಚಲವಾದ ನಂಬಿಕೆಗಳಿಗೆ ಕಾರಣವಾಗಿರಲು ಸಾಧ್ಯವಿದೆ. ಮಾನವನ ಕಲ್ಪನಾಶಕ್ತಿ, ತಾರ್ಕಿಕ ಸಾಮರ್ಥ್ಯ ಮತ್ತು ವೈಜ್ಞಾನಿಕ ಮನೋಭಾವಗಳಿಗೆ ಕೆಲವೊಮ್ಮೆ ಪರಿಸರದ ಒತ್ತಡಗಳು ಕಾರಣವಾಗಿರುತ್ತವೆ. ಮಾನವನನ್ನು ಕಾಡುತ್ತಿದ್ದ ಅನೇಕ ಸಮಸ್ಯೆಗಳಿಗೆ ಕಾರಣ ತಿಳಿಯದೇ ತನ್ನ ಅನುಭವದ ಮಿತಿಯಲ್ಲೇ ಕಲ್ಪನೆಗಳನ್ನು ಕಟ್ಟಿಕೊಂಡ ಪರಿಣಾಮವಾಗಿ ಅನೇಕ ಮೂಢನಂಬಿಕೆಗಳೂ ಉದಯಿಸಿವೆ.

"ಹಳೆ ನಂಬಿಕೆಗಳು ಬರೀ ಕಲ್ಪನೆಗಳೇ ಆಗಿರಬಹುದು. ಆದರೆ ಆ ನಂಬಿಕೆಗಳ ಮುದ್ದೆಯಲ್ಲೂ ಸತ್ಯಾಂಶದ ಗಟ್ಟಿಗಳಿವೆ. ಹೊರಗಿನ ಕಸವನ್ನೆಲ್ಲಾ ತೆಗೆದು ಒಳಗಿನ ಆ ಚಿನ್ನದ ಗಟ್ಟಿಯನ್ನು ಉಳಿಸಿಕೊಳ್ಳುವ ವಿಧಾನ ನೀವು ಕಂಡು ಹಿಡಿದಿರುವಿರೇನು?"[೫] ಎನ್ನುವ ಸ್ವಾಮಿವಿವೇಕಾನಂದರ ಪ್ರಶ್ನೆ ಇಂದಿಗೂ ಗಮನಾರ್ಹ. ನಂಬಿಕೆಗಳಲ್ಲಿ ಸತ್ಯಾಂಶವಿದೆ. ವಿಜ್ಞಾನ ಮತ್ತು ವಿಶ್ಲೇಷಣೆಗೆ ಒಳಪಡಿಸುವುದರ ಮೂಲಕ ಅವುಗಳಲ್ಲಿಯ ಮೌಲ್ಯಗಳನ್ನು ತಿಳಿಯುವುದು ಅಗತ್ಯ.

ಆಚರಣೆಗಳು ಜನಪದರ ಬದುಕಿನಲ್ಲಿ ಅವಿಭಾಜ್ಯ ಅಂಗಗಳು. ಅವು ಕಾಲಮಾನಕ್ಕೆ ತಕ್ಕಂತೆ ಬದಲಾವಣೆಗೊಳ್ಳುತ್ತಾ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ನಿರಂತರವಾಗಿ ಸಾಗಿಬಂದಿವೆ.

"ಮನುಷ್ಯ ತಾನು ನಡೆಸಿಕೊಂಡು ಬಂದ ವಿಶಿಷ್ಟ ಆಚರಣೆಗಳ ಬಗ್ಗೆ ಹೊಂದಿದ ಶ್ರದ್ಧೆ, ಉತ್ಸಾಹಗಳು, ನಂಬಿಕೆ, ಸಂಪ್ರದಾಯದ ಸೃಷ್ಟಿಗೆ ಕಾರಣವಾಗಿವೆ".[೬] ಇಂಥ ಸಂಪ್ರದಾಯ, ಆಚರಣೆಗಳು ತಲೆಮಾರಿನಿಂದ ತಲೆಮಾರಿಗೆ ಸಾಗಿಬಂದಿವೆ. ಸಂಕ್ರಾಂತಿ ಹಬ್ಬದಲ್ಲಿ ಎಳ್ಳು ಹಂಚುವುದು, ಹೋಳಿ ಹಬ್ಬದಲ್ಲಿ ಬಣ್ಣದ ನೀರನ್ನು ಇತರರ ಮೇಲೆ ಚೆಲ್ಲುವುದು, ಯುಗಾದಿಯಲ್ಲಿ ಬೇವು ತಿನ್ನುವುದು ಇತ್ಯಾದಿ ನಂಬಿಕೆಗಳಲ್ಲಿ ವೈದ್ಯಕೀಯ ಮನೋವೈಜ್ಞಾನಿಕ ಆಧಾರಗಳಿಗಿಂತ ನಂಬಿಕೆ ಪ್ರಬಲವಾಗಿರುತ್ತವೆ. ಇಂಥ ಆಚರಣೆಗಳಲ್ಲಿ ಮಾನಸಿಕ ನೆಮ್ಮದಿಯ ಜೊತೆ ಆರೋಗ್ಯಪಾಲನಾ ತತ್ವಗಳು ಅಡಗಿರುವುದನ್ನು ಗಮನಿಸಬೇಕು.

ನಂಬಿಕೆಗಳ ಉಗಮ, ವಿಕಾಸ, ಅದರ ಮಹತ್ವ ಗಮನಿಸುವುದಾದರೆ, "ಒಂದು ವಸ್ತುವಿನ ಬಗ್ಗೆ ಮಾನಸಿಕ ಒಪ್ಪಿಗೆಯನ್ನು ತೋರುವ ಪ್ರವೃತ್ತಿ, ಪರಂಪರಾನುಗತವಾದ ಸಾಮೂಹಿಕ ಮನ್ನಣೆಯನ್ನು ದೊರಕಿಸಿಕೊಂಡ ಕಾರ್ಯ, ಕಾರಣ ಹಾಗೂ ಪ್ರಭಾವ ಪ್ರಧಾನವಾದ ಪಳಿಯುಳಿಕೆಗಳೇ ಜನಪದ ನಂಬಿಕೆಗಳು"(ಕನ್ನಡ ವಿಶ್ವಕೋಶ, ಸಂ. ೭, ಪು. ೬೮೬). "ನಂಬಿಕೆಗಳ ರಚನೆಯಲ್ಲಿ ಒಂದು ಮೌಲ್ಯ ವ್ಯವಸ್ಥೆ ಹುದುಗಿರುತ್ತದೆ.

ಮನುಷ್ಯನ ಬದುಕು ಸ್ಥಿತ್ಯಂತರಗಳಿಗೆ ಒಳಪಟ್ಟಾಗ ನಂಬಿಕೆಗಳು ಪ್ರತಿಪಾದಿಸುವ ಮೌಲ್ಯಗಳು ಬದಲಾಗುತ್ತಾ ಹೋಗುತ್ತವೆ"(ಕೆ.ವೈ. ನಾರಾಯಣಸ್ವಾಮಿ, ೨೦೦೦, ಪು. ೭೩). ನಂಬಿಕೆ, ನಿಷೇಧಗಳು ಜನಪದರ ಬದುಕಿನಲ್ಲಿ ಅಲಿಖಿತ ಶಾಸನಗಳೆಂದರೆ ತಪ್ಪಾಗಲಾರದು. ವ್ಯಕ್ತಿಯ ಬದುಕಿನಲ್ಲಿ ನಂಬಿಕೆ, ನಿಷೇಧಗಳು ರಕ್ತಗತವಾಗಿರುತ್ತವೆ. ಅವು ಸದಾ ಮಾನವರನ್ನು ಕಾಯುತ್ತಾ, ಅವಘಡಗಳಿಂದ ಪಾರು ಮಾಡುತ್ತಿರುತ್ತವೆ. "ಜನಪದರ ಪ್ರತಿಯೊಂದು ಆಚರಣೆಯು ಪ್ರಬಲ ನಂಬಿಕೆಯೊಂದರಿಂದ ಪ್ರೇರಣೆ ಪಡೆದು ಕಾರ್ಯರೂಪಕ್ಕೆ ಬಂದಿರುತ್ತದೆ".[೬] ಎಷ್ಟೇ ವೈಜ್ಞಾನಿಕವಾಗಿ ಮುಂದುವರಿದಿದ್ದರೂ ಉಪಗ್ರಹ ಉಡಾವಣೆಗೆ ಜ್ಯೋತಿಷ್ಯ ಕೇಳಿ ಸಮಯ ನಿಗದಿಪಡಿಸುವ ಹಾಗೂ ಅದಕ್ಕೆ ಪೂಜೆ ಸಲ್ಲಿಸುವ ಭಾರತೀಯ ವಿಜ್ಞಾನಿಗಳ ಮನಃಸ್ಥಿತಿಯನ್ನು ನಾವು ಗಮನಿಸಬೇಕು. ಆಧುನಿಕ ವಿಜ್ಞಾನಕ್ಕೆ ಅವು ತಳಹದಿಯಾಗಿವೆ ಎಂದರೆ ತಪ್ಪಾಗದು. ಇದರಿಂದ ಜನಪದರು ಅನಾದಿಕಾಲದಿಂದಲೂ ತನ್ನ ಒಳಿತಿಗಾಗಿ ನಂಬಿಕೆಯನ್ನು ನಂಬುತ್ತಾ ಬಂದಿರುವುದನ್ನು ಕಾಣುತ್ತೇವೆ.

ನಂಬಿಕೆಗಳು ಭಾವನೆ ಮತ್ತು ಆಲೋಚನೆಯ ರೂಪದಲ್ಲಿದ್ದರೆ, ಆಚರಣೆಗಳು ಕ್ರಿಯಾರೂಪದಲ್ಲಿ ಇರುತ್ತವೆ. ಬಿತ್ತಿದ ಕೆಲವು ದಿನಗಳ ನಂತರ ಬರುವ ಜೋಕುಮಾರಸ್ವಾಮಿಯ ಪ್ರಸಾದವನ್ನು ಹೊಲದಲ್ಲಿ ಉಗ್ಗಬೇಕು. ಕಾರುಹುಣ್ಣಿಮೆಯಲ್ಲಿ ಬಿಳಿ ಬಾಲದ ಎತ್ತು ಕರೆಹರಿದರೆ, ಬಿಳಿ ಜೋಳದ ಬೆಳೆ ಜಾಸ್ತಿ, ಕೆಂಪಾದುದಾಗಿದ್ದರೆ ಕೆಂಜೋಳದ ಬೆಳೆ ಜಾಸ್ತಿಯಾಗುವುದು, ಕರೆಹರಿದ ಎತ್ತು ಸೀಮೆ ದಾಟಿದರೆ ಹುಲುಸು ಕಡಿಮೆಯಾಗುತ್ತದೆ. ಕರೆಹರಿದ ಬೇವಿನಸೊಪ್ಪನ್ನು ಧಾನ್ಯದಲ್ಲಿಟ್ಟರೆ ಒಳ್ಳೆಯದಾಗುತ್ತದೆ. ದೇವರ ಹೆಸರಲ್ಲಿ ಬಿಟ್ಟ ಜಾನುವಾರುಗಳನ್ನು ಹೊಡೆಯಬಾರದು. ಅದು ಹೊಲದಲ್ಲಿ ಮೇಯ್ದರೆ ಒಳ್ಳೆಯದಾಗುತ್ತದೆ. ಕಾಮಣ್ಣನ ಬೂದಿಯನ್ನು ಹೊಲದಲ್ಲಿ ಚೆಲ್ಲಿದರೆ ಬೆಳೆ ಸಮೃದ್ಧಿಯಾಗುತ್ತದೆ. ಈ ಎಲ್ಲಾ ನಂಬಿಕೆಗಳಲ್ಲಿ ಉಪಯೋಗಿ ತತ್ವವಿದೆ. ಇಂಥ ನಂಬಿಕೆಗಳು ಜನಪದರ ಆಚರಣೆಗಳಲ್ಲಿ ಹಾಸುಹೊಕ್ಕಾಗಿವೆ. ಈ ರೀತಿಯಾಗಿ ನಂಬಿಕೆ ಮತ್ತು ಆಚರಣೆಗಳು ಪರಸ್ಪರ ನಿಕಟ ಸಂಬಂಧ ಹೊಂದಿವೆ.

ಪ್ರಾಚೀನ ಕಾಲದಿಂದಲೂ ನಿಸರ್ಗದ ಮಡಿಲಲ್ಲಿ ಜೀವಿಸಿದ ಮಾನವನು ರೋಗಗಳಿಗೆ ಆಚರಣೆಯ ಮುಖೇನ, ನಿರೋಧಕ ಶಕ್ತಿಯನ್ನು ಕಂಡುಕೊಂಡಿದ್ದಾನೆ. ಮಕ್ಕಳಿಗೆ ದಡಾರ, ಅಮ್ಮ ಕಾಣಿಸಿಕೊಂಡರೆ ಆಸ್ಪತ್ರೆಗೆ ಕರೆದೊಯ್ಯಬಾರದೆಂಬ ನಂಬಿಕೆಯಿದೆ. ಒಂದುವೇಳೆ ಹೋದರೂ ರೋಗ ವಾಸಿಯಾಗುವುದಿಲ್ಲ. ಆದರೆ ಆಯಾ ಗ್ರಾಮದ ಊರಮ್ಮದೇವಿಗೆ ಎಡೆ ಅರ್ಪಿಸಿದರೆ ರೋಗ ವಾಸಿಯಾಗುವುದೆಂದು ನಂಬುತ್ತಾರೆ. ಇಂಥ ನಂಬಿಕೆಗಳ ಹಿಂದಿರುವ ಆಚರಣೆಯಲ್ಲಿನ ಆರೋಗ್ಯಪಾಲನಾ ತತ್ವಗಳು ನಂಬಿಕೆಯ ಉಳಿಯುವಿಕೆಗೆ ಕಾರಣ.

"ಒಲೆಯನ್ನು ಕಾಲಿನಿಂದ ಒದೆಯಬಾರದು" ಎನ್ನುವ ನಂಬಿಕೆಯ ಹಿನ್ನೆಲೆ ಬೆಂಕಿಯು ಕಾಲಿಗೆ ತಾಗಿ ಅಪಾಯ ಸಂಭವಿಸಬಾರದೆಂಬುದಾಗಿದೆ. 'ಹುತ್ತವನ್ನು ಬಳಸಬಾರದು' ಎನ್ನುವ ನಂಬಿಕೆಯಲ್ಲಿ ಲೌಕಿಕ ಬದುಕಿಗೆ ಸಂಬಂಧಿಸಿದ ಸಂಗತಿಯ ಬಗ್ಗೆ ಎಚ್ಚರಿಕೆಯನ್ನು ಕೊಡುವ ನಿಷಿದ್ಧತೆಯಿದೆ. 'ದೇವರ ಹೂವನ್ನು ಮೂಸಬಾರದು. ಇಲ್ಲಿ ಹೂವನ್ನು ಮೂಸುವುದರಿಂದ ಅದರೊಳಗಿನ ಕ್ರಿಮಿಕೀಟಗಳು ಮೂಗಿನೊಳಗೆ ಸೇರಿಕೊಂಡು ತೊಂದರೆಯಾಗಬಹುದೆಂಬ ಕಾರಣವಿದೆ. ಈ ರೀತಿಯ ನಿಷಿದ್ಧರೂಪದ ಧಾರ್ಮಿಕ ನಂಬಿಕೆಗಳು ದೈಹಿಕ ಸುವ್ಯವಸ್ಥೆಯನ್ನು ಉಳಿಸಿಕೊಂಡು ಬರುವ ಉದ್ದೇಶದಿಂದ ಕೂಡಿವೆ. ಒಂದು ಹಂತದಲ್ಲಿ ಆಚರಣೆಗಳು

ವೈಯುಕ್ತಿಕ ನೆಲೆಯಲ್ಲಿ ರೂಢಿಗೆ ಬಂದಿರುವ ಸಾಧ್ಯತೆ ಇದೆ. ಕ್ರಮೇಣ ಆ ನಂಬಿಕೆಗಳು ಸಾರ್ವತ್ರೀಕರಣಗೊಂಡು ನಿರಂತರವಾಗಿ ಸಾಗಿಬಂದಿವೆ. ಸಾಮಾನ್ಯ ಮನುಷ್ಯರು ದೈವದ ಹೆಸರಲ್ಲಿ ನೆರವೇರಿಸುವ ಆಚರಣೆಗಳು ಜನಪದರ ದೃಷ್ಟಿಯಲ್ಲಿ ಪವಾಡಗಳು, ಅತಿಮಾನುಷ ಕಾರ್ಯಗಳು ಆಗಿವೆ. ಶಸ್ತ್ರಪವಾಡ, ಕೈಕಾಲು ಪವಾಡ, ಸರಪಳಿ ಹರಿಯುವುದು, ಚಾಟಿಯಿಂದ ಹೊಡೆದುಕೊಳ್ಳುವುದು, ನಾಲಿಗೆಗೆ ಶಸ್ತ್ರ ಚುಚ್ಚಿಕೊಳ್ಳುವುದು ದೈವೀಪ್ರೇರಣೆಯಿಂದ ಎಂಬುದಾಗಿದೆ. ಇವು ದೈವದ ಪ್ರಭಾವವನ್ನು ಜಗತ್ತಿಗೆ ಸಾರುವ ಉಗ್ರಸ್ವರೂಪದ ಆಚರಣೆಗಳು ಹೀಗೆ ನಂಬಿಕೆಗಳು ಆಚರಣೆಗಳ ಸ್ವರೂಪ ಪಡೆದು ಪವಾಡಗಳಾಗಿ ಮಾರ್ಪಾಡಾಗಿವೆ. ಇದಕ್ಕೆಲ್ಲಾ ಮಾನವನ ಮನಸ್ಥಿತಿ ಕಾರಣ ಎಂಬುದು ಸ್ಪಷ್ಟಗೊಳ್ಳುತ್ತದೆ. ಈ ಆಚರಣೆಗಳು ನಿರ್ದಿಷ್ಟ ಪ್ರದೇಶದಲ್ಲಿ, ನಿರ್ದಿಷ್ಟ ವ್ಯಕ್ತಿಗಳಿಂದ, ನಿರ್ದಿಷ್ಟ ಸಮಯದಲ್ಲಿ ಜರುಗಬೇಕೆಂಬ ನಂಬಿಕೆಯಿದೆ. ಮೈಲಾರದಲ್ಲಿ ನಡೆಯುವ ಕಾರಣಿಕ ದೇವವಾಣಿಯೆಂಬ ಪ್ರತೀತಿ ಇದೆ. ಕಾರಣಿಕ ಹೇಳುವವನು ಯಾವ ದಿಕ್ಕಿಗೆ ಮುಖಮಾಡಿ ಬೀಳುವನೋ ಆ ದಿಕ್ಕಿಗೆ ಒಳ್ಳೆಯ, ಮಳೆ ಬೆಳೆಯಾಗುತ್ತದೆಂಬ ನಂಬಿಕೆ ಈಗಲೂ ಪ್ರಚಲಿತದಲ್ಲಿದೆ.

ನಂಬಿಕೆ, ಆಚರಣೆಗಳು ಮನುಷ್ಯನ ದಿನನಿತ್ಯದ ಬದುಕಿನ ಎರಡು ಮುಖಗಳು. ನಂಬಿಕೆ ಮಾತಿನ ಮೂಲಕ ವ್ಯಕ್ತಿಗೆ ಸ್ಫೂರ್ತಿ ನೀಡಿದರೆ, ಆಚರಣೆಗಳು ಕ್ರಿಯೆಯ ಮೂಲಕ ಆತನಿಂದ ವಿಶಿಷ್ಟಸ್ಥಾನ ಪಡೆದುಕೊಳ್ಳುತ್ತವೆ. "ನಂಬಿಕೆ ಅಭಯ ಅಥವಾ ನೆಚ್ಚಿಕೆಯ ಮಾನಸಿಕ ಸ್ಥಿತಿ. ಪರಂಪರಾನುಗತವಾಗಿ ಸ್ವೀಕೃತವಾದ ಒಂದು ಭಾವರೂಪ; ಪುನರಾವರ್ತಿತ ಅಭಿಯೋಕ್ತಿ. ಹಲವೊಮ್ಮೆ ವಸ್ತುಸ್ಥಿತಿಯೊಡನೆ ಅಸಂಬದ್ಧವೂ, ಅವೈಜ್ಞಾನಿಕವೂ ಆದ ಸಂಬಂಧವುಳ್ಳ ಹೇಳಿಕೆ ಎನಿಸುವ ಸಾಧ್ಯತೆ ಇದೆ. ಇದರಲ್ಲಿ ಮಾತು ಒಂದು ಭಾಗ, ಕ್ರಿಯೆ ಮತ್ತೊಂದು ಭಾಗ".[೮] ಒಟ್ಟಿನಲ್ಲಿ ಶುಭ-ಅಶುಭ, ಫಲ-ವಿಫಲ, ಭಯ-ಅಭಯಗಳ ಪ್ರಸ್ತುತ ರೂಪವನ್ನು ಮಾತು ಕ್ರಿಯೆಯಲ್ಲಿ ಪ್ರಕಟಿಸುವ ವಿಧಾನವು ಹೌದು. ಹಂದಿ, ಮನೆ ಪ್ರವೇಶಿಸಿದರೆ ಜೀವಂತ ಸಮಾಧಿ ಮಾಡಬೇಕು. ಇಲ್ಲವಾದರೆ ಲಕ್ಷ್ಮಿ ಹೊರಟು ಹೋಗುವಳೆಂಬ ನಂಬಿಕೆ ಬಳ್ಳಾರಿ ಜಿಲ್ಲೆಯಲ್ಲಿದೆ. ಹೇಸಿಗೆ, ಅನಿಷ್ಟವಾಗಿ ಕಂಡ ಹಂದಿ ಒಳಪ್ರವೇಶದ ನಂತರ ಲಕ್ಷ್ಮಿಯಾಗಿ ಪರಿವರ್ತಿತಗೊಳ್ಳುವುದು ಶುಭ-ಅಶುಭ ರೂಪದ ನಂಬಿಕೆಯಾಗಿದೆ. ಅಮ್ಮನ ಆಚರಣೆಗಳಲ್ಲಿ ಬಲಿ ನೀಡಿಯಾದರೂ ಆಕೆಯನ್ನು ಸಂತೈಸಬೇಕೆಂಬ ನಂಬಿಕೆ ಇದೆ. ಬಲಿ ನೀಡಿಕೆ ಇಲ್ಲಿಯ ಸಂಪ್ರದಾಯ. ನೀಡದೆಹೋದರೆ ಕಾಡುವ ದೈವೀ ಭಯ. ಈ ರೀತಿಯ ಮನೋಭಾವಗಳು ಸಂಪ್ರದಾಯ ಉಳಿಯುವಿಕೆಗೆ ಕಾರಣವಾಗಿದೆ.

ಕಾಮಲಾಪುರದಲ್ಲಿ ನೀರು ತುಂಬಿಸುವ ಆಕಾರದಲ್ಲಿರುವ ಬಂಡೆಗಲ್ಲು 'ಗುಲ್ಲೆಮ್ಮ' ಎಂಬ ದೇವತೆಯಾಗಿದ್ದಾಳೆ. ಇಲ್ಲಿ ಹರಿಜನರು ಮೊದಲು ಚರ್ಮವನ್ನು ನೆನೆಯಲು ಹಾಕುತ್ತಿದ್ದರೆಂಬ ನಂಬಿಕೆಯಿದೆ. ಈಗಲೂ ಮೇಲ್ವರ್ಗದವರಾದಿಯಾಗಿ ಮದುವೆ ಸಮಯದಲ್ಲಿ, ಮಾಟ, ಮಂತ್ರವಾದಾಗ, ಕಾಯಿಲೆಯಾದಾಗ, ಅಲ್ಲಿಯ ನೀರನ್ನು ಪ್ರೋಕ್ಷಿಸಿದರೆ ಒಳಿತಾಗುವುದೆಂಬ ನಂಬಿಕೆಯಿದೆ.

ಹಿಂದೆ ನರಬಲಿ ರೂಪದ ಹರಕೆಗಳು ಇದ್ದುದನ್ನು ಇತಿಹಾಸ ತಿಳಿಸುತ್ತದೆ. ಕಾಲಮಾನಕ್ಕೆ ತಕ್ಕಂತೆ ಬದಲಾಗುತ್ತಾ ಬಂದಿರುವುದನ್ನು ನಾವು ಗಮನಿಸಬೇಕು. ಬಳ್ಳಾರಿ ದುರುಗಮ್ಮನಿಗೆ ಹಿಂಸಾತ್ಮಕ ಬಲಿ ಪದ್ಧತಿಯ ಬದಲಾಗಿ ಸಿಡಿ ಆಡುವುದರ ಮೂಲಕ ಬಲಿ ನೀಡಬೇಕೆಂಬ ಸಂಪ್ರದಾಯ ಅಲಿಖಿತವಾಗಿಯೇ ಜಾರಿಗೆ ಬಂತು. ಇಲ್ಲಿ ನರಬಲಿಯ ಬದಲಾಗಿ ಗೊಂಬೆಕಟ್ಟಿ ಸಿಡಿಯಾಡಲಾಗುತ್ತದೆ. ಹಂಪಿ ವಿರೂಪಾಕ್ಷೇಶ್ವರನ ರಥೋತ್ಸವದ

ಸಮಯದಲ್ಲಿ ತೇರಿನ ಗಾಲಿಗೆ ತೆಂಗಿನಕಾಯಿಯನ್ನು ಹೊಡೆದರೆ ಮಕ್ಕಳನ್ನು ಬಲಿ ನೀಡಿದಂತೆ ಎಂಬ ನಂಬಿಕೆಯಿದೆ. ಸಂತಾನ ಪ್ರಾಪ್ತಿಗಾಗಿ ದೇವರ ಮೊರೆಹೋಗುವ ನಂಬಿಕೆಗಳು ಇವೆ. ಹಂಪಿಯಲ್ಲಿ ಕಲ್ಲಿನ ಮನೆ ಕಟ್ಟಿದರೆ, ದಂಪತಿಗಳು ತಮ್ಮ ಇಷ್ಟಾರ್ಥದ ಮನೆ ಕಟ್ಟುವ ಕಾರ್ಯ ಪೂರ್ಣಗೊಳ್ಳುತ್ತದೆಂದು, ಹರಕೆ ಗಿಡಕ್ಕೆ ತೊಟ್ಟಿಲನ್ನು ಕಟ್ಟಿದರೆ ಸಂತಾನ ಪ್ರಾಪ್ತಿಯಾಗುವುದೆಂದೂ ನಂಬಿಕೆಯಿದೆ. ಈ ರೀತಿಯ ನಂಬಿಕೆಗಳು ಆಶಾವಾದಿಯನ್ನಾಗಿಸುತ್ತವೆ. ಆ ಮೂಲಕ ಮಾನಸಿಕವಾಗಿ ಧೈರ್ಯದಿಂದಿರಲು ಮತ್ತು ಉತ್ಸಾಹಿತವಾಗಿ ಕಾರ್ಯನಿರ್ವಹಿಸಲು ನಂಬಿಕೆಗಳು ಸಹಾಯ ಮಾಡುವುದರಲ್ಲಿ ಎರಡು ಮಾತಿಲ್ಲ. ಹೀಗೆ ನಿರ್ದಿಷ್ಟ ದೈವಕ್ಕೆ ನಿರ್ದಿಷ್ಟ ಅವಧಿಯಲ್ಲಿ ನಿಯಮಾನುಸಾರ ಆಚರಣೆಗಳನ್ನು ನಡೆಸಿದರೆ ಒಳ್ಳೆಯದಾಗುವುದೆಂಬುದು ಜನಪದರ ನಂಬಿಕೆಯಾಗಿದೆ.

"ನಂಬಿಕೆಗಳು ಒಂದು ಜನಾಂಗದ ಸಮಾಜ ರಚನೆ, ಚಲನೆಯ ದಿಕ್ಕು, ಒಪ್ಪಿಗೆ ನಿರಾಕರಣೆಯ ಮುಖಾಮುಖಿಯಾಗಿ ವಿಧಿ-ನಿಷೇಧಗಳಿರುತ್ತವೆ. ನಂಬಿಕೆಗಳ ಸಂವೇದನೆ ಒಮ್ಮೊಮ್ಮೆ ಪಾರದರ್ಶಕವಾಗಿಯೂ, ಕೆಲವೊಮ್ಮೆ ಗುಪ್ತವಾಗಿಯೂ ಪ್ರಕಟವಾಗುತ್ತದೆ".[೯] ಇಂಥ ನಂಬಿಕೆಗಳಿಂದ ಬಳ್ಳಾರಿ ಜಿಲ್ಲೆ ಕೂಡ ಹೊರತಾಗಿಲ್ಲ. ಉಜ್ಜಯಿನಿಯ ಮರುಳಸಿದ್ಧೇಶ್ವರ ದೇವಾಲಯದ ಗರ್ಭಗುಡಿಯ ಮೇಲಿನ ಗೋಪುರಕ್ಕೆ ಎಣ್ಣೆಮಜ್ಜನ ಮಾಡಿದರೆ ಒಳಿತಾಗುವುದೆಂಬ ನಂಬಿಕೆಯಿದೆ. ಇತಿಹಾಸದ ಪ್ರಕಾರ ಇಲ್ಲಿ ಜರುಮಲೆ ಪಾಳೇಗಾರರ ವಂಶಜರೇ ಎಣ್ಣೆ ಮಜ್ಜನ ಮಾಡುವಲ್ಲಿ ಮೊದಲಿಗರಾಗಿದ್ದಾರೆ.

ಕೊಟ್ಟೂರೇಶ್ವರನ ಜಾತ್ರೆಯಲ್ಲಿ ಹರಿಜನರು ಗಿಣ್ಣು ನೀಡಿ ತೇರು ಎಳೆಯುತ್ತಾರೆ. ಅಂದು ತಪ್ಪದೇ ಹರಿಜನ ಕೇರಿಯಲ್ಲಿ ಜಾನುವಾರುಗಳಿಗೆ ಸಂತಾನವಾಗಿ ಮೊದಲ ಗಿಣ್ಣು ಎಡೆಯಾಗುತ್ತದೆ. ಆ ದಿನ ಕೊಟ್ಟೂರಿನಲ್ಲಿ ಒಬ್ಬರು ಹುಟ್ಟುತ್ತಾರೆ, ಒಬ್ಬರು ಸಾಯುತ್ತಾರೆ ಎಂಬ ನಂಬಿಕೆಯಿದೆ. ಕುರುಗೋಡು ಬಸವೇಶ್ವರನ ತೇರಿನ ದಿನ ಸಾಯಂಕಾಲ ಪಕ್ಕದ ಗ್ರಾಮದವರು ದೂಳುಗಾಲಿನಿಂದ ಆಗಮಿಸಿ ದೇವಸ್ಥಾನವನ್ನು ಮೂರುಸುತ್ತು ಹಾಕಿ, ದೇವರ ಎದುರಿನ ಕಟ್ಟೆಗೆ ತೆಂಗಿನಕಾಯಿ ಒಡೆಯುವ ನಂಬಿಕೆ ಬಲಿಯನ್ನು ಸಂಕೇತಿಸುತ್ತದೆ.

ಬಲುಕುಂದಿಯಲ್ಲಿ ಬನ್ನಿಮಹಾಂಕಾಳಿ ದೇವಾಲಯದ ಎದುರುಗಡೆ ಪೂಜಾರ್ಹ ಬನ್ನಿ ವೃಕ್ಷವಿದೆ. ಇಲ್ಲಿ "ಗಂಡಾಂತರ ತಪ್ಪಿದರೆ ಗಂಡಾದೀಪ ಹಚ್ಚಬೇಕೆಂಬ" ನಂಬಿಕೆಯಿದೆ. ಇದು ಹರಕೆ ತೀರಿಸುವ ಸಂಪ್ರದಾಯ. ಈ ವೃಕ್ಷದ ಯಾವ ಭಾಗ ಚಿಗುರುವುದಿಲ್ಲವೋ ಆ ಭಾಗಕ್ಕೆ ಬರಗಾಲ ಬರುವುದೆಂದು ನಂಬುತ್ತಾರೆ. ಸೊನ್ನ ಗ್ರಾಮದಲ್ಲಿಯ ಕುರುಬರು ಮಾತ್ರ ಡೊಳ್ಳಿಗೆ ಜಂಗು ಕಟ್ಟಬೇಕೆಂಬುದು ನಂಬಿಕೆಯಾಗಿದೆ. ಈಗಲೂ ಡೊಳ್ಳು ಬಾರಿಸಲು ಇವರಿಗೆ ಭಾರಿ ಬೇಡಿಕೆಯಿದೆ. ಇದು ಪ್ರತಿಷ್ಠೆಯ ಸಂಕೇತವಾಗಿ ಉದಯಿಸಿದ ನಂಬಿಕೆಯಾಗಿರಲು ಸಾಧ್ಯವಿದೆ.

ಸಿರುಗುಪ್ಪ ತಾಲೂಕಿನ ಉಪ್ಪಾರ ಹೊಸಹಳ್ಳಿಯ ನಾಗಲಿಂಗೇಶ್ವರ ದೇವರಿಗೆ ಜಾತ್ರೆಯಲ್ಲಿ ಮಾದಲಿಯನ್ನು ಎಡೆಮಾಡಿ ಭಕ್ತರಿಗೆ ನೀಡಬೇಕೆಂಬ ನಂಬಿಕೆಯಿದೆ. ಕುಟ್ಟುವ ಯಂತ್ರದ ಮಾದರಿಯ ಪುರಾತನ ಕಾಲದ ಯಾತದ ಮರದಿಂದಲೇ ಪ್ರಸಾದ ತಯಾರಿಸುವುದು ಇಲ್ಲಿಯ ವಾಡಿಕೆ. ಆಹಾರದಲ್ಲಿಯ ಸತ್ವ ಆಧುನಿಕ ಉಪಕರಣದಿಂದ ಹಾಳಾಗಬಾರದೆಂಬ ಸಂದೇಶ ಈ ನಂಬಿಕೆಯಲ್ಲಿದೆ. ಬಳ್ಳಾರಿ ಭಾಗದಲ್ಲಿ ಬೇಸಿಗೆಯಲ್ಲಿ

ಮುತ್ತುಗದ ಎಲೆಯಲ್ಲಿ ಮೊಸರನ್ನದೂಟ ಮಾಡಬೇಕೆಂಬ ಪ್ರತೀತಿ ಇದೆ. ರಣಗುಡುವ ಬಿಸಿಲಿರುವ ಈ ಪ್ರದೇಶದಲ್ಲಿ ಉಷ್ಣಬಾಧೆಯನ್ನು ತಗ್ಗಿಸುವ ತಂತ್ರಗಾರಿಕೆ ಈ ನಂಬಿಕೆಯ ಹಿನ್ನೆಲೆಯಾಗಿದೆ. ಹೀಗೆ ಪ್ರತಿಯೊಂದು ನಂಬಿಕೆಯ ರಚನೆಯಲ್ಲೂ ಬರಿಗಣ್ಣಿಗೆ ಕಾಣದ ಉಪಯೋಗಿ ತತ್ವಗಳು ಅಡಗಿಕೊಂಡಿವೆ. ನಂಬಿಕೆಗಳ ಉದಯಕ್ಕೆ ಆಯಾ ಕಾಲಮಾನ ಹಾಗೂ ಭೌಗೋಳಿಕ ಹಿನ್ನೆಲೆಗಳು ಕಾರಣವಾಗಿವೆ.

ಹೊಸಪೇಟೆ ಕಾಟ್ಮಯ್ಯ ಆಂಜನೇಯನನ್ನು ಪೂಜಿಸಿ ಗುಡಿಯ ಸುತ್ತಲೂ ಲಬೋ... ಲಬೋ... ಎಂದು ಬಡಿದುಕೊಂಡರೆ ಮಳೆಯಾಗುತ್ತದೆಂಬ ನಂಬಿಕೆಯಿದೆ. ದೇವರನ್ನು ಒಂದು ದಿನ ಸಂಪೂರ್ಣವಾಗಿ ಮುಳುಗಿಸಿದರೆ ಮಳೆಯಾಗುತ್ತದೆಂಬ ನಂಬಿಕೆಯಿದೆ. ಉಜ್ಜಯಿನಿ ಪೀಠದವರು ಮಳೆಬೀಜ ತಂದರೆ ಮಳೆಯಾಗುತ್ತದೆಂಬ ನಂಬಿಕೆಯಿದೆ. ಇಂಥ ನಂಬಿಕೆಗಳು ಮಳೆ ತರಿಸಲು ದೇವರನ್ನು ಒಲಿಸಿಕೊಳ್ಳುವ ಪ್ರಯತ್ನದಲ್ಲಿ ಉದಯಿಸಿದವುಗಳಾಗಿವೆ. ಕೊಡತಿ ಹುಳುಗಳು ಕಾಣಿಸಿಕೊಂಡರೆ, ಚಂದ್ರಗುಡಿ ಕಟ್ಟಿದರೆ, ಕಪ್ಪೆ ಎಟಗುಟ್ಟಿದರೆ ಮಳೆಯಾಗುವುದೆಂಬ ನಂಬಿಕೆಯಿದೆ. ವಾತಾವರಣದಲ್ಲಾಗುವ ಬದಲಾವಣೆಗಳಿಗೂ, ಇಂಥ ನಂಬಿಕೆಗಳಿಗೂ ಯಾವುದೋ ಸಂಬಂಧ ಇರಬೇಕು. ಅವುಗಳ ಆಂತರಿಕ ಸತ್ಯಾಸತ್ಯಗಳ ವಿವೇಚನೆ ಜನ ಪದರಿಗಿಲ್ಲವಾದರೂ, ಪರಂಪರಾನುಗತ ಅನುಭವಗಳಿಂದ ಆಚರಿಸಲ್ಪಡುತ್ತಿವೆ.

ನಂಬಿಕೆಗೆ ಸಂಬಂಧಿಸಿದಂತೆ ಕೆಲವು ಜಾನಪದ ವಿದ್ವಾಂಸರು ಜನಪದ ನಂಬಿಕೆ (Folk Belief) ಮತ್ತು ಮೂಢನಂಬಿಕೆ (Superstition) ಎಂಬ ಪ್ರಭೇದಗಳನ್ನು ಗುರುತಿಸಿದ್ದಾರೆ. ಕೆಲವು ಸಂದರ್ಭಗಳಲ್ಲಿ ನಂಬಿಕೆಗಳೇ ಮೂಢನಂಬಿಕೆಗಳಾಗಿ ಗೋಚರಿಸುತ್ತವೆ. ಆದರೆ ಇವೆರಡರಲ್ಲಿ ಭಿನ್ನತೆಯಿದೆ. "ಮೂಢನಂಬಿಕೆಗಳಲ್ಲಿ ಸಾಮೂಹಿಕ ಅಭ್ಯಾಸಗಳಿರುತ್ತವೆ. ಅವುಗಳಿಗೆ ಯಾವುದೇ ವಿಧವಾದ ವಿವೇಚನೆಯ ಆಧಾರವಾಗಲೀ, ಋಣಭಾರವಾಗಲಿ ಇರುವುದಿಲ್ಲ(ಜಿ.ವಿ. ದಾಸೇಗೌಡ, ೧೯೭೩, ಪು. ೪). ಅಂತೆಯೇ ಜನಪದ ನಂಬಿಕೆಗಳಲ್ಲಿ ಬಹುಪಾಲು ವೈಜ್ಞಾನಿಕ ಸತ್ಯವಿದೆ. ಪೌರಾಣಿಕ ಅಂಶಗಳು, ಐತಿಹ್ಯ, ಕಥಾಂಶಗಳನ್ನು ಕಾಣುತ್ತೇವೆ. ಹಿಂದಿನ ಸಂಪ್ರದಾಯವನ್ನು ತಿಳಿಸಿಕೊಡುವ ಮಹತ್ವದ ಕಾರ್ಯವನ್ನು ನಂಬಿಕೆಗಳು ಮುನ್ನೆಡಿಸಿಕೊಂಡು ಬಂದಿವೆ ಎಂದರೆ ತಪ್ಪಾಗಲಾರದು. ಜವಾಬ್ದಾರಿಯನ್ನು ತಿಳಿಸುವ ಗುಣ ನಂಬಿಕೆಗಳಿಗಿದೆ. ಆಚರಣೆಗಳ ಉಳಿವಿಗೆ ಇಂದಿಗೂ ನಂಬಿಕೆಗಳು ಕಾರಣವಾಗಿವೆ.

ಭಯ ಮತ್ತು ಮನಸ್ಸಿನ ಅಸ್ಥಿರತೆಯಿಂದ ನಂಬಿಕೆಗಳು ಉದಯಿಸಿರಲು ಸಾಧ್ಯವಿದೆ. ಸಾಂಸ್ಕೃತಿಕ ನಂಬಿಕೆಗಳು ಸಾಮಾಜಿಕ ಒಪ್ಪಿಗೆಯಿಂದ ರೂಪುಗೊಂಡವುಗಳಾಗಿರುತ್ತವೆ. ಗಡಿದಾಟಿಸುವ ಮಾರಿಯ ಮೂಗನ್ನು, ಸ್ತನವನ್ನು ಕೆತ್ತಿ ಭಿನ್ನಗೊಳಿಸಬೇಕೆಂಬ ನಂಬಿಕೆಯಿದೆ. ಹೀಗೆ ಮಾಡುವುದರ ಹಿನ್ನೆಲೆ ಮಾರಿಯು ಮತ್ತೊಂದು ಗ್ರಾಮ ಪ್ರವೇಶಿಸಬಾರದೆಂಬ ಕಾರಣದಿಂದ. ಮಂಗಳವಾರ, ಶುಕ್ರವಾರಗಳು ಕೆಲವರಿಗೆ ಶುಭ ಸೂಚಕವಾದರೆ, ಇನ್ನೂ ಕೆಲವರಿಗೆ ಅಶುಭ ಸೂಚಕಗಳಾಗಿರುತ್ತವೆ. ಇಂಥ ವೈಯುಕ್ತಿಕ ನಂಬಿಕೆಗಳು ಕೆಲವೊಮ್ಮೆ ಮಾರಕವಾಗಿ ಪರಿಣಮಿಸಿದ ಉದಾಹರಣೆಗಳಿವೆ.

ದೇವರ ಅಪ್ಪಣೆ ಪಡೆಯದೆ ಜನಪದರು ಮಹತ್ವದ ಕಾರ್ಯ ಕೈಗೊಳ್ಳಲಾರರು. ದೇವರ ಎಡಭಾಗದ ಹೂ ಬಿದ್ದರೆ ಕೆಟ್ಟದ್ದು, ಬಲಭಾಗದ ಹೂ ಬಿದ್ದರೆ ಒಳ್ಳೆಯದಾಗುವುದೆಂದು ನಂಬುತ್ತಾರೆ. ತಮ್ಮ ಇಷ್ಟಾರ್ಥ

ಸಿದ್ಧಿಗಾಗಿ ದೈವದ ಪೂಜೆಯನ್ನು ತಪ್ಪದೆ ಮಾಡುತ್ತಾರೆ. ಹೆಣ್ಣುದೇವರ ಜಾತ್ರೆಯಲ್ಲಿ ಹುಲುಸು ಚೆಲ್ಲುವುದರಿಂದ ಮಳೆ-ಬೆಳೆಯಾಗುವುದೆಂಬ ನಂಬಿಕೆಯಿದೆ. ದೂರದ ಊರುಗಳಿಗೆ ತೆರಳಿ ಜಾತ್ರೆ, ಉತ್ಸವಗಳಲ್ಲಿ ಪಾಲ್ಗೊಳ್ಳುವುದರಿಂದ ದೈವದ ಕೃಪೆಗೆ ಪಾತ್ರರಾಗುವೆವೆಂಬ ನಂಬಿಕೆಯಿದೆ. ಗುಳೇಲಕ್ಕಮ್ಮನ ಜಾತ್ರೆ ಮಾಡುವುದರಿಂದ ಊರು ಸುಭಿಕ್ಷೆಯಾಗುತ್ತದೆಂಬ ನಂಬಿಕೆ ಕೂಡ್ಲಿಗಿ ಭಾಗದಲ್ಲಿದೆ. ಅಮ್ಮನನ್ನು ಕಳುಹಿಸಿದ ನಂತರ ಯಾವ ವಸ್ತುವನ್ನು ಮನೆಗೆ ಒಯ್ಯುವಂತಿಲ್ಲ. ಆ ವಸ್ತುಗಳೊಂದಿಗೆ ಗಾಳಿರೂಪದಲ್ಲಿ ಅಮ್ಮ ಮನೆಗೆ ಬರುತ್ತಾಳೆಂದು ಜನ ನಂಬುತ್ತಾರೆ. ಈ ಎಲ್ಲಾ ಪೂಜೆ, ಆರಾಧನೆಗಳ ಹಿಂದೆ ಗಾಢವಾದ ನಂಬಿಕೆಯೊಂದಿದೆ. ಈ ನಂಬಿಕೆಗಳ ತಳಹದಿಯ ಮೇಲೆ ಆಚರಣೆ ಮತ್ತು ಸಂಪ್ರದಾಯಗಳು ಹುಟ್ಟಿಕೊಂಡಿವೆ. ನಂಬಿಕೆಗಳು ಮಾತಿನ ಮೂಲಕ ವ್ಯಕ್ತಿಗೆ ಸ್ಫೂರ್ತಿ ನೀಡಿದರೆ, ಆಚರಣೆಗಳು ಕ್ರಿಯೆಯ ಮುಖೇನ ವಿಶೇಷತೆಯನ್ನು ಪಡೆಯುತ್ತವೆ. ನಂಬಿಕೆ ಭಾವಪ್ರಧಾನವಾದದ್ದು; ಆಚರಣೆ ಕ್ರಿಯಾಪ್ರಧಾನವಾದದ್ದು. ಭಾವನೆ ಮತ್ತು ಕ್ರಿಯೆಗಳು ಏಕೀಭವಿಸುವ ಮೂಲಕ ಅಗೋಚರ ಶಕ್ತಿಗಳನ್ನು ಸಂತೃಪ್ತಿಗೊಳಿಸಲು ಇಂತಹ ಆಚರಣೆ, ಆರಾಧನೆಗಳು ಸೃಷ್ಟಿಗೊಂಡಿವೆ.

ನದಿ, ಕೆರೆ, ಹೊಳೆ ದಾಟುವಾಗ ನಾಣ್ಯ ಎಸೆದು ಕೈಮುಗಿಯಬೇಕೆಂಬ ನಂಬಿಕೆಯಿದೆ. ಬೆಳ್ಳಿ, ತಾಮ್ರ ಲೋಹಗಳಿಗೆ ಕ್ರಿಮಿನಾಶಕ ಗುಣವಿರುವುದು ವೈಜ್ಞಾನಿಕ ಸತ್ಯ. ಬಸವನ ಕಾಲಡಿ ಮಕ್ಕಳನ್ನು ನುಗ್ಗಿಸುವುದರಿಂದ ಬಾಲಗ್ರಹ, ಕಿರುಚಾಡುವಿಕೆ ಮೊದಲಾದ ಕಾಯಿಲೆಗಳು ಗುಣವಾಗುತ್ತವೆ ಮತ್ತು ಮಹಿಳೆಯರಿಗೆ ಮಕ್ಕಳಾಗುತ್ತವೆಂಬ ನಂಬಿಕೆಯಿದೆ. ಬಳ್ಳಾರಿ ಜಿಲ್ಲೆಯ ಪಶ್ಚಿಮ ಭಾಗದ ತಾಲೂಕುಗಳಲ್ಲಿ ಎಲೆಬಳ್ಳಿ ತೋಟಕ್ಕೆ ರಾಸಾಯನಿಕ ಔಷಧಿ ಸಿಂಪಡಿಸಬಾರದೆಂಬ ನಂಬಿಕೆಯಿದೆ. ಎಲೆಬಳ್ಳಿ ವಾಣಿಜ್ಯ ಬೆಳೆಯಾದರೂ ಗೌರಿಯ ಪ್ರತಿರೂಪವೆಂಬ ದೈವೀಭಾವವನ್ನು ಜನರು ಹೊಂದಿರುವುದೇ ಇದಕ್ಕೆ ಕಾರಣ.

ಯುಗಾದಿಯಲ್ಲಿ ಚಂದ್ರದರ್ಶನವಾದ ನಂತರ ಹಾಗೂ ದಸರ ಹಬ್ಬದಲ್ಲಿ ಬನ್ನಿ ಮುಡಿದ ನಂತರ ಹಿರಿಯರ ಕಾಲಿಗೆ ನಮಸ್ಕರಿಸಬೇಕೆಂಬ ನಂಬಿಕೆಯಿದೆ. ಇದು ಕಿರಿಯರಲ್ಲಿಯ ವಿನಯಶೀಲತೆ ಹಾಗೂ ಹಿರಿಯರಿಂದ ಪಡೆಯುವ ಆಶೀರ್ವಾದ ಮತ್ತು ಗೌರವಸೂಚಕವಾಗಿದೆ. ಹಬ್ಬದ ಸಮಯದಲ್ಲಿ ಹಿರಿಯರಿಗೆ ರಿಯರು ತಲೆಬಾಗಬೇಕೆಂಬ ನಂಬಿಕೆ ಇದಾಗಿದೆ. ಹೀಗೆ ಅನೇಕ ಸಾಮಾಜಿಕ ಮತ್ತು ಕೌಟುಂಬಿಕ ಮೌಲ್ಯಗಳು ನಂಬಿಕೆಗಳ ಮೂಲಕ ವ್ಯಕ್ತವಾಗುತ್ತವೆ.

ಒಂದು ಕಡೆ ದೇವರಲ್ಲಿ ನಂಬಿಕೆ, ಇನ್ನೊಂದೆಡೆ ಆಧುನಿಕತೆಯ, ವೈಚಾರಿಕತೆಯ ವಿಚಾರಧಾರೆಗಳು ಪ್ರಖರವಾಗುವಿಕೆ, ಈ ರೀತಿಯ ಆಕ್ರಮಣದ ಇಕ್ಕಟ್ಟಿನ ಸ್ಥಿತಿಯಲ್ಲಿ ಮಾನವನ ತೊಳಲಾಟವಿದೆ. ಆದರೂ ದೈವದ ಮೇಲಿನ ಭಕ್ತಿ ನಂಬಿಕೆಗಳು ಕಡಿಮೆಯಾಗಿಲ್ಲ ಎಂಬುದು ಗಮನಾರ್ಹ. ನಾಗರಿಕತೆ ಬದಲಾದಂತೆ ನಂಬಿಕೆ ಸಂಪ್ರದಾಯಗಳು ಬದಲಾಗುವುದು ಸೃಷ್ಟಿಯ ಸಹಜ ಗುಣ. ಆದರೂ ಮೂಲಭೂತವಾಗಿ ಜೀವನದಲ್ಲಿ ಅಳವಡಿಸಿಕೊಂಡ ಅಂಶಗಳು ಮಾತ್ರ ಅಳಿಯಲಾರವು. ಅವು ಸಾಂಪ್ರದಾಯಿಕವಾಗಿ ಅಂಗೀಕೃತವಾದ ಒಂದು ತಿಳುವಳಿಕೆಯಾಗಿ ಮುಂದುವರಿದು ಬಂದಿವೆ.

ಹಿಪೋಕ್ರೇಟ್ಸ್ ಹೇಳುವ ಹಾಗೆ 'ನಿಜವಾಗಿಯೂ ಅರಿತುಕೊಳ್ಳುವುದು ವಿಜ್ಞಾನ, ಸುಮ್ಮನೆ ಅರಿತಿದ್ದೇನೆಂದು ನಂಬಿಕೊಳ್ಳುವುದು ಅಜ್ಞಾನ' ಎನ್ನುವ ಮಾತನ್ನು ಗಮನದಲ್ಲಿಟ್ಟು ಜನಪದರು ಮೂಢಸಂಸ್ಕೃತಿಯ

ಪರಿಕಲ್ಪನೆಗಳನ್ನು ಬಿಟ್ಟು, ಅವುಗಳಲ್ಲಿಯ ಸತ್ಯಾಂಶಗಳನ್ನು ಹುಡುಕಿ, ಅಂತಹ ನಂಬಿಕೆಗಳನ್ನು ಗಟ್ಟಿಗೊಳಿಸುವುದು ಸೂಕ್ತ.

ಜನಪದ ಆಚರಣೆ ಕಾಲದೊಂದಿಗಿನ ಸಂಬಂಧ

ಜನಪದರಲ್ಲಿ ದೈನಂದಿನ ಆಚರಣೆಗಳು ವಿರಳ. ಯಾಕೆಂದರೆ ಅವರು ಶ್ರಮಿಕರು. ತಮಗೆ ಅನುಕೂಲವಾದ ಸಮಯದಲ್ಲಿ ಏರ್ಪಡುವ ಕಾಲಬದ್ಧ ಆಚರಣೆಗಳು ಹೆಚ್ಚು ಪ್ರಚಲಿತದಲ್ಲಿವೆ. ಹುಣ್ಣಿಮೆ, ಅಮವಾಸ್ಯೆ, ಸುಗ್ಗಿ, ಜಾತ್ರೆ, ಉತ್ಸವ ಹೀಗೆ ಪ್ರತಿಯೊಂದು ಆಚರಣೆಯು ಕಾಲ ಹಾಗೂ ಸನ್ನಿವೇಶದ ಹಿನ್ನೆಲೆಯಲ್ಲಿ ಅರ್ಥಪೂರ್ಣತೆಯನ್ನು ಪಡೆದುಕೊಂಡಿರುತ್ತವೆ. ಒಂದು ಕಾಲದಲ್ಲಿ ಮೌಲ್ಯಯುತವಾದ ಆಚರಣೆಗಳು ನಂತರದ ಸಮಯದಲ್ಲಿ ಕೀಳಾಗಿ ಕಂಡುಬರಲು ಸಾಧ್ಯವಿದೆ. ಅವು ಜೀವಂತವಿದ್ದಷ್ಟು ಕಾಲ ಕ್ರಿಯಾಶೀಲವಾಗಿರುತ್ತವೆ. ಕಾಲಬದ್ಧ ಆಚರಣೆಗಳು ಸಾಮೂಹಿಕವಾಗಿರುತ್ತವೆ. ಹಲವೊಮ್ಮೆ ಸಾಮೂಹಿಕ ಹಾಗೂ ಕೌಟುಂಬಿಕ ನೆಲೆಯಲ್ಲಿ ಏಕಕಾಲದಲ್ಲಿ ಪ್ರಕಟಗೊಳ್ಳುತ್ತಿರುತ್ತವೆ. ಪ್ರತಿಯೊಬ್ಬರದು ಒಂದೊಂದು ರೀತಿಯ ಭಾಗವಹಿಸುವಿಕೆ ಇರುತ್ತದೆ. ಊರೊಟ್ಟಿನ ಆಚರಣೆಗಳಲ್ಲಿ ಜಾತಿ, ವರ್ಗ, ಆರ್ಥಿಕ, ಸಾಮಾಜಿಕ ಅಂತರಗಳು ದೈವೀ ಆರಾಧನೆಯ ಹಿನ್ನೆಲೆಯಲ್ಲಿ ಪ್ರಕಟಗೊಳ್ಳುತ್ತವೆ.

ಸಿಡಿ ಉತ್ಸವಗಳು, ಕಾರಣಿಕೋತ್ಸವಗಳು, ಪುರುಷ ಹಾಗೂ ಸ್ತ್ರೀದೈವದ ಜಾತ್ರೆಗಳು, ಹಬ್ಬ, ಪರ್ವಗಳು ಕಾಲ ವಿಭಜನೆಯ ಆಚರಣೆಗಳಾಗಿವೆ. "ಮಾನವನ ಬಯಕೆಯ ಪೂರ್ಣತೆಗಾಗಿ ನಿರ್ದಿಷ್ಟ ಅವಧಿಯಲ್ಲಿ ಬಲಿ, ಎಡೆ, ವ್ರತ, ಸಮಾಧಿಗಳನ್ನು ಕೈಗೊಳ್ಳಬಹುದಾದ ಒಂದು ಕ್ರಿಯಾವಿಧಿಯಾಗಿದೆ".[೧೦] ಜೊತೆಗೆ ಆಯಾ ಊರಿನ ದೈವಗಳ ಸಾಂಸ್ಕೃತಿಕ ಮತ್ತು ಸಾಮೂಹಿಕ ಚಹರೆಗಳನ್ನು ಪ್ರಕಟಿಸುವ ಸಂಗತಿಗಳನ್ನು ಒಳಗೊಂಡಿರುತ್ತವೆ. ಇಂಥ ಕಾಲಬದ್ಧ ಆಚರಣೆಗಳ ಹಿಂದೆ ಸಮಷ್ಟಿಪ್ರಜ್ಞೆ ಅಡಕವಾಗಿರುತ್ತದೆ. ಪರಸ್ಪರ ಭಾಗವಹಿಸುವಿಕೆ, ಗ್ರಾಮ ನೈರ್ಮಲ್ಯ ಕಾಪಾಡುವಿಕೆ, ಧಾರ್ಮಿಕ ವಾತಾವರಣ, ಸಾಮೂಹಿಕ ಕ್ರಮ, ಮನೋರಂಜನೀಯ ಸಂದರ್ಭಗಳು ಇವೆಲ್ಲಾ ಮಾನವ ಸಂಬಂಧಗಳನ್ನು ಗಟ್ಟಿಗೊಳಿಸುವಲ್ಲಿ ಸಕ್ರಿಯ ಪಾತ್ರವಹಿಸುವಂಥವುಗಳಾಗಿರುತ್ತವೆ.

ಮಳೆ ಬಾರದಾದಾಗ, ಜನ ಜಾನುವಾರುಗಳು ರೋಗಗಳಿಗೆ ತುತ್ತಾದಾಗ ವಿಶೇಷವಾಗಿ ದೈವಗಳಿಗೆ ಎಲೆಪೂಜೆ, ಹೂವಿನಸೀರೆ, ವಿವಿಧ ಅಲಂಕಾರಗಳು, ಬೇವಿನ ಉಟಗಿ, ಮಡಿಲಕ್ಕಿ ಸೇವೆಗಳಂತಹ ಕಾಲಬದ್ಧ ಆಚರಣೆಗಳು ನೆರವೇರುತ್ತವೆ. ಸಾಂಕ್ರಾಮಿಕ ರೋಗಗಳು ಉಲ್ಬಣಿಸಿದಾಗ, ಹರಿದು ಹಾಳಾದ ಕಸದ ರಾಶಿಯನ್ನು ಅಮ್ಮನೆಂದು ಗಡಿ ದಾಟಿಸಲಾಗುತ್ತದೆ. ಈ ಸಮಯದಲ್ಲಿ ಗ್ರಾಮನೈರ್ಮಲ್ಯದೊಂದಿಗೆ, ರೋಗಬಾಧೆ ಕುಂಠಿತವಾಗಿಸುವ ಆಚರಣೆಗಳು ಪ್ರಚಲಿತದಲ್ಲಿರುತ್ತವೆ. ಅತಿವೃಷ್ಟಿ, ಅನಾವೃಷ್ಟಿಗಳಾದಾಗ ಮಳೆಸಂಬಂಧಿ ಆಚರಣೆಗಳು ಏರ್ಪಡುತ್ತವೆ. ಬೆಳೆ ಕಾಳುಕಟ್ಟುವ ಕಾಲವಾದ ಎಳ್ಳಮವಾಸ್ಯೆ, ಜೋಕುಮಾರನ ಹಬ್ಬ, ಸೀಗೆ ಹುಣ್ಣಿಮೆಯಲ್ಲಿ ಚರಗ ಚೆಲ್ಲುವ ಸಂಪ್ರದಾಯವಿದೆ. ಇದರ ಮೂಲಕ ಹೊಲದ ಬೆಳೆಗಳು ಆಯಾ ಹಂತದಲ್ಲಿ ಇದ್ದಾಗ ಕೀಟ ಬಾಧೆಯನ್ನು ನಿಯಂತ್ರಿಸುವ ತಂತ್ರಗಾರಿಕೆಯಾಗಿದೆ. ಬೆದರು ನಿಲ್ಲಿಸುವುದರ ಮೂಲಕ ಕಾಳು ತಿನ್ನಲು ಆಗಮಿಸುವ ಪಕ್ಷಿಗಳನ್ನು ನಿಯಂತ್ರಿಸಲಾಗುತ್ತದೆ. ಹೀಗೆ ಜನಪದರು ದೂರದೃಷ್ಟಿಯುಳ್ಳವರು;

'ಉಗುರಿನಲ್ಲಿ ಹೋಗುವುದಕ್ಕೆ ಕೊಡಲಿ ತೆಗೆದುಕೊಳ್ಳುವವರಲ್ಲ'. ಅಂದರೆ ಸಮಸ್ಯೆಯನ್ನು ಬೆಳೆಸುವವರಲ್ಲ. ಕಾಲಮಾನಕ್ಕೆ ಅನುಗುಣವಾಗಿ ಜನ, ಜಾನುವಾರು, ಬೆಳೆ ಇತ್ಯಾದಿಗಳಿಗೆ ಬರುವ ಸಾಮಾನ್ಯ ರೋಗ ಇತ್ಯಾದಿಗಳು ಬೆಳೆಯುವ ಮೊದಲೇ ಬೇರು ಸಹಿತ ಕಿತ್ತು ಹಾಕುವ ರೀತಿ-ನೀತಿಗಳು ಅವರ ಅನುಭವಕ್ಕೆ ಸಾಕ್ಷಿಯಾಗಿದೆ.

ಆಚರಣೆ, ನಂಬಿಕೆಗಳು ಕಾಲದೊಂದಿಗೆ ತಳುಕು ಹಾಕಿಕೊಂಡಿರುತ್ತವೆ. ಯುಗಾದಿಯ ಚಂದ್ರದರ್ಶನದಿಂದ ಆ ವರ್ಷದ ಲಾಭ, ನಷ್ಟಗಳ ಭವಿಷ್ಯ ನಿರ್ಧರಿಸಲಾಗುತ್ತದೆ. ಆ ದಿನದ ಚಂದ್ರನಲ್ಲಿಯ ಏರುಪೇರುಗಳು ಜನಪದರ ಮೌಖಿಕ ಅರ್ಥಕೋಶದಲ್ಲಿ ಅನುಭವಯುಕ್ತ ಅರ್ಥವಿವರಣೆ ನೀಡುತ್ತವೆ. ಮಳೆಯ ವೈಪರೀತ್ಯ, ಹವಾಮಾನದ ಪರಿಸ್ಥಿತಿ, ಜೈವಿಕ ಪರಿಸರದ ನಿಖರ ಮಾಹಿತಿ ಹೀಗೆ ಇಡೀ ವರ್ಷದಲ್ಲಿ ಕೃಷಿಕರು ವಹಿಸಬೇಕಾದ ಜಾಗೃತಿಯ ಬಗ್ಗೆ ಬೆಳಕು ಚೆಲ್ಲುವುದು ಇದರ ಮುಖ್ಯ ಉದ್ದೇಶವಾಗಿದೆ. ಆದರೆ ಚೌತಿಯ ಚಂದ್ರನನ್ನು ನೋಡುವುದು ಅಶುಭ ಸೂಚಕವಾಗಿದೆ. "ಒಂದು ಕಾಲಕ್ಕೆ ಬೇಕಾದ ನಂಬಿಕೆ ಮತ್ತೊಂದು ಕಾಲಕ್ಕೆ ಬೇಕಾಗದಿದ್ದಾಗ, ಆ ಕಾಲ ಅಂಥ ನಂಬಿಕೆಗಳನ್ನು ತೆಗೆದುಹಾಕುತ್ತದೆ. ತನ್ನ ಕಾಲಕ್ಕೆ ಬೇಕಾದ ನಂಬಿಕೆಗಳನ್ನು ಸೃಷ್ಟಿಸಿಕೊಳ್ಳುತ್ತಾ ಹೋಗುವುದೇ ಕಾಲದ ಗುಣಲಕ್ಷಣವಾಗಿದೆ".[೧೯] ಹಲವೊಮ್ಮೆ ಕಾಲಮಾನಕ್ಕೆ ಅನುಗುಣವಾಗಿ ಸರಿ-ಬೆಸ ಸಂಖ್ಯೆಗಳು ಶುಭ, ಅಶುಭದ ಸಂಕೇತಗಳಾಗುತ್ತವೆ. ಅತಿಯಾದ ಕಾಮದಿಂದ ಸಮುದಾಯವನ್ನು ತಲ್ಲಣಗೊಳಿಸಿದ ಜೋಕುಮಾರನ ಹುಟ್ಟಿನ ಸಮಯ ಏಳು ದಿನಗಳು. ಆಚರಣೆಗಳಲ್ಲಿ ಏಳು ಅಶುಭ ಸೂಚಕವಾಗಿದೆ. ಗಣಪನ ಕೈಯಲ್ಲಿ ಧಾನ್ಯದ ತೆನೆ, ಕಡುಬು, ಕೃಷಿ ಸಲಕರಣೆಗಳಿರುವುದು ಆ ಸಮಯವನ್ನು ವಿವರಿಸುವ ಸಾಂಕೇತಿಕತೆಯಾಗಿದೆ. ಕೃಷಿ ಚಟುವಟಿಕೆಗಳು ನೆರವೇರುವ ಕಾಲದಲ್ಲಿ ಗಣಪನ ಆಚರಣೆ ನೆರವೇರುವುದು ಈ ಮಾತಿಗೆ ಸಾಕ್ಷಿ.

'ರೋಣಿ ಮಳೆಗೆ ಓಣಿಯೆಲ್ಲಾ ಜೋಳ', 'ಹದನೋಡಿ ಹರಗಬೇಕು, ಬೆದೆ ನೋಡಿ ಬಿತ್ತಬೇಕೆಂಬ' ಜನಪದರ ಮಾತುಗಳು ಮಳೆಯ ನಕ್ಷತ್ರದಿಂದ ಬಿತ್ತುವ ಕಾಲವನ್ನು ನಿಗದಿಪಡಿಸಿಕೊಂಡಿರುವುದು ಕಂಡುಬರುತ್ತದೆ. ಕಾಲಮಾನಕ್ಕೆ ಅನುಗುಣವಾಗಿ ಬಿತ್ತಿದಾಗ ಬೀಜ ಚೆನ್ನಾಗಿ ನಾಟುತ್ತವೆ. ಬೆಳೆ ಸದೃಢವಾಗುತ್ತದೆಂಬುದು ಈ ಮಾತಿನ ಹಿಂದಿರುವ ವೈಜ್ಞಾನಿಕ ಕಾರಣ.

ಯುಗಾದಿಯ ಪಾಡ್ಯದ ದಿನ ಎತ್ತು ಕಟ್ಟಿ, ನೇಗಿಲನ್ನು ಪೂರ್ವ ದಿಕ್ಕಿಗೆ ಹೂಡುತ್ತಾರೆ. ಅಂದು ಗ್ರಾಮದೇವತೆಗೆ ಪೂಜೆ ಸಲ್ಲಿಸಿ ಹೊಲದ ಒಂದು ಮೂಲೆಯಲ್ಲಿ ಬೀಜ ಹಾಕಿ ಪೂಜಿಸುತ್ತಾರೆ. ಮುಂದೆ ಹದ ನೋಡಿ ಮಳೆ ಬಿದ್ದಾಗ ಬಿತ್ತುವ ಸಂಪ್ರದಾಯವಿದೆ. ಆಕಾಶದಲ್ಲಿ ಮೋಡಗಳಾಗುವುದು, ಬಿತ್ತನೆ ಕಾರ್ಯಕ್ಕೆ ಸಿದ್ಧತೆಯಾಗಲು ರೈತರಿಗೆ ನೀಡುವ ಮುನ್ಸೂಚನೆಯಾಗಿದೆ. ಹೀಗೆ ಪ್ರಕೃತಿಯಲ್ಲಾಗುವ ಬದಲಾವಣೆಗಳು ಕಾಲಮಾನಕ್ಕೆ ಅನುಗುಣವಾಗಿ ಆಚರಣೆಯ ಮುಖೇನ ಅರ್ಥ ಕಂಡುಕೊಳ್ಳುತ್ತವೆ.

ದೈವಗಳ ಆಚರಣೆಗಳು ಮಳೆಯ ಕಾಲಮಾನವನ್ನು ಸಂಕೇತಿಸುತ್ತವೆ. ಮುಂಗಾರಿನ ಮಳೆಯ ಅವಶ್ಯಕತೆಯನ್ನು ಕಾಮಣ್ಣ ಸಂಕೇತಿಸಿದರೆ, ಮಳೆಗಾಲದ ಮಧ್ಯಾವಧಿಯನ್ನು ಜೋಕುಮಾರ ಸಂಕೇತಿಸುತ್ತಾನೆ. ಕಾಲ ಮತ್ತು ಆಚರಣೆಗಳು ಆಯಾ ಸಮುದಾಯದ ನಂಬಿಕೆ, ನಿಷೇಧ, ಸಂಪ್ರದಾಯ ಆಚರಣೆಗಳಿಗೆ ಅನುಗುಣವಾಗಿರುತ್ತವೆ. ಉಡುಗೆ, ತೊಡುಗೆ, ಆಭರಣ, ಆಹಾರಗಳು ಆಯಾ ಕಾಲಘಟ್ಟಕ್ಕೆ ಅನುಗುಣವಾಗಿ

ಸಂಸ್ಕೃತೀಕರಣಗೊಳ್ಳುತ್ತಿರುತ್ತವೆ. ಜನಪದರ ಆಚರಣೆಗಳು ಕಾಲದೊಂದಿಗೆ ಬೆಸುಗೆಯಾಗಿವೆ. ಈ ಕಾಲ ಫಲವತ್ತತೆಯ ಕಾಲವಲ್ಲ, ಸಾಮಾಜಿಕವಾಗಿ, ಧಾರ್ಮಿಕವಾಗಿ ಅಪವಿತ್ರ ಕಾಲ, ಆರ್ಥಿಕವಾಗಿ ದುರ್ಭಿಕ್ಷೆಯ ಕಾಲ, ಹವಾಮಾನದ ದೃಷ್ಟಿಯಿಂದ ಕೆಟ್ಟಕಾಲ, ರೋಗರುಜಿನಗಳು ಬರುವ ಕಾಲ. ಈ ರೀತಿಯಾಗಿ ಸಂದರ್ಭವನ್ನು ಲೆಕ್ಕಾಚಾರ ಹಾಕಿ ಆಚರಣೆಗಳಿಗೆ ಸಮಯ ನಿರ್ಧರಿಸಿಕೊಳ್ಳುತ್ತಾರೆ. ಜನಪದರ ಪ್ರಕಾರ ಅಪವಿತ್ರ ಕಾಲವೆಂದರೆ ಲೌಕಿಕ ವ್ಯವಹಾರಗಳಿಗೆ ಧಕ್ಕೆಯಾಗುವಂಥದ್ದು. ಉದಾಹರಣೆಗೆ ಶ್ರಾವಣಮಾಸ ಆಚರಣೆ, ಆರಾಧನೆಗಳಿಗೆ ಶುಭದ ಕಾಲವಾಗಿದೆ. ಆಷಾಢಮಾಸ ಅಶುಭದ ಮಾಸವಾಗಿದೆ. ಯಾವ ಪಂಚಾಂಗ, ಕ್ಯಾಲೆಂಡರುಗಳ ಸಹಾಯವಿಲ್ಲದೆ ಆಚರಣೆಯ ನಿಗದಿತ ದಿನವನ್ನು ಗೊತ್ತುಪಡಿಸಿಕೊಳ್ಳುವ ಪಾರಂಪರಿಕ ಜ್ಞಾನ ಜನಪದರದ್ದಾಗಿದೆ. ಇಂಥ ಲೆಕ್ಕಾಚಾರಗಳನ್ನು ಅನುಕ್ರಮವಾಗಿಸಲು ಸಂವತ್ಸರದ ಮೊದಲ ಹಬ್ಬವಾದ ಯುಗಾದಿ ಹಾಗೂ ಹುಣ್ಣಿಮೆ ಅಮಾವಾಸ್ಯೆಗಳು ಸಹಾಯಕವಾಗುತ್ತವೆ. ಜಾತ್ರೆ, ಉತ್ಸವಗಳು ಜನವರಿಯಿಂದ ಮಾರ್ಚ್ ತಿಂಗಳಲ್ಲಿ ಹೆಚ್ಚು ಪ್ರಚಲಿತದಲ್ಲಿ ಇರುತ್ತವೆ. ರೈತರಿಗೆ ಕೃಷಿ ಕೆಲಸ ಮುಕ್ತಾಯಗೊಂಡ ಬಿಡುವಿನ ಕಾಲ ಇದಾಗಿದೆ. ಇಂದು ಸಂವತ್ಸರ, ಋತು, ಮಾಸ, ನಕ್ಷತ್ರಗಳನ್ನು ನೋಡಿ ಕೆಲಸ ಕಾರ್ಯಗಳನ್ನು ಮಾಡುವ ರೂಢಿ ಕಣ್ಮರೆಯಾಗುತ್ತಿದ್ದು, ಇಸವಿ, ತಿಂಗಳು, ವರ್ಷಗಳ ಬಳಕೆ ಹೆಚ್ಚಾಗುತ್ತಿದೆ.

ಕೃಷಿಕರ ಜೀವನವು ಮಳೆಯ ಆವರ್ತನೆಗೆ ಹೊಂದಿಕೊಂಡಿದೆ. ಮಳೆಗಾಲದಲ್ಲಿ ಬರುವ ಕೃಷಿ ಚಟುವಟಿಕೆಗಳು ಚಳಿಗಾಲದಲ್ಲಿ ಮುಂದುವರಿದು, ಬೇಸಿಗೆಯ ವೇಳೆಗೆ ಮುಕ್ತಾಯಗೊಳ್ಳುತ್ತವೆ. ಈ ಕೃಷಿ ಚಟುವಟಿಕೆಗಳಿಗೆ ಅನುಗುಣವಾಗಿ ಹಬ್ಬ, ಆಚರಣೆಗಳು ನೆರವೇರುತ್ತವೆ. ಕೃಷಿಕರ ಸಂಪೂರ್ಣ ಆಚರಣೆಗಳು ಕೃಷಿ ವೇಳಾಪಟ್ಟಿಗೆ ಅನುಗುಣವಾಗಿರುತ್ತವೆ. ಯುಗಾದಿ ಹಬ್ಬವು ವರ್ಷದ ಮೊದಲ ಕೃಷಿ ಚಟುವಟಿಕೆಯ ಪ್ರಾರಂಭಿಕ ಕಾಲ. ಕೃಷಿಕರ ಮಿತ್ರನಾದ ಎತ್ತುಗಳ ಪೂಜೆ ಬಸವನಿಗೆ ಸಂಬಂಧಿಸಿದ ಆಚರಣೆಗಳಲ್ಲಿ ನೆರವೇರುತ್ತವೆ. ಮಳೆಗಾಲದಲ್ಲಿ ಹರಿದಾಡುವ ಹಾವುಗಳನ್ನು ಪೂಜಿಸುವುದರೊಂದಿಗೆ ಬೆಳೆಯ ಸಂಭ್ರಮವನ್ನು ನಾಗರಪಂಚಮಿಯಲ್ಲಿ ಕಾಣುತ್ತಾರೆ. ಮಳೆದೇವರಾದ ಜೋಕುಮಾರ ಹಾಗೂ ಆತನ ತಾಯಿ ಎಳೆಗೌರಿಯನ್ನು ಗೌರಿಹಬ್ಬದಲ್ಲಿ ಆಚರಣೆಯ ಮುಖೇನ ಬರಮಾಡಿಕೊಳ್ಳುತ್ತಾರೆ. ವಿಜಯದಶಮಿಯಲ್ಲಿ ಎಳೆತೆನೆಗಳನ್ನು ವಿಜಯದ ಸಂಕೇತವೆಂದು ತಿಳಿಯುತ್ತಾರೆ. ಕೊಯ್ಲು ಪ್ರಾರಂಭಿಸುವ ಮುನ್ನ ಕೃಷಿ ಉಪಕರಣಗಳ ಸ್ವಚ್ಛತೆ ಹಾಗೂ ಅವುಗಳ ಸುಸ್ಥಿತಿಯನ್ನು ಹಟ್ಟಿ ಹಬ್ಬದಲ್ಲಿ ತಿಳಿದುಕೊಳ್ಳುತ್ತಾರೆ. ಜಾನುವಾರುಗಳ ಜೊತೆ ಸಗಣಿಯಿಂದ ಮಾಡಿದ ಹಟ್ಟಿಲಕ್ಕವ್ವಳನ್ನು ಪೂಜಿಸುತ್ತಾರೆ. ಮಾಘಮಾಸದಲ್ಲಿ ಚರಗ ಚೆಲ್ಲುವುದರ ಮೂಲಕ ಭೂಮಿ ತಾಯಿಗೆ ಬಲಿ ನೀಡಿ ಫಲವಂತಿಕೆಯನ್ನು ಹೆಚ್ಚಿಸಿಕೊಳ್ಳುತ್ತಾರೆ. ಸಂಕ್ರಾಂತಿಯಲ್ಲಿ ಜಾನುವಾರುಗಳಿಗೆ ರೋಗಗಳು ಬಾರದಂತೆ ಸ್ವಚ್ಛಗೊಳಿಸಿ ಕಿಚ್ಚು ಹಾಯಿಸುತ್ತಾರೆ. ಗುಡಿಹುಣ್ಣಿಮೆಯಲ್ಲಿ ಆಚರಣೆಯ ನೆಪದಲ್ಲಿ ಬಿತ್ತನೆ ಬೀಜಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಶಿವರಾತ್ರಿಯಲ್ಲಿ ಭಜನೆ, ಪುರಾಣ ಕಾರ್ಯಕ್ರಮಗಳಿಂದ ದೈವಾರಾಧನೆಯನ್ನು ನೆರವೇರಿಸುತ್ತಾರೆ. ಹೀಗೆ ಸಾರ್ವತ್ರಿಕವಾಗಿ ಆಚರಿಸಲ್ಪಡುವ ಆಚರಣೆಗಳೆಲ್ಲವೂ ಕಾಲಮಾನದೊಂದಿಗೆ ಗಾಢವಾದ ಸಂಬಂಧ ಹೊಂದಿರುತ್ತವೆ. ಈ ಎಲ್ಲಾ ಆಚರಣೆಗಳ ಮೂಲ ಆಶಯ ಧಾನ್ಯ ಮತ್ತು ಪಶುಸಂಪತ್ತು ಸಮೃದ್ಧಿಯಾಗಬೇಕು. ಜನ-ಜಾನುವಾರುಗಳು ರೋಗಮುಕ್ತವಾಗಬೇಕು. ಕ್ರೂರ ಮೃಗಗಳೊಂದಿಗೆ ಸಮನ್ವಯ ಸಾಧಿಸಬೇಕು ಎನ್ನುವ ವಾಸ್ತವಾಂಶಗಳಿಂದ ಕೂಡಿದುದಾಗಿದೆ.

ಒಂದೊಂದು ಋತುವಿನಲ್ಲಿ ಹಬ್ಬ, ಆಚರಣೆಗಳಲ್ಲಿ ಒಂದೊಂದು ನಿರ್ದಿಷ್ಟ ಹೂ ಪತ್ರೆಗಳ ಬಳಕೆ ಹಾಗೂ ಆಹಾರ ಕ್ರಮಗಳಿರುತ್ತವೆ. ಹೊಸ ವರ್ಷದ ಆರಂಭ ಬಿಸಿಲ ತಾಪ ಹೆಚ್ಚಾಗುತ್ತಿರುವ ಬೇಸಿಗೆ ಕಾಲ. ಈ ಸಮಯದಲ್ಲಿ ದೇಹಬಾಧೆಯನ್ನು ನಿಯಂತ್ರಿಸಲು ಸುಲಭ ಲಭ್ಯವಾದ ರೋಗ ನಿರೋಧಕತೆಯನ್ನು ಹೆಚ್ಚಿಸುವ ಬೇವು, ಬೆಲ್ಲವನ್ನು ಕಡ್ಡಾಯಗೊಳಿಸಲಾಗಿದೆ. ಮಳೆಗಾಲ, ಚಳಿಗಾಲದಲ್ಲಿ ಬರುವ ಆಚರಣೆಗಳಲ್ಲಿ ದೇಹವನ್ನು ಬೆಚ್ಚಗಿಡುವ, ವಾತ, ಪಿತ್ತ, ಕಫದೋಷಗಳನ್ನು ಸಮಸ್ಥಿತಿಯಲ್ಲಿಡುವ ಹಾಗೂ ದೇಹಕ್ಕೆ ಪುಷ್ಠಿ ಕೊಡುವ ಆಹಾರ ಪದಾರ್ಥಗಳು ಬಳಕೆಯಾಗುತ್ತವೆ. "ಸುಗ್ಗಿಯ ಸಮಯದಲ್ಲಿ ಜೀರ್ಣದೋಷಗಳ ತೊಂದರೆ ನಿವಾರಿಸುವ ಆಹಾರ ಕ್ರಮಗಳಿರುತ್ತವೆ. ಹೊಸ ಧಾನ್ಯಗಳ ಬಳಕೆ ಈ ಸಮಯದಲ್ಲಾಗುತ್ತದೆ".[೨] ಹೀಗೆ ಕಾಲಮಾನಕ್ಕೆ ಅನುಗುಣವಾಗಿ ಆರೋಗ್ಯವನ್ನು ಸಮಸ್ಥಿತಿಯಲ್ಲಿಡುವ ತಂತ್ರಗಾರಿಕೆಗಳು ಆಚರಣೆಯಲ್ಲಿ ಬಳಕೆಯಾಗುತ್ತವೆ.

ಟಿಪ್ಪಣಿಗಳು

೧. ಉದ್ಧೃತ : ಪುರುಷೋತ್ತಮ ಬಿಳಿಮಲೆ, ೨೦೦೮, ಜನ ಸಂಸ್ಕೃತಿ, ಪು. ೫೦.

೨. ಡಾ. ಎಂ.ಜಿ. ಈಶ್ವರಪ್ಪ, ೧೯೯೯, ಜಾನಪದ ಇಬ್ಬನಿಗಳು, ಪು. ೫೦.

೩. ಡಾ. ರಂಗಾರೆಡ್ಡಿ ಕೋಡಿರಾಂಪುರ, ೨೦೧೦, ಜನಪದ ಸಂಸ್ಕೃತಿ, ಪು. ೯೨.

೪. ಡಾ. ಬಿ. ಶಿವರಾಮಶೆಟ್ಟಿ, ೨೦೦೦, ಸಸ್ಯ ಜಾನಪದ, ಪು. ೬.

೫. ಉದ್ಧೃತ : ಜಿ.ವಿ. ದಾಸೇಗೌಡ (ಸಂ), ೧೯೭೩, ನಮ್ಮ ಜನಪದ ನಂಬಿಕೆಗಳು, ಪು. ೧೭.

೬. ಮಂಜುನಾಥ ಬೇವಿನಕಟ್ಟಿ, ೨೦೦೭, ಕನ್ನಡ ಜನಪದ ನಂಬಿಕೆಗಳು, ಪು. ೧೩೭.

೭. ರಮೇಶ್ ಸ.ಚಿ., ೨೦೦೮, ಕರಾವು, ಪು. ೧೩.

೮. ಜೀನಹಳ್ಳಿ ಸಿದ್ಧಲಿಂಗಪ್ಪ, ೧೯೮೨, ಜಾನಪದ ಸಂಯೋಜನೆ, ಪು. ೬೬.

೯. ಕೆ.ವೈ. ನಾರಾಯಣಸ್ವಾಮಿ, ೨೦೦೦, ನೀರದೀವಿಗೆ, ಪು. ೭೩.

೧೦. ಡಾ. ವೀರೇಶ ಬಡಿಗೇರ, ೨೦೦೯, ಸಂಸ್ಕೃತಿ ಸಂಕಥನ, ಪು. ೨೧೯.

೧೧. ಮಂಜುನಾಥ ಬೇವಿನಕಟ್ಟಿ, ೧೯೯೯, ಜನಪದ ನಂಬಿಕೆಗಳು, ಪು. ೫.

೧೨. ಸೋಮಶೇಖರ ಬಿ.ಎಸ್., ೨೦೦೮, ಆಹಾರ ಮತ್ತು ಆರೋಗ್ಯ, ಪು. ೯೫.

□□□

ಅಧ್ಯಾಯ : ಮೂರು

ಪ್ರಕೃತಿ ಸಂಬಂಧಿ ಆಚರಣೆಗಳು

೩.೧. ನೆಲ ಸಂಬಂಧಿ ಆಚರಣೆಗಳು

- ೩.೧.೧. ಕುಂಭೋತ್ಸವ
- ೩.೧.೨. ಮಣ್ಣಿನ ಮಗ ಗಣಪ
- ೩.೧.೩. ತೊಗೆ ರೊಟ್ಟಿ ಚೆನ್ನಮ್ಮನ ಆಚರಣೆ
- ೩.೧.೪. ಗುಡಿ ಹುಣ್ಣಿಮೆ ಆಚರಣೆ

೩.೨. ಜಲ ಸಂಬಂಧಿ ಆಚರಣೆಗಳು

- ೩.೨.೧. ಭರಮಪ್ಪನ್ನ ಮಾಡೋದು (ಗುರ್ಜಿಪೂಜೆ)
- ೩.೨.೨. ಮಳೆ ಬೀಜ ತರುವುದು
- ೩.೨.೩. ಮಳೆಸ್ವಾಮಿ ಗದ್ದುಗೆ ಪೂಜೆ
- ೩.೨.೪. ಕಪ್ಪೆ, ಕತ್ತೆಗಳ ಮದುವೆ ಆಚರಣೆ
- ೩.೨.೫. ಪರ್ಜನ್ಯ ಪೂಜೆ
- ೩.೨.೬. ಮಳೆ ನಿಲ್ಲಿಸುವ ಆಚರಣೆಗಳು
- ೩.೨.೨. ಕಾಲ್ನಡಿಗೆಯಲ್ಲಿ ಹಂಪಿಗೆ ಯಾತ್ರೆ
- ೩.೨.೩. ತೆಪ್ಪೋತ್ಸವ
- ೩.೨.೪. ಹೋಳಿ ಹಬ್ಬ (ಕಾಮನ ಹಬ್ಬ)
- ೩.೨.೫. ಸ್ವರ್ಣಗೌರಿ (ಗೌರಿಹಬ್ಬ)
- ೩.೨.೬. ಜೋಕುಮಾರನ ಆಚರಣೆ
- ೩.೨.೭. ಶಿಖರಕ್ಕೆ ತೈಲಾಭಿಷೇಕ
- ೩.೨.೮. ವಟ್ಟು ಬಡಿಯುವ ಆಚರಣೆ

೩.೩. ಅಗ್ನಿ ಸಂಬಂಧಿ ಆಚರಣೆ

೩.೩.೧. ದೊಡ್ಡ ಗೌರಿ ಹುಣ್ಣಿಮೆ (ಕೊಂತಿ ಪೂಜೆ)

೩.೩.೨. ಕೆಂಡ ತೂರುವ ಆಚರಣೆ (ಭಗ್ಗೋಬಳೇಶ್ವರನ ಗುಗ್ಗರಿ ಜಾತ್ರೆ)

೩.೩.೩. ಕೊಂಡ ಹಾಯುವ ಆಚರಣೆ

೩.೩.೪. ಮೊಹರಂ ಆಚರಣೆ

೩.೩.೫. ಹಟ್ಟಿಹಬ್ಬದಲ್ಲಿಯ ಆಚರಣೆಗಳು

೩.೪. ಗಾಳಿ ಸಂಬಂಧಿ ಆಚರಣೆಗಳು

೩.೪.೧. ಗುಳೆ ಲಕ್ಕಮ್ಮನ ಜಾತ್ರೆ

೩.೪.೨. ಅಮ್ಮನ ಕಳಿಸುವ ಆಚರಣೆ

ಅಧ್ಯಾಯ : ಮೂರು

ಪ್ರಕೃತಿ ಸಂಬಂಧಿ ಆಚರಣೆಗಳು

ಪೀಠಿಕೆ

'ಪ್ರಕೃತಿ' ಎಂಬ ಶಬ್ದಕ್ಕೆ ಸಹಜವಾದ ಸ್ಥಿತಿಯಲ್ಲಿರುವುದು, ಸ್ವಭಾವ, ನಿಸರ್ಗ, ಪರಿಸರ ಹೀಗೆ ವಿಶಾಲಾರ್ಥಗಳಿವೆ. ಜೀವರಾಶಿಗಳೆಲ್ಲವೂ ಈ ಪ್ರಕೃತಿಯೊಳಗೆ ಸೇರಿಕೊಂಡಿವೆ. ಕೇವಲ ಗಿಡ-ಮರ, ಪ್ರಾಣಿ-ಪಕ್ಷಿಗಳು ಮಾತ್ರವಲ್ಲ ಮಾನವನನ್ನೂ ಸೇರಿಸಿಕೊಂಡಂತೆ ಜಗತ್ತಿನ ಚರಾಚರಗಳೆಲ್ಲವೂ ಸೇರಿ ಪ್ರಕೃತಿಯಾಗಿದೆ, ಪರಿಸರವಾಗಿದೆ. ಹಾಗಾಗಿ ಇತರೆ ಜೀವಿಗಳಂತೆಯೇ ಮಾನವನ ಮತ್ತು ಪ್ರಕೃತಿಯ ನಡುವೆ ನಿಕಟವಾದ ಸಂಬಂಧವಿದೆ. ಈ ಹಿನ್ನೆಲೆಯಿಂದಲೇ ಅನೇಕ ಸಾಹಿತ್ಯದಲ್ಲಿ ಮನುಷ್ಯನನ್ನು ತಾಯಿ ಮತ್ತು ಮಗುವಿನ ಸಂಬಂಧಕ್ಕೆ ಹೋಲಿಸಲಾಗಿದೆ. ಪ್ರಕೃತಿಯಿಲ್ಲದ ಮಾನವನ ಜೀವನವನ್ನು ಊಹಿಸಲು ಸಾಧ್ಯವಿಲ್ಲ. ಅದರ ಆಧಾರವಿಲ್ಲದೆ, ನೆರವಿಲ್ಲದೆ ಜಗತ್ತಿನ ಯಾವುದೇ ಜೀವಿಯೂ ಬದುಕಲಾರದು. ಈ ಕಾರಣದಿಂದಲೇ ಮಾನವನಿಗೆ ಪ್ರಕೃತಿ ನಿಗೂಢವಾಗಿ, ಕೌತುಕವಾಗಿ ಮತ್ತು ಶಕ್ತಿಯುತವಾಗಿ ಕಂಡಿದೆ. ಪ್ರಕೃತಿಯಲ್ಲಾಗುವ ಬದಲಾವಣೆಗಳನ್ನು ಬೆರಗುಗಣ್ಣಿನಿಂದಲೇ ನೋಡಿದ ಮಾನವ ಪ್ರಕೃತಿಯನ್ನು ಆರಾಧಿಸುತ್ತಾ ಒಲಿಸಿಕೊಂಡು ಜೀವನ ಸಾಗಿಸಲು ಪಣತೊಟ್ಟ. ಅದರಲ್ಲಿ ಯಶಸ್ವಿಯೂ ಆದ. ಸುಗಮ ಜೀವನಕ್ಕಾಗಿ ಪ್ರಕೃತಿಯನ್ನು ಬಳಸಿಕೊಂಡ ಮಾನವ ಪ್ರಕೃತಿಯನ್ನೇ ಸೋಲಿಸುವ ಹಂತಕ್ಕೆ ಬಂದಿರುವುದು ಗಮನಾರ್ಹ. ಹಾಗಾದರೆ ಆರಂಭದಲ್ಲಿ ಪ್ರಕೃತಿಯನ್ನು ಮಾನವ ಯಾವ ತೆರನಾಗಿ ಆರಾಧಿಸಿದ, ಪೂಜಿಸಿದ ಎನ್ನುವುದು ಮುಖ್ಯವಾಗುತ್ತದೆ. ಪ್ರಕೃತಿ - ಪರಿಸರಕ್ಕೆ ಧಕ್ಕೆ ಮಾಡುವ ಶಕ್ತಿ ಮನುಷ್ಯನಿಗಿದೆ. ಹಾಗೆಯೇ ಅದನ್ನು ಸರಿಪಡಿಸುವ, ಪುನರುಜ್ಜೀವನಗೊಳಿಸುವ ಸಾಮರ್ಥ್ಯವೂ ಮನುಷ್ಯನಿಗಿದೆ. ಈ ನಿಟ್ಟಿನಲ್ಲಿ ಕಾಲಕಾಲಕ್ಕೆ ಬದಲಾವಣೆಗೊಳಪಡುತ್ತಿರುವ ಪ್ರಕೃತಿ ಪರಿಸರದ ಸಮತೋಲನದ ಬಗ್ಗೆ ಚಿಂತಿಸಬೇಕಾಗಿದೆ. ಪೂರಕವಾದ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕಾಗಿದೆ.

ಆದಿಕಾಲದಲ್ಲಿ ಮಾನವನಿಗೆ ಪ್ರಕೃತಿಯಲ್ಲಿಯ ಗುಡುಗು, ಮಿಂಚು, ಸಿಡಿಲು, ಭೂಕಂಪ, ಜ್ವಾಲಾಮುಖಿ ಮುಂತಾದುವು ಸುಪ್ತಶಕ್ತಿಯ ಅದ್ಭುತ ರೂಪಗಳಾಗಿ ಕಂಡವು. ಹೀಗೆ ಭೌತಿಕ ವಸ್ತುಗಳು ನಿಗೂಢವಾದಂತೆಲ್ಲಾ, ಆ ನಿಗೂಢತೆಯನ್ನು ಅರಿಯುವುದು, ಅದರೊಂದಿಗೆ ಒಂದಾಗುವುದು ಹಾಗೂ ಅವುಗಳಿಂದ ಆಶ್ರಯ ಪಡೆಯುವುದು ಮಾನವನಿಗೆ ಅನಿವಾರ್ಯವಾಗಿತ್ತು. ನಿಸರ್ಗದ ಬಾಹ್ಯ ರೂಪದ ವಸ್ತುಗಳ ಒಳಗಿನ ಚೈತನ್ಯವೇ ದೈವಗಳಾದವು. ಹೀಗೆ ಆರಾಧನೆಯ ಹಿಂದಿರುವ ಭಯವೇ ಭಕ್ತಿಯ ಸ್ವರೂಪ ಪಡೆಯಿತು. ಮಾನವ ಸಹಜವಾಗಿ ಪ್ರಕೃತಿ ಪ್ರೇಮಿಯಾದ. ಅಲ್ಲಿಯ ಒಡನಾಟದಲ್ಲಿಯೇ ಅವನ ಬದುಕಿನ ಸಂಸ್ಕೃತಿ ರೂಪ

ಪಡೆಯಿತು. ದೈವದ ಕಲ್ಪನೆ, ಆಚರಣೆ, ನಂಬಿಕೆಗಳೆಲ್ಲವೂ ಪರಿಸರದಿಂದ ಪ್ರೇರಿತವಾದವುಗಳಾಗಿವೆ. ಹಿಂದಿನಿಂದ ಇಲ್ಲಿಯವರೆಗೂ ಜನಪದರ ಜೀವನ ನಿಸರ್ಗಮುಖಿಯಾಗಿದ್ದು, ತಮಗೆ ನಿಕಟವಾದ ಪ್ರಕೃತಿಯನ್ನು ತಮ್ಮ ಜೀವನದ ಅವಿಭಾಜ್ಯ ಅಂಗವಾಗಿಸಿಕೊಂಡಿದ್ದಾರೆ.

ಮೊದಲು ಮಾನವನನ್ನು ಪ್ರಧಾನವಾಗಿ ಕಾಡಿದ್ದು ಹುಟ್ಟು ಮತ್ತು ಸಾವು. ಈ ಎರಡು ಅಂಶಗಳು ಅವನ ಹುಡುಕಾಟದ ಜೀವನಕ್ಕೆ ಪ್ರೇರಕ ಶಕ್ತಿಯಾದವು. ನಿತ್ಯಜೀವನದ ಹೋರಾಟದ ಬದುಕು ಹಾಗೂ ಇದಕ್ಕೆ ಪೂರಕವಾದ ಪ್ರಕೃತಿ ವೈಪರೀತ್ಯಗಳು ಅವ್ಯಕ್ತ ಶಕ್ತಿಯನ್ನು ಹುಡುಕುವಂತೆ ಮಾಡಿದವು. ಪ್ರಕೃತಿ ಮೊದಲು ಕಂಡದ್ದು, ನಾಶ ಮಾಡುವ ಶಕ್ತಿಯಾಗಿ, ಅದನ್ನು ಒಲಿಸಿಕೊಳ್ಳುವ ಪ್ರಯತ್ನದ ಹುಡುಕಾಟ ಮಾನವನದಾಗಿತ್ತು. ಪ್ರಕೃತಿ - ಪರಿಸರದಲ್ಲಿರುವ ಜೀವ-ನಿರ್ಜೀವ ವಸ್ತು-ಜೀವಿಗಳನ್ನು ಬಳಸಿಕೊಂಡಾಗ ಅವು ರಕ್ಷಿಸುವ ಬದುಕನ್ನು ಹಸನು ಮಾಡುವ ಚೈತನ್ಯಗಳಾಗುತ್ತವೆಂಬುದನ್ನು ಅರಿತ. ಇದು ಇತರೆ ಜೀವಿಗಳನ್ನು, ವಸ್ತುಗಳನ್ನು, ಪ್ರೀತಿಸಲು, ಆರಾಧಿಸಲು ಮತ್ತು ಗೌರವಿಸಲು ಎಡೆಮಾಡಿಕೊಟ್ಟಿತು. ಪ್ರಕೃತಿಯಲ್ಲಿಯ ಸಲಿಗೆ, ಅಕ್ಕರೆ, ಭಯ, ಆರಾಧನೆ, ನಿರೀಕ್ಷೆಗಳೆಲ್ಲ ಆಚರಣೆಗಳಾಗಿ ರೂಪ ಪಡೆದವು. ಅವು ಬರೀ ಆಚರಣೆಯಾಗಷ್ಟೇ ಉಳಿಯದೇ ಜೀವಂತಿಕೆಯನ್ನು ನಿರಂತರಿಸುವ ಕ್ರಿಯೆಗಳಾದವು. ಆಚರಣೆಗಳು ಪ್ರಕೃತಿಯ ವಸ್ತುಗಳ ಮತ್ತು ಮಾನವ ಸಮುದಾಯಗಳ ಸಂಸ್ಕೃತಿಯನ್ನು ಸಂಪರ್ಕಿಸುವ ಕೊಂಡಿಗಳಾದವು. ಸೃಷ್ಟಿಯ ಹೊರರಚನೆ ಅಥವಾ ವಿಶ್ವದ ಬಾಹ್ಯ ರೂಪವಾದ ಪ್ರಾಕೃತಿಕ ವಸ್ತುಗಳೆಲ್ಲ ಅಲೌಕಿಕವಾಗಿ ದೈವತ್ವ ಪಡೆದು ಆಚರಣಾತ್ಮಕ ವ್ಯವಸ್ಥೆಗೆ ಒಳಪಟ್ಟವು. ಇಂತಹ ವ್ಯವಸ್ಥೆಗಳು ಆದಿಮರಿಂದ ಆಧುನಿಕರವರೆಗೂ ಶಕ್ತಿ ಸ್ವರೂಪವಾಗಿ ನೈಸರ್ಗಿಕ ನಿಯಮಗಳಾಗಿ ಸಾಗಿ ಬಂದಿವೆ. ಭೂಮಿ, ನೀರು, ಗಾಳಿ, ಬೆಂಕಿ, ಆಕಾಶ ಎಲ್ಲವೂ ಪ್ರಕೃತಿಯ ಬಾಹ್ಯರೂಪಗಳಾಗಿ ದೈವತ್ವದ ಸ್ಥಾನ ಪಡೆದಿವೆ. ಇಂದು ವಿಜ್ಞಾನ ಅವುಗಳನ್ನು ವಸ್ತು ಜಗತ್ತಾಗಿ ಅರ್ಥೈಸಿದೆ. ಆದರೆ ಜನಪದರು ಹಿಂದಿನಿಂದಲೂ ತಮ್ಮ ದೈವಪ್ರಜ್ಞೆಯಿಂದ ವಿಜ್ಞಾನವನ್ನು ಅಭೌತಿಕ ನೆಲೆಯಲ್ಲಿ ಕಾಣುತ್ತಾ ಬಂದಿದ್ದಾರೆ.

ಪ್ರಕೃತಿಯ ವೈಚಿತ್ರ್ಯಗಳಲ್ಲಿ ಗರ್ಭಧರಿಸುವುದು ಒಂದು ವಿಸ್ಮಯಕರವಾದ ಅಂಶವಾಯಿತು. ಕೃಷಿ ಆವಿಷ್ಕಾರದ ನಂತರ ಭೂಮಿ ಫಲವಂತಿಕೆಯ ಇನ್ನೊಂದು ರೂಪವಾಗಿ ಮಾನವನ ವಾಸದ ನೆಲೆಯಾಗಿ ಮಾತೃಸ್ವರೂಪ ಪಡೆಯಿತು. ತಾಯ್ತನದಲ್ಲೇ ಸರ್ವಚೇತನ ಕಂಡುಕೊಂಡು ವಿವಿಧ ಆಚರಣೆಗಳ ಮುಖೇನ ಅವಳಿಗೆ ಗೌರವ ಸಮರ್ಪಿಸಲಾರಂಭಿಸಿದ. ಒಂದೆಡೆ ನೆಲೆನಿಂತ ಮಾನವನಿಗೆ ಭೂಮಿ ಜೊತೆ ನೀರು ಅಗತ್ಯವಾಯಿತು. ಈ ಕಾರಣದಿಂದಲೇ, ನದಿದಂಡೆಗಳಲ್ಲಿ ನಾಗರಿಕತೆಗಳು ಉಗಮಗೊಂಡವು. ಗುಡುಗು, ಮಿಂಚು, ಸಿಡಿಲುಗಳಿಂದ ಭಯಭೀತನಾಗುವುದರೊಂದಿಗೆ ಬೆಂಕಿಯಲ್ಲಿ ದೈವತ್ವವನ್ನು ಕಂಡುಕೊಂಡ. ಅದರೊಂದಿಗಿರುವ ಭಯ ಕ್ರಮೇಣ ಆಚರಣೆಯ ಮೂಲಕ ಭಕ್ತಿ ರೂಪ ಪಡೆಯಿತು. ಸುಂಟರಗಾಳಿ, ಸುಳಿಗಾಳಿಗಳಿಂದ ಮರಗಿಡಗಳ ಅಲುಗಾಡುವಿಕೆಯಿಂದ ಮಾನವ ಭಯಭೀತನಾದ. ಹೀಗೆ ಪ್ರಕೃತಿ ವಸ್ತುಗಳಾದ ನೆಲ, ಜಲ, ಅಗ್ನಿ, ಗಾಳಿ ಮಾನವನಿಗೆ ಒಂದಲ್ಲಾ ಒಂದು ರೀತಿಯಲ್ಲಿ ಅಗತ್ಯ ಹಾಗೂ ಅತ್ಯಮೂಲ್ಯ ಮೂಲಧಾತುಗಳಾಗಿ ಆಚರಣೆಗೆ ಭಾಜನವಾದವು.

"ಕ್ರಿಸ್ತಪೂರ್ವ ಮೂರು ಸಾವಿರ ವರ್ಷಗಳ ಹಿಂದಿನ ಸೂಕ್ತಿಯೊಂದು ಹೀಗಿದೆ. ಭೂಮಾತೆ ನಮಗೆ ಅವಕಾಶ ನೀಡಲಿ, ಭೂಸಂಪತ್ತು ವಿಸ್ತಾರವಾಗಲಿ, ನಿನ್ನ ಮಡಿಲಲ್ಲಿ ನಾನು ಸುಖದಿಂದ ಜೀವಿಸಬೇಕಾದರೆ

ಆಕಾಶ, ವಾಯು, ಗಾಳಿ, ಬೆಂಕಿ, ನೀರು ಹೀಗೆ ಸಮಗ್ರ ವಿಶ್ವದೊಳಗೆ ಅಂತರ್ಗತವಾಗಿರುವ ನೀನು ಸತ್ವ ಹಾಗೂ ತೇಜಸ್ಸನ್ನು ನಮಗೆ ಕರುಣಿಸು, ಆಯಸ್ಸನ್ನು ನೀಡು" (ಪುರುಷೋತ್ತಮ ಬಿಳಿಮಲೆ, ೨೦೦೧, ಪು. ೪೬). ಪ್ರಕೃತಿಯ ಮಡಿಲಲ್ಲಿನ ಬಿಡಿಬಿಡಿಯಾದ ವಸ್ತು ಚೈತನ್ಯಗಳೆಲ್ಲಾ ಮಾನವನ ಬದುಕಿಗೆ ಅತ್ಯಮೂಲ್ಯವಾದವುಗಳು. ಹೀಗೆ ಜನಪದರ ಆಚರಣೆಗಳಲ್ಲಿ ಪಂಚಭೂತಗಳು ಬಿಡಿ ಬಿಡಿಯಾಗಿ ಗುರುತಿಸಲ್ಪಟ್ಟಿವೆ. "ಭೂಮಿಯೂ ಸೃಷ್ಟಿಶೀಲವಾಗಿರುವಂತೆ, ಸುಟ್ಟು ನಾಶ ಮಾಡುತ್ತದೆ. ನೀರು ಮೈಲಿಗೆಯನ್ನು ನಾಶ ಮಾಡಿ 'ಮಡಿ' ಮಾಡುವಂತೆ, ನೀರ ದೆವ್ವಗಳು ಪ್ರಾಣ ಹೀರಬಲ್ಲವು. 'ಗಾಳಿ ಪ್ರಾಣವಾಯು'ವಾದಂತೆ ಪ್ರಾಣ ಹೀರುವ ಗಾಳಿ ದೆವ್ವವೂ ಆಗುತ್ತದೆ" (ಪುರುಷೋತ್ತಮ ಬಿಳಿಮಲೆ, ೨೦೦೧, ಪು. ೬೮).

"ಜಗಳಕ್ಕೆ ನೆಲ ಕಾರಣವಾದರೆ, ಮಲಿನತೆಗೆ ನೀರು ಕಾರಣವಾಗಿದೆ. ರೋಗ ಹರಡುವಿಕೆಗೆ ವಾಯು ಕಾರಣವಾದರೆ, ಸಮುದಾಯದ ಬದುಕೇ ಅಗ್ನಿಕುಂಡವಾಗಿದೆ. ಇಂದು ನೇತ್ಯಾತ್ಮಿಕವಾಗಿರುವ ಪಂಚಭೂತಗಳನ್ನೆಲ್ಲಾ ಇತ್ಯಾತ್ಮಕವಾಗಿಸಬೇಕಾದರೆ ಜನಪದರಿಂದ ಮಾತ್ರ ಸಾಧ್ಯ" (ಬಸವರಾಜ ಸಬರದ, ೨೦೦೯, ಪು. ೫). ಈ ರೀತಿಯ ಭೌತಿಕ ಪರಿಸರದ ನಾಶ ಇಂದು ಜನಜೀವನದ ಮೇಲೆ ಹೆಚ್ಚು ಪ್ರಭಾವ ಬೀರಿದೆ. ಪ್ರಕೃತಿಯಿಂದ ಬೇರ್ಪಡಿಸುವ ಬದುಕನ್ನು ರೂಪಿಸಿಕೊಳ್ಳುವ ಕೃತಕ ವಾತಾವರಣ ಇಂದು ಆಧುನಿಕತೆಯ ಪ್ರಭಾವದಿಂದ ಉಂಟಾಗುತ್ತಿದೆ. ಒಂದರ್ಥದಲ್ಲಿ ಪರಿಸರ ನಾಶ, ಬದುಕಿನ ವಿನಾಶವೇ ಆಗಿದೆ. ಜನಪದರ ಮೂಲ ಪಾರಂಪರಿಕ ಜ್ಞಾನವನ್ನು ನಾವಿಂದು ಅರಿತು ಮುಂದುವರಿಯಬೇಕಾಗಿದೆ.

ಹೀಗೆ ಜನಪದರ ಬದುಕು ಅನಾದಿಕಾಲದಿಂದಲೂ ಭೂಮಿ, ಗಾಳಿ, ನೀರು, ಅಗ್ನಿ ಮತ್ತು ವಾಯು - ಇವುಗಳ ಜೊತೆಗೆ ಅವಿನಾಭಾವ ಸಂಬಂಧವನ್ನು ಹೊಂದಿಕೊಂಡೇ ಬಂದಿದೆ. ಮಾನವನಿಗೆ ಅದು ಅನಿವಾರ್ಯವೂ ಹೌದು. ಪ್ರಸ್ತುತ ಅಧ್ಯಯನದಲ್ಲಿ ಪ್ರಕೃತಿ ಸಂಬಂಧಿ ಆಚರಣೆಗಳು ಎಂಬ ಅಧ್ಯಾಯದಡಿಯಲ್ಲಿ ನೆಲ, ಜಲ, ಅಗ್ನಿ ಮತ್ತು ವಾಯು ಈ ನಾಲ್ಕು ಘಟಕಗಳಿಗೆ ಸಂಬಂಧಿಸಿದಂತಹ ಬಹುಸಂಖ್ಯಾತರು ಆಚರಿಸುವ, ಭಾಗವಹಿಸುವ ಆಚರಣೆಗಳನ್ನು ವಿಶ್ಲೇಷಿಸಲಾಗಿದೆ. ಪ್ರತ್ಯೇಕ ಅಸ್ತಿತ್ವ ಪಡೆದುಕೊಂಡಿರುವ ಈ ಘಟಕಗಳು ಪ್ರತ್ಯೇಕವಾಗಿಯೇ ಮಹಾಪ್ರಬಂಧ ರಚಿಸುವಷ್ಟು ವ್ಯಾಪ್ತಿಯನ್ನು ಹೊಂದಿವೆ. ಪ್ರಸ್ತುತ ಅಧ್ಯಯನ ಬಳ್ಳಾರಿ ಜಿಲ್ಲೆಯ ಸೀಮಿತ ವ್ಯಾಪ್ತಿಯನ್ನು ಹೊಂದಿರುವುದರಿಂದ ಈ ನಾಲ್ಕು ಘಟಕಗಳಲ್ಲಿ ಅತೀ ಹೆಚ್ಚು ಜನರು ಪಾಲ್ಗೊಳ್ಳುವ ಆಚರಣೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

೩.೧. ನೆಲ ಸಂಬಂಧಿ ಆಚರಣೆಗಳು

ಬೇಟೆ ಸಂಸ್ಕೃತಿಯ ಹಂತದ ಬಳಿಕ ಮಾನವನ ಕೌಟುಂಬಿಕ ಜೀವನ ಒಂದೆಡೆ ನೆಲೆಗೊಂಡಿತು. ಕೃಷಿ ಆವಿಷ್ಕಾರದ ಪರಿಣಾಮದಿಂದ ಹೆಣ್ಣಿನ ಫಲವಂತಿಕೆಯ ಮತ್ತೊಂದು ರೂಪವಾಗಿ ಭೂಮಿ ಕಂಡಿತು. ಹೆಣ್ಣು ಹಾಗೂ ಭೂಮಿಯಲ್ಲಿಯ ಸಮಾನ ಗುಣಗಳನ್ನು, ದೇವತೆಯ ರೂಪದಲ್ಲಿ ಪೂಜಿಸಲಾಯಿತು. ಮಾನವನ ಬದುಕಿಗೆ ಭೂಮಿ ಅತ್ಯಮೂಲ್ಯ ಮತ್ತು ಅನಿವಾರ್ಯ. ಹಾಗಾಗಿ ಮಾನವನ ಅಸ್ತಿತ್ವವೇ ಭೂಮಿ. ಅದು ಅವನ ಪಾಲಿಗೆ ಪ್ರತ್ಯಕ್ಷ ದೈವ, ಪ್ರಯೋಗ ಕ್ಷೇತ್ರ. ತನ್ನ ಉಪಜೀವನಕ್ಕಾಗಿ, ಆಹಾರ ಪೂರೈಕೆಗಾಗಿ ಉಳುವ ಕ್ರಮ ಪ್ರಾರಂಭಗೊಂಡಿತು. ಈ ರೀತಿಯ ಬೆಳವಣಿಗೆಗಳು ಕೃಷಿ ಸಂಸ್ಕೃತಿಯ ಉದಯಕ್ಕೂ ಕಾರಣವಾದವು.

"ವ್ಯವಸಾಯ ಪದ್ಧತಿಯ ವಿವಿಧ ಸಂಪ್ರದಾಯಗಳನ್ನು ಹರಪ್ಪಾ ಮತ್ತು ಮೊಹೆಂಜೋದಾರೋ, ಸಿಂಧೂ ನದಿ ನಾಗರಿಕತೆಯಲ್ಲಿ ಕಾಣಲಾಗುತ್ತದೆ" (ಕನ್ನಡ ವಿಷಯ ವಿಶ್ವಕೋಶ, ಪು. ೩೨೭). ಇವು ಕೃಷಿ ಸಂಸ್ಕೃತಿಯೊಂದಿಗೆ ಪ್ರಾರಂಭಗೊಂಡ ನಾಗರಿಕತೆಗಳಾಗಿವೆ. ಅಂದಿನಿಂದ ಭೂಮಿ ಮಾನವನಿಗೆ ಸರ್ವಸ್ವವಾಯಿತು. ತನ್ನೆಲ್ಲಾ ಸುಖ-ದುಃಖ, ತಾಳ್ಮೆ-ಸಹನೆಗಳಿಗೆ ಆಶ್ರಯತಾಣವಾಗಿಸಿಕೊಂಡು. ಕಾಲಕ್ರಮೇಣ ಫಲ ನೀಡುವ ಭೂಮಿ ಮಾತೃ ಸ್ವರೂಪ ಪಡೆಯಿತು. ಭೂಮಿ ಬಂಜೆಯಾದರೆ ಜೀವರಾಶಿಯೇ ನಿರ್ನಾಮಗೊಳ್ಳುತ್ತದೆಂಬ ಭಯ ಆರಾಧನೆಗೆ ನಾಂದಿಯಾಗಿರಬೇಕು. "ಪ್ರಪಂಚದಾದ್ಯಂತ ಭೂಮಿಯನ್ನು ಸ್ತ್ರೀಯೆಂದು ಭಾವಿಸಿ ಮಾತೃದೇವತೆಯೆಂದು ಪೂಜಿಸುತ್ತಾರೆ. ಇಂದಿಗೂ ಪ್ರತಿಯೊಬ್ಬರೂ ತನ್ನ ದೇಶವನ್ನು ತಾಯ್ನಾಡು ಎಂದು ಸಂಬೋಧಿಸುವುದು, ಭೂಮಿ ಕೃಪೆಯಾಗದೇ ಬೆಳೆ ಬಾರದೆಂದು ನಂಬಿ ಫಲ ಬಂದ ತಕ್ಷಣವೆ ಅವಳಿಗರ್ಪಿಸುವುದು, ಅವಳ ಆರಾಧನೆಯ ಒಂದು ಭಾಗವೇ ಆಗಿದೆ".[೧] ಇಂದಿಗೂ ಗುಡಿಹುಣ್ಣಿಮೆಯಂದು ಧಾನ್ಯದ ತೆನೆಗಳನ್ನು ಮೊದಲು ದೇವರಿಗರ್ಪಿಸಿ ನಂತರ ಮನೆಗೆ ತರುವ ಕ್ರಮವಿದೆ.

ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಲಿ
ಎಳ್ಳು ಜೀರಿಗೆ ಬೆಳೆಯೋಳ ಭೂಮಿತಾಯಿ
ಎದ್ದೊಂದು ಗಳಿಗೆ ನೆನೆದೇನ !

ಹೀಗೆ ಜನಪದರ ನಿತ್ಯ ಬೆಳಗು, ಭೂಮಿ ತಾಯಿಯ ಸ್ಮರಣೆಯಿಂದಲೇ ಪ್ರಾರಂಭಗೊಳ್ಳುತ್ತದೆ. ಜನಪದರು ಭೂಮಾತೆಯನ್ನು ಪೂಜಿಸುವ ಉದ್ದೇಶ ತಮ್ಮೆಲ್ಲಾ ಆಗುಹೋಗುಗಳಿಗೆ ಕಾರಣೀಭೂತಳಾದ ಭೂಮಾತೆ, ಬಿತ್ತನೆ ಮತ್ತು ಬೆಳವಣಿಗೆಯ ಮಾಂತ್ರಿಕ ರೂಪ ಪಡೆದವಳೆಂಬ ಕಾರಣದಿಂದಾಗಿದೆ. "ಹರಪ್ಪಾ-ಮೊಹೆಂಜೋದಾರೊ ಸಂಸ್ಕೃತಿಯ ಕ್ರಿಸ್ತಶಕ ಮುನ್ನೂರು ವರ್ಷಗಳ ಹಿಂದೆ ಗಿಡಮರಗಳ ಹುಟ್ಟಿಗೆ ಕಾರಣವಾದ ಭೂಮಿಯನ್ನು ಮಾತೃದೇವತೆ, ಅನ್ನಪೂರ್ಣ, ಶಾಕಾಂಬರಿ ಎಂಬ ಹೆಸರುಗಳಿಂದ ಕರೆದಿದ್ದಾರೆ" (ಎಂ.ಜಿ. ಈಶ್ವರಪ್ಪ, ೧೯೯೯, ಪು. ೨೦೩). ಇಂದಿಗೂ ಬಳ್ಳಾರಿ ಜಿಲ್ಲೆಯಾದ್ಯಂತ ಬೇವಿನಮರವನ್ನು ಭೂಮಿತಾಯಿಯ ಪ್ರತೀಕವೆಂದು ಮರದ ಬುಡಕ್ಕೆ ಸೀರೆ ಕುಪ್ಪಸ ಉಡಿಸಿ, ಬಳೆ, ಕುಂಕುಮ, ಹೂಗಳಿಂದ ಪೂಜಿಸಿ ಬಿತ್ತನೆ ಕಾರ್ಯ ಪ್ರಾರಂಭಿಸಲಾಗುತ್ತದೆ.

ಗೌರಿಯು ಶಿವನ ಮಡದಿ, ಗಣಪನ ತಾಯಿ ಎಂಬುದಕ್ಕಿಂತ, ಆಕೆ ಫಲವಂತಿಕೆ, ಸಮೃದ್ಧಿಯ ಸಂಕೇತ. ಗೌರಿಯನ್ನು ಕೆರೆಯಲ್ಲೋ, ನದಿಯಲ್ಲೋ ವಿಸರ್ಜಿಸಿ ಅಲ್ಲಿಂದ, ಹಿಡಿಮಣ್ಣನ್ನು ತಂದು, ತೋಟ-ಗದ್ದೆಗಳಿಗೆ ಎರಚುತ್ತಾರೆ. ಕುಂಭ, ಕಲಶ, ಧಾನ್ಯ ಶೇಖರಿಸಿಡುವ ಖಣಜಗಳು ಗರ್ಭಸೂಚಕಗಳಾಗಿ ಪೂಜಿಸಲ್ಪಡುತ್ತವೆ. ಗೌರಿಯ ಮೈಯ ಮಣ್ಣಿನಿಂದ ತಯಾರಾದ ಗಣಪನನ್ನು ಮಣ್ಣಿನ ಮಗನೆಂದು, ಬೀಜ ರಕ್ಷಕ ದೈವವೆಂದು ಕರೆಯಲಾಗುತ್ತದೆ. ಖಣಜ, ವಾಡೆಗಳು ಕಾಲಕ್ರಮೇಣ ಗಣಪನ ಆಕಾರಕ್ಕೆ ರೂಪಾಂತರಗೊಂಡಿರಬೇಕು. ಸಗಣಿಯೂ ಸಹ ಜೀವಪೋಷಕವಾದ ಮಣ್ಣಿನ ಮತ್ತೊಂದು ರೂಪವಾಗಿದೆ. ಅದು ಗೊಬ್ಬರವಾಗಿ ಕೃಷಿಕರಿಂದ ಅಗ್ರ ಪಂಕ್ತಿಯಲ್ಲಿ ಆರಾಧಿಸಲ್ಪಡುತ್ತದೆ. ಸಗಣಿ ಅಥವಾ ಮಣ್ಣಿನಿಂದ ಮಾಡಿದ ಬೆನಕ, ಕೃಷಿ ಸಂಸ್ಕೃತಿಯಲ್ಲಿ ವಿಘ್ನ ವಿನಾಶಕನಾಗಿ ಪ್ರಥಮವಾಗಿ ಪೂಜಿಸಲ್ಪಡುತ್ತಾನೆ. ಭೂಮಿಯು ತಾಯಿಯಾಗಿ ದೈವವಾಗಿ ಸಂಪತ್ತನ್ನು

ಕೊಡುವ ಸಸ್ಯವರ್ಗ ಹಾಗೂ ಪ್ರಾಣಿ ವರ್ಗಕ್ಕೂ ಆಶ್ರಯದಾತಳು. ರಕ್ಷಕ ತತ್ವಪದ ಸಂಕೇತ, ಆದರೆ ಕೆಲವೊಂದು ಸಂದರ್ಭಗಳಲ್ಲಿ ಬಿರುಗಾಳಿ, ನೆರೆ ವಾತಾವರಣದ ವೈಪರೀತ್ಯಗಳಿಂದಾಗುವ ಭೂಕಂಪಗಳ ಮೂಲಕ ಮನುಕುಲವನ್ನೇ ನುಂಗಿ ನೊಣೆಯಬಲ್ಲಳು. ಈ ಅರ್ಥದಲ್ಲಿ "ಭೂಮಿಯು ವಿನಾಶದ ಮತ್ತು ಸಾವಿನ ಸಂಕೇತವೂ ಹೌದು" (ಪುರುಷೋತ್ತಮ ಬಿಳಿಮಲೆ, ೨೦೦೮, ಪು. ೯೬). ಕಾಡು-ಮೇಡು, ಬೆಟ್ಟ-ಗುಡ್ಡ, ನದಿ-ಕಣಿವೆಗಳ ರೂಪದಲ್ಲಿ ಸಮೃದ್ಧಿಯನ್ನು ಒದಗಿಸುವ ಭೂಮಾತೆ ಒಮ್ಮೊಮ್ಮೆ ಕ್ರೌರ್ಯದ ನೆಲೆಯೂ ಆಗುತ್ತಾಳೆ. ಆಕೆ ಸೃಷ್ಟಿಸುವ ಅನಾವೃಷ್ಟಿ-ಅತಿವೃಷ್ಟಿಗಳ ತೀವ್ರ ತಾಪಕ್ಕೆ ಸಿಕ್ಕಿ ಅನುಭವಿಸಿದ ನೋವು ಹಿಂಸೆಗಳ ಅರಿವು ಮಾನವನಿಗಿದೆ. ಆದಕಾರಣ ಜನಪದ ಆಚರಣೆಗಳ ಹಿಂದೆ ಭೂಮಿಯ ಬಗೆಗಿನ ಪ್ರೀತಿ ಮತ್ತು ಭಯ ಸಮಾನವಾಗಿ ಪ್ರಕಟಗೊಳ್ಳುತ್ತದೆ. ಅಣೆಕಟ್ಟುಗಳು ತುಂಬಿದಾಗ ಬಾಗಿನ ನೀಡುವ ಉದ್ದೇಶದ ಹಿಂದಿನ ಆಶಯ ಇದೇ ಆಗಿದೆ.

ಕೃಷಿಕರ ಆಚರಣೆಗಳೆಲ್ಲವೂ ಕೃಷಿ ಚಟುವಟಿಕೆಗಳನ್ನಾಧರಿಸಿ ರೂಪ ಪಡೆದಿವೆ. ವರ್ಷದ ಮೊದಲ ಬೇಸಾಯ ಪ್ರಾರಂಭಗೊಳ್ಳುವುದು ಯುಗಾದಿಯಂದು, ಕಾರುಹುಣ್ಣಿಮೆಯಂದು, ಕೃಷಿಕರಿಗೆ ಸಹಾಯಕವಾದ ಜಾನುವಾರುಗಳು ಹಾಗೂ ಬಿತ್ತನೆ ಬೀಜಗಳ ಸಂರಕ್ಷಣೆ. ನಾಗರಪಂಚಮಿಯ ಹುತ್ತಪೂಜೆಯೂ ಸಹ ಮಣ್ಣಿನ ಪೂಜೆಯಾಗಿದೆ. ಜೋಕುಮಾರ, ಕಾಮಣ್ಣನನ್ನು ಮಳೆಗಾಗಿ ಪೂಜಿಸುತ್ತಾರೆ. ವಿಜಯದಶಮಿ ಕೃಷಿಕರಿಗೆ ವಿಜಯದ ಸಂಕೇತ. ಕೊಯ್ಲು ಪ್ರಾರಂಭಿಸುವ ಮುನ್ನ, ಜಾನುವಾರು ಹಾಗೂ ಉಪಕರಣಗಳ ಪರೀಕ್ಷೆ, ಹಟ್ಟಿ ಹಬ್ಬದಲ್ಲಿ ನಡೆಯುತ್ತದೆ. ಸಂಕ್ರಾಂತಿಯಂದು ಜಾನುವಾರು ಹಾಗೂ ಪೈರುಗಳ ಸಂರಕ್ಷಣೆ, ಮಾಘ ಮಾಸದಲ್ಲಿ ಗುಡಿಹುಣ್ಣಿಮೆಯ ಮೂಲಕ ದವಸ ಧಾನ್ಯಗಳನ್ನು ಸ್ವಾಗತಿಸುತ್ತಾರೆ. ಭರತ ಹುಣ್ಣಿಮೆಯಂದು ಬಂಡಿಗಾಲಿ ಪೂಜಿಸುವುದು ಸಹ ಕೃಷಿಕರಿಗೂ, ಜಾನುವಾರುಗಳಿಗೂ ವಿಶ್ರಾಂತಿ ಸಮಯವೆಂಬುದನ್ನು ಆಚರಣೆ ಸಂಕೇತಿಸುತ್ತದೆ.

ಜನಪದರ ಪ್ರಕಾರ ಮಳೆರಾಜ ಗಂಡಾದರೆ, ಭೂತಾಯಿ ಹೆಣ್ಣು. ಮಾತೃದೇವತೆ, ಸಪ್ತಮಾತೃಕೆಯರೆಂದು ಪೂಜಿಸಲ್ಪಡುವ ದೈವಗಳು, ಭೂಮಾತೆಯ ಪ್ರತಿರೂಪಗಳಾಗಿವೆ. ಕೃಷಿಕರಲ್ಲಿ ಋತುಮಾನಕ್ಕೆ ಅನುಗುಣವಾಗಿ ಭೂಮಿಯನ್ನು ಉಳುವ, ಬಿತ್ತುವ, ಕಟಾವು ಮಾಡುವ, ರಾಶಿ ಮಾಡುವ ಹೀಗೆ ಒಂದೊಂದು ಕ್ರಿಯೆಗೂ ದೇವ-ದೇವತೆಗಳ ಕಲ್ಪನೆಯನ್ನು ಮಾನವ ನೀಡಿದ್ದಾನೆ. ಬಲಿನೀಡಿಕೆ ಹಾಗೂ ಚರಗ ಚೆಲ್ಲುವ ಸಂಪ್ರದಾಯಗಳ ಹಿನ್ನೆಲೆ ಭೂಮಾತೆಯಲ್ಲಿರುವ ಜೀವರಕ್ಷಕವಾಗಿರುವ ಶಕ್ತಿ ಎಂದಿಗೂ ಕುಗ್ಗದಂತೆ ವೃದ್ಧಿಸಲಿ ಎಂಬ ಆಶಯ ಹೊಂದಿದೆ.

ಹುಟ್ಟಿಗೆ, ಬದುಕಿಗೆ, ಸಾವಿಗೆ ಆಶ್ರಯತಾಣವಾದ ಮಣ್ಣಿಗೆ ಅರಗಿಸಿಕೊಳ್ಳುವ ಮತ್ತು ಪರಿವರ್ತಿಸುವ ಗುಣವಿದೆ. ಅದು ಮಾನವನ ಹಸಿವನ್ನು ಹಿಂಗಿಸುವ ಶಕ್ತಿ ಹೊಂದಿದೆ. ಕೃಷಿ ಆಚರಣೆಗಳೆಲ್ಲಾ ಭೂಮಿಯ ಜೊತೆಗಿನ ಸಂಪರ್ಕದಿಂದ ಮಾನವ ಪಡೆದುಕೊಂಡ ಅನುಭವಗಳಾಗಿವೆ. ಅವು ಆಚರಣೆಯ ಮುಖೇನ ಮುಂದಿನ ತಲೆಮಾರುಗಳಿಗೆ ವರ್ಗಾವಣೆಗೊಳ್ಳುತ್ತಿವೆ. ಯಾವುದೇ ಗುಡಿ-ಗೋಪುರಗಳಿಲ್ಲದ, ವೃಕ್ಷದ ಕೆಳಭಾಗದಲ್ಲಿರುವ ಕಲ್ಲು, ಮಣ್ಣು, ಮಡಿಕೆಗಳೇ ಭೂಮಾತೆಯ ಪ್ರತಿರೂಪವಾಗಿ ಇಂದಿಗೂ ಪೂಜಿಸಲ್ಪಡುತ್ತಿವೆ. ಇಂತಹ ಆಚರಣೆಗಳು ಒಂದು ಕಾಲದಲ್ಲಿ ಅತ್ಯಂತ ಉಪಯುಕ್ತ ತಂತ್ರಜ್ಞಾನಗಳಾಗಿರಲು ಸಾಧ್ಯವಿದೆ. ಕಾಲಕ್ರಮೇಣ

ಅವು ಆಚರಣೆಗಳಾಗಿ ಚಾಲ್ತಿಗೊಂಡಿರಬೇಕು. ಪ್ರಸ್ತುತ ಅಧ್ಯಯನದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಪ್ರಚಲಿತದಲ್ಲಿರುವ ನೆಲಸಂಬಂಧಿ ಆಚರಣೆಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ.

೩.೧.೧. ಕುಂಭೋತ್ಸವ

ಸಿರುಗುಪ್ಪ ತಾಲ್ಲೂಕಿನ ಬಲಕುಂದಿ ಗ್ರಾಮದೈವ ಬನ್ನಿಮಹಾಂಕಾಳಿ. ಇಲ್ಲಿ ಮೂರು ವರ್ಷಕ್ಕೊಮ್ಮೆ ಕುಂಭೋತ್ಸವ ನಡೆಯುತ್ತದೆ. ಪುಷ್ಯಬಹುಳ ಅಮೃತ ಅಮವಾಸ್ಯೆಯಂದು ನಡೆಯುವ ಆಚರಣೆ ಇದು. ಬನ್ನಿಮಹಾಂಕಾಳಿ ದುರ್ಗೆಯ ಅವತಾರ. ಊರಿನ ರಕ್ಷಣಾ ದೇವತೆ ಎಂಬ ಪ್ರತೀತಿ ಇದೆ. ಬಳ್ಳಾರಿ ಜಿಲ್ಲೆಯವರಲ್ಲದೆ ಗಡಿರಾಜ್ಯ ಆಂಧ್ರದ ಪೆದ್ದಹರಿವಾಣಂನಿಂದಲೂ ಬರಿಗಾಲಲ್ಲಿ ಕುಂಭಹೊತ್ತು ಭಕ್ತರು ಆಗಮಿಸುವುದು ಇಲ್ಲಿಯ ವಿಶೇಷತೆ. ಬಹುಪಾಲು ಕೆಳಜಾತಿಯವರು ಕುಂಭ ಹೊರುವವರಾದರೂ ಊರಿನ ಎಲ್ಲಾ ವರ್ಗದ ಜನರು ಆಚರಣೆಯಲ್ಲಿ ಪಾಲ್ಗೊಳ್ಳುವುದು ಸಮಷ್ಟಿಹಿತವನ್ನು ಬಿಂಬಿಸುತ್ತದೆ. ಅನ್ನ ಆಹಾರವನ್ನು ಕುಂಭಗಳಲ್ಲಿ ತುಂಬಿಸಿ ತರುತ್ತಾರೆ. ಇಲ್ಲಿ ಕುಂಭಗಳು ಮಾತೃದೇವತೆಯ ಪ್ರತಿನಿಧಿಯಂತೆ ಪೂಜಿಸಲ್ಪಡುವವು. "ಕುಂಭಗಳು ಸ್ತ್ರೀ ಗರ್ಭಾಶಯ ಸೂಚಕಗಳಾಗಿ ಹೆಣ್ಣಿನ ಶರೀರವನ್ನು ಪ್ರತಿನಿಧಿಸುತ್ತವೆ" (ಲಕ್ಷ್ಮಿದೇವಿ, ೨೦೦೭, ಪು. ೧೨೯). ಹಿಂದಿನಿಂದಲೂ ಆಹಾರ ಉತ್ಪಾದನೆ ಹಾಗೂ ಸಂಗ್ರಹಣ ಹಂತದಲ್ಲಿ ಪ್ರಮುಖ ಪರಿಕರಗಳಾಗಿ ಮಡಿಕೆ-ಕುಡಿಕೆಗಳು ಬಳಸಲ್ಪಡುತ್ತಿವೆ. ಇವು ಆಹಾರ ಸಂಗ್ರಹಣಾ ಕಾರ್ಯದ ಅಪವ್ಯಯದ ಭಯ ಕಡಿಮೆ ಮಾಡಿ ಮಾನವನ ಬದುಕನ್ನು ಸರಾಗಗೊಳಿಸಿವೆ. ಆಹಾರ ಉತ್ಪನ್ನಗಳು ಕೆಡದಂತೆ ಕಾಪಾಡುವ ಸಾಧನವಾದ ಮಡಿಕೆ ಕುಡಿಕೆಗಳು ಮಾತೃದೇವತೆಗಳ ಆರಾಧನೆಯಲ್ಲಿ ಪ್ರಾಮುಖ್ಯತೆ ಪಡೆದಿವೆ. ಕುಂಭಗಳ ಕತ್ತಿನ ಭಾಗದಲ್ಲಿಯ ಅಲಂಕಾರದ ಕುಸುರಿಗಳು ಸ್ತ್ರೀತ್ವದ ಸೂಚಕಗಳು. ಸತ್ತವರು ಮತ್ತೆ ತಾಯಿಯ ಗರ್ಭವನ್ನು ಸೇರಿಕೊಳ್ಳುತ್ತಾರೆಂಬ ನಂಬಿಕೆಯಿಂದಾಗಿ ಬಹುಪ್ರಾಚೀನ ಸಮಾಜಗಳಲ್ಲಿ ಸತ್ತವರ ದೇಹವನ್ನು ತಾಯಿಯ ಗರ್ಭದ ಸಂಕೇತವಾಗಿ ಮಡಿಕೆಗಳಲ್ಲಿ ಇಟ್ಟು ಹೂಳುತ್ತಿದ್ದರು. ಶವದ ಅಂತಿಮ ಯಾತ್ರೆಯಲ್ಲಿ ಮಡಿಕೆ ಹೊಡೆಯುವುದು ಇದೇ ಆಶಯವನ್ನು ಹೊಂದಿದೆ. ಇಂಥ ದೈವೀಭಾವಗಳೇ ಕುಂಭಗಳು ಆಚರಣೆಯಲ್ಲಿ ಪೂಜಾರ್ಹವಾಗಲು ಕಾರಣವಾಗಿವೆ.

ಬಲುಕುಂದಿಯಲ್ಲಿ ಗುಡಿಯನ್ನು ಮೂರು ಸುತ್ತು ಹಾಕಿ ದೇವಿಯ ಮುಂದೆ ಕುಂಭಗಳನ್ನು ಇಡುತ್ತಾರೆ. ಮೇಕೆಮರಿಯನ್ನು ಬಲಿ ನೀಡುವುದರ ಮೂಲಕ ಕುಂಭಗಳಲ್ಲಿಯ ಪ್ರಸಾದವನ್ನು ರಾಶಿ ಮಾಡಿ ಪೂಜೆ ಸಲ್ಲಿಸುತ್ತಾರೆ. ರಕ್ತತರ್ಪಣದ ಪ್ರಸಾದವನ್ನು ಊರಿನ ವಲಮೇರಿ(ಗಡಿಭಾಗದ) ಸುತ್ತ ಚರಗ ಚೆಲ್ಲುತ್ತಾರೆ. ಭೂಮಿ ಗಟ್ಟಿಯಾಗಲು, ಫಲ ಸಮೃದ್ಧಿಯಾಗಲು ಪ್ರಾಣಿ ಬಲಿಯ ಮೂಲಕ ಭೂಮಿಗೆ ರಕ್ತತರ್ಪಣ ನೀಡುವುದು ಅನಿವಾರ್ಯ ಎಂಬ ನಂಬಿಕೆಯಿದೆ. ಇದರಿಂದ ಊರಿಗೆ ಶಾಂತಿಯಾಗುವುದೆಂಬ ಆಶಯ ಸ್ಥಳೀಯರದ್ದಾಗಿದೆ. ಅಲ್ಲದೆ ರಕ್ತ ಪ್ರೋಕ್ಷಣೆ ಮಾಡುವ ಅನ್ನದ ಅಗುಳುಗಳನ್ನು ರಕ್ತದಲ್ಲಿ ಬೆರೆಸಿ ಪೈರಿನ ಸುತ್ತ ಉಗ್ಗುತ್ತಾರೆ. ಇದು ಕ್ಷುದ್ರಶಕ್ತಿಗಳು, ಕೃಷಿ ರೋಗಗಳು ಮುಂತಾದವುಗಳನ್ನು ನಿರ್ಬಂಧಿಸುವ ಆಶಯ ಹೊಂದಿರುವುದಾಗಿದೆ. "ಆಕಾಶ ಭೂಮಿಯ ಸಂಯೋಗದಿಂದ ಭೂಮಿ ಗರ್ಭಧರಿಸಿ ಬಗೆ ಬಗೆಯ ಸೃಷ್ಟಿಗೆ ಕಾರಣವಾಗಿರುವಳು".[೨] ಭೂಮಿ ಕೃಷಿಕರ ಆರಾಧನಾ ದೈವ. ಭೂಮಾತೆಯನ್ನು ದೈವೀನೆಲೆಯಲ್ಲಿ ಕುಂಭರೂಪಿಯಾಗಿ ಪೂಜಿಸುತ್ತಾರೆ.

ರೇಣುಕೆಯ ಕಥೆಯಲ್ಲಿನ ಹಸಿ ಮಣ್ಣಿನ ಕೊಡ, ಯಲ್ಲಮ್ಮನ ಪೂಜೆಯಲ್ಲಿ ಕೊಡ ಹೊತ್ತು ಕುಣಿಯುವ ವಿಧಿ, ನವರಾತ್ರಿಯ ಘಟಸ್ಥಾಪನೆಯಲ್ಲಿ ಘಟದಲ್ಲಿ ಕಾಳನ್ನಿಟ್ಟು ಪೂಜಿಸುವ ಕ್ರಮಗಳಿವೆ. ಇವೆಲ್ಲಾ "ಪ್ರಾಗೈತಿಹಾಸಿಕ ಕಾಲದಿಂದ ಕುಂಭಕರ್ಮವು ಹೆಣ್ಣುಮಕ್ಕಳ ಕೆಲಸವಾಗಿದ್ದು ಸ್ತ್ರೀ ಪ್ರಾಧಾನ್ಯವಿದ್ದ ಯುಗದ ಪಳಿಯುಳಿಕೆಯಾಗಿ ಮುಂದುವರಿದಿವೆ".[೩] ಇಂಥ ಕುಂಭೋತ್ಸವಗಳು ಸ್ತ್ರೀಯಿಂದಾಗುವ ಪುನರ್‌ಸೃಷ್ಟಿಯನ್ನು ಅನುಕರಣೆ ಮಾಡಿ ನಿಸರ್ಗ ಮತ್ತು ಮಾನವನ ಸಮೃದ್ಧಿಯನ್ನು ಇಮ್ಮಡಿಗೊಳಿಸಿವೆ. ಸಂತೋಷ, ಸಮೃದ್ಧಿ, ಸಮಾಜದ ಒಳಿತಿಗೆ ಈ ಆಚರಣೆ ಮಾದರಿಯಾಗಿದೆ. ವ್ಯಕ್ತಿ ತನ್ನ ಸಾಮಾಜಿಕ ಜೀವನವನ್ನು ವಿಸ್ತಾರಗೊಳಿಸುವಲ್ಲಿ ಸಮಾಜದ ಇತರ ವ್ಯಕ್ತಿಗಳೊಡನೆ ಸಾಮರಸ್ಯ, ಆತ್ಮೀಯತೆಯನ್ನು ಗಳಿಸಿಕೊಳ್ಳುವಲ್ಲಿ, ಕಷ್ಟ-ಸುಖಗಳನ್ನು ಹಂಚಿಕೊಳ್ಳುವಲ್ಲಿ, ಫಲ ಸಮೃದ್ಧಿಗೆ ಅಡ್ಡಿಯಾಗುವ ದುಷ್ಟಶಕ್ತಿಗಳ ದಮನಕ್ಕೆ ನಿಸರ್ಗವನ್ನು ನಿಯಂತ್ರಿಸುವ ಆಶಯ ಆಚರಣೆಯಲ್ಲಿದೆ. ಆಚರಣೆಯಲ್ಲಿ ಪ್ರಾದೇಶಿಕ ವೈಶಿಷ್ಟ್ಯತೆಯಿದೆ. ಆಂಧ್ರಪ್ರದೇಶದ ಗಡಿ ಭಾಗದಿಂದ ಬರಿಗಾಲಿನಲ್ಲಿ ಕುಂಭ ಹೊತ್ತು ಆಗಮಿಸುವ ಭಕ್ತರಲ್ಲಿಯೂ ಧಾರ್ಮಿಕ ವಿಧಿ-ವಿಧಾನಗಳಲ್ಲಿ ಸಾಮ್ಯತೆಯಿದೆ. ಇದು ಗಡಿನಾಡಿನಲ್ಲಿಯ ಸಾಮರಸ್ಯಕ್ಕೆ ಸಾಕ್ಷಿಯಾಗಿದೆ.

೩.೧.೨. ಮಣ್ಣಿನ ಮಗ ಗಣಪ

ಆರ್ಯ, ದ್ರಾವಿಡರದು ಪರಸ್ಪರ ಭಿನ್ನ ಸಂಸ್ಕೃತಿ. ಈ ಸಂಸ್ಕೃತಿಯ ಸಂಯೋಗ ದೇವತೆ ಗಣಪ. ನಿರ್ವಿಘ್ನತೆಗೆ ಸಂಕೇತ. ಪುರಾಣ ಮೂಲಗಳ ಪ್ರಕಾರ "ದಕ್ಷನು ತಾನು ನಡೆಸಿದ ಯಜ್ಞಕ್ಕೆ ಅಳಿಯನಾದ ಶಿವನನ್ನು ಆಹ್ವಾನಿಸದಿರುವುದು, ಅವಮಾನಿತ ಶಿವ ಸಿಟ್ಟಿನಿಂದ ಯಜ್ಞ ನಾಶ ಮಾಡುವುದು. ಈ ಎರಡು ಕಾರಣಗಳು ದಕ್ಷ, ಶಿವರ ಸಂಘರ್ಷ ಎರಡು ಪಂಗಡದ ಭಿನ್ನತೆಯಾಗಿ ಗುರುತಿಸಿವೆ"(ಗದ್ದಗಿಮಠ. ಬಿ.ಎಸ್., ೧೯೮೮, ಪು. ೨೬). ಇಂಥ ಭಿನ್ನತೆಗಳ ನಡುವೆ ಐಕ್ಯತೆ, ಏಕತೆ ಮೂಡಿಸುವ ಪ್ರಯತ್ನದ ಫಲದಿಂದ ಉದಯಿಸಿದ ಸಂಯೋಗ ದೇವತೆ ಗಣಪ. ವೈದಿಕ ಹಾಗೂ ಶೈವ ಪಂಗಡದ ಆರಾಧನಾ ಕ್ರಮ ಹೊಂದಿದ್ದು, ಪ್ರಥಮ ಪೂಜೆಗೊಳ್ಳಲ್ಪಡುವ ದೈವವಾಗಿದೆ. ಜನಪದ, ಶಿಷ್ಟ ಎರಡೂ ಪರಂಪರೆಯಲ್ಲಿ ಅತ್ಯಂತ ಜನಪ್ರಿಯ ಮತ್ತು ಪ್ರಭಾವಶಾಲಿ ದೈವವಾಗಿ ಗಣಪ ಆರಾಧಿಸಲ್ಪಡುತ್ತಾನೆ.

ಕೃಷಿಕರ ಆರಾಧನಾ ಕ್ರಮ

ಶಿಷ್ಟ ಸಂಸ್ಕೃತಿ ಕಲ್ಪಿತ ಗಣಪನ ಆಚರಣೆಗಿಂತ, ಜನಪದರ ಆಚರಣೆಯಲ್ಲಿ ಭಿನ್ನತೆಯಿದೆ. ಕೃಷಿಕರ ಆರಾಧನಾ ಕ್ರಮ ವಿಶಿಷ್ಟವಾದದ್ದು. ಮಣ್ಣಿನ ಅಥವಾ ಸಗಣಿಯ ಗಣಪನನ್ನು ಪೂಜಿಸಿ ಕೃಷಿ ಚಟುವಟಿಕೆ ಪ್ರಾರಂಭಿಸುತ್ತಾರೆ. ಗಣಪನ ಹುಟ್ಟು ಗೌರಿಯ ಮೈಯ ಮಣ್ಣಿನಿಂದಾಗಿದೆ. ಕೃಷಿಕರು ಗಣಪನನ್ನು ಮಣ್ಣಿನಿಂದ ತಯಾರಿಸುತ್ತಾರೆ. ಆದ್ದರಿಂದ ಮಣ್ಣಿನ ಮಗನೆಂಬ ಪ್ರತೀತಿ ಇದೆ.

ಬೆಳೆಯನ್ನು ಕೊಯ್ಲು ಮಾಡುವ ಮೊದಲು, ಹೊಲದಲ್ಲಿ ಮಣ್ಣನ್ನು ನೆನೆಸಿ, ಅದರಿಂದ ಗದ್ದುಗೆಯಾಕಾರ ನಿರ್ಮಿಸಿ, ಐದು ಬೆನಕಗಳನ್ನು ಪ್ರತಿಷ್ಠಾಪಿಸಿ, ಕುಡುಗೋಲು ಜೊತೆಗಿಟ್ಟು ಪೂಜಿಸುತ್ತಾರೆ. ಇದು ಜನಪದರ ಆಚರಣೆಯಲ್ಲಿಯ ಸರಳತೆಯಾಗಿದೆ. ಕಣದಲ್ಲಿ ರಾಶಿ ಪೂಜೆ ಮಾಡುವಾಗ ಸಗಣಿಯಿಂದ ಗಣಪನನ್ನು ಮಾಡಿ, ಕರ್ಕಿ, ಮಾವಿನ ಪತ್ರೆಗಳಿಂದ ಪೂಜಿಸುತ್ತಾರೆ. ಹುಲ್ಲು ಕಟ್ಟುವ ಸಮಯದಲ್ಲಿ ಹೂವಿನ ರೂಪದ ಗಣಪನನ್ನು

ಪೂಜಿಸಿ, ಹುಲ್ಲಿನ ಹೊರೆಗೆ ಪೂಜಿಸಿದ ಹೂ ಸಿಕ್ಕಿಸುತ್ತಾರೆ. ಈ ರೀತಿ ಗಾಡಿ ಹೂಡುವಾಗ, ಕಳೆ ಕೀಳುವಾಗ, ಕೊಯ್ಲು ಮಾಡುವಾಗ, ಬಿತ್ತನೆಗೆ ಹೊರಟಾಗ, ಗೊಬ್ಬರ ಹೇರುವಾಗ, ಕಳೆ ಕೀಳುವಾಗ, ತಮ್ಮ ಕೆಲಸ ಕಾರ್ಯಗಳು ನಿರ್ವಿಘ್ನವಾಗಿ ನೆರವೇರಲೆಂದು ಗಣಪನನ್ನು ಪೂಜಿಸುತ್ತಾರೆ.

ಗಣಪನ ರೂಪ ವೈವಿಧ್ಯತೆಯಲ್ಲಿ ಪ್ರಕೃತಿ, ಪುರುಷ, ಕೃಷಿ ಜೀವಜಗತ್ತಿನ ಹೊಂದಾಣಿಕೆಯಿದೆ. ಸಾಂಕೇತಿಕ ಅರ್ಥದಲ್ಲಿ ಗಣಪ ಕೃಷಿಕರ ಕಾರ್ಯ ಚಟುವಟಿಕೆಗಳ ಕೇಂದ್ರಬಿಂದು. "ಗಣಪನನ್ನು ಮಣ್ಣಿನಿಂದ ತಯಾರಿಸಿ, ಸುಡದೇ ಪೂಜಿಸಿ, ನಂತರ ನೀರಿನಲ್ಲಿ ವಿಸರ್ಜಿಸುವ ಆಚರಣೆಯಲ್ಲಿ ಪ್ರಕೃತಿ ಮತ್ತು ಗಣಪನನ್ನು ಏಕವಾಗಿಸುವ ತತ್ವವೊಂದು ಮೈ ಪಡೆದಿದೆ(ಕೆ.ವೈ. ನಾರಾಯಣಸ್ವಾಮಿ. ೨೦೦೦, ಪು. ೯೭). ಆಚರಣೆಯಲ್ಲಿ ಪ್ರಕೃತಿಯನ್ನು ದೇವರೆಂದು ಭಾವಿಸುವ ತತ್ವವಿದೆ. ಹುಬ್ಬೆ-ಉತ್ತರೆ ಮಳೆಗಳು ತುಂಬು ಮಳೆಗಾಲ. ಬೆಳೆ ಬರುವ ಆರಂಭ ಕಾಲ. ಇಂಥ ಸಮಯದಲ್ಲಿ ತವರಿಗೆ ಬಂದ ತಾಯಿಯನ್ನು ಕರೆಯಲು ಗಣಪ ಬರುವನು. ಪ್ರಕೃತಿಯಲ್ಲಿಯ ವಿವಿಧ ಅಂಗಗಳನ್ನು ಧರಿಸಿರುವುದು, ಆನೆಯ ಮುಖ, ಮಾನವನ ದೇಹದ ಗಣಪನ ಆಗಮನ ಬೇಟೆ ಮತ್ತು ಕೃಷಿ ಸಂಸ್ಕೃತಿಯನ್ನು ಸಂಕೇತಿಸುತ್ತದೆ. "ಇದಕ್ಕೆ ಆನೆಯ ತಲೆಯನ್ನು ಮಾತ್ರ ಸ್ಪಷ್ಟವಾಗಿ ಚಿತ್ರಿಸಿ, ಉಳಿದಂತೆ ಮೈಯನ್ನು ಹಾಗೆಯೇ ಬಿಟ್ಟಂತೆ ರಚಿಸಲಾದ ಪುರಾತನ ಶಿಲಾಪ್ರತೀಕಗಳು ಆಧಾರವನ್ನು ಒದಗಿಸುತ್ತವೆ".[೪] ಕೆ.ವೈ. ನಾರಾಯಣಸ್ವಾಮಿಯವರು ಗಣಪನ ರೂಪ ಭಗ್ನತೆಯ ಬಗ್ಗೆ ವಿವಿಧ ಮೂಲಗಳಿಂದ ಚರ್ಚಿಸಿದ್ದಾರೆ. "ರೂಪ ಭಗ್ನತೆಯ ಮೂಲಕ ಗಣಪನ ಹುಟ್ಟನ್ನು ಸಮಾಜದಿಂದ ಬಹಿಷ್ಕರಿಸಲು ಪ್ರಧಾನ ಸಂಸ್ಕೃತಿ ಪ್ರಯತ್ನಿಸಿದಷ್ಟು, ಜನಪದರ ಜೀವನವು ಆ ವಿಕೃತ ಕಲ್ಪನೆಯನ್ನು ಹೆಚ್ಚು ಹೆಚ್ಚು ಒಪ್ಪಿಕೊಂಡಿತು" (ನೀರದೀವಿಗೆ, ೨೦೦೦, ಪು. ೯೭). ಜನಪದರಲ್ಲಿಯ ಗಣಪನ ಕಲ್ಪನೆ ರೂಪ ಭಗ್ನತೆಗಿಂತ ಭಿನ್ನವಾದುದು. ಪ್ರಕೃತಿ ಆರಾಧಕರಾದ ಜನಪದರ ದೃಷ್ಟಿಯಲ್ಲಿ ಸುಂದರವಾದದ್ದು ಎನ್ನುವ ಕಲ್ಪನೆ ಬದುಕಿಗೆ ಹತ್ತಿರವಾದದ್ದು. ಬಾಹ್ಯ ರೂಪದ ಲಕ್ಷಣವಲ್ಲ. ಈ ಭಾವಗಳಿಂದ ಗಣಪ ವಿಕಟರೂಪಿಯಾದರೂ ಆರಾಧನೆಗೆ ಭಾಜನನಾಗಿದ್ದಾನೆ.

ಗರಿಕೆ ಬೆಳೆಗಳಿಗೆ ತೊಂದರೆ ಕೊಡುವ ಮುಖ್ಯ ಕಳೆ. ಆದರೂ ಗಣಪನ ಆಚರಣೆಯಲ್ಲಿ ಗರಿಕೆ ಅಗ್ರಸ್ಥಾನದಲ್ಲಿದೆ. ಅದು ಸಸ್ಯಸಂಕುಲದ ಪ್ರತಿನಿಧಿ ಹಾಗೂ ನಿಯಂತ್ರಕವಾಗಿದೆ. ಗರಿಕೆಯಲ್ಲಿ ಉತ್ತಮ ಔಷಧಿಯ ಗುಣಗಳಿರುವುದನ್ನು ಸಂಶೋಧನೆ ದೃಢೀಕರಿಸಿದೆ. ಗಣಪ ಪರಿಸರಸ್ನೇಹಿ ದೈವವಾಗಿರುವನು. ಪ್ರಕೃತಿ ಉತ್ಪನ್ನಗಳಾದ ಬ್ಯಾಲ, ಸೀಬೆ, ಸೀತಾಫಲ, ಬಾಳೆ, ತೆಂಗು, ವೀಳ್ಯ, ಜೇನುತುಪ್ಪಗಳ ನೈವೇದ್ಯವೇ ಇದಕ್ಕೆ ಸಾಕ್ಷಿ.

ಸಿರುಗುಪ್ಪ ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ಮಡಿಯಿಂದ ೨೧ ಕಡುಬುಗಳನ್ನು ತಯಾರಿಸಿ ಪೂಜಿಸುತ್ತಾರೆ. ಒಂದೊಂದು ಕಡುಬನ್ನು ವೀಳ್ಯದೆಲೆಯಲ್ಲಿ ಇಟ್ಟು ೧೧ ದಿನ ಓದುವ ಹುಡುಗರಿಗೆ ತಿನ್ನಿಸುವ ಆಚರಣೆಯಿದೆ. ಕಡುಬು ತಯಾರಿಕೆಯಲ್ಲಿ ಬಳಕೆಯಾದ ಬೇಳೆ, ಬೆಲ್ಲ ಇತ್ಯಾದಿ ವಸ್ತುಗಳು ಮಕ್ಕಳಲ್ಲಿಯ ಅಪೌಷ್ಠಿಕತೆಯನ್ನು ಕಡಿಮೆ ಮಾಡಿ, ಅಧ್ಯಯನದಲ್ಲಿ ಆಸಕ್ತಿವಹಿಸಲು, ದೇಹ ಮನಸ್ಸನ್ನು ಸದೃಢವಾಗಿಸಲು ಸಹಾಯಕವಾಗಿವೆ.

ಹಳ್ಳು ತಿನ್ನೋ ಕಾರ್ಯ

ಗಣಪತಿಯ ಆರಾಧಕರು ಈ ಹಬ್ಬದಲ್ಲಿ ಚಂದ್ರನನ್ನು ನೋಡಬಾರದೆಂಬ ನಿಷೇಧವಿದೆ. ಒಂದು ವೇಳೆ ನೋಡಿದರೆ, ಕಂಚಿನ ತಂಬಿಗೆಯಲ್ಲಿ ಜೋಳವನ್ನು ಅರಳು ಬರುವಂತೆ ಹುರಿದು ತಿಂದರೆ ದೋಷ

ನಿವಾರಣೆಯಾಗುತ್ತದೆಂಬ ನಂಬಿಕೆಯಿದೆ. ಲೋಹಗಳಿಗೆ ದೇಹದಲ್ಲಿಯ ಕೆಲವು ಕೊರತೆಗಳನ್ನು ನೀಗಿಸುವ ಗುಣವಿದೆ. ತಾಮ್ರದ ವಸ್ತುಗಳಲ್ಲಿಯ ಸೇವನೆಯಿಂದ ಮಾನಸಿಕ ಶಕ್ತಿ ಹೆಚ್ಚುತ್ತದೆಂಬ ಜ್ಞಾನ ಜನಪದರದಾಗಿದೆ.

ಬೀಜರೂಪಿ ಗಣಪ

ಜನಪದರಿಗೆ ಭೂಮಿಯ ಬೆಳೆಯ ಜೊತೆ ಧಾನ್ಯಗಳನ್ನು ಸಂರಕ್ಷಿಸಿಡುವ ವಸ್ತುಗಳಾದ ಕಣಜ, ವಾಡೆಗಳು ಪೂಜನೀಯ. ಇವು ಕಾಲಕ್ರಮೇಣ ಗಣಪನ ಆಕಾರಕ್ಕೆ ರೂಪಾಂತರವಾಗಿರಬೇಕು. ಗಣಪನ ಹೊಟ್ಟೆ ಧಾನ್ಯ ತುಂಬುವ ಕಣಜದ ಹೋಲಿಕೆಯಿದ್ದು, ಧಾನ್ಯದೇವತೆ ಎಂಬುದನ್ನು ತಿಳಿಸುತ್ತದೆ. ಮುಖನಾಳವುಳ್ಳ ಕಣಜದ ಮುಚ್ಚಳ ಗಣಪನ ಶಿರಸ್ಸನ್ನು, ಕಣಜವು ಗುಡಾಣದಂತಿರುವ ಗಣಪನ ಹೊಟ್ಟೆಯನ್ನು ಸಂಕೇತಿಸುತ್ತದೆ. ಹೊಟ್ಟೆ ಬಿರಿಯದಂತೆ ಬಿಗಿಯುವ ಹಗ್ಗವೇ ಹಾವು. ಧಾನ್ಯಗಳ ಶತ್ರುವಾದ ಇಲಿಯ ದಮನ ಹಾವಿನಿಂದಾಗುತ್ತದೆ. ಮೊಳಕೆಯೊಡೆದ ಬೀಜವನ್ನು ಇಲಿಗಳಿಂದ ಹಾವು ರಕ್ಷಿಸುವುದು. ಆಚರಣೆಗಳಲ್ಲಿ ಹಾವು ಫಲವಂತಿಕೆಯ ಸಂಕೇತ. ಇಲಿ ಫಲವಂತಿಕೆ ಮೂಲವಾದ ಬೀಜಸಂರಕ್ಷಕ, ಲಯದ ಸಂಕೇತ. ಜಗತ್ತಿಗೆ ಅನ್ನ ನೀಡುವ ಬೀಜ ಮೊಳಕೆಯಲ್ಲಿ ನಾಶವಾದರೆ ಜೀವಕೋಟಿಗೆ ಆಹಾರದ ಕೊರತೆ ಉಂಟಾಗುವುದು ಸಹಜ. ಇಲ್ಲಿ ಬೀಜ ಸಂರಕ್ಷಣೆ ಜವಾಬ್ದಾರಿ ಹೊತ್ತ ಹಾವನ್ನು ಹೊಟ್ಟೆಗೆ ಸುತ್ತಲಾಗಿದೆ. ಬೀಜ ನಾಶಗೊಳಿಸುವ ಇಲಿಯನ್ನು ವಾಹನವನ್ನಾಗಿಸುವುದರ ಮೂಲಕ ದಮನಿಸಲಾಗಿದೆ. ಗಣಪನ ಕಲ್ಪನೆ ಬೀಜ ಮೂಲವಾದುದೆಂಬುದನ್ನು ಇಂಥ ಅಂಶಗಳು ಸಮರ್ಥಿಸುತ್ತವೆ.

ವೈದಿಕ ದೇವತೆಗಳ ಕಲ್ಪನೆಯಲ್ಲಿ ಸೃಷ್ಟಿಕರ್ತ ಪುರುಷ. ಆದರೆ ಅದಕ್ಕೆ ಅಪವಾದ ಗಣಪನ ಹುಟ್ಟು. ಪುರಾಣಮೂಲದ ಪ್ರಕಾರ ಗಣಪ ಶಿವನ ಬೀಜದಿಂದ ಹುಟ್ಟಿದವನಲ್ಲ. ಪಾರ್ವತಿಯ ಮೈಯ ಮಣ್ಣಿನಿಂದ ಸೃಷ್ಟಿಯಾದುದರಿಂದ ಗಣಪನ ತಲೆ ಕಡಿದು, ನಂತರ ಆನೆಯ ತಲೆಯಿಂದ ಮರುಜೀವ ನೀಡಲಾಗಿದೆ. ಆದಕಾರಣ ಗಣಪನ ಹುಟ್ಟು ಫಲವಂತಿಕೆಯ ಪ್ರತೀಕವಾದ ಮಾತೃಮೂಲ ಸಂಸ್ಕೃತಿಯದ್ದಾಗಿದೆ. ಇಲ್ಲಿ ಫಲವಂತಿಕೆಯ ಪ್ರತೀಕವಾದ ಬೀಜ ಸಂರಕ್ಷಕ ದೈವ ಗಣಪ. ಇದರಿಂದ ಜನಪದರ ದೃಷ್ಟಿಯಲ್ಲಿ ಗಣಪನ ಕಲ್ಪನೆ ಬೀಜಮೂಲವಾದುದಾಗಿರಲು ಸಾಧ್ಯವಿದೆ. ವಿಜಯನಗರ ಸಾಮ್ರಾಜ್ಯದಲ್ಲಿ ಬೀಜರೂಪಿ ಗಣಪನ ಆರಾಧನೆ ಇತ್ತೆಂಬುದಕ್ಕೆ ಹಂಪಿಯಲ್ಲಿರುವ ಕಡಲೆಕಾಳು ಗಣಪ ಹಾಗೂ ಸಾಸಿವೆಕಾಳು ಗಣಪನ ವಿಗ್ರಹಗಳು ಆಧಾರವಾಗಿವೆ. ಇಂದಿಗೂ ಗಣಪನ ನೈವೇದ್ಯಕ್ಕೆ ಸಾಮಾನ್ಯವಾಗಿ ಧಾನ್ಯರೂಪದ ನೆನೆಸಿದ ಕಡಲೆಕಾಳು ಬಳಸಲ್ಪಡುತ್ತವೆ. ಹೀಗೆ ಆಹಾರಮೂಲವಾದ ಬೀಜಗಳ ಸಂರಕ್ಷಕನಾದ ಗಣಪನಿಗೆ ಜನಪದರು ಆಚರಣೆಗಳಲ್ಲಿ ಅಗ್ರಸ್ಥಾನ ನೀಡಿದ್ದಾರೆ.

ಬಯಲಾಟಗಳಲ್ಲಿ ಗಣಪನ ಆಚರಣೆಯಿದೆ. ರಂಗಪೂರ್ವದಲ್ಲಿ ಗಣಪನನ್ನು ಪೂಜಿಸಿ, ಕಾಯಿ ಒಡೆದು ಫಲತಾಂಬೂಲವನ್ನು ವಿತರಿಸುತ್ತಾರೆ. ಇಲ್ಲಿ ಕಲೆ ಪ್ರದರ್ಶಿಸುವಿಕೆಯೊಂದಿಗೆ ದೈವೀ ಆರಾಧನೆಯಿದೆ. ವಿಜಯನಗರ ಸಾಮ್ರಾಜ್ಯ ಕಾಲದಿಂದಲೂ ಆಚರಣೆಗಳಲ್ಲಿ ಹಿಂದೂ, ಮುಸ್ಲಿಮರು ಭಾವೈಕ್ಯತೆಯನ್ನು ಕಾಪಾಡಿಕೊಂಡು ಬಂದಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲಿ ನೆರವೇರುವ ಆಚರಣೆಗಳಲ್ಲಿ ಎರಡು ಸಮುದಾಯಗಳ ಪಾಲ್ಗೊಳ್ಳುವಿಕೆ ಇದೆ. ಇತ್ತೀಚೆಗೆ ಸಿರುಗುಪ್ಪ ತಾಲೂಕು ದರೂರಿನಲ್ಲಿ ಮುಸ್ಲಿಂ ಸಮುದಾಯದವರಿಂದ ಗಣಪನ ದೇವಸ್ಥಾನ

ನಿರ್ಮಾಣಗೊಂಡಿದೆ. ಚೌತಿಯ ದಿನ ಹಿಂದುಗಳ ಜೊತೆ ತಾವು ಕಾಯಿ ಒಡೆದು ಪೂಜೆ ಸಲ್ಲಿಸುತ್ತಾರೆ. ಜಾತಿ, ಜಾತಿಗಳ ಮಧ್ಯೆ ದೊಂಬಿ, ಗಲಾಟೆಗಳು ನಡೆಯುವ ಪ್ರಸ್ತುತ ಸಮಯದಲ್ಲಿ ಗಣಪ ಜಾತಿ ಸಾಮರಸ್ಯ ಮತ್ತು ಪರಧರ್ಮ ಸಹಿಷ್ಣುತೆಯ ಪ್ರತೀಕವಾಗಿ ಆಚರಿಸಲ್ಪಡುವುದು ಇಲ್ಲಿಯ ವಿಶೇಷತೆಯಾಗಿದೆ. ಪ್ರಾಣಿ ಹಾಗೂ ಮಾನವ ಮಿಶ್ರಿತ ಆಕೃತಿಯ ಸೃಷ್ಟಿಯ ಹಿಂದೆ ಪ್ರಕೃತಿಯಲ್ಲಿರುವ ಸಹಬಾಳ್ವೆ ಮತ್ತು ಸಾಮರಸ್ಯದ ನೆಲೆಯಿದೆ. ಕೃಷಿಕರ ದುಡಿಮೆಯಲ್ಲಿ ಹಲವಾರು ಪ್ರಾಣಿ ಪಕ್ಷಿಗಳು ಪಾಲುದಾರರು ಸ್ನೇಹಿಭಾವ, ಪರಸ್ಪರ ಹಂಚಿ ತಿನ್ನುವ ನೀತಿ, ಸಹಬಾಳ್ವೆ ನಡೆಸುವ ಅನಿವಾರ್ಯತೆಯನ್ನು ಗಣಪತಿಯ ಆರಾಧನೆಯಲ್ಲಿ ಕಾಣುತ್ತೇವೆ.

ಇಷ್ಟು ಜೀವಪರವಾದ, ಮನುಷ್ಯ ಸಂಸ್ಕೃತಿಯನ್ನು ಕಟ್ಟಿಕೊಡುವಂಥ, ಕೃಷಿಪರವಾಗಿರುವಂಥ ಗಣಪನ ಆಚರಣೆ ಇಂದು ವ್ಯಾಪಾರೀಕರಣವಾಗುತ್ತಿದೆ. ವೈವಿಧ್ಯತೆಯನ್ನು ಬಿಂಬಿಸುವ ಗಣಪನ ಉತ್ಸವ, ಕಾಲಾನಂತರದಲ್ಲಿ ಈ ಕೆಳಕಂಡ ಅಂಶಗಳಿಂದ ಪ್ರಕೃತಿಯನ್ನು ಕಲುಷಿತಗೊಳಿಸುವ ವಾತಾವರಣ ಸೃಷ್ಟಿಗೊಳ್ಳುವಂತಾಗಿದೆ.

* ಮನೆ ಮನೆಯಿಂದ ಹಣ ಸಂಗ್ರಹಣೆ.
* ಧ್ವನಿವರ್ಧಕಗಳ ಅಬ್ಬರ.
* ವೇದಿಕೆ ಅಲಂಕರಿಸಲು ಬಳಸುವ ಪ್ಲಾಸ್ಟಿಕ್ ಕಾಗದಗಳ ರಾಶಿ.
* ಪಟಾಕಿ ಶಬ್ದದಿಂದ ಉಂಟಾಗುವ ವಾಯುಮಾಲಿನ್ಯ.
* ಹಾನಿಕಾರಕ ರಾಸಾಯನಿಕ ವಸ್ತುಗಳಿಂದ ತಯಾರಾದ ಕೃತಕ ಬಣ್ಣಗಳ ಬಳಕೆ.
* ಮೂರ್ತಿಗಳನ್ನು ಜಲಮೂಲಗಳಲ್ಲಿ ವಿಸರ್ಜನೆ ಮಾಡುವುದರಿಂದ ಅಂತರ್ಜಲ ವಿಷಕಾರಿಯಾಗುವುದು.
* ಇತ್ತೀಚೆಗೆ ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ಗಣಪನ ವಿಗ್ರಹಗಳನ್ನು ತಯಾರಿಸುವುದರಿಂದ ಅವು ನೀರಿನಲ್ಲಿ ಕರಗದೇ ಜಲಮೂಲವನ್ನು ಒತ್ತಿಸುತ್ತಿವೆ.

ತಿಲಕರು ರಾಷ್ಟ್ರೀಯತೆಯನ್ನು ಉದ್ದೀಪನಗೊಳಿಸಲು ಪ್ರಾರಂಭಿಸಿದ ಗಣಪನ ಉತ್ಸವ, ಆರಂಭಿಕ ಘಟ್ಟದಲ್ಲಿ ತನ್ನ ಆಶಯದ ಹಾದಿಯಂತೆ ಸಾಗಿತ್ತು. ಇಂದು ಸ್ಥಾಪಿತ ಹಿತಾಸಕ್ತಿಗಳ ದುರುದ್ದೇಶದಿಂದ ಹುಟ್ಟುಹಾಕುತ್ತಿರುವ ಕೋಮುಗಲಭೆಗಳು, ಗಣಪನ ಉತ್ಸವದ ಪಾವಿತ್ರತೆ, ಸೌಹಾರ್ದತೆ, ರಾಷ್ಟ್ರೀಯತೆಯ ಆಶಯಕ್ಕೆ ಭಂಗ ತರುವ ಸಂಗತಿಗಳಾಗಿವೆ. ಇಂಥ ಸಮಯದಲ್ಲಿ ಆಚರಣೆಯಲ್ಲಿಯ ಜೀವಮುಖಿ ಅಂಶಗಳ ಉಳಿಯುವಿಕೆಯತ್ತ ಗಮನಹರಿಸುವ ಅಗತ್ಯತೆ ಇದೆ.

ಇಲಿ ಪೂಜೆ

ಹಗರಿಬೊಮ್ಮನಹಳ್ಳಿ ಹಾಗೂ ಕೂಡ್ಲಿಗಿ ತಾಲೂಕಿನ ಉಜ್ಜಯಿನಿ, ಬೆನಕನಹಳ್ಳಿ, ರಾಂಪುರ, ಹೊಸಹಳ್ಳಿ, ಹೂಡೇಂ ಸುತ್ತಲ ಗ್ರಾಮಗಳಲ್ಲಿ ಹೆಚ್ಚಾಗಿ ನೇಕಾರ ಕುಟುಂಬಗಳು ವಾಸಿಸುತ್ತಿದ್ದು, ವಿಶೇಷವಾಗಿ ಗಣಪನ ಹಬ್ಬದಲ್ಲಿ ಇಲಿ ಪೂಜೆ ಪ್ರಚಲಿತದಲ್ಲಿದೆ. ಚತುರ್ಥಿಯ ದಿನ ಗಣಪನಂತೆ ಮಣ್ಣಿನಿಂದ ಮಾಡಿದ ಇಲಿರಾಯನನ್ನು ಮೂರು ದಿನ ಮನೆಯಲ್ಲಿಟ್ಟು ಪೂಜಿಸಿ, ಜಲಮೂಲದಲ್ಲಿ ವಿಸರ್ಜಿಸುತ್ತಾರೆ. ಸಾಕಷ್ಟು ದಾರ ಮತ್ತು ಕಚ್ಚಾ

ಸಾಮಗ್ರಿಗಳು ತಮ್ಮ ದಿನನಿತ್ಯದ ವೃತ್ತಿಯಲ್ಲಿ ಬಳಸಲ್ಪಡುತ್ತವೆ. ಅವನ್ನೆಲ್ಲಾ ಕಡಿದು ಹಾಳು ಮಾಡದಿರಲೆಂಬ ಆಶಯ ಆಚರಣೆಯದ್ದಾಗಿದೆ. ಇಲಿ ಪೂಜೆ ಸಮಯದಲ್ಲಿ ಮೂರು ದಿನ ನೂಲು ಮುಟ್ಟುವಂತಿಲ್ಲ, ಕೈಮಗ್ಗದಲ್ಲಿ ಬಟ್ಟೆ ನೇಯುವಂತಿಲ್ಲ.

ಕೈಗಾರಿಕೀಕರಣದಿಂದ ಅತಂತ್ರ ಸ್ಥಿತಿಯಲ್ಲಿರುವ ನೇಕಾರರ ಕುಟುಂಬಗಳಿಗೆ ಸಂಘ ಸಂಸ್ಥೆಗಳು, ಸರ್ಕಾರ ನೆರವು ನೀಡಿದಲ್ಲಿ ಮಾತ್ರ ಬದುಕು ಉತ್ತಮವಾಗುವುದಲ್ಲದೆ, ಇಲಿರಾಯನ ಪೂಜೆಯಂತಹ ನೇಕಾರರ ವಿಶಿಷ್ಟ ಆಚರಣೆ ಉಳಿಯಲು ಸಾಧ್ಯ ಎಂಬುದು ನೇಕಾರರ ಅಭಿಪ್ರಾಯವಾಗಿದೆ. ಜನಪದರು ಮಳೆ, ಗಾಳಿ, ಗುಡುಗು, ಸಿಡಿಲಿಗೆ ಹೆದರಿ ಪ್ರಕೃತಿಯನ್ನು ಆರಾಧಿಸುವಂತೆ, ತಮ್ಮ ವೃತ್ತಿಮೂಲವನ್ನು ಸಂರಕ್ಷಿಸಲು ಇಲಿ ಆರಾಧಕರಾಗಿದ್ದಾರೆ. ಪುಟ್ಟ ಇಲಿಯಾದರೂ, ದೊಡ್ಡ ಗಣಪನಿಗೆ ವಾಹನ. ತಾಳ್ಮೆ ಹಾಗೂ ಚಟುವಟಿಕೆ ಯಿಂದಿರುವ ಪ್ರಾಣಿ, ವಿಘ್ನನಿವಾರಕನ ವಾಹನವೆಂಬ ದೈವೀಭಾವಗಳು ಇಲಿರಾಯನ ಆಚರಣೆಗೆ ನಾಂದಿ ಯಾಗಿರಲು ಸಾಧ್ಯವಿದೆ.

೩.೧.೩. ತೊಗೆ ರೊಟ್ಟಿ ಚೆನ್ನಮ್ಮನ ಆಚರಣೆ

ಸಕಲ ಜೀವರಾಶಿಗೂ ಆಶ್ರಯ ತಾಣ ಮತ್ತು ಆಹಾರ ಮೂಲ ಮಣ್ಣು. ಅದನ್ನು ಕೃಷಿಕರು ಗೌರವದಿಂದ ಭೂಮಿತಾಯಿ ಎಂದು ಕರೆಯುತ್ತಾರೆ. ಹಾಗಾಗಿ ಭೂಮಿತಾಯಿ ಕೃಷಿಕರಿಂದ ವಿವಿಧ ರೀತಿಯಲ್ಲಿ ಆರಾಧಿಸಲ್ಪಡುತ್ತಾಳೆ. ಈ ರೀತಿ ಕೃಷಿ ಹಿನ್ನೆಲೆಯಲ್ಲಿ ಪ್ರಚಲಿತದಲ್ಲಿರುವುದು ತೊಗೆ ರೊಟ್ಟಿ ಚೆನ್ನಮ್ಮನ ಆಚರಣೆ. ಹಗರಿಬೊಮ್ಮನಹಳ್ಳಿ ತಾಲೂಕು ನೆಲ್ಲುಕುದುರೆ, ಕೋಗಳಿ ಭಾಗಗಳಲ್ಲಿ ಏಪ್ರಿಲ್ ತಿಂಗಳಲ್ಲಿ ಮುಂಗಾರು ಪ್ರಾರಂಭವಾದಾಗ, ಅಕ್ಟೋಬರ್ ತಿಂಗಳಲ್ಲಿ ಹಿಂಗಾರು ಪ್ರಾರಂಭವಾದಾಗ, ವರ್ಷದಲ್ಲಿ ಎರಡು ಸಲ ಶರಣೆ ಚೆನ್ನಮ್ಮನನ್ನು ಪೂಜಿಸಿ ಬಿತ್ತನೆ ಕಾರ್ಯ ಪ್ರಾರಂಭಿಸುತ್ತಾರೆ. ಬಹುತೇಕ ಕೃಷಿಮೂಲ ದೈವಗಳ ಆಶ್ರಯತಾಣ ಹೊಲಗಳಾಗಿರುತ್ತವೆ. ಹೊಲಕ್ಕೆ ಹೊಂದಿಕೊಂಡಂತೆ ಇರುವ ಗಡಿಭಾಗದಲ್ಲಿ, ಬೇವಿನ ಮರದ ಕೆಳಗಡೆ ಸುಣ್ಣ ಲೇಪಿತ ಐದು ದುಂಡನೆಯ ಬಿಳಿಕಲ್ಲುಗಳನ್ನು ಪ್ರತಿಷ್ಠಾಪಿಸಿ ಪೂಜಿಸುತ್ತಾರೆ. ಇಲ್ಲಿ ಮರ, ಕಲ್ಲು ಚೆನ್ನಮ್ಮನ ಪ್ರತಿರೂಪಗಳು. ಕೆಂಪು ಬಣ್ಣದ ಸೀರೆಯನ್ನುಡಿಸಿ ಉಡಿ ತುಂಬುತ್ತಾರೆ. ತೊಗೆ, ರೊಟ್ಟಿ ಇಲ್ಲಿ ಎಡೆಯಾಗಿ ಅರ್ಪಿತವಾಗುತ್ತದೆ. ನಂತರ ಬಿತ್ತುವ ಕೂರಿಗೆ, ಎತ್ತುಗಳನ್ನು ಪೂಜಿಸಿ, ಸಮೃದ್ಧಿಯ ಸಂಕೇತವಾದ ಹಾಲು, ತುಪ್ಪ ಉಗ್ಗುವುದರ ಮೂಲಕ ಬಿತ್ತನೆ ಕಾರ್ಯ ಪ್ರಾರಂಭಿಸುತ್ತಾರೆ.

'ಹದ ನೋಡಿ ಹರಗಬೇಕು, ಬೆದೆ ನೋಡಿ ಬಿತ್ತಬೇಕು' ಎನ್ನುವ ಗಾದೆಯಂತೆ ಸೂಕ್ತ ಕಾಲಮಾನದಲ್ಲಿ ಬಿತ್ತಿದಾಗ ಬೀಜ ಮೊಳಕೆಯೊಡೆದು ಸದೃಢ ಬೆಳೆ ನೀಡುತ್ತದೆ. ಕೃಷಿಕರ ಬದುಕಿನ ರಕ್ಷಣೆಯ ಹೊಣೆಗಾರಿಕೆಯುಳ್ಳ ಋತುಮಾನಕ್ಕೆ ಅನುಗುಣವಾಗಿ ಆಚರಿಸಲ್ಪಡುವ ಆಚರಣೆಯಾಗಿದೆ. ಭೂಮಿಯ ಮೇಲೆ ಅಪಾರ ಶ್ರದ್ಧೆ, ಗೌರವ, ಭಕ್ತಿ ಕೃಷಿಕರಿಗಿದೆ. ಏನನ್ನಾದರೂ ದೃಢೀಕರಿಸುವಾಗ ಭೂಮಿತಾಯಿಯ ಮೇಲೆ ಆಣೆ ಮಾಡುವುದು ಅವರಲ್ಲಿಯ ದೈವೀಭಾವವನ್ನು ತಿಳಿಸುತ್ತದೆ. ಇಲ್ಲಿ ಶರಣೆ ಚೆನ್ನಮ್ಮ ಭೂಮಿತಾಯಿಯ ಪ್ರತಿರೂಪವಾಗಿ ಆರಾಧಿಸಲ್ಪಡುತ್ತಾಳೆ. ಈ ಆಚರಣೆಯಲ್ಲಿ ವೀರಶೈವ ಶರಣೆ ಚೆನ್ನಮ್ಮನ ಕಥೆ ಮಹತ್ವ ಪಡೆದುಕೊಂಡಿದೆ. "ಹಣದ ಆಸೆಯಿಂದ ಅವಳ ತಂದೆ ಶವದ ಜೊತೆ ಮದುವೆ ಮಾಡಿಸುತ್ತಾನೆ. ಚೆನ್ನಮ್ಮ ಹೊಲದ ಮಣ್ಣಿನಿಂದ ಎತ್ತುಗಳನ್ನು ಮಾಡಿ ಪೂಜಿಸಿ, ಶವವಾದ ಗಂಡನ ಪ್ರಾಣವನ್ನು ಮರಳಿ ಪಡೆಯುತ್ತಾಳೆ. ಅವಳ ಪಾತಿವ್ರತ್ಯ

ಮತ್ತು ಭಕ್ತಿಯ ಕುರುಹಾಗಿ ರೋಹಿಣಿ ನಕ್ಷತ್ರಕ್ಕೆ ಚೆನ್ನಮ್ಮನ ದಂಡೆ ಎಂದು ಕರೆಯುತ್ತಾರೆ" (ಗದ್ದಗಿಮಠ.ಬಿ.ಎಸ್, ಪು. ೬೮). 'ರೋಹಿಣಿ ಮಳೆ ಬಂದರೆ ಓಣೆಲ್ಲಾ ಜೋಳ' ಎಂಬ ಗಾದೆಯ ಪ್ರಕಾರ, ಈ ನಕ್ಷತ್ರದಲ್ಲಿ ಮಳೆಯಾದರೆ ಜೋಳದ ಬಿತ್ತನೆಗೆ ಒಳ್ಳೆಯ ಕಾಲವೆಂಬುದರ ಸೂಚನೆಯಾಗಿದೆ. ಮಣ್ಣಿನ ಬಸವನ ಪೂಜೆಯಿಂದ ಗಂಡನ ಮರುಹುಟ್ಟು ಪಡೆದವಳು ಚೆನ್ನಮ್ಮ. ಮಣ್ಣಿಗಿರುವ ಶಕ್ತಿಯನ್ನು ಆಚರಣೆಯ ಮೂಲಕ ಸಾಬೀತುಪಡಿಸಿದ್ದಾಳೆ. ಇದರಿಂದ ಚೆನ್ನಮ್ಮ ಮಳೆ ನಕ್ಷತ್ರವಾಗಿ, ಭೂಮಿತಾಯಿಯಾಗಿ ಆರಾಧಿಸಲ್ಪಟ್ಟಿದ್ದಾಳೆ. ಸಾಮಾನ್ಯ ಮಹಿಳೆಯಾದ ಚೆನ್ನಮ್ಮ ತಾನು ನಡೆಸಿದ ಆಚರಣೆಯ ಫಲದಿಂದ ದೈವತ್ವಕ್ಕೇರಿದ್ದಾಳೆ.

ಜನಪದರಿಗೆ ಫಲವಂತಿಕೆಯನ್ನು ಪ್ರತಿನಿಧಿಸುವ ಭೂಮಾತೆ ಮಾತೃತ್ವದ ಸಂಕೇತ. ಚೆನ್ನಮ್ಮ ಇಲ್ಲಿ ಮಾತೃ ಸ್ವರೂಪಿಯಾಗಿದ್ದಾಳೆ. ಆರಂಭದ ಮಳೆಗಾಲದಲ್ಲಿ ಪ್ರಥಮವಾಗಿ ಮಣ್ಣು ಪೂಜಿಸಿದ ಶರಣೆಯನ್ನು, ತಾವು ಪೂಜಿಸಿ ಉಡಿ ತುಂಬಿದರೆ ಬೆಳೆ ಸಮೃದ್ಧಿಯಾಗುವುದೆಂಬ ಆಶಯ ಕೃಷಿಕರಲ್ಲಿದೆ.

ಹಗರಿಬೊಮ್ಮನಹಳ್ಳಿ ಭಾಗದಲ್ಲಿ ಜೋಳ, ತೊಗರಿ ಪ್ರಮುಖ ಬೆಳೆಯಾಗಿದ್ದು, ಅವು ಆಚರಣೆಯಲ್ಲಿ ಮಹತ್ವ ಪಡೆದುಕೊಂಡಿವೆ. 'ಜೋಳದ ರೊಟ್ಟಿ ತಿಂದರೆ ರಟ್ಟ್ಯಾಗ ಕಸವು' ಎನ್ನುವ ಜನಪದರ ಮಾತಿನಂತೆ, ಪೌಷ್ಠಿಕತೆಯಿಂದ ಕೂಡಿರುವ ಜೋಳದ ರೊಟ್ಟಿ ಪ್ರತಿದಿನದ ಸಾಮಾನ್ಯ ಅಡುಗೆಯಾಗಿದೆ. ತಾವು ಬೆಳೆಯುವ ಆಹಾರ ಧಾನ್ಯಗಳ ಬಳಕೆ ದೈವಕ್ಕೆ ಅರ್ಪಿತಗೊಳ್ಳುವ ಎಡೆಯಲ್ಲಿ ಕಂಡುಬರುತ್ತದೆ.

ಬೇವಿನ ಮರ ಆಚರಣೆಗೆ ಆಶ್ರಯ ತಾಣ. ಬೇವು ಬೆಳೆಗಳಿಗೆ ಬೀಳುವ ರೋಗ, ಕೀಟಬಾಧೆ ತಡೆಗಟ್ಟುವುದಲ್ಲದೇ ಉಪಕಾರಿ ಕೀಟಗಳನ್ನು ಉಳಿಸಿ, ಅಪಕಾರಿ ಕೀಟಗಳನ್ನು ನಾಶಪಡಿಸುವ ಶಕ್ತಿ ಪಡೆದಿದೆ. ಜೈವಿಕ ಕೀಟನಾಶಕವಾದ ಬೇವನ್ನು ಆಚರಣೆಯ ನೆಪದಲ್ಲಿ ಹೊಲಗಳಲ್ಲಿ ಕಡ್ಡಾಯವಾಗಿ ಬೆಳೆಸುವುದು ಕ್ಷೇತ್ರಕಾರ್ಯದಿಂದ ಕಂಡುಬಂದಿದೆ.

ಕೃಷಿಕರು ಭೂಮಿ, ಮಳೆ, ಬೀಜ ಮತ್ತು ಪ್ರಕೃತಿಯೊಂದಿಗೆ ಗಾಢವಾದ ಸಂಬಂಧ ಹೊಂದಿದ್ದಾರೆ. ಈ ಆಚರಣೆಯು ಕೃಷಿಕರನ್ನು ವ್ಯವಸಾಯದ ಕೆಲಸ ಕಾರ್ಯಗಳಿಗೆ ಮಾನಸಿಕವಾಗಿ ಸಿದ್ಧಗೊಳಿಸುತ್ತದೆ. ಇಂಥ ಆಚರಣೆಗಳ ಮೂಲಕ ಭೂಮಿ ಮತ್ತು ರೈತನ ಸಂಬಂಧ ಗಟ್ಟಿಗೊಳ್ಳುತ್ತದೆ.

ಇಂದು ಮಳೆಯ ವೈಪರೀತ್ಯದಿಂದ ಬಿತ್ತನೆ ಕಾಲ ಬದಲಾಗುತ್ತಿದ್ದು, ಆಚರಣೆಗಳು ಸ್ಥಿತ್ಯಂತರಗೊಳ್ಳುತ್ತಿವೆ. ಕಾಲದೊಂದಿಗೆ ಆಚರಣೆಗಳಲ್ಲಿ ಬದಲಾವಣೆ ಕಂಡುಬಂದರೂ, ಪರೋಕ್ಷವಾಗಿ ಕಂಡುಬಂದ ಸಂಗತಿಗಳನ್ನು ಆಧಾರವಾಗಿಟ್ಟುಕೊಂಡು ವಿವೇಚಿಸಲು ಸಾಧ್ಯ. ದಾಖಲಾತಿ ರೂಪದಲ್ಲಿ ಲಭ್ಯವಿದ್ದಾಗ ಇದು ಸುಲಭ ಸಾಧ್ಯ. ಬಹುತೇಕ ಆಚರಣೆಗಳು ಇಂದಿಗೂ ಮೌಖಿಕವೇ ಹೊರತು, ಅಕ್ಷರರೂಪಕ್ಕೆ ಇಳಿದಿಲ್ಲ. ಅವುಗಳ ಒಳ-ಹೊರಗನ್ನು ಅರಿತ ತಲೆಮಾರುಗಳು ಸಹ ಅಳಿಯುತ್ತಿವೆ.

೩.೧.೪. ಗುಡಿ ಹುಣ್ಣಿಮೆ ಆಚರಣೆ

ಭರತ ಹುಣ್ಣಿಮೆಗೆ ಗುಡಿ ಹುಣ್ಣಿಮೆ, ಮಾಘಮಾಸದ ಹುಣ್ಣಿಮೆ ಎಂದು ಬಳ್ಳಾರಿ ಜಿಲ್ಲೆಯಲ್ಲಿ ಕರೆಯಲಾಗುತ್ತದೆ. ಆಗ ಚಳಿ ಕಡಿಮೆಯಾಗಿ, ಬೇಸಿಗೆ ಪ್ರಾರಂಭವಾಗುವ ಸಮಯ. ಹಂಪಿ ಪರಿಸರದಲ್ಲಿ

ಮಾಘಮಾಸದಲ್ಲಿ ಕೃಷಿ ಸಂಬಂಧಿ ಆಚರಣೆಯೊಂದು ಪ್ರಚಲಿತದಲ್ಲಿದೆ. ಕೃಷಿ ಉತ್ಪನ್ನಗಳಿಂದ ಗೃಹ ಶೃಂಗಾರ ನಡೆಯುತ್ತದೆ. ಹಿತ್ತಾಳೆಯ ತಂಬಿಗೆಗೆ(ಕೊಡಕ್ಕೆ) ರೇಶಿಮೆಯ ಬಟ್ಟೆ ಹೊದಿಸಿ, ಅದಕ್ಕೆ ಬೇವು, ಮಾವಿನ ಸೊಪ್ಪು ಕಟ್ಟಿ, ವಿವಿಧ ಹೂಗಳಿಂದ ಪೂಜಿಸಿ ನಂತರ ಮನೆಯ ಮುಂದೆ ಧ್ವಜ ನಿಲ್ಲಿಸಲಾಗುತ್ತದೆ. ಇದು ದೇವರನ್ನು ಕರೆದುಕೊಳ್ಳುವ ಸಂಪ್ರದಾಯವೆಂದು ಹೇಳುತ್ತಾರೆ. ಮಳೆಗಾಲದ ದಿನಗಳಲ್ಲಿ ದೇವರು ಹೊಲಗಳಲ್ಲಿ ವಾಸಿಸುತ್ತಿರುವನೆಂದೂ, ಗುಡಿ ಹುಣ್ಣಿಮೆಯ ಮೊದಲ ದಿನ ಮರಳಿ ಮನೆಗೆ ಬರುವನೆಂಬ ನಂಬಿಕೆಯಿದೆ. ಮಾವಿನ ಎಲೆ, ಗೋಧಿ ತೆನೆ, ಕಡಲೆ ಗಿಡದ ಕೊಂಬೆ, ಎಕ್ಕೆ ಹೂವಿನ ಗೊನೆ ಹೀಗೆ ಕೃಷಿ ಸಂಪತ್ತಿನ ಪ್ರತೀಕವಾದ ಸಸ್ಯೋತ್ಪನ್ನಗಳ ತೋರಣ ಕಟ್ಟಿ ದೇವರನ್ನು ಸ್ವಾಗತಿಸುತ್ತಾರೆ. ಕೃಷಿಕರ ಹೊಸ ವರ್ಷಾರಂಭದ ಕಾಲವಿದು. ಹೊಸ ಧಾನ್ಯದ ತೆನೆಗಳನ್ನು ಮೊದಲು ದೇವರಿಗೆ ಅರ್ಪಿಸಿ, ನಂತರ ಕಣ ಮಾಡಿ ಧಾನ್ಯ ಮನೆಗೆ ತರುವ ಸಂಪ್ರದಾಯವಿದೆ. ಪ್ರತಿ ಮನೆಯಲ್ಲೂ ಈ ರೀತಿಯ ವಿಶಿಷ್ಟ ಆಚರಣೆ ನೆರವೇರುತ್ತದೆ.

'ಗುಡಿ' ಎಂದರೆ 'ಧ್ವಜ'ವೆಂದು ಜನಪದರು ಅರ್ಥೈಸುತ್ತಾರೆ. ಹಿಂದೆ ಮಾಘ ಪೌರ್ಣಿಮೆಯಂದು ಹೊಸ ವರ್ಷದ ಧ್ವಜ ಪೂಜೆ ಆಚರಣೆ ಇದ್ದಿರಬೇಕು. ಇಂದು ಮನೆಯ ಮುಂಬಾಗಿಲುಗಳಿಗೆ ಕಟ್ಟುವ ತೋರಣ, ಧ್ವಜ, ಧಾನ್ಯದ ತೆನೆಗಳು ಕೃಷಿ ಸಂಪತ್ತಿನ ಸಂಕೇತ. ಹಂಪಿ ಪರಿಸರದಲ್ಲಿ ಈ ಧ್ವಜವನ್ನು ಹಿಂದಿನ ದೊರೆಗಳ ವಿಜಯದ ಸಂಕೇತವೆಂದು ಭಾವಿಸಿರುತ್ತಾರೆ. ಇದನ್ನು ವಿರೂಪಾಕ್ಷನ ಜಾತ್ರೆಯವರೆಗೂ ಹಾರಿ ಬಿಡಲಾಗುತ್ತದೆ. ಹೀಗೆ ಧಾರ್ಮಿಕ ಆಚರಣೆಯೊಂದು ರಾಜಕೀಯ ಘಟನೆಯ ಆಯಾಮವನ್ನು ಪಡೆದುಕೊಂಡಿದೆ. ಈ ಆಚರಣೆಯಲ್ಲಿ ನವಧಾನ್ಯದ ತೆನೆಗಳು ಅಭಿವೃದ್ಧಿಯ ಸಂಕೇತ; ಜೀವಂತಿಕೆಯ ಲಕ್ಷಣ. ಶುಭಸೂಚಕವಾಗಿ ಬಳಸಲ್ಪಡುತ್ತವೆ. ಭೂಮಿ ಕೃಷಿ ಉತ್ಪನ್ನಗಳ ಮಾತೃದೇವತೆ. ಅದು ಜನಪದರ ಶ್ರೇಯಸ್ಸಿಗೆ ವಿಜಯದ ಸಂಕೇತ. ಬದುಕಿನ ಕೇಂದ್ರಶಕ್ತಿಯಾದ ಭೂಮಾತೆ ವರ್ಷಾಂತ್ಯದವರೆಗೆ ಕೃಷಿ ಚಟುವಟಿಕೆಗಳನ್ನು ಯಶಸ್ವಿಯಾಗಿ ನೆರವೇರಿಸಿದಳೆಂಬ ದೈವೀಭಾವ ಆಚರಣೆಯ ಹಿನ್ನೆಲೆಯಾಗಿರಲು ಸಾಧ್ಯವಿದೆ.

ಬಂಡಿಗಾಲಿ ಪೂಜೆ

ಕೃಷಿ ಉಪಕರಣಗಳು ಜನಪದರ ಬದುಕಿನ ಅವಿಭಾಜ್ಯ ಅಂಗಗಳಾಗಿವೆ. ಕೃಷಿ ಚಟುವಟಿಕೆಯಲ್ಲಿ ಬಂಡಿಗೆ ಮಹತ್ವದ ಸ್ಥಾನವಿದೆ. ಬಂಡಿಗೆ, ಗಾಡಿ, ಚಕ್ಕಡಿಗಳೆಂಬ ಪದ ಬಳಕೆಯಲ್ಲಿದೆ. "ಪ್ರಾಚೀನ ನಾಗರಿಕತೆಯ ಪ್ರದೇಶಗಳಲ್ಲಿ ನಡೆದ ಉತ್ಖನನದಲ್ಲಿ ಚಿತ್ರಕಲೆ ಹಾಗೂ ಶಿಲ್ಪದ ಪ್ರಾಚೀನ ಮಾದರಿಗಳಲ್ಲಿ ಗಾಡಿಗಳು ಕಂಡುಬಂದಿರುವುದು. ಮಾನವ ಜನಾಂಗಕ್ಕೆ, ಅವು ಎಂಥ ಉಪಯುಕ್ತ ಸಾಧನಗಳಾಗಿದ್ದವೆಂಬುದನ್ನು ತಿಳಿಸುತ್ತದೆ".[೫] ಕ್ರಿ.ಶ. ೧೫ನೇ ಶತಮಾನಕ್ಕೆ ಹಿಂದೆ ಗಾಡಿಗಳ ಆವಿಷ್ಕಾರವಾಗಿರುವುದಾಗಿ, ಸಂಸ್ಕೃತಿಯನ್ನು ಪೋಷಿಸಿದ ಜನರೇ ಮೊದಲ ಬಾರಿಗೆ ಗಾಡಿಯನ್ನು ಕಂಡುಹಿಡಿದಿರುವರೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ.

ಎತ್ತುಗಳಂತೆ ಗಾಡಿಯೂ ಸಹ ಕೃಷಿಕರಿಂದ ಪೂಜಿಸಲ್ಪಡುತ್ತದೆ. ಈ ಹಿನ್ನೆಲೆಯಲ್ಲಿ ಹಡಗಲಿ ತಾಲೂಕು ಮಲ್ಲನಕೇರಿ ಭಾಗದಲ್ಲಿ ಭರತಹುಣ್ಣಿಮೆಯ ದಿನ ಬಂಡಿಗಾಲಿ ಪೂಜಿಸುವ ಆಚರಣೆ ಇದೆ. ಅಂದು ಬಂಡಿಯಿಂದ ಗಾಲಿಯನ್ನು ಬೇರ್ಪಡಿಸಿ, ಅಚ್ಚುಹಾಕಿ ನಿಲ್ಲಿಸುತ್ತಾರೆ. ಅದಕ್ಕೆ ಹೊಸ ಸೀರೆ ಉಡಿಸಿ, ಮುತ್ತೈದೆಯರಿಗೆ ಉಡಿ ತುಂಬುತ್ತಾರೆ.

'ಹುರುಳಿ ಹೂರಣ',[೬] ಹುರುಳಿ ಕಟ್ಟಿನಸಾರು, ಅನ್ನ ಎಡೆ ಅರ್ಪಿಸಿ ಸಾಮೂಹಿಕ ಭೋಜನ ಮಾಡುತ್ತಾರೆ. 'ಹುಳ್ಳಿ ಹೂರಣ, "ಮಿಳ್ಳಿ ಕಣಕ"[೭], ನಡೀ ಉಣ್ಣಾನ" ಎಂದು ಹಾಸ್ಯ ಮಾಡುವುದಿದೆ. ಏಕೆಂದರೆ ಬಳ್ಳಾರಿ ಜಿಲ್ಲೆಯಲ್ಲಿ ಭರತ ಹುಣ್ಣಿಮೆಯ ದಿನ ಹುರುಳಿಯ ಹೂರಣ ಮಾಡುವುದು ಕಡ್ಡಾಯ. ಹೊಸ ಧಾನ್ಯಗಳ ಬಳಕೆಯನ್ನು ಪ್ರಾರಂಭಿಸುವ ಸಾಂಕೇತಿಕ ಆಚರಣೆಯಿದು. ಹುರುಳಿ ಅತ್ಯಂತ ಕನಿಷ್ಠ ವರ್ಗದ ಧಾನ್ಯವಾದರೂ, ಅದರಲ್ಲಿಯ ಪೌಷ್ಠಿಕಾಂಶಗಳ ಪ್ರಾಮುಖ್ಯತೆಯನ್ನು ಅರಿತು ಜನಪದರು ವರ್ಷಕ್ಕೊಮ್ಮೆ ಆಚರಣೆಯ ಮೂಲಕ ಹುರುಳಿ ಬಳಕೆಯನ್ನು ಕಡ್ಡಾಯಗೊಳಿಸಿದ್ದಾರೆ. ಜಾನುವಾರುಗಳಿಗೂ ಪೌಷ್ಠಿಕಾಂಶ ಸಿಗಲೆಂದು ನೆನೆಸಿದ ಹುರುಳಿಯ ನುಚ್ಚನ್ನು ತಿನ್ನಿಸುತ್ತಾರೆ.

ಕೃಷಿ ಚಟುವಟಿಕೆಗಳು ಪೂರ್ಣಗೊಳ್ಳುವ ಸಮಯ. ಬಂಡಿಗಾಲಿಯನ್ನು ಪೂಜಿಸುವುದರೊಂದಿಗೆ, ಎತ್ತು, ಬಂಡಿಗಳಿಗೂ, ರೈತರಿಗೂ ವಿಶ್ರಾಂತಿ ಸಮಯವೆಂಬುದನ್ನು ಆಚರಣೆ ಸಂಕೇತಿಸುತ್ತದೆ. ಕೃಷಿಕರ ಚಟುವಟಿಕೆಗಳ ಆರಂಭ, ಮುಕ್ತಾಯಗಳು ಈ ರೀತಿ ಅರ್ಥಪೂರ್ಣ ಆಚರಣೆಗಳೊಂದಿಗೆ ತಮ್ಮ ಅಸ್ತಿತ್ವವನ್ನು ಕಾಪಾಡಿಕೊಂಡಿವೆ. ಕೃಷಿಕರು ತಮ್ಮೊಂದಿಗೆ ಜಾನುವಾರುಗಳಿಗೂ, ಕೃಷಿ ಉಪಯೋಗಿ ವಸ್ತುಗಳಿಗೂ ವಿಶ್ರಾಂತಿ ಸಿಗಲೆಂಬ ಆಶಯ ಈ ಆಚರಣೆಯಲ್ಲಿದೆ.

೩.೨. ಜಲ ಸಂಬಂಧಿ ಆಚರಣೆಗಳು

ನಾಗರಿಕತೆಗಳ ಹುಟ್ಟು, ಬೆಳವಣಿಗೆ, ಸಂಸ್ಕೃತಿ ರೂಪ ಪಡೆದದ್ದು, ನದಿದಂಡೆಯ ವಿಶಾಲ ಬಯಲು ಪ್ರದೇಶಗಳಲ್ಲಿ, ಕಾರಣ ಫಲವತ್ತಾದ ಭೂಮಿಯ ಜೊತೆ ಮಾನವನಿಗೆ ನೀರಿನ ಅಗತ್ಯತೆ ಇತ್ತು. ನೀರಿನ ಸಹಜ ಗುಣಗಳಾದ ಸುರಿಯುವ, ಹರಿಯುವ, ಪ್ರತಿಫಲಿಸುವ ವಿಲಾಸ ಶಕ್ತಿ ಬೇರಾವ ವಸ್ತುವಿಗೂ ಇಲ್ಲ. ನೀರಿನಲ್ಲಿಯ ಈ ಗುಣಗಳನ್ನರಿತ ಮಾನವ, ಜಲವನ್ನು ದೈವತ್ವಕ್ಕೇರಿಸಿದ್ದಾನೆ. ಪ್ರಕೃತಿದತ್ತವಾಗಿ ಬಂದಿರುವ ಜೀವಧಾತುಗಳಲ್ಲಿ ನೀರೂ ಒಂದು. ಸಕಲ ಚರಾಚರ ಜೀವಿಗಳಿಗೂ ನೀರು ಅನಿವಾರ್ಯ. ಜನಪದರ ಜೀವನದಲ್ಲಿ ನೀರು ಪೂರ್ಣತ್ವದ ಪ್ರತೀಕ, ದೈವತ್ವದ ಸಂಕೇತ. ಜೀವನಾವರ್ತನದ ಹಾಗೂ ವಾರ್ಷಿಕಾವರ್ತನದ ಆಚರಣೆಗಳೆಲ್ಲ ಗಂಗಾ ಪೂಜೆಗಳಿಂದಲೇ ಪ್ರಾರಂಭಗೊಳ್ಳುತ್ತವೆ. ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಗರ್ಭ ಧರಿಸಿದವಳನ್ನು 'ನೀರು ನಿಂತಿದೆ', 'ನೀರು ಹಾಕಿಕೊಂಡಳು' ಎಂದು ಗುರುತಿಸುತ್ತಾರೆ. ಗೌರಿಯ ಆರಾಧನೆ, ಲಕ್ಷ್ಮೀ ಪೂಜೆ, ಯಲ್ಲಮ್ಮ ದೇವಿ ಆರಾಧನೆ, ಕೊಡ ಹೊತ್ತ ಜೋಗತಿಯರು, ಕರಗದ ಆಚರಣೆಗಳೆಲ್ಲಾ ಜಲಸಂಬಂಧಿ ಆಚರಣೆಗಳಾಗಿದ್ದು, ಸ್ತ್ರೀ ಪ್ರಾಧಾನ್ಯತೆ ಎದ್ದು ಕಾಣುತ್ತದೆ. ಕಳಸ, ಕುಂಭ, ಕೊಡ, ಗಡಿಗೆಗಳಿಗೆ ನೀರು ತುಂಬಿಸಿ ಸೀರೆ, ಕುಪ್ಪಸ ತೊಡಿಸಿ ಪೂಜಿಸುವ ಕ್ರಮಗಳು ಸ್ತ್ರೀ ಹಾಗೂ ನೀರು ಎರಡೂ ಫಲೋತ್ಪತ್ತಿಯ ಶಕ್ತಿಗಳೆಂಬ ಕಾರಣದಿಂದ, ನದಿಮೂಲಗಳೆಲ್ಲಾ ಸ್ತ್ರೀನಾಮದಿಂದ ಸಂಭೋದಿಸಲ್ಪಟ್ಟಿವೆ. ಜೀವೋತ್ಪತ್ತಿ ಜಲದಲ್ಲಿ ಎಂದು ವಿಜ್ಞಾನ ಹೇಳುತ್ತದೆ. ಖ್ಯಾತ ಪರಿಸರವಾದಿ ಡಾ. ವಂದನಾಶಿವ ಅವರ ಪ್ರಕಾರ "ಪ್ರಪಂಚದಲ್ಲಿ ಬಹುತೇಕ ಸಂಸ್ಕೃತಿಗಳಲ್ಲಿ ಭೂಮಿಯ ಫಲವತ್ತತೆ ಮತ್ತು ಹೆಣ್ಣಿನ ದೇಹ, ಇವೆರಡೂ ನಿಸರ್ಗದ ಜೀವಂತಿಕೆ, ಸಿರಿವಂತಿಕೆ ಮತ್ತು ವೈವಿಧ್ಯಗಳಲ್ಲದೇ, ಸಮಾಜ ಮತ್ತು ಜೀವರಾಶಿಯ ಮರುಉತ್ಪಾದಕ ಶಕ್ತಿಯ ಪ್ರಭಾವೀ ಸಂಕೇತವಾಗಿ ಬಳಸಲ್ಪಟ್ಟಿವೆ" (ಬತ್ತದ ಚಿಲುಮೆ, ೨೦೦೨, ಪು. ೮೫). ಮಣ್ಣಿನ ಮೂಲಕ ಭೂಮಿಯನ್ನು

ಸೇರಿ ಜೀವಸೃಷ್ಟಿಗೆ, ಪೋಷಣೆಗೆ ಪ್ರಾಣಾಧಾರವಾದ ನೀರು! ನದಿ, ಸಮುದ್ರ, ಹಳ್ಳ, ಕೆರೆ, ಮಳೆ, ತೀರ್ಥಗಳ ರೂಪದಲ್ಲಿ ಪೂಜ್ಯನೀಯವಾಗಿದೆ. ಪುರಾತನರು ಕೆರೆಕಟ್ಟೆಗಳಿಗೆ ಹೆಣ್ಣನ್ನು ಬಲಿ ನೀಡಿದ ಹಿನ್ನೆಲೆಯಲ್ಲಿ ಹಲವಾರು ಆಚರಣೆಗಳು ಇಂದಿಗೂ ಪ್ರಚಲಿತದಲ್ಲಿವೆ. ಉದಾಹರಣೆಗೆ, ಹೊಸಪೇಟೆ ಎಲೆ ಮಲ್ಲಪ್ಪನ ಕೆರೆಗೆ ನರಬಲಿ ನೀಡಿದ ಕಥೆಯಿದೆ. ಪ್ರತೀ ಬಾರಿಯೂ ಕೆರೆಯ ಮಧ್ಯಭಾಗ ಒಡೆದು ನೀರು ಹೋಗುತ್ತಿತ್ತು. ಆಗ ಸಂಪ್ರದಾಯ ದಂತೆ ಆ ಕೆರೆಯನ್ನು ನಿರ್ಮಿಸಿದ ಗೌಡನ ಸೊಸೆ ಬಲಿಯಾದುದನ್ನು ಸ್ಥಳೀಯರು ನೆನಪಿಸಿಕೊಳ್ಳುತ್ತಾರೆ. ಇಂದು ನರಬಲಿ ಇಲ್ಲವಾದರೂ ಅದಕ್ಕೆ ಬದಲಾಗಿ ತೆಂಗಿನಕಾಯಿ, ನಿಂಬೆಹಣ್ಣು, ಕುಂಬಳಕಾಯಿ ಬಲಿ ನೀಡುತ್ತಾರೆ. ಕೆರೆ ಏರಿಯ ಮೇಲೆ ನಿರ್ಮಿಸಿರುವ ಮಾಸ್ತಿಗಲ್ಲು ಅಥವಾ ದೈವಗಳಿಗೆ ಪೂಜಿಸುವುದರ ಮೂಲಕ ಕೃಷಿಕಾರ್ಯ ಪ್ರಾರಂಭಗೊಳ್ಳುತ್ತದೆ. ಜಲಮೂಲ ತುಂಬಿದಾಗ ನಡೆಯುವ ತೆಪ್ಪೋತ್ಸವ, ಬಾಗಿನ ಅರ್ಪಣೆಗಳೆಲ್ಲಾ ಆಚರಣೆಯ ಮೂಲಕ ಜಲಕ್ಕೆ ಸಲ್ಲಿಸುವ ಕೃತಜ್ಞತೆಯಾಗಿದೆ. ಮಣ್ಣು ಮತ್ತು ಮರಳಿನಿಂದ ಮಾಡಿದ ಗೌರಿಯನ್ನು ಪೂಜಿಸಿ, ಜಲಮೂಲದಲ್ಲಿ ವಿಸರ್ಜಿಸುವ ಕ್ರಮವಿದೆ. ಗಂಗೆ ಗೌರಿಯರಿಬ್ಬರೂ ಶಿವನ ಪತ್ನಿಯರು, ಅವರಲ್ಲಿ ಸವತಿ ಮತ್ಸರವಿರುವುದು ಸಹಜ. ಆದರೆ ಆಚರಣೆಯಲ್ಲಿ ಅವರಿಬ್ಬರನ್ನೂ ಒಂದುಗೂಡಿಸುವ ಸಮನ್ವಯತೆ ಇದೆ.

ಜನಪದರ ಸಂಪ್ರದಾಯಗಳಲ್ಲಿ ನೀರು ಕೂಡಿಸುವ, ಬೇರ್ಪಡಿಸುವ ಕ್ರಿಯೆಗಳನ್ನು ಸಂಕೇತಿಸುತ್ತದೆ. ನೀರ ಧಾರೆ ಎರೆಯುವುದರ ಮೂಲಕ ಎರಡು ಜೀವಿಗಳನ್ನು ಒಂದೆಡೆ ಬೆಸೆಯುವ ಮತ್ತು ಸಾಯುವವರ ಬಾಯಿಯಲ್ಲಿ ಜಲ ಬಿಡುವ ಮೂಲಕ ಜೀವವನ್ನು ಬೇರ್ಪಡಿಸುವ ಕ್ರಿಯೆಗಳೆರಡನ್ನೂ ಆಚರಣೆಗಳಲ್ಲಿ ಕಾಣಲಾಗುತ್ತದೆ.

ಜನಪದರು ಹಲವೊಮ್ಮೆ ನೀರನ್ನು ಗಂಡೆಂದು ಪರಿಭಾವಿಸುತ್ತಾರೆ. ಜನಪದ ಹಾಡುಗಳಲ್ಲಿ ಮಳೆರಾಜ, ಮಳೆದೇವರೆಂದು ಹಾಡಿ ಹೊಗಳಿದ್ದಾರೆ. ಗುರ್ಜಿಯು ಶಿವಲಿಂಗದ ಆಕಾರವಿರುವುದರಿಂದ ಗಂಡೆಂದು ತಿಳಿಯಲು ಸಾಧ್ಯವಿದೆ. ಜಲವನ್ನು ಮಳೆಯ ರೂಪದಲ್ಲಿದ್ದಾಗ ಗಂಡಾಗಿಯೂ, ಭೂಮಿ ಸ್ಪರ್ಶಿಸಿದ ನಂತರ ಹೆಣ್ಣಾಗಿಯೂ ಪರಿಭಾವಿಸುತ್ತಾರೆ. ಜೋಕುಮಾರನ ಚರಗ, ಕಾಮಣ್ಣನ ಬೂದಿಯನ್ನು ಹೊಲಗಳಲ್ಲಿ ಚೆಲ್ಲುವುದು, ಅವರಲ್ಲಿರುವ ಪುರುಷತ್ವವನ್ನು ಭೂಮಿಯಲ್ಲಿ ಹರಡುವ ಮೂಲಕ ಭೂಮಿ ಗರ್ಭ ಧರಿಸಿ, ಬೆಳೆ ಸಮೃದ್ಧಿಯಾಗುತ್ತದೆಂಬ ನಂಬಿಕೆಯಿಂದ. ಕಪ್ಪೆಗಳ ಮದುವೆ, ಕತ್ತೆಗಳ ಮೆರವಣಿಗೆ, ಮಳೆರಾಯನನ್ನು ಮಾಡಿ ಹೊತ್ತು ತಿರುಗುವುದು, ಮಳೆ ಬೀಜ ತರುವುದು ಮಳೆಗಾಗಿ ನೆರವೇರುವ ಆಚರಣೆಗಳಾಗಿವೆ. ಜನಪದರ ಜೀವನ ಮಳೆಯೊಂದಿಗೆ ತಳುಕು ಹಾಕಿಕೊಂಡಿದೆ. "ನೀರಿಲ್ಲದ್ದು ಊರಲ್ಲ, ನಾರಿಯಿಲ್ಲದ್ದು ಸಂಸಾರ ಅಲ್ಲ" ಎನ್ನುವ ಗಾದೆಯಂತೆ ನೀರಿಲ್ಲದಿದ್ದರೆ ಸಸ್ಯ ಪ್ರಪಂಚವಿಲ್ಲ; ಜೀವ ಜಗತ್ತಿಲ್ಲ. ನೀರಿಲ್ಲವಾದಾಗಿನ ಬವಣೆಯನ್ನು ಜನಪದರು

ಯಾತಕ್ಕೆ ಮಳೆ ಹೋದವೋ
ಶಿವ ಶಿವ ಲೋಕ ತಲ್ಲಣಿಸುತ್ತಾವೋ
ಬೇಕಿಲ್ಲದಿದ್ದರೆ ಬೆಂಕಿ ಮಳೆ ಸುರಿದು
ಉರಿಸಿ ಕೊಲ್ಲಲು ಬಾರದೆ

ಈ ರೀತಿಯಾಗಿ ಹಾಡಿನ ಮೂಲಕ ವ್ಯಕ್ತಪಡಿಸಿದ್ದಾರೆ.

ನೀರು ಜೀವಸೃಷ್ಟಿಗೆ ಕಾರಣವಾದಂತೆ ಪ್ರಳಯ ರೂಪದಲ್ಲಿ ಜೀವಿಗಳ ಸರ್ವನಾಶಕ್ಕೂ ಕಾರಣವಾಗಬಲ್ಲದು. ಈ ಕಾರಣದಿಂದ ಜಲಸಂಬಂಧಿ ಆಚರಣೆಗಳು ಅತಿವೃಷ್ಟಿ ಮತ್ತು ಅನಾವೃಷ್ಟಿ ಕೇಂದ್ರಿತವಾಗಿದ್ದು ಮಳೆ ತರಿಸುವುದಕ್ಕೆ ಇರುವಂತೆ ಮಳೆ ನಿಲ್ಲಿಸುವುದಕ್ಕೂ ಆಚರಣೆಗಳುಂಟು.

ನೀರಿಗೆ ಔಷಧಿಯ ಗುಣವಿದೆ. ಶುದ್ಧ ನೀರನ್ನು ಕುಡಿಯುವುದರಿಂದ ನೂರಾರು ಕಾಯಿಲೆಗಳನ್ನು ತಡೆಗಟ್ಟಬಹುದೆಂದು ಭಾರತೀಯ ಯೋಗವಿಜ್ಞಾನ ತಿಳಿಸುತ್ತದೆ. "ಮಾಟ-ಮಂತ್ರ, ತಂತ್ರಾಚರಣೆಗಳಲ್ಲಿ ಬಳಸುವ ಜಲಕ್ಕೆ ಕ್ಷುದ್ರ ಶಕ್ತಿಯನ್ನು ಬಿಡಿಸುವ ಮತ್ತು ರೋಗ ಗುಣಪಡಿಸುವ ಶಕ್ತಿಯಿದೆ ಎಂದು ನಂಬುತ್ತಾರೆ. ನೀರಿಗೆ ಮನುಷ್ಯನ ಹೊರ-ಒಳ ಭಾಗಗಳನ್ನು ಶುಭ್ರಗೊಳಿಸುವ ಶಕ್ತಿ ಇದೆ" (ಕನ್ನಡ ವಿಷಯ ವಿಶ್ವಕೋಶ, ಪು. ೬೪೧). ಹೀಗೆ ನಿಸರ್ಗದಲ್ಲಿ ಯಥೇಚ್ಛವಾಗಿ ದೊರೆಯುವ ನೀರು ಮಾನವನ ಬದುಕಿಗೆ ಅನಿವಾರ್ಯವಾದದ್ದು. ಒಟ್ಟಾರೆಯಾಗಿ ನೀರನ್ನು ಜನಪದರ ಜೀವನದಿಂದ ಬೇರ್ಪಡಿಸಿ ನೋಡಲು ಸಾಧ್ಯವಿಲ್ಲ. ನೀರೇ ಜನಪದ ಸಂಸ್ಕೃತಿಯಾಗಿದೆ. ಕೃಷಿಕರಿಗೆ ನೀರೆ ಮೂಲಾಧಾರ. ಕೃಷಿ ಚಟುವಟಿಕೆಯ ಪ್ರತೀ ಹಂತದಲ್ಲೂ ಹತ್ತಾರು ಜಲಸಂಬಂಧಿ ಆಚರಣೆಗಳು ಜರುಗುತ್ತವೆ. ಈ ಎಲ್ಲಾ ಆಚರಣೆಗಳ ಆಶಯ ಫಲವಂತಿಕೆಯಾಗಿದೆ.

೩.೨.೧. ಭರಮಪ್ಪನ್ನ ಮಾಡೋದು (ಗುರ್ಜಿಪೂಜೆ)

ಸಾಮಾನ್ಯವಾಗಿ ಬಳ್ಳಾರಿ ಜಿಲ್ಲೆಯಲ್ಲಿ ಮಳೆ ಬರದಿದ್ದಾಗ ಗುರ್ಜಿಯನ್ನು ಪೂಜಿಸುವ ಸಂಪ್ರದಾಯವಿದೆ. ಹಡಗಲಿ, ಹಗರಿಬೊಮ್ಮನಹಳ್ಳಿ ಭಾಗಗಳಲ್ಲಿ 'ಭರಮಪ್ಪನ್ನ ಮಾಡೋದು' ಎಂದೂ ಕರೆಯುತ್ತಾರೆ. ಭೂಮಿತಾಯಿಯ ಮಗ ಜೋಕಪ್ಪ, ಆತನ ತಂದೆ ಭರಮದೇವರೆಂಬ ಪ್ರತೀತಿ ಇದೆ. ಗುರ್ಜಿ ಹೊರುವವರು ಚಿಕ್ಕ ಹುಡುಗರಾಗಿರುತ್ತಾರೆ. ಅವರನ್ನು ಉಡದಾರ ಸಮೇತ ಕಳಚಿ ಬೆತ್ತಲೆಯಾಗಿಸುತ್ತಾರೆ. ಬೋರಲು ಹಾಕಿದ ಹೆಂಚಿನ ಮೇಲೆ, ಸಗಣಿಯಿಂದ ತಯಾರಿಸಿದ ಲಿಂಗರೂಪದ ಗುರ್ಜಿಯನ್ನು ಪ್ರತಿಷ್ಠಾಪಿಸಲಾಗುತ್ತದೆ. ಅದು ಗರಿಕೆ, ಎಕ್ಕ, ತಂಗಡಿ ಹೂಗಳಿಂದ ಶೃಂಗರಿಸಲ್ಪಟ್ಟಿರುತ್ತದೆ. ಗುರ್ಜಿ ಹೊತ್ತ ಬಾಲಕನಿಗೆ ಪ್ರತಿ ಮನೆಯವರು ನೀರು ಸುರಿದು ಪೂಜಿಸುತ್ತಾರೆ. ಆ ಸಮಯದಲ್ಲಿ ಬಾಲಕ ಗರಗರನೆ ತಿರುಗುತ್ತಿದ್ದಂತೆ, ನೀರು ಚಕ್ರಾಕಾರವಾಗಿ ಹನಿಹನಿಯಾಗಿ ಬೀಳುವುದು ಮಳೆಹನಿಯನ್ನು ಸಂಕೇತಿಸುತ್ತದೆ. ಊರಹೊರಗಿನ ಹಳ್ಳದಲ್ಲಿ ಗಂಗೆ ಪೂಜೆ ಮಾಡಿ ಪ್ರತಿ ಮನೆಯವರಿಂದ ಪಡೆದ ಧಾನ್ಯದಿಂದ ಅಡುಗೆ ತಯಾರಿಸಿ ಸಾಮೂಹಿಕ ಭೋಜನ ಮಾಡುತ್ತಾರೆ. ನಂತರ ದಷ್ಟಪುಷ್ಟವಾದ ಬಾಲಕನೊಬ್ಬನ ಕಾಲನ್ನು ಹಳ್ಳದ ಉಸುಕಿನಲ್ಲಿ ಹೂಳುತ್ತಾರೆ. ಅವನನ್ನು ಅಲ್ಲಿಯೇ ಬಿಟ್ಟು 'ಬಸವ ಬಸವ ಎದ್ದೇಳು ಬಸವ, ಹೊರಗೆ ಬಾರೋ ಬಸವ' ಎಂದು ಕೂಗುತ್ತ ಊರ ಕಡೆ ಹೊರಡುತ್ತಾರೆ. ಆ ಬಾಲಕ ಕಾಲುಕಿತ್ತು ಅಳುತ್ತಾ ಬರುವುದರೊಳಗೆ ಖಂಡಿತವಾಗಿ ಮಳೆ ಬರುವುದೆಂಬ ನಂಬಿಕೆಯಿದೆ. ಹಡಗಲಿ ತಾಲೂಕು ಅಂಬಳಿ ಗ್ರಾಮದಲ್ಲಿ ಈ ರೀತಿಯ 'ಮಳೆ ಮಹದೇವನ' ಆಚರಣೆಯಿದೆ. ಜನ-ಜಾನುವಾರುಗಳಿಗೆ ಹನಿ ನೀರು ಇಲ್ಲದಾದಾಗ ಮಳೆ ತರಿಸಲು ಮಹದೇವನನ್ನು ಪೂಜಿಸುತ್ತಾರೆ. ಇಲ್ಲಿ ಗುರ್ಜಿ ಹೊತ್ತ ಬಾಲಕನೊಂದಿಗೆ ಕುಂಭ ಹೊತ್ತ ಐವರು ಮುತ್ತೈದೆಯರಿರುತ್ತಾರೆ. ಹೊಸಮಲೆದುರ್ಗದ ಕುಮಾರರಾಮನ ದೇವಸ್ಥಾನದಿಂದ ತನುಬಿಂದಿಗೆಯೊಂದಿಗೆ ಸಂಡೂರಿಗೆ ಬಂದರೆ ಮಳೆಯಾಗುತ್ತದೆಂಬ ನಂಬಿಕೆಯಿದೆ. ಅಂದು ರಾಮಘಡದಲ್ಲಿರುವ ರಾಮಲಿಂಗೇಶ್ವರನಿಗೆ ಪೂಜೆ ಸಲ್ಲುತ್ತಾರೆ.

ಹಡಗಲಿ ತಾಲೂಕಿನಲ್ಲಿ ಪಾತಳಗಂಗೆ ತರುವ ಆಚರಣೆಯಿದೆ. ಆ ದಿನ ಕೃಷಿಕಾರ್ಯ ಮಾಡುವಂತಿಲ್ಲ. ಒಬ್ಬ ವ್ಯಕ್ತಿಗೆ ಹೊಸಬಟ್ಟೆ ತೊಡಿಸಿ ಆತನ ಮೂಲಕ ಬೆಟ್ಟದ ಮೇಲಿನಿಂದ ಕುಂಭರೂಪಿಯಾಗಿ ಗಂಗೆಯನ್ನು ತರುತ್ತಾರೆ. ಹೀಗೆ ನಿಗದಿಪಡಿಸಿದ ದಿನದಂದು ಸುತ್ತಮುತ್ತಲ ಗ್ರಾಮದವರು ನಿಷ್ಠೆಯಿಂದ ಗಂಗೆ ತರುವುದಿದೆ. ಹೀಗೆ ಮಲ್ಲೇಶ್ವರನ ಬೆಟ್ಟದಿಂದ ಪಾತಾಳಗಂಗೆಯನ್ನು ತಂದರೆ ತಪ್ಪದೆ ಮಳೆಯಾಗುವುದೆಂಬ ನಂಬಿಕೆಯಿದೆ.

ಕಣ ಮಾಡುವಾಗ ಸಗಣಿಯಿಂದ ಗುರ್ಜಿ ಮಾಡಿ, ಅದಕ್ಕೆ ಕಂಕಿಚುಚ್ಚಿ ರಾಶಿಯ ಮೇಲೆ ಇಟ್ಟು ಪೂಜಿಸುತ್ತಾರೆ. ಕಾಳು ಹಗೇವಿಗೆ ಹಾಕಿದ ನಂತರ ಈ ರೀತಿ ನೆರವೇರುವ ಪೂಜೆಗಳು ಮಳೆಯನ್ನು ಸಂಕೇತಿಸುತ್ತವೆ.

ಗುರ್ಜಿ ಹೊತ್ತ ಬಾಲಕನ ಹಾಡಿನಿಂದ ಮಳೆಯ ಅಭಾವ ಎಷ್ಟಿದೆ ಎಂದು ತಿಳಿಯುತ್ತದೆ.

ಗುರ್ಜಿ ಗುರ್ಜಿ (ಗುಬ್ಬಿ-ಗುಬ್ಬಿ) ಎಲ್ಯಾಡಿ ಬಂದೆ
ನೀರಿಲ್ಲದ ಬಾವ್ಯಾಗ ನಿಂತಾಡಿ ಬಂದೆ
ಸುರಿಯೋ ಸುರಿಯೋ ಮಳೆರಾಯ
ಮಳೆರಾಯನ ಹೆಂಡ್ತಿ ಏನು ಹಡದಾಳು
ಮಳೆರಾಯನ ಹೆಂಡ್ತಿ ಗಂಡು ಹಡದಾಳು
ಗಂಡಿನ ತಲ್ಯಾಗ ಎಣ್ಣಿಲ್ಲ, ಬೆಣ್ಣಿಲ್ಲ

ಗುಬ್ಬಿ ನೀರಿಲ್ಲದ ಬಾವಿಯಲ್ಲಿ ಈಜದೇ ಆಡಿ ಬಂದಿದೆ. ಬಾವಿಯಲ್ಲಿ ನೀರಿಲ್ಲದಿರುವಾಗ ಭೂಮಿಯ ಮೇಲೆ ನೀರಿರಲು ಸಾಧ್ಯವಿಲ್ಲ. ಗುಬ್ಬಿಗೆ ಒಂದು ಗುಟುಕು ನೀರು ಸಾಕು. ಗುಬ್ಬಿಗೆ ನೀರಿಲ್ಲವೆಂದಾಗ ಪ್ರಾಣಿಗಳಿಗೆ ನೀರಿರಲು ಸಾಧ್ಯವಿಲ್ಲ. ಎಣ್ಣೆ ತಂಪುಕಾರಕ ವಸ್ತು ಮತ್ತು ಜಲದ ಪ್ರತೀಕ. ಹೆಣ್ಣಿಗಿಂತ ಗಂಡಿನ ತಲೆಗೆ ಎಣ್ಣೆ ಅಗತ್ಯತೆ ಕಡಿಮೆ. ಆದರೆ ಕಡಿಮೆ ಪ್ರಮಾಣದ ಎಣ್ಣೆಯಿಲ್ಲವೆಂಬುದು ಭೀಕರವಾದ ಬರದ ಛಾಯೆಯನ್ನು ತಿಳಿಸುತ್ತದೆ.

ಮಳೆ ಸತ್ಯವ್ವನ ಆಚರಣೆಯಲ್ಲಿ ನೀರು ತುಂಬಿದ ಗಿಂಡಿಯು ಚಂದ್ರಭಂಡಾರ ಎಕ್ಕದ ಎಲೆಗಳಿಂದ ಪೂಜಿಸಲ್ಪಡುವುದು. ಗಿಂಡಿ ತುಂಬು ಜೀವನದ ಸಂಕೇತ. ನೀರ ಕೊಡ ಹೊತ್ತ ಹುಡುಗನೊಂದಿಗೆ ಉಳಿದವರು ಕಿರುಚಾಡುತ್ತಾ ಮೆರವಣಿಗೆ ಹೊರಡುತ್ತಾರೆ. ನೀರಗಿಂಡಿಯ ಮೇಲಿನ ಎಲೆ ಬೀಳುವ ಅಂತರವನ್ನು ನೋಡಿ ಮಳೆಯಾಗುವ ಸಮಯವನ್ನು ನಿರ್ಧರಿಸುತ್ತಾರೆ. ಎಲೆ ದೂರದಲ್ಲಿ ಹೋಗಿ ಬಿದ್ದರೆ ಮಳೆಯಾಗುವ ಸಮಯ ದೂರವಿದೆಯೆಂದೂ, ಹತ್ತಿರದಲ್ಲಿಯೇ ಬಿದ್ದರೆ ಸದ್ಯದಲ್ಲಿಯೇ ಮಳೆಯಾಗುತ್ತದೆ ಎಂದು ಗ್ರಹಿಸುತ್ತಾರೆ.

ಸಕಲ ಚರಾಚರ ಜೀವಿಗಳಿಗೆ ನೀರು ಜೀವಾಳ. ಜಲ ಬತ್ತಿದಾಗ ಈ ರೀತಿಯ ಆಚರಣೆಗಳು ತಾತ್ಕಾಲಿಕವಾಗಿ ಮನಸ್ಸಿಗೆ ಸಮಾಧಾನ ನೀಡುತ್ತವೆ. ಮರಿಯಮ್ಮನಹಳ್ಳಿ ಭಾಗದಲ್ಲಿ ಜೋಗತಿಯರು ಕೊಡ ಹೊತ್ತು ಕುಣಿಯುವುದು, ಗುರ್ಜಿ ಆಚರಣೆಯಲ್ಲಿ ತಲೆಯ ಮೇಲೆ ನೀರು ಹೊರುವುದು ಜಲ ಸಂಸ್ಕೃತಿಯ ಸಂಕೇತಗಳಾಗಿವೆ. "ನೆತ್ತಿಯ ಮೇಲೆ ನೀರನ್ನು ಹೊತ್ತುಕೊಂಡು, ಕೆಂಡವನ್ನು ಕಾಲಕೆಳಗೆ ತುಳಿಯುತ್ತಾ ನಡೆಯುವ ಪ್ರಕ್ರಿಯೆಯಲ್ಲಿ, ಅಗ್ನಿ ಸಂಸ್ಕೃತಿಯನ್ನು ಕಾಲಕೆಳಗೆ ತಳ್ಳುತ್ತಲೇ ಜಲಸಂಸ್ಕೃತಿಯನ್ನು ತಲೆಯ ಮೇಲಿಟ್ಟುಕೊಂಡು

ಮೆರೆಸುವ ಗುಪ್ತ ಭಕ್ತಿಯ ಹಾಗೂ ಪ್ರತಿಭಟನೆಯ ಮನೋಧರ್ಮಗಳನ್ನಿಲ್ಲಿ ಗುರುತಿಸಬಹುದು".[೮] ಅಗ್ನಿಯು ಜನಪದರಿಗೆ ನಾಶದ ಸಂಕೇತ. ಮಳೆಯಿಲ್ಲದೆ ಭೂಮಿ ಕೆಂಡವಾದಾಗ ಬಿಸಿಲಿನ ಧಗೆ ತಾಳದೇ ಜಲವನ್ನು ದೈವತ್ವದ ಸಂಕೇತವಾಗಿ ಹೊತ್ತು ಮೆರೆಯಲಾಗುತ್ತದೆ. 'ಬೆಂಕಿ ಹರಿದ ಕಡೆ ಬೂದಿ, ನೀರು ಹರಿದ ಕಡೆ ಹಸಿರು' ಎನ್ನುವ ಮಾತು ಬೆಂಕಿ ನಾಶವನ್ನು, ನೀರು ಸಮೃದ್ಧಿಯನ್ನು ಸಂಕೇತಿಸುತ್ತದೆ. ಬರಡಾದ ಭೂಮಿಯನ್ನು ಹಸುರಾಗಿಸುವ ಹಾಗೂ ತಂಪಾಗಿಸುವ ಆಶಯ ಆಚರಣೆಯಲ್ಲಿದೆ.

ಜನಪದರಲ್ಲಿ ಮಳೆಗಾಗಿ ಹಲವಾರು ಬಗೆಯಲ್ಲಿ ಮಾತೃದೇವತೆಯನ್ನು ಆರಾಧಿಸುವ ಕ್ರಮವಿದೆ. ಸಂಡೂರಿನ ಗ್ರಾಮದೈವವಾದ ಊರಮ್ಮ ದೇವಿಗೆ ಮಳೆಗಾಗಿ ಉಡಿ ತುಂಬುವ ಸಂಪ್ರದಾಯವಿದೆ. ಆ ದಿನ ಗ್ರಾಮದಲ್ಲಿ ಕುಟ್ಟುವಂತಿಲ್ಲ, ಬೀಸುವಂತಿಲ್ಲ. ಅಂದು ಕೃಷಿಕಾರ್ಯ ಮಾಡದಂತೆ ಬಂಡಿಯ ಚಕ್ರಗಳನ್ನು ತೆಗೆದಿಡಲಾಗುತ್ತದೆ. ಹೊಸಪೇಟೆಯ ಏಳುಕೇರಿಯ ನಾಯಕ ಸಮುದಾಯದ ಕೃಷಿಕರು ಊರಮ್ಮದೇವಿಗೆ ತನು ಅರ್ಪಣೆ ಮಾಡುವ ಆಚರಣೆ ಪ್ರಚಲಿತದಲ್ಲಿದೆ. ಮಳೆಯ ರೂಪದಲ್ಲಿ ಆಕಾಶದಲ್ಲಿ ಮೋಡ ಕಟ್ಟುವ, ಕರಗಿ ಭೂಮಿಗೆ ಸುರಿಯುವ ಆದಿಮ ಶಕ್ತಿ ಜಲಕ್ಕಿದೆ. ಭೂಮಿಯ ಒಳಗಿನ ಅಂತರ್ಜಲ ನಿರಂತರವಾಗಿ ಭೂಮಿಯ ಒಡಲನ್ನು ತಣ್ಣಗಾಗಿಸುತ್ತಿರುತ್ತದೆ. ಮಳೆಯ ಮೂಲಕ ಭೂಮಿ ಸೇರಿದ ಜಲ ಗಂಗೆಯಾಗಿ, ಅಂದರೆ ಸ್ತ್ರೀದೈವವಾಗಿ ಹರಿಯುತ್ತಾಳೆ. "ನೀರನ್ನು ಕುರಿತ ಎಲ್ಲಾ ಸಂಸ್ಕೃತಿ, ಪುರಾಣ, ಐತಿಹ್ಯ, ಆಚರಣೆಗಳ ಅಧ್ಯಯನದ ಪ್ರಕಾರ, ಜಲವು ಕಾಲಕ್ರಮೇಣ ಮಾತೃಮೂಲದಿಂದ ಪಿತೃಮೂಲಕ್ಕೆ ಪರಿವರ್ತನೆಯಾಗಿರುವುದು ಕಂಡುಬರುತ್ತಿದೆ."[೯] ಮಳೆಗಾಗಿ ಇಂದು ಪುರುಷ ದೈವಗಳ ಆರಾಧನೆಗಳು ಸಾಕಷ್ಟಿವೆ. ಈ ಹಿನ್ನೆಲೆಯಲ್ಲಿ ಹೊಸಪೇಟೆಯ ಕಾಟ್ಮಯ್ಯ ಆಂಜನೇಯ ದೈವಕ್ಕೆ ಶ್ರಾವಣ ಶನಿವಾರ ಗಂಗೆ ತಂದು ಪೂಜಿಸುವ ಸಂಪ್ರದಾಯವಿದೆ. ಅಂದು ಗ್ರಾಮಸ್ಥರು ದೇವಸ್ಥಾನದ ಸುತ್ತ ಲಬೋ... ಲಬೋ.. ಎಂದು ಕಿರುಚಿಕೊಳ್ಳುತ್ತಾ, ಬೈಗುಳ ಮೂಲಕ ಮಳೆ ಬರಿಸುವಂತೆ ದೈವಕ್ಕೆ ಆಗ್ರಹಿಸುತ್ತಾರೆ.

ನೀರು ಸ್ತ್ರೀರೂಪಿ. ಗಂಗೆಯಾಗಿ ಹರಿಯುತ್ತಾಳೆ. ಆದರೆ ಆಕಾಶವೆಂಬುದು ಗಂಡಾಗಿ (ಮೋಡ) ಮಳೆಯ ರೂಪದ ವೀರ್ಯವನ್ನು ಭೂಮಿಯ ಗರ್ಭಕ್ಕೆ ಸೇರಿಸಿದಾಗ ಜೀವದ ಉತ್ಪತ್ತಿಯಾಗುವುದು. ಗಂಡಿನ ಜನನ ಹೆಣ್ಣಿನ ಗರ್ಭದಿಂದ; ಮಳೆ (ಗಂಡು) ಕೂಡ ಭೂಮಿಯಿಂದಲೇ ಹುಟ್ಟುವುದು. ಇದು ಮಾತೃಸಂಸ್ಕೃತಿಯ ಅವಲಂಬನೆಯನ್ನು ಸಂಕೇತಿಸುತ್ತದೆ. ಏಕೆಂದರೆ ಭೂಮಿಯ ಮೇಲಿನ ನೀರು ಆವಿಯಾಗಿ, ಮೋಡವಾಗಿ, ಮಳೆಯಾಗಿ, ರೂಪಾಂತರ ಹೊಂದಿ ಜೀವವಿಕಾಸಕ್ಕೆ ನಾಂದಿಯಾಗುತ್ತದೆ. "ಭೂಮಿ ಬೃಹತ್ ಯೋನಿ, ಭೂಮಿತಾಯಿ, ಹೆರುವವಳು ಮತ್ತು ಪೋಷಿಸುವವಳು. ಪ್ರಾಣ ತ್ಯಜಿಸಿದ ನಂತರ ಪುನಃ ಆಕೆಯ ಗರ್ಭಕ್ಕೆ ಸೇರಬೇಕು."[೧೦] ಹೀಗೆ ಹುಟ್ಟು, ಸಾವು, ಬದುಕು ಇವೆಲ್ಲಕ್ಕೂ ಸಾಕ್ಷೀಭೂತ ಮತ್ತು ಆಧಾರಪ್ರಾಯಳಾದವಳು ಸ್ತ್ರೀ. ಈ ರೀತಿಯಲ್ಲೂ ಜಲ ಮತ್ತು ನೆಲಮೂಲಗಳ ಸಮನ್ವಯತೆಯನ್ನು ಗ್ರಹಿಸಲು ಸಾಧ್ಯವಿದೆ.

ಮಳೆ ಆಚರಣೆಗಳಲ್ಲಿ ಭೌಗೋಳಿಕ ಹಿನ್ನೆಲೆಗೆ ಅನುಗುಣವಾಗಿ ಸ್ವರೂಪ ಬದಲಾದರೂ ಮೂಲ ಆಶಯ ಒಂದೇ ಆಗಿರುವುದು ಕ್ಷೇತ್ರಕಾರ್ಯದಿಂದ ಕಂಡುಬಂದಿದೆ. ಜನಪದರು ಇಷ್ಟೊಂದು ಸತ್ಕಾರದಿಂದ ಪೂಜಿಸಿ ಸೆರಗೊಡ್ಡಿ ಮಳೆ ಕೊಡು ಎಂದು ಗುರ್ಜಿಯನ್ನು ಬೇಡಿಕೊಳ್ಳುವುದರ ಹಿಂದೆ ದೃಢವಾದ ನಂಬಿಕೆಯೊಂದಿದೆ. ಡಾ. ಬಿ.ಎಸ್. ಗದ್ದಗಿಮಠರ ಪ್ರಕಾರ ಗುರ್ಜಿಯು ಕರಿಗಂಬಳಿ ಗುರುಸಿದ್ಧಪ್ಪ ಎಂಬ

ಪುರುಷನ ಹೆಸರನ್ನು ಸಮರ್ಥಿಸುತ್ತದೆ. ಈತ ನಿಸರ್ಗವೇ ತಲೆಬಾಗುವಂಥ ಪುಣ್ಯಪುರುಷ. ಒಮ್ಮೆ ಬರಗಾಲ ಬಂದಾಗ ಜನರು ಪೂಜ್ಯತೆಯಿಂದ ಮಳೆ ಕೊಡು ಎಂದು ಬೇಡುತ್ತಾರೆ. ಶಿವಶರಣನು, ಸಿದ್ಧಿಪುರುಷನು ಆದ ಈತ ಜನರ ಗೋಳನ್ನು ಕೇಳಲಾರದೇ ಕಂಬಳಿ ಬೀಸುತ್ತಾನೆ. ಮೋಡಗಳಿಲ್ಲದ ಮುಗಿಲಿನಲ್ಲಿ ಮೊಡಗಳಾಗಿ ಮಳೆ ಸುರಿಯುವುದು ಗುರ್ಜಿ ಆಚರಣೆಯ ಹಿನ್ನೆಲೆಯಲ್ಲಿ ಪುಣ್ಯಪುರುಷನ ಚಿತ್ರವನ್ನು ಕಲ್ಪಿಸಿಕೊಳ್ಳಲು ಸಾಧ್ಯವಿದೆ. ಗುರ್ಜಿಯ ನೆತ್ತಿಗೆ ಚುಚ್ಚುವ ಕರಕಿಯು ಪುಣ್ಯಪುರುಷನ ಜ್ಞಾನಭಂಡಾರವನ್ನು ಸಂಕೇತಿಸುತ್ತದೆ. ರೊಟ್ಟಿಯ ಹಂಚು ಕಪ್ಪು ವರ್ಣವಿದ್ದು, ಕಂಬಳಿಯನ್ನು ಸಂಕೇತಿಸುತ್ತದೆ. ಅರೆಬೆತ್ತಲೆಯಿಂದ ಗುರ್ಜಿ ಹೊರುವ ಬಾಲಕ, ಕೌಪೀನ ಧರಿಸಿರುವ ವಿರಕ್ತಮೂರ್ತಿಯನ್ನು ಹೋಲುತ್ತಾನೆ. ಜನಪದರು ಬಾಲಕನ ಮುಗ್ಧಭಕ್ತಿಯಲ್ಲಿ ಪುಣ್ಯಪುರುಷನ ಪಾವನ ಭಕ್ತಿಯನ್ನು ಕಾಣುತ್ತಾರೆ. ಈ ಹಿನ್ನೆಲೆಯಲ್ಲಿ ಏಳೆಂಟು ವರ್ಷದ ಮಕ್ಕಳಿಗೆ ಮಾತ್ರ ಆಚರಣೆಯಲ್ಲಿ ಪಾಲ್ಗೊಳ್ಳುವಿಕೆಯಿದೆ. ಇವೆಲ್ಲವನ್ನು ಗಮನಿಸಿದಾಗ ಕರಿಗಂಬಳಿ ಗುರುಸಿದ್ಧಪ್ಪ ವಿರಕ್ತನೆಂದೂ, ಆತನಿಗೆ ನಿಸರ್ಗವೇ ಅಧೀನವಾಗಿತ್ತೆಂದೂ, ಕೌಪೀನ ಧರಿಸಿ, ಯಾವಾಗಲೂ ಕಂಬಳಿ ಹೊದೆಯುತ್ತಿದ್ದ ನೆಂಬುದಾಗಿ ತಿಳಿದುಬರುತ್ತದೆ. ಗುರುಸಿದ್ಧ ಎಂಬ ಹೆಸರು ಗುರ್ಸ್ಯಾ, ಗುರ್ಚಿ ಎಂದು ರೂಢಿಗೆ ಬಂದಿರಲು ಸಾಧ್ಯವಿದೆ. ಲಿಂಗರೂಪಿ ಗುರ್ಜಿಯನ್ನು ಹೊತ್ತು ತಿರುಗುವುದು ಪುಣ್ಯಪುರುಷ ಸಂಚಾರಿಯೆಂಬುದನ್ನು ಸಮರ್ಥಿಸುತ್ತದೆ. ಇಂಥ ವಿರಕ್ತ ಐತಿಹಾಸಿಕ ಪುರುಷನ ಬಗೆಗೆ ಗುರ್ಜಿ ಹಾಡುಗಳಿವೆ.

> ಎರಗಂಬಳಿ ಗುರುಸಿದ್ಧ
> ಹರನೇ ನೀನೆನಗೆ, ದೀಕ್ಷೆಯ ಮಾಡಿದೆ.

ಇದು ಮುಪ್ಪಿನ ಷಡಕ್ಷರಿಯವರ ರಚನೆಯಾದ್ದರಿಂದ ಇವರಿಗಿಂತ ಮೊದಲು ಎರಗಂಬಳಿ ಗುರುಸಿದ್ಧರು ಇದ್ದಿರಬೇಕು. "ಗುರುಸಿದ್ಧರೇ ವೀರಗಂಬಳಿ ಮಠದ ಮೂಲಗುರು ಹಾಗೂ ಮುಪ್ಪಿನ ಷಡಕ್ಷರಿ, ನಿಜಗುಣ ಶಿವಯೋಗಿಗಳ ಸಮಕಾಲೀನರಾಗಿರಲು ಸಾಧ್ಯವಿದೆ. ಇ.ಪಿ. ರೈಸ್‌ರವರ ಪ್ರಕಾರ ಅದು ಹದಿನೇಳನೇ ಶತಮಾನವಾಗಿದೆ" (ಬಿ.ಎಸ್. ಗದ್ದಗಿಮಠ, ೧೯೮೮, ಪು. ೬೨).

ಶಿವಶರಣರ ನೂರೊಂದು ವಿರಕ್ತಮಾಲೆಯಲ್ಲಿ ಗುರುಸಿದ್ಧರ ಹೆಸರಿಲ್ಲದ ಕಾರಣ ಇವರು ಮಧ್ಯಕಾಲ(ಕ್ರಿ.ಶ. ೧೪೦೦)ದಲ್ಲಿ ಇರಲು ಸಾಧ್ಯವಿದೆ. ಈ ಹಿನ್ನೆಲೆಯಲ್ಲಿ ಜನಪದರ ದೃಷ್ಟಿಯಲ್ಲಿ ಎರಗಂಬಳಿ ಗುರುಸಿದ್ಧರೇ ಗುರ್ಜಿ ಸಂಪ್ರದಾಯದ ಕರಿಗಂಬಳಿ ಗುರುಸಿದ್ಧರಾಗಿರುವ ಸಾಧ್ಯತೆ ಇದೆ. ಕರಿ, ಎರೆ ಎಂದರೆ ಕಪ್ಪು ಎಂಬ ಅರ್ಥವಿದೆ. ಕಪ್ಪುಭೂಮಿಗೆ ಎರೆಭೂಮಿಯೆಂದು ಕರೆಯುವ ವಾಡಿಕೆಯಿದೆ.

ಪಂಪ ಮೊದಲಾದ ಕವಿಗಳ ಕೃತಿಗಳನ್ನು ಅವಲೋಕಿಸಿದಾಗ, ಆ ಸಮಯದಲ್ಲಿ ಮಳೆ, ಬೆಳೆ ಸಮೃದ್ಧಿಯಾಗಿರುವುದು ತಿಳಿದು ಬಂದಿದೆ. ಅಂದರೆ ಕ್ರಿ.ಶ. ೧೩೯೬ರಲ್ಲಿ ಭೀಕರ ಬರಗಾಲ ದಕ್ಷಿಣ ಭಾರತದಲ್ಲಿ ಹಬ್ಬಿತ್ತೆಂದು ತಿಳಿದುಬರುತ್ತದೆ (ಡಾ. ಬಿ.ಎಸ್. ಗದ್ದಗಿಮಠ, ೧೯೮೮, ಪು. ೬೪). ದ್ರಾವಿಡರು ದಕ್ಷಿಣದ ತಪ್ಪಲು ಭೂಮಿಯನ್ನು ಕಡಿದು ಸಾಗುವಳಿ ಮಾಡುತ್ತಾ ಸಮೃದ್ಧಜೀವನ ನಡೆಸುತ್ತಿದ್ದರು. ಕಾಲಾನಂತರದಲ್ಲಿ ಮಳೆ ಕಡಿಮೆಯಾಗಿ, ಭೂಮಿ ಬರಡಾಗಿ ದಕ್ಷಿಣ ದೇಶವು ಭೀಕರ ಬರಗಾಲಕ್ಕೆ ತುತ್ತಾಗಿತ್ತು. ಅಂಥ ಸಮಯದಲ್ಲಿ ಕರ್ನಾಟಕದಲ್ಲಿ ಕರಿಗಂಬಳಿ ಗುರುಸಿದ್ಧರು ಇದ್ದಿರಬೇಕು. ಇವರ ಲೀಲೆಯಿಂದ ಕ್ಷಾಮ ಕಣ್ಮರೆಯಾಗಿ, ಸುಭಿಕ್ಷೆ, ಸಮೃದ್ಧಿಗಳಾಗುತ್ತಿದ್ದವು. ಈಗಲೂ ಮಳೆ ಹೋದರೆ ಮಠಗಳಿಗೆ ಜನ ನಡೆದು ಕೊಳ್ಳುವುದೇ ಇದಕ್ಕೆ ಸಾಕ್ಷಿಯಾಗಿದೆ.

೩.೨.೨. ಮಳೆ ಬೀಜ ತರುವುದು

ಕೂಡ್ಲಿಗಿ ತಾಲೂಕು ಉಜ್ಜಯಿನಿ ಸದ್ಧರ್ಮ ಪೀಠದಿಂದ ಸಾಂಕೇತಿಕವಾಗಿ ಮಳೆ ಬೀಜ ತರುವ ಆಚರಣೆ ಪ್ರಚಲಿತದಲ್ಲಿದೆ. ಕೊಪ್ಪಳ ಜಿಲ್ಲೆಯ ಹಿರೇಸಿಂದೋಗಿಗೆ ಸದ್ಧರ್ಮ ಪೀಠದಿಂದ ಒಂಭತ್ತು ಜನ ಆಯಗಾರರು ಹೊರಡುತ್ತಾರೆ. ಬುತ್ತಿಗಂಟು, ಹೆಗಲಿಗೊಂದು ಕಂಬಳಿ, ಕೈಯಲ್ಲೊಂದು ಬೆತ್ತ ಹಿಡಿದು, ಪೂಜೆ ಸಲ್ಲಿಸಿ ಹೊರಡುತ್ತಾರೆ. ಡೋಲಿನವರು, ನಂದಿಕೋಲು, ಕರಡಿಮೇಳದವರು ಮೆರವಣಿಗೆಯ ಮೂಲಕ ಅವರನ್ನು ಕಳುಹಿಸಿಕೊಡುತ್ತಾರೆ. ಕುರುಬರು ಮಡಿಯಿಂದ ಉಣ್ಣೆ ತಂದು ಒಂದೇ ದಿನದಲ್ಲಿ ಕಂಬಳಿ ನೇಯ್ದು ಆಯಗಾರರಿಗೆ ನೀಡುತ್ತಾರೆ. ಅವರು ಕಂಬಳಿಕೊಪ್ಪೆ ಇಟ್ಟು ನಡೆಯುವುದು ಮಳೆಬೀಜ ತರುವರೆಂಬುದನ್ನು ಸಂಕೇತಿಸುತ್ತದೆ. ಇದು ನಿಷ್ಠೆಯಿಂದ ನಡೆಯುವ ಪಾದಯಾತ್ರೆ. ದಾರಿಯಲ್ಲಿ ಯಾರೊಂದಿಗೂ ಮಾತನಾಡುವಂತಿಲ್ಲ. ದೈಹಿಕ ಬಾಧೆ ತೀರಿದ ನಂತರ ತಮ್ಮೊಡನಿರುವ ವಸ್ತುಗಳನ್ನು ಮಡಿಯಿಂದ ಮುಟ್ಟಬೇಕು. ಅಲ್ಲಿಯವರೆಗೂ ಹಸಿರು ಮರದಲ್ಲಿ ತೂಗು ಹಾಕಿರುತ್ತಾರೆ. ತಮ್ಮೊಡನಿರುವ ಯಾವುದೇ ವಸ್ತುವನ್ನು ದಾರಿ ಮಧ್ಯ ಎಸೆದರೆ, ಅದರ ಜೊತೆ ಹುಲುಸು ಹೋಗುತ್ತದೆಂಬ ನಂಬಿಕೆಯಿದೆ. ಗ್ರಾಮಮಧ್ಯದಲ್ಲಿ ಹಾಯದೇ, ಚಪ್ಪಲಿ ಮೆಟ್ಟದೇ, ಕಣ್ಣಿನ ನೇರಕ್ಕೆ ಹೊಲಗದ್ದೆಗಳ ಮೂಲಕ ಸಾಗಬೇಕು. ದಾರಿಯಲ್ಲಿ ಸಿಗುವ ಹೊಳೆ, ಹಳ್ಳವನ್ನು ಆಯಾ ಊರಿನ ಅಂಬಿಗರು ಹರಿಗೋಲಿನ ಮೂಲಕ ದಾಟಿಸುತ್ತಾರೆ. ನೀರ ಮೇಲೆ ನಡೆಯುವುದು, ಮೌನ ವಹಿಸುವುದು ಇವೆಲ್ಲಾ ಪವಾಡಸದೃಶ ಸಂಗತಿಗಳಾಗಿದ್ದು, ಜನಪದ ಕಥೆಗಳಲ್ಲಿ ಕಂಡುಬರುವಂಥವುಗಳಾಗಿವೆ. ದಾರಿ ಮಧ್ಯದಲ್ಲಿಯ ಹಳ್ಳಿಗರು ಅವರನ್ನು ಕಂಡೊಡನೆ "ಸದ್ಭಕ್ತಿಯಿಂದ ದಾರಿ ಬಿಟ್ಟು ಹಿಂದೆ ಸರಿಯುತ್ತಾರೆ".[೧೯] ಕಾಲುನೋವಿನಿಂದ ಬಳಲಿದರೂ ಆಸ್ಪತ್ರೆ ಸೇರುವಂತಿಲ್ಲ. ಯಾತ್ರೆ ನಿಲ್ಲುವಂತಿಲ್ಲ. ಇವು ವಿರಕ್ತರಲ್ಲಿರುವ ದೇಹದಂಡನೆಯ ಕ್ರಮಗಳಾಗಿವೆ.

ಹಿರೇಸಿಂದೋಗಿ ತಲುಪಿದ ನಂತರ ಅಲ್ಲಿರುವ ಮರುಳಸಿದ್ಧರ ಮಠಕ್ಕೆ ಉತ್ಸವದಲ್ಲಿ ತೆರಳುತ್ತಾರೆ. ಸಿಂದೋಗಿಯು ಉಜ್ಜಯಿನಿ ಸದ್ಧರ್ಮ ಪೀಠದ ಶಾಖಾಮಠವಾಗಿದ್ದು, ಅಲ್ಲಿ ಮಳೆಮಲ್ಲಿಕಾರ್ಜುನ ಜಗದ್ಗುರುಗಳ ಗದ್ದುಗೆಯಿದೆ. ಇವರು ಹಿಂದೆ ಉಜ್ಜಯನಿ ಪೀಠದ ಜಗದ್ಗುರುಗಳಾಗಿದ್ದಾಗ ಒಮ್ಮೆ ಸಿಂದೋಗಿಗೆ ಬಂದಿದ್ದರಂತೆ. ಹಿಂತಿರುಗುವಾಗ ಮಳೆ ಬೀಜ ಮರೆತು ಬಂದಿರುವರೆಂದು, ಅಂದಿನಿಂದ ಮೂರು ಅಥವಾ ಐದು ವರ್ಷಕ್ಕೊಮ್ಮೆ ಮಳೆಬೀಜ ತರುವ ಸಂಪ್ರದಾಯ ಮುಂದುವರಿದಿದೆ. ಆಯಗಾರರು ಕಂಬಳಿ ಹಾಸಿ, ಗದ್ದುಗೆಗೆ ವಿಶೇಷ ಪೂಜೆ ಸಲ್ಲಿಸಿ, ತಮ್ಮೊಂದಿಗಿರುವ ಜೋಳದ ಬೀಜವನ್ನು ಬದಲಾಯಿಸಿಕೊಂಡು ಮರಳುತ್ತಾರೆ. ಮಳೆಬೀಜದೊಂದಿಗೆ ಮರಳಿದ ಆಯಗಾರರನ್ನು ವರುಣದೇವನ ಪ್ರತಿನಿಧಿಗಳಂತೆ ಉತ್ಸವದ ಮೂಲಕ ಕರೆತರಲಾಗುತ್ತದೆ. ಪ್ರತಿ ಮನೆಯಿಂದ ತಂದ ಜೋಳದ ರಾಶಿಯಲ್ಲಿ ಆಯಗಾರರು ತಂದ ಜೋಳವನ್ನು ಸೇರಿಸುತ್ತಾರೆ. ಎಲ್ಲರೂ ಒಂದೊಂದು ಹಿಡಿಜೋಳ ತಂದು ಬಿತ್ತುವ ಬೀಜದೊಂದಿಗೆ ಬೆರೆಸುತ್ತಾರೆ. ಅಂದು ಪುರಾಣ ಮುಕ್ತಾಯದೊಂದಿಗೆ ೧೦೧ ತೆಂಗಿನಕಾಯಿ ಹೊಡೆಯುತ್ತಾರೆ. ಜಲವಿಲ್ಲದೆ ಜೀವನ ಸಾಗದು. ಇದನ್ನರಿತ ಮಾನವ ಮಳೆಗಾಗಿ ಬಲಿ ನೀಡಲು ಪ್ರಾರಂಭಿಸಿರಬೇಕು. ಇಲ್ಲಿ ಬಲಿ ಸಮರ್ಪಣೆಯ ಬದಲಾಗಿ ತೆಂಗಿನಕಾಯಿ ಹೊಡೆಯಲಾಗುತ್ತದೆ. ಜಲದ ಪ್ರತೀಕವಾದ ತೆಂಗಿನಕಾಯಿ ನೀರು ಮಳೆಯನ್ನು ಸಂಕೇತಿಸುತ್ತದೆ.

೩.೨.೩ ಮಳೆಸ್ವಾಮಿ ಗದ್ದುಗೆ ಪೂಜೆ

ಮಳೆಸ್ವಾಮಿ ಗದ್ದುಗೆ ಉಜ್ಜಯನಿಯಲ್ಲಿದೆ. ಇದು ಬಯಲು ಗದ್ದುಗೆಯಾಗಿದ್ದು, ಇಲ್ಲಿ ಪ್ರತಿದಿನ ಪೂಜೆ ನಡೆಯುವಂತಿಲ್ಲ. ಕ್ಷಾಮ ಬಂದಾಗ ಮಾತ್ರ ಭಕ್ತರು ಹಣ್ಣುಕಾಯಿ, ನೈವೇದ್ಯ ಮಾಡುತ್ತಾರೆ. ಹೀಗೆ ಮಳೆಯಿಲ್ಲದಿದ್ದಾಗ ಮಳೆಸ್ವಾಮಿ ಗದ್ದುಗೆ ಪೂಜಿಸಿದರೆ ಮಳೆಯಾಗುತ್ತದೆಂಬ ನಂಬಿಕೆಯಿದೆ. ಜಲಕ್ಕೂ ಜೀವಕ್ಕೂ ಅವಿನಾಭಾವ ಸಂಬಂಧ. ಸಸ್ಯಪ್ರಪಂಚಕ್ಕೂ ಜೀವ ಜಗತ್ತಿಗೂ ನೀರು ಆಧಾರ. ಹಿಂದಿನವರ ಮಳೆ ಬೀಜ ತರುವ ಆಚರಣೆಯ ಆಶಯ ಮಳೆ ತರಿಸುವುದಾಗಿತ್ತು. ಇಂದು ವಿಜ್ಞಾನಿಗಳಿಂದ ಮೋಡ ಬಿತ್ತನೆ ಮಾಡಿ ಕೃತಕ ಮಳೆ ತರಿಸುವ ಪ್ರಯತ್ನಗಳು ನಡೆಯುತ್ತಿವೆ. "ಮಳೆರಾಯ ನಡೆಸಿದರೇನೆ, ಹೊಟ್ಟೆಗೆ ಕಾಳು, ಮೈಗೆ ಬಟ್ಟೆ" ಎಂಬಂತೆ ಮಳೆಯನ್ನು ನಂಬಿದ ಬದುಕು ಜನಪದರದ್ದಾಗಿದೆ.

೩.೨.೪. ಕಪ್ಪೆ, ಕತ್ತೆಗಳ ಮದುವೆ ಆಚರಣೆ

ಸಿರುಗುಪ್ಪ ತಾಲೂಕಿನ ಪೂರ್ವದ ಗ್ರಾಮೀಣ ಭಾಗಗಳಲ್ಲಿ 'ಕೊಪ್ಪೆ ಕೊಪ್ಪೆ ಕೊರರಣ್ಣ' ಆಚರಣೆಯಿದೆ. ಇಬ್ಬರು ಹುಡುಗರು ಬೆತ್ತಲೆಯಾಗಿ ಒಂದು ದೊಡ್ಡ ಒನಕೆಗೆ ಕಪ್ಪೆಯ ಹಿಂದಿನ ಎರಡು ಕಾಲುಗಳನ್ನು ಬಿಗಿದು, ಹೊತ್ತುಕೊಂಡು ಮನೆಮನೆಗೂ ಹೋಗಿ ನೀರು ಹಾಕಿಸಿಕೊಂಡು, ಧಾನ್ಯ ಸಂಗ್ರಹಿಸುತ್ತಾರೆ. ಗ್ರಾಮದ ಹೊರವಲಯದಲ್ಲಿ ಅಡುಗೆ ಮಾಡಿ ಸಾಮೂಹಿಕ ಭೋಜನ ಮಾಡಿ, ನೀರು ಕುಡಿಯದೇ ಎಲ್ಲರೂ 'ಬಾನುಂಡೆ ನೀರಿಲ್ಲ' ಎಂದು ಕಿರುಚುತ್ತಾ ನೀರಿದ್ದ ಕಡೆ ಓಡುತ್ತಾರೆ. ಈ ರೀತಿಯ ಮೊರೆ ಕೇಳಿಯಾದರೂ ವರುಣನ ಆಗಮನವಾಗುವುದೆಂಬ ಆಶಯ ಈ ಆಚರಣೆಯಲ್ಲಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಮಳೆಗಾಗಿ ಕಪ್ಪೆಗಳ ಮದುವೆ ಮಾಡುವ ಆಚರಣೆ ಚಾಲ್ತಿಯಲ್ಲಿದೆ. ದಪ್ಪವಾದ ಎರಡು ಕಪ್ಪೆಗಳನ್ನು ಹಿಡಿದು ತಂದು ದೇವಸ್ಥಾನದಲ್ಲಿ ಹೂಮಾಲೆ ಹಾಕಿ ಮದುವೆ ಮಾಡುತ್ತಾರೆ. ಅಂದು ವಾದ್ಯಗಳೊಂದಿಗೆ ಮೆರವಣಿಗೆ ಏರ್ಪಡುತ್ತದೆ. ಇದೇ ರೀತಿಯಾಗಿ ಕತ್ತೆಗಳಿಗೂ ಮದುವೆ ಮಾಡಿಸಲಾಗುತ್ತದೆ. ಮುನಿಸಿಕೊಂಡ ಮಳೆರಾಯ ತಪ್ಪದೇ ಮದುವೆಗೆ ಬರುವನೆಂಬ ನಂಬಿಕೆಯಿದೆ. ಇಂಥ ಆಚರಣೆಗಳು ಬಾಹ್ಯ ನೋಟಕ್ಕೆ ತಮಾಷೆಯೆನಿಸಿದರೂ, ಪರಾಮರ್ಶಿಸಿ ನೋಡಿದಾಗ ಮಾತ್ರ ಮೂಲ ಉದ್ದೇಶ ತಿಳಿಯಲು ಸಾಧ್ಯವಿದೆ. ನೆಲ ಮತ್ತು ಜಲವಾಸಿಯಾದ ಕಪ್ಪೆ ಮಳೆಯ ರಕ್ಷಾಕವಚವಾಗಿದೆ. ಒದ್ದೆಯಾದ ತಂಪು ದೇಹ ಹೊಂದಿದ ಪ್ರಾಣಿಯನ್ನು ಪೂಜಿಸಿದರೆ ಭೂಮಿ ತಂಪಾಗುತ್ತದೆಂಬ ಕಲ್ಪನೆಯಿದೆ. ಸತತವಾಗಿ ಕಪ್ಪೆ ವಟಗುಟ್ಟಿದರೆ ಮಳೆಯಾಗುತ್ತವೆಂಬ ನಂಬಿಕೆಯ ಹಿನ್ನೆಲೆಯನ್ನು ಅವಲೋಕಿಸಿದಾಗ, ಮಳೆಯ ಮುನ್ಸೂಚನೆ, ಭೌಗೋಳಿಕ ವೈಪರೀತ್ಯಗಳನ್ನು ಮಾನವನಿಗಿಂತ ಮೊದಲು ಪ್ರಾಣಿಗಳು ಅರಿಯುತ್ತವೆ ಎಂಬ ವೈಜ್ಞಾನಿಕ ಸತ್ಯ ಗೋಚರಿಸುತ್ತದೆ. ಕುದುರೆಯನ್ನು ಲಕ್ಷ್ಮಿ, ಆಕಳನ್ನು ಗೋಮಾತೆ ಎಂದು ಪೂಜಿಸುವಂತೆ ಮಳೆ ಆಚರಣೆಯಲ್ಲಿ ಕಪ್ಪೆ, ಕತ್ತೆಗಳ ಪೂಜಿಸುವಿಕೆ ಹಿಂದಿನಿಂದಲೂ ನಡೆದುಬಂದಿದೆ. ಮಾನವನ ನಿತ್ಯದ ಬದುಕಲ್ಲಿ ಕತ್ತೆ ಸಹಾಯಕ ಪ್ರಾಣಿ. ಇದು ಹೆಚ್ಚು ಬಲವುಳ್ಳದ್ದು, ತಾಳ್ಮೆಯಿಂದ ಭಾರ ಹೊರುವಂತಥದ್ದು, ಬುದ್ಧಿಗೇಡಿ ಪ್ರಾಣಿಯೆಂಬ ಪ್ರತೀತಿ ಇದೆ. 'ಏನು ಕತ್ತೆ ಆಗಿದ್ದೀಯಾ'?, 'ಕತ್ತೆಯಂತೆ ಭಾರ ಹೊರುವವ' ಎನ್ನುವ ಬೈಗಳಿಂದ ಕತ್ತೆ ತಿಳಿಗೇಡಿಯಾದರೂ, ಹೆಚ್ಚು ಭಾರ ಹೊರುವ ಪ್ರಾಣಿಯೆಂದು ತಿಳಿಯುತ್ತದೆ. 'ಕತ್ತೆ ದುಡಿದಂಗೆ ದುಡಿದು

ಸುಖ ಪಡು' ಎನ್ನುವ ತಿಳುವಳಿಕೆ ಮಾತಿನಲ್ಲಿಯೂ ಕರ್ತೃಯ ಕಾಯಕತತ್ವ ಅಡಗಿದೆ. ಈ ರೀತಿಯ ನಂಬಿಕೆಗಳ ತಳಹದಿಯಲ್ಲಿ ಆಚರಣೆಗಳು ಉದಯಿಸಿವೆ. 'ನಂಬಿದರೆ ನಂಬಿಕೆ, ಇಲ್ಲವಾದರೆ ಮೌಢ್ಯತೆ'. ಮೌಲ್ಯಯುತ ಆಚರಣೆಗಳನ್ನು ಮುಂದುವರಿಸುವುದರಲ್ಲಿ ತಪ್ಪಿಲ್ಲ.

೩.೨.೫. ಪರ್ಜನ್ಯ ಪೂಜೆ

ಸಿರುಗುಪ್ಪ ತಾಲೂಕು ಇಬ್ರಾಹಿಂಪುರದಲ್ಲಿ ಬಸವಣ್ಣನಿಗೆ ಐದುನೂರಾ ಒಂದು ಕೊಡ ನೀರು ಸುರಿದು ಪೂಜೆ ಸಲ್ಲಿಸುತ್ತಾರೆ. ಕುರುಗೋಡು ಸಮೀಪ ಎಮ್ಮಿಗನೂರು ಗ್ರಾಮದಲ್ಲಿ ಸತತ ಒಂಭತ್ತು ದಿನ ಪ್ಯಾಟೆ ಬಸವಣ್ಣನಿಗೆ ಸಾವಿರ ಕೊಡ ನೀರು ಸುರಿಯುತ್ತಾರೆ. ರಾತ್ರಿ ದೇವರ ಗುಡಿ ತುಂಬ ನೀರು ತುಂಬಿ, ದೇವರನ್ನು ನೆನೆಸಿ, ಬೆಳಗ್ಗೆ ನೀರನ್ನು ಹೊರಹಾಕಲಾಗುತ್ತದೆ. ಊರಿನ ಬುಡ್ಡೆಕಲ್ಲುಗಳಿಗೂ ಮಳೆಗಾಗಿ ನೀರು ಸುರಿಯುವ ಸಂಪ್ರದಾಯವಿದೆ. ಈ ರೀತಿ ವಾತಾವರಣ ತಂಪಾಗಿಸುವಿಕೆಯಿಂದ, ಆಕಸ್ಮಿಕವಾಗಿ ವಾತಾವರಣ ನಿರ್ವಾತವಾಗಿ, ಮೋಡಗಳಿಗೆ ತಂಪು ತಗುಲಿ ಮಳೆ ಸುರಿಯುತ್ತದೆಂಬುದು ವೈಜ್ಞಾನಿಕ ಸಂಗತಿ. ಹೀಗೆ ನೀರು ಸುರಿಯುವುದು ಮಳೆಯ ಮಾಂತ್ರಿಕ ಅನುಕರಣೆ. ಋಗ್ವೇದದಲ್ಲಿ ಮಳೆದೇವತೆಯನ್ನು ಪರ್ಜನ್ಯ ಎಂದು ಕರೆಯಲಾಗಿದೆ. ಇದು ಅಂತರಿಕ್ಷದಲ್ಲಿರುವ ದ್ವಿತೀಯ ದೇವತೆ. ಈ ದೇವತೆಯನ್ನು ಸಂಪ್ರೀತಗೊಳಿಸಿ, ಮಳೆ ತರಿಸುವ ಪ್ರಯತ್ನದ ಹಿನ್ನೆಲೆ ಇದಾಗಿರಬೇಕು. "ದೇವರನ್ನು ಒಂದು ದಿನ ಸಂಪೂರ್ಣ ಮುಳುಗಿಸಿ ಬಿಡುವ ಆಚರಣೆ ವೈದಿಕರಲ್ಲಿತ್ತು. ವೇದಗಳಲ್ಲೂ ಇದರ ಉಲ್ಲೇಖವಿದೆ. ಪರ್ಜನ್ಯವೆಂದರೆ ವಾರಿಧರ, ಮೇಘವೆಂದು ಕಿಟೆಲ್ ನಿಘಂಟುವಿನಲ್ಲಿದೆ. ಪುರಂದರ, ಇಂದ್ರ ಎಂದು ಅರ್ಥ ನೀಡಲಾಗಿದೆ."[೨] ಒಟ್ಟಾರೆಯಾಗಿ ಇದರ ಅರ್ಥ ಮಳೆಗಾಗಿ ಮಾಡುವ ಪ್ರಾರ್ಥನೆ. ವಿಜಯನಗರದ ಅರಸರ ಕಾಲದಲ್ಲಿ ಹಂಪಿ ವಿರೂಪಾಕ್ಷನ ಸಾನಿಧ್ಯದಲ್ಲಿ, ತುಂಗಭದ್ರಾ ನದಿಯ ದಡದಲ್ಲಿ ಪರ್ಜನ್ಯ ಪೂಜೆಯನ್ನು ಮಾಡುತ್ತಿದ್ದರಂತೆ. ಬಳ್ಳಾರಿ ಸಮೀಪದ ಯರಂಗಳಿಗಿ ಗ್ರಾಮದಲ್ಲಿ ಸತತ ಹನ್ನೆರಡು ದಿನ ಹಗಲು ರಾತ್ರಿ ಭಜನೆ ಕಾರ್ಯಕ್ರಮ ನೆರವೇರುತ್ತದೆ. ಸಂಡೂರು ಭಾಗದಲ್ಲಿ ಪ್ರತಿ ಮನೆಯಿಂದ ದವಸಧಾನ್ಯ ಸಂಗ್ರಹಿಸಿ, ಪರುವು ಮಾಡಿ ಮಳೆಮಲ್ಲಪ್ಪನಿಗೆ ನೈವೇದ್ಯ ಮಾಡಿ, ಸಾಮೂಹಿಕ ಭೋಜನ ಮಾಡಲಾಗುತ್ತದೆ. ದೇಹದಲ್ಲಿ ತೊನ್ನಿದ್ದ ಶವ ಮಣ್ಣಾಗುವುದಿಲ್ಲವೆಂಬ ನಂಬಿಕೆಯಿಂದ ಅಂಥ ಶವಗಳನ್ನು ಕಿತ್ತು ಸುಡುವ ಪದ್ಧತಿ ಬಳ್ಳಾರಿ ಜಿಲ್ಲೆಯಲ್ಲಿದೆ. ಬುರ್ರಕಥೆಯನ್ನು ಹಾಡಿಸುವುದರಿಂದ ಮಳೆಯಾಗುತ್ತದೆಂಬ ಆಶಯ ಜನಪದರದ್ದಾಗಿದೆ. ಹೆಚ್ಚಾಗಿ ಕಾಳಿಂಗರಾಯನ ವೀರಕಾವ್ಯ ವನ್ನು ಹಾಡಿಸುವುದು ಕ್ಷೇತ್ರಕಾರ್ಯದಿಂದ ಕಂಡುಬಂದಿದೆ. ಬಳ್ಳಾರಿ ಜಿಲ್ಲೆ ಬುರ್ರಕಥೆ ಕಲಾ ಪ್ರಕಾರಕ್ಕೆ ಪ್ರಸಿದ್ಧಿ ಪಡೆದಿದೆ. ವಂಶಪಾರಂಪರಿಕವಾಗಿ ಈ ಕಲೆಯನ್ನು ಪೋಷಿಸಿಕೊಂಡು ಬಂದಿರುವ ದರೋಜಿ ಈರಮ್ಮ ಅವರಿಗೆ ನಾಡೋಜ ಗೌರವ ಮತ್ತು ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ. ಬಳ್ಳಾರಿ ಜಿಲ್ಲೆಯಲ್ಲಿ ಹಿಂದಿನಿಂದಲೂ ಬುರ್ರಕಥೆ ಕಲೆಯಾಗಿ ಪ್ರಚಲಿತದಲ್ಲಿ ಇರುವುದಲ್ಲದೆ, ಮಳೆ ಆಚರಣೆಗಳಲ್ಲಿ ಪ್ರಾಮುಖ್ಯತೆ ಪಡೆದುಕೊಂಡಿದೆ.

ಮಳೆ ಬಾರದಿದ್ದಾಗ ದೇವರನ್ನು ಬಿಡುವುದು, ಭಜಿಸುವುದು, ಬೆದರಿಕೆ ಹಾಕುವುದು, ಮರೆತುಹೋದ ದೇವರನ್ನು ಪೂಜಿಸುವುದು, ಅಬ್ಬರಿಸುವುದು, ವಿಚಿತ್ರವಾಗಿ ವರ್ತಿಸುವುದು, ಕೆಟ್ಟುಹೋದ ಕ್ರಿಯೆಗಳನ್ನು

ಸರಿಪಡಿಸುವುದು ಇವೆಲ್ಲವೂ ಮಾನವಶಾಸ್ತ್ರಜ್ಞರ ಪ್ರಕಾರ ಮಂತ್ರವಿದ್ಯೆ ಎನಿಸಿಕೊಳ್ಳುತ್ತವೆ. ಇವು ಮಳೆ ತರಿಸಲು ದೇವರನ್ನು ಒಲಿಸಿಕೊಳ್ಳುವ ಪ್ರಯತ್ನಗಳು. ದೇವರನ್ನು ನೀರಲ್ಲಿ ಮುಳುಗಿಸುವುದು, ತಲೆಯ ಮೇಲೆ ನೀರು ಸುರಿಯುವುದು. ತಾತ್ಕಾಲಿಕವಾಗಿ ವಾತಾವರಣ ತಂಪಾಗಿಸುವುದು, ಮಳೆಯ ಅನುಕರಣೆಯ ಸಾದೃಶ್ಯ ರೂಪಗಳು. ಕೇಕೆ, ಕಿರುಚಾಟಗಳಿಂದ ಶಬ್ದ ತರಂಗಗಳ ಮೂಲಕ ವಾತಾವರಣ ನಿರ್ವಾತಗೊಂಡು, ಮಳೆ ಮೋಡಗಳು ಚಲಿಸಿ ಸ್ವಲ್ಪಮಟ್ಟಿನ ಮಳೆಯಾದರೂ ಆಗುವ ಸಾಧ್ಯತೆ ಇದೆ. ಕತ್ತೆ, ಕಪ್ಪೆಗಳ ಮದುವೆ ದೇವರಿಗೆ ತೋರಿಸುವ ಪ್ರತಿಭಟನೆಯಾಗಿ ಕಂಡುಬಂದರೂ, ಅವು ವಾತಾವರಣದ ವೈಪರೀತ್ಯಗಳನ್ನು ತಿಳಿಸುವ ಪ್ರಾಣಿಗಳಾಗಿವೆ. ಈ ರೀತಿ ದೈವದ ಮೇಲೆ ಮಾಡುವ ಪ್ರತಿಭಟನೆಗಳು ಎಲ್ಲಾ ಭಾಗಗಳಲ್ಲೂ ಪ್ರಚಲಿತದಲ್ಲಿವೆ. "ಚೀನಾದವರು ಕಾಗದದ ಮಳೆ ದೇವರನ್ನು ಮಾಡಿ, ಉತ್ಸವ ನೆರವೇರಿಸುತ್ತಾರೆ. ನಂತರ ದೇವರನ್ನು ಹೆದರಿಸಿ, ಬೆದರಿಸಿ, ಹೀನಾಯವಾಗಿ ಬೈದು, ಆ ಮೂರ್ತಿಯನ್ನು ಚಿಂದಿ ಚಿಂದಿ ಮಾಡುವ ಆಚರಣೆಯಿದೆ."[೧೨] ಜನಪದರು ದೈವದ ಮೇಲೆ ಮಾಡುವ ಈ ರೀತಿಯ ಪ್ರತಿಭಟನೆಗಳು ಅವರ ಅಸಹಾಯಕತೆ ಎಂದು ತಿಳಿಯುವುದಕ್ಕಿಂತ, ತಾತ್ಕಾಲಿಕವಾಗಿ ಸಮಾಧಾನ ನೀಡುವ ಸಂಗತಿಗಳನ್ನಾಗಿ ಗ್ರಹಿಸುವುದು ಸೂಕ್ತವಾಗಿದೆ.

೩.೨.೬. ಮಳೆ ನಿಲ್ಲಿಸುವ ಆಚರಣೆಗಳು

ಮಳೆ ನಿಲ್ಲಿಸುವ ಆಚರಣೆಗಳು ಯಾವ ಹಿನ್ನೆಲೆಯಿಂದ ಬಂದಿವೆ ಎಂಬುದು ಕ್ಷೇತ್ರಕಾರ್ಯದಿಂದ ಸ್ಪಷ್ಟ ಮಾಹಿತಿ ಲಭಿಸಿಲ್ಲ. ಬಳ್ಳಾರಿ ಜಿಲ್ಲೆ ಅತೀ ಕಡಿಮೆ ಮಳೆ ಬೀಳುವ ಪ್ರದೇಶ. ಆದರೂ ಮಳೆ ಬರಬಾರದೆಂಬ ನಿಷೇಧಾತ್ಮಕ ಆಚರಣೆಗಳು ಈ ಪರಿಸರದಲ್ಲಿ ಕೆಳಕಂಡಂತೆ ಇವೆ.

* ಮುತ್ತೈದೆಯೊಬ್ಬಳು ತನ್ನ ಕೊನೆಯ ಮಗನ ಕುಂಡೆಯನ್ನು ಆಕಾಶಕ್ಕೆ ತೋರಿಸಿದರೆ,

* ವಿಧವೆಯೊಬ್ಬಳು ಮಾರೆಮ್ಮನ ಗುಡಿಯ ಅಂಗಳದಲ್ಲಿ ಅಮವಾಸ್ಯೆಯ ಕತ್ತಲಲ್ಲಿ ತನ್ನ ಕುಚಗಳೆರಡನ್ನು ಗಡಿಗೆಯಲ್ಲಿ ಅದ್ದಿ, ಆ ನೀರನ್ನು ಆಕಾಶಕ್ಕೆ ಚಿಮ್ಮಿಸಿದರೆ, ದುಷ್ಟನೊಬ್ಬ ತನ್ನ ಪಕ್ಕದ ಹೊಲದವನ ಬೆಳೆ ಸರಿಯಾಗಿ ಬರಬಾರದು ಎಂದು ಹಂದಿಯ ಮುಳ್ಳನ್ನು ಐದು ಹುಣ್ಣಿಮೆ ದಿನದಂದು ತನಗಾಗದವರ ಹೊಲದಲ್ಲಿ ಹೂಳಿ ಬಂದರೆ ಮಳೆ ಆಗುವುದಿಲ್ಲವೆಂಬ ನಂಬಿಕೆ ಇದೆ. ಇಂದು ಅಣೆಕಟ್ಟೆಯಿಂದ ಕಾಲುವೆಗಳ ಮೂಲಕ ನೀರೊದಗಿಸುವ ಸೌಲಭ್ಯವಿರುವ ಕೆಲವು ಭಾಗಗಳಲ್ಲಿ ಮಳೆ ಸಂಬಂಧಿ ಆಚರಣೆಗಳಿಗೆ ಹೆಚ್ಚಿನ ಪ್ರಾಶಸ್ತ್ಯವಿಲ್ಲ. ಕಾರಣ ಅಲ್ಲಿನ ಕೃಷಿಕಾರ್ಯ ಮಳೆಗಾಲವನ್ನು ಆಧರಿಸಿಲ್ಲ.

ಮಾನವ ಆಚರಣೆಯ ಮುಖೇನ ನಿಸರ್ಗದ ಸಮನ್ವಯತೆಯನ್ನು ಸಾಧಿಸಲು ಪ್ರಯತ್ನಿಸುತ್ತಿರುವ ಕ್ರಿಯೆಗಳಾಗಿ ಕಂಡುಬಂದಿವೆ. ನೀರಾವರಿ ಸೌಲಭ್ಯವಿರುವ, ಕೃತಕ ಮಳೆ ಭರಿಸಲು ಸಾಧ್ಯವಿರುವ ವೈಜ್ಞಾನಿಕ ಯುಗದಲ್ಲಿ ಪಾರಂಪರಿಕವಾಗಿ ಮಳೆ ಆಚರಣೆಗಳು ಉಳಿದುಕೊಂಡಿರಲು ಕಾರಣ. ಅವುಗಳಲ್ಲಿರುವ ಮೌಲ್ಯಯುತ ಸಂದೇಶಗಳಾಗಿವೆ.

೩.೨.೭. ಕಾಲ್ನಡಿಗೆಯಲ್ಲಿ ಹಂಪಿಗೆ ಯಾತ್ರೆ

೫೬ ವರ್ಷಗಳಿಗೊಮ್ಮೆ ಗಂಗೆಪೂಜೆ ಮಾಡುವ ಆಚರಣೆ ಕೂಡ್ಲಿಗಿ ತಾಲೂಕು ಪೂಜಾರಹಳ್ಳಿಯಲ್ಲಿದೆ. ಇದು ಮ್ಯಾಸಬೇಡ ಸಮುದಾಯದ ಧಾರ್ಮಿಕ ಆಚರಣೆ. ಓಬಳೇದೇವರು ಹಾಗೂ ಬಸವಣ್ಣನನ್ನು ಹೊತ್ತು

ಛತ್ರಿ, ಚಾಮರ, ಡೊಳ್ಳು ವಿವಿಧ ವಾದ್ಯಗಳೊಂದಿಗೆ ಕಾಲುನಡಿಗೆಯಲ್ಲಿ ಹಂಪಿ ತಲುಪಿ ಗಂಗೆ ಪೂಜಿಸುವ ಸಂಪ್ರದಾಯವಿದೆ.

ಬುಡಕಟ್ಟು ಹಿರಿಯರ ಪ್ರಕಾರ ಇವರು ಬೇಟೆ ಹಾಗೂ ಪಶುಪಾಲಕರಾಗಿದ್ದು, ನಿತ್ಯ ಅರಣ್ಯ ಸುತ್ತುವವರಾಗಿದ್ದರು. ಆಗಾಗ್ಗೆ ವಸತಿ ಬದಲಾಯಿಸಿಕೊಳ್ಳುವ ಅಲೆಮಾರಿ ಜೀವನ ಇವರದಾಗಿತ್ತು. ಪೆಟ್ಟಿಗೆ ದೇವರುಗಳ ನಿರ್ಮಾಣವು ಸಹ ಸಾಗಾಣಿಕೆಗೆ ಅನುಕೂಲವಾಗಲೆಂಬುದಾಗಿದೆ. ದೇವರಿಗೂ ತಮ್ಮ ವಾಸದ ನೆಲೆಯಂಥ ಗುಡಿಸಲುಗಳಿದ್ದು, ಅವುಗಳನ್ನು ಹೊತ್ತು ನಡೆಯುತ್ತಿದ್ದರು. ಈ ಯಾತ್ರೆಯು ತುಂಗಭದ್ರಾ ನದಿ ತೀರ ಸೇರುತ್ತದೆ. ಅಲ್ಲಿ ಬಿಡಾರ ಹೂಡಿ ಹುಲ್ಲು ಮತ್ತು ಲಕ್ಕಲಿ ಬರಲುಗಳಿಂದ ಗುಡಿಸಲುಗಳನ್ನು ಕಟ್ಟಿ, ತಮ್ಮ ಪೆಟ್ಟಿಗೆ ದೇವರನ್ನು ಪ್ರತಿಷ್ಠಾಪಿಸಿ ಪೂಜಿಸುತ್ತಾರೆ. ಇದು ಮ್ಯಾಸಬೇಡರು ಈ ಹಿಂದೆ ಅಲೆಮಾರಿಗಳಾಗಿದ್ದುದರ ಸಂಕೇತವಾಗಿದೆ. ಎಂ.ಜಿ. ಈಶ್ವರಪ್ಪನವರ ಪ್ರಕಾರ "ಪೆಟ್ಟಿಗೆ ದೇವರುಗಳನ್ನು ಪೂಜಿಸುವ ಮ್ಯಾಸಬೇಡರು, ಹನ್ನೆರಡು ಪೆಟ್ಟಿಗೆಗಳನ್ನು ಹನ್ನೆರಡು ಜನ ದೇವತೆಗಳೆಂದೂ ಮತ್ತು ತಮ್ಮ ಕುಲವನ್ನು ಆಶೀರ್ವದಿಸಿದ ಹನ್ನೆರಡು ಋಷಿಮುನಿಗಳೆಂದು ನಂಬುತ್ತಾರೆ" (ಮ್ಯಾಸಬೇಡರ ಸಂಸ್ಕೃತಿ, ೧೯೯೩, ಪು. ೧೧೯). ಕೂಡ್ಲಿಗಿ ತಾಲೂಕಿನ ಮಾಕನಡುಕು, ಗೆದ್ದಲಗಟ್ಟೆ, ಕುರಿಹಟ್ಟಿ ಗ್ರಾಮಗಳು ಮೂರು ಪೆಟ್ಟಿಗೆ ದೇವರುಗಳ ನೆಲೆಗಳಾಗಿವೆ. ಕೊಟ್ಟೂರಿನ ಕೊಟ್ಟೂರೇಶ್ವರ ಹಾಗೂ ಉಜ್ಜಯಿನಿಯ ಸಿದ್ಧೇಶ್ವರ ದೈವಗಳ ಪ್ರಭಾವದಿಂದ ಬೋಸೆದೇವರು ಬಸವೇಶ್ವರ ದೈವವಾಗಿ ಪರಿವರ್ತನೆಯಾಗಿದೆ. ಹೀಗೆ ಜನಪದ ಸಂಸ್ಕೃತಿಯ ದೈವದ ಹೆಸರುಗಳು ಶಿಷ್ಟ ಸಂಸ್ಕೃತಿಯ ಪ್ರಭಾವದಿಂದ ಮಾರ್ಪಾಟಾಗಿ ಪರಿಷ್ಕಾರ ರೂಪ ಪಡೆದಿವೆ.

ಉತ್ಸವದಲ್ಲಿ ಸಾಕಷ್ಟು "ಕಿಲಾರಿ"[೧೪] ಎತ್ತುಗಳು ಪಾಲ್ಗೊಳ್ಳುತ್ತವೆ. ಇವು ದೇವರಿಗೆ ಬಿಟ್ಟವುಗಳು. ಇಂದಿಗೂ ಕೂಡ್ಲಿಗಿ ತಾಲೂಕಿನ ಅಪೇನಹಳ್ಳಿ, ಗುಡೇಕೋಟೆ ಸರಹದ್ದಿನ ಅಳಿದುಳಿದ ಅರಣ್ಯ ಭಾಗಗಳಲ್ಲಿ ನೂರಾರು ಈ ರೀತಿಯ ಎತ್ತುಗಳು ಕಂಡುಬರುತ್ತವೆ. ಮ್ಯಾಸಬೇಡರ ಉತ್ಸವಗಳಲ್ಲಿ ಇಂಥ ಎತ್ತುಗಳು ಗುಂಪು ಗುಂಪಾಗಿ ಪಾಲ್ಗೊಳ್ಳುತ್ತವೆ. ಕಾಲಕ್ರಮೇಣ ಜಾನುವಾರುಗಳು ಕಡಿಮೆಯಾಗಿ, ವೃತ್ತಿಮೂಲಗಳು ಬದಲಾಗಿದ್ದರೂ ಪಶುಪಾಲನೆಯ ಸಾಂಕೇತಿಕತೆ ಆಚರಣೆಯಲ್ಲಿ ಕಂಡುಬಂದಿದೆ.

ಯಾತ್ರೆಯಲ್ಲಿ ಪಾಲ್ಗೊಂಡಿದ್ದ ಗೊಂಚಿಗಾರ ಬೋರಯ್ಯನವರು "ನಮ್ಮ ಅಜ್ಜ ೧೯೫೦ರಲ್ಲಿ ಗ್ರಾಮಸ್ಥರೆಲ್ಲ ಸೇರಿ ಹಂಪಿಗೆ ಗಂಗೆ ಪೂಜೆಗೆ ಹೋಗಿದ್ರಂತೆ. ಈಗ ನಮ್ಮ ಪುಣ್ಯ. ನಾವು ಹೋಗುತ್ತಿದ್ದೇವೆ" ಎಂದು ಹೇಳುತ್ತಾರೆ. ನಮ್ಮ ಗ್ರಾಮಗಳ ಮನೆತನಗಳ ದೈವ ವಿರೂಪಾಕ್ಷ, ನಮ್ಮ ಹಿರಿಯರ ನೆಲೆ ಹಂಪಿಯಾಗಿತ್ತೆಂದು ಹೇಳುವುದುಂಟು. ಈ ಹೇಳಿಕೆ ಹಿನ್ನೆಲೆಯನ್ನು ಅವಲೋಕಿಸಿದಾಗ "ಸಂಸ್ಕೃತಿಯೊಂದು ಚಾರಿತ್ರಿಕ ಬೆಳವಣಿಗೆ ಹೊಂದಿದ್ದು, ಸಾಮಾಜಿಕ ಹಾಗೂ ಭೌಗೋಳಿಕ ಪರಿಸರದಿಂದ ರೂಪಿಸಲ್ಪಡುತ್ತದೆ"[೧೫] ಎಂಬ ಬೋಯಸ್‌ರವರ ಪ್ರತಿಪಾದನೆ ಸಮರ್ಥನೀಯ. ತಮ್ಮ ಪಂಗಡದೊಂದಿಗಿನ ಹೋರಾಟದ ಬದುಕು ಇವರದಾಗಿತ್ತು. ಸಹಜವಾಗಿ ಧೈರ್ಯವಂತರೂ, ದೃಢಕಾಯರೂ ಆಗಿದ್ದರು. ಈ ಕಾರಣದಿಂದ ಇವರನ್ನು ರಾಜರುಗಳು ಪಾಳೆಪಟ್ಟು ನಿರ್ಮಿಸಿ, ತಮ್ಮ ಸಹಾಯಕ್ಕೆ ಇರಿಸಿಕೊಳ್ಳುತ್ತಿದ್ದರೆಂಬುದು ಇತಿಹಾಸದಿಂದ ತಿಳಿದ ಸಂಗತಿಯಾಗಿದೆ. ಚಿತ್ರದುರ್ಗ, ಜರ್ಮಲೆಯ ಬೇಡನಾಯಕ ಪಾಳೇಗಾರರು ವಿಜಯನಗರ ಪತನಕ್ಕೆ ಮುಂಚೆ ಅಲ್ಲಿಯ ಅರಸರಿಗೆ

ಮಾಂಡಲೀಕರಾಗಿದ್ದು, ಅವರು ಕೈಗೊಳ್ಳುತ್ತಿದ್ದ ಯುದ್ಧಗಳಲ್ಲಿ ಮೀಸಲುಪಡೆಯ ಸೈನಿಕರಾಗಿರುತ್ತಿದ್ದರು. ಇತರೆ ವೃತ್ತಿಗಳಿಗಿಂತ ಸೈನ್ಯದಲ್ಲಿ ಸೇರಿಕೊಂಡು ತಮ್ಮ ನೆಚ್ಚಿನ ದೊರೆಗಳ ಪರವಾಗಿ ಯುದ್ಧ ಮಾಡಿ, ಪರಾಕ್ರಮ ತೋರುವ ಉದ್ದೇಶ ಅವರದಾಗಿತ್ತು. ಹೀಗೆ ವಿಜಯನಗರದ ಅರಸರಿಗೆ ತಮ್ಮ ನಿಷ್ಠೆಯನ್ನು ತೋರಿಸಿಕೊಡುವ ಉದ್ದೇಶದ ಆಚರಣೆ ಇದಾಗಿದ್ದಿರಬೇಕು. ಈಗಲೂ ಸಾಂಕೇತಿಕವಾಗಿ ಆಚರಿಸಲ್ಪಡುತ್ತಿದೆ.

ಮೇಲಿಂದ ಮೇಲೆ ಯುದ್ಧಗಳಾಗುತ್ತಿದ್ದು, ಹಳ್ಳಿಗಳ ಮೇಲೆ ದಾಳಿ ನಡೆಯುತ್ತಿದ್ದವು. ಇದರಿಂದ ಬಹುತೇಕ ಗ್ರಾಮಗಳ ಸುತ್ತ ಸಣ್ಣಪ್ರಮಾಣದ ಕೋಟೆ ಕಟ್ಟುತ್ತಿದ್ದಿರಲು ಸಾಧ್ಯ. ಈಗಲೂ ಜರ್ಮಲೆ, ಗುಡೇಕೋಟೆ ಗ್ರಾಮಗಳ ಸುತ್ತ ಸಣ್ಣಪ್ರಮಾಣದ ಪಾಳುಬಿದ್ದ ಸ್ಥಿತಿಯಲ್ಲಿರುವ ಕೋಟೆಗೋಡೆಗಳು ಕಂಡು ಬರುತ್ತವೆ. ಇದರಿಂದ ಈ ಪ್ರದೇಶಗಳು ಬೇಡನಾಯಕ ಪಾಳೇಗಾರರ ನೆಲೆಯಾಗಿದ್ದವೆಂದು ತಿಳಿದು ಬರುತ್ತದೆ. ಹಿಂದಿನಿಂದಲೂ ಚಿತ್ರದುರ್ಗ, ಬಳ್ಳಾರಿ ಭಾಗದ ಮ್ಯಾಸಬೇಡ ಸಮುದಾಯದವರು ಮಳೆ, ಬೆಳೆ ಸಮೃದ್ಧಿಯಾದ ವರ್ಷ ಕಾಲುನಡಿಗೆಯಲ್ಲಿ ಹಂಪಿಗೆ ಹೋಗಿ ಪೂಜೆ ಸಲ್ಲಿಸುವ ಪದ್ಧತಿಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ.

ಆನೆಗೊಂದಿಯಲ್ಲಿರುವ ವಿಜಯನಗರದ ರಾಜ ಪರಂಪರೆಯವರಿಗೆ ಕಾಣಿಕೆ ಒಪ್ಪಿಸಿ, ಅವರಿಂದ ಬಹುಮಾನವನ್ನು ಪಡೆದು ಹಿಂದಿರುಗುತ್ತಾರೆ. ಶೌರ್ಯ ಪ್ರದರ್ಶನದ ಪ್ರತೀಕವಾದ ಮಣೇವು ಆಡುವುದು, ಪಂಜಿನ ಕವಾಯಿತು ಮಾಡುವುದು, ದೇವರ ಎತ್ತುಗಳನ್ನು ಪೂಜಿಸುವುದು ಆಚರಣೆಯ ಭಾಗಗಳಾಗಿವೆ. ಕಾಮಲಾಪುರದ ಬೇಡನಾಯಕರನ್ನು ಭೇಟಿ ಮಾಡುವುದು ಪರಸ್ಪರ ಸಮುದಾಯಗಳ ನಡುವಿನ ಸ್ನೇಹ, ಸೌಹಾರ್ದತೆಯನ್ನು ತಿಳಿಸುತ್ತದೆ. ವಾಹನ ಸೌಲಭ್ಯವಿರುವ ಈ ಆಧುನಿಕ ಯುಗದಲ್ಲಿ ಕಾಲ್ನಡಿಗೆಯಲ್ಲಿಯೇ ಯಾತ್ರೆ ಮುಗಿಸುತ್ತಾರೆ. ಇದು ಬುಡಕಟ್ಟು ಸಮುದಾಯದ ಆಚರಣೆಗಳಲ್ಲಿಯ ಪ್ರಬಲ ನಂಬಿಕೆ ಹಾಗೂ ಸಂಪ್ರದಾಯ ನಿಷ್ಠೆಗಳ ಸೂಚಕವಾಗಿದೆ.

೩.೨.೩. ತೆಪ್ಪೋತ್ಸವ

ಜಲಕ್ಕೂ ಜೀವಕ್ಕೂ ಅವಿನಾಭಾವ ಸಂಬಂಧವಿದೆ. ವಿಜ್ಞಾನದ ಪ್ರಕಾರ ಜಲದಿಂದಲೇ ಜೀವೋತ್ಪತ್ತಿ. ಇಡೀ ಜಂಗಮ ಜಗತ್ತಿನ ಜೀವನಾಡಿ ಜಲ. ಇದು ಜನಪದರಿಗೆ ಪೂಜನೀಯ. ಈ ಹಿನ್ನೆಲೆಯಲ್ಲಿ ಹಗರಿಬೊಮ್ಮನಹಳ್ಳಿ ತಾಲೂಕು ಹಂಪಸಾಗರದಲ್ಲಿ ಪ್ರಾಚೀನ ಜಲದೇವತೆಯಾದ ಗಂಗಮ್ಮನ ತೆಪ್ಪೋತ್ಸವವನ್ನು ಆಚರಿಸುತ್ತಾರೆ. ಇದು ತುಂಗಭದ್ರಾ ನದಿ ತೀರದಲ್ಲಿ ನಡೆಯುವ ಆಚರಣೆ. ಇಲ್ಲಿ ಜಲದೇವತೆ ಗ್ರಾಮದೈವವಾಗಿ ರೂಪಾಂತರಗೊಂಡಿದೆ. ಗೌರಿಹುಣ್ಣಿಮೆಯ ಮೊದಲ ಮಂಗಳವಾರ, ಬುಧವಾರ ಎರಡು ದಿನ ತೆಪ್ಪೋತ್ಸವ ಆಚರಿಸುತ್ತಾರೆ. ಸಾರು ಹಾಕುವುದರ ಮೂಲಕ ಹಬ್ಬದ ವಿಧಿವಿಧಾನಗಳು ಪ್ರಾರಂಭಗೊಳ್ಳುವ ಸಂಪ್ರದಾಯ ಬದ್ಧವಾದ ಆಚರಣೆ ಇದಾಗಿದೆ. 'ಭಂಡಾರ'[೧೯] ಹಂಚುವುದರ ಮೂಲಕ ಉತ್ಸವದಲ್ಲಿ ಭಾಗವಹಿಸುವವರನ್ನು ಆಹ್ವಾನಿಸುತ್ತಾರೆ. ಶಿಲಾರೂಪಿ, ತೆಪ್ಪರೂಪಿ, ಕುಂಭರೂಪಿಯಾಗಿ ಗಂಗಮ್ಮ ಇಲ್ಲಿ ಪೂಜಿಸಲ್ಪಡುವಳು. ಈ ರೀತಿಯಾಗಿ ಆಚರಣಾತ್ಮಕ ಸ್ವರೂಪಗಳು ತನ್ನ ಮೂಲ ಅಸ್ತಿತ್ವವನ್ನು ಉಳಿಸಿಕೊಂಡಿದ್ದು, ಅದಕ್ಕೆ ಅನುಗುಣವಾಗಿ ಬದಲಾವಣೆಗೊಂಡಿರುವುದನ್ನು ಕಾಣುತ್ತೇವೆ.

ಸಾಮಾನ್ಯವಾಗಿ ಜನಪದರ ಕಲ್ಪನೆಯಂತೆ ನಿರ್ದಿಷ್ಟ ಸ್ವರೂಪವಿರದ ನೈಸರ್ಗಿಕ ಕಲ್ಲುಗಳು ಇಲ್ಲಿ ದೈವಗಳಾಗಿವೆ. ಇಂಥ ಶಿಲಾರೂಪಿ ಗಂಗಮ್ಮನಿಗೆ ಅಂದು ಬೆಳ್ಳಿ ಮುಖವಾಡ, ಸೀರೆ, ಒಡವೆಗಳಿಂದ ಶೃಂಗರಿಸಿ ಹೋಳಿಗೆ ಎಡೆ ನೀಡುತ್ತಾರೆ. ಒಂದೊಂದು ಮನೆತನದವರೂ ಗುಂಪಾಗಿ ಎಡೆ ನೀಡುತ್ತಿರುವುದು ಊರೊಟ್ಟಿನ ಸಹಬಾಳ್ವೆಯನ್ನು ತಿಳಿಸುತ್ತದೆ. ಬರಿಗಾಲಲ್ಲಿ ದೀಡು ನಮಸ್ಕಾರ ಹಾಕುವುದು, ಕುರಿಮರಿಯನ್ನು ಪೂಜಿಸಿ ದೈವದರ್ಶನ ಮಾಡಿಸುವುದು, ಉಧೋ... ಉಧೋ... ಎನ್ನುವ ದೈವ ತಣಿಸುವ ಜಯಕಾರಗಳು ಹಿಂದಿನಿಂದ ನಡೆದುಕೊಂಡು ಬರುತ್ತಿರುವ ಬಲಿ ಆಚರಣೆಯ ಸಂಕೇತಗಳಾಗಿವೆ. ವಕ್ತೃಗಳ ಹೇಳಿಕೆಯ ಪ್ರಕಾರ ಹಿಂದೆ ಕೋಣಬಲಿ ಇತ್ತು. ಪ್ರಾಚೀನ ಜಲಸಂಸ್ಕೃತಿ ಪರಂಪರೆಯಲ್ಲಿ, ಆ ಸಮುದಾಯಗಳಲ್ಲಿ ಮಾತ್ರ ಉಗ್ರಬಲಿ ನೀಡಿಕೆ ಇದ್ದು, ಅದು ಇಂದು ಊರೊಟ್ಟಿನ ಎಲ್ಲಾ ಸಮುದಾಯಗಳ ಪಾಲ್ಗೊಳ್ಳುವಿಕೆಯಲ್ಲಿ ಬಲಿಯಿರದ ಅಹಿಂಸಾತ್ಮಕವಾದ ಆಚರಣೆಯಾಗಿ ಸ್ಥಿತ್ಯಂತರಗೊಂಡಿದೆ.

ಮರುದಿನ ಬಡಿಗೇರರು ಬಿದಿರಿನಿಂದ ಎಲೆಯಾಕಾರದ ಚಟ್ಟ ತಯಾರಿಸುತ್ತಾರೆ. ಜೀರಗಾರರು ತೆಪ್ಪದ ಚಟ್ಟಕ್ಕೆ "ಆಪು"[೧೭] ಹೊದಿಸಿ, ಸುತ್ತ ಕೆಂಪು ಬಟ್ಟೆಯನ್ನು ಸುತ್ತುತ್ತಾರೆ. ತೆಪ್ಪದ ಮುಂಭಾಗ ವೀಳ್ಯದ ಎಲೆ, ಅಡಿಕೆ, ಹೊಂಬಾಳೆಯಿಂದ ಶೃಂಗರಿಸಲ್ಪಡುತ್ತದೆ. ಈ ರೀತಿ ವೃತ್ತಿಮೂಲ ಕೌಶಲ್ಯಗಳಿಂದ ಕೆಲ ಸಮುದಾಯ ದವರು ವಿಶೇಷ ವ್ಯಕ್ತಿಗಳಾಗುತ್ತಾರೆ. ಆಪು, ಬಿದಿರು ಹಗುರಾದ ವಸ್ತುಗಳಾಗಿದ್ದು, ತೆಪ್ಪ ತೇಲುವಿಕೆಗೆ ಸಹಾಯಕ. ಕೆಂಪುಬಟ್ಟೆ ರಕ್ತವರ್ಣವಾಗಿದ್ದು ಅದು ದೈವೀಶಕ್ತಿಯ ಪ್ರತೀಕವೆಂದು ಹಿಂದಿನಿಂದಲೂ ದೇವಿಗೆ ಅರ್ಪಿಸುತ್ತಾ ಬಂದಿದ್ದಾರೆ. "ಕುಂಕುಮ, ಕೆಂಪು ದಾಸವಾಳ, ರಕ್ತವಸ್ತ್ರ, ರಕ್ತಫಲ ಮೊದಲಾದುವುಗಳು ದೇವಿಗೆ ಪ್ರಿಯವಾದವು ಎಂಬ ಕಲ್ಪನೆಯಿದೆ".[೧೮] ಇಂಥ ಆಶಯಗಳಿಂದಲೇ ದೇವಿಗೆ ಕುಂಕುಮಲೇಪಿತ ಕುಂಬಳಕಾಯಿ, ನಿಂಬೆಹಣ್ಣುಗಳನ್ನು ಹೊಡೆಯುತ್ತಾರೆ. ತೆಪ್ಪೋತ್ಸವದಲ್ಲಿ ಬಳಸಲ್ಪಡುವ ಹೂ, ವೀಳ್ಯೆ, ಹೊಂಬಾಳೆ, ಅಡಿಕೆ, ಫಲೋತ್ಪತ್ತಿಯ ಗೊಂಚಲುಗಳು. ಇವು ಸಮೃದ್ಧಿಯ ಆಶಯ ಸೂಚಕಗಳೂ ಹೌದು.

ಶೃಂಗರಿಸಿದ ತೆಪ್ಪವನ್ನು ಕರಿಗಂಬಳಿ ಗದ್ದುಗೆಯಲ್ಲಿ ಪೂರ್ವಾಭಿಮುಖವಾಗಿ ಪ್ರತಿಷ್ಠಾಪಿಸುತ್ತಾರೆ. ಜಲಸಂಬಂಧಿ ಆಚರಣೆಯಲ್ಲಿ ಕಂಬಳಿ ಮಳೆಯನ್ನು ಸಂಕೇತಿಸುತ್ತದೆ. "ಕಂಬಳಿ ಬೀಸಿದರೆ ಮಳೆಯಾಗುವುದೆಂಬ" ನಂಬಿಕೆಯ ಹಿನ್ನೆಲೆಯಲ್ಲಿ ಕಂಬಳಿ ಬಳಸಲ್ಪಟ್ಟಿರಬೇಕು. ಜನಪದರ ಆಚರಣೆಗಳಲ್ಲಿ ದಿಕ್ಕುಗಳು ದೈವತ್ವವನ್ನು ಪಡೆದಿವೆ. ಬೆಳಕಿನ ಪ್ರತೀಕವಾದ ಸೂರ್ಯ ಉದಯಿಸುವ ದಿಕ್ಕು ಪೂರ್ವ. ಈ ಹಿನ್ನೆಲೆಯಲ್ಲಿ ಜನಪದರ ಆಚರಣೆಗಳು ಸಾಮಾನ್ಯವಾಗಿ ಪೂರ್ವಾಭಿಮುಖವಾಗಿ ಪ್ರಾರಂಭಗೊಳ್ಳುತ್ತವೆ. ಇದು ರಾತ್ರಿ ನಡೆಯುವ ಆಚರಣೆಯಾಗಿದ್ದು, ರಾತ್ರಿಯ ನಂತರದಲ್ಲಿ ಬರುವ ಬೆಳಕಿನ ನಿರೀಕ್ಷೆ ಇಲ್ಲಿಯದಾಗಿದೆ.

ಮಂಗಳವಾದ್ಯ, ಕಳಸ, ದೀವಟಿಗೆಗಳೊಂದಿಗೆ ಅಂಬಿಗರ ಮನೆಯಿಂದ "ಸ್ಥಿರ ಮುತ್ತೈದೆಯನ್ನು"[೧೯] ಮೆರವಣಿಗೆಯಲ್ಲಿ ಕರೆತರುತ್ತಾರೆ. ಗಂಗಮ್ಮ ಅಂಬಿಗರ ಮನೆಯ ಮಗಳೆಂಬ ನಂಬಿಕೆಯಿದೆ. ಇದು ಜಲಸಂಸ್ಕೃತಿಗೂ, ಅಂಬಿಗರ ಸಮುದಾಯಕ್ಕೂ ಇರುವ ಸಂಬಂಧ ತಿಳಿಸುತ್ತದೆ. ಗಂಗೆಯ ವಾರಸುದಾರರಾದ ಇವರು ಉತ್ಸವದಲ್ಲಿ ದೈವವನ್ನು ಹೊತ್ತು ಮೆರೆಯುವ ಹಕ್ಕು ಪಡೆದವರಾಗಿದ್ದಾರೆ. ಸ್ಥಿರ ಮುತ್ತೈದೆ ಮಾತ್ರ ದೊಡ್ಡನತ್ತು ಧರಿಸಿರುತ್ತಾಳೆ. ಇದು ಇತರೆ ಮಹಿಳೆಯರಿಗಿಂತ ಈಕೆ ಭಿನ್ನವೆಂಬುದನ್ನು ಸೂಚಿಸುತ್ತದೆ.

ಉತ್ಸವಮೂರ್ತಿಯೊಂದಿಗೆ ದೈವರೂಪಿಯಾಗಿ ಪೂಜಿಸಲ್ಪಡುತ್ತಾಳೆ. ತೆಪ್ಪದಲ್ಲಿ ಬೆಳ್ಳಿ ಮುಖವರ್ಣಿಕೆಯ ಗಂಗಮ್ಮನನ್ನು ಪ್ರತಿಷ್ಠಾಪಿಸಿ, ವಿಶೇಷವಾಗಿ "ಸುರುಖರ್ಜಿ ಕಾಯಿ"[೨೦] ನೈವೇದ್ಯ ಮಾಡುತ್ತಾರೆ. ಕರಿಗಂಬಳಿ ಗದ್ದುಗೆ ಮಾಡಿ, ಅಕ್ಕಿಯಿಂದ ಕಟ್ಟೆ ನಿರ್ಮಿಸಿ, ಧಾನ್ಯ ರಾಶಿ ಮಾಡುತ್ತಾರೆ. ಅಕ್ಕಿ ಹೊಳೆಸಾಲಿನ ಭಾಗದ ಪ್ರಮುಖ ಬೆಳೆ. ಸಮೃದ್ಧಿಯ ಫಸಲು ಪಡೆಯುವ ಆಶಯದಿಂದ ಅಕ್ಕಿಯ ರಾಶಿಯು ದೈವಕ್ಕೆ ಅರ್ಪಿತವಾಗುತ್ತದೆ. ವಿಶೇಷವಾಗಿ ತಯಾರಿಸಿದ "ಗಂಡಾರತಿಯನ್ನು"[೨೧] ಉತ್ಸವಮೂರ್ತಿಗೆ ಬೆಳಗುತ್ತಾರೆ. ಇದು ಉತ್ಸವ ಮುಗಿಯುವವರೆಗೂ ಜ್ಯೋತಿಯ ಪ್ರತೀಕವಾಗಿ ದೈವದ ಮುಂದೆ ಇರುತ್ತದೆ. ಮಾರ್ಗ ಮಧ್ಯದಲ್ಲಿ ಮಳೆ, ಗಾಳಿ, ತಗ್ಗು, ದಿನ್ನೆಗಳಿಂದ ಸಂಭವಿಸಬಹುದಾದ ಅನಾಹುತಗಳಿಂದ ಜ್ಯೋತಿರೂಪಿಯಾಗಿ ಗಂಗಮ್ಮ ತಮ್ಮನ್ನು ರಕ್ಷಿಸುವಳೆಂಬ ನಂಬಿಕೆಯಿದೆ. ಆಚರಣೆಗಳು ಇಂಥ ಪ್ರಬಲ ನಂಬಿಕೆಗಳಿಂದ ಪ್ರೇರಣೆ ಪಡೆದಿರುತ್ತವೆ. ಶೃಂಗಾರಗೊಂಡ ತೆಪ್ಪರೂಪಿಣಿ ಗಂಗಮ್ಮನನ್ನು ಸ್ಥಿರ ಮುತ್ತೈದೆಯ ತಲೆಯ ಮೇಲೆ ಹೊರಿಸುತ್ತಿದ್ದಂತೆ, ವಾದ್ಯಗಳ ಮೊಳಗುವಿಕೆ, ಊಧೋ... ಉಧೋ... ಜಯಕಾರ, ಜನರ ಕೇಕೆ, ಸಿಳ್ಳು, ಪಟಾಕಿ ಶಬ್ದ, ಹೆಗಲ ಮೇಲಿನ ವಲ್ಲಿಯನ್ನು ಆಗಸದತ್ತ ತೂರಿ ಕುಣಿಯುವುದು ಇವೆಲ್ಲವೂ ಮಳೆ ತರಿಸುವ ಮಾಂತ್ರಿಕತೆಯ ಸಂಕೇತಗಳಾಗಿವೆ. ಹೀಗೆ ಏಕಕಾಲಕ್ಕೆ ಧ್ವನಿ ತರಂಗಗಳು ವಾತಾವರಣವನ್ನು ತುಂಬಿಕೊಳ್ಳುವುದರಿಂದ, ವಾತಾವರಣ ನಿರ್ವಾತವಾಗಿ, ಚಲಿಸುವ ಗಾಳಿಯ ಕೊರತೆಯಿಂದಾಗಿ, ಮೋಡಗಳು ತಡೆ ಹಿಡಿದು, ಅಲ್ಪಮಟ್ಟಿನ ತಂಪು ತಗುಲಿದಾಗ ಮಳೆ ಸುರಿಯುವುದು ಖಂಡಿತವೆಂಬುದು ವೈಜ್ಞಾನಿಕ ಸತ್ಯವಾಗಿದೆ. ಪ್ರತಿ ಮನೆಯವರು ದೈವದ ಪಾದಕ್ಕೆ ನೀರು ಹಾಕಿ, ಉಡಿ ತುಂಬುವುದು ವಾತಾವರಣ ತಂಪಾಗಿಸುವ ಆಶಯವನ್ನು ಹೊಂದಿದೆ. ವಕ್ತೃಗಳ ಹೇಳಿಕೆಯ ಪ್ರಕಾರ ಮಳೆಗಾಲದ ಕೊನೆಯ ಆಚರಣೆಯಾದ್ದರಿಂದ, ಕೆಲವೊಮ್ಮೆ ಉತ್ಸವ ಹೊರಟಾಗ ಮಳೆ ಬರುವುದುಂಟು. ಇದನ್ನು ಕಂಡ ಜನರು

ಹರಕೆಯ ಮಕ್ಕಳು |
ಉರುಳುತಾವ ದಾರೀಗೆ | ನೀರ ಉಗುಳಿ |
ನೆಲತಂಪಾ ಮಾಡ್ಯಾಳ ತಾಯಿ |

ಎಂದು ಹಾಡುತ್ತಾರೆ

ಮಳೆಯಲ್ಲೇ ಹರಕೆ ಹೊತ್ತ ಭಕ್ತರು ಪೂಜಿಸುವ ವಿಧಿ ವಿಧಾನಗಳು, ದೈವಾರಾಧನೆಯ ಹಿಂದಿನ, ನಂಬಿಕೆ ಹಾಗೂ ಭಕ್ತಿಯ ಪರಾಕಾಷ್ಠೆಯಾಗಿದೆ. ಕುಂಬಳಕಾಯಿ, ನಿಂಬೆಹಣ್ಣನ್ನು ದೇವಿಗೆ ನೀವಾಳಿಸಿ ಕುರಿಮರಿ ಬಲಿ ನೀಡುತ್ತಾರೆ. ದಾರಿಯಲ್ಲಿ ಅಡ್ಡ ಬಂದ ಯಾವುದೇ ಜೀವಿಗಳು ದೇವಿಯ ಉಗ್ರತೆಗೆ ಬಲಿಯಾಗದಂತೆ ತಡೆಯುವ ಹಾಗೂ ಪ್ರಕೃತಿಯನ್ನು ಕೈವಶ ಮಾಡಿಕೊಳ್ಳುವ ತಂತ್ರಗಾರಿಕೆ ಇದಾಗಿರಬೇಕು. ಬಲಿ ಅನ್ನವನ್ನು ಎಡೆ ಮಾಡಿ ಹುಲುಸೆಂದು ಜನರ ಮೇಲೆ ಉಗ್ಗುತ್ತಾರೆ. ಸ್ಥಿರ ಮುತ್ತೈದೆ ಉಡಿ ತುಂಬಿಕೊಂಡು ತೆಪ್ಪ ಹೊರಲು ಸಿದ್ಧಳಾಗುತ್ತಾಳೆ. "ಈ ಸಂದರ್ಭದಲ್ಲಿ ಇವರಿಗೊಂದು ಬಗೆಯ ದೇವರನ್ನು ಹೊಕ್ಕಿರುವ ಗಾಂಭೀರ್ಯತೆ ಮತ್ತು ದೇವರಾಗುವಿಕೆಯ ಮಾನಸಿಕ ಸಿದ್ಧತೆ ಬಂದಿರುತ್ತದೆ".[೨೨] ದೈವ ಆಹ್ವಾನಿತಳಾದ ಈಕೆ ಕಣ್ಣು ಮುಚ್ಚಿ ಜೋಲಿ ಹೊಡೆಯುತ್ತಾ, ಇಚ್ಛಿಸಿದವರಿಗೆ ಉಡಿ ತುಂಬುತ್ತಾ ಎಲ್ಲರೊಂದಿಗೆ ಮುಂದೆ

ಸಾಗುತ್ತಿರುತ್ತಾಳೆ. ದೈವದ ಅಪೇಕ್ಷೆಯಂತೆ ಜನ ದೈವವನ್ನು ಹಿಂಬಾಲಿಸುತ್ತಾರೆ. ಇಲ್ಲಿ ದೈವಕ್ಕೆ ಉಡಿ ತುಂಬುವುದು, ತಾವು ತುಂಬಿಸಿಕೊಳ್ಳುವುದು, ದೈವವನ್ನು ಮುಟ್ಟುವುದು, ಈ ಕ್ರಿಯೆಗಳೆಲ್ಲಾ ದೇವರೊಡನೆ ಒಂದು ಬಗೆಯ ಸಮ್ಮಿಲನವನ್ನುಂಟುಮಾಡಿಕೊಳ್ಳಲು ಇರುವ ಸಾಧನಗಳಾಗಿ ಕಂಡುಬರುತ್ತವೆ. ದೈವದೊಂದಿಗೆ ಜನಪದರ ಕೌಟುಂಬಿಕ ಸಂಬಂಧ ಜನಪದ ಹಾಡಾಗಿರುವುದನ್ನು ನಾವು ಕಾಣುತ್ತೇವೆ.

ಬಾಲರಿಲ್ಲದ ಬಾಲೇರು
ಬರಿ ಉಡಿ ಒಡ್ಯಾರು । ಮಕ್ಕಳ
ಬೀಜದ ಹಣ್ಣು ಉಡಿ ತುಂಬಾ ಗಂಗಾ ।
ತೂರಾಡಿ ಓಡುವೆ ಸಿಟ್ಟಾಗ ಬ್ಯಾಡ ।
ಬಡವರು ತೌರವರು ನಿಲ್ಲುಗಂಗಾ ।

ಇಂಥ ಬೇಡಿಕೆಗಳಿಗೆ ಮನಸೋತು ಗಂಗಮ್ಮ ಒಮ್ಮೊಮ್ಮೆ ಉಡಿ ತುಂಬುವುದುಂಟು. ದೈವ ಉಡಿ ತುಂಬದಿದ್ದಾಗ, ತಮ್ಮಲ್ಲೇನೋ ತಪ್ಪಾಗಿದೆಯೆಂದು ಏರುಧ್ವನಿಯಲ್ಲಿ ಕ್ಷಮೆ ಕೇಳುವುದುಂಟು. ಇಂಥ ವರ್ತನೆಗಳು ದೈವ ಭಕ್ತರೊಡನೆ ಹೊಂದಿದ ಸಾಮೀಪ್ಯತೆ ತಿಳಿಸುತ್ತದೆ. ದೇವರಾಗುವಿಕೆಯಲ್ಲಿ ಮಾನವರ ವರ್ತನೆಗಳು ದೈವಕ್ಕೆ ಪೂರಕವಾಗಿರುತ್ತವೆ. ಇಲ್ಲಿ ದೈವ ಮಾನವೀಕರಣಕ್ಕೊಳಪಟ್ಟ ಸ್ಥಿತಿಯಲ್ಲಿರುತ್ತದೆ. ಉಡಿ ತುಂಬುವುದು ಫಲವಂತಿಕೆಯ ಸಂಕೇತ. ಜನಪದರ ಬದುಕಿನ ಜೀವನಾಡಿಯಾದ ಜಲ ಸಮೃದ್ಧಿಯಾದಾಗ ಮಾತ್ರ ಫಲವಂತಿಕೆ ಸಾಧ್ಯ. ಎಲ್ಲ ಜೀವರಾಶಿಗಳು ನೀರಿನ ಗರ್ಭದಿಂದಲೇ ಸೃಷ್ಟಿಯಾಗಿವೆ ಎಂಬುದನ್ನು ಸಂಶೋಧನೆಗಳು ದೃಢಪಡಿಸಿವೆ.

ಉತ್ಸವದ ನಂತರ ಜೋಳದ ದಂಟಿನಿಂದ ತಯಾರಿಸಿದ ದೋಣಿಯಾಕಾರದ ತೆಪ್ಪದಲ್ಲಿ ಗಂಡಾರತಿಯನ್ನು ಜ್ಯೋತಿರೂಪಿಣಿ ಗಂಗಮ್ಮನೆಂದು ತೇಲಿ ಬಿಡುತ್ತಾರೆ. ಇದು ಜಲ ಹಾಗೂ ನೆಲ ತತ್ವದ ಸಮನ್ವಯತೆಯಾಗಿದೆ. ಜ್ಯೋತಿರೂಪಿಣಿಯಾದ ಗಂಗಮ್ಮನನ್ನು ತನ್ನ ಮೂಲನೆಲೆಗೆ ಕಳುಹಿಸಿಕೊಡುವುದು ಮಾನವ ಮತ್ತು ಪ್ರಕೃತಿ ನಡುವಿನ ಭಾವನಾತ್ಮಕ ಸಂಬಂಧವನ್ನು ತಿಳಿಸುತ್ತದೆ. ನದಿ ನೀರು ತುಂಬಿಸಿದ ಕುಂಭ ಪೂಜಿಸಿ, ಗಂಗಮ್ಮನೆಂದು ಮರುಪ್ರತಿಷ್ಠಾಪಿಸುವುದರೊಂದಿಗೆ ಆಚರಣೆ ಮುಕ್ತಾಯಗೊಳ್ಳುವುದು. ಜನಪದರ ಬದುಕಿನಲ್ಲಿ ಕಂಡುಬರುವ ಎಲ್ಲ ಕೃಷಿ ಹಾಗೂ ಗ್ರಾಮದೇವತೆಗಳು ಸ್ತ್ರೀರೂಪಗಳು ಮತ್ತು ಜಲ ಸ್ವರೂಪದವುಗಳಾಗಿವೆ. "ಜಗತ್ತಿನ ಎಲ್ಲಾ ನದಿ ಸಂಸ್ಕೃತಿಗಳು ಆರಂಭ ಕಾಲದಲ್ಲಿ ಮಾತೃಪ್ರಧಾನ ಸಮಾಜಗಳೇ ಆಗಿದ್ದವು ಎಂಬುದು ಕೂಡ ನೀರನ್ನು ಸ್ತ್ರೀಯ ಸಾಂಕೇತಿಕ ಪ್ರತಿನಿಧಿಯಾಗಿ ಗ್ರಹಿಸಲು ಬಲವಾದ ಕಾರಣವಾಗಿದೆ".[೨೩] ಇಂಥ ಕಾರಣಗಳು ಪರಿಸರ ಪ್ರಜ್ಞೆಯ ಜೊತೆ ಜನಪದರ ಆಚರಣೆಗಳಲ್ಲಿ ಪ್ರಾಕೃತಿಕ ಸಂಬಂಧವನ್ನು ಬಿಂಬಿಸುತ್ತವೆ.

ಜೀವ ಸೃಷ್ಟಿಗೆ, ಪೋಷಣೆಗೆ ಪ್ರಾಣಾಧಾರವಾದ ನೀರು ಜನಪದರ ಆಚರಣೆಗಳಲ್ಲಿ ದೈವತ್ವಕ್ಕೇರಿದೆ. ಭರವಸೆ ಮೂಡಿಸುವ, ಆತ್ಮವಿಶ್ವಾಸವನ್ನು ಹೆಚ್ಚಿಸುವ, ಸಾಮೂಹಿಕ ಹಿತಾಸಕ್ತಿಯ ಬೇಡಿಕೆಗಳು ಈ ಆಚರಣೆಯ ಮೂಲಕ ಅನುಷ್ಠಾನ ರೂಪದಲ್ಲಿ ಪ್ರಕಟವಾಗಿರುವುದು ಕಂಡುಬರುತ್ತದೆ. ಬಳ್ಳಾರಿ ಜಿಲ್ಲೆಯ ತುಂಗಭದ್ರಾ ನದಿ ತೀರದ ಎಡ ಬಲ ದಂಡೆಗಳಲ್ಲಿ ಈ ರೀತಿಯ ಹಲವಾರು ವೈವಿಧ್ಯಮಯ ಜಲ ಸಂಬಂಧಿ ಆಚರಣೆಗಳು ಪ್ರಚಲಿತದಲ್ಲಿವೆ.

೩.೨.೪. ಹೋಳಿ ಹಬ್ಬ (ಕಾಮನ ಹಬ್ಬ)

(ಎಲ್ಲ ಸಮುದಾಯದವರಿಂದ ಆಚರಿಸಲ್ಪಡುವ ಹಬ್ಬ ಹೋಳಿ. ಈ ಹಬ್ಬದಲ್ಲಿ ಪುರುಷರ ಭಾಗವಹಿಸುವಿಕೆ ಪ್ರಮುಖವಾಗಿದೆ.) ಪುರುಷರ ಉಲ್ಲಾಸ, ಸಂತೋಷ, ಸೃಜನಶೀಲ ಆಕಾಂಕ್ಷೆಗಳ ಅಭಿವ್ಯಕ್ತತೆ ಆಚರಣೆಯ ಎಲ್ಲಾ ಹಂತದಲ್ಲೂ ಕಾಣಲಾಗುತ್ತದೆ. (ಆದಿಮ ಸಮಾಜಗಳ ಕೃಷಿ ಚಟುವಟಿಕೆ ಮತ್ತು ಲೈಂಗಿಕ ಚಟುವಟಿಕೆಗಳಿಗೆ ಸಂಬಂಧಪಟ್ಟಿರುವ, ಫಲ ಸಮೃದ್ಧಿಯ ಸಂಕೇತಗಳಾಗಿವೆ) ಜನಪದ ಕಾವ್ಯಗಳಲ್ಲಿ ಹೋಳಿ ಹಬ್ಬದ ಪ್ರಸ್ತಾಪ ಹೀಗಿದೆ - ದಕ್ಷ ಬ್ರಹ್ಮನ ಮಗಳಾದ ದಾಕ್ಷಾಯಿಣಿ ಗಂಡನಿಗೆ ಮನ್ನಣೆ ನೀಡಲಿಲ್ಲವೆಂದು ತಂದೆ ಮಾಡುವ ಮಹಾಯಜ್ಞದಲ್ಲಿ ಗಂಡನಿಗೆ ಮಾಡಿದ ಅಪನಿಂದೆಯನ್ನು ಸಹಿಸದೆ ಅಗ್ನಿಗೆ ಆಹುತಿಯಾಗುವಳು. ನಂತರ ಪಾರ್ವತಿಯಾಗಿ ಹುಟ್ಟಿ ಬಂದಾಗ, ಶಿವ ತಪಸ್ಸು ಮಾಡುತ್ತಿರುವುದು ಕಂಡುಬರುತ್ತದೆ. ಕಾಮದ ಉನ್ಮತ್ತ ಭಾವಗಳನ್ನು ಶಿವನಲ್ಲಿ ಜಾಗೃತಗೊಳಿಸುವುದು ಪಾರ್ವತಿ ಮಾಡುವ ಪ್ರಯತ್ನವಾಗಿದೆ. ರತಿ, ಮನ್ಮಥರ ಸಹಾಯದಿಂದ ಶಿವನ ತಪಸ್ಸನ್ನು ಭಂಗಗೊಳಿಸುವಳು. ತಪೋಭಂಗವಾದ್ದರಿಂದ ಶಿವನ ಉರಿಗಣ್ಣಿಗೆ ಕಾಮನು ಸುಟ್ಟು ಭಸ್ಮವಾಗುವನು. ಪಾರ್ವತಿ ಘೋರ ತಪವನ್ನಾಚರಿಸಿ ಶಿವನ ಒಲುಮೆ ಪಡೆದು ಕಾಮನಿಗೆ ಮರುಜನ್ಮ ಕೊಡಿಸುವಳು. ಕಾಮನ ಜೀವದಾನದಿಂದ ರತಿಗೆ ಪುನಃ ಮಾಂಗಲ್ಯಭಾಗ್ಯ ಲಭಿಸುವುದು. ಹೀಗೆ ಶಿವ ಪಾರ್ವತಿಯರ ಕೂಡುವಿಕೆಯಿಂದ ಷಣ್ಮುಖನ ಜನನವಾಗಿ ತಾರಕಾಸುರನ ಸಂಹಾರವಾಗುವುದು. ಇದು ಕಾಮದಹನದ ಹಿನ್ನೆಲೆಯ ಪೌರಾಣಿಕ ಕಥೆ. ಕಾಮನ ವಿಚಾರವಾಗಿ ಋಗ್ವೇದ, ಅಥರ್ವಣ ವೇದ ಮತ್ತು ಸ್ಕಂದ ಪುರಾಣಗಳಲ್ಲಿಯೂ ಉಲ್ಲೇಖವಿದೆ. ಹರಿಹರನ ಗಿರಿಜಾ ಕಲ್ಯಾಣದಲ್ಲಿ ರತಿ ಪ್ರಲಾಪಕ್ಕೆ ಹೆಚ್ಚು ಒತ್ತು ನೀಡಲಾಗಿದೆ. ಹರಿಹರನು ಕಾಮದಹನದ ಪ್ರಸಂಗ ಹಂಪಿಯಲ್ಲಿ ಜರುಗಿತೆಂದು ಪ್ರಸ್ತಾಪಿಸಿದ್ದಾನೆ. ಈಗಲೂ ಮನ್ಮಥಕೊಂಡ ಎಂಬ ಸ್ಥಳ ಶಿವನು ಮನ್ಮಥನನ್ನು ಹಣೆಗಣ್ಣಿನಿಂದ ಭಸ್ಮಗೊಳಿಸಿದ ನಂತರ ಕೊಂಡರೂಪ ಆಯಿತೆಂಬ ಪ್ರತೀತಿ ಇದೆ.

ಒಮ್ಮೆ ಶಿವಪಾರ್ವತಿಯರು ಸಂಭಾಷಣೆಯಲ್ಲಿದ್ದಾಗ ಪಾರ್ವತಿಯನ್ನು ತುಂಬಾ ಚೆಲುವ ಯಾರೆಂದು ಶಿವ ಕೇಳುವನು. ತುಂಬಾ ಚೆಲುವಾದವನು ಕಾಮನೆಂದು ಪಾರ್ವತಿ ಉತ್ತರಿಸುವಳು. ತನ್ನ ಚೆಲುವಿಗಿಂತ ಪರಪುರುಷ ಚೆಲುವನೆಂದು ಹೇಳಿದ್ದಕ್ಕೆ ಶಿವ ಮನ್ಮಥನನ್ನು ಉರಿಗಣ್ಣಿನಿಂದ ಸುಡುತ್ತಾನೆ.

ಪಾರೋತಿ ಮಾದೇವ, ಏರಿ ಸಭೆದಾಗಿರಲು |
ಪಾರೋತಿ ಹೇಳ ಚಲುವ್ಯಾರ | ಕೇಳುದಕ
ತೀರಾ ಚೆಲುವಾನ ಕಾಮಣ್ಣ |
ಸಿಟ್ಟಿಗೇಳುತ ಶಿವನು, ಬಿಟ್ಟಾನೊ ಉರಿಗಣ್ಣ
ಸುಟ್ಟು ಬೂದ್ಯಾದ ಕಾಮಣ್ಣ | ರತಿದೇವಿ
ಹೊಟ್ಟೆ ಬಡಕೊಂಡು ಅಳುತಾಳೋ |

ಈ ರೀತಿಯ ವಿವರಣೆ ಜನಪದ ಕಾವ್ಯಗಳಲ್ಲಿದೆ.

(ಈ ಆಚರಣೆಯು ವಸಂತನ ವೈಭವದ ಆಗಮನದ ಮುನ್ಸೂಚನೆಯಾಗಿ ಪಾಲ್ಗುಣಮಾಸದಲ್ಲಿ ಆಚರಿಸಲ್ಪಡುತ್ತದೆ. ಈ ಸಮಯವು ಬಿಸಿಲ ಉಷ್ಣತೆಯ ಜೊತೆ ನಿಸರ್ಗದ ನವಚೈತನ್ಯ ಉಕ್ಕಿ ಬರುವಂಥದ್ದು.

ಇಂಥ ಸಮಯದಲ್ಲಿ ಜೀವಿಗಳಲ್ಲಿ ಕಾಮಕ್ರೀಡೆ ಸ್ವಾಭಾವಿಕವಾಗಿ ಹೆಚ್ಚಾಗುತ್ತದೆಂಬುದು ಜನಪದರ ಅನುಭವದ ಮಾತಾಗಿದೆ.)

ಶಿವನನ್ನು ಒಲಿಸಲು ಪಾರ್ವತಿ ಮಾಡಿದ ಯೌವನ ಪ್ರದರ್ಶನ, ಶಿವನ ಉರಿಗಣ್ಣಿಗೆ ಕಾಮ ಬಲಿಯಾದುದು, ನಂತರ ಪಾರ್ವತಿ ಉಗ್ರತಪಸ್ಸು ಮಾಡಿ ಮನದ ಕಾಮವನ್ನು ಸುಟ್ಟು ಅಂತರಂಗ ಬಹಿರಂಗವಾಗಿ ಶಿವನನ್ನೊಲಿಸುವ ಪರಿ, ಇವೆಲ್ಲವೂ ಸಹ ಆಸೆ, ಆಮಿಷ, ಯೌವನ ಸಂಪತ್ತುಗಳನ್ನು ಅಲ್ಲಗಳೆಯುತ್ತಾ ಕಾಮ ಸುಟ್ಟು ಪ್ರೇಮವಾಗಿ ಬೆಳೆಯುವ ಸಂದೇಶ ನೀಡುವಂಥವುಗಳು."ಕಾಮದಹನದ ಹಬ್ಬ ಶೈವರ ಹಬ್ಬ, ಶಿವನು ಕಾಮನನ್ನು ಸುಟ್ಟ ಸಂಕೇತವಾಗಿ ಈ ಹಬ್ಬ ಆಚರಿಸಲು ಮೊದಲು ಅವರು ಪ್ರಾರಂಭಿಸಿರಬೇಕು. ಅನಂತರ ಮತೀಯರು ಇದರಲ್ಲಿ ಪಾಲ್ಗೊಂಡಿರಬೇಕು".[೨೪] ಒಟ್ಟಿನಲ್ಲಿ ಇದೊಂದು ಜನಪದರ ಆಚರಣೆಯಾಗಿ ಭಿನ್ನ ನೆಲೆಗಳಲ್ಲಿ ಆಚರಿಸಲ್ಪಡುತ್ತದೆ.

ಬಳ್ಳಾರಿ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಕಾಮನ ಸುಂದರಮೂರ್ತಿಯನ್ನು ಊರಿನ ಮಧ್ಯದಲ್ಲಿ ಪ್ರತಿಷ್ಠಾಪಿಸುತ್ತಾರೆ. ಅದನ್ನು ಕಟ್ಟಿಗೆ ಹಂದರ ಹಾಕಿ, ತಳಿರುತೋರಣಗಳಿಂದ ಶೃಂಗರಿಸುತ್ತಾರೆ. ಕೂಡ್ಲಿಗಿಯಲ್ಲಿ ಸಾರ್ವಜನಿಕ ಸ್ಥಳವಾದ ಆಜಾದ್ ರಂಗಮಂದಿರದಲ್ಲಿ ಕಾಮದೇವ ಪ್ರತಿಷ್ಠಾಪನೆಗೊಳ್ಳುತ್ತಾನೆ. ಹಡಗಲಿ, ಕಲ್ಲಳ್ಳಿ ಮುಂತಾದ ಕಡೆಗಳಲ್ಲಿ ಸಂಕ್ಷಿಪ್ತ ಆಚರಣೆಯಿದೆ. ಅಂದು ರಾತ್ರಿ ಪುರುಷನೊಬ್ಬ ಸೀರೆಯುಟ್ಟು, ಸ್ತ್ರೀ ರೂಪದಲ್ಲಿ ವೇಷ ಹಾಕಿಕೊಂಡು ಲಭೋ... ಲಭೋ.. ಎಂದು ಅಳುತ್ತಿರುತ್ತಾನೆ. ನಾಲ್ವರು ಕಾಮನ ಶವವನ್ನು ಹೊತ್ತು ಹೊಯ್ಕೊಳ್ಳುತ್ತಾ ಊರ ತುಂಬ ಶವಯಾತ್ರೆ ಹೊರಡುತ್ತಾರೆ. ರಾಮಸಾಗರದಲ್ಲಿ ಸ್ವಲ್ಪ ವ್ಯತ್ಯಾಸಗಳೊಂದಿಗೆ ಮೂರು ದಿನದ ಆಚರಣೆಯಿದೆ. ಸಿರುಗುಪ್ಪ ತಾಲೂಕು ರಾರಾವಿ ಗ್ರಾಮದಲ್ಲಿ ಐದು ದಿನ ರತಿ ಮನ್ಮಥರ ಮೂರ್ತಿಯನ್ನು ಪೂಜಿಸಿ ಹೋಳಿಗೆ ಎಡೆ ನೀಡುತ್ತಾರೆ. ಗ್ರಾಮದ ಯುವಕರು, ಜೋಗತಿ, ಕಾಡುಸಿದ್ದರು, ಹಗಲುವೇಷದವರು, ಲಂಬಾಣಿಗರು ರತಿ ಮನ್ಮಥರ ವೇಷ ಧರಿಸಿದವರೊಂದಿಗೆ ಕುಣಿಯುವುದು ಮನೋರಂಜನಾತ್ಮಕವಾಗಿರುತ್ತದೆ. ಅಲ್ಲದೆ ಮುಂದಿನ ವರ್ಷದ ಮಳೆ-ಬೆಳೆ ಸಮೃದ್ಧಿ ಯಾಗಲೆಂದು ಮಣ್ಣಿನ ಲಿಂಗ ತಯಾರಿಸಿ ಪೂಜಿಸುತ್ತಾರೆ. ಕಾಮದಹನದ ನಂತರ ಲಿಂಗವನ್ನು ಮಣ್ಣಿನಲ್ಲಿ ಮುಚ್ಚಿ ಹಾಕುವ ಪದ್ಧತಿ ಇದೆ. ಇಲ್ಲಿ ಲಿಂಗವು ಜನನಾಂಗದ ಸಂಕೇತ. ಭೂಮಿ ಕ್ಷೇತ್ರವಾದರೆ ಲಿಂಗ ಬೀಜ ರೂಪಿಯಾಗಿ ಫಲವಂತಿಕೆಯ ಸೂಚಕ.

ಬಂಡಿಯ ಮೇಲೆ ಕಾಮರತಿಯರನ್ನು ಕೂಡಿಸಿ, ಅಲಂಕರಿಸಿ ಮೆರವಣಿಗೆ ಮಾಡುವುದು ಎಲ್ಲಾ ಭಾಗಗಳಲ್ಲೂ ಇದೆ. ಹಲಗೆಬಡಿತ, ಸಾಮೂಹಿಕ ಕುಣಿತ, ಸಿಳ್ಳು, ಕೇಕೆ ಇದನ್ನೆಲ್ಲಾ ಸೂಕ್ಷ್ಮವಾಗಿ ಅವಲೋಕಿಸಿದಾಗ ಕಾಮದೇವ ಸೈನ್ಯ ಸಮೇತ ಶಿವನ ಮೇಲೆ ದಂಡೆತ್ತಿ ಬಂದ ದೃಶ್ಯವಾಗಿದೆ. ಕಟ್ಟಿಗೆ ಕುಳ್ಳು ಕದಿಯುವುದು, ಬೈಸಿಕೊಳ್ಳುವುದು, ಶಿವನಿಗೆ ಕಾಮಕೀಟಲೆ ಮಾಡುವುದನ್ನು ತಿಳಿಸುವುದಾಗಿದೆ. ಮೆರವಣಿಗೆ ಮುಗಿದ ನಂತರ ಮಧ್ಯರಾತ್ರಿ ಬೆಳ್ಳಿ ಮೂಡುವ ಸಮಯದಲ್ಲಿ ಹಸಿ ಬಿದಿರಿನ ಕಂಬ ನೆಟ್ಟು, ಅದರ ತುದಿಗೆ ಬಾಸಿಂಗ ಕಟ್ಟಿ, ಅದರ ಮೇಲೆ ಕಾಮನನ್ನಿಟ್ಟು ಪೂಜಿಸುತ್ತಾರೆ. ಇದೆಲ್ಲಾ ಕಾಮನ ಜೀವನದಲ್ಲಿ ನಡೆದ ಮದುವೆ ಮತ್ತು ಮಸಣದ ಸನ್ನಿವೇಶಗಳಾಗಿ ಏಕಕಾಲದಲ್ಲಿ ಅಭಿವ್ಯಕ್ತಗೊಳ್ಳುತ್ತವೆ.

ಕಾಮ ಸುಡುವಾಗಲೇ ರತಿಯ ಮಾಂಗಲ್ಯ ಭದ್ರವಾಗುತ್ತದೆ. ಅದರ ಪ್ರತೀಕವಾಗಿ ಚಿತೆಯ ಮಧ್ಯದ ಕಂಬ ಹಂದರಗಂಬವಾಗಿ, ಅದಕ್ಕೆ ಕಟ್ಟಿದ ಬಾಸಿಂಗ ಕಾಮನ ಮದುವೆಯನ್ನು ತಿಳಿಸುತ್ತದೆ. ಬಲಿಯಾದ

ಕಾಮನ ಸಾವಿನಶಕ್ತಿ ಜೀವಶಕ್ತಿಯೊಂದಿಗೆ ಪರಸ್ಪರ ಸಂಬಂಧ ಹೊಂದಿದೆ. "ಕಾಮ ಒಬ್ಬ ವ್ಯಕ್ತಿಯಲ್ಲ. ಎಲ್ಲರಲ್ಲೂ, ಎಲ್ಲದರಲ್ಲೂ ಕೈಗೊಳ್ಳುವ ಶಕ್ತಿಯಾಗಿರುವನು. ಹೀಗೆ ನೋಡಿದರೆ ಕಾಮನನ್ನು ಸುಡುವುದೆಂದರೆ ಎಲ್ಲರಲ್ಲಿ, ಎಲ್ಲದರಲ್ಲಿ ಅವನನ್ನು ಬದುಕಿಸುವುದು ಎಂದು ಅರ್ಥ. ಇಲ್ಲಿ ಕಾಮ ಸಾವಿನ ಮೂಲಕ ಜೀವಂತವಾಗಿರುತ್ತಾನೆ. ವ್ಯಷ್ಟಿಯಾಗಿದ್ದವನು ಸಮಷ್ಟಿಯಾಗುತ್ತಾನೆ".[೨೫]

ಕಟ್ಟಿಗೆ, ಬೆರಣಿ, ಸೊಪ್ಪುಗಳಿಂದ ಕಾಮ ಸುಡಲ್ಪಡುವನು. ಅಶ್ಲೀಲ ಹಾಡುಗಳನ್ನು ಹಾಡುತ್ತಾ, ಕುಣಿಯುತ್ತಾ, ಬೆಂಕಿಯನ್ನು ತುಳಿಯುತ್ತಾ, ಬೂದಿಯನ್ನು ಓಣಿಯೆಲ್ಲಾ ಎರಚಾಡುತ್ತಾರೆ. ಇಂಥ ವರ್ತನೆಗಳು ಅಗ್ನಿವಿರೋಧಿ ಧೋರಣೆಯನ್ನೇ ಪ್ರತಿಬಿಂಬಿಸುತ್ತವೆ. ಅಗ್ನಿ ತುಳಿಯುವಿಕೆಯು ವಿನಾಶದ ವಿರುದ್ಧದ ಪ್ರತಿಭಟನೆಯಾಗಿದೆ.

ಈ ರೀತಿಯಾಗಿ ಮನದಲ್ಲಿರುವ ಕಾಮಾಗ್ನಿಯನ್ನು ಹೊರಹಾಕಿ, ಅದರ ಕಶ್ಮಲರೂಪವನ್ನು ಚಿತ್ರಿಸಿ, ಸುಡುವ ಆಶಯ ಇಲ್ಲಿದೆ. ಕಾಮನ ಬಲಿಯು ನರಬಲಿಯ ಸಂಕೇತ. ದ್ರಾವಿಡರಲ್ಲಿ ಇಂಥ ನರಬಲಿ ಪದ್ಧತಿಯಿರಬೇಕು. ಅದರ ಪಳಿಯುಳಿಕೆ ಮತ್ತು ಪರಿಷ್ಕಾರ ರೂಪವೇ ಕಾಮನ ಹಬ್ಬವಾಗಿರಬೇಕು. ಜೋಕುಮಾರ ಮತ್ತು ಕಾಮರು ಹೀಗೆ ಬಲಿಯಾದ ಸಾಂಸ್ಕೃತಿಕ ವೀರರಾಗಿರುವರು. ಕಾಮದಹನ ಮಾಡುವಾಗ ಒಂದು ಔಡಲ ಗಿಡವನ್ನು ಹಾಕಿ ಸುಡುತ್ತಾರೆ. ಕಾಮನ ಶವದ ಜೊತೆ ಜೀವಂತವಾಗಿ ಸುಟ್ಟು ಹಾಕಿದ ಹೋಳಿಯ ಕಲ್ಪನೆ ಇದಾಗಿದೆ. ಇದಕ್ಕೆ ಸಂಬಂಧಿಸಿದಂತೆ ಜನಪದ ಕಥೆಯೊಂದು ಪ್ರಚಲಿತದಲ್ಲಿದೆ. ಕಾಮ ಬ್ರಾಹ್ಮಣ ಕುಲದವನು. ಹೋಳಿ ಶೂದ್ರ ಕುಲದವಳು, ಆಕೆಯಲ್ಲಿ ಮೋಹಿತನಾಗಿ ಸಂಪತ್ತನ್ನೆಲ್ಲಾ ಕಳೆದುಕೊಂಡು ಮನೆಯವರಿಂದ, ಸಮಾಜದಿಂದ ಬಹಿಷ್ಕಾರಕ್ಕೆ ಒಳಗಾಗುತ್ತಾನೆ ಕಾಮ. ಹಣವಿಲ್ಲವೆಂದು ಹೋಳಿಯು ಕಾಮನನ್ನು ತಿರಸ್ಕರಿಸುವಳು. ಕಾಮ ಚಿಂತೆಯಲ್ಲಿ ಕೊರಗಿ ಸಾಯುವನು. ಕಾಮನ ಶವವನ್ನು ಯಾರು ಮುಟ್ಟುವುದಿಲ್ಲ. ಅವನ ಸ್ನೇಹಿತರು ಕುಳ್ಳು, ಕಟ್ಟಿಗೆ ಕದ್ದು ತಂದು ಹೋಳಿಯನ್ನು ಆಕೆಯ ಮನೆಯಿಂದ ಕರೆತಂದು ಬೆಂಕಿಯಲ್ಲಿ ಕಾಮನ ಜೊತೆ ಸುಡುವರು. ಈ ಹಿನ್ನೆಲೆಯಿಂದ ಈಗಲೂ ಶೂದ್ರರ ಮನೆಯ ಬೆಂಕಿಯಿಂದಲೇ ಕಾಮದಹನ ಮಾಡುವ ಸಂಪ್ರದಾಯವಿದೆ. ಕಾಮನ ಬೆಂಕಿಯಿಂದ ತೆಂಗು, ಗೆಣಸು, ಕಡಲೆಕಾಯಿ ಸುಟ್ಟು ತಿಂದರೆ ಹಲ್ಲುಗಟ್ಟಿಯಾಗುವವೆಂಬ ನಂಬಿಕೆಯಿದೆ. ಬಿತ್ತನೆ ಬೀಜದ ಜೊತೆ ಬೂದಿಯನ್ನು ಹೊಲದಲ್ಲಿ ಎರಚುತ್ತಾರೆ. ಬೂದಿ ಎರಚುವಿಕೆಯಿಂದ ಬೆಳೆಗಳಿಗೆ ಹಾನಿಯನ್ನುಂಟುಮಾಡುವ ಕ್ರಿಮಿಕೀಟಗಳು ನಾಶ ಹೊಂದುತ್ತವೆಂಬುದು ಕೃಷಿಕರ ಅನುಭವದ ಮಾತಾಗಿದೆ.

ಕಾಮೋನ್ಮತ್ತರಾದ ಜನರು ಬೆಳದಿಂಗಳ ಬೆಳಕಲ್ಲಿ ಸ್ವೇಚ್ಛಾವರ್ತಿಗಳಾಗಿ ಸ್ವರ್ಗೀಯ ಆನಂದ ಅನುಭವಿಸುವುದು ಆಚರಣೆಯ ಹಿನ್ನೆಲೆಯಲ್ಲಿ ಗಮನಾರ್ಹ. ಇಂಥ ಆಚರಣೆಗಳು ಒಂದು ರೀತಿಯ ಬೆಳದಿಂಗಳ ಬೆಳಕಲ್ಲಿ ನಡೆಯುವ ರತಿಕ್ರೀಡೆಯೆಂಬಂತೆ ಭಾಸವಾಗುತ್ತದೆ. ಈ ಆಟಗಳು ಮಾನವನ ಉತ್ಪಾದನಾ ಚಟುವಟಿಕೆಯ ವಿಕಟ ರೂಪಗಳೆಂದು ಮಾನವಶಾಸ್ತ್ರಜ್ಞರು ವಿವರಿಸಿದ್ದಾರೆ. ಹೋಳಿಯ ಹಬ್ಬದಲ್ಲಿ ಮಾತ್ರ ಒಬ್ಬರು ಮತ್ತೊಬ್ಬರನ್ನು ಮನಬಂದಂತೆ ಅಣಕಿಸಿ ಬಯ್ಯಬಹುದಾಗಿದೆ. ಮರುದಿನ ಓಕುಳಿ ಆಚರಣೆಯಿದೆ. ಇದು ಕಾಮನ ಅಮಲನ್ನು ಇಳಿಸಿಕೊಳ್ಳುವ ರಂಗಿನಾಟವಾಗಿದ್ದು, ಸತ್ತ ಕಾಮನ ರಕ್ತವನ್ನು ಓಕುಳಿಯ ರೂಪದಲ್ಲಿ ಎರಚಾಡಬೇಕೆಂಬ ಸಂಪ್ರದಾಯವಿದೆ. ಓಕುಳಿಯು ಮಳೆಯನ್ನು ಸಂಕೇತಿಸುತ್ತದೆ. ಓಕುಳಿಯು ಕೆಂಪು

ಬಣ್ಣದ್ದಾಗಿರುವುದರಿಂದ ಅದು ಲೈಂಗಿಕ ಆಕರ್ಷಣೆಯ ಸಂಕೇತವು ಹೌದು. “ಭೂಮಿಯಲ್ಲಿ ಚೆಲ್ಲುವ ರಕ್ತವು ಸಮೃದ್ಧಿ ಸೂಚಕವಾದುದಾಗಿದೆ. ಬೆಳೆಗಳು ಹೊಲದಲ್ಲಿ ಹುಲುಸಾಗಿ ಬೆಳೆಯಲು ಸಂಭೋಗ ಕ್ರಿಯೆ ನಡೆಯವುದರ ಸಂಕೇತವೂ ಹೌದು”.[೨೬] ಅದು ಕಾಮನ ಹಬ್ಬದ ವಿಧಿಯಾಚರಣೆಯಲ್ಲಿ ವ್ಯಕ್ತವಾಗುತ್ತದೆ.

ಕಾಮನ ಓಕುಳಿ

ಹಿಂದಿನಿಂದಲೂ ರಂಗಿನಾಟವು ಒಂದು ವಿಧದ ಮದನಕ್ರೀಡೆ ಎಂಬ ಭಾವವಿದೆ. ಅದರಲ್ಲಿ ಭಾಗವಹಿಸುವ ಸ್ತ್ರೀ ಪುರುಷರು ಅತೀ ಸ್ವೇಚ್ಛೆಯಿಂದ ವರ್ತಿಸುತ್ತಾರೆ. ಇಲ್ಲಿ ಲೈಂಗಿಕ ಪ್ರಚೋದನೆ ಹಾಗೂ ಸ್ವೇಚ್ಛಾಚಾರ ಪ್ರಮುಖವಾದದ್ದು. ಇದಲ್ಲದೆ ಜನಪದರು ಪ್ರೀತಿ, ಸಂತೋಷ, ಬಂಧುತ್ವವನ್ನು ಬಣ್ಣ ಹಾಕುವುದರ ಮೂಲಕ ತೋರಿಸಿಕೊಳ್ಳುತ್ತಾರೆ. ಮನದ ದ್ವೇಷ ಅಳಿಸಿ, ಪ್ರೀತಿ ಮೂಡಿಸುವಿಕೆ ಹಾಗೂ ಜಾತಿ, ಮತ, ಪಂಥಗಳ ತಾರತಮ್ಯ ನಿವಾರಣೆ ಆಚರಣೆಯ ಪ್ರಮುಖ ಹಿನ್ನೆಲೆಯಾಗಿದೆ.

ಶರೀರಕ್ಕೆ ಲೇಪಿಸುವ ಬಣ್ಣ ಸೌಂದರ್ಯ, ಚೆಲುವನ್ನು ಹೆಚ್ಚಿಸುವುದಾಗಿದೆ. ಮೈಕೈಗೆ ಹಚ್ಚೆ ಹಾಕಿಸುವುದು, ಕಣ್ಣು, ಹುಬ್ಬುಗಳಿಗೆ ಕಾಡಿಗೆ ಹಚ್ಚುವುದು, ಶ್ರೀಗಂಧ ಹಚ್ಚುವುದು, ಕುಂಕುಮ ಇಡುವ ಪರಂಪರೆ ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿದೆ. ಹಬ್ಬದಲ್ಲಿ ಬಳಸುವ ಅರಿಶಿಣವು ದೇವಿಯ ಯೋನಿಯ ಪ್ರಸಾದವೆಂತಲೂ ಜನಪದರಲ್ಲಿ ನಂಬಿಕೆಯಿದೆ. ಮುಟ್ಟಾದ ಸ್ತ್ರೀಯರ ರಕ್ತವು ಫಲವಂತಿಕೆಯ ಸೂಚಕ. ಅರಿಶಿಣವು ಉದ್ದೀಪನದ ಸಂಕೇತ. ಈ ಹಿನ್ನೆಲೆಯಲ್ಲಿ ಮನುಷ್ಯನ ಚೆಲುವಿನ ರಂಗನ್ನು ಹೊರಚೆಲ್ಲುವ ಮಾಧ್ಯಮ ಓಕುಳಿ.

(ವೈಜ್ಞಾನಿಕವಾಗಿ ವಿಶ್ಲೇಷಿಸುವುದಾದರೆ, ಹೋಳಿ ಹಬ್ಬದ ಸಮಯದಲ್ಲಿ ವಾತಾವರಣದ ಉಷ್ಣತೆಯಲ್ಲಿ ಏರಿಕೆ ಕಂಡುಬರುವುದು ಸಹಜ. ಇದರಿಂದ ಚರ್ಮದ ಮೇಲೆ ಬೊಕ್ಕೆಗಳು ಏಳುವ ಸಾಧ್ಯತೆಯುಂಟು. ಓಕುಳಿ ನೆಪದಲ್ಲಿ ಶ್ರೀಗಂಧ, ಕುಂಕುಮ, ಅರಿಶಿಣ ಬೆರಸಿದ ನೀರನ್ನು ಮೈಮೇಲೆ ಸುರಿದುಕೊಂಡರೆ, ಅದರಲ್ಲಿಯ ಔಷಧಿಯ ಗುಣ ಚರ್ಮದ ಸೋಂಕನ್ನು ತಡೆಗಟ್ಟುತ್ತದೆ.) ಆದರೆ ಇತ್ತೀಚಿನ ರಂಗಿನಾಟದಲ್ಲಿ ಬಳಸಲ್ಪಡುವ ರಾಸಾಯನಿಕ ವಸ್ತುಗಳು ಶಾಶ್ವತವಾಗಿ ಕಲೆ ಉಳಿಯುವ, ಚರ್ಮಕ್ಕೆ ಹಾನಿಯನ್ನುಂಟುಮಾಡುವಂಥವುಗಳಾಗಿವೆ. ಇತ್ತೀಚೆಗೆ ಕಾಮನ ಆಚರಣೆಯಲ್ಲಿ ನಡೆಯುವ ಕ್ರೀಡೆಗಳು, ಪುಂಡರ ಅಸಭ್ಯ ವರ್ತನೆಗಳು ಕೆಡುಕಿನ ಮೂಲದವುಗಳಾಗಿವೆ. ಒತ್ತಾಯಪೂರ್ವಕವಾಗಿ ಯಾರೂ ಬಣ್ಣ ಹಾಕಬಾರದು, ಹಬ್ಬವನ್ನು ಶಾಂತಿ ಸೌಹಾರ್ದಯುತವಾಗಿ ಆಚರಿಸಬೇಕೆಂದು ಸರ್ಕಾರ ಆದೇಶವನ್ನು ನೀಡುವ ಹಂತಕ್ಕೆ ತಲುಪಿದೆ. ಈ ರೀತಿಯಾಗಿ ಆಧುನಿಕ ಜೀವನ ಶೈಲಿಗಳು ಆಚರಣೆಯಲ್ಲಿಯ ಮೌಲ್ಯಗಳನ್ನು ಮಸುಕಾಗಿಸುತ್ತವೆ.

ವಿಜಯನಗರ ಅರಸರ ಕಾಲದಲ್ಲಿ ಅದರಲ್ಲೂ ಶ್ರೀಕೃಷ್ಣದೇವರಾಯನ ಆಳ್ವಿಕೆಯ ಸಂದರ್ಭದಲ್ಲಿ ಓಕುಳಿ ಆಚರಣೆ ಜನಪ್ರಿಯವಾಗಿತ್ತು. ಅರಸರು, ಮಾಂಡಲೀಕರು, ವಿಲಾಸಿನಿಯರು ಮತ್ತು ಪ್ರಜೆಗಳು ಭಾಗವಹಿಸಿ ಪರಸ್ಪರ ಹತ್ತಿರವಾಗುತ್ತಿದ್ದರು. ಈಗಲೂ ವಿಜಯನಗರದಲ್ಲಿರುವ ಹೊಂಡಗಳು, ಜಲಕಾರಂಜಿಗಳು ಇದಕ್ಕೆ ಆಧಾರವೆನಿಸಿವೆ. ಪುರುಷರಿಗಷ್ಟೇ ಸೀಮಿತವಾಗಿದ್ದ ಹೋಳಿಹಬ್ಬ ಇಂದು ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವುದು ಕಂಡುಬಂದಿದೆ. ಹೊಸಪೇಟೆ, ಹಂಪಿ ಭಾಗದಲ್ಲಿ ವಿದೇಶಿಯರು ಸಹ ಆಸಕ್ತಿಯಿಂದ

ಓಕುಳಿಯಲ್ಲಿ ಭಾಗವಹಿಸುವುದು ಕ್ಷೇತ್ರಕಾರ್ಯದಿಂದ ತಿಳಿದುಬಂದಿದೆ. ಸಂಡೂರು, ಹಗರಿಬೊಮ್ಮನಹಳ್ಳಿ ತಾಂಡಾಗಳಲ್ಲಿ ಲಂಬಾಣಿ ಬುಡಕಟ್ಟಿನವರು ಹೋಳಿ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ. ಹದಿನೈದು ದಿನ ಮೊದಲೇ ಸ್ತ್ರೀ ಪುರುಷರು ಸಾಮೂಹಿಕವಾಗಿ ಹಾಡು ಹೇಳುತ್ತಾ ನೃತ್ಯದಲ್ಲಿ ತೊಡಗುತ್ತಾರೆ. ಅವರೆಲ್ಲಾ ಪ್ರತಿದಿನ ಒಬ್ಬೊಬ್ಬರ ಮನೆಯಲ್ಲಿ "ನಗಾರಿ"[೨೭] ಇಟ್ಟು ಪೂಜಿಸಿ, ಅವರ ಮನೆಯಲ್ಲಿ ಸಾಮೂಹಿಕ ಭೋಜನ ಮಾಡುತ್ತಾರೆ. ಮಧ್ಯರಾತ್ರಿಯವರೆಗೆ ನಗಾರಿ ಬಾರಿಸಿ ತಾಳಕ್ಕೆ ತಕ್ಕಂತೆ ನೃತ್ಯ ಪ್ರದರ್ಶಿಸುತ್ತಾರೆ. ಇಲ್ಲಿ ಕಾಮನ ಚಿತೆಗೆ ಕೊಳ್ಳಿ ಇಡುವವ ತಾಂಡದ ನಾಯಕ, ಸುಡುವಾಗ ಕಾಮನ ಶಿರ ಪೂರ್ವದಿಕ್ಕಿಗೆ ಬಿದ್ದರೆ ಶುಭ ಸೂಚಕವೆಂಬ ನಂಬಿಕೆಯಿದೆ. ಮರುದಿನ ಕಾಮನನ್ನು ಸುಟ್ಟ ಜಾಗಕ್ಕೆ ಪೂಜೆ ಸಲ್ಲಿಸಿ, ಮುಖ, ಮೈ, ಕೈಗೆಲ್ಲಾ ಬೂದಿ ಬಳಿದುಕೊಂಡು ಓಕುಳಿ ಆಡುವ ಸಂಪ್ರದಾಯವಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಓಕುಳಿ ಆಟವು ಹೋಳಿ ಹಬ್ಬಕ್ಕೆ ಮಾತ್ರ ಸೀಮಿತವಾಗದೆ ಮುಂದಿನ ಯುಗಾದಿ ಹಬ್ಬದವರೆಗೂ ಮುಂದುವರಿಯುತ್ತದೆ. ಹೋಳಿಯು ರೈತರಿಗೆ ಮಳೆ ತರಿಸುವ ಪ್ರಾಕೃತಿಕ ಆಚರಣೆ, ಜನಪದರಿಗೆ ಕಾಮ ಮಳೆದೈವವಾಗಿರುವನು. "ಮಳೆ ಇಳೆಗೆ ಬಂದ ತಕ್ಷಣವೇ ಆಕಾಶ, ಭೂಮಿಗಳ ಸಂಯೋಗವಾಗುತ್ತದೆಂಬ ಕಲ್ಪನೆಯಿದೆ".[೨೮] ಪೌರಾಣಿಕ ಹಿನ್ನೆಲೆಯನ್ನು ಅವಲೋಕಿಸಿದಾಗ ಶಿವಪಾರ್ವತಿಯರ ಪ್ರಸಂಗಕ್ಕೆ ಕಾಮ ತನ್ನ ಪ್ರಾಣ ತೆತ್ತದ್ದು ಗಮನಾರ್ಹ ಅಂಶ. ಜನಪದರ ಕೃಷಿ ಚಟುವಟಿಕೆಗಳು ಪೌರಾಣಿಕ ಘಟನೆಗಳಿಗೆ ಪ್ರಚೋದನೆಯಾಗಿವೆ. ಕಾಮವು ಜೀವಿಗೆ ಬೇಕು. ಅದು ಅತಿಯಾಗಬಾರದು. ಮನದಲ್ಲಿ ತುಂಬಿಕೊಂಡ ಕಾಮದ ಭಾವಗಳನ್ನು ಆಚರಣೆಯ ಹಿನ್ನೆಲೆಯಲ್ಲಿ ಅಭಿವ್ಯಕ್ತಿಸಿ ಸುಡುವುದು ಸೂಕ್ತವಾದುದಾಗಿದೆ. 'ವಾಂತಿ ಯಾದರೆ ಶಾಂತಿ' ಎಂಬ ಜನಪದರ ಗಾದೆಯಂತೆ ಮನಸ್ಸಿನಲ್ಲಿ ಅಡಗಿದ ಕಲ್ಮಶರೂಪದ ಕಾಮವನ್ನು ಅವಾಚ್ಯ ಶಬ್ದಗಳಿಂದ ಅಭಿವ್ಯಕ್ತಿಸುವ ಮೂಲಕ ಸಾಂಕೇತಿಕವಾಗಿ ಸುಡುವ ಕ್ರಿಯೆ ಹೋಳಿ ಆಚರಣೆಯ ಹಿನ್ನೆಲೆಯಾಗಿದೆ.

೩.೨.೫. ಸ್ವರ್ಣಗೌರಿ (ಗೌರಿಹಬ್ಬ)

ಗಣೇಶ ಚತುರ್ಥಿಯ ಮುನ್ನಾ ದಿನ ಹಾಗೂ ಶ್ರಾವಣ ಮಂಗಳವಾರಗಳಲ್ಲಿ ಗೌರಿಹಬ್ಬ ಆಚರಿಸುತ್ತಾರೆ. ಅಂದು ಗೌರಿಯು ಮಣ್ಣಿನಿಂದ ತಯಾರಿಸಿದ ಮೂರ್ತಿರೂಪದಲ್ಲಿ ಪೂಜಿಸಲ್ಪಡುತ್ತಾಳೆ. ಗೌರಿಯ ಜೊತೆ ಗಣಪನು ಇಂತಿಷ್ಟು ದಿನವೆಂದು ಪೂಜಿಸಲ್ಪಡುತ್ತಾನೆ. ಗೌರಿಗೆ ಬುತ್ತಿಕಟ್ಟಿ, ಉಡಿ ತುಂಬ ಗಣಪನೊಂದಿಗೆ ನೀರಿನಲ್ಲಿ ವಿಸರ್ಜಿಸುತ್ತಾರೆ. ತವರಿನಿಂದ ಹೆಣ್ಣುಮಕ್ಕಳು, ಮುತ್ತೈದೆಯರು ಧಾನ್ಯರೂಪದ ಬಾಗಿನ ಪಡೆಯುತ್ತಾರೆ. ಬಾಗಿನದ ಮೂಲಕ ಧಾನ್ಯ ವಿನಿಮಯವಾಗುವುದಲ್ಲದೆ ಕುಟುಂಬಗಳ ನಡುವಿನ ಸಾಮರಸ್ಯ ಬೆಳೆಯಲು ಸಹಾಯಕವಾಗುವುದು. ಧಾನ್ಯರೂಪಿ ಬಾಗಿನ ನೀಡುವಿಕೆ ಗೌರಿ ಕೃಷಿಕರ ಮಗಳೆಂಬುದರ ಸಂಕೇತ ಇತ್ತೀಚೆಗೆ 'ವಸ್ತುರೂಪದ ಬಾಗಿನ'[೨೯] ನೀಡುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡಿದ್ದೇನೆ. ಬಾಗಿನದ ಪ್ರತಿಯೊಂದು ವಸ್ತುವು ಗೌರಿಯ ಪ್ರತೀಕವೆಂಬ ನಂಬಿಕೆಯಿದೆ. ಬಾಗಿನದಲ್ಲಿಯ ವಸ್ತುಗಳ ಬಳಕೆಯೊಂದಿಗೆ, ಗೌರಿ ಸ್ವರೂಪದ ಗುಣಗಳನ್ನು ಅರ್ಥೈಸಿಕೊಂಡು ಅನುಸರಿಸುವುದು ಇದರ ಆಶಯವಾಗಿದೆ.

ಗೌರಿಯನ್ನು ಬೀಳ್ಕೊಡುವಾಗ ಶುಭ ದಿನ ನೋಡಿ, ಉಡಿ ತುಂಬಿ, ಮೊಸರನ್ನ ಬುತ್ತಿಕಟ್ಟಿ ಕಳುಹಿಸುವರು. ಆಹಾರಮೂಲವಾದ ಅಕ್ಕಿಗೆ ಜನಪದರ ಆಚರಣೆಯಲ್ಲಿ ಪ್ರಮುಖ ಸ್ಥಾನವಿದೆ. ಮೊಸರು ಹೈನುಗಾರಿಕೆಯ,

ಸಮೃದ್ಧಿಯ ಸಂಕೇತ. ದೈವೀರೂಪದ ಗೌರಿಯನ್ನು ಜನಪದರು ತಮ್ಮ ಮನೆಮಗಳೆಂದು ಭಾವಿಸುತ್ತಾರೆ. ಮಗಳ ಹೊಟ್ಟೆ ತಣ್ಣಗಿರಲೆಂಬ ಆಶಯದಿಂದ ಮೊಸರನ್ನದ ಬುತ್ತಿ ಕಟ್ಟುತ್ತಾರೆ.

ಮಣ್ಣಿನ ಮೂರ್ತಿಯನ್ನು ಪೂಜಿಸುವುದರ ಹಿನ್ನೆಲೆಯು ಗೌರಿ ಮಣ್ಣಿನ ಮಗಳು, ಕೃಷಿಕರಿಗೆ ಹತ್ತಿರದವಳೆಂಬುದನ್ನು ತಿಳಿಸುತ್ತದೆ. ಗೌರಿಯನ್ನು ಮಣ್ಣಿನಿಂದ ಮಾಡಿ ನೀರಿಗೆ ಬಿಡುವುದು ನೆಲ ಹಾಗೂ ಜಲತತ್ವವನ್ನು ಸಮೀಕರಿಸುವುದಾಗಿದೆ. ಗಂಗೆ-ಗೌರಿಯರಿಬ್ಬರು ಶಿವನ ಪತ್ನಿಯರು. ಅವರಲ್ಲಿ ಸವತಿ ಮತ್ಸರವಿರುವುದು ಸಹಜ. ಆದರೆ ಆಚರಣೆಯಲ್ಲಿ ಅವರನ್ನು ಒಂದುಗೂಡಿಸುವ ಸಮನ್ವಯತೆಯಿದೆ. ಹೆಚ್ಚಾಗಿ ಕಲಶದಲ್ಲಿ ನೀರು ತುಂಬಿ ಅದಕ್ಕೆ ಆವಾಹಿಸಿಕೊಂಡು ಗೌರಿಪೂಜೆ ಮಾಡುವ ಸಂಪ್ರದಾಯವಿದೆ. "ಮಲೆನಾಡ ಕಡೆ ಗೌರಿಹಬ್ಬದಲ್ಲಿ ವಿಶೇಷವಾಗಿ ನಡೆಯುವ ನೀರಿನ ಪೂಜೆ ಇದಕ್ಕೊಂದು ಉದಾಹರಣೆ. ಹಬ್ಬದ ದಿನ ಮುತ್ತೈದೆಯರು ಬಾವಿಗೆ ಹೋಗಿ ಪೂಜಿಸಿ, ಎಡೆ ಇಟ್ಟು ನಂತರ, ಆ ಎಡೆಯನ್ನು ನೀರಿಗೆ ತೇಲಿ ಬಿಡುವುದು. ನೀರು ಮತ್ತು ಜೀವಿಗಳ ಸಂಬಂಧವನ್ನು ಸಂಕೇತಿಸುತ್ತದೆ".[೨೦] ಈ ರೀತಿಯ ಆಚರಣೆಗಳು ಗೌರಿಯು ಜಲದೇವತೆಯೆಂಬುದನ್ನು ಸಮರ್ಥಿಸುತ್ತವೆ. ಮಣ್ಣಿನ ಮಗನಾದ ಗಣಪನೊಂದಿಗೆ, ಜಲದೇವತೆಯಾದ ಗೌರಿಯು ಪೂಜಿಸಲ್ಪಡುತ್ತಾಳೆ. ಗೌರಿ ಮತ್ತು ಗಣಪನ ಆರಾಧನೆಯ ಹಿನ್ನೆಲೆಯನ್ನು ಅವಲೋಕಿಸಿದಾಗ ಹಲವು ಸತ್ಯ ಸಂಗತಿಗಳು ತಿಳಿಯುತ್ತವೆ. ಶಿವನು ಪಾರ್ವತಿಯನ್ನು ಹೆಂಡತಿಯನ್ನಾಗಿಸಿಕೊಂಡದ್ದು ಪಿತೃಪ್ರಧಾನ ಮೂಲದಿಂದ. ಸ್ತ್ರೀ ಸೃಷ್ಟಿಸಾಮರ್ಥ್ಯದ ಸಂಕೇತ ಆದರೆ ಗಣಪನ ಹುಟ್ಟಿನಲ್ಲಿ ಪುರುಷನ ಅಸ್ತಿತ್ವ ಇಲ್ಲವಾಗಿರುವುದು ಗಮನಾರ್ಹ ಸಂಗತಿ. ರೂಪ ಭಗ್ನತೆಯ ಕಾರಣದಿಂದ ಗಣಪನ ಹುಟ್ಟನ್ನು ಬಹಿಷ್ಕರಿಸುವ ಪ್ರಧಾನ ಸಂಸ್ಕೃತಿ ಒಂದೆಡೆ, ಮತ್ತೊಂದೆಡೆ ಪ್ರಕೃತಿ, ಗುಡ್ಡ, ಬೆಟ್ಟ, ಪ್ರಾಣಿಗಳಲ್ಲಿ ದೈವತ್ವ ಕಾಣುವ ಜನಪದರು ಆನೆಮುಖದ ಗಣಪನನ್ನು ಪ್ರಕೃತಿ ಸಂಕೇತವಾಗಿ ಸ್ವೀಕರಿಸಿದ್ದಾರೆ. ಜನಪದರಿಗೆ ಸುಂದರವಾದದ್ದು ಎಂದರೆ ಬದುಕಿಗೆ ಹತ್ತಿರವಾಗಿರುವುದೇ ಹೊರತು, ಬಾಹ್ಯರೂಪದ ಲಕ್ಷಣವಲ್ಲ. ಬೀಜ ಸಹಾಯವಿಲ್ಲದೆ ಜೀವಸೃಷ್ಟಿ ಸಾಧ್ಯವೆಂಬುದನ್ನು ಲೋಕಕ್ಕೆ ಸಾರಿ ಹೇಳುವ ಗೌರಿಯ ದಿಟ್ಟತೆಯನ್ನು ಜನಪದರು ಸ್ವಾಗತಿಸಿರುವರು. ಜನಪದರ ದೃಷ್ಟಿಯಲ್ಲಿ ಆಕೆ ಸೃಷ್ಟಿಕರ್ತೆ. ಶಕ್ತಿಯ ಸಂಕೇತ.

ಗಣಪ ಭೂಮಿ ಮತ್ತು ಪ್ರಕೃತಿಯನ್ನು ಪ್ರತಿನಿಧಿಸಿದರೆ, ಗೌರಿಯು ಜಲದ ಪ್ರತೀಕ. ಕೆರೆ ಬಾವಿಯಲ್ಲಿ ಗಂಗೆ ಪೂಜೆ ಮಾಡುವಾಗ ನೀರೊಳಗಿನ ಹಿಡಿಮರಳನ್ನು ತಂದು ಮರಳು ಗೌರಮ್ಮನೆಂದು ಪೂಜಿಸುತ್ತಾರೆ. ಅರಿಶಿಣದ ಪುಡಿಯಿಂದ ಮಾಡಿದ ಮೂರ್ತಿಯನ್ನು ಗೌರಿಯೆಂದು ಪೂಜಿಸುತ್ತಾರೆ. ವಾಸ್ತವವಾಗಿ ಧಾನ್ಯದೇವತೆಯಾದ ಗಣಪನಿಗೆ, ಜಲದೇವತೆಯಾದ ಗೌರಿಯು ತಾಯಿಯಾಗಿರುವಳು. ಜನಪದರ ನಂಬಿಕೆಯ ಪ್ರಕಾರ ತವರುಮನೆಗೆ ಬರುವ ಗೌರಿಯನ್ನು ಕೈಲಾಸಕ್ಕೆ ಕರೆದೊಯ್ಯಲು ಒಂದು ದಿನ ತಡವಾಗಿ ಗಣಪ ಬರುವನು.

ಗೌರಿಯ ಹಿನ್ನೆಲೆ

ಜನಪದ ಕಥೆಯಲ್ಲಿ ಗೌರಿಯ ಕುಟುಂಬ ಭಿನ್ನವಾದುದಾಗಿದೆ. ಕುಟುಂಬದವರ ವಾಹನ ಸಿಂಹ, ನಂದಿ, ಹಾವು, ನವಿಲು, ಇಲಿ ಹೀಗೆ ಪರಸ್ಪರ ಶತ್ರುಗಳಾದರೂ ಸೌಹಾರ್ದವಿದೆ. ಶಿವ, ಗಣಪ, ಷಣ್ಮುಖರ ನಡುವಿನ ಸಂಬಂಧ ಗಟ್ಟಿಗೊಳ್ಳುವಲ್ಲಿ ಗೌರಿ ತೋರುವ ಚತುರತೆ ಅನುಕರಣೀಯವಾದುದು.

ಪುರಾಣ ಮೂಲದ ಪ್ರಕಾರ ಗೌರಿಯು ತನ್ನ ಸುಪ್ತಶಕ್ತಿಯನ್ನು ಪ್ರಕಟಿಸಿದ ಪ್ರಸಂಗವೊಂದಿದೆ. ರಾವಣನು ಆತ್ಮಲಿಂಗವನ್ನು ಬೇಡಿ ಶಿವನನ್ನು ಕುರಿತು ತಪಸ್ಸು ಮಾಡುವನು. ನಾರದನ ಕುಟಿಲತೆಯ ಪ್ರಭಾವದಿಂದ ಗೌರಿಯನ್ನು ತನಗೆಕೊಡೆಂದು ಕೇಳುವನು. ಶಿವ ಮೊದಲೇ ಕೇಳಿದ್ದನ್ನು ಕೊಡುವವ; ಗೌರಿಯನ್ನು ರಾವಣನ ಜೊತೆ ಹೋಗೆಂದು ಬಿಡುವನು. ಗಂಡನ ಮರ್ಯಾದೆ ಕಾಪಾಡಲು ಗೌರಿಯು ರಾವಣನ ಜೊತೆ ಹೋಗುವಳು. ಆಗ ಗೌರಿ ತನ್ನ ಸುಪ್ತಶಕ್ತಿ ಪ್ರಕಟಿಸಿ, ಆಕಾಶ ಬಣ್ಣದ ಅಗಾಧ ದೇಹ, ದೊಡ್ಡ ರುಂಡ ಹೊಂದಿ ಕಾಳಿಯ ರೂಪ ತಾಳಿ, ರಾವಣನಿಗೆ ಗಾಬರಿ ಹುಟ್ಟಿಸುವಳು. ಪುರುಷ ಪ್ರಧಾನ್ಯತೆಯನ್ನು ಒಪ್ಪಿಕೊಳ್ಳುತ್ತಲೇ ವಿಶ್ವವೆಲ್ಲವೂ ಸ್ತ್ರೀ ಸೃಷ್ಟಿಮಯವಾದುದೆಂಬುದನ್ನು ತನ್ನ ಅಗಾಧ ರೂಪದಿಂದ ತೋರಿಸಿಕೊಟ್ಟವಳು. ಅಸಹಾಯಕಳಾದ ಗೌರಿಯ ಸ್ವಯಂರಕ್ಷಣೆಯ ತಂತ್ರಗಾರಿಕೆ, ಮೃದುಮನದ ಹೆಣ್ಣು ಕಠಿಣ ಹೃದಯಿಯಾಗುವುದು, ಗಂಡನ ಮರ್ಯಾದೆ ಕಾಪಾಡುವ ನೆಪದಲ್ಲಿ ತನ್ನತನ ಉಳಿಸಿಕೊಳ್ಳುವ ಆತ್ಮಸ್ಥೈರ್ಯ ಇವೆಲ್ಲವೂ ಪುರುಷ ಪ್ರಧಾನ ಸಮಾಜದಲ್ಲಿಯು ಹೆಣ್ಣನ್ನು ಸಬಲೆಯಾಗಿಸಿದ ಘಟನೆಗಳಾಗಿವೆ.

ಇತ್ತೀಚೆಗೆ ಬಳ್ಳಾರಿ ಜಿಲ್ಲೆಯ ನಗರ ಪ್ರದೇಶಗಳಲ್ಲಿ ಗೌರಿಹಬ್ಬ ವೈದಿಕರ ಆಚರಣೆಯಾಗಿ ರೂಪಾಂತರ ಗೊಂಡಿದೆ. ಗೌರಿಯು ಸ್ವರ್ಣಗೌರಿಯಾಗಿ ಆಚರಿಸಲ್ಪಡುತ್ತಿದ್ದಾಳೆ. ಗ್ರಾಮೀಣ ಪ್ರದೇಶಗಳಲ್ಲಿ ಮಾತ್ರ ಗೌರಿ, ಗಣೇಶನ ಹಬ್ಬದ ಆಚರಣೆ ಸಮೃದ್ಧಿಯ ಮತ್ತು ನೆಲ, ಜಲ ಸಂಬಂಧದ ಸಂಕೇತವಾಗಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಹುಬ್ಬೆ-ಉತ್ತರೆ ಮಳೆಗಳ ತುಂಬುಮಳೆಗಾಲ, ಹೊಲದಲ್ಲಿ ಪೈರುಮೊಳೆತು ಬೆಳೆ ಏಳುವುದರ ಆರಂಭ ಕಾಲ. ಜನಪದರ ದೃಷ್ಟಿಯಲ್ಲಿ ಗೌರಿ ಜಲತತ್ವದ ಸಂಕೇತವಾಗಿ, ಹೆಣ್ತನದ, ತಾಯ್ತನದ, ಫಲವಂತಿಕೆಯ ಮಾತೃದೇವತೆಯಾಗಿದ್ದಾಳೆ. ಜಲಸಂಸ್ಕೃತಿ ಕೃಷಿಯನ್ನು ಆಧರಿಸಿದ ಸಂಸ್ಕೃತಿಯಾಗಿದೆ. ಕೃಷಿ ಆಚರಣೆಗಳು ಹೆಚ್ಚಾಗಿ ಫಲವಂತಿಕೆಯ ಆಚರಣೆಗಳಾಗಿವೆ. ಫಲವಂತಿಕೆ ಆರಾಧನೆಯಲ್ಲಿಯ ಪ್ರಮುಖ ತತ್ವವೆಂದರೆ ಹೆಣ್ಣಿನ ಫಲವಂತಿಕೆಯೊಂದಿಗೆ ಪ್ರಕೃತಿಯ ಫಲವಂತಿಕೆಯನ್ನು ಸಮೀಕರಣಗೊಳಿಸುವಂಥದ್ದು.

ಎಲೆಗೌರಿ ಆಚರಣೆ

ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ ಭಾಗಗಳಲ್ಲಿ ಎಲೆ ತೋಟಗಳು ಗೌರಿ ಎಂದು ಪೂಜಿಸಲ್ಪಡುತ್ತವೆ. ಗೌರಿ ಹಬ್ಬದಲ್ಲಿ ಮೂಡಣ ದಿಕ್ಕಿಗೆ ಚಪ್ಪರ ಹಾಕಿ, ಬಾಳೆಕಂದು ಕಟ್ಟಿ, ಕಳಸಕ್ಕೆ ತೆಂಗಿನಕಾಯಿಯಿಟ್ಟು, ಒಡವೆ, ವಸ್ತ್ರಗಳಿಂದ ಸಿಂಗರಿಸಿ ಮುತ್ತೈದೆಯರಿಗೆ ಬಾಗಿನ ನೀಡುತ್ತಾರೆ. ತಮ್ಮ ತಮ್ಮ ತೋಟಗಳಲ್ಲಿ ವರ್ಷಕ್ಕೊಮ್ಮೆ ಈ ಆಚರಣೆ ಏರ್ಪಡಿಸುತ್ತಾರೆ.

ವೀಳ್ಯದೆಲೆ ಆಕಾರದಲ್ಲಿ ಸುಂದರವಾಗಿದ್ದು, ಸಸ್ಯೋತ್ಪನ್ನ ಆಹಾರವೆಂಬ ಅಂಶಗಳಿಂದ ಇತರೆ ಎಲೆಗಳಿಗಿಂತ ಭಿನ್ನತೆ ಪಡೆದಿದೆ. "ಸುಮಾರು ೨೦೦೦ ವರ್ಷಗಳಿಗಿಂತ ಹಿಂದೆ ಭಾರತದಲ್ಲಿ ಆರ್ಯರು ತಾಂಬೂಲ ಜಗಿಯುವ ಹವ್ಯಾಸ ಇಟ್ಟುಕೊಂಡಿದ್ದರು. ಕ್ರಿಸ್ತಶಕ ೧ ಅಥವಾ ೨ನೇ ಶತಮಾನದಲ್ಲಿ ಗುಪ್ತರ ಕಾಲದಲ್ಲಿ ತಾಂಬೂಲ ಬಳಕೆಗೆ ಬಂದಿತೆಂದು ಹೇಳಲಾಗುತ್ತದೆ".[೩೮] ಇಂದಿಗೂ ವೀಳ್ಯ ಕೊಡುವುದರ ಮೂಲಕ ಶುಭ ಕಾರ್ಯಗಳು ಪ್ರಾರಂಭಗೊಳ್ಳುತ್ತವೆ. ಧಾರ್ಮಿಕ ಹಾಗೂ ಸಾಮಾಜಿಕ ಸನ್ನಿವೇಶಗಳಲ್ಲಿ ತಾಂಬೂಲ ಪಾವಿತ್ರ್ಯದ ಸಂಕೇತವಾಗಿದೆ. ಒಂದರ್ಥದಲ್ಲಿ ತಾಂಬೂಲ ಆಚರಣೆಗಳಲ್ಲಿ ಸಾಂಸ್ಕೃತಿಕ ಮಧ್ಯವರ್ತಿಯಾಗಿ ಬಳಸಲ್ಪಡುತ್ತದೆ. ಆಹಾರ ಸೇವನೆಯ

ನಂತರ ತಾಂಬೂಲ ತಿನ್ನುವ ಕ್ರಮವಿದೆ. “ತಾಂಬೂಲಕ್ಕೆ ಜೀರ್ಣಕಾರಕ ಗುಣಗಳು ಇರುವುದಲ್ಲದೆ, ಇವು ಲೈಂಗಿಕ ಪ್ರಚೋದನೆಯನ್ನು ಉಂಟುಮಾಡುತ್ತವೆ ಎಂದೂ ಹೇಳಲಾಗುತ್ತದೆ”.[೨೨] ಈ ಹಿನ್ನೆಲೆಯಲ್ಲಿ “ಮದುವೆಯಾಗದ ಹೆಣ್ಣು ವೀಳ್ಯ ತಿನ್ನಬಾರದು”. “ವೀಳ್ಯ ಹಾಕಿದ ಬಾಯಿ ಕೆಂಪಾದರೆ ಗಂಡ ಹೆಂಡಿರ ಮಧ್ಯೆ ಪ್ರೀತಿ ಇದೆ” ಎನ್ನುವ ನಂಬಿಕೆಗಳು ಹುಟ್ಟಿಕೊಂಡಿರಲು ಸಾಧ್ಯವಿದೆ. ತಾಂಬೂಲ ತಿನ್ನುವ ಕ್ರಿಯೆಯು ರಸಿಕತೆ, ಲೈಂಗಿಕತೆಯನ್ನು ತಿಳಿಸುವುದಾಗಿದೆ. ಸಾಮಾಜಿಕವಾಗಿ ಅಂಗೀಕಾರಗೊಳ್ಳುವ ದಂಪತಿಗಳ ನಡುವಿನ ಪ್ರೀತಿಯನ್ನು ವೀಳ್ಯ ನಿರ್ಧರಿಸುತ್ತದೆ. ಮದುವೆಯ ಸಮಯದಲ್ಲಿ ಗಂಡು, ಹೆಣ್ಣಿನ ಕೈಯಲ್ಲಿ ತಾಂಬೂಲ ನೀಡುವಿಕೆಯು ಸಂಬಂಧವನ್ನು ಬೆಸೆಯುವುದು ಮತ್ತು ಸಂಧಾನವೇರ್ಪಡುವುದಾಗಿದೆ.

ಜನಪದ ಆಚರಣೆಗಳಲ್ಲಿ ಎಲೆಗೌರಿ ಉತ್ಪತ್ತಿ, ಮರುಉತ್ಪತ್ತಿಗೆ ಪ್ರಚೋದಕವಾಗಿರುವಳು. ಭೂತಾರಾಧನೆಯಲ್ಲಿ ದೈವದ ವರ್ಗಾವಣೆಗೆ ಹಿಂಗಾರ ಮಾಧ್ಯಮವಾದಂತೆ, ದೈವಾರಾಧನೆಗಳಲ್ಲಿ ವೀಳ್ಯವು ದೈವಶಕ್ತಿ ವರ್ಗಾವಣೆಗೆ ಮಾಧ್ಯಮವಾಗಿರುವುದು. ಆದ್ದರಿಂದ ಗ್ರಾಮದೈವಗಳಿಗೆ ಎಲೆಪೂಜೆ ಕಟ್ಟುವ ವಿಶೇಷ ಆಚರಣೆಯಿದೆ. ಇಂದು ವೀಳ್ಯ ವಾಣಿಜ್ಯ ಬೆಳೆಯಾದರೂ ರಾಸಾಯನಿಕಗಳು ಸೋಕದಂತೆ ನಿರ್ಬಂಧಿಸಿರುವುದರ ಹಿಂದೆ ದೈವೀಭಾವ ಅಡಗಿದೆ. “ಎಲೆತೋಟದಲ್ಲಿ ಚಪ್ಪಲಿ ಮೆಟ್ಟುವಂತಿಲ್ಲ” ಎಲೆ ತೋಟಗಳನ್ನು ಹೆಣ್ಣಿನ ಪ್ರತಿರೂಪವಾಗಿ, ಪವಿತ್ರತೆಯ ಸಂಕೇತವಾಗಿ ಜನಪದರು ಪರಿಭಾವಿಸುತ್ತಾ ಬಂದಿದ್ದಾರೆ. ಎಲೆಗೌರಿ ಆರಾಧನೆ ಪ್ರಕೃತಿ ಆರಾಧನೆಯ ಮೂಲಕ ಫಲವಂತಿಕೆಯನ್ನು ಪುಷ್ಟೀಕರಿಸುವುದಾಗಿದೆ.

೩.೨.೬. ಜೋಕುಮಾರನ ಆಚರಣೆ

ಜೋಕುಮಾರಸ್ವಾಮಿ ಆರಾಧನೆ ವ್ಯಕ್ತಿ ದೈವಕ್ಕೆ ಸಂಬಂಧಿಸಿದ್ದಾಗಿದೆ. ಇಲ್ಲಿ ಫಲವಂತಿಕೆ, ಲಿಂಗಾರಾಧನೆ (ಶಿಶ್ನ), ಕೃಷಿ ಆರಾಧನೆಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಇದೆ. ಸಿಂಧೂ ಬಯಲಿನ ನಾಗರಿಕತೆಯಲ್ಲಿ ಶಿಶ್ನಪೂಜೆ ಬಗ್ಗೆ ಉಲ್ಲೇಖಗಳಿವೆ. ವೇದಗಳಲ್ಲಿಯೂ ಇಂಥ ಪ್ರಸ್ತಾಪಗಳ ಬಗ್ಗೆ ಇಂದಿನ ವಿದ್ವಾಂಸರು ವ್ಯಾಖ್ಯಾನಿಸಿದ್ದಾರೆ. “ಭಾರತದಲ್ಲಿ ಅಲ್ಲದೆ ಈಜಿಪ್ಟ್, ಚೀನಾ ಮೊದಲಾದ ದೇಶಗಳಲ್ಲಿಯೂ ಈ ಬಗ್ಗೆ ಪ್ರಾಚೀನ ಉಲ್ಲೇಖಗಳನ್ನು ಆಧರಿಸಿ ಆರಾಧಿಸಲ್ಪಡುತ್ತಿದೆ”.[೨೩] ಬೇಟೆ, ಪಶುಪಾಲನೆ, ಕೃಷಿ ವ್ಯವಸ್ಥೆಗಳಲ್ಲಿ ಇಂದಿಗೂ ಮಹತ್ವದ ಆಚರಣೆಯಾಗಿ ಉಳಿದುಕೊಂಡಿದೆ. “ಕನ್ನಡ ಸಾಹಿತ್ಯದ ಜಾತಕ ತಿಲಕ(೧೦೪೯), ನೇಮಿನಾಥ ಪುರಾಣ(೧೧೭೦), ಅನುಭಾವ ಶಿಖಾಮಣಿ(೧೭೬೮) ಮುಂತಾದ ಕೃತಿಗಳಲ್ಲಿ ಜೋಕುಮಾರನ ಉಲ್ಲೇಖಗಳು ಸಿಗುತ್ತವೆ”.[೨೪] ಈ ಆಧಾರಗಳಿಂದ ಜೋಕುಮಾರಸ್ವಾಮಿ ಆರಾಧನೆ ಅತೀ ಪ್ರಾಚೀನವಾದುದೆಂದು ಗುರುತಿಸಲಾಗಿದೆ. ಬಳ್ಳಾರಿ ಜಿಲ್ಲೆಯ ಎಲ್ಲಾ ಭಾಗಗಳಲ್ಲೂ ಆಚರಣೆಯಿದೆ. ಬೆನಕನ ಅಮವಾಸ್ಯೆಯಾದ ಏಳನೇ ದಿನದಿಂದ ಹಬ್ಬ ಪ್ರಾರಂಭ. ಅನಂತನ ಹುಣ್ಣಿಮೆಯನ್ನು ಜೋಕುಮಾರನ ಹುಣ್ಣಿಮೆಯೆಂದು ಕರೆಯುತ್ತಾರೆ. ಜೋ ಎಂದರೆ ಭೂಮಿ, ಕುಮಾರ ಎಂದರೆ ಮಗ. ಜೋಕುಮಾರ ಭೂಮಿಯ ಮಗ ಎಂದು ಅರ್ಥೈಸಲಾಗುತ್ತದೆ. ಮಳೆ ದೇವರೆಂದು ಕರೆಯಲ್ಪಡುವ ಜೋಕುಮಾರನ ಹುಟ್ಟು, ಗಂಗಾಮತಸ್ಥರ ಮನೆಯಲ್ಲಿ ಆಗುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ ಈ ಸಮುದಾಯದವರು ಬಾರಿಕರು, ತಳವಾರರು, ಸುಣ್ಣಗಾರರು, ಅಂಬಿಗರು ಬೆಸ್ತರು ಮತ್ತು ಕಬ್ಬೇರರು ಎಂದು ಕರೆಯಲ್ಪಡುತ್ತಾರೆ. ಇವರು ಗಂಗೆಯ ಮಕ್ಕಳೆಂಬ ಪ್ರತೀತಿ ಇದೆ.

ಕೃಷಿಕರ ಮಣ್ಣಿನ ಪೂಜೆಗಳಲ್ಲಿ ಇದು ಒಂದಾಗಿದೆ. ಎಣ್ಣೆ ಮತ್ತು ಮಣ್ಣಿನಿಂದ ಜೋಕುಮಾರನ ಮೂರ್ತಿ ತಯಾರಿಸುತ್ತಾರೆ. ಅದು ಬೇವಿನ ಎಲೆ, ವಿಭೂತಿ, ಕುಂಕುಮ ಮತ್ತು ಹೂಗಳಿಂದ ಅಲಂಕೃತಗೊಂಡಿರುತ್ತದೆ. ಜೋಕುಮಾರನ ಬಾಯಿಗೆ ಬೆಣ್ಣೆ ಒರೆಸುತ್ತಾರೆ. ಅದು ಕೊಬ್ಬಿನಾಂಶದಿಂದ ಕೂಡಿದ್ದು ಪುರುಷ ಶಕ್ತಿಯನ್ನು ಸಂಕೇತಿಸುತ್ತದೆ. ಇದು ಫಲವಂತಿಕೆಯ ದೈವವಾಗಿರುವುದರಿಂದ ದೇಹಕ್ಕಿಂತಲೂ ದೊಡ್ಡ ಶಿಶ್ನ ಮಾಡಿರುತ್ತಾರೆ. ಶಿಶ್ನ ರಚನೆಗೆ ಹೆಚ್ಚಿನ ಮಹತ್ವ ನೀಡಿ ಪೂಜೆಗೆ ಅನುವುಗೊಳಿಸುತ್ತಾರೆ. ಇದರಿಂದ ಶಿಶ್ನ ಹಾಗೂ ಯೋನಿ ಪೂಜೆಗಳು ತುಂಬಾ ಪುರಾತನವಾದುವೆಂದು ಇತಿಹಾಸ ತಿಳಿಸುತ್ತದೆ. ಇಂದಿಗೂ ಜನಪದ ಆಚರಣೆಗಳಲ್ಲಿ ಸಭ್ಯ, ಅಸಭ್ಯವೆಂಬ ಭಾವನೆಗಳಿಲ್ಲ.

ಗಂಗಾಮತದ ಸ್ತ್ರೀಯರು ಜೋಕುಮಾರನನ್ನು ಹೊತ್ತು ಊರಾಡುವ ಹಕ್ಕು ಹಿಂದಿನಿಂದಲೂ ಪಡೆದಿದ್ದಾರೆ. ಇಂತಿಷ್ಟು ಗ್ರಾಮಗಳೆಂದು ನಿಗದಿಪಡಿಸಿಕೊಂಡಿರುತ್ತಾರೆ. ಇಲ್ಲಿ ಪುರುಷ ದೈವ ಸ್ತ್ರೀಯರಿಂದ ಪೂಜಿಸಲ್ಪಡುತ್ತದೆ. ಗುಂಪಾಗಿ ಅವರದ್ದೇ ದಾಟಿಯಲ್ಲಿ ಇವರು ಹಾಡುತ್ತಾ ಮನೆಮನೆಗೆ ಸಾಗುತ್ತಾರೆ.

ಅಡ್ಡಡ್ಡ ಮಳೆ ಬಂದು, ದೊಡ್ಡ ದೊಡ್ಡ ಕೆರೆ ತುಂಬಿ ।
ಗೊಡ್ಡುಗಳೆಲ್ಲಾ ಹೈನಾಗಿ, ನಿನ್ನ ಕುಮಾರ್ನ ಗಡ್ಡಕ್ಕೆ ಬೆಣ್ಣೆಲ್ಲೊ ಜವಕುಮಾರ ।
ಮಡಿವಾಳರ ಕೇರಿ ಹೊಕ್ಕಾನೆ ಜೋಕುಮಾರ ।
ಮುಡಿತುಂಬಾ ಹೂ, ಮುಡಿದಂತ ಚಲುವಿ ।
ತನ್ನ ಮಡದಿಯಾಗಬೇಕೆಂದ ಸುಕುಮಾರ ।

ಹೀಗೆ ಜೋಕುಮಾರನ ಜೀವನದ ಸಂಗತಿಗಳನ್ನು ಪ್ರಸ್ತಾಪಿಸುತ್ತಾರೆ. ಪ್ರತಿ ಮನೆಯವರಿಂದ ಉಪ್ಪು, ಎಣ್ಣೆ, ಒಣಮೆಣಸಿನಕಾಯಿ, ಬೆಣ್ಣೆ, ತುಪ್ಪ, ದವಸಗಳನ್ನು ಪಡೆಯುತ್ತಾರೆ. ಇವು ವೃದ್ಧಿಕಾರಕ ಗುಣ ಹೊಂದಿದ್ದು, ಸುಭಿಕ್ಷೆಯನ್ನು ಸೂಚಿಸುತ್ತವೆ. ಇದಕ್ಕೆ ಪ್ರತಿಯಾಗಿ ಜೋಕುಮಾರನನ್ನು ಹೊತ್ತವರು ಬೇವಿನಸೊಪ್ಪು "ಕಪ್ಪು"[೩೫] ಮತ್ತು ನುಚ್ಚನ್ನು ನೀಡುತ್ತಾರೆ. ಗಂಗಾಮತಸ್ಥರಿಗೆ ಇದು ಉಪವೃತ್ತಿ ಅಲ್ಲವಾದರೂ, ಪುಟ್ಟಿ ಹೊತ್ತು ಊರೂರು ತಿರುಗಿ ಆಯಾ ಎತ್ತುವ ಸಂಪ್ರದಾಯ ಅಲೆಮಾರಿ ಸಂಸ್ಕೃತಿಯನ್ನು ನೆನಪಿಗೆ ತರುತ್ತದೆ. ಜೋಕುಮಾರ ಅತಿಕಾಮಿಯಾಗಿ ಅಲೆದಿರುವನೆಂಬುವುದರ ಸಾಂಕೇತಿಕ ರೂಪವು ಹೌದು . ಜೋಕುಮಾರನನ್ನು ಹೊತ್ತವರು ಏಳು ದಿನ, ಏಳು ಹಳ್ಳಿಯನ್ನು ತಿರುಗಬೇಕೆಂಬ ನಿಯಮವಿದೆ. ಆಚರಣೆಯಲ್ಲಿ ಏಳು ಸಂಖ್ಯೆಗೆ ಪ್ರಮುಖ ಸ್ಥಾನ. ಹುಟ್ಟಿದ ಏಳು ದಿನದಲ್ಲಿ ಆತ ಪಡೆದುಕೊಂಡ ಶಕ್ತಿ, ಸಾಮರ್ಥ್ಯಗಳಿಂದ ಸತ್ಕಾರಕ್ಕೆ ಭಾಜನನಾಗುತ್ತಾನೆ. ಈ ಏಳು ದಿನಗಳು, "ಏಳು ಮಳೆಯ ನಕ್ಷತ್ರ"[೩೬]ದ ಅವಧಿಯು ಆಗಿದೆ(ರಾಮು ಮುಲಗಿ, ೨೦೧೦, ಪು. ೧೪೪). ಜೇಷ್ಠ ನಕ್ಷತ್ರದಲ್ಲಿ ಬಿದ್ದ ಮಳೆ ಉತ್ತರಾಭಾದ್ರದಲ್ಲಿ ಮುಕ್ತಾಯಗೊಳ್ಳುತ್ತದೆ. ಇದು ರೈತರಿಗೆ ಮಳೆಯ ಅಗತ್ಯತೆಯ ಸಮಯವು ಹೌದು.

ಸಾಂಸ್ಕೃತಿಕ ವೀರನ ಅಂತ್ಯ

ಆಚರಣೆಯ ಕೊನೆಯ ದಿನದ ರಾತ್ರಿ ಮಾದಿಗರ ಕೇರಿಯಲ್ಲಿ ಹೆಣ್ಣುಮಕ್ಕಳು ಹಾಡುತ್ತಾ ಒಂದೆಡೆ ಮುಳ್ಳಿನ ಕಂಟಿಗಳನ್ನಿಟ್ಟು ಅದನ್ನು ಸುತ್ತುತ್ತಾರೆ. ಸೆರಗಿಗೆ ಮುಳ್ಳು ತಾಗಿದಾಗ ತಮ್ಮ ಹೆಂಗಸರ ಸೆರಗನ್ನು ಜೋಕುಮಾರ ಎಳೆದನೆಂದು ಭಾವಿಸಿ ಒನಕೆಯಿಂದ ಬಡಿದು ಸಾಯಿಸುತ್ತಾರೆ. 'ಜೋಕುಮಾರನ ರುಂಡ

ಅಂಗಾತ ಬಿದ್ದರೆ ಸುಖದ ಕಾಲವೆಂತಲೂ, ಬೋರಲಾಗಿ ಬಿದ್ದರೆ ದುಃಖದ ಕಾಲವೆಂತಲೂ ಪರಿಗಣಿಸಲಾಗುತ್ತದೆ. ಲೈಂಗಿಕ ಕಾಮನೆಗೆ ವಶನಾದ ವ್ಯಕ್ತಿ ಎಂಥ ಶಕ್ತಿಶಾಲಿಯಾದರೂ ಅವನತಿಗೆ ಗುರಿಯಾಗುತ್ತಾನೆ. ಇದು ಆಚರಣೆಯ ಹಿನ್ನೆಲೆಯಲ್ಲಿ ಜನಪದರು ಸಮಾಜಕ್ಕೆ ನೀಡುವ ಮೌಲ್ಯಯುತ ಸಂದೇಶ. ಮನೆಯಲ್ಲಿರುವ ಹೇನು, ತಿಗಣೆ, ಕೂರಿ, ಉಣ್ಣೆಯಂತಹ ಕ್ರಿಮಿಕೀಟಗಳನ್ನು ಜೋಕುಮಾರನ ಮೈಮೇಲೆ ಬಿಡುತ್ತಾರೆ. ಇದರಿಂದ ಜೋಕುಮಾರ ಜಾಗೃತನಾಗಿ ಜನರ ಕಷ್ಟಕ್ಕೆ ಸ್ಪಂದಿಸುತ್ತಾನೆಂಬ ನಂಬಿಕೆಯಿದೆ.

ಈ ಆಚರಣೆಯಲ್ಲಿ ಬೇವು ಸಾವಿನ ಸಂಕೇತ. ಇದೇ ಆಶಯದಿಂದ ಕೊಲೆಯಾದ ಜೋಕುಮಾರನನ್ನು ಬೇವಿನ ತಪ್ಪಲಲ್ಲಿ ಮಲಗಿಸುತ್ತಾರೆ. ಇಂದಿಗೂ ಅಕಾಲಿಕ ಮರಣ ಹೊಂದಿದವರನ್ನು ಬೇವಿನ ತಪ್ಪಲಲ್ಲಿ ಮಲಗಿಸುವ ವಾಡಿಕೆಯಿದೆ. ಬೇವು ರೋಗ ನಿರೋಧಕ ಹಾಗೂ ರೋಗ ಹರಡದಂತೆ ತಡೆಯುವ ಗುಣವುಳ್ಳದ್ದು. ಬೆಳಗಿನ ಜಾವದಲ್ಲಿ ಅಗಸರ ಬಂಡೆಯ ಕೆಳಗೆ ಕಪ್ಪೆಯನ್ನಿಟ್ಟು, ಬಂಡೆಗೆ ಪೂಜಿಸಿ, ಜೋಕುಮಾರನನ್ನು ಪ್ರತಿಷ್ಠಾಪಿಸಿ ಅಂತಿಮ ನಮನ ಸಲ್ಲಿಸುತ್ತಾರೆ. ಉಭಯವಾಸಿಯಾದ ಕಪ್ಪೆ ಸಾಮಾನ್ಯವಾಗಿ ಮಳೆ ಸಂಬಂಧಿ ಆಚರಣೆಯಲ್ಲಿ ಪ್ರಾಮುಖ್ಯತೆ ಪಡೆದಿದೆ. ಬಳ್ಳಾರಿ ಜಿಲ್ಲೆಯಲ್ಲಿ ಜೋಕುಮಾರ ಸತ್ತ ನಂತರ ಮೂರುದಿನ ಸೂತಕದ ಆಚರಣೆಯಿದೆ. ಈ ಸಮಯದಲ್ಲಿ ಅಗಸರು ಬಟ್ಟೆ ಒಗೆಯಲು ಹೋಗುವಂತಿಲ್ಲ. ಕಪ್ಪೆಯ ವಟಗುಟ್ಟುವಿಕೆಯನ್ನು ಜೋಕುಮಾರನ ನರಳುವಿಕೆ ಎಂದು ಭಾವಿಸುತ್ತಾರೆ. ಅವಿರತ ಶ್ರಮಿಕರಾದ ಇವರಿಗೆ ಸೂತಕದ ನೆಪದಲ್ಲಿ ವರ್ಷದಲ್ಲಿ ಮೂರು ದಿನವಾದರೂ ವಿಶ್ರಾಂತಿ ಸಿಗಲೆಂಬ ಆಶಯ ಇಲ್ಲಿಯದಾಗಿದೆ.

ಜನಪದ ಕಥೆಯ ಪ್ರಕಾರ ಜೋಕ ಮತ್ತು ಎಲೆ ಗೌರಿ ದಂಪತಿಗಳಿಗೆ ಮಕ್ಕಳಾಗದ ಕಾರಣ ಶಿವನನ್ನು ಪ್ರಾರ್ಥಿಸುತ್ತಾರೆ. ಶಿವನ ಅನುಗ್ರಹದಿಂದ ಹುಟ್ಟಿದ ಮಗುವಿಗೆ ಶೀಘ್ರ ಬೆಳವಣಿಗೆ ಹಾಗೂ ಏಳು ದಿನಗಳ ಆಯಸ್ಸು ಇರುತ್ತದೆ. ಒಮ್ಮೆ ಮಳೆಯಿಲ್ಲದಾದಾಗ, ಬೆಳೆಗಳೆಲ್ಲಾ ಒಣಗಿ ಜನರ ಸಂಕಟ ಮುಗಿಲು ಮುಟ್ಟುತ್ತದೆ. ಆಗ ಜೋಕುಮಾರ ತನ್ನ ಕುದುರೆಯನ್ನೇರಿ ಹೊಲಗದ್ದೆಗಳಲ್ಲಿ ಸಂಚಾರ ಹೊರಡುತ್ತಾನೆ. ಅವನು ತನ್ನ ಮೇಲುಹೊದಿಕೆಯನ್ನು ಒಮ್ಮೆ ಜೋರಾಗಿ ಬೀಸಿದಾಗ, ಅದರ ಸೆಳಕಿಗೆ ಚದುರಿದ ಮೋಡಗಳೆಲ್ಲಾ ಮಳೆ ಸುರಿಸುತ್ತವೆ. ಕೆರೆ, ಹಳ್ಳ ತುಂಬಿ ಬೆಳೆಗಳು ಸಮೃದ್ಧವಾಗುತ್ತವೆ. ಇದರಿಂದ ಸಂತಸಗೊಂಡ ಜೋಕುಮಾರ ಸಂಚರಿಸುವಾಗ ದಾರಿ ಮಧ್ಯದಲ್ಲಿ ಸುಂದರವಾದ ಅಗಸರ ಯುವತಿಯನ್ನು ಮೋಹಿಸುತ್ತಾನೆ. ಅದನ್ನು ಸಹಿಸದ ಯುವತಿಯ ತಂದೆ ಜೋಕುಮಾರನ ತಲೆಯನ್ನು ಕತ್ತರಿಸಿ ನದಿಗೆ ಎಸೆದುಬಿಡುತ್ತಾನೆ. ಆ ತಲೆಯು ಒಬ್ಬ ಬೆಸ್ತನಿಗೆ ದೊರಕುತ್ತದೆ. ಆತನು ಜೋಕುಮಾರನನ್ನು ಗುರುತಿಸಿ ತಮ್ಮ ಬೆಳೆಗಳನ್ನು ರಕ್ಷಿಸಿ ತಮ್ಮ ಬದುಕಿಗೆ ಆಧಾರವಾಗುವನೆಂದು ಜೋಕುಮಾರನ ತಲೆಯನ್ನು ಊರಿಗೆ ತರುತ್ತಾರೆ. ಊರವರೆಲ್ಲಾ ಸೇರಿ ಪೂಜೆ ಸಲ್ಲಿಸುತ್ತಾರೆ. ಅಂದಿನಿಂದ ಜೋಕುಮಾರನ ಪೂಜೆ ಆಚರಣೆಗೆ ಬಂದಿತೆಂಬ ಪ್ರತೀತಿ ಇದೆ. ಈ ರೀತಿಯ ಜೋಕುಮಾರನ ಹುಟ್ಟು, ಸಾವಿನ ಕುರಿತಾದ ಮೌಖಿಕ ಐತಿಹ್ಯಗಳು ಸಾಕಷ್ಟಿವೆ.

ಜೋಕುಮಾರನ ಚರಗ ಮತ್ತು ಜೋಕುಮಾರನ ಬೆಚ್ಚು

ಬಳ್ಳಾರಿ ಜಿಲ್ಲೆಯಲ್ಲಿ ಜೋಕುಮಾರ ಸತ್ತ ಮರುದಿನ ಬುತ್ತಿ ಕಟ್ಟಿಕೊಂಡು ಹೊಲಗಳಿಗೆ ತೆರಳಿ ಚರಗ ಚೆಲ್ಲಿ, ಬೆಚ್ಚು ನಿಲ್ಲಿಸುವ ಸಂಪ್ರದಾಯವಿದೆ. ಹೊಸಪೇಟೆ, ಹಗರಿಬೊಮ್ಮನಹಳ್ಳಿ ತಾಲೂಕುಗಳಲ್ಲಿ ಕೊಲೆಯಾದ ಜೋಕುಮಾರನಿಗೆ ಒಂದು ಕುರಿಮರಿಯನ್ನು ಬಲಿ ನೀಡಿ, ಮರುದಿನ ಹೊಲಗಳಿಗೆ ರಕ್ತಚರಗ ಚೆಲ್ಲುತ್ತಾರೆ.

ಮಾತೃಪ್ರಧಾನ ವ್ಯವಸ್ಥೆಯ ಸಮಯದಲ್ಲಿ, ಕೃಷಿ ಬೆಳವಣಿಗೆಯಲ್ಲಿ ಮಹಿಳೆಯ ಪಾತ್ರ ಪ್ರಾಮುಖ್ಯತೆ ಪಡೆದಿತ್ತು. ಸ್ತ್ರೀ ಪ್ರಾಧಾನ್ಯತೆಯಲ್ಲಿ ಭೂಮಿ ಫಲವತ್ತತೆಗಾಗಿ, ಬೆಳೆ ಸಮೃದ್ಧಿಗಾಗಿ ಪುರುಷ ಶಕ್ತಿಯನ್ನು ಬಲಿ ನೀಡುವುದು ಸಾಮಾನ್ಯ. ಇಂಥ ಬಲಿ ನೀಡಿಕೆಯ ಕುರುಹಾಗಿ ಜೋಕುಮಾರ ಆರಾಧಿಸಲ್ಪಡುತ್ತಾನೆ. ಏಕೆಂದರೆ ಸಾವಿನ ಶಕ್ತಿ ಜೀವಶಕ್ತಿಯೊಡನೆ ಪರಸ್ಪರ ಸಂಬಂಧ ಹೊಂದಿದೆ. ಜೋಕುಮಾರ ಕೆಳವರ್ಗದವರಿಂದ ಕೊಲ್ಲಲ್ಪಡಬೇಕು. ಅಂದರೆ ಕೊಲ್ಲುವ ಹಕ್ಕು ಅವರಿಗಿದೆ. ಕೊಲೆಯಾದರೆ ಮಾತ್ರ ಸಮೃದ್ಧಿ. ಈ ಹಿನ್ನೆಲೆಯಲ್ಲಿ ಜೋಕುಮಾರ ಸತ್ತ ನಂತರ ಮಳೆಯಾಗುತ್ತದೆಂಬ ನಂಬಿಕೆ ಉದಯಿಸಿರಲು ಸಾಧ್ಯವಿದೆ. ಆದ್ದರಿಂದ ಜೋಕುಮಾರನ ವೀರ್ಯವನ್ನು ಭೂಮಿಯಲ್ಲಿ ಚೆಲ್ಲಾಡಿದರೆ, ಆಗ ಭೂಮಿ ಗರ್ಭಧರಿಸಿ ಬೆಳೆಗಳ ಮೂಲಕ ಫಲವಂತಿಕೆ ನೀಡುವಳೆಂದು ನಂಬುತ್ತಾರೆ. ವಕ್ತೃಗಳ ಹೇಳಿಕೆಯ ಪ್ರಕಾರ ಭಾದ್ರಪದ ಮಾಸದಲ್ಲಿ ಹೊಲಗಳಲ್ಲಿ ತೆನೆಯ ಮೇಲೆ ಕುಳಿತ ಮಂಜಿನ ನೊರೆ ಜೋಕುಮಾರನ ವೀರ್ಯ. ಖ್ಯಾತ ಸಂಶೋಧಕರಾದ ಚಿದಾನಂದಮೂರ್ತಿಯವರ ಪ್ರಕಾರ 'ಜೋಕುಮಾರ ಒಬ್ಬ ಪ್ರಜನನ ದೈವ'. ವಿಶೇಷವಾಗಿ ಬಂಜೆಯರು ಜೋಕುಮಾರನ ಹರಕೆ ಹೊತ್ತರೆ ಮಕ್ಕಳಾಗುತ್ತವೆಂಬ ನಂಬಿಕೆ ಕೂಡ್ಲಿಗಿ, ಸಂಡೂರು ಭಾಗಗಳಲ್ಲಿ ಹೆಚ್ಚಾಗಿ ಪ್ರಚಲಿತದಲ್ಲಿದೆ.

ಆಚರಣೆಯಲ್ಲಿ ಬಳಸುವ ಕಪ್ಪು ದ್ರಾವಿಡ ಸಂಸ್ಕೃತಿಯಲ್ಲಿನ ಪ್ರಮುಖ ಸಂಕೇತ. ಕಪ್ಪು ಹೆಚ್ಚಾಗಿ ದಕ್ಷಿಣ ಭಾರತದ ಆಚರಣೆಗಳಲ್ಲಿ ಬಳಸಲ್ಪಡುತ್ತದೆ. ಕಪ್ಪಿನಲ್ಲಿ ಬಳಕೆಯಾದ ಬಾಳೆ, ಬೇವು, ಬೂದಿ ತಮ್ಮದೇ ಆದ ಅಸ್ತಿತ್ವ ಪಡೆದಿವೆ. ಬಾಳೆ ಅತೀ ಸಂತಾನ ಮತ್ತು ಸಮೃದ್ಧಿಯ ಫಲ. ಆದರೆ 'ಬಾಳೆಗೊಂದೇ ಗೊನೆ, ಚೇಳಿಗೊಂದೆ ಬಸಿರು' ಎನ್ನುವ ಮಾತು ಪ್ರಾಕೃತಿಕ ವಾಸ್ತವವನ್ನು ತಿಳಿಸುತ್ತದೆ. ಬಾಳೆ ಮತ್ತು ಚೇಳಿನ ಒಂದೇ ಬಸಿರು ಜನಪದರಿಗೆ ಅಪಶಕುನ ಸೂಚಕವಾಗಿದೆ. ಹೀಗೆ ಬಾಳೆಯ ಹುಟ್ಟು, ಸಾವಿನ ತಾರ್ಕಿಕ ವೈರುಧ್ಯದ ಅರ್ಥವನ್ನು ಸಂವಹಿಸಲು ಸಾಧ್ಯವಿದೆ. ಬೇವು ಮತ್ತು ಬೂದಿ ಕ್ರಿಮಿನಾಶಕ ಗುಣ ಹೊಂದಿವೆ. ಸಸ್ಯಾಹಾರಿ ಚರಗವು ಬದುಕಿನ ಹುಲುಸನ್ನು ಸಂರಕ್ಷಿಸುವ ಬಲಿಯ ಸಾಂಕೇತಿಕ ರೂಪ. ಚರಗ ಚೆಲ್ಲಿದ ನಂತರ ಬಿದ್ದ ಆಹಾರ ಪದಾರ್ಥವನ್ನು ತಿನ್ನಲು ಬಂದ ಪಕ್ಷಿಗಳು ಅದರ ಜೊತೆ ಅಪಾಯಕಾರಿ ಹುಳು-ಹುಪ್ಪಡಿಗಳನ್ನು ತಿನ್ನುತ್ತವೆ. ಔಷಧಿಯಿಂದ ವಾಸಿಯಾಗದ ರೋಗಗಳು ಚರಗದಿಂದ ಸರಿಹೋದ ದಾಖಲೆಗಳಿವೆ. ಹೀಗೆ ಬೆಳೆಗಳಿಗೆ ಬೀಳುವ ರೋಗ ನಿವಾರಣೆಗಾಗಿ ಚರಗ ಪ್ರಮುಖ ಸ್ಥಾನ ಪಡೆದಿದೆ.

ಮಣ್ಣಿನ ಗಡಿಗೆಗೆ ಬಿಳಿ ಬಣ್ಣ ಬಳಿದು, ಅದಕ್ಕೆ ರುಂಡದ ಆಕಾರದ ಚಿತ್ರ ಬರೆದು, ಹಳೆ ಬಟ್ಟೆಯಿಂದ ಜೋಕುಮಾರನ ಆಕೃತಿ ಮಾಡಿ, ಹೊಲಗಳಲ್ಲಿ ಬೆದುರು ನಿಲ್ಲಿಸುತ್ತಾರೆ. ಜೋಕುಮಾರನ ವಿಕಾರ ರೂಪಕ್ಕೆ ಪೈರು ತಿನ್ನಲು ಬರುವ ಪಕ್ಷಿಗಳು ಹೆದರಿ ಓಡುತ್ತವೆ. ಜೋಕುಮಾರ ತನ್ನಲ್ಲಿಯ ಸತ್ವವನ್ನು ಭೂಮಿಯಲ್ಲಿ ಹರಡುತ್ತಾನೆ. ಆತನ ಇರುವಿಕೆಯಿಂದ ಬೆಳೆ ಸಮೃದ್ಧಿಯಾಗುತ್ತದೆಂಬ ನಂಬಿಕೆಯೂ ಆವರ್ತನಾಶೀಲವಾದ ಕೃಷಿಕರ ಬದುಕಿನ ಸಮೃದ್ಧಿಯನ್ನು ಸಂಕೇತಿಸುತ್ತದೆ.

ಸಮೃದ್ಧಿಗಾಗಿ ನಡೆಯುವ ನರಬಲಿ ಇದು. ಗಂಡಿನ ಅಂತ್ಯದಿಂದ ಹೆಣ್ಣಿನ ಫಲೋತ್ಪತ್ತಿ ವೃದ್ಧಿಯಾಗುವ ಕ್ರಮ ಜೋಕುಮಾರನ ಆಚರಣೆಯಲ್ಲಿದೆ. ರಕ್ತ, ಭೂಮಿ, ಅಂಬಲಿ ಮತ್ತು ಚರಗ ಇವು ಜೀವೋತ್ಪತ್ತಿಯ

ಸಾಂಕೇತಿಕ ರೂಪಗಳಾಗಿವೆ. ಸಮೃದ್ಧಿಯ ಸಂವರ್ಧನೆಯಲ್ಲಿ ಹೆಣ್ಣು ಬಲಿಯಾಗುವುದು ಕಡಿಮೆ. ಈ ಕಾರಣಕ್ಕಾಗಿ ಹೆಣ್ಣು ದೇವತೆಗಳು ಕಳುಹಿಸಲ್ಪಡುತ್ತವೆ. ಗಂಡು ದೇವತೆಗಳು ಕೊಲ್ಲಲ್ಪಡುತ್ತವೆ. ಜೀವೋತ್ಪತ್ತಿಯ ಸಂವರ್ಧನೆ ಮತ್ತು ಸಂರಕ್ಷಣೆಗೆ ಜಲದ ಅಗತ್ಯತೆಯಿದೆ. ಜೋಕುಮಾರನ ಆಚರಣೆಯಿಂದ ಕಾಲಕ್ಕೆ ಸರಿಯಾಗಿ ಮಳೆ ಬಂದು ಜನಪದರ ಕಷ್ಟ ನಿವಾರಣೆಯಾಗುವುದೆಂಬ ಆಶಯ ಆಚರಣೆಯ ಹಿನ್ನೆಲೆಯ ಗ್ರಹಿಕೆಯಾಗಿದೆ.

ಕ್ಯಾತಪ್ಪ, ಚಂಗಳೀಕಮ್ಮರ ಆಚರಣೆ

ಹೊಸಪೇಟೆ ತಾಲೂಕಿನ ಮರಿಯಮ್ಮನಹಳ್ಳಿಯಲ್ಲಿ ನಾಗರಪಂಚಮಿಯಾದ ಮರುದಿನ ಕ್ಯಾತಪ್ಪ, ಚಂಗಳೀಕಮ್ಮರ ಆಚರಣೆ ನಡೆಯುತ್ತದೆ. ಬಾರೀಕರ ಸಮುದಾಯದ ಎರಡು ಬೇರೆ ಬೇರೆ ಮನೆಗಳಲ್ಲಿ ಇವರಿಬ್ಬರ ಜನನವಾಗುತ್ತದೆ. ಈ ಎರಡು ಮನೆಗಳಿಂದ ಮಣ್ಣಿನ ಮೂರ್ತಿಗಳನ್ನು ಒಂದೆಡೆ ತಂದು ಪ್ರತಿಷ್ಠಾಪಿಸುತ್ತಾರೆ. ದಂಪತಿಗಳನ್ನು ವಿವಿಧ ವಸ್ತುಗಳಿಂದ ಅಲಂಕರಿಸಿ, ಪೂಜಿಸಿ, ಎಡೆ ಅರ್ಪಿಸುತ್ತಾರೆ. ಸಾಯಂಕಾಲ ವಿವಿಧ ವಾದ್ಯಗಳೊಂದಿಗೆ ಮೆರವಣಿಗೆ ಮೂಲಕ ಜಲದಲ್ಲಿ ವಿಸರ್ಜಿಸುತ್ತಾರೆ. ಜೋಕಪ್ಪನಂತೆ ಖ್ಯಾತಪ್ಪನು ಮಳೆದೈವವಾಗಿದ್ದಾನೆ. ಈತನ ಜೀವಿತಾವಧಿ ಒಂದು ದಿನ ಮಾತ್ರ. ಜೋಕಪ್ಪ ದುರಂತ ನಾಯಕನಾದರೆ, ಕ್ಯಾತಪ್ಪ ಶಾಂತ ಸ್ವರೂಪಿ. ಹಗರಿಬೊಮ್ಮನಹಳ್ಳಿ ಭಾಗದಲ್ಲಿ ಕ್ಯಾತಪ್ಪ ಸತ್ತ ಮರುದಿನ ಜೋಕಪ್ಪನ ಜನನವಾಗುವುದು. ಕ್ಯಾತಪ್ಪನ ಆಚರಣೆ ಬಳ್ಳಾರಿ ಜಿಲ್ಲೆಯ ಕೆಲವೇ ಭಾಗಗಳಲ್ಲಿ ಕಂಡುಬಂದಿದೆ. ಸದ್ದು, ಗದ್ದಲದ ನಡುವೆ ಆಚರಣೆಗೊಳ್ಳುವ ಗಣಪ, ದುರಂತನಾಯಕನಾಗಿ ಆಚರಣೆಗೊಳ್ಳುವ ಜೋಕಪ್ಪ ಇವರಿಬ್ಬರ ನಡುವೆ ನಿಶ್ಯಬ್ದವಾಗಿ ಆಚರಣೆಗೊಳ್ಳುವ ಖ್ಯಾತಪ್ಪ ಇವರೆಲ್ಲ ಕೃಷಿಕರ ಆಚರಣೆಯಲ್ಲಿ ತಮ್ಮದೇ ಆದ ವೈಶಿಷ್ಟ್ಯತೆಯನ್ನು ಪಡೆದಿದ್ದಾರೆ.

೩.೨.೭. ಶಿಖರಕ್ಕೆ ತೈಲಾಭಿಷೇಕ

ಆಚರಣೆಗಳ ನೆಪದಲ್ಲಿ ದೇವರ ಮೂರ್ತಿಗೆ ಎಣ್ಣೆ ಎರೆಯುವುದು ಸಾಮಾನ್ಯ. ಹನುಮಂತ ದೇವರಿಗೆ, ಬುಡ್ಡೆಕಲ್ಲುಗಳಿಗೆ ಎಣ್ಣೆ ಎರೆಯುವ ಸಂಪ್ರದಾಯವಿದೆ. ಕೂಡ್ಲಿಗಿ ತಾಲೂಕು ಉಜ್ಜಯಿನಿ ಗ್ರಾಮದಲ್ಲಿರುವ ಸದ್ಧರ್ಮಪೀಠ ವೀರಶೈವ ಪಂಚಪೀಠಗಳಲ್ಲಿ ಒಂದಾಗಿದೆ. ಇಲ್ಲಿ ಶ್ರೀಮರುಳಸಿದ್ಧೇಶ್ವರಸ್ವಾಮಿಯ ರಥೋತ್ಸವದ ಮರುದಿನ ವೈಶಾಖ ಶುದ್ಧ ಷಷ್ಠಿಯಂದು ಶಿಖರಕ್ಕೆ ಎಣ್ಣೆ ಎರೆಯುವ ಆಚರಣೆ ಪ್ರಚಲಿತದಲ್ಲಿದೆ. ಮೂವತ್ತು ಕಿಲೋಮೀಟರ್ ದೂರದಿಂದ ಉಜ್ಜಯಿನಿಗೆ ಜರ್ಮಲೆ ಪಾಳೇಗಾರರ ವಂಶಸ್ಥರು ಕಾಲ್ನಡಿಗೆಯಲ್ಲಿ ಎಣ್ಣೆ ತುಂಬಿದ ಕುಂಭಗಳನ್ನು ಹೊತ್ತು ತರುತ್ತಾರೆ. ಗ್ರಾಮ ಪ್ರವೇಶಿಸುತ್ತಿದ್ದಂತೆ ಮಂಗಳವಾದ್ಯಗಳೊಂದಿಗೆ ಮೆರವಣಿಗೆಯಲ್ಲಿ ಕುಂಭ ಹೊತ್ತವರನ್ನು ಸ್ವಾಗತಿಸಲಾಗುತ್ತದೆ. ಇವರು ೨೫ ಅಡಿ ಎತ್ತರವಿರುವ ಶಿಖರಕ್ಕೆ ತಂದ ಎಣ್ಣೆಯನ್ನು ಮೊದಲು ಎರೆಯುತ್ತಾರೆ. ನಂತರ ಹರಕೆ ಹೊತ್ತ ಭಕ್ತರು ಟನ್‌ಗಟ್ಟಲೆ ಎಣ್ಣೆ ಎರೆದು ಭಕ್ತಿ ಸಮರ್ಪಿಸುತ್ತಾರೆ.

ಡಾ. ಷಡಾಕ್ಷರಯ್ಯ ಆರ್.ಎಂ. ಅವರು ಸಂಗ್ರಹಿಸಿದ ಚಾರಿತ್ರಿಕ ಹಿನ್ನೆಲೆಯ ಪ್ರಕಾರ ಕ್ರಿ.ಶ. ೧೦೭೫-೧೧೩೭ರವರೆಗೂ ಈ ಭಾಗದಲ್ಲಿ ರಾಜ್ಯಭಾರ ಮಾಡಿದ್ದ ಕಲ್ಯಾಣ ಚಾಲುಕ್ಯರ ಆರನೇ ವಿಕ್ರಮಾದಿತ್ಯ ಈ ದೇವಸ್ಥಾನ ಕಟ್ಟಿಸಿದನೆಂದು ಹಾಗೂ ಅಮರಶಿಲ್ಪಿ ಜಕಣಾಚಾರಿ ಈ ದೇವಸ್ಥಾನದ ನಿರ್ಮಾತೃ ಎಂಬುದು

ಇಲ್ಲಿಯ ಶಾಸನಗಳಿಂದ ತಿಳಿದುಬರುತ್ತದೆ. ಆರನೇ ವಿಕ್ರಮಾದಿತ್ಯನು ಚಾಲುಕ್ಯನಾಗಿದ್ದು, ಹೊಯ್ಸಳರೊಂದಿಗೆ ಕೌಟುಂಬಿಕ ಸಂಬಂಧವಿದ್ದ ಕಾರಣ ಇಲ್ಲಿಯ ಕಲೆಯಲ್ಲಿ ಚಾಲುಕ್ಯ ಮತ್ತು ಹೊಯ್ಸಳ ಎರಡು ರೀತಿಯಲ್ಲಿಯ ಸೂಕ್ಷ್ಮ ಕೆತ್ತನೆಗಳು ಕಂಡುಬರುತ್ತವೆ. "ಹಂಪಿ ಹೊರನೋಡು, ಉಜ್ಜಯಿನಿ ಒಳನೋಡು ಎಂಬ ಗಾದೆಯಂತೆ ಅಲ್ಲಿಯ ವಿಶಿಷ್ಟ ವಾಸ್ತುಶಿಲ್ಪ ಕಲೆಯು ವಿಭಿನ್ನ ಸಾಂಸ್ಕೃತಿಕ ಚಟುವಟಿಕೆಗಳನ್ನು ತಿಳಿಸುತ್ತಿವೆ.

ವಕ್ತೃಗಳ ಹೇಳಿಕೆಯ ಪ್ರಕಾರ ಜರ್ಮಲೆಯ ಪಾಳೇಗಾರರು ಬೇಟೆಯಾಡುವಾಗ, ಪೊದೆಯಲ್ಲಿ ಹೋಗುವ ಹಂದಿಗೆ ಬಾಣ ಬಿಟ್ಟರು. ಆ ಬಾಣ ಪೊದೆಯಲ್ಲಿ ಯೋಗ ಸಮಾಧಿಯಲ್ಲಿ ಕುಳಿತಿದ್ದ ಶ್ರೀ ಮರುಳಾರಾಧ್ಯ ಯತಿಯವರ ತಲೆಗೆ ತಾಗಿತ್ತು. ಅವರ ತಲೆಯಿಂದ ರಕ್ತ ಚಿಮ್ಮತೊಡಗಿತು. ಆಗ ರಾಜನು ನೆಟ್ಟ ಬಾಣವನ್ನು ಕಿತ್ತು ಗುರುವಿನ ಕೋಪಕ್ಕೆ ಕಾರಣವಾಗುತ್ತಾನೆ. ಗುರುವಿನ ನೆತ್ತಿಗೆ ಎಣ್ಣೆಹಾಕಿ ತಂಪು ಮಾಡುತ್ತಾನೆ. ಮುಂದೆ ಗುರುವಿತ್ತ ಶಾಪ ವಿಮೋಚನೆಗಾಗಿ ಅಂದಿನಿಂದ ಜರ್ಮಲೆ ವಂಶಸ್ಥರು ಶಿಖರಕ್ಕೆ ಎಣ್ಣೆ ಎರೆಯುವುದನ್ನು ಪಾಲಿಸಿಕೊಂಡು ಬಂದರು.

ಮಧ್ಯಪ್ರದೇಶದ ಕಾಳಿಕಾ ಉಜ್ಜಯನಿಯಲ್ಲಿ ವಿಕ್ರಮಾದಿತ್ಯ ರಾಜನು ಶನಿಯ ಪ್ರಭಾವಕ್ಕೆ ಒಳಗಾದಾಗ, ಇದೇ ಗುರುಗಳಿಂದ ಆಶೀರ್ವಾದ ಪಡೆದು ಕಷ್ಟ ಪರಿಹರಿಸಿಕೊಂಡನೆಂದು, ಶನಿಯ ಪ್ರಭಾವಕ್ಕೆ ಒಳಗಾದವರನ್ನು ರಕ್ಷಿಸುವ ಶಕ್ತಿ ಗುರುಗಳಿಗಿದೆ ಎಂದು ಜನ ನಂಬುತ್ತಾರೆ. ಶನಿಯ ಬಣ್ಣ ಹಾಗೂ ಶಿಖರದ ಬಣ್ಣ ಎರಡು ಕಪ್ಪು, ಕಾವಿ ಗುರುವಿನ ಸಂಕೇತ. ಈ ಹಿನ್ನೆಲೆಯಲ್ಲಿ ಶಿಖರಕ್ಕೆ ತೈಲಾಭಿಷೇಕ ಮಾಡುವುದರಿಂದ ಭಕ್ತರು ಶನಿಯ ಪ್ರಭಾವಕ್ಕೆ ಒಳಗಾಗಲಾರರು ಎನ್ನುವ ಪ್ರತೀತಿ ಇದೆ.

ಎಣ್ಣೆ ಮಜ್ಜನವು ದೈಹಿಕ ಆರೋಗ್ಯಕ್ಕೆ ತಂಪು ನೀಡುವುದಲ್ಲದೆ, ದೇಹಕ್ಕೆ ಕಾಂತಿಯನ್ನು ನೀಡಿ, ಚರ್ಮ ಸುಕ್ಕಾಗದಂತೆ ಕಾಪಾಡುತ್ತದೆ. ಜನಪದರ ದೃಷ್ಟಿಯಲ್ಲಿ ದೈವಕ್ಕೂ ಮಾನವ ಸಂಬಂಧಕ್ಕೂ ವ್ಯತ್ಯಾಸವಿಲ್ಲ. ತಾವು ನಂಬಿದ ದೈವ ತಮ್ಮಂತೆ ಆರೋಗ್ಯಪೂರ್ಣವಾಗಲೆಂಬ ಆಶಯ ಆಚರಣೆಯಲ್ಲಿದೆ.

ಈ ಸುಂದರ ಐತಿಹಾಸಿಕ ದೇಗುಲ ಅಪಾರ ಸೂಕ್ಷ್ಮಕಲೆ ಮತ್ತು ಕೆತ್ತನೆಯನ್ನು ಒಳಗೊಂಡಿದೆ. ಬಳಪದ ಕಲ್ಲಿನಿಂದ ನಿರ್ಮಾಣಗೊಂಡಿದ್ದು, ಬಿಸಿಲಿಗೆ ಬಿರುಕುಬಿಟ್ಟು ಹಾಳಾಗದಿರಲೆಂದು ಹಾಗೂ ಶಿಲೆಯ ಸಂರಕ್ಷಣೆಗೆ ಎಣ್ಣೆ ಅಗತ್ಯತೆ ಇದೆ ಎಂಬುದು ಆಚರಣೆ ಉದ್ದೇಶವಾಗಿರಲು ಸಾಧ್ಯವಿದೆ. ಇತ್ತೀಚೆಗೆ ಅಪಾರ ಎಣ್ಣೆಮಜ್ಜನ ದಿಂದ ಸೂಕ್ಷ್ಮ ಕೆತ್ತನೆ ಹಾಗೂ ಶಿಲೆಯ ಮೂಲಸ್ವರೂಪ ಕಳೆದುಕೊಂಡು ಕಪ್ಪುಬಣ್ಣಕ್ಕೆ ಬದಲಾಗುತ್ತಿದೆ. ಅಗತ್ಯತೆಗೆ ತಕ್ಕಷ್ಟು ಎಣ್ಣೆಮಜ್ಜನದಿಂದ ಶಿಲ್ಪಕಲೆಯ ಮೂಲ ಸ್ವರೂಪ ಉಳಿಯುತ್ತದೆಂಬುದನ್ನು ಗಮನಿಸಬೇಕಾಗಿದೆ.

೩.೨.೮. ವಟ್ಲು ಬಡಿಯುವ ಆಚರಣೆ

ದಕ್ಷಿಣಾಯನ ವರ್ಷ ಋತು ಶ್ರಾವಣಮಾಸದ ಕೃಷ್ಣ ಪಕ್ಷದ ಎರಡನೆಯ ದಿನದಂದು ಶ್ರೀಕೃಷ್ಣ ಜನ್ಮಾಷ್ಟಮಿ ಆಚರಣೆ ಪ್ರಚಲಿತದಲ್ಲಿದೆ. ಇದು ಭಾರತದಾದ್ಯಂತ ಆಚರಿಸಲ್ಪಡುತ್ತದೆ. ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲೂಕಿನ ರಾಮನಗರ ಹಾಗೂ ಹೊಸಪೇಟೆ ತಾಲೂಕಿನ ಮರಿಯಮ್ಮನಹಳ್ಳಿಯಲ್ಲಿ

ಶ್ರೀಕೃಷ್ಣ ಜನ್ಮಾಷ್ಟಮಿ ಹಿನ್ನೆಲೆಯಲ್ಲಿ ಅಂದು ವಟ್ಲು ಬಡಿಯುವ ಆಚರಣೆ ಇದೆ. ಅಂದು ಮಣ್ಣಿನಿಂದ ತಯಾರಿಸಿದ ಕೃಷ್ಣನ ಮೂರ್ತಿ ಪೂಜಿಸಲ್ಪಡುವುದು. ಅಂದು ಸಾಯಂಕಾಲ ೨೦ ರಿಂದ ೩೦ ಅಡಿ ಎತ್ತರದ ಕಟ್ಟಿಗೆಯ ನುಣುಪಾದ ಕಂಬವನ್ನು ನಿಲ್ಲಿಸಿ, ಅದರ ಮೇಲ್ತುದಿಯಲ್ಲಿರುವ, ಚಕ್ರಾಕೃತಿಗೆ ಹಾಲು, ಮೊಸರು, ಬೆಣ್ಣೆಯ ಗಡಿಗೆಗಳನ್ನು ಕಟ್ಟಿರುತ್ತಾರೆ. ಈ ರೀತಿ ನಿರ್ಮಿಸಿದ ಕಂಬ ತೀರ ನುಣುಪಾಗಿದ್ದು, ಸುಲಭವಾಗಿ ಏರುವಂತಿಲ್ಲ. ಕಂಬ ಏರುವವರು ದಾಸರ ಮನೆತನದವರು. ಏರುವಾಗ ಎಲ್ಲಾ ಕಡೆಯಿಂದಲೂ ಬಣ್ಣದ ನೀರನ್ನು ಎರಚುತ್ತಾರೆ. ಏರಿದ ವ್ಯಕ್ತಿ ಬಣ್ಣದ ನೀರಿನಿಂದ ತಪ್ಪಿಸಿಕೊಂಡು ಕಂಬ ಏರಿ ಚಕ್ರಾಕೃತಿಗೆ ಕಟ್ಟಲಾಗಿದ್ದ, ಹಾಲು, ಮೊಸರು, ಬೆಣ್ಣೆಗಳ ಗಡಿಗೆಗಳನ್ನು, ಮಜ್ಜಿಗೆ ಕಡಗೋಲಿನಿಂದ ಪಟಪಟನೆ ಒಡೆಯುತ್ತಾನೆ. ನಂತರ ಅದರ ಜೊತೆಗಿದ್ದ ಚಕ್ಕುಲಿ, ವಡೆಗಳನ್ನು ತಿನ್ನುವುದರ ಮೂಲಕ ವಿಜಯೋತ್ಸವ ಆಚರಿಸುತ್ತಾರೆ. ಇದು ಅಪ್ಪಟ ಜಾನಪದ ಶೈಲಿಯ ಆಚರಣೆಯಂತಿದೆ.

ಮನೋರಂಜನಾತ್ಮಕವಾದ ಶ್ರೀಕೃಷ್ಣನ ಬಾಲ್ಯದ ವರ್ತನೆಗಳ ಅನುಕರಣೆಯಿದೆ. ಕಂಬ ಏರುವ ದಾಸಪ್ಪನ ವಂಶಜರು ವೈಷ್ಣವ ಪಂಥದ ಅನುಯಾಯಿಗಳಾಗಿದ್ದಾರೆ. ಈ ಆಚರಣೆಯಲ್ಲಿ ಪಾಲ್ಗೊಳ್ಳುವ ಸುಮಾರು ವೈಶ್ಯ ಮತ್ತು ಬ್ರಾಹ್ಮಣ ಕುಟುಂಬಗಳ ಮೂಲನೆಲೆ ಹಿಂದೆ ನಾರಾಯಣದೇವರ ಕೆರೆಯಾಗಿತ್ತು. ತುಂಗಭದ್ರಾ ಜಲಾಶಯದ ಹಿನ್ನೀರಿನಲ್ಲಿ ಊರು ಮುಳುಗಿದಾಗ ಈ ಕುಟುಂಬಗಳು ರಾಮನಗರ ಮತ್ತು ಮರಿಯಮ್ಮನ ಹಳ್ಳಿಯಲ್ಲಿ ಪುರ್ನವಸತಿ ಪಡೆದಿವೆ. ಇವರು ಹೆಚ್ಚಾಗಿ ತೆಲುಗು ಭಾಷಿಕರಾಗಿದ್ದಾರೆ. ವಟ್ಲು ಶಬ್ದ ತೆಲುಗು ಮೂಲದ್ದಾಗಿದೆ. ಇದು ಕನ್ನಡದಲ್ಲಿ 'ನೆಲುವು' ಎಂಬ ಅರ್ಥ ಪಡೆದಿದೆ. ಇದನ್ನು ಹಗ್ಗದಿಂದ ತಯಾರಿಸ ಲಾಗಿದ್ದು, ಒಳಮನೆಯ ಮೇಲ್ಛಾವಣಿಗೆ ತೂಗು ಹಾಕಿರುತ್ತಾರೆ. ಇದರಲ್ಲಿ ಹೈನು ಹಾಗೂ ಅಡುಗೆ ಪದಾರ್ಥಗಳನ್ನು ಗಡಿಗೆಗಳಲ್ಲಿ ತುಂಬಿಸಿ ಇಡುತ್ತಾರೆ. ಹೆಚ್ಚು ಗಾಳಿ ಇರುವ ಸ್ಥಳವಾಗಿದ್ದರಿಂದ ಆಹಾರ ಕೆಡಲಾರದು. ಬೆಕ್ಕು, ಕ್ರಿಮಿ, ಕೀಟಗಳಿಂದ ಆಹಾರ ಪದಾರ್ಥವನ್ನು ಸಂರಕ್ಷಿಸಿಡಲು ಸುಲಭ ಲಭ್ಯ ಸಾಧನವಿದು. ಗಡಿಗೆ, ನೆಲುವು, ಕಡಗೋಲು ಹೈನುಪದಾರ್ಥಗಳು ಪಶುಪಾಲಕ ಸಂಸ್ಕೃತಿಯನ್ನು ಸಂಕೇತಿಸುತ್ತವೆ. ಅವು ಆಚರಣೆಯಲ್ಲಿ ಪ್ರಮುಖ ವಸ್ತುಗಳಾಗಿ ಬಳಸಲ್ಪಡುತ್ತವೆ. ಈ ವಸ್ತುಗಳ ಮೇಲಿನ ಆಪ್ಯಾಯಮಾನತೆ ಹಾಗೂ ಜನಪದರ ಆಚರಣೆಗಳಲ್ಲಿಯ ಸರಳತೆ ಇಲ್ಲಿ ಅಭಿವ್ಯಕ್ತಗೊಂಡಿದೆ.

ವಕ್ತೃಗಳ ಹೇಳಿಕೆಯ ಪ್ರಕಾರ "ವಿಜಯನಗರ ಕಾಲದ ಪಾಳೇಗಾರನಾಗಿದ್ದ ಸೋಮಶೇಖರ ನಾಯಕನ ಕಾಲದಿಂದಲೂ ನಾರಾಯಣದೇವರ ಕೆರೆಯಲ್ಲಿ ವಟ್ಲು ಬಡಿಯುವ ಆಚರಣೆ ಇತ್ತು. ಅದು ರಾಜ ಪ್ರಭುತ್ವದ ಕಾಲದಲ್ಲಿ ನಡೆದ ವೈಷ್ಣವ ಪಂಥದ ಆಚರಣೆಯಾಗಿತ್ತು". ಇಂದು ಇತರ ಸಮುದಾಯದವರ ಪಾಲ್ಗೊಳ್ಳುವಿಕೆ ಯಿದೆ. ಗ್ರಾಮ ಇಬ್ಭಾಗವಾಗಿದ್ದರೂ, ಎರಡೂ ಗ್ರಾಮಗಳಲ್ಲಿ ವಟ್ಲು ಬಡಿಯುವ ಆಚರಣೆ ಮಾತ್ರ ತನ್ನ ಮೂಲಸ್ವರೂಪವನ್ನು ಉಳಿಸಿಕೊಂಡಿದೆ. ಹೈನುಪದಾರ್ಥಗಳು ಪಶುಪಾಲಕ ವರ್ಗದ ಸಮೃದ್ಧಿಯ ಮೂಲಗಳು. ಈ ಸಮುದಾಯದ ದೈವ ಶ್ರೀಕೃಷ್ಣನಾಗಿರುವನು.

ಬಣ್ಣದ ನೀರನ್ನು ಎರಚುತ್ತಾ, ದಾಸಪ್ಪನನ್ನು ಕಂಬ ಹತ್ತಲಾಗದಂತೆ ತಡೆಯುವುದು, ಸತತ ಪ್ರಯತ್ನದಿಂದ ಅಂತಿಮ ಗುರಿ ತಲುಪಿ ಯಶಸ್ವಿಯಾಗುವುದು, ಇವೆಲ್ಲವೂ "ಕಷ್ಟಪಟ್ಟರೆ ಸುಖವುಂಟು" ಎನ್ನುವ ಜನಪದರ

ನಾಣ್ಣುಡಿಯನ್ನು ಸಮರ್ಥಿಸುತ್ತವೆ. ಜನಪದರ ಬದುಕಿನ ಸಂಘರ್ಷ, ಹೋರಾಟ, ಶೌರ್ಯ ಪ್ರದರ್ಶನಗಳನ್ನೊಳಗೊಂಡ ಮನೋರಂಜನಾತ್ಮಕ ಆಚರಣೆಯಿದು. ಆಧುನಿಕತೆಯ ಸೆಳೆತಕ್ಕೆ ಬಲಿಯಾಗದೇ ಶಿಷ್ಟತೆಯನ್ನು ಬದಿಗಿರಿಸಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಎಲ್ಲ ಸಮುದಾಯದವರ ಪಾಲ್ಗೊಳ್ಳುವಿಕೆಯಿಂದ ಆಚರಿಸಲ್ಪಡುತ್ತದೆ.

೩.೩. ಅಗ್ನಿ ಸಂಬಂಧಿ ಆಚರಣೆ

ಪ್ರಕೃತಿಯಲ್ಲಿನ ಗುಡುಗು, ಮಿಂಚು, ಮಳೆ, ಬೆಂಕಿ, ಗಾಳಿಗಿಚ್ಚು, ಬಿರುಗಾಳಿಗಳಿಂದ ಭಯಭೀತನಾದ ಮಾನವ, ಯಾವುದೋ ಕಾಣದ ಶಕ್ತಿಯಿರಬೇಕೆಂದು ನಂಬಿದ. ಬೆಂಕಿಯ ಬಳಕೆ ಹೊಳೆದಾಗಿನಿಂದ ಆಹಾರವನ್ನು ಬೇಯಿಸಿ ತಿನ್ನಲು ಪ್ರಾರಂಭಿಸಿದ. ಬೆಂಕಿಯಲ್ಲಿ ಮಾಡಿದ ಆಹಾರ ಅವನಿಗೆ ಬೇರೆಯೇ ರುಚಿಯನ್ನು ತೋರಿರಬೇಕು. ಬೆಂಕಿ ಆತನ ಬಳಿ ಇದ್ದ ಕಾರಣ, ಪ್ರಾಣಿಗಳು ಸಮೀಪಕ್ಕೆ ಬರುತ್ತಿರಲಿಲ್ಲ. ಅವನ ನೆಮ್ಮದಿಯ ಬದುಕಿಗೆ ಬೆಂಕಿಯೊಂದು ಸಾಧನವಾಯಿತು. ತನಗೆ ಅನುಕೂಲವಾದ ಹಾಗೂ ಭಯಭೀತಗೊಳಿಸಿದ ಶಕ್ತಿಯನ್ನು ಆರಾಧಿಸಿದ, ಆಚರಣೆಗಳಿಂದ ಸಂಪ್ರೀತಗೊಳಿಸಿದ. ಹೀಗೆ ಮಾನವನ ಬದುಕು ಚೈತನ್ಯಪೂರ್ಣವಾದದ್ದು, ಅಗ್ನಿ ಆವಿಷ್ಕಾರ ನಂತರ ಇದು ಮಾನವನ ಮುಂದಿನ ಸಾಧನೆಗೆ ನಾಂದಿಯಾಯಿತು.

"ಅಗ್ನಿಯನ್ನು ಆರಾಧನೆಯ ಕೇಂದ್ರವಾಗಿರಿಸಿಕೊಂಡವರು ಆರ್ಯರು ಅಥವಾ ವೈದಿಕರು. ಅವರಿಗೆ ದೈವ ಸಾಕ್ಷಾತ್ಕಾರವಾಗುವುದು ಅಗ್ನಿಯ ಮೂಲಕ. ಅಗ್ನಿಯು ಇಹ ಮತ್ತು ಪರಗಳನ್ನು ಬೆಸೆದಿರುವ ಕೊಂಡಿಯಾಗಿತ್ತು".[೩೭] ಇಂದಿಗೂ ವೈದಿಕ ಪರಂಪರೆಯ ಪ್ರಕಾರ ಸೃಷ್ಟಿಯು ಅಧಿದೈವವಾದ ಅಗ್ನಿ ಅಗ್ನಿದೇವನಾಗಿ ಆರಾಧಿಸಲ್ಪಡುತ್ತಿದೆ. ಆರ್ಯಪೂರ್ವ ಕೃಷಿ ಜನಾಂಗಗಳ ಪೂಜಾವಿಧಾನಗಳಲ್ಲಿ ಅಗ್ನಿ ಪ್ರಾಶಸ್ತ್ಯ ಪಡೆದಿರಲಿಲ್ಲ. ಆದರೆ ಜನಪದರ ಆಚರಣೆಗಳಲ್ಲಿ ಅಗ್ನಿಯು ವಸ್ತು ಮತ್ತು ಜೀವ ಎರಡನ್ನೂ ಪರಿಶುದ್ಧಗೊಳಿಸುವ ವಸ್ತುವಾಗಿ ಚಿತ್ರಣಗೊಂಡಿದೆ. ಅಗ್ನಿಗೆ ತನ್ನ ಇರುವಿಕೆಯನ್ನು ಪ್ರಕಟಿಸಲು ಯಾವುದಾದರೊಂದು ವಸ್ತುವಿನ ಆಸರೆ ಬೇಕು. ಅಗ್ನಿ ಸೃಷ್ಟಿಗೆ ಒಂದು ಸ್ಫೋಟಕತತ್ವ ಇದ್ದೇ ಇರುತ್ತದೆ. ಈ ಕಾರಣದಿಂದಲೇ ಜಗಳ, ಹೊಡೆದಾಟ, ಹಗೆತನವನ್ನು ಅಗ್ನಿಗೆ ಸಮೀಕರಿಸಿರಬೇಕು.

ಅಗ್ನಿಯು ಕರಗಿಸುವ, ಪರಿಷ್ಕರಿಸುವ, ಶುದ್ಧೀಕರಿಸುವ, ವಸ್ತುವಾಗಿ ಆಚರಣೆಗಳಲ್ಲಿ ಗುರುತಿಸಲ್ಪಟ್ಟಿದೆ. ಬದುಕಿನ ಜೊತೆ ರಕ್ಷಣೆ ನೀಡುವ ಗುಣದಿಂದ ಜ್ಯೋತಿ ದೈವತ್ವಕ್ಕೇರಿ ಜ್ಯೋತೆಮ್ಮನಾಗಿ ಜನಪದರ ದೈವೀಭಾವಕ್ಕೆ ಭಾಜನವಾಗಿದೆ. ಜ್ಯೋತಿಯನ್ನು ಸಂರಕ್ಷಿಸುವ, ಆರಾಧಿಸುವ ಕ್ರಮ ಹಿಂದಿನಿಂದಲೂ ನಡೆದುಬಂದಿದೆ. ಎಲ್ಲಾ ಶುಭ ಕಾರ್ಯಗಳಲ್ಲಿ ಕಳಶ, ಪಂಜಿನ ರೂಪದಲ್ಲಿ ಶುಭ, ಸೌಮ್ಯ, ಶಾಂತಿ, ವಿಜಯದ ಸಂಕೇತವಾಗಿ ಬಳಸಲ್ಪಡುತ್ತದೆ. ದೀಪಾವಳಿಯಲ್ಲಿ ಬೆಳೆಯ ಸಮೃದ್ಧಿಗಾಗಿ ಹಾಗೂ ಕೀಟಗಳ ನಾಶಕ್ಕಾಗಿ ದೀಪ ಬೆಳಗಿಸುತ್ತಾರೆ. ಸಂಕ್ರಾಂತಿಯಲ್ಲಿ ಜಾನುವಾರುಗಳನ್ನು ಉರಿಯುವ ಬೆಂಕಿಯಲ್ಲಿ ಹಾಯಿಸಲಾಗುತ್ತದೆ. ಇವೆಲ್ಲ ಋತು ಪರಿವರ್ತನೆಯ ಸಮಯದಲ್ಲಿ ಆಚರಣೆಗಳ ಮುಖೇನ ಅಗ್ನಿಯನ್ನು ಬೆಳಗಿಸುವ ಕ್ರಮಗಳಾಗಿವೆ. ಕಾರ್ತೀಕ ಮಾಸದಾದ್ಯಂತ ಬೆಳಕಿನ ದೇವತೆಯಾದ ಗೌರಿಯನ್ನು ಕೊಂತೆಮ್ಮನೆಂದು, ಪ್ರತೀ ರಾತ್ರಿ ವಿವಿಧ ಆರತಿ ಬೆಳಗಿ ಪೂಜಿಸುತ್ತಾರೆ. ಈ ಸಮಯದಲ್ಲಿ ಒರಳುಕಲ್ಲು, ಬೀಸುವಕಲ್ಲು, ರುಬ್ಬುಗುಂಡುಗಳೂ ಸಹ ಕೊಂತಿಯ ಪ್ರತೀಕವೆಂದು ಪೂಜಿಸಲ್ಪಡುತ್ತವೆ. ದೇವರಿಗೆ ಹರಕೆ ಹೊತ್ತು ನಿಗಿನಿಗಿ ಉರಿಯುವ ಕೊಂಡದಲ್ಲಿ ಬರಿಗಾಲಲ್ಲಿ

ನಡೆಯುವುದು, ಕೆಂಡದ ರಾಶಿಯಲ್ಲಿ ಕೈಹಾಕಿ ತೂರುವುದು, ಭಕ್ತಿಯ ಪರಾಕಾಷ್ಠೆಯೊಂದಿಗೆ ಆಚರಣೆಗಳ ಮೂಲಕ ವ್ಯಕ್ತಿ ತನ್ನ ಕೋಪ ತಾಪಗಳನ್ನು ಶಮನಗೊಳಿಸಿಕೊಳ್ಳುವ ಆಶಯಗಳನ್ನು ಕಾಣಲಾಗುತ್ತದೆ. ಇಂದಿಗೂ ಬುಡಕಟ್ಟು ಸಮುದಾಯಗಳಲ್ಲಿ ರಾತ್ರಿ ನಡೆಯುವ ಆಚರಣೆಗಳಲ್ಲಿ ದೇವರ ಮುಂದೆ ಬೆಂಕಿಯನ್ನು ಉರಿಸಿ ಬೆಳಕು ಮಾಡುತ್ತಾರೆ. ತಮ್ಮ ದೇವರು 'ಬೆಂಕಿ, ಬೆಳಕಿನ ದೇವರು'; ಬೇರೆ ಯಾವುದೇ ರೀತಿಯ ಬೆಳಕು ದೇವರ ಮುಂದೆ ಬರಬಾರದೆಂಬ ನಿಷೇಧವಿದೆ. ಇಮಾಮ್ ಹುಸೇನರು ಯುದ್ಧಕ್ಕೆ ಹೊರಡುವ ಮುನ್ನ ಶಮ (ಪಂಜು) ಹಚ್ಚಿದ್ದರೆಂದು, ಇಂದಿಗೂ ಮೊಹರಂ ಆಚರಣೆಯಲ್ಲಿ ಮಧ್ಯರಾತ್ರಿಯಲ್ಲಿ ಶಮಹಚ್ಚುವ ವಾಡಿಕೆಯಿದೆ. ಹೀಗೆ ಆಚರಣೆಯ ಮೂಲಕ ಅಗ್ನಿಯು ಜನಪದರಿಗೆ ಅನನ್ಯವಾಗಿದೆ.

ಜ್ಯೋತಿಯ ಮೂಲರೂಪ ಅಗ್ನಿಯಾಗಿದ್ದರೂ ಇದು ಒಂದು ಭೌತಿಕ ವಸ್ತು. ಅದರ ಸ್ವಾಭಾವಿಕ ಗುಣಗಳಿಂದ ಕೆಲವು ಸಾರಿ ಕೆಡುಕಿನ ಚಿಹ್ನೆಯಾಗಿ ಪರಿಭಾವಿಸಲ್ಪಟ್ಟಿದೆ. 'ಯಾತಕ್ಕೆ ಮಳೆ ಹೋದವೋ ಶಿವ ಶಿವ, ಬೆಂಕಿ ಮಳೆ ಸುರಿಸಿ ಕೊಲ್ಲಲು ಬಾರದೆ' ಎನ್ನುವ ಜನಪದ ಹಾಡಿನಲ್ಲಿ ಅಗ್ನಿಯು ವಿನಾಶವನ್ನು, ಸಾವನ್ನು, ದುಷ್ಟ ಗುಣಗಳನ್ನು ಪಡೆದು ಮಾನವ ವಿರೋಧಿ ನೆಲೆಯಲ್ಲಿ ಚಿತ್ರಣಗೊಂಡಿದೆ. 'ಅಗ್ನಿ ಮೂಲೆಯಲ್ಲಿ ಮಿಂಚಿದರೆ ಮಳೆಯಾಗುವುದಿಲ್ಲ'. 'ಮಳೆಯಲ್ಲಿ ಬೆಂಕಿ ಕೇರಿದರೆ ಮಳೆ ಬರುವುದಿಲ್ಲ' ಎಂಬ ನಿಷೇಧಾತ್ಮಕ ನಂಬಿಕೆಗಳಲ್ಲಿ ಬೆಂಕಿ ಅಪಶಕುನದ ಒಂದು ಪ್ರಧಾನ ಆಶಯವಾಗಿ ಕಂಡು ಬಂದಿದೆ. ಶುಭಕಾರ್ಯಗಳಿಗೆ ಹೊರಟಾಗ ಬೆಂಕಿ ಕಾಣಿಸುವುದು ಅಶುಭ ಸೂಚಕವಾಗಿದೆ. ಜನಪದರ ಅನೇಕ ಕಾಯಿಲೆಗಳಿಗೆ ಅಗ್ನಿ ಕಾರಣವೆಂಬ ನಂಬಿಕೆಯಿದೆ. ಬೆಳೆಗಳಿಗೆ ತಗಲುವ ರೋಗಗಳಿಗೆ ಬೆಂಕಿ ರೋಗವೆಂಬ ಹೆಸರು ಇಂದಿಗೂ ಪ್ರಚಲಿತದಲ್ಲಿದೆ. ಅಗ್ನಿಯ ಸುಡುವ ಗುಣ, ನಾಶಕ್ಕೂ ಹಾಗೂ ಶುದ್ಧೀಕರಣಕ್ಕೂ ಆಗಬಹುದಾಗಿದೆ. ಮದುವೆಗೆ ಅಗ್ನಿ ಸಾಕ್ಷಿಯಾದರೆ, ಮನೆಯ ಮುಂದೆ ಉರಿಯುವ ಬೆಂಕಿ, ಸಾವನ್ನು ಸೂಚಿಸುತ್ತದೆ. "ಜೀವದಾತೃವಾದ ಅಗ್ನಿಯನ್ನು ಮಾನವನ ಜೀವದೊಂದಿಗೆ ಅಭೇದ್ಯಗೊಳಿಸಲಾಗಿದೆ ಮತ್ತು ಮಾನವನ ಸಾವಿನಲ್ಲಿ ಜೀವದೊಳಗಿನ ಅಗ್ನಿಯನ್ನು ಪರಿತ್ಯಜಿಸಲಾಗಿದೆ (ಪುರುಷೋತ್ತಮ ಬಿಳಿಮಲೆ, ೨೦೦೮, ಪು. ೯೮). ಹೀಗೆ ಆಚರಣೆಗಳ ಮೂಲಕ ಅಗ್ನಿ ಜನಪದರ ಬದುಕಿನಲ್ಲಿ ಅನುಸಂಧಾನಕ್ಕೆ ಪಾತ್ರವಾಗಿದೆ.

ಜನಪದರ ಬೈಗಳಲ್ಲಿಯೂ ಅಗ್ನಿಯ ಪ್ರಸ್ತಾಪವಿದೆ. ಚಾಡಿ, ಸೇಡು, ದುರಾಸೆ, ಮೋಸ ಇತ್ಯಾದಿ ಕೆಡುಕಿನ ಗುಣಗಳ ಜೊತೆ ಸಮೀಕರಣಗೊಂಡಿದೆ. ಹೊಟ್ಟೆ ಉರಿ, ಕಿಚ್ಚಿಕ್ಕು, ಹೊಟ್ಟೆಕಿಚ್ಚು ಎಂಬ ಪದಗಳ ಬಳಕೆ ಕೆಡುಕಿನ ಸಂಕೇತಗಳಾಗಿವೆ. ಹೀಗೆ ಅಗ್ನಿ ಜನಪದರ ಬದುಕಿನಲ್ಲಿ ನಿರಾಕರಣೆಯ, ಸಂಘರ್ಷದ ವಿಭಿನ್ನ ನೆಲೆಗಳಲ್ಲಿ ಚಿತ್ರಿತಗೊಂಡಿದೆ. ಕೃಷಿ ಸಂಬಂಧಿ ದೇವತೆಗಳಿಂದ ನಿರಾಕರಿಸಲ್ಪಟ್ಟಿರುವ ಬೆಂಕಿಗೆ ಅದು ಹೊಂದಿದ ನಾಶಪಡಿಸುವ ಸಹಜ ಗುಣವೇ ಕಾರಣವಾಗಿರಲು ಸಾಧ್ಯವಿದೆ. ಕೊಂಡ ಹಾಯುವ ಆಚರಣೆಯಲ್ಲಿ ಕೊಂಡಕ್ಕೆ ಇಳಿಯುವ ಮುನ್ನ ತೀರ್ಥವನ್ನು ಅಗ್ನಿಕುಂಡಕ್ಕೆ ಚಿಮುಕಿಸುವುದು ಸಂಪ್ರದಾಯವಾಗಿದೆ. ಇದು ಅಗ್ನಿಯಿಂದಾಗುವ ಅಪಾಯವನ್ನು ನೀರಿನಿಂದ ನಿವಾರಿಸಬಹುದೆಂಬ ರಕ್ಷಣಾತ್ಮಕ ತಂತ್ರವನ್ನು ಒಳಗೊಂಡ ನಂಬಿಕೆ. ಹೀಗೆ ಅಗ್ನಿಯು ಹಲವಾರು ಆಚರಣೆ, ನಂಬಿಕೆಗಳಲ್ಲಿ ಜನಪದರ ಜೀವನದಲ್ಲಿ ಅವಿನಾಭಾವ ಸಂಬಂಧ ಹೊಂದಿದೆ.

೩.೩.೧. ದೊಡ್ಡ ಗೌರಿ ಹುಣ್ಣಿಮೆ (ಕೊಂತಿ ಪೂಜೆ)

ಕೊಂತಿಪೂಜೆ ಉತ್ತರ ಕರ್ನಾಟಕದಲ್ಲಿ ಕಂಡುಬರುವ ವಿಶೇಷ ಆಚರಣೆ. ರಾಜ್ಯದ ಇತರ ಪ್ರದೇಶಗಳಿಗಿಂತ ಬಳ್ಳಾರಿ ಜಿಲ್ಲೆಯಲ್ಲಿ ಸ್ವಲ್ಪ ಭಿನ್ನತೆಯೊಂದಿಗೆ ಆಚರಿಸಲ್ಪಡುತ್ತದೆ. ದೊಡ್ಡಗೌರಿ ಹುಣ್ಣಿಮೆ ಹಬ್ಬವನ್ನು ಕೊಂತೆಮ್ಮನ ಹಬ್ಬವೆಂತಲೂ ಕರೆಯುತ್ತಾರೆ. ಹಡಗಲಿ, ಹಗರಿಬೊಮ್ಮನಹಳ್ಳಿ ಭಾಗಗಳಲ್ಲಿ ಹಟ್ಟಿ ಹಾಕುವ ಸಂಪ್ರದಾಯವಿದೆ. ಇದು ದೀಪಾವಳಿ ಅಮವಾಸ್ಯೆಯ ನಂತರ ಬರುವ ಕಾರ್ತೀಕ ಪೌರ್ಣಿಮೆಯಂದು ಆಚರಿಸಲ್ಪಡುತ್ತದೆ. ವಿಶೇಷವಾಗಿ ಸಗಣಿಯಿಂದ ಹಟ್ಟಿ ಹಾಕುತ್ತಾರೆ. ದುಂಡಾದ ಐದು ಗುರ್ಜಿಗಳನ್ನು ಮಾಡಿ ಶಿವನ ಪ್ರತೀಕವೆಂದು ಹಿರೆಹಟ್ಟಿ ಹಾಕುತ್ತಾರೆ. ಲಿಂಗರೂಪದ ಐದು ಗುರ್ಜಿಗಳನ್ನು ಮಾಡಿ ಪಾರ್ವತಿಯ ಪ್ರತೀಕವೆಂದು ಚಿಕ್ಕಹಟ್ಟಿ ಹಾಕುತ್ತಾರೆ. ಫಲವತ್ತತೆಯ ಜೀವಾಳವಾದ ಸಗಣಿಯು ಜನಪದರ ಆಚರಣೆಯಲ್ಲಿ ದೈವವಾಗಿ ಪೂಜಿಸಲ್ಪಡುತ್ತದೆ. ಐದು ಗುರ್ಜಿಗಳು ಐವರು ಪಾಂಡವರನ್ನು ಸಂಕೇತಿಸುತ್ತವೆ. ಅಂಗಳ ತಲಬಾಗಿಲು, ಬೀಸುವ ಕಲ್ಲು, ಹೊಸ್ತಿಲುಗಳಿಗೆ ಗುರ್ಜಿಗಳನ್ನು ಇಟ್ಟು ಪೂಜಿಸುತ್ತಾರೆ. ಇವು ಗೌರಿಯ ಪ್ರತೀಕ. ಕೊಂತಿ ಸುಲಭ ಲಭ್ಯವಾದ ಎಕ್ಕ, ಲಕ್ಕಲಿ, ಬಂದರಕಿ ಹೂಗಳಿಂದ ಪೂಜಿಸಲ್ಪಡುವುದು ಜನಪದರ ಆಚರಣೆಯಲ್ಲಿರುವ ಸರಳತೆಯ ಸೂಚಕ. ಹಟ್ಟಿ ಹಾಕಿದ ದಿನ ಮನೆಯಲ್ಲೆಲ್ಲ ಹೂ ಚೆಲ್ಲುತ್ತಾರೆ. ಆ ದಿನ ಕಸ ಹೊಡೆಯಬಾರದೆಂಬ ನಿಷೇಧವಿದೆ. ಕಸದ ಜೊತೆ ಸಮೃದ್ಧಿಯ ಹುಲುಸು ಹೊರಟು ಹೋಗುವುದೆಂಬ ನಂಬಿಕೆಯೇ ಇದರ ಹಿನ್ನೆಲೆ. ಸಂಡೂರು, ಕೂಡ್ಲಿಗಿ, ಸಿರುಗುಪ್ಪ, ಬಳ್ಳಾರಿ ತಾಲೂಕುಗಳ ಗ್ರಾಮಾಂತರ ಪ್ರದೇಶಗಳಲ್ಲಿ ಐದು ಅಥವಾ ಒಂಬತ್ತು ದಿನ ಗೌರಿಗೆ ಆರತಿ ಬೆಳಗುತ್ತಾರೆ. ದೀಪಾವಳಿಯ ಕತ್ತಲೆ ಕಳೆದು ಹುಣ್ಣಿಮೆಯ ಬೆಳದಿಂಗಳ ಬೆಳಕಲ್ಲಿ ಆಚರಿಸುವ ಸ್ತ್ರೀ ಪ್ರಧಾನ ಆಚರಣೆ ಇದಾಗಿದೆ. ಇದು ಅಂಧಕಾರವನ್ನು ಕಿತ್ತೊಗೆದು ಹೊಸ ಬದುಕಿಗೆ ನಾಂದಿಯಾಗುವ ಬೆಳಕಿನ ಆಚರಣೆ. ಆದ್ದರಿಂದಲೇ ರೈತಾಪಿಗಳ ಜೀವನದಲ್ಲಿ ಮಹತ್ವದ ಸ್ಥಾನ ಪಡೆದಿರಬೇಕು. ಮಣ್ಣಿನಲ್ಲಿ ಅಥವಾ ಕಟ್ಟಿಗೆಯಲ್ಲಿ ಕೊಂತಿಮೂರ್ತಿ ತಯಾರಿಸುತ್ತಾರೆ. ಅರಿಶಿಣ, ಕುಂಕುಮ, ಬಣ್ಣ, ಒಡವೆ ಮತ್ತು ವಸ್ತ್ರಗಳಿಂದ ಅಲಂಕರಿಸುತ್ತಾರೆ. ತಂಗಡಿ ಹೂವಿನಿಂದ, ಎಕ್ಕದ ಹೂವಿನಿಂದ, ಸಕ್ಕರೆ ಆರತಿಯಿಂದ, ಪ್ರತಿದಿನ ರಾತ್ರಿ ಆರತಿ ಬೆಳಗುತ್ತಾರೆ. ತಮಟೆ, ಡೋಲು, ವಾದ್ಯಗಳೊಂದಿಗೆ, ಬಾಣ, ಬಿರುಸುಗಳನ್ನು ಸಿಡಿಸಿ, ತಡರಾತ್ರಿಯವರೆಗೂ ಮೆರವಣಿಗೆ ನಡೆಸಿ ನಂತರ ಕೆರೆ, ಹೊಳೆ, ಬಾವಿಗಳಲ್ಲಿ ವಿಸರ್ಜಿಸಲ್ಪಡುತ್ತದೆ. ಕೊಂತಿಯನ್ನು ಪೂಜಿಸಲು ಕಾರ್ತೀಕಮಾಸದ ದಿನಗಳು ಶುಭವೆಂಬ ಭಾವನೆ ಇದ್ದರೂ, ಆಚರಣೆ ಮಾತ್ರ ಇಷ್ಟೇ ದಿನ ನಡೆಸಿ ವಿಸರ್ಜಿಸಬೇಕೆಂಬ ನಿಯಮವಿಲ್ಲ. ಬಳ್ಳಾರಿ ಜಿಲ್ಲೆಯ ಎಲ್ಲಾ ಭಾಗಗಳಲ್ಲಿ ಏಕಸ್ವರೂಪದ ಆಚರಣಾಕ್ರಮ ಕಂಡುಬರುವುದಿಲ್ಲ. ಆಯಾ ಪ್ರದೇಶದ ಸಾಮಾಜಿಕ ಪರಿಸ್ಥಿತಿಯನ್ನು ಅವಲಂಬಿಸಿ, ತಮ್ಮ ಅನುಕೂಲತೆಗೆ ಅನುಗುಣವಾಗಿ ಆಚರಿಸುತ್ತಾರೆ. ದೀಪಾವಳಿಗಿಂತ ಗೌರಿ ಹುಣ್ಣಿಮೆಯಲ್ಲಿ ವಿಶೇಷವಾಗಿ ಹಟ್ಟಿ ಹಾಕುವುದು ಕ್ಷೇತ್ರಕಾರ್ಯದಿಂದ ಕಂಡುಬಂದಿದೆ. ಜನಪದ ಹಬ್ಬಗಳು ಅಮವಾಸ್ಯೆಗಿಂತ ಹೆಚ್ಚಾಗಿ ಹುಣ್ಣಿಮೆಯಂದು ಆಚರಿಸಲ್ಪಡುವುದು ಗಮನಾರ್ಹ. ರಾತ್ರಿಯ ಸಮಯದಲ್ಲಿ ನಡೆಯುವ ಆಚರಣೆಯಾದ್ದರಿಂದ ಹುಣ್ಣಿಮೆಯ ಬೆಳದಿಂಗಳು ಸೂಕ್ತವಾದುದು. ಬೆಳದಿಂಗಳು ಗ್ರಾಮವನ್ನು ಶುಭ್ರವಾಗಿಸಿ, ಆಚರಣೆಗೆ ಮೆರಗು ನೀಡುತ್ತದೆ.

ಗೌರಿ ಪ್ರತಿಷ್ಠಾಪನೆಯಾದ ದಿನವನ್ನು "ಕೊಂತೆಮ್ಮ ಗುಡಿದುಂಬುವಳೆಂಬ"[೬೯] ಪ್ರತೀತಿ ಇದೆ. ಗುಡಿದುಂಬು ಎಂಬ ಪದವನ್ನು ಈ ರೀತಿ ಅರ್ಥೈಸಬಹುದಾಗಿದೆ. "ವಿದ್ಯುತ್‌ಶಕ್ತಿ ಬಳಕೆಗೆ ಬರುವ ಮೊದಲು ಎಣ್ಣೆಯಿಂದ

ದೀಪಗಳನ್ನು ಉರಿಸಿ ಬೆಳಕು ಮಾಡಿಕೊಳ್ಳುತ್ತಿದ್ದ ಕಾಲದ ನುಡಿಗಟ್ಟು ಇಂದು ದೀಪ ತುಂಬುವುದಾಗಿದೆ".[೩೪] ದೀಪ ಆರಿಸು ಎಂಬುದು ಜನಪದರ ದೃಷ್ಟಿಯಲ್ಲಿ ಅಶುಭದ ಸಂಕೇತ. ಆಚರಣೆಯ ಸಮಯದಲ್ಲಿ ದೀಪ ಆರಬಾರದೆಂಬ ನಂಬಿಕೆಯು ಹಿಂದಿನಿಂದ ಬಂದಿದೆ. ಅಮವಾಸ್ಯೆಯ ಕತ್ತಲನ್ನು ಕಳೆದು ಹುಣ್ಣಿಮೆಯ ಬೆಳದಿಂಗಳ ಬೆಳಕಿನಲ್ಲಿ ಗೌರಿಗೆ ವಿವಿಧ ಆರತಿ ಬೆಳಗುವುದು, ಗೌರಿಯು ಬೆಳಕಿನ ಪ್ರತೀಕವೆಂಬುದನ್ನು ಸಂಕೇತಿಸುತ್ತದೆ. 'ಲಕ್ಷ್ಮಿ ಬರುವ ಹೊತ್ತಲ್ಲಿ ದೀಪ ಹಚ್ಚಬೇಕು' ಎನ್ನುವ ನಾಣ್ನುಡಿಯು ಸಂಜೆಯ ಸಮಯದಲ್ಲಿ ಮನೆಯಲ್ಲಿ ದೀಪವಿರಬೇಕೆಂಬುದನ್ನು ತಿಳಿಸುತ್ತದೆ. ವಕ್ತೃಗಳ ಹೇಳಿಕೆಯ ಪ್ರಕಾರ ಮನೆಯೊಳಗೆ ರಾತ್ರಿ ಆರಿಸಿದ ದೀಪದ ಜ್ವಾಲೆಗಳು ಗುಡಿಯಲ್ಲಿ ಸೇರಿ ತಮ್ಮ ತಮ್ಮ ಮನೆಯ ಪರಿಸ್ಥಿತಿಯನ್ನು ಹೇಳಿಕೊಂಡು, ಸಂಜೆಯಾಗುತ್ತಲೇ ಮನೆಗೆ ಮರಳುವವೆಂಬ ನಂಬಿಕೆ ಇದೆ. ಗುಡಿಯಿಂದ ಮರಳಿ ಬಂದ ಬೆಳಕಿನ ರೂಪದ ಲಕ್ಷ್ಮಿಯನ್ನು ದೀಪ ಉರಿಸಿ, ಬಾಗಿಲು ತೆಗೆದು ಸ್ವಾಗತಿಸುವ ರೀತಿಗಳೆಲ್ಲ ಗೌರಿ ಬೆಳಕಿನ ದೇವತೆಯೆಂಬುದನ್ನು ಸಮರ್ಥಿಸುತ್ತದೆ. ಕೊಂತಿಯು ಲಕ್ಷ್ಮಿಯ ಪ್ರತಿರೂಪ, ಸಮೃದ್ಧಿಯ ಸಂಕೇತ. ತಾಯ್ತನದ ಪ್ರತೀಕವಾಗಿರುವಳು. ಕೊಂತಿಯು ತಮ್ಮ ಮನೆಯ ಜಗುಲಿಗಳಲ್ಲಿ ಓಣಿಗಳಲ್ಲಿ, ಹಿತ್ತಲಲ್ಲಿ ಪ್ರತಿಷ್ಠಾಪನೆಗೊಳ್ಳುತ್ತಾಳೆ. ಹೀಗೆ ಸಾಮಾನ್ಯ ಹೂಗಳಿಂದ, ಸಾಮಾನ್ಯ ಸ್ಥಳಗಳಲ್ಲಿ ಪೂಜಿಸಲ್ಪಡುವ ಕೊಂತಿಯು ಜನಪದರ ದೃಷ್ಟಿಯಲ್ಲಿ ನಮ್ಮವಳೆಂಬ ಸಲುಗೆ, ಆತ್ಮೀಯ ಭಾವಗಳಿವೆ.

ಕೊಂತಿಪೂಜೆಗೆ ಬಳಸುವ ಎಕ್ಕ ಸೂರ್ಯನಿಗೆ ಪ್ರಿಯವಾದ ಸಸ್ಯ. ಕೊಂತಿ ಸೂರ್ಯನಿಂದ ಸಂತಾನ ಫಲದ ವರ ಪಡೆದವಳು. ಈ ಕಾರಣದಿಂದ ಜನಪದರಿಗೂ ಎಕ್ಕ ಪ್ರಿಯವಾದುದಾಗಿರಬೇಕು. ಮತ್ತೊಂದು ಐತಿಹ್ಯದ ಪ್ರಕಾರ ಎಕ್ಕದ ಎಲೆ ಯಮನಿಗೆ ಮತ್ತು ಶನಿಗೆ ಸಂಬಂಧಿಸಿದ್ದು. ಯಮ ಮತ್ತು ಶನಿಯನ್ನು ಮೆಟ್ಟಿನಿಂತ ಕೊಂತಿಯನ್ನು ಪೂಜಿಸುವುದು ಒಂದರ್ಥದಲ್ಲಿ ದುಷ್ಟಶಕ್ತಿಯನ್ನು ಮೆಟ್ಟಿನಿಂತ ಸಾತ್ವಿಕ ಶಕ್ತಿಯನ್ನು ಗೌರವಿಸಿದಂತಾಗುತ್ತದೆ. ಕೊಂತಿಯನ್ನು ಪೂಜಿಸುವುದರಿಂದ ಜೀವನದಲ್ಲಿ ಬರುವ ತೊಂದರೆಗಳು ನಿವಾರಣೆಯಾಗುವವೆಂಬ ಆಶಯ ಜನಪದರದ್ದು.

ಗಾದಿಗನೂರು ಗ್ರಾಮದಲ್ಲಿಯ ಹೊಲದಲ್ಲಿ ಮಾಸ್ತಿಗಲ್ಲಿಗೆ ಗೌರಿಯ ಪ್ರತೀಕವೆಂದು ಆರತಿ ಬೆಳಗುತ್ತಾರೆ. ಗಂಡನ ಸಾವಿನೊಂದಿಗೆ ಬದುಕನ್ನು ಕೊನೆಗಾಣಿಸಿದ ಹೆಣ್ಣುಗಳಲ್ಲಿ ಕೊಂತಿಯಷ್ಟೇ ದಿಟ್ಟತನವಿದೆ ಎಂಬ ಕಾರಣದಿಂದ ಮಾಸ್ತಿಯು ಇಲ್ಲಿ ಮಾತೃದೈವವಾಗಿ ಪೂಜಿಸಲ್ಪಡುತ್ತಾಳೆ.

ಹೊಸಪೇಟೆ ತಾಲೂಕಿನ ರಾಮಸಾಗರದಲ್ಲಿ ತೇರು ಎಳೆಯುವುದರ ಮೂಲಕ ವಿಶೇಷವಾಗಿ ಗೌರಿ ಹುಣ್ಣಿಮೆಯನ್ನು ಆಚರಿಸುತ್ತಾರೆ.

ಗೌರಿ ಪ್ರತಿಷ್ಠಾಪನೆಯಾದ ದಿನದಿಂದ ಪ್ರತಿದಿನ ಆರತಿ ಬೆಳಗುವುದರ ಮೂಲಕ ಪೂಜಿಸಿ, ತವರಿನಿಂದ ಗಂಡನ ಮನೆಗೆ ಕಳುಹಿಸುತ್ತಾರೆ. ಕೊಂತಿ ರಾಜಕನ್ಯೆ, ಸತ್‌ಸಂತಾನ ಪಡೆದವಳು, ಪರಾಕ್ರಮಿ ಮಕ್ಕಳನ್ನು ಹೆತ್ತವಳು, ವನವಾಸದಲ್ಲಿ ಮಕ್ಕಳಿಗೆ ಧೈರ್ಯ ತುಂಬಿದವಳು. ಹೆಣ್ಣಾಗುವ ಮೊದಲೇ ದೈವತ್ವದಿಂದ ಮಕ್ಕಳನ್ನು ಪಡೆದವಳು. ಇಂಥ ಸಂಗತಿಗಳಿಂದ ಕೊಂತಿ ಜನಪದರ ದೃಷ್ಟಿಯಲ್ಲಿ ಇಷ್ಟದೇವತೆಯಾಗಿದ್ದಾಳೆ. ಗಾಂಧಾರಿಯ ಗರ್ವಭಂಗವು ಕೊಂತಿ ಪೂಜೆಗೆ ನಾಂದಿಯಾಗಿರಬೇಕು. ಸವತಿ ಮತ್ಸರವಿರದ ಕೊಂತಿಯ ಮನಸ್ಸು ಜನಪದರಿಗೆ ಆಕರ್ಷಣೀಯವಾದುದು. ದೂರ್ವಾಸ ಮುನಿಯನ್ನು ನಿಷ್ಕಾಮ ಭಕ್ತಿಯಿಂದ ಸತ್ಕರಿಸಲ್ಪಟ್ಟಿರುವುದರ ಪ್ರತಿಫಲ

ನಾಲ್ಕೈದು ವರಗಳಾಗಿವೆ. ಅವುಗಳ ಪ್ರಭಾವದಿಂದ ತಾನು ತಾಯಿಯಾದುದಲ್ಲದೆ, ಸವತಿಮತ್ಸರ ತೊರೆದು ಮಾದ್ರಿಯು ತಾಯಿಯಾಗಲೆಂದು ವರಗಳನ್ನು ದಯಪಾಲಿಸಿದಳು. ತನ್ನಿಂದ ತಾಯಿಯಾದಳೆಂಬ ಅಹಂಕಾರ ಕಾಡದೇ ಹೋದದ್ದು ಅವಳ ದೊಡ್ಡಗುಣ. ಕೊಂತಿಯ ಆರಾಧನೆ ಶಾಂತಿ ಮತ್ತು ಸಮೃದ್ಧಿಯನ್ನು ಸಂಕೇತಿಸುತ್ತದೆ. ಈ ನಂಬಿಕೆಗಳ ಹಿನ್ನೆಲೆಯಲ್ಲಿ "ಕೊಂತಿ ಒಬ್ಬ ಪ್ರಜನನ ದೇವತೆಯಾಗಿರುವಳು" (ಡಾ. ಎಂ. ಚಿದಾನಂದಮೂರ್ತಿ, ೧೯೭೭, ಪು. ೧೪೫).

ಹಡಗಲಿ, ಹಗರಿಬೊಮ್ಮನಹಳ್ಳಿ ಭಾಗಗಳಲ್ಲಿ ಮಣ್ಣಿನಿಂದ ಮಾಡಿದ ಕೊಂತಿ ಮೂರ್ತಿಯನ್ನು ಹೊಲದಲ್ಲಿ ವಿಸರ್ಜಿಸುತ್ತಾರೆ. ವಿಸರ್ಜನೆಯ ಸಂದರ್ಭದಲ್ಲಿ ಕೊಂತಿಯ ಮಣ್ಣಿನ ಮೂರ್ತಿಯನ್ನು ತಮ್ಮ ಹೊಲಗಳಲ್ಲಿ ಚೆಲ್ಲುವ ಕ್ರಿಯೆ ನಡೆಯುತ್ತದೆ. ಇದರ ಅರ್ಥವ್ಯಾಪ್ತಿಯನ್ನು ನೋಡಿದಾಗ, ಈ ರೀತಿ ಮಾಡುವುದರಿಂದ ಭೂಮಿ ಫಲವತ್ತಾಗಿ ಬೆಳೆ ಸಮೃದ್ಧಿಯಾಗಿ ಜನರಿಗೆ ರೋಗ ರುಜಿನಗಳು ಬರುವುದಿಲ್ಲ ಎನ್ನುವ ನಂಬಿಕೆಯಿದೆ. ಇದರಿಂದ ಕೊಂತಿಯನ್ನು ಪ್ರಜನನ ದೇವತೆ ಎಂದು ಕರೆಯುವುದು ಅರ್ಥಪೂರ್ಣವಾಗಿದೆ. ಸಂತಾನವಿಲ್ಲದವರು ಸಂತಾನ ಪ್ರಾಪ್ತಿಗಾಗಿ ಕೊಂತಿಯನ್ನು ಪೂಜಿಸುವ ಸಂಪ್ರದಾಯವಿದೆ. ಕನ್ಯೆಯರು ತಮ್ಮ ವೈವಾಹಿಕ ಜೀವನ ಸುಖಕರವಾಗಲೆಂಬ ಆಶಯದಿಂದ ಪೂಜಿಸುತ್ತಾರೆ. ಕೊಂತಿಯು ಮದುವೆ, ಒಸಗೆ, ಶಾಸ್ತ್ರಗಳಲ್ಲಿ ಒರಳುಕಲ್ಲು, ಒನಕೆ ರೂಪದಲ್ಲಿ ಸಂತಾನಫಲ ದೈವವಾಗಿ ಪೂಜಿಸಲ್ಪಡುತ್ತಾಳೆ.

ಪುರಾಣವನ್ನು ಗಮನಿಸಿದಾಗ ಕಾಡಿನಲ್ಲಿ ವನವಾಸದಲ್ಲಿ ಪಾಂಡವರು ರೈತರಾಗಿ ಬದುಕಿದವರು. ಹಾಗಾಗಿ ಇವರು ಕೃಷಿಕರ ಮೂಲ ಪುರುಷರೆಂಬ ನಂಬಿಕೆಯಿದೆ. ಈ ಆಶಯದಿಂದಲೇ ದೀಪಾವಳಿಯ ದಿನ ಸಗಣಿಯಲ್ಲಿ ಪಾಂಡವರನ್ನು ಮಾಡಿ ಅಂಗಳದಲ್ಲಿ ಪ್ರತಿಷ್ಠಾಪಿಸುತ್ತಾರೆ. ಅಂಗಳದಿಂದ ಮನೆಯ ಬಾಗಿಲಿನವರೆಗೂ ಸುಣ್ಣದಿಂದ ಹೆಜ್ಜೆ ಗುರುತನ್ನು ಮೂಡಿಸುವುದರ ಮೂಲಕ ಪಾಂಡವರನ್ನು ಬರಮಾಡಿಕೊಳ್ಳುತ್ತಾರೆ. ಜನಪದರು ಇಂಥ ಆಚರಣೆಗಳ ಮೂಲಕ ಕೊಂತಿಯಷ್ಟೇ ಆಕೆಯ ಮಕ್ಕಳಿಗೂ ಪ್ರಾಶಸ್ತ್ಯ ನೀಡಿರುವುದು ಗಮನಿಸಬೇಕಾದ ಅಂಶ.

ಹಾಸುಗಲ್ಲಿನ ಮೇಲೆ ಹಾದು ಹೋದವರ‍್ಯಾರ
ಪಾದ ಮೂಡ್ಯಾವ ಪರಿಪರಿ | ಪಾಂಡವರು
ಹಾದು ಹೋಗ್ಯಾರ ಜಳಕಕ

(ಗದ್ದಗಿಮಠ ಬಿ.ಎಸ್., ೧೯೬೩, ಪು. ೧೧೬.)

ತಮ್ಮ ಸಂಗಡ ಪಾಂಡವರಿದ್ದಾರೆಂಬ ದೃಢವಾದ ನಂಬಿಕೆ, ಪಾಂಡವರ ಬಗೆಗಿನ ಅಪಾರ ಒಲವು ಜನಪದ ಸಾಹಿತ್ಯದಲ್ಲಿ ಹೇರಳವಾಗಿ ಲಭ್ಯವಾಗುತ್ತವೆ. ಅವರೆ ಧಾನ್ಯವನ್ನು ಪಾಂಡವರು ದಯಪಾಲಿಸಿದರೆಂಬ ನಂಬಿಕೆಯಿದೆ. ಅವರೆ ಇರುವ ಸ್ಥಳ ಪಾಂಡವರ ವಾಸಸ್ಥಾನವೆಂದು, ಹುಚ್ಚೆಳ್ಳು ಹೂ ಕೊಂತಿಗೆ ಪ್ರಿಯವೆಂದು, ಹುರುಳಿ, ನವಣೆ, ರಾಗಿ, ಅವರೆ ಬೆಳೆಗಳಿರುವ ಹೊಲದಲ್ಲಿ ವಿಸರ್ಜಿಸುತ್ತಾರೆ.

ಕಾರ್ತೀಕಮಾಸ ಸುಗ್ಗಿಯ ಪ್ರಾರಂಭದ ದಿನ. ಆಗತಾನೆ ಫಸಲು ಸೊಂಪಾಗಿ ಬೆಳೆದು ಎಲ್ಲಿಲ್ಲದ ಸಡಗರ, ಸಂಭ್ರಮ. ಹೀಗೆ ಫಲ ಸಮೃದ್ಧಿ ತುಂಬಿರುವ ಕಾಲದಲ್ಲಿ ಸಂಭ್ರಮ ಉತ್ಸಾಹಗಳಿಂದ ತಮ್ಮ ಸಂತೃಪ್ತಿಯನ್ನು ಸೂಚಿಸುವ ಹಿನ್ನೆಲೆಯಲ್ಲಿ ಬರುವ ಕೊಂತಿಪೂಜೆ ಆಚರಣೆಯು ವಿಶಿಷ್ಟವಾದುದಾಗಿದೆ.

೩.೩.೨. ಕೆಂಡ ತೂರುವ ಆಚರಣೆ (ಭಗ್ಗೋಬಳೇಶ್ವರನ ಗುಗ್ಗುರಿ ಜಾತ್ರೆ)

ಕೂಡ್ಲಿಗಿ ತಾಲೂಕು ಹೊಸಹಟ್ಟಿ ಗ್ರಾಮದಲ್ಲಿ ಬರಿಗೈಯಲ್ಲಿ ಕೆಂಡ ತೂರುವ ಸಂಪ್ರದಾಯವಿದೆ. ಭಗ್ಗೋಬಳೇಶ್ವರ ದೈವದ ಗುಗ್ಗುರಿ ಜಾತ್ರೆಯಲ್ಲಿ ಈ ವಿಶೇಷತೆ ಕಂಡುಬರುತ್ತದೆ. ಭರತ ಹುಣ್ಣಿಮೆಯ ನಂತರ ಮೂರು ವರ್ಷಕ್ಕೊಮ್ಮೆ ನಡೆಯುವ ಜಾತ್ರೆ ಇದು. ಕಾಸು, ಮೀಸಲು, ಗಂಗಾಪೂಜೆ, ಮಣೇವು ಹೀಗೆ ಬುಡಕಟ್ಟು ಸಂಪ್ರದಾಯದಂತೆ ಬೇಡ ಜನಾಂಗದವರು ಆಚರಿಸುತ್ತಾರೆ. ಆಚರಣೆಯಲ್ಲಿ ಪಾಲ್ಗೊಳ್ಳುವವರು ಒಂದು ವಾರ ಕಾಲ ಬರಿಮೈಯಲ್ಲಿದ್ದು, ಚಪ್ಪಲಿ ಮೆಟ್ಟುವಂತಿಲ್ಲ. ಮದ್ಯ, ಮಾಂಸ ಮುಟ್ಟುವಂತಿಲ್ಲ. ಸಂಸಾರದಿಂದ ದೂರವಿರಬೇಕೆಂಬ ನಿಯಮವಿದೆ. ಇದು ಆಚರಣೆಯ ಸಮಯದಲ್ಲಿ ದೇಹವನ್ನು ಸದೃಢವಾಗಿಸುವ ಪ್ರಯತ್ನವಾಗಿದೆ. ವಾದ್ಯ ಸಮೇತ ಗಂಗೆಯನ್ನು ಪೂಜಿಸಿ ಬಂದವರೇ ನೂರಾರು ಜನ ಆವೇಶಭರಿತರಾಗಿ ಕೆಂಡದ ರಾಶಿಯಲ್ಲಿ ಕೈಹಾಕಿ ನೆರೆದಿರುವ ಜನರತ್ತ ತೂರುತ್ತಾರೆ. ಕೆಂಡದ ರಾಶಿಯಲ್ಲಿ ಬಿದ್ದು ಕೊಡವಿಕೊಂಡು ಎದ್ದು ನಿಲ್ಲುತ್ತಾರೆ. ಭಕ್ತಿಯ ಪರಾಕಾಷ್ಠೆಯಲ್ಲಿ ಕೆಂಡದ ಮಳೆ ಸುರಿದರೂ ಸುಡುವ ಅನುಭವವಾಗುವುದಿಲ್ಲ. ಕತ್ತಲೆಯಲ್ಲಿ ಕೆಂಡ ಎರಚುವ ದೃಶ್ಯ ನೋಡುಗರಿಗೆ ಅದ್ಭುತ ಅನುಭವ ನೀಡುತ್ತದೆ.

ವಕ್ತೃಗಳ ಹೇಳಿಕೆಯ ಪ್ರಕಾರ ಹಿಂದೆ ಕಾಡಿನಲ್ಲಿ ಕಟ್ಟಿಗೆ ಸುಟ್ಟು, ಇದ್ದಿಲು ಮಾಡಿ, ಅದನ್ನು ಮಾರಿ ಜೀವನ ಸಾಗಿಸುತ್ತಿದ್ದವರು ಬೇಡರು. ಇದ್ದಿಲಲ್ಲೇ ಪುನಃ ಬೆಂಕಿ ಉರಿಯುವುದನ್ನು ನೋಡಿದ ಅವರು ಅದನ್ನು ಕೈಯಲ್ಲಿ ಹಿಡಿದು, ಅದು ಸುಡದಿದ್ದಾಗ ದೇವರೆಂದು ನಂಬಿ ಪೂಜಿಸುತ್ತಾ ಬಂದಿದ್ದಾರೆ.

ಆಂಧ್ರದ ಗುಡ್ಡಗಾಡು ಪ್ರದೇಶವಾದ ಶ್ರೀಶೈಲದ ಕಡೆಯಿಂದ ಬಂದವರೆಂದೂ, ಕನ್ನಡ ನಾಡಿನಲ್ಲಿ ನೆಲೆಸಿದ ಪ್ರಯುಕ್ತ ತೆಲುಗು ಮಿಶ್ರಿತ ಕನ್ನಡ ಭಾಷೆಯನ್ನಾಡುತ್ತಾರೆಂಬುದು ಅವರ ಹೇಳಿಕೆಯಾಗಿದೆ.

ಹೀಗೆ ಬೇಡನಾಯಕರು ಆಂಧ್ರದ ಗುಡ್ಡಗಾಡನ್ನು ಬಿಟ್ಟು ದಕ್ಷಿಣದ ಕಡೆ ಬರಲು ಕಾರಣ ಅವರು ಹೇಳಿಕೊಂಡಿರುವಂತೆ, "ತಾವು ಪಾಲನೆ ಮಾಡುತ್ತಿದ್ದ ದನಕರುಗಳಿಗೆ ಮೇವು, ನೀರು ಇಲ್ಲದ ಕಾರಣಕ್ಕಿಂತ, ಮೇಲಿಂದಮೇಲೆ ಉತ್ತರ ಭಾರತದ ಮುಸ್ಲಿಮರ ದಾಳಿಯನ್ನು ತಡೆಯಲಾರದೆ ಎಂಬುದನ್ನು ತಮಿಳು ಕೃತಿಯೊಂದು ಹೇಳುತ್ತದೆ".[೪೦]

ಬುಡಕಟ್ಟು ವಾಸವೆಲ್ಲಾ ಬಹುಪಾಲು ಅರಣ್ಯದಲ್ಲೇ. ಇತ್ತೀಚೆಗೆ ಅರಣ್ಯ ನಾಶವಾಗುತ್ತಾ ಬಂದಂತೆ ಬುಡಕಟ್ಟು ಜೀವನಕ್ರಮ ಬದಲಾಗುತ್ತಿದೆ. ಗುಡ್ಡದ ತಪ್ಪಲಲ್ಲಿ ಇರಬೇಕಾದವರು ಹಟ್ಟಿಗಳಲ್ಲಿ ವಾಸಿಸಲು ಪ್ರಾರಂಭಿಸಿದ್ದಾರೆ. ಬೇಟೆ, ಪಶುಪಾಲನೆ, ಕೃಷಿಯಂತಹ ಮೂಲವೃತ್ತಿಗಳನ್ನು ತ್ಯಜಿಸಿ, ಇದ್ದಿಲು ಮಾರಿ ಜೀವಿಸುತ್ತಿದ್ದಾರೆ. ದೈನಂದಿನ ಜೀವನಕ್ಕೆ ಸಹಾಯಕವಾದ ಇದ್ದಿಲಲ್ಲಿ ದೈವೀಭಾವ ಕಂಡುಕೊಂಡಿದ್ದಾರೆ. ತಮ್ಮ ಸಂತೋಷ, ದುಃಖವನ್ನು ಪ್ರಕೃತಿಯ ಮುಂದೆ ನಿವೇದಿಸಿಕೊಳ್ಳುವುದು, ಪ್ರಕೃತಿಗೆ ಮೊರೆಹೋಗುವುದು ಮೂಲತಃ ಬುಡಕಟ್ಟು ಜನರ ಸಂಸ್ಕೃತಿ. ಇದರಿಂದ ಕಷ್ಟ ನಿವಾರಣೆಯಾಗುವುದೆಂಬ ನಂಬಿಕೆಯಿದೆ. ಇಂಥ ನಂಬಿಕೆಗಳ ಹಿನ್ನೆಲೆಯಲ್ಲಿ ಅರಣ್ಯದೊಂದಿಗಿನ ಹೋರಾಟದ ಬದುಕು ಸಹಜವಾಗಿ ಇವರನ್ನು ಧೈರ್ಯ ಹಾಗೂ ದೃಢಕಾಯರನ್ನಾಗಿ ಮಾಡಿದೆ.

ಈ ಆಚರಣೆಯಲ್ಲಿ ಕೆಂಡದೊಂದಿಗಿನ ಸರಸ ದೈವೀಭಾವದ ಜೊತೆ ನೆರೆದ ಜನಸಮುದಾಯಕ್ಕೆ ಮನೋರಂಜನೆ ನೀಡುವುದಾಗಿದೆ. ಇಲ್ಲಿಯ ಬೇಡರು ಆಂಧ್ರ ಮೂಲದವರಾಗಿದ್ದರಿಂದ ತೆಲುಗು

ಭಾಷಿಕರಾಗಿದ್ದಾರೆ. ತೆಲುಗಿನಲ್ಲಿ ಇದ್ದಿಲು ಎಂದರೆ ಬಗ್ಗಲು ಎಂದರ್ಥ. ಗೆದ್ದಲಗಟ್ಟೆ, ಕುರಿಹಟ್ಟಿ, ಮಾಕನಡಕು ಗ್ರಾಮಗಳು ಓಬಳೇದೇವರ ಮೂಲ ನೆಲೆಗಳಾಗಿವೆ. ವೃತ್ತಿಮೂಲವಾದ ಇದ್ದಿಲು, ದೈವದ ಜೊತೆ ಸೇರಿ ಬಗ್ಗೋಬಳೇಶ್ವರ ಆಗಿರಲು ಸಾಧ್ಯವಿದೆ. ಹೊಸ ಧಾನ್ಯಗಳನ್ನು ಉಪಯೋಗಿಸುವ ಮುನ್ನ ಅದಕ್ಕೊಂದು ಆಚರಣೆ ನಡೆಸುವ ಕ್ರಮ ಇವರದ್ದು. ಈ ಕಾರಣದಿಂದ ಜಾತ್ರೆಯಲ್ಲಿ ಧಾನ್ಯದ ಗುಗ್ಗರಿ ಹಂಚುತ್ತಾರೆ. ಹಾಗಾಗಿ ಗುಗ್ಗರಿ ಜಾತ್ರೆಯೆಂದೂ ಕರೆಯುತ್ತಾರೆ. ಆಚರಣೆಯ ಮೂಲಕ ಧಾನ್ಯ ಸೇವನೆಯನ್ನು ಕಡ್ಡಾಯ ವಾಗಿಸಿದ್ದಾರೆ. ಇದರಿಂದ ದೇಹ ಸದೃಢವಾಗುತ್ತದೆ.

ಜಲ ಜನಪದರ ಆಚರಣೆಗಳಲ್ಲಿ ಶುದ್ಧೀಕರಣಕ್ಕಾಗಿ ಬಳಸಲ್ಪಡುತ್ತದೆ. ಇದು ಗಂಗಮ್ಮಳಾಗಿ, ಶುಭದ ಸಂಕೇತವಾಗಿ ಪೂಜಿಸಲ್ಪಡುವುದು. ಗಂಗೆ ತರುವುದರೊಂದಿಗೆ ಆಚರಣೆ ಪ್ರಾರಂಭಗೊಳ್ಳುವುದು. ಇಲ್ಲಿ ಗಂಗೆ ತರುವುದರ ಹಿನ್ನೆಲೆ, ಜಲದಿಂದ ಅಗ್ನಿಯನ್ನು ಶುದ್ಧೀಕರಿಸುವ ಆಶಯದ್ದಾಗಿದೆ. ಜನಪದರ ಆಚರಣೆಗಳಲ್ಲಿ ಬಳಸಲ್ಪಡುವ ಅಗ್ನಿಗೆ ಅನೇಕ ರೂಪಗಳುಂಟು. ಬೆಂಕಿ, ಕೆಂಡ, ಕೊಳ್ಳಿ, ಕಿಡಿ, ಉರಿ, ಧಗೆ ಹೀಗೆ. ಇಲ್ಲಿ ಕೆಂಡವು ಪ್ರತ್ಯೇಕ ಅಸ್ತಿತ್ವವನ್ನು ಉಳಿಸಿಕೊಂಡು, ಸುಡುವ ಶಕ್ತಿಯ ಜೊತೆ ಕೌತುಕದ ಅಂಶವಾಗಿ, ಪಾವಿತ್ರತೆಯ ಸಂಕೇತವಾಗಿ ಕಂಡುಬಂದಿದೆ.

"ಮ್ಯಾಸಬೇಡರ ಜಾತ್ರೆಗಳೆಲ್ಲಾ ಅಳಿದುಳಿದ ಅರಣ್ಯಗಳ ನಡುವೆ ಪೆಟ್ಟಿಗೆ ದೇವರನ್ನು ಹೊತ್ತು ಅರಣ್ಯದಲ್ಲಿ ಸಂಚರಿಸುವ ಆಚರಣೆಗಳಾಗಿದ್ದು, ಬೆಳಕಿನ ಮೂಲವಾಗಿ ಅರಣ್ಯದಲ್ಲಿ ಕಟ್ಟಿಗೆ, ಇದ್ದಿಲು ಬಳಸುವುದು ಅನಿವಾರ್ಯವಾಗಿತ್ತು."[೪೧] ಈ ಅನಿವಾರ್ಯತೆಯೇ ಕಾಲಕ್ರಮೇಣ ದೇವರ ಮುಂದೆ ಬೆಂಕಿ ಉರಿಸಿ ಬೆಳಕು ಮಾಡುವ ಸಂಪ್ರದಾಯವಾಗಿ ಮುಂದುವರಿದಿದೆ. ತಮ್ಮ ದೇವರು ಬೆಂಕಿ, ಬೆಳಕಿನ ದೇವರು; ಬೇರೆ ಯಾವುದೇ ರೀತಿಯ ಬೆಳಕು ದೇವರ ಮುಂದೆ ಬರಬಾರದೆಂಬ ನಿಷೇಧವಿದೆ. ಹೊಸದನ್ನು ಸ್ವೀಕರಿಸದಿರುವ, ಬುಡಕಟ್ಟು ಜೀವನಕ್ರಮವನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ಆಚರಣೆಯಲ್ಲಿ ಕಾಣುತ್ತೇವೆ.

ಧರ್ಮ, ನಿಷ್ಠೆ, ನಂಬಿಕೆಗಳಿಗೆ ಸಂಬಂಧಿಸಿದ ಆಚರಣೆಯಾದರೂ ಚಲಿಸುವ ಬೆಂಕಿ ಸುಡಲಾರದೆಂಬ ವೈಜ್ಞಾನಿಕ ತತ್ವದ ಆಧಾರಗಳು ಪ್ರಮುಖವಾದುವಾಗಿವೆ. ಲೈಡನ್ ಪ್ರಾಸ್ಟಾನ ಪರಿಣಾಮದ ಪ್ರಕಾರ "ತೇವಾಂಶವಿರುವ ಅಂಗದ ಮೇಲೆ ಶಾಖ ಸ್ಪರ್ಶಿಸಿದಾಗ, ಅಂಗದಲ್ಲಿರುವ ನೀರು ಆವಿಯಾಗಿ ಎರಡು ಮೇಲ್ಮೈಗಳ ಮಧ್ಯ ಶಾಖನಿರೋಧಕ ಪದರ ಕೆಲವು ಸೆಕೆಂಡುಗಳ ಕಾಲ ಅಸ್ತಿತ್ವದಲ್ಲಿರುತ್ತದೆ".[೪೨] ಹಾಗಾಗಿ ಕೆಂಡದ ಸ್ಪರ್ಶ ನಿರ್ದಿಷ್ಟ ಅವಧಿಯವರೆಗೆ ಆಗಲಿದೆ. ಆ ಬಳಿಕ ಬೆಂಕಿ ಸುಡಲು ಆರಂಭವಾಗುತ್ತದೆ. ಚಲಿಸುವ ಬೆಂಕಿ ಸುಡಲಾರದೆಂಬ ತತ್ವಗಳ ಕಲ್ಪನೆಯಿಲ್ಲದೇ, ದೈವದ ಮೇಲೆ ಇಟ್ಟಿರುವ ನಂಬಿಕೆಯ ಸಾಕಾರ ಸ್ವರೂಪದಂತೆ ಆಚರಣೆಗಳು ಆಚರಿಸಲ್ಪಡುತ್ತದೆ.

೩.೩.೩. ಕೊಂಡ ಹಾಯುವ ಆಚರಣೆ

ವೀರಭದ್ರ ದೇವರ ಆಚರಣೆ

ಜನಪದರಲ್ಲಿ ಪಂಚಭೂತಗಳ ಕಲ್ಪನೆಯಿಲ್ಲ. ಅವುಗಳಲ್ಲಿಯ ದಿವ್ಯ ಸ್ವರೂಪವನ್ನು ಅರಿತು, ಅವುಗಳ ಆರಾಧಕರಾಗಿದ್ದಾರೆ. ವೈದಿಕ ಪರಂಪರೆಯ ಪ್ರಕಾರ ಅಗ್ನಿ ಸೃಷ್ಟಿಮೂಲವಾದುದೆಂದು ಕೆಡುಕಿನ, ವಿನಾಶದ

ಚಿಹ್ನೆಯಾಗಿ ಸ್ವೀಕರಿಸಿದ್ದಾರೆ. ಜಗಳ, ಹೊಡೆದಾಟ, ಹಗೆತನವನ್ನು ಬೆಂಕಿಗೆ ಸಮೀಕರಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ಅಗ್ನಿ ತುಳಿಯುವ ಆಚರಣೆ ವೀರಭದ್ರದೇವರ ಹುಟ್ಟಿನೊಂದಿಗೆ ತಳುಕುಹಾಕಿಕೊಂಡಿದೆ. ಬಳ್ಳಾರಿ ಜಿಲ್ಲೆಯಲ್ಲಿ ಜಾತ್ರೆ ಮತ್ತು ಮದುವೆಗಳಲ್ಲಿ ಈ ಆಚರಣೆ ಪ್ರಚಲಿತದಲ್ಲಿದೆ.

ಹಗರಿಬೊಮ್ಮನಹಳ್ಳಿ ತಾಲೂಕು ಮೊರುಗೆರೆಯಲ್ಲಿ ಭರತಹುಣ್ಣಿಮೆಯಂದು ಹಾಗೂ ಕಡ್ಲಬಾಳು ಗ್ರಾಮದಲ್ಲಿ ಆಶ್ವೀಜ ಬಹುಳ ಪಾಡ್ಯದಂದು ಅಗ್ನಿಕೊಂಡ ಹಾಯುತ್ತಾರೆ. ಅಂದು ವೀರಭದ್ರದೇವರ ಜಾತ್ರೆ ನೆರವೇರುತ್ತದೆ.

ದೇವಸ್ಥಾನದ ಮುಂಭಾಗದಲ್ಲಿ ೧೨೮ ಅಂಗುಲ ಚೌಕಾಕಾರದ ೧೬ ಅಂಗುಲ ಆಳದ ಅಗ್ನಿಕುಂಡ ನಿರ್ಮಿಸಿರುತ್ತಾರೆ. ಅದು ತೆಂಗಿನಗರಿ, ಬಾಳೆಗರಿ, ರಂಗೋಲಿಯಿಂದ ಅಲಂಕೃತಗೊಂಡಿರುತ್ತದೆ. ಪಶ್ಚಿಮದಿಂದ ಪೂರ್ವಕ್ಕೆ, ದಕ್ಷಿಣದಿಂದ ಉತ್ತರಾಭಿಮುಖವಾಗಿ ಮೂರು ಬಾರಿ ಪ್ರದಕ್ಷಿಣೆ ಹಾಕಬೇಕೆಂಬ ನಿಯಮವಿದೆ. ಹಲಗೆ, ಸಮಾಳಗಳೊಂದಿಗೆ ಗಂಗೆಯನ್ನು ಪೂಜಿಸಿ ನಂತರ ಒಡಪು ಹೇಳುತ್ತಾ ಕೊಂಡ ಹಾಯುತ್ತಾರೆ. ಇಲ್ಲಿ ಶಸ್ತ್ರಧಾರಣೆ ನಡೆಯುತ್ತದೆ. ನೂಲಿನ ದಾರಕ್ಕೆ ೧೦೧ ಗಂಟುಗಳನ್ನು ಹಾಕಿ, ದಬ್ಬಣದ ಆಕಾರದ ಶಸ್ತ್ರ ತಯಾರಿಸಿ ದವಡೆಯ ಚರ್ಮಕ್ಕೆ ಒಬ್ಬೊಬ್ಬರಾಗಿ ಪೋಣಿಸಿಕೊಳ್ಳುತ್ತಾರೆ. ಕೈ, ತುಟಿ, ಕಣ್ಣುಗಳಿಗೆ ಚಿಕ್ಕ ಚಿಕ್ಕ ಶಸ್ತ್ರ ಧರಿಸುತ್ತಾರೆ. ಒಡಪು ಹೇಳುವುದು, ವೀರಗಾಸೆಯವರು ವೀರಭದ್ರನಂತೆ ಕುಣಿಯುವುದು. ಹೀಗೆ ಹಲವು ಆಚರಣೆಗಳು ವೀರಭದ್ರದೇವರ ಜಾತ್ರೆಯಲ್ಲಿ ಪ್ರಚಲಿತದಲ್ಲಿವೆ. ಸಿರುಗುಪ್ಪ ತಾಲೂಕು ಹಳೇಕೋಟೆಯಲ್ಲಿ ಇದೇ ರೀತಿಯ ಆಚರಣೆ ನೆರವೇರುತ್ತದೆ.

ಹಗರಿಬೊಮ್ಮನಹಳ್ಳಿ ತಾಲೂಕು ಹೊಸಕೆರೆಯಲ್ಲಿ ವೀರಭದ್ರದೇವರ ಜಾತ್ರೆಯಲ್ಲಿ ಗುಗ್ಗಳದ ಆಚರಣೆಯಿದೆ. ಬೆಳಗಿನ ಜಾವ ನಡೆಯುವ ಜಾತ್ರೆಯಲ್ಲಿ ಬಂಡಿಗಾಲಿ ನಡುವಿನ ಗಡ್ಡೆಯ ಭಾಗಕ್ಕೆ ಉರಿಯುವ ಕೊಳ್ಳಿಯನ್ನಿಟ್ಟು, ಧ್ವಜವನ್ನು ಸಿಕ್ಕಿಸಿ, ತಲೆಯ ಮೇಲಿಟ್ಟುಕೊಂಡು ಗರಗರನೆ ತಿರುಗಿಸುತ್ತಾ ವೀರಗಾಸೆಯವರು ಮತ್ತು ಶಸ್ತ್ರ ಹಾಕಿಸಿಕೊಂಡವರು ನೋವಿನ ಪರಿವೆಯಿಲ್ಲದೆ ಕೊಂಡ ಹಾಯುತ್ತಾರೆ.

ಸಿರುಗುಪ್ಪ ತಾಲೂಕು ಉಪ್ಪಾರ ಹೊಸಹಳ್ಳಿಯಲ್ಲಿ ಕರಸ್ಥಲ ನಾಗಲಿಂಗಸ್ವಾಮಿಗಳ ಜಾತ್ರೆಯಲ್ಲಿ ಪುರವಂತಿಕೆ ಶಸ್ತ್ರವನ್ನು ಚಿಕ್ಕ ಮಕ್ಕಳಾದಿಯಾಗಿ ಹಾಕಿಸಿಕೊಳ್ಳುತ್ತಾರೆ. ಭಕ್ತರ ಹೇಳಿಕೆಯ ಪ್ರಕಾರ ಈ ಆಚರಣೆಯಿಂದ ವ್ಯಕ್ತಿ ಶಾಂತಗೊಳ್ಳುತ್ತಾನೆ ಹಾಗೂ ದೈವದ ಹೆಸರಲ್ಲಿ ನೋವನ್ನು ಸಹಿಸುವ ಶಕ್ತಿ ಪಡೆಯುತ್ತಾನೆ.

ಹೊಸಪೇಟೆ ತಾಲೂಕು ಕಡ್ಡಿರಾಂಪುರದ ಮುರುಗನ್ ದೇವಸ್ಥಾನದಲ್ಲಿ ಪ್ರತಿವರ್ಷ ಶಸ್ತ್ರಪವಾಡ ನಡೆಯುತ್ತದೆ. ಭಕ್ತರು ಬಾಯಿಗೆ ತಂತಿ ಚುಚ್ಚಿಸಿಕೊಂಡು, ಬೆನ್ನಿಗೆ ಕಬ್ಬಿಣದ ಕೊಂಡಿಯನ್ನು ಹಾಕಿ ಕಾರು, ಗುಂಡುಕಲ್ಲುಗಳನ್ನು ದೇವಸ್ಥಾನದವರೆಗೆ ಎಳೆಯುತ್ತಾರೆ. ಶಿಲಾಯುಗ, ಲೋಹಯುಗಗಳಿಂದ ಅಭಿವೃದ್ಧಿ ಹೊಂದಿದ ಜನಪದ ಸಮಾಜ ಆಧುನಿಕ ಯುಗದಲ್ಲಿಯು ಶಿಲೆ ಹಾಗೂ ಲೋಹಗಳಲ್ಲಿ ದೈವೀಭಾವಗಳನ್ನು ಕಂಡುಕೊಂಡಿದ್ದಾರೆ. ಒಂದು ನಿರ್ದಿಷ್ಟ ಪ್ರಮಾಣದ ಲೋಹ ಮಾನವನ ದೇಹಕ್ಕೆ ಅಗತ್ಯವಿದೆ. ಚಿನ್ನ, ಬೆಳ್ಳಿ, ತಾಮ್ರಗಳ ಬಳಕೆಯಿಂದ ದೇಹಶುದ್ಧಿಯಾಗುತ್ತದೆಂಬುದು ಜನಪದರ ಅನುಭವದ ಮಾತಾಗಿದೆ.

ಶಸ್ತ್ರ ಪವಾಡ

"ಶಸ್ತ್ರ ಪವಾಡವು ವೀರಗಾಸೆಯವರು ಆವೇಶಭರಿತರಾಗಿ ಕತ್ತು, ನಾಲಿಗೆ, ಎದೆಗೆ ಶಸ್ತ್ರದಿಂದ ಚುಚ್ಚಿಸಿಕೊಳ್ಳುತ್ತಾರೆ. ಇದು ಉಗ್ರಕಲೆ ಹಾಗೂ ರೋಮಾಂಚನಕಾರಿ ದೃಶ್ಯ".[೪೩] ಶಸ್ತ್ರ ಚುಚ್ಚಿದ ಭಾಗಗಳಿಗೆ ದೈವದ ಹೆಸರಲ್ಲಿ ಅಂಗಾರ ಲೇಪಿಸುತ್ತಾರೆ. ಇದು ಕುಳ್ಳಿನಿಂದ ತಯಾರಿಸಿದ ಭಸ್ಮ. ಅದಕ್ಕೆ ಅರಿಶಿಣ, ಕುಂಕುಮಗಳನ್ನು ಸೇರಿಸಿರುತ್ತಾರೆ. ಹೆಣ್ಣು ದೈವಗಳ ಆಚರಣೆಗಳಲ್ಲಿ ಹಸುವಿನ ಗಂಜಲು ಹಾಗೂ ಬೇವಿನ ಸೊಪ್ಪು ಬಳಕೆಯಾಗುತ್ತದೆ. ಇವೆಲ್ಲಾ ರೋಗ ನಿರೋಧಕ ಗುಣಗಳಿಂದ ಕೂಡಿದವುಗಳಾಗಿವೆ. "ಬಾಯಿಶಸ್ತ್ರ ಹಾಕುವುದನ್ನು ಕೆಲವು ಜಾನಪದ ತಜ್ಞರು ಆಚರಣೆಯ ಹಿನ್ನೆಲೆಯಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವುದರ ಸಾಂಕೇತಿಕ ರೂಪ ಎಂದಿದ್ದಾರೆ".[೪೪]

ವೀರಭದ್ರನ ಆರಾಧನೆಯ ಉಗಮ

ಪುರಾಣ ಮೂಲಗಳ ಪ್ರಕಾರ ವೀರಭದ್ರನ ಜನನ ಈ ರೀತಿಯಿದೆ. ಅಷ್ಟದಿಕ್ಪಾಲಕರು, ಹರಿಹರ, ಬ್ರಹ್ಮ ಮೊದಲಾದವರು ದಕ್ಷ ಯಾಗಕ್ಕೆ ಬೆಂಬಲವಾಗಿ ನಿಂತಿರುತ್ತಾರೆ. ದಕ್ಷ ಪುತ್ರಿಯರು ಸಡಗರದಿಂದ ಓಡಾಡುತ್ತಿರುತ್ತಾರೆ. ಶಿವನ ಅಪ್ಪಣೆಯಿಲ್ಲದೆ ದಕ್ಷ ಯಾಗಕ್ಕೆ ಆಗಮಿಸಿದ. ದಾಕ್ಷಾಯಿಣಿ ಅವಮಾನಿತಳಾಗಿ ಅಗ್ನಿಪ್ರವೇಶ ಮಾಡುತ್ತಾಳೆ. ಇದರಿಂದ ಕುಪಿತಗೊಂಡ ಶಿವ ಜಡೆ ಬಿಚ್ಚಿ ನೆಲಕ್ಕಪ್ಪಳಿಸಲು ಆತನ ಉರಿನೇತ್ರದಿಂದ ವೀರಭದ್ರ ಹುಟ್ಟಿ ದಕ್ಷನನ್ನು ಸಂಹರಿಸುತ್ತಾನೆ. ನಂತರ ಅವನಿಗೆ ಕುರಿ ತಲೆಯನ್ನಿಟ್ಟು, ಮರುಜೀವ ನೀಡಿ, ತನ್ನ ಪರಂಪರೆಗೆ ಪರಿವರ್ತಿಸಿಕೊಳ್ಳುತ್ತಾನೆ. ಹೀಗೆ ವೈದಿಕ ನೆಲೆಯ ವಿರೋಧ ವೀರಭದ್ರನ ಆಚರಣೆಯಲ್ಲಿ ಕಂಡು ಬರುತ್ತದೆ.

"ಶ್ರೇಣೀಕೃತ ವ್ಯವಸ್ಥೆಯಲ್ಲಿ ಉನ್ನತ ಸ್ಥಾನದಲ್ಲಿರುವ ದಕ್ಷಪುತ್ರಿಯ ಸಾವು ಸಾಂಕೇತಿಕವಾಗಿ ವೈದಿಕ ಧರ್ಮದ ಜಡತೆ ಹಾಗೂ ನಿಷ್ಪ್ರಯೋಜಕತೆಯನ್ನು ತಿಳಿಸುತ್ತದೆ"(ಡಾ. ವೀರೇಶ ಬಡಿಗೇರ, ೨೦೦೯, ಪು. ೪೫). ಇದು ಜೀವವಿರೋಧಿ ನೆಲೆಯ ಪ್ರಕ್ರಿಯೆಯಾಗಿದೆ. "ಶತ್ರು ನಿಶ್ಯಸ್ತ್ರನಾದಾಗ ಬಗ್ಗುಬಡಿಯಬೇಕೆನ್ನುವಂತೆ, ಜಡವಾಗುತ್ತಿರುವ ಧರ್ಮವನ್ನು ನಾಶಗೊಳಿಸಿ, ಹೊಸ ಧರ್ಮ ಸ್ಥಾಪಿಸುವುದು ವೀರಭದ್ರನ ಹುಟ್ಟಿನ ಉದ್ದೇಶವಾಗಿದೆ".[೪೫] ತನ್ನ ಶಕ್ತಿಸಾಮರ್ಥ್ಯಗಳಿಂದ ದೈವತ್ವ ಸ್ಥಾನ ಪಡೆದುಕೊಂಡಿರುವುದು ಸತ್ಯ ಸಂಗತಿ. ತನ್ನ ಸಮುದಾಯಕ್ಕಾಗಿ ಹೋರಾಡಿದ ವೀರನಿಗೆ ಸ್ವಯಂಪ್ರೇರಣೆಯಿಂದ ಹಿಂದೆ ತಮ್ಮ ಶಿರವನ್ನು ಕತ್ತರಿಸಿ ಅರ್ಪಿಸುತ್ತಿದ್ದಿರಬೇಕು. ಕಾಲಕ್ರಮೇಣ ಆಚರಣೆ ಸರಳೀಕರಣಗೊಂಡಿರಲು ಸಾಧ್ಯವಿದೆ. ಇಲ್ಲಿ ಭೋಗ ಸಂಸ್ಕೃತಿ ಹಾಗೂ ಶ್ರಮ ಸಂಸ್ಕೃತಿಗಳ ಮುಖಾಮುಖಿಯಿದೆ. ವೀರಭದ್ರನ ಉದಯ ದ್ರಾವಿಡ ಸಮುದಾಯಗಳ ಜಾಗೃತವಾದ ಪ್ರಜ್ಞಾಪರಂಪರೆಯನ್ನು ಕಟ್ಟಿಕೊಡುತ್ತದೆ.

ಪುರವಂತಿಕೆ ಕುಣಿತ

ಇದು ಶೈವ ಸಂಪ್ರದಾಯಕ್ಕೆ ಸೇರಿದ ಧಾರ್ಮಿಕ ಮೂಲದ ಜನಪದ ನೃತ್ಯ. ವೀರಭದ್ರದೇವರ ಜಾತ್ರೆಯಲ್ಲಿ ಕೊಂಡ ಹಾಯುವಾಗ, ಅಸ್ತ್ರ ಹಾಕುವಾಗ ಗುಗ್ಗಳದ ಆಚರಣೆಯಲ್ಲಿ ಪ್ರದರ್ಶಿತವಾಗುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ ಪುರವಂತಿಕೆ ನೃತ್ಯವೆಂದು ಕರೆಯುತ್ತಾರೆ. ವೀರಭದ್ರದೇವರ ವೇಷಧಾರಿಗಳು ಕತ್ತಿ ಝಳಪಿಸುತ್ತಾ, ವೀರಾವೇಶದಿಂದ ದಕ್ಷಯಾಗ, ದೈವದ ಜನನ, ವಿಜಯಕ್ಕೆ ಸಂಬಂಧಿಸಿದ ಹಲವಾರು ಕುತೂಹಲಕಾರಿ ವಿಷಯಗಳನ್ನು ಪ್ರಚುರಪಡಿಸುತ್ತಾರೆ. ಇದಕ್ಕೆ ಒಡಪು ಅಥವಾ ಖಡ್ಗ ಹೇಳುವುದೆಂತಲೂ ಕರೆಯುತ್ತಾರೆ. ಒಮ್ಮೊಮ್ಮೆ

ಆವೇಶಭರಿತರಾಗಿ ಜ್ಞಾನತಪ್ಪಿ ಬೀಳುವುದುಂಟು. ಆ ವ್ಯಕ್ತಿಗೆ ತೆಂಗಿನಕಾಯಿ ಇಳೆ ತೆಗೆಯುವುದರ ಮೂಲಕ ಬಲಿ ಸಮರ್ಪಿಸುತ್ತಾರೆ. ಉರಿಯುವ ಕರ್ಪೂರವನ್ನು ನಾಲಿಗೆ, ಅಂಗೈ ಮೇಲಿಟ್ಟುಕೊಳ್ಳುವ ಚಮತ್ಕಾರಗಳು ನಡೆಯುತ್ತವೆ. ಇದು ವಂಶಪಾರಂಪರಿಕ ಕಲೆ, ಸಾಕ್ಷಾತ್ ವೀರಭದ್ರನ ಆಗಮನವಾದಂತೆ ಭಕ್ತರು ಸಂತಸಪಡುತ್ತಾರೆ. ಆರ್ಯ ದ್ರಾವಿಡ ಸಂಸ್ಕೃತಿಗಳ ಸಂಕರದಲ್ಲಿ ಉದಯಿಸಿದ ಆಚರಣೆಯಿದು. ವೀರಭದ್ರನ ಆಚರಣೆಗಳಲ್ಲಿ ಅಗ್ನಿ ವಿರೋಧಿ ಧೋರಣೆಗಳಿವೆ. ಅಗ್ನಿ ತುಳಿಯುವಿಕೆಯಿಂದ ಅದು ಅಪಮೌಲ್ಯೀಕರಣಗೊಳ್ಳುತ್ತದೆ. ದಕ್ಷ, ಶಿವರ ನಡುವಿನ ಯಜ್ಞ ಸಂಘರ್ಷ ವೀರಭದ್ರನ ಆಚರಣೆಗೆ ಹೊಸ ಪರಂಪರೆಯನ್ನು ಹುಟ್ಟುಹಾಕಿದೆ. ತನ್ನ ಸಮುದಾಯ ಉಪೇಕ್ಷೆಗೆ ಒಳಪಟ್ಟಾಗ, ಅನ್ಯರಿಂದ ಹೀಯಾಳಿಸಲ್ಪಟಾಗ, ಅಂಥ ಸಮಯದಲ್ಲಿ ಯಜ್ಞ ಸಂಸ್ಕೃತಿಯನ್ನು ವಿರೋಧಿಸಿ ಶೈವ ಸಂಸ್ಕೃತಿಯನ್ನು ಪ್ರತಿಪಾದಿಸಿದವನು ವೀರಭದ್ರ. ಈ ಸಾಂಸ್ಕೃತಿಕ ವೀರನ ಸಮುದಾಯಮುಖಿ ಪ್ರಜ್ಞೆ ಇಂದಿನ ಪುರವಂತಿಕೆ ಕುಣಿತದಲ್ಲಿ ಕಂಡುಬರುತ್ತದೆ.

ಕಲಾ ಪ್ರದರ್ಶನದ ಅಗತ್ಯತೆ

ಗುಗ್ಗಳದ ಆಚರಣೆಯಲ್ಲಿ ಪುರವಂತಿಕೆ ನೃತ್ಯ ಮಾಡುವುದು ಖಡ್ಗ ಹೇಳುವುದು ಹೀಗೆ ಅನೇಕ ಪ್ರದರ್ಶನ ಕಲೆಗಳು ಏರ್ಪಡುತ್ತವೆ. ಇವು ಆಚರಣೆಗೆ ಹುರುಪು ತುಂಬುತ್ತವೆ. ಇಲ್ಲಿ ಭಕ್ತಿಯ ಉದ್ದೀಪನವಿದೆ. ನೋವು ತಡೆಯುವ ಶಕ್ತಿಯ ಜೊತೆ ಉದ್ವೇಗ, ಭಯ ನಿವಾರಣೆಯಾಗುತ್ತದೆ. ಶಬ್ದದಿಂದ ಭಕ್ತರಲ್ಲಿ ಮಂತ್ರ ಮೋಡಿಯಾಗಿ ದೈವೀಭಾವ ಹೆಚ್ಚುತ್ತದೆ; ತಲ್ಲೀನತೆ ಮೂಡುತ್ತದೆ. ಸಂಗೀತ, ಕಲೆಗಳಿಂದ ವ್ಯಕ್ತಿ ಮಾನಸಿಕವಾಗಿ ಗಟ್ಟಿಗೊಳ್ಳುತ್ತಾನೆ. ಈ ರೀತಿಯ ಆಚರಣೆಗಳಲ್ಲಿ ಮಾನಸಿಕ ಸಿದ್ಧತೆ ನಡೆಸಲು ಕಲಾಪ್ರದರ್ಶನ ಪೂರಕವಾದುದಾಗಿದೆ.

ಪಂಜಿನ ಸೇವೆ

ಬಳ್ಳಾರಿ ಜಿಲ್ಲೆಯಲ್ಲಿ ಸಾಮಾನ್ಯವಾಗಿ ದೈವಗಳ ಆಚರಣೆಗಳಲ್ಲಿ ಪಂಜಿನ ಸೇವೆ ನಡೆಯುತ್ತದೆ. ಗ್ರಾಮಗಳ ಹಬ್ಬ, ಆಚರಣೆಗಳಲ್ಲಿ ರಾತ್ರಿಯಲ್ಲಿ ನಡೆಯುವ ಆಚರಣೆಗಳಲ್ಲಿ, ಗಂಗೆ ತರುವಾಗ, ದೈವದ ಜಾತ್ರೆಗಳಲ್ಲಿ ಪಂಜು ಹಿಡಿಯುವ ಕಾಯಕ ಮಡಿವಾಳ ಸಮುದಾಯದವರದಾಗಿರುತ್ತದೆ. ಅದನ್ನು ವಂಶಪಾರಂಪರಿಕವಾಗಿ ಇಂದಿಗೂ ಮುಂದುವರಿಸಿಕೊಂಡು ಬಂದಿದ್ದಾರೆ. ಇದು ಅವರ ಹಕ್ಕಿನ ವಿಷಯವಾಗಿದೆ. ಕೃಷಿಕರು ಇವರ ಕಾಯಕಕ್ಕೆ ಧಾನ್ಯರೂಪದ ಸುಂಕ ನೀಡಿ ಗೌರವಿಸುತ್ತಾರೆ. ಇಂದಿನ ಆಧುನಿಕ ಯುಗದಲ್ಲಿ ಜಗಮಗಿಸುವ ವಿದ್ಯುತ್ ದೀಪಗಳಿದ್ದರೂ ಸಾಂಪ್ರದಾಯಿಕವಾಗಿ ಪಂಜಿನ ಬೆಳಕಿನಲ್ಲಿ ದೈವಗಳ ಉತ್ಸವಗಳನ್ನು ಮುನ್ನಡೆಸುತ್ತಾರೆ. ಪಂಜು ಹಿಡಿಯುವಿಕೆ ಆಚರಣೆಗಳಲ್ಲಿ ಕಡ್ಡಾಯವಾದ ನಿಯಮ. ವೈವಿಧ್ಯಮಯವಾದ ಕೌಶಲ್ಯ ಪ್ರದರ್ಶನಗಳು ಪಂಜಿನ ಕುಣಿತದಲ್ಲಿವೆ. ಇಲ್ಲಿ ಅಗ್ನಿ ಶುಭ ಹಾಗೂ ಶಾಂತಿಯ ಸಂಕೇತ. ಅದು ಜ್ಯೋತಿರೂಪಿಯಾಗಿ ಜನಪದರ ಆಚರಣೆಗಳಲ್ಲಿ ಪ್ರಮುಖ ಸ್ಥಾನ ಪಡೆದುಕೊಂಡಿದೆ.

ಕೊಂಡ ಪವಾಡ

ಸ್ತ್ರೀದೈವಗಳ ಆಚರಣೆಯಲ್ಲಿ ಕೊಂಡ ಹಾಯುವ ಸಂಪ್ರದಾಯವಿದೆ. ಹೊಸಪೇಟೆ ತಾಲೂಕು ಪಾಪಿನಾಯಕನಹಳ್ಳಿಯಲ್ಲಿ ಅಂಕಾಲಮ್ಮ ದೈವಕ್ಕೆ ಕೊಂಡ ಪವಾಡ ನೆರವೇರುತ್ತದೆ. ೧೦ ಅಡಿ ಉದ್ದ, ೮ ಅಡಿ

ಅಗಲದ ಕೊಂಡ ನಿರ್ಮಿಸುತ್ತಾರೆ. ಪ್ರಥಮವಾಗಿ ಪೂಜಾರಿ ನಂತರ ಭಕ್ತರು ಬರಿಗಾಲಿನಲ್ಲಿ ಕೊಂಡ ಹಾಯುತ್ತಾರೆ. ದೇವಿಯು ಪೂಜಾರಿಯ ಮೈಮೇಲೆ ಆವಾಹನೆಯಾಗಿರುತ್ತಾಳೆ. ಆ ವರ್ಷದ ಒಳಿತು, ಕೆಡುಕುಗಳ ಬಗ್ಗೆ ಭಕ್ತರ ಪ್ರಶ್ನೆಗಳಿಗೆ ಉತ್ತರ ದೊರೆಯುತ್ತದೆ. ಈ ರೀತಿ ವರ್ಷ ಭವಿಷ್ಯದ ಹೇಳಿಕೆಯು ಮುಂಬರುವ ಕಷ್ಟ, ಸುಖಗಳನ್ನು ಅನುಭವಿಸಲು ಮಾನಸಿಕವಾಗಿ ಸದೃಢರನ್ನಾಗಿಸುತ್ತದೆ. "ಸ್ತ್ರೀದೈವಗಳು ಮಾತೃಪ್ರಧಾನ ಸಂಸ್ಕೃತಿಯನ್ನು ಸಂಕೇತಿಸುತ್ತವೆ. ಅಗ್ನಿಯೂ ಪುರುಷ ಪ್ರಧಾನ ಸಮಾಜದ ಪ್ರತಿನಿಧಿ" (ಕೆ.ವೈ. ನಾರಾಯಣಸ್ವಾಮಿ, ೨೦೦೦, ಪು. ೭೮). ಕೃಷಿ ಹಾಗೂ ಗ್ರಾಮದೈವಗಳು ಜಲಸ್ವರೂಪಿ ದೈವಗಳಾಗಿವೆ. ಜಗತ್ತಿನ ಎಲ್ಲಾ ನದಿ ಸಂಸ್ಕೃತಿಗಳು ಆರಂಭ ಕಾಲದಲ್ಲಿ ಮಾತೃಪ್ರಧಾನ ಸಮಾಜಗಳಾಗಿದ್ದು, ನೀರನ್ನು ಸಾಂಕೇತಿಕ ಪ್ರತಿನಿಧಿಯಾಗಿಸಿವೆ. ಇಂದಿಗೂ ಗಂಗೆಯನ್ನು ಪೂಜಿಸಿದ ನಂತರ ಅಗ್ನಿ ತುಳಿಯುವುದು ಗಮನಾರ್ಹ.

ಆಗಿನ ತುಳಿಯುವ ಆಚರಣೆ

ಹಡಗಲಿ ತಾಲೂಕು ಹಗರನೂರಿನಲ್ಲಿ ಯುಗಾದಿಯ ನಂತರ ಆಂಜನೇಯ ಸ್ವಾಮಿಯ ಜಾತ್ರೆ ನಡೆಯುತ್ತದೆ. ಈ ಸಮಯದಲ್ಲಿ ಹೊಳೆಯಿಂದ ಪೂಜಿಸಿ ತಂದ ಉತ್ಸವಮೂರ್ತಿಯೊಂದಿಗೆ ಭಕ್ತರು ಕೊಂಡ ಹಾಯ್ದು ದೇವಸ್ಥಾನ ಪ್ರವೇಶಿಸುತ್ತಾರೆ. ಇಲ್ಲಿ ಕೊಂಡಕ್ಕೆ ಹುಣಸೆ ಚಕ್ಕೆ ಮಾತ್ರ ಬಳಸುತ್ತಾರೆ. ಇದರಿಂದ ತಯಾರಾದ ಕೆಂಡದಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಾಗಿರುತ್ತದೆಂಬ ನಂಬಿಕೆಯಿದೆ. ಈ ಹಿನ್ನೆಲೆಯಲ್ಲಿ ಬಾಣಂತಿಯರಿಗೆ ಹೆಚ್ಚಾಗಿ ನರದೌರ್ಬಲ್ಯವಿರುವ ಪ್ರಯುಕ್ತ ಹುಣಸೆ ಚಕ್ಕೆಯ ಕೆಂಡದಿಂದ ಕಾವು ಕೊಡುತ್ತಾರೆ. ಆಂಜನೇಯ ಸ್ವಾಮಿಯ ಹೆಸರಲ್ಲಿ ಭಕ್ತರಿಗೆ ಭುಜದ ಎಡ, ಬಲಕ್ಕೆ ಶಂಖ, ಚಕ್ರದ ಮುದ್ರೆ ಹಾಕುತ್ತಾರೆ. ಸಂಸಾರಿಗಳಾದ ಇವರನ್ನು ದಾಸದಾಸಿಯರೆಂದು ಕರೆಯುತ್ತಾರೆ. ಇವರು ದೈವದ ಪರಿಚಾರಕರಾಗಿ ಗುರುತಿಸಿಕೊಂಡಿರುವುದಲ್ಲದೇ ಸುಳ್ಳು ಹೇಳುವಂತಿಲ್ಲ, ತಪ್ಪು ಮಾಡುವಂತಿಲ್ಲ. ಇವರಿಗಿರುವ ವಿಧಿ-ನಿಷೇಧಗಳು ದೈವೀಭಯದ ನೆರಳಲ್ಲಿ ಸಮಾಜ ತಿದ್ದುವಿಕೆ ಕಾರ್ಯ ನಡೆಸುವಂಥವುಗಳಾಗಿವೆ. ಸಂಡೂರಿನ ಗಂಡಿನರಸಿಂಹಸ್ವಾಮಿ ಜಾತ್ರೆಯಲ್ಲಿ ಈ ರೀತಿಯ ಆಚರಣೆ ನಡೆಯುತ್ತದೆ.

ಮರಿಯಮ್ಮನಹಳ್ಳಿ ಆಂಜನೇಯ ಹಾಗೂ ಕೂಡ್ಲಿಗಿ ಕೊತ್ಲದಯ್ಯ ದೈವದ ಹೆಸರಲ್ಲಿ ಮುದ್ರಧಾರಣೆ ನೆರವೇರುತ್ತದೆ. ಇದು ಬಸವಿ ಬಿಡುವ ಪದ್ಧತಿಗೆ ಅಂಕಿತ ಹಾಕುವ ಆಚರಣೆಯಾಗಿದ್ದು, ಮೇಲುವರ್ಗದವರ ಸ್ವಾರ್ಥ ಸಾಧನೆಗೆ ದೈವೀಭಾವದ ಹಿನ್ನೆಲೆಯಲ್ಲಿ ರೂಪಿಸಿದ ಅನಿಷ್ಟ ಪದ್ಧತಿಯಾಗಿದೆ. ಇಲ್ಲಿ ಪುರುಷ ಪ್ರಧಾನ ಸಮಾಜದ ಹುನ್ನಾರಕ್ಕೆ ಸ್ತ್ರೀಯರ ಬಲಿಯಾಗುವಿಕೆಯಿದೆ. ಇಂಥ ಆಚರಣೆಗಳು ಇಂದಿಗೂ ಗೌಪ್ಯವಾಗಿ ನಡೆಯುತ್ತವೆ. ಕಾನೂನು ಹಾಗೂ ಸಮಾಜ ಇದರ ಕೆಡುಕಿನ ಬಗ್ಗೆ ಹೆಚ್ಚು ಜಾಗೃತಿಯನ್ನು ಮೂಡಿಸಿ, ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಶ್ರಮಿಸುವ ಅಗತ್ಯತೆ ಇದೆ.

ಹಿಂದೆ ಕಾಡು ಕಡಿದು ವ್ಯವಸಾಯಕ್ಕೆ ಭೂಮಿಯನ್ನು ಸಿದ್ಧಗೊಳಿಸಿಕೊಳ್ಳಲು ಕೊಂಡ ಹಾಯುವ ಪದ್ಧತಿ ಬಂದಿರಬೇಕು. ಇಂದು ನಿಸರ್ಗ ನಾಶದಿಂದ ಮರಗಿಡಗಳು ವಿರಳವಾಗಿವೆ. ಬದಲಾದ ಪರಿಸರದ ಕಾರಣದಿಂದ ಇಂಥ ಆಚರಣೆಗಳು ತಮ್ಮ ಅಸ್ತಿತ್ವ ಕಳೆದುಕೊಳ್ಳುವಂತಾಗಿದೆ. ಜನಪದ ಆಚರಣೆಗಳು ಕಾಲಮಾನಕ್ಕೆ ತಕ್ಕಂತೆ ಬದಲಾವಣೆ ಬಯಸುತ್ತವೆ. ಇಂದು ಕೊಂಡ ಹಾಯುವ ಆಚರಣೆಗಳು ಉರುವಲಿನ ಸಮಸ್ಯೆಯಿಂದ ಸಾಂಕೇತಿಕವಾಗಿ ಉಳಿದಿರುವುದನ್ನು ತಳ್ಳಿಹಾಕುವಂತಿಲ್ಲ. ಇವು ದೈವೀಭಯದ ಹಿನ್ನೆಲೆಯಲ್ಲಿ ನಡೆಯುವ ಹರಕೆ ರೂಪದ ಆಚರಣೆಗಳಾಗಿವೆ. ಇವನ್ನು ಸಾಮಾನ್ಯ ದಿನಗಳಲ್ಲಿ ಮಾಡಲು ಸಾಧ್ಯವಿಲ್ಲ. ಇಲ್ಲಿ ಹಲವಾರು

ಕಟ್ಟುಪಾಡುಗಳಿದ್ದು, ಅತಿಮಾನುಷ ಕ್ರಿಯೆಯಾಗಿ ನೆರವೇರುವುದರಿಂದ ಪವಾಡಗಳೆಂದು ಕರೆಯುವುದುಂಟು. ಇವು ದೈವದ ಮಹತ್ವವನ್ನು ಜಗತ್ತಿಗೆ ಸಾರುವ ಪ್ರಭಾವಿ ಆಚರಣೆಗಳಾಗಿವೆ. ಇಂಥ ಆಚರಣೆಗಳನ್ನು ಮನೋವೈಜ್ಞಾನಿಕವಾಗಿ ಹೀಗೆ ವಿಶ್ಲೇಷಿಸಲಾಗುತ್ತದೆ. "ನೋವು ಎಲ್ಲರಿಗೂ ಒಂದೇ ಮಟ್ಟದಲ್ಲಿ ಆಗುತ್ತದೆ. ಆದರೂ ಅದನ್ನು ಸಹಿಸುವ ಶಕ್ತಿ ಎಲ್ಲರಿಗೂ ಒಂದೇ ರೀತಿ ಇರುವುದಿಲ್ಲ. ಸಹಿಷ್ಣುತೆ ಎಂಬುದು ದೇಹಕ್ಕೆ ಸಂಬಂಧಿಸಿದ ವಿಷಯವಲ್ಲ. ಮನಸ್ಸಿಗೆ ಸಂಬಂಧಿಸಿದ್ದು".[೪೬] ಇಲ್ಲಿ ಜನಪದರು ದೈವದ ಬಗ್ಗೆ ಇಟ್ಟಿರುವ ಅಪಾರ ಭಕ್ತಿ ವ್ಯಕ್ತವಾಗುತ್ತದೆ. ಅವರು ತಮಗೆ ದೊರೆತ ಸುವರ್ಣಾವಕಾಶವೆಂದೂ, ತಮ್ಮ ಪಾಲಿನ ಕರ್ತವ್ಯವೆಂದು ಭಾವಿಸುತ್ತಾರೆ. ಇಲ್ಲಿ ಯಾವುದೇ ಫಲಾಪೇಕ್ಷೆಯಿರುವುದಿಲ್ಲ. ಮಾನಸಿಕ ನೆಮ್ಮದಿ ಮಾತ್ರ ದೊರೆಯುತ್ತದೆ. ಒಟ್ಟಿನಲ್ಲಿ ಜನಪದರು ದೈವೀಭಾವದ ಆತ್ಮಾನಂದದಲ್ಲಿ ಏನನ್ನಾದರೂ ಮಾಡಲು ಸಿದ್ಧರಿರುತ್ತಾರೆ. ಅವರ ಮಾನಸಿಕ ಸ್ಥಿತಿ, ಉದ್ದೇಶಿತ ಕೆಲಸಗಳು ಸಂಪೂರ್ಣ ತನ್ನನ್ನು ದೈವಕ್ಕೆ ಅರ್ಪಿಸಿಕೊಳ್ಳುವಂಥವುಗಳಾಗಿರುತ್ತವೆ. ಮೌಲ್ಯಯುತವಾದ ಅವರ ಜೀವದ(ಪ್ರಾಣದ) ತ್ಯಾಗಕ್ಕೂ ಸಿದ್ಧರಿರುವ ಸ್ಥಿತಿಯನ್ನು ತಲುಪಿರುತ್ತಾರೆ.

ದೈವದ ಅಸ್ತಿತ್ವವನ್ನು ನಂಬಿ ನಡೆಯುವ ಜನಪದರ ಬದುಕನ್ನು ವೈಜ್ಞಾನಿಕ ವಿಶ್ಲೇಷಣೆಗೆ ಒಳಪಡಿಸಿ, ವಾಸ್ತವ ಸಂಗತಿಯನ್ನು ಮನವರಿಕೆ ಮಾಡಿಕೊಡಬೇಕಿದೆ. ಈ ನಿಟ್ಟಿನಲ್ಲಿ ಇಂಥ ನಂಬಿಕೆ, ಆಚರಣೆಗಳ ಅಧ್ಯಯನ ನಡೆಯಬೇಕಿದೆ. ಅವುಗಳ ಮಹತ್ವ ಹಾಗೂ ಭಕ್ತರ ಮಾನಸಿಕ ಸ್ಥಿತಿ ಅರಿಯಲು ಇನ್ನಿತರ ಜ್ಞಾನಶಿಸ್ತುಗಳಲ್ಲಿ ಅವಲೋಕಿಸುವ ಅಗತ್ಯತೆ ಇದೆ.

೩.೩೪. ಮೊಹರಂ ಆಚರಣೆ

ಮನುಷ್ಯನು ತನ್ನ ಜೀವನದಲ್ಲಿ ತನ್ನ ಸಮುದಾಯದ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿರುತ್ತಾನೆ. ಹಾಗೆಯೇ ಸಮಾಜದ ಇತರ ಸಮುದಾಯಗಳ ಸಂಸ್ಕೃತಿಯನ್ನು ಸಹ ತನ್ನದಾಗಿಸಿಕೊಳ್ಳುತ್ತಾನೆ. ಮುಸ್ಲಿಮರ ಹಿಜರಿ ಸಂವತ್ಸರದಲ್ಲಿ ಮೊಹರಂ ಮೊದಲ ತಿಂಗಳು. ಮೊಹರಂ ಅರಬ್ಬಿ ಭಾಷೆಯ ಶಬ್ದ. ಇದರರ್ಥ ನಿಷಿದ್ಧವಾದುದು. ಅಶುಭ ಹಾಗೂ ದುಃಖದಾಯಕವಾದುದೆಂದು ಪರಿಗಣಿಸಲಾಗಿದೆ. ಈ ಹಿನ್ನೆಲೆಯಲ್ಲಿ ಭಾವೈಕ್ಯತೆ ಮೂಡಿಸುವಿಕೆ ಮೊಹರಂ ಹಬ್ಬದ ಪ್ರಮುಖ ಆಶಯವಾಗಿದೆ. ಹಿಂದೂ-ಮುಸ್ಲಿಮ್ ಭೇದವಿಲ್ಲದೆ ಎಲ್ಲರೂ ಬೆರೆತು ಆಚರಿಸುವ ವೈವಿಧ್ಯತೆ ಆಚರಣೆಯಲ್ಲಿದೆ.

ಬಹುತೇಕ ಮುಸ್ಲಿಮ್ ಹಬ್ಬಗಳು ಚಂದ್ರದರ್ಶನವನ್ನು ಅವಲಂಬಿಸಿವೆ. ಮೊಹರಂ ಮೊದಲ ದಿನ ಚಂದ್ರದರ್ಶನವಾದರೆ ಮಾತ್ರ ಗುದ್ದಲಿ ಪೂಜೆ ನೆರವೇರುತ್ತದೆ. ದೇವರ ಮಂತ್ರ ಪಠಣದೊಂದಿಗೆ ಪಶ್ಚಿಮಾಭಿಮುಖವಾಗಿ ನೆಲಕ್ಕೆ ಗುದ್ದಲಿಯಿಂದ ಕಚ್ಚು ಹಾಕುತ್ತಾರೆ. ಇದಾದ ನಂತರ ಗ್ರಾಮಗಳಲ್ಲಿ ಮಾಂಸಾಹಾರ ಸೇವನೆಗೆ ನಿಷೇಧ. ಸಿರುಗುಪ್ಪ ತಾಲೂಕು ಅಗಸನೂರಿನಲ್ಲಿ ಚಪ್ಪಲಿ ಮೆಟ್ಟುವಂತಿಲ್ಲ, ಮಂಚದ ಮೇಲೆ ಮಲಗುವಂತಿಲ್ಲ, ಬೀಡಿ, ಸಿಗರೇಟು ಸೇದುವಂತಿಲ್ಲ. ಬಳ್ಳಾರಿ ತಾಲೂಕು ಸಿಂಧುವಾಳದಲ್ಲಿ ವಿಶೇಷ ಆಚರಣೆಯಿದೆ. ಈ ಗ್ರಾಮಗಳು ಸಂಪೂರ್ಣವಾಗಿ ನಿಷೇಧಕ್ಕೆ ಒಳಪಟ್ಟಿರುತ್ತವೆ. ಬಳ್ಳಾರಿ ಜಿಲ್ಲೆಯಲ್ಲಿ ಗುದ್ದಲಿ ಹಾಕುವ ಮುನ್ನ ಹೆಣ್ಣು ಮಕ್ಕಳನ್ನು ತವರಿಗೆ ಕರೆತರುವ ಸಂಪ್ರದಾಯವಿದೆ. ಇವರು ಹಬ್ಬ ಮುಗಿಯುವವರೆಗೂ ಗ್ರಾಮ ತೊರೆಯುವಂತಿಲ್ಲ.

ಐತಿಹಾಸಿಕ ಹಿನ್ನೆಲೆಯ ಪ್ರಕಾರ ಸ್ವಧರ್ಮೀಯರಲ್ಲೇ ನಡೆದ ಕರ್ಬಲಾ ಧರ್ಮಯುದ್ಧದ ನೆನಪಿನ ಆಚರಣೆ ಇದಾಗಿದೆ. "ಹಿಜರಿಸನ್ ೬೧ ಮೊಹರಂ ತಿಂಗಳ(ಕ್ರಿ.ಶ. ೬೮೦) ದಿನ ಯುಜೇದನ ಅಸಂಖ್ಯಾತ ಸೈನಿಕರಿಗೂ, ಹುಸೇನರ ಅನುಯಾಯಿಗಳಿಗೂ ಯುದ್ಧ ನಡೆಯಿತು. ಹುಸೇನರ ವೀರಾವೇಶದ ಹೋರಾಟಕ್ಕೆ ವೈರಿ ಸೈನಿಕರು ತತ್ತರಿಸಿದರು. ಯುದ್ಧನೀತಿ ಮುರಿದು ಮೋಸದಿಂದ ಇಮಾಮ ಹುಸೇನರನ್ನು ಕೊಲ್ಲಲಾಯಿತು. ಮೋಸಕ್ಕೆ ಜಯವಾಗಿ, ಧರ್ಮಕ್ಕೆ ಸೋಲಾಯಿತು. ಹಾಗೆ ಮೆಕ್ಕ, ಮದೀನಾದ ಜನ ಯುಜೀದನ ವಿರುದ್ಧ ದಂಗೆಯೆದ್ದು, ಸೇಡು ತೀರಿಸಿಕೊಂಡರು".[೪೬] ಹುಸೇನರ ಆತ್ಮಕ್ಕೆ ಶಾಂತಿ ಸಿಗಲೆಂಬ ಕಾರಣದಿಂದ ಮೊಹರಂ ತಿಂಗಳಲ್ಲಿ ಮುಸ್ಲಿಮ್ ಸಮುದಾಯದವರಿಂದ ಕುರಾನ್ ಪಠಣ, ದಾನ, ಧರ್ಮ ಇತ್ಯಾದಿ ನೆರವೇರುತ್ತವೆ. ಇಂಥ ದುಃಖಮೂಲವಾದ ಆಚರಣೆ 'ಅಮೀರ ತೈಮೂರಲಂಗನ' (ಕ್ರಿ.ಶ. ೧೩೩೬-೧೪೦೫) ಕಾಲದಲ್ಲಿ ಭಾರತ ಪ್ರವೇಶಿಸಿತು'(ಜಾನಪದ ಗಂಗೋತ್ರಿ, ಪು. ೮೦). ಹಿಂದುಗಳ ಪ್ರಭಾವ, ಬ್ರಿಟೀಷರ ಪೈಪೋಟಿಯಿಂದ, ಶೋಕಸ್ಥಾಯಿಯಾದ ಮೂಲ ಆಚರಣೆ ಮರೆಯಾಗಿ ಸಂಭ್ರಮದ ಹಬ್ಬವಾಗಿ ಮಾರ್ಪಾಟಾಯಿತು.

ಕತ್ತಲ ರಾತ್ರಿ

ಹಜರತ್ ಇಮಾಮ್ ಹುಸೇನರ ಅನುಯಾಯಿಗಳು ೯ನೇ ದಿನದಂದು ರಾತ್ರಿ ಯುಜೀದನ ಸೈನಿಕರ ವಿರುದ್ಧ ಹೋರಾಡಿ ಹುತಾತ್ಮರಾದರು. ಅವರ ನೆನಪಿಗಾಗಿ ಕತ್ತಲರಾತ್ರಿ ಆಚರಿಸುತ್ತಾರೆ. 'ಖತಲ್ ಕೀ ರಾತ್' ಎಂಬುದು ಜನಪದರ ಆಡುಮಾತಿನಲ್ಲಿ ಕತ್ತಲ ರಾತ್ರಿಯಾಗಿದೆ. ಸಾಮೂಹಿಕವಾಗಿ ಪ್ರತಿಯೊಂದು ಓಣಿಯವರು ಗುಂಪಾಗಿ ತಪ್ಪಡಿ ಹೊಡೆಸಿಕೊಂಡು, ಹೊಸ ಬಟ್ಟೆ ಧರಿಸಿ, ಉಪವಾಸದಿಂದ ಮಸೀದಿಗೆ ಆಗಮಿಸುತ್ತಾರೆ. ಮಣ್ಣಿನ ಹೊಸ ಕುಂಭಗಳಲ್ಲಿ ತಂದ ಬೆಲ್ಲದ ನೀರು, ಕಾಮಕಸ್ತ್ರಿ ಬೀಜ, ಹಾಲು ಸೇರಿಸಿ ತಯಾರಿಸಿದ ಪಾನಕದಲ್ಲಿ ಒಂದು ನಾಣ್ಯ ಹಾಕಿ ನೈವೇದ್ಯ ಅರ್ಪಿಸುತ್ತಾರೆ. ಯುದ್ಧ ಅಥವಾ ಶಕ್ತಿ ಪ್ರದರ್ಶನಕ್ಕೆ ಹೋಗುವ ಸಮಯದಲ್ಲಿ ಸಿಹಿ ಸೇವಿಸಿ ಹೋದರೆ ಜಯಶಾಲಿಯಾಗಿ ಬರುವರೆಂಬುದು ಜನಪದರ ನಂಬಿಕೆ. ಕಾಮಕಸ್ತ್ರಿ ಬೀಜ ಹಾಗೂ ಬೆಲ್ಲದಲ್ಲಿ ತಂಪುಕಾರಕ ಗುಣಗಳಿದ್ದು, ದೇಹವನ್ನು ತಂಪಾಗಿಸುವುದಲ್ಲದೆ, ಕಂಠಶುದ್ಧಿ ಮಾಡುತ್ತವೆ. ದೇಹ ಶುದ್ಧಿಗೆ ಲೋಹಗಳ ಅಗತ್ಯತೆ ಇದೆ. ಈ ಹಿನ್ನೆಲೆಯಲ್ಲಿ ಸಾಮೂಹಿಕ ಪಾನಕ ಸೇವನೆ ಅರ್ಥಪೂರ್ಣವಾಗಿದೆ. ಪಾನಕ ಸೇವನೆಯ ನಂತರ ಉಪವಾಸ ಅಂತ್ಯಗೊಳ್ಳುವುದು.

ಇಮಾಮ್ ಹುಸೇನರು ಯುದ್ಧಕ್ಕೆ ಹೊರಡುವ ಮುನ್ನ ಶಮ(ಪಂಜು) ಹಚ್ಚಿದ್ದರೆಂದು, ಇಂದಿಗೂ ಮಧ್ಯರಾತ್ರಿಯಲ್ಲಿ ಶಮ ಹಚ್ಚುವ ವಾಡಿಕೆಯಿದೆ. ಆಚರಣೆಯಲ್ಲಿ ಪಂಜು ಹಿಡಿದ ವ್ಯಕ್ತಿ ಮುಸ್ಲಿಮನಾದರೆ, ಆತನ ಟೊಂಕ ಹಿಡಿಯುವ ವ್ಯಕ್ತಿ ಹಿಂದುವಾಗಿರುತ್ತಾನೆ. ಇದು ಅವರಿಬ್ಬರ ನಡುವಿನ ಸೌಹಾರ್ದತೆಯ ಸಂಕೇತ. ಹುಸೇನರ ಕುಟುಂಬ ವರ್ಗದ ರಕ್ಷಣೆಗಾಗಿ ಅವರು ವಾಸಿಸುವ ಡೇರೆಯ ಸುತ್ತಾ ಬೆಂಕಿ ಹಾಕಿದ್ದರೆಂದು ಈಗಲೂ ಬೆಂಕಿ ಹಾಕುವ ಸಂಪ್ರದಾಯ ಉಳಿದುಕೊಂಡಿದೆ. ಆಳವಾದ ಆಲಾಯಿ ಕುಣಿ ನಿರ್ಮಿಸಿ, ಬಂಡಿಗಳಲ್ಲಿ ಮರ ಕಡಿದು ತಂದ ಕಟ್ಟಿಗೆಯನ್ನು ತುಂಬುತ್ತಾರೆ. ಇಲ್ಲಿ ಕೆಂಡ ತುಳಿಯುವಿಕೆಯು ಶತ್ರುವನ್ನು ದಮನಿಸುವ ಕ್ರಿಯೆಯಾಗಿದೆ. ಕೆಂಡ ತುಳಿಯುವಿಕೆಯಿಂದ ಜನರಲ್ಲಿಯ ಭಯ ನಿವಾರಣೆಯಾಗಿ ರೋಗರುಜಿನಗಳು ಇಲ್ಲವಾಗುತ್ತದೆಂಬ ನಂಬಿಕೆಯಿದೆ. ಆಲಾಯಿ ಕುಣಿಯಿಂದ ದೇವರ ಹೆಸರಲ್ಲಿ ತಂದ ಭಸ್ಮವನ್ನು ಜಾನುವಾರುಗಳ ಕೊಟ್ಟಿಗೆ, ಬೆಳೆಗಳಿಗೆ ಉಗ್ಗುತ್ತಾರೆ. ಭಸ್ಮ ರೋಗನಿರೋಧಕ ಗುಣವುಳ್ಳದ್ದೆಂಬ ಆಶಯ ಇಲ್ಲಿಯದಾಗಿದೆ.

ಸಾಮಾನ್ಯವಾಗಿ ಮೊಹರಂ ಹಬ್ಬದಲ್ಲಿ ಕೈದೇವರುಗಳಿಗೆ ಹೆಚ್ಚಿನ ಮಹತ್ವವಿದೆ. ಇವು ಹುತಾತ್ಮರಾದ ಧಾರ್ಮಿಕ ವ್ಯಕ್ತಿಗಳ ಪ್ರತಿರೂಪ ಎಂಬ ನಂಬಿಕೆಯಿದೆ. ತಾಮ್ರ, ಬೆಳ್ಳಿ, ಪಂಚಲೋಹಗಳಿಂದ ತಯಾರಿಸಿದ ಹಸ್ತರೂಪದ ದೇವರುಗಳಾಗಿರುತ್ತವೆ. ಇವು ಹುತಾತ್ಮರ ಹಸ್ತಪ್ರತೀಕವಾಗಿ ಇಂದಿಗೂ ಆರಾಧಿಸಲ್ಪಡುತ್ತವೆ. ಆದಿಮಾನವ ಶಿಲಾಯುಗ, ಲೋಹಯುಗಗಳಿಂದ ಹಂತ ಹಂತವಾಗಿ ಬದಲಾವಣೆಗೊಂಡು ಆಧುನಿಕ ಮಾನವನಾಗಿದ್ದಾನೆ. ಪ್ರಕೃತಿಯ ಮಡಿಲಲ್ಲಿರುವ ಗಿಡ, ಮರ, ಕಲ್ಲು, ಮಣ್ಣುಗಳಷ್ಟೇ, ಲೋಹಗಳು ಆಚರಣೆಗಳಲ್ಲಿ ಮಹತ್ವ ಪಡೆದಿವೆ. ಮಾನವ ಅವುಗಳಲ್ಲೂ ದೈವೀಭಾವ ಕಂಡುಕೊಂಡಿದ್ದಾನೆ. ಬೇಡಿಕೆಗಳು ಈಡೇರಿದಾಗ ದೇವರ ಮೂರ್ತಿ, ಛತ್ರಿ, ಝುಂಡೆ, ಕುದುರೆ ಹೀಗೆ ಲೋಹರೂಪದ ಆಕೃತಿಗಳನ್ನು ಅರ್ಪಿಸುತ್ತಾರೆ.

ದೇವರ ಉತ್ಸವ ಪ್ರತಿ ಮನೆಗೂ ಆಗಮಿಸಿದಾಗ, ಊದುಬತ್ತಿ ಹಚ್ಚಿ, ಸಕ್ಕರೆ ನೈವೇದ್ಯ ಮಾಡುತ್ತಾರೆ. ಆ ಸಮಯದಲ್ಲಿ ನಡೆಮುಡಿ ಹಾಸಿ ಓಣಿ ಮಲೀನವಾಗದಂತೆ ಭಯ-ಭಕ್ತಿಯಿಂದ ನೋಡಿಕೊಳ್ಳುತ್ತಾರೆ. ಕೈ ದೇವರುಗಳು ಮೈದುಂಬಿ ಹರಕೆ ಮುಟ್ಟಿಸಿದ ಭಕ್ತರೊಂದಿಗೆ ಮಾತಿಗಿಳಿಯುತ್ತವೆ. ದೈವಗಳು ಮತ್ತು ಭಕ್ತರ ನಡುವೆ ಒಳಿತು-ಕೆಡುಕುಗಳ ಬಗ್ಗೆ ಮಾತಿನ ಚಮತ್ಕಾರಗಳು ನಡೆಯುವ ಸಂದರ್ಭ ಇದು. ಈ ರೀತಿಯ ಆಚರಣೆಗಳಿಂದ ಭಕ್ತರು ದೈವದ ಬೆಂಬಲ ತಮಗಿದೆ. ದೈವ ತಮ್ಮನ್ನು ಕಾಪಾಡುತ್ತದೆಂಬ ಭಾವನೆಯನ್ನು ಹೊಂದುತ್ತಾರೆ. ಇದು ಅವರಲ್ಲಿಯ ಜೀವನೋತ್ಸಾಹ ಇಮ್ಮಡಿಯಾಗಿಸುತ್ತದೆ.

ಮೊಹರಂ ಕೊನೆ ದಿನ

ಇಮಾಮ್ ಹುಸೇನರು ಹುತಾತ್ಮರಾದ ದಿನ, ಮೊಹರಂ ಕೊನೆಯ ದಿನವಾಗಿದೆ. ಈ ದಿನವನ್ನು 'ದಫನ್' ಎಂದು ಕರೆಯುವ ವಾಡಿಕೆ ಇದೆ. ಅಂದು ದೇವರುಗಳನ್ನು ನೀರಲ್ಲಿ ಇಳಿಸಿ, ಕೈ ದೇವರುಗಳ ಮುಖಕ್ಕೆ ಬಟ್ಟೆ ಕಟ್ಟಿ, ಧರ್ಮ ಗುರುಗಳು ಮಂತ್ರ ಪಠಣ ಮಾಡಿ ಪ್ರಸಾದ ಹಂಚುತ್ತಾರೆ. ಈ ಸಮಯದಲ್ಲಿ ಈ ರೀತಿಯ ಶೋಕಗೀತೆಯನ್ನು ಹಾಡುತ್ತಾರೆ.

ಅಲ್‌ಬಿದಾಯೋ, ಅಲ್‌ಬಿದಾಯೋ । ಹಸನ ಹುಸೇನಿ ಹನೀಫನಿಫಾ ।
ಜಾಕೆಸುಂ ತಾನಾ ಆಲ್‌ಬಿದಾಯೋ ಆಲ್‌ಬಿದಾಯೋ ।

ಧರ್ಮಯುದ್ಧದಲ್ಲಿ ಮಡಿದವರ ಆತ್ಮಕ್ಕೆ ಶಾಂತಿ ಸಿಗಲೆಂಬ ಆಶಯ ಇಲ್ಲಿದೆ.

ಫಕೀರರಾಗುವುದು

ಯುಜೀದ್ ಸೈನಿಕರು ಕರ್ಬಾಲ ಯುದ್ಧದಲ್ಲಿ ಹಜರತ್ ಇಮಾಮ್ ಹುಸೇನರ ಪರಿವಾರದವರನ್ನು ಅನ್ನ ನೀರು ಸಿಗದಂತೆ ಮಾಡಿದರು. ಕೊಂದವರ ಕರುಳನ್ನು ಕೊರಳಲ್ಲಿ ಹಾಕಿಕೊಂಡರು. ಅವರ ಮಕ್ಕಳು ಭಿಕ್ಷೆ ಬೇಡಿದರು ಎಂದು ಹೇಳಲಾಗುತ್ತದೆ. ಅದರ ಪ್ರತೀಕವಾಗಿ ಆಚರಣೆಯ ಸಮಯದಲ್ಲಿ ಹರಕೆಯ ರೂಪದಲ್ಲಿ ಮಕ್ಕಳಿಗೆ ಲಾಡಿ ಹಾಕಿ ಫಕೀರರನ್ನಾಗಿ ಮಾಡಲಾಗುತ್ತದೆ. ಇವರನ್ನು ಮನೆಗಳಿಗೆ ಊಟಕ್ಕೆ ಕರೆತರುತ್ತಾರೆ. ದೇವರ ಮೈ ತೊಳೆಯುವವರೆಗೂ ಇವರು ಮೈ ತೊಳೆಯುವಂತಿಲ್ಲ. ಕೆಲಸ ಮಾಡುವಂತಿಲ್ಲ, ಅವರನ್ನು ದೈವೀಭಾವದಿಂದ ನೋಡುತ್ತಾರೆ. ಮಕ್ಕಳಲ್ಲಿ ಅಲೌಕಿಕ ಸಂಸ್ಕಾರಗಳ ರೂಢಿಗೆ ಈ ಆಚರಣೆ ಪ್ರೇರಣೆಯಾಗಿದೆ.

ಕಲಾತ್ಮಕ ಆಚರಣೆಯಾಗಿ ಮೊಹರಂ

ಮೊಹರಂ ಆಚರಣೆಯಲ್ಲಿ "ಹೆಜ್ಜೆ ಮೇಳ" ಅಥವಾ ಆಲಾಯಿ".[೪೮] ಕುಣಿತ ವಿಶೇಷವಾಗಿದೆ. ಇದು ಮುಸ್ಲಿಮ್ ಸಮುದಾಯದವರ ಕುಣಿತವಾದರೂ ಎಲ್ಲಾ ಧರ್ಮದವರು ಪಾಲ್ಗೊಳ್ಳುತ್ತಾರೆ. ಜೀವನದಲ್ಲಿ ಎಲ್ಲಾ ಧರ್ಮದವರು ಜೊತೆಗೂಡಿ ಹೆಜ್ಜೆ ಹಾಕಬೇಕೆಂಬ ಸಂದೇಶ ಇಲ್ಲಿದೆ. ದೈವೀ ಆರಾಧನೆಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಕಲೆಯಾದರೂ ಧಾರ್ಮಿಕ ಸಾಮರಸ್ಯವೇ ಹೆಜ್ಜೆ ಮೇಳದ ಪ್ರಮುಖ ಉದ್ದೇಶ. ಮೈತುಂಬಾ ಹಳದಿ ಹಚ್ಚಿಕೊಂಡು, ಕೈಯಲ್ಲಿ ದೊಣ್ಣೆ ಹಿಡಿದು, ಬರಿಮೈಯಲ್ಲಿ, ಭಾವ-ಭಂಗಿಗಳೊಂದಿಗೆ ಭಕ್ತಿಯಿಂದ ಕುಣಿಯುತ್ತಾರೆ. ವಾಸ್ತವವಾಗಿ ಇದು ಮನಸ್ಸಿಗೆ ಸಂಬಂಧಪಟ್ಟಿದ್ದು. ಕಲೆ ತನ್ನದೇ ಆದ ವಿಶೇಷ ಗುಣ ಹೊಂದಿದೆ. ಅದು ಸಂಕುಚಿತ ಭಾವನೆಯನ್ನು ಕಳಚಿ ಮನುಷ್ಯತ್ವವನ್ನು ಅರಳಿಸುತ್ತದೆ. "ಜಾತಿ ಮತದ ಎಲ್ಲೆ ಮೀರುವ ಶಕ್ತಿ ಕಲೆಗಿದೆ".[೪೯] ಈ ರೀತಿಯ ಆಶಯ ಮೊಹರಂ ಆಚರಣೆಯಲ್ಲಿದೆ. ಧಗಧಗಿಸುವ ಕೆಂಡದ ರಾಶಿಯ ಸುತ್ತ ಹೆಜ್ಜೆಮೇಳ, ಕೋಲಾಟ, ಕುದುರೆ ಕುಣಿತ, ಹುಲಿವೇಷಗಳು ನಡೆಯುತ್ತಿರುತ್ತವೆ. ಹಸೇನ್, ಹುಸೇನರು ಕರ್ಬಾಲಾ ಯುದ್ಧದಲ್ಲಿ ವೀರಮರಣವನ್ನು ಅಪ್ಪಿದುದರ ಬಗ್ಗೆ ಮೊಹರಂ ಹಾಡುಗಳನ್ನು ಹಾಡುತ್ತಾ, ಹೆಜ್ಜೆ ಹಾಕುತ್ತಾರೆ. ಪಟಾಕಿ ಹಾರಿಸುವುದು, ಉತ್ತುತ್ತಿ, ಬಾಳೆಹಣ್ಣು, ಸಕ್ಕರೆ, ಬೆಲ್ಲ ಮತ್ತು ನಾಣ್ಯಗಳನ್ನು ಡೋಲಿಗಳ ಮೇಲೆ ಎಸೆಯುವುದು ಇವೆಲ್ಲಾ ಹಿಂದೂ ಧರ್ಮದ ಪ್ರಭಾವದಿಂದ ಉದಯಿಸಿರಲು ಸಾಧ್ಯವಿದೆ. ಕಲೆಗಳ ಉಗಮ, ವಿಕಾಸ, ಪ್ರದರ್ಶನಕ್ಕೆ ಮಾಧ್ಯಮ ಆಚರಣೆಗಳಾಗಿವೆ. ಇಡೀ ರಾತ್ರಿ ತಪ್ಪಡಿ ಹೊಡೆಯುತ್ತಾ, ಆಲಾಯಿ ಆಡುತ್ತಾ, ಹೊಸಬಟ್ಟೆ ಧರಿಸಿ, ಕಾಲಿಗೆ ಗೆಜ್ಜೆ ಕಟ್ಟಿ ಕುಣಿಯುತ್ತಾರೆ. ಇದು ಸೌಹಾರ್ದತೆ, ಸ್ನೇಹ, ಪ್ರೀತಿ, ವಾತ್ಸಲ್ಯಗಳ ಆತ್ಮೀಯ ಅನುಬಂಧವಾಗಿದೆ.

ಬಳ್ಳಾರಿ ಜಿಲ್ಲೆಯಲ್ಲಿ ದಲಿತರು, ಬೇಡರು ತಮ್ಮ ಮಕ್ಕಳಿಗೆ ಕಾಯಿಲೆ ವಾಸಿಯಾದರೆ ಹುಲಿವೇಷ ಹಾಕಿಸುತ್ತೇವೆಂದು ಹರಕೆ ಮಾಡಿರುತ್ತಾರೆ. ಇಲ್ಲಿ ಹುಲಿ ಕುಣಿತವು ಬರೀ ಧಾರ್ಮಿಕ ಕಲೆಯಾಗಿರದೆ ಒಂದು ಕುಟುಂಬ ತನ್ನ ಸಂಕಷ್ಟದ ದಿನಗಳಲ್ಲಿ ಮಾಡಿಕೊಂಡ ಸಂಕಲ್ಪವಾಗಿರುತ್ತದೆ. ಜನರ ಮನಸ್ಸಿನ ಒತ್ತಡಗಳನ್ನು ನೀಗಿ, ಮಾನಸಿಕ ಬಿಡುಗಡೆ ಪಡೆಯಲು, ಉಲ್ಲಾಸ ನೀಡಲು, ಗಾಢಶ್ರದ್ಧೆಯನ್ನು ತೋರಲು ಮಾಡುವ ಕಲಾತ್ಮಕ ಆಚರಣೆಯೆಂದು ಪರಿಗಣಿಸಲು ಸಾಧ್ಯವಿದೆ. ಕೆಲವು ಗ್ರಾಮಗಳಲ್ಲಿ ವಂಶಪಾರಂಪರಿಕವಾಗಿ ಮುಂದುವರಿದ ಹಕ್ಕಿನ ವಿಷಯವು ಹೌದು. ಗ್ರಾಮಗಳಲ್ಲಿ ಈ ರೀತಿಯ ವೇಷ ಹಾಕುವವರಿಗೆ, ಪಂಜು ಹಿಡಿಯುವವರಿಗೆ, ನಡೆ ಮುಡಿ ಹಾಸುವವರಿಗೆ ವಿಶೇಷ ಮಾನ್ಯತೆ ಇದೆ. ಈ ಕಾರ್ಯಕ್ಕೆ ಸುಗ್ಗಿಯಲ್ಲಿ ದೇಣಿಗೆ ರೂಪದಲ್ಲಿ ರೈತರು ಧಾನ್ಯಗಳನ್ನು ನೀಡಿ ಗೌರವಿಸುತ್ತಾರೆ.

ದೇವರನ್ನು ಹೊತ್ತವರು ಹಲ್ಲು ಕಡಿಯುತ್ತಾ, ಕಣ್ಣು ಕೆಂಪಾಗಿಸಿಕೊಂಡು, ನೆಲಕ್ಕೆ ಅಪ್ಪಳಿಸುತ್ತಾ ದೀನ್, ದೀನ್ ಎಂದು ಕುಣಿಯುತ್ತಾರೆ. ಅವರಲ್ಲಿ ದೈವ ಆವಾಹನೆಯಾಗಿರುತ್ತದೆ. ಆ ಸಮಯದಲ್ಲಿ ಗ್ರಾಮಸ್ಥರು ವರ್ಷದ ಮಳೆ-ಬೆಳೆ ಬಗ್ಗೆ ನಿವೇದಿಸಿಕೊಳ್ಳುತ್ತಾರೆ. ಇಂಥ ಕ್ರಿಯೆಗಳು ದೈವದ ನೆರಳಲ್ಲಿ ತಾತ್ಕಾಲಿಕ ನೋವನ್ನು ಮರೆಸುವ, ಆತ್ಮಸ್ಥೈರ್ಯ ಹೆಚ್ಚಿಸುವಂಥವುಗಳಾಗಿವೆ.

ಮೊಹರಂ ಆಚರಣೆ ಮೂಲತಃ ಶೋಕಸ್ಥಾಯಿಯಾಗಿದ್ದರೂ, ಕಾಲಚಕ್ರದಲ್ಲಿ ತನ್ನ ಮೂಲ ಭಾವ ಕಳೆದುಕೊಂಡು ಇಂದು ಉತ್ಸವದ ರಂಗು ಪಡೆದುಕೊಂಡಿದೆ. ಬಳ್ಳಾರಿ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ

ಹಬ್ಬ ಅಥವಾ ಜಾತ್ರೆಯೋಪಾದಿಯಲ್ಲಿ ನಡೆದುಕೊಂಡು ಬಂದಿದೆ. ಮೊಹರಂ ಹಬ್ಬವಾಗಿ ಪರಿವರ್ತನೆಯಾಗಲು ಐತಿಹಾಸಿಕ ಹಿನ್ನೆಲೆಗಳು ಕಾರಣವಾದಂತೆ, ಹಿಂದೂಗಳೊಂದಿಗೆ ಮುಸ್ಲಿಮರ ಮಧುರ ಮೈತ್ರಿಯು ಕಾರಣ. ಕಟ್ಟಾ ಸಂಪ್ರದಾಯವಾದಿ ಮುಸ್ಲಿಮರ ವಿರೋಧದ ನಡುವೆಯು ಕರ್ಬಾಲಾ ಕಾಳಗದ ವೀರರು ದೈವೀಪುರುಷರಾಗಿ ಜನಪದರ ಬದುಕಲ್ಲಿ ನೆಲೆನಿಂತಿದ್ದಾರೆ. ಹೊನ್ನೂರಸ್ವಾಮಿ, ಫಕೀರಪ್ಪ, ಹುಸೇನಪ್ಪ, ಶೇಕಪ್ಪ, ಮೌದೀನಪ್ಪ ಎನ್ನುವ ಮುಸ್ಲಿಮ್ ಹೆಸರುಗಳ ಸಂಬೋಧನೆ ಇದಕ್ಕೆ ಸಾಕ್ಷಿಯಾಗಿದೆ. ಸಿರುಗುಪ್ಪ ತಾಲೂಕು ಅಗಸನೂರಿನಲ್ಲಿ ದೇವರ ಸೇವೆ ವೀರಶೈವ ಮನೆತನದವರಿಂದ ನೆರವೇರುತ್ತದೆ. ಅರಬಸ್ಥಾನದ ಸಂಸ್ಕೃತಿಯೊಂದು ಹಿಂದೂಸ್ಥಾನದ ಸಂಸ್ಕೃತಿಯೊಂದಿಗೆ ಇಂದು ಬೆರೆತು ಒಂದಾಗಿದೆ. ಮನೆಯಲ್ಲಿಯ ಧಾನ್ಯಗಳನ್ನು ತಂದು ಆಲಾಯಿ ಕುಣಿಯಲ್ಲಿ ಹಾಕಿದರೆ, ಕೊಟ್ಟಿಗೆಯಲ್ಲಿ ಉಣ್ಣೆ, ಚುಕ್ಕಾಡು (ಸೊಳ್ಳೆ) ಆಗುವುದಿಲ್ಲ ಎಂಬ ನಂಬಿಕೆಯಿದೆ. ಬಳ್ಳಾರಿ ಜಿಲ್ಲೆಯಲ್ಲಿ ಮುಸ್ಲಿಮ್ ಸಮುದಾಯದವರು ಇಲ್ಲದ ಗ್ರಾಮಗಳಲ್ಲೂ ಶ್ರದ್ಧಾ ಭಕ್ತಿಯಿಂದ ಮೊಹರಂ ಆಚರಣೆಗೊಳ್ಳುತ್ತದೆ. ಮೊಹರಂ ಇಂದು ಜನಸಮುದಾಯಗಳು ಮತಾತೀತವಾಗಿ ಕಟ್ಟಿಕೊಂಡಿರುವ ವರ್ಣರಂಜಿತವಾದ ಆಚರಣೆ ಯಾಗಿದೆ. ಬರೀ ಜನ ಸಮುದಾಯಗಳ ಕಥನಗಳ ಕಲ್ಪನೆಯ ಸಂಗತಿಯಾಗುಳಿದಿಲ್ಲ. ಗಾಢಶ್ರದ್ಧೆಯ ವಿಷಯವು ಹೌದು. ಬೇರೊಂದು ಧರ್ಮಕ್ಕೆ, ಜನಾಂಗಕ್ಕೆ, ಸಂಸ್ಕೃತಿಗೆ, ಕಾಲಕ್ಕೆ ಸಂಬಂಧಿಸಿದ ಆಚರಣೆಯೊಂದು, ತಮ್ಮ ಊರಿನ ಆಚರಣೆಯಾಗಿ ಜನಸಾಮಾನ್ಯರಿಂದ ಸ್ಥಿತ್ಯಂತರಗೊಂಡಿದೆ. ಇದು ಸ್ಥಳೀಕರಿಸಿಕೊಳ್ಳುವ ಗುಣದ ಜೊತೆ ನಂಬಿಕೆಯ ಸಂಗತಿಯೂ ಹೌದು.

ಗುದ್ದಲಿ ಹಾಕುವುದು, ಕಾಡು ಕಡಿದು ಕೆಂಡ ಹಾಕುವುದು, ಆವೇಶಭರಿತರಾಗಿ ಕೆಂಡ ಸುತ್ತಾತ್ತಾ ಕಣಿಯುವುದು, ಈ ಕ್ರಿಯೆಗಳು ಆದಿಮಾನವನು ಒಂದೆಡೆ ನೆಲೆನಿಲ್ಲಲು, ನೆಲ ಹಸನುಮಾಡಿಕೊಳ್ಳಲು ಪರಿಶ್ರಮಿಸಿದ ಕ್ರಿಯೆಗಳಾಗಿ ಕಂಡುಬರುತ್ತವೆ. ಉರುವಲಿನ ಸಮಸ್ಯೆಯಿರುವ ಪ್ರಸ್ತುತ ಸಮಯದಲ್ಲಿ ಅರಣ್ಯ ನಾಶ, ಪರಿಸರ ಮಾಲಿನ್ಯಗಳ ಕಡೆ ಗಮನಹರಿಸುವ ಅಗತ್ಯತೆ ಇದೆ. ಹೀಗೆ ಕಾಲಮಾನಕ್ಕೆ ಅನುಗುಣವಾಗಿ ಸ್ಥಿತ್ಯಂತರಗೊಳ್ಳುವ ಅನಿವಾರ್ಯತೆ ಆಚರಣೆಗಳಿಗಿದೆ.

೩.೩.೫. ಹಟ್ಟಿಹಬ್ಬದಲ್ಲಿಯ ಆಚರಣೆಗಳು

ದೀಪಾವಳಿ ಹಬ್ಬಕ್ಕೆ ಪ್ರಾದೇಶಿಕವಾಗಿ ಹಟ್ಟಿಹಬ್ಬವೆಂದು ಕರೆಯುತ್ತಾರೆ. ಕೃಷಿಕರಿಗೆ ಪಾಂಡವರು ಪ್ರಭಾವಿ ವ್ಯಕ್ತಿಗಳಾಗಿದ್ದಾರೆ. ಆದ್ದರಿಂದ ಇದನ್ನು ಪಾಂಡೊರಬ್ಬವೆಂತಲೂ ಕರೆಯುತ್ತಾರೆ. ದೀಪಾವಳಿ ಅಮವಾಸ್ಯೆಯ ಮಾರನೆಯ ದಿವಸ ಪಾಢ್ಯದಂದು ಬಳ್ಳಾರಿ ಜಿಲ್ಲೆಯ ಗ್ರಾಮೀಣ ಭಾಗಗಳಲ್ಲಿ ಹೆಚ್ಚಾಗಿ ಹಟ್ಟಿ ಹಾಕುವುದು ಕಂಡುಬರುತ್ತದೆ. ಅಂದು ರಂಗೋಲಿಯಿಂದ ಅಂಗಳ ಶೃಂಗಾರಗೊಳ್ಳುತ್ತದೆ. ಸಗಣಿಯಿಂದ ತಯಾರಿಸಿದ ವರ್ತುಲಾಕಾರದ ಹಲಗೆಯ ಮೇಲೆ, ಗುಮ್ಮಟಾಕಾರದ ಐದು ಗುರ್ಜಿಗಳನ್ನು ಮಾಡಿ ಹೊಸ್ತಿಲ ಅಕ್ಕಪಕ್ಕ ಹಾಗೂ ಅಂಗಳದ ಮಧ್ಯದಲ್ಲಿ ಪ್ರತಿಷ್ಠಾಪಿಸುತ್ತಾರೆ. ಜೋಳದ ತೆನೆ, ಉತ್ತರಾಣಿಕಡ್ಡಿ, ಚೆಂಡು ಹೂ, ಸೇವಂತಿಗೆ ಹೂಗಳಿಂದ ಗುರ್ಜಿಗಳು ಪೂಜಿಸಲ್ಪಡುತ್ತವೆ. ಅಂಗಳದಿಂದ ಬಾಗಿಲವರೆಗೆ ಪಾಂಡವರು ಆಗಮಿಸಿರುವುದರ ಕುರುಹಾಗಿ ಹೆಜ್ಜೆ ಗುರುತುಗಳನ್ನು ಸುಣ್ಣದಿಂದ ಮೂಡಿಸಿರುತ್ತಾರೆ.

ಕೊಟ್ಟಿಗೆಯಲ್ಲಿರುವ ಸಗಣಿ ಗುಡ್ಡೆಯು ಲಕ್ಕವ್ವನ ಪ್ರತೀಕ. ಅಂದು ಜಾನುವಾರುಗಳನ್ನು ಸ್ವಚ್ಛಗೊಳಿಸಿ, ಬಣ್ಣಹಚ್ಚಿ ಅಲಂಕರಿಸಲಾಗುತ್ತದೆ. ಲಕ್ಕವ್ವಳಿಗೆ ಜಾನುವಾರುಗಳ ಕಾಯಿಲೆ ನಿವಾರಿಸುವ ಶಕ್ತಿ ಇದೆ ಎಂಬುದು

ಜನಪದರ ನಂಬಿಕೆ. 'ದನ ಹೆಚ್ಚಿದ್ದ ಮನೆಯಾಗ ಧನಲಕ್ಷ್ಮಿ'. 'ದನ ಇಲ್ಲದ ಮನೆಯಾಗ ದರಿದ್ರ ಲಕ್ಷ್ಮಿ' ಎನ್ನುವ ಜನಪದ ಗಾದೆಯ ಪ್ರಕಾರ ಹಟ್ಟಿ ಜನಪದರಿಗೆ ಸಂಪತ್ತಿನ ಭಂಡಾರ. ಜಾನುವಾರುಗಳು ಕೃಷಿಕರ ಜೀವನಾಧಾರ. ತಮ್ಮ ಬದುಕಿನ ಸಂಪತ್ತಾಗಿರುವ ಜಾನುವಾರುಗಳು ಈ ಆಚರಣೆಯಲ್ಲಿ ಪೂಜಿಸಲ್ಪಡುವವು. ಮಾನವನ ಪಶುಪಾಲನಾ ಹಂತದಿಂದಲೇ ಹಟ್ಟಿ ಪೂಜೆ ಪ್ರಾರಂಭವಾಗಿ, ಅದು ಇಂದು ಲಕ್ಷ್ಮೀಪೂಜೆಯಾಗಿ ರೂಪಾಂತರಗೊಂಡಿರಬೇಕು. ಕೃಷಿಕರಿಗೆ ಮಣ್ಣು, ನೀರು, ಬೀಜದಷ್ಟೇ ಸಗಣಿಯು ಮುಖ್ಯವಾದುದು. ಸಗಣಿಯು ಫಲವಂತಿಕೆಯ ಪ್ರತೀಕವಾದ ಹಟ್ಟೆವ್ವನಾಗಿ ಪೂಜೆಗೊಳ್ಳುವುದರ ಹಿನ್ನೆಲೆಯಲ್ಲಿ, ಜಾನುವಾರುಗಳು ನೀಡುವ ಸಾವಯವ ಗೊಬ್ಬರದ ಮಹತ್ವ ತಿಳಿದುಬರುತ್ತದೆ. ಆಧುನಿಕ ಯುಗದಲ್ಲೂ, ರಾಸಾಯನಿಕ ಗೊಬ್ಬರಗಳ ಬಳಕೆಯ ನಡುವೆ, ಜಾನುವಾರುಗಳು ನೀಡುವ ಸಾವಯವ ಗೊಬ್ಬರ ಈ ಆಚರಣೆಗೆ ಪ್ರೇರಣೆಯಾಗಿದೆ.

ಒಂದು ಸಲ ಲಕ್ಷ್ಮಿ ಗೋವಿನ ರೂಪ ಧರಿಸಿ ಬಂದಾಗ ಪಾರ್ವತಿ ಪೂಜಿಸಿದಳಂತೆ. ಆದ್ದರಿಂದ ಗೋಪೂಜೆಗೆ ವಿಶೇಷ ಪ್ರಾಧಾನ್ಯತೆ ನೀಡಲಾಗಿದೆ. 'ಆಕಳು ಹೊಟ್ಟೆಯಲ್ಲಿ ಅಚ್ಚೇರು ಬಂಗಾರ' ಎನ್ನುವ ನಾಣ್ಣುಡಿಯಂತೆ, ಯಾವಾಗಲೂ ಗೋವುಗಳಲ್ಲಿ ಲಕ್ಷ್ಮಿ ನೆಲೆಸಿರುವಳೆಂಬ ಪ್ರತೀತಿ ಇದೆ.

ಜನಪದ ಕಥೆಯ ಪ್ರಕಾರ ಪಾಂಡವರು ಒಂದು ವರ್ಷದ ಅಜ್ಞಾತವಾಸ ಮುಗಿಸಿ, ಕೌರವರಿಂದ ಒಯ್ಯಲ್ಪಟ್ಟ ಗೋವುಗಳನ್ನು ಗೆದ್ದು, ಹಸ್ತಿನಾವತಿಯನ್ನು ಸೇರಿದರೆಂದೂ, ಈ ನೆನಪಿನ ಸಂಕೇತವಾಗಿ ಗೋವಿನ ಸಗಣಿಯಿಂದ ಪಾಂಡವರನ್ನು ಮಾಡಿ, ಅಂಗಳದಲ್ಲಿ ಹೆಜ್ಜೆ ಗುರುತುಗಳನ್ನು ಮೂಡಿಸಿ ಬರಮಾಡಿಕೊಳ್ಳುತ್ತಾರೆ. ಈ ಸಂದರ್ಭವು ತನ್ನದೇ ಆದ ರೀತಿಯಲ್ಲಿ ಆಚರಣೆಯಲ್ಲಿ ಅಭಿವ್ಯಕ್ತಿಗೊಂಡಿದೆ.

ಜಾನುವಾರುಗಳ ಕೊಟ್ಟಿಗೆ ಸ್ವಚ್ಛತೆಯೊಂದಿಗೆ ಅವುಗಳ ಔಷಧೋಪಚಾರಗಳು ನಡೆಯುತ್ತಿರುತ್ತವೆ. ಜಾನುವಾರುಗಳಿಗೆ ಗಾಯವಾದ ಸ್ಥಳಕ್ಕೆ ಜೇಡಿಮಣ್ಣು, ಕೆಮ್ಮಣ್ಣು ಲೇಪಿಸಿ ಕಬ್ಬಿಣದ ಸೇರನ್ನು ತಾಗಿಸುತ್ತಾರೆ. ಇದು ಕ್ರಿಮಿನಾಶಕವಾಗಿ ನೊಣಗಳ ರಕ್ತ ಹೀರುವಿಕೆಯನ್ನು ತಡೆಗಟ್ಟುತ್ತದೆ. ನಾರಿನಿಂದ ಹೊಸ ಹಗ್ಗ ತಯಾರಿಸಿ ಜಾನುವಾರುಗಳ ಕೊರಳಿಗೆ ಕಟ್ಟಲಾಗುತ್ತದೆ. ಪ್ರಾಣಿಗಳ ಬಗೆಗಿನ ಪ್ರೀತಿ, ಸಾಮೂಹಿಕ ಬದುಕು, ಸಮೂಹದ ಒಳಿತಿನ ಆಶಯಗಳನ್ನು ಬಿಂಬಿಸುವ ಇಂಥ ಆಚರಣೆಗಳು, ಕೃಷಿಕರ ಮತ್ತು ಜಾನುವಾರುಗಳ ಸಂಬಂಧವನ್ನು ತಲೆಮಾರಿನಿಂದ ತಲೆಮಾರಿಗೆ ವರ್ಗಾಯಿಸುತ್ತವೆ.

ಬಳ್ಳಾರಿ ಜಿಲ್ಲೆಯಲ್ಲಿ ದೀಪಾವಳಿಯನ್ನು ಪಾಂಡೋರ ಹಬ್ಬವೆಂದು ಕರೆಯುವುದು ಖಚಿತವಾಗಿಲ್ಲ. ಇಲ್ಲಿ ಸೀಗೆಹುಣ್ಣಿಮೆಯಂದು ಪಾಂಡವರು ಬರುತ್ತಾರೆಂಬ ಪ್ರತೀತಿ ಹೆಚ್ಚಾಗಿದೆ. ಅಂದು ಕೊಂತೆಮ್ಮನ ಆಚರಣೆ ಪ್ರಚಲಿತದಲ್ಲಿದೆ. ದೀಪಾವಳಿಯನ್ನು ಹಟ್ಟಿಹಬ್ಬವೆಂದು ಕರೆಯುವ ವಾಡಿಕೆ ಇದೆ.

ವಿನಿಮಯ ಮಾಧ್ಯಮವನ್ನು ನಿರ್ಧರಿಸುವ ವಸ್ತುವನ್ನು ಕರುಣಿಸುವವಳು ಲಕ್ಷ್ಮಿ. ಆಕೆ ಲೌಕಿಕ ದೇವತೆ ಎಂಬ ನಂಬಿಕೆಯಿದೆ. ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚಾಗಿ ನಗರ ಪ್ರದೇಶಗಳಲ್ಲಿ, ವರ್ತಕರು, ವ್ಯಾಪಾರಿಗಳು, ಲಕ್ಷ್ಮಿಪೂಜೆಗೆ ಹೆಚ್ಚಿನ ಆದ್ಯತೆ ನೀಡುತ್ತಾ ಅಂದು ಸಂಜೆ ಲಕ್ಷ್ಮಿ ಮನೆಗೆ ಬರುವಳೆಂಬ ನಂಬಿಕೆಯಿದೆ. ತಂಬಿಗೆಗೆ ಸೀರೆ, ಕುಬ್ಬಸ, ಒಡವೆಗಳನ್ನಿಟ್ಟು, ಮೂರ್ತಿರೂಪ ಮಾಡಿ, ಹಣವನ್ನಿಟ್ಟು ಪೂಜಿಸುತ್ತಾರೆ. ಇದು ಲಕ್ಷ್ಮಿಯನ್ನು ಬರಮಾಡಿಕೊಳ್ಳುವ ಪೂಜೆಯಾದ್ದರಿಂದ ಅಂದು ಯಾರಿಗೂ ಸಾಲ ನೀಡುವಂತಿಲ್ಲ. ಹಾಗೇನಾದರೂ

ಸಾಲ ನೀಡಿದರೆ, ವರ್ಷಪೂರ್ತಿ ಲಕ್ಷ್ಮಿ ಕೈಬಿಟ್ಟು ಹೋಗುವಳೆಂಬ ಭೀತಿ ಇದೆ. ಇಲ್ಲಿ ಹಟ್ಟಿಲಕ್ಕವ್ವ ಲಕ್ಕಿ, ಲಕ್ಷ್ಮಿಯಾಗಿ ಪೂಜಿಸಲ್ಪಡುತ್ತಿದ್ದಾಳೆ. ಇದರಿಂದ ಹಣದ ದೇವತೆ ಜಾನುವಾರುಗಳ ದೇವತೆ ಒಬ್ಬಳೇ ಆಗಿರಬೇಕೆಂದು ತಿಳಿದುಬರುತ್ತದೆ.

ಪಟಾಕಿಗಳನ್ನು ನಗರ ಪ್ರದೇಶಗಳಲ್ಲಿ ಸ್ಪರ್ಧಾತ್ಮಕ ರೀತಿಯಲ್ಲಿ ಹಚ್ಚುವುದು ಕಂಡುಬಂದಿದೆ. ಇತ್ತೀಚೆಗೆ ಬಳ್ಳಾರಿ ಜಿಲ್ಲೆಯಲ್ಲಿ ಗಣಿಗಾರಿಕೆಯ ಹೆಚ್ಚಳದಿಂದ, ಹಣಕಾಸಿನ ವಹಿವಾಟುಗಳು ದ್ವಿಗುಣಗೊಂಡು, ಲಕ್ಷ್ಮಿ ಪೂಜೆಗೆ ಹೆಚ್ಚಿನ ಮಹತ್ವ ನೀಡಲಾಗುತ್ತಿದೆ. ಸಿಡಿಮದ್ದುಗಳಿಂದ ಮನೋರಂಜನೆಗಿಂತ ಅಪಾಯ ಸಂಭವಿಸುವ ಸಾಧ್ಯತೆಗಳು ಹೆಚ್ಚು. ಶಬ್ದಮಾಲಿನ್ಯ, ಪರಿಸರ ಮಾಲಿನ್ಯದಿಂದ ಸಾರ್ವಜನಿಕರಿಗೆ ತೊಂದರೆಯುಂಟಾಗುತ್ತಿದೆ. ಕೃಷಿಕರ ಆಚರಣೆಗಳಲ್ಲಿ ಪಟಾಕಿ ಬಳಕೆ ಬೇರೆಯದೇ ಅರ್ಥ ನೀಡುತ್ತದೆ. ಕಾರ್ತೀಕ ಮಾಸದ ಪ್ರಾರಂಭದ ಸಮಯದಲ್ಲಿ ಧಾನ್ಯಗಳು ಬಲಿತು, ಕಾಳು ಕೊಯ್ಲು ಆಗುತ್ತಿರುತ್ತವೆ. ಈ ಸಮಯದಲ್ಲಿ ಕಾಳು ತಿನ್ನಲು ಪಕ್ಷಿಗಳು ತಂಡೋಪತಂಡವಾಗಿ ವಲಸೆ ಬಂದು ಸೇರುತ್ತಿರುತ್ತವೆ. ಹಲವೊಮ್ಮೆ ರೋಗಕಾರಕ ಕ್ರಿಮಿಗಳನ್ನು ತಂದು ಹರಡುವುದುಂಟು. ಆದ್ದರಿಂದ ಹಬ್ಬದ ನೆಪದಲ್ಲಿ ಹಚ್ಚುವ ಪಟಾಕಿ ಸದ್ದು, ಪಕ್ಷಿಗಳು ಸ್ಥಳ ಬಿಟ್ಟು ಹೋಗುವಂತೆ ಮಾಡುತ್ತದೆ. ಸಿಡಿಮದ್ದಿನಲ್ಲಿಯ ಗಂಧಕದ ಹೊಗೆ ಗ್ರಾಮದಾದ್ಯಂತ ಹರಡುವುದರಿಂದ ಹಾನಿಕಾರಕ ಕ್ರಿಮಿಕೀಟಗಳು ನಾಶ ಹೊಂದುತ್ತವೆ. ಇಂದು ಕೃಷಿ ಭೂಮಿ ಹೊಂದಿರದ ನಗರ ಪ್ರದೇಶಗಳಲ್ಲಿ ಪಟಾಕಿಯ ಅಬ್ಬರ ಹೆಚ್ಚಾಗುತ್ತಿದೆ. ಇದು ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತಿದೆ.

ಪಾಂಡವರು ಕೌರವರನ್ನು ಸೋಲಿಸಿ ಬಲಿಪಾಡ್ಯಮಿಯಂದು ಸಿಂಹಾಸನವನ್ನೇರಿದರೆಂದು ಹೇಳಲಾಗುತ್ತದೆ. ಅಂದು ದೀಪ ಬೆಳಗಿಸುವುದು ವಿಜಯದ ಸಂಕೇತ. ಮಾನವರು ಅಂಧಕಾರದಿಂದ ಬೆಳಕಿನ ಕಡೆಗೆ ಬರುವ ಮುನ್ಸೂಚನೆಯು ಹೌದು. ಕೊಯ್ಲು ಮುಗಿಯುತ್ತಿದ್ದಂತೆ ಹೊಲ, ಗದ್ದೆಗಳಲ್ಲಿ ಆಶ್ರಯ ಪಡೆದಿರುವ ಇಲಿ, ಹೆಗ್ಗಣ, ಹಾವು, ಮುಂಗುಸಿಗಳು ಸ್ಥಾನಪಲ್ಲಟ ಹೊಂದುತ್ತವೆ. ಅವು ಸಂಜೆಗತ್ತಲಲ್ಲಿ ಆಶ್ರಯ ಪಡೆಯಲು ಮನೆ ಪ್ರವೇಶಿಸುವುದುಂಟು. ಆದ್ದರಿಂದ ಮಾಸಾದ್ಯಂತ ಮನೆಯ ಬಾಗಿಲಲ್ಲಿ ದೀಪ ಬೆಳಗಿಸುವ ಸಂಪ್ರದಾಯವಿದೆ. ದೀಪಾವಳಿಯಲ್ಲಿ ಬೆಳಗಿಸುವ ದೀಪ ಕೃಷಿಕರಿಗಲ್ಲದೆ ಸಮಸ್ತ ಜನವರ್ಗಕ್ಕೂ ಉಪಯುಕ್ತವಾಗಿದೆ. ಬೆಳೆಗಳು ಕಾಳು ಕಟ್ಟಿದಾಗ ಬೀಳುವ ಕೀಟಗಳನ್ನು ಕೊಲ್ಲುವ ಸರಳ ವಿಧಾನ ಇದು. ಹೊಲ, ಗದ್ದೆಗಳಲ್ಲಿ ಹಿಂದೆ ಭ್ರಾಂತಿ ದೀಪಗಳನ್ನು ಇಡುತ್ತಿದ್ದ ಉದ್ದೇಶವು ಇದೇ ಆಗಿದೆ. ದೀಪದ ಕಮರು ವಾಸನೆಯಿಂದ ಮನೆಯಲ್ಲಿ ಅಡಗಿ ಕುಳಿತ ಜಿರಲೆ, ನೊಣ, ಸೊಳ್ಳೆ ಇತ್ಯಾದಿ ಕ್ರಿಮಿಕೀಟಗಳು ನಾಶ ಹೊಂದುತ್ತವೆ. ಎಲ್ಲರೂ ಸೇರಿ ಆಚರಿಸುವ ದೀಪಗಳ ಆರಾಧನೆಯ ಹಿಂದೆ ಸಮಗ್ರ ಕೀಟ ನಿಯಂತ್ರಣ ವಿಧಾನವಿದೆ.

ಬಲಿಪಾಡ್ಯಮಿ ಮತ್ತು ನರಕ ಚತುರ್ದಶಿಯು ಬಲಿ ಚಕ್ರವರ್ತಿ ಮತ್ತು ನರಕಾಸುರನನ್ನು ಸಂಹರಿಸಿದ ನೆನಪಿನ ಆಚರಣೆಗಳಾಗಿವೆ. ಇವು ಉತ್ತರ ಭಾರತದಿಂದ ಬಂದ ಆಚರಣೆಗಳಾಗಿರಲು ಸಾಧ್ಯವಿದೆ. ನರಕ ಚತುರ್ಥಿ ಆಚರಣೆಯ ಹಿನ್ನೆಲೆಯಲ್ಲಿ ಜನಪದ ಕಥೆಯ ಪ್ರಕಾರ "ಶ್ರೀಕೃಷ್ಣನ ವಾಸಸ್ಥಾನ ದ್ವಾರಕಾನಗರ. ಅದು ವ್ಯವಸಾಯ ಹಾಗೂ ಹೈನುಗಾರಿಕೆಗೆ ಪ್ರಸಿದ್ಧವಾಗಿತ್ತು. ದ್ವಾರಕೆಯ ಸಮೃದ್ಧಿಯ ಸುದ್ದಿ ತಿಳಿದು

ನರಕಾಸುರನು ಅಲ್ಲಿಗೆ ಆಗಮಿಸುತ್ತಾನೆ. ನದಿ ತೀರದ ಕಾಡಿನಲ್ಲಿ ಅಡಗಿಕೊಂಡು ನೀರಿಗೆ ಬಂದ ಗೋಪಿಕೆಯರನ್ನು, ಗೋವುಗಳನ್ನು ಅಪಹರಿಸುತ್ತಾನೆ. ಸುದ್ದಿ ತಿಳಿದ ಕೃಷ್ಣ ಕಾಡುಹೊಕ್ಕು ನರಕಾಸುರನನ್ನು ಹುಡುಕಿ, ಕಾಡಲ್ಲಿ ಸಿಗುವ ಮಾಲಿಂಗನ ಬಳ್ಳಿಯಿಂದ ಅವನ ಕುತ್ತಿಗೆ ಬಿಗಿದು ಕೊಂದು ಹಾಕುತ್ತಾನೆ" (ಕೃಷಿ ಆಚರಣೆ, ೨೦೦೮, ಪು. ೯೨).

ಬಳ್ಳಾರಿ ಜಿಲ್ಲೆಯಲ್ಲಿ ದೀಪಾವಳಿಯಲ್ಲಿ ಬಲಿ ಸಮರ್ಪಣೆಯಾಗುತ್ತದೆ. ಕೂಡ್ಲಿಗಿ ತಾಲೂಕು ಅಯ್ಯಗಳ ಮಲ್ಲಾಪುರ ಗ್ರಾಮದಲ್ಲಿ ಬಲಿಪಾಡ್ಯಮಿಯಂದು ಗ್ರಾಮದೇವತೆಗೆ ಕೋಣ ಬಲಿ ನೀಡಲಾಗುತ್ತದೆ. ಇದು ಬಲಿ ನೀಡಿಯಾದರೂ ಲಕ್ಷ್ಮಿಯನ್ನು ಒಲಿಸಿಕೊಳ್ಳುವ ಪ್ರಕ್ರಿಯೆಯಾಗಿದೆ. ಬಲಿಪಾಡ್ಯಮಿಯು ಬಲಿಯನ್ನು ಆರಾಧಿಸುವ ಪದ್ಧತಿಯಾಗಿ ಬೆಳೆದು ಬಂದಿದೆ. ಪಿತೃಪೂಜೆ ಶಿಷ್ಟ ಸಂಸ್ಕೃತಿಯ ಪ್ರಭಾವದಿಂದಾಗಿ ಆನಂತರ ಸೇರಿಕೊಂಡಿರಬೇಕು. ಬಳ್ಳಾರಿ ಜಿಲ್ಲೆಯಲ್ಲಿ ಹಿರಿಯರ ಹಬ್ಬ ಹೆಚ್ಚಾಗಿ ಈ ಸಮಯದಲ್ಲಿ ನಡೆಯುತ್ತದೆ.

ನರಕ ಚತುರ್ಥಿಯನ್ನು ನೀರು ತುಂಬುವ ಹಬ್ಬವೆಂದು ಕರೆಯುವ ವಾಡಿಕೆಯಿದೆ. ಅಂದು ಅಭ್ಯಂಜನ ಸ್ನಾನಕ್ಕೆ ಹೆಚ್ಚಿನ ಪ್ರಾಮುಖ್ಯತೆ. ಹೊಸದಾಗಿ ಮದುವೆಯಾದ ಅಳಿಯನಿಗೆ ಮಾವನ ಮನೆಯಲ್ಲಿ ವಿವಿಧ ಉಪಚಾರಗಳು ನಡೆಯುತ್ತವೆ. 'ದೀಪಾವಳಿ ಅಳಿಯ' ಎಂತಲೂ ವಿಡಂಬಿಸಲಾಗುತ್ತದೆ. ಪತ್ನಿಯರು ತಮ್ಮ ಪತಿ ಹಾಗೂ ಮಕ್ಕಳ ತಲೆಗೆ ಎಣ್ಣೆನೀರು ಹಾಕಿ ಸ್ನಾನ ಮಾಡಿಸುತ್ತಾರೆ. ಆದ್ದರಿಂದಲೇ 'ಉಂಡದ್ದು ಉಗಾದಿ, ಮಿಂದದ್ದು ದೀವಳಿಗೆ' ಎಂಬ ಮಾತು ಬಳಕೆಗೆ ಬಂದಿರಬೇಕು. ಆಚರಣೆಯ ನೆಪದಲ್ಲಿ ಪ್ರಕೃತಿಯ ನೈಸರ್ಗಿಕ ಪ್ರಕ್ರಿಯೆಯಿಂದ ತಮ್ಮ ದೇಹವನ್ನು ರಕ್ಷಿಸಿಕೊಂಡು ಸುಸ್ಥಿತಿಯಲ್ಲಿ ಇಟ್ಟುಕೊಳ್ಳುವ ಜಾಣ್ಮೆ ಜನಪದರದ್ದಾಗಿದೆ. ಈ ಸಮಯ ಚಳಿಗಾಲದ ಪ್ರಾರಂಭದ ದಿನ. ಮುಂದೆ ಬರಲಿರುವ ವಿಪರೀತ ಚಳಿಯಿಂದ ಮನುಷ್ಯನ ದೇಹಸ್ಥಿತಿಯನ್ನು ಕಾಪಾಡಲು ಎಣ್ಣೆ ಸ್ನಾನದ ಅಗತ್ಯತೆ ಇದೆ.

ಲಂಬಾಣಿ ಸಮುದಾಯದವರು ತಾಂಡಾಗಳಲ್ಲಿ ವಿಶೇಷವಾಗಿ ದೀಪಾವಳಿ ಆಚರಿಸುತ್ತಾರೆ. ಅಮವಾಸ್ಯೆಯನ್ನು ಕಾಳಿಮಾಸ(ಕಪ್ಪುರಾತ್ರಿ) ಎಂದು ಕರೆಯುತ್ತಾರೆ. ಲಕ್ಷ್ಮಿಯ ಭೀಕರತೆಯನ್ನು ತಣಿಸಲು ಸೂರ್ಯೋದಯಕ್ಕೆ ಮುನ್ನ ಕಪ್ಪು ಬಣ್ಣದ ಮೇಕೆಯನ್ನು ಬಲಿ ನೀಡುತ್ತಾರೆ. ಜನಪದರ ಆಚರಣೆಗಳಲ್ಲಿ ಕಾಲಕ್ಕೆ ವಿಶೇಷ ಮಹತ್ವವಿದೆ. ಕತ್ತಲೆ ಮತ್ತು ಬೆಳಕಿನ ಮೂಲಕ ಆಗುವ ಪ್ರಕೃತಿಯ ಬದಲಾವಣೆಗಳ ಅಭಿವ್ಯಕ್ತಿ ಆಚರಣೆಯಲ್ಲಿ ಕಂಡುಬಂದಿದೆ. ಅಮವಾಸ್ಯೆಯೆಂದರೆ ಕಾರ್ಗತ್ತಲು. ಅಂದು ಜನ, ಜಾನುವಾರುಗಳಿಗೆ ಆರತಿ ಬೆಳಗುವುದರ ಮೂಲಕ ಬೆಳಕನ್ನು ಸ್ವಾಗತಿಸುತ್ತಾರೆ. ಬಲಿಪಾಡ್ಯಮಿಯಂದು ಲಂಬಾಣಿ ಮಹಿಳೆಯರು ಸೂರ್ಯೋದಯಕ್ಕೆ ಮುನ್ನ ಹೊಲಗಳಿಂದ ಬುಟ್ಟಿಗಳಲ್ಲಿ ಹೂ ಕಿತ್ತು ತರುತ್ತಾರೆ. ಅಂದು ಕೊಟ್ಟಿಗೆಯಲ್ಲಿರುವ ಸಗಣಿ ಗುಡ್ಡೆಯು ವಿವಿಧ ಹೂಗಳಿಂದ ಪೂಜಿಸಲ್ಪಡುವುದು. ಇಲ್ಲಿ ಗೋಪೂಜೆಯಷ್ಟೇ ಸಗಣಿ ಪೂಜೆಗೂ ಮಹತ್ವವಿದೆ. ಇದೇ ರೀತಿಯ ಆಚರಣೆ ರಾಜಸ್ಥಾನದಲ್ಲಿ ಮಾರವಾಡಿ ಸಮುದಾಯದವರಿಂದ 'ಗೋಬರ್ಧನ್ ಪೂಜಾ' ಎಂಬ ಹೆಸರಿನಿಂದ ಆಚರಿಸಲ್ಪಡುತ್ತದೆ.

ಕೂಡ್ಲಿಗಿ ಭಾಗದ ಕರಡಿಗೊಲ್ಲರ ಹಟ್ಟಿಯಲ್ಲಿ ಕುರಿಹುಣ್ಣಿ ಹಬ್ಬ ನೆರವೇರುತ್ತದೆ. ಈ ಆಚರಣೆಯು ಗೌರಿ ಹುಣ್ಣಿಮೆ ನಂತರ, ದೀಪಾವಳಿ ಅಮವಾಸ್ಯೆಗೆ ಮುನ್ನ ಏರ್ಪಡುತ್ತದೆ. ಇದು ಮೂರು ದಿನಗಳ

ಆಚರಣೆಯಾಗಿದ್ದು, ಈ ಸಮಯದಲ್ಲಿ ಜಾನುವಾರುಗಳಿಂದ ಹಾಲು ಕರೆಯುವಂತಿಲ್ಲ. ಅಂದು ಯಾವುದೇ ವಸ್ತು ವಿನಿಮಯ ಮಾಡುವಂತಿಲ್ಲ. ಪೊರಕೆ, ಪುಟ್ಟಿಗಳನ್ನು ಹೊರಹಾಕಿ ಮನೆಯ ತುಂಬಾ ಹೂ ಚೆಲ್ಲುತ್ತಾರೆ. ಅಂದು ಕಸ ಗುಡಿಸಿದರೆ ಲಕ್ಷ್ಮಿಯು ಹೊರಟು ಹೋಗುವಳೆಂಬ ನಂಬಿಕೆಯಿದೆ. ಇದು ಸಂಪೂರ್ಣ ಜಾನುವಾರುಗಳಿಗೆ ಸಂಬಂಧಿಸಿದ ಆಚರಣೆಯಾಗಿದ್ದು, ಬುಡಕಟ್ಟು ಸಮುದಾಯಗಳಿಗೆ ಜಾನುವಾರುಗಳ ಮೇಲಿರುವ ಗೌರವವನ್ನು ತಿಳಿಸುತ್ತದೆ.

ಪೈರಿಗೆ ಪೂಜೆ ಸಲ್ಲಿಸಿ ತೆನೆ ಕೀಳುವ ಕಾಲವಾದ್ದರಿಂದ ರೈತರಿಗೆ ಸ್ವಲ್ಪ ದಣಿವಾರಿಸಿಕೊಳ್ಳುವ ಸಂದರ್ಭ ಇದು. ಕಣ್ಣು ಕಟ್ಟಿ ತೆಂಗಿನ ಕಾಯಿ ಹೊಡೆಯುವುದು, ಲಿಂಬೆಹಣ್ಣು ತೂರುವುದು, ಪ್ರದರ್ಶನಾತ್ಮಕ ಕಲೆಗಳು, ಕ್ರೀಡೆಗಳು ಹೀಗೆ ಮನೋರಂಜನಾತ್ಮಕವಾದ ಸ್ಪರ್ಧೆಗಳು ನೆರವೇರುತ್ತವೆ. ಇತ್ತೀಚೆಗೆ ದೀಪಾವಳಿಯ ಹಬ್ಬದಲ್ಲಿ ಇಸ್ಪೀಟು ಆಟ ಆಡುವುದು ಹೆಚ್ಚಾಗುತ್ತಿದೆ. ಈ ಆಟವಾಡಲು ಹಬ್ಬದ ನೆಪದಲ್ಲಿ ಮೂರು ದಿನಗಳ ಕಾಲ ಸ್ಥಳೀಯ ಆಡಳಿತದಿಂದ ಪರವಾನಗಿ ಪಡೆಯುತ್ತಾರೆ. ಈ ಆಟಕ್ಕೆ ಬಲಿಯಾದ ವ್ಯಕ್ತಿಗಳು ಮನೆ, ವಸ್ತುಗಳನ್ನು ಮಾರಲು ಹಿಂಜರಿಯುವುದಿಲ್ಲ ಎಂಬುದನ್ನು ಗಮನಿಸಬೇಕು.

ದೀಪಾವಳಿ ಹಬ್ಬದಲ್ಲಿ ಆಚರಿಸಲ್ಪಡುವ ನರಕಚತುರ್ದಶಿ, ಬಲೀಂದ್ರ ಪೂಜೆ, ಲಕ್ಷ್ಮಿ ಪೂಜೆ, ಗೋಪೂಜೆ ಇವೆಲ್ಲಾ ಬೇರೆ ಬೇರೆ ಕಾಲಘಟ್ಟದಲ್ಲಿ ಹುಟ್ಟಿಕೊಂಡು, ಆಚರಣೆಗಳು ತಮ್ಮದೇ ಆದ ವಿಶಿಷ್ಟ ಐತಿಹ್ಯಗಳನ್ನು ಹೊಂದಿದ ಘಟನೆಗಳಾಗಿವೆ. ಆದರೆ ಕಾಲಕ್ರಮೇಣ ಅವೆಲ್ಲ ಒಂದೊಂದಾಗಿ ದೀಪವಾಳಿಯಲ್ಲಿ ಆಚರಿಸಲ್ಪಡುತ್ತವೆ. ಒಂದರೊಡನೊಂದು ಅಂತರ್‌ಸಂಬಂಧ ಹೊಂದಿರುವಂತೆ ಕಂಡುಬರುತ್ತವೆ.

೩.೪. ಗಾಳಿ ಸಂಬಂಧಿ ಆಚರಣೆಗಳು

ಮಾನವ ನಿಸರ್ಗದ ವಿಕೋಪಗಳೊಂದಿಗೆ ನಿರಂತರ ಹೋರಾಟ ನಡೆಸಿ, ಬಾಳಬೇಕಾದ ಅನಿವಾರ್ಯತೆ ಇತ್ತು. ಸೃಷ್ಟಿ ವೈಚಿತ್ರ್ಯದ ಹಿಂದೆ ಅತಿಮಾನುಷ ಶಕ್ತಿಯ ಅಸ್ತಿತ್ವವಿದೆ ಎಂದು ಕಲ್ಪಿಸಿಕೊಂಡು ವಿನೀತಭಾವದಿಂದ ಆರಾಧಿಸತೊಡಗಿದ. ಬದುಕಿನ ಮೂಲಭೂತ ಅಗತ್ಯಗಳನ್ನು ಪೂರೈಸಬಲ್ಲ ಮಾನವ ಕಲ್ಪಿತ ಅಗೋಚರ ಶಕ್ತಿಗಳಲ್ಲಿ ಗಾಳಿಯು ಒಂದೆಂಬ ನಂಬಿಕೆ ಬೆಳೆಯಿತು. ಮಾನವನ ಬದುಕಿಗೆ ಅನಿವಾರ್ಯ ಮೂಲಧಾತುವಾಗಿ ಜನಪದರಿಂದ ದೈವತ್ವ ಪಡೆಯಿತು. ಗಾಳಿ ಉಸಿರಾಟಕ್ಕೆ ಅಗತ್ಯ; ಅದನ್ನು ಪ್ರಾಣ ಎಂದು ಕರೆಯಲಾಗಿದೆ. ಗಾಳಿಗಿರುವ ನಿರಾಕಾರ ಗುಣದಿಂದ ಜನಪದ ಸಂಸ್ಕೃತಿಯಲ್ಲಿ, ಗುಡಿಗಳಾಗಲೀ, ಶಿಲ್ಪಗಳಾಗಲೀ ಹೆಚ್ಚಾಗಿ ಕಂಡುಬರುವುದಿಲ್ಲ. ಮರದ ಕೆಳಗೆ ಹಳ್ಳ-ನದಿ, ಕೆರೆದಂಡೆಯಲ್ಲಿ, ಊರ ಹೊರಭಾಗ ಗಾಳಿ ದೈವದ ವಾಸಸ್ಥಾನ. ಕಾರಣ ಊರಿಗೆ ಪೀಡೆಗಳು ಪ್ರವೇಶ ಮಾಡಿದರೆ ಅವುಗಳನ್ನು ಹೊರಗಿನಿಂದಲೇ ಓಡಿಸಬಹುದೆಂಬ ನಂಬಿಕೆ. ಗಾಳಿಯು ಜನಪದರಿಂದ ಹಲವಾರು ರೂಪಗಳಲ್ಲಿ ಗುರುತಿಸಲ್ಪಟ್ಟಿದೆ. "೧. ಉಸಿರು (ಪ್ರಾಣವಾಯು), ೨. ದೆವ್ವ (ಅಕಾಲಮರಣ ಮತ್ತು ಆತ್ಮಹತ್ಯೆಯಿಂದ ಸತ್ತವರು), ೩. ಕ್ಷುದ್ರಶಕ್ತಿ (ಕೆಡುಕಿನ ಶಕ್ತಿಗಳು, ಅಮ್ಮನವರು)," (ಕೆ.ವೈ. ನಾರಾಯಣಸ್ವಾಮಿ, ಪು. ೫೮). ಹೀಗೆ ಗಾಳಿಗಿರುವ ಜೀವಪೋಷಕ ಹಾಗೂ ಜೀವನಾಶದ ಸ್ಥಿತಿಗಳೆರಡನ್ನು ಜನಪದರು ಗ್ರಹಿಸಿದ್ದಾರೆ. ರೋಗಗಳಿಗೆ ಔಷಧಿ ಇಲ್ಲದ ಕಾಲದಲ್ಲಿ ರೋಗಕ್ಕೆ ಗಾಳಿ ಕಾರಣವೆಂಬ ನಂಬಿಕೆಯಿತ್ತು. ಅದು ಗಾಳಿದೈವಗಳ ಹುಟ್ಟಿಗೆ ಕಾರಣವಾಗಿರಬೇಕು. ರೋಗ ತರುವ

ಮಾರಕಶಕ್ತಿ ಗ್ರಾಮ ಪ್ರವೇಶಿಸದಂತೆ ತಡೆಯುವುದು ಪ್ರಮುಖವಾಗಿತ್ತು. ಹೀಗೆ ಗಾಳಿ ದೈವೀರೂಪ ಪಡೆದಿರುವ ಸಾಧ್ಯತೆ ಇದೆ.

"ಗಾಳಿಯನ್ನು ಜನತೆಗೆ ತೊಂದರೆ ಕೊಡುವ ದೆವ್ವ, ಪಿಶಾಚಿ, ಕ್ಷುದ್ರಶಕ್ತಿ, ಪೀಡೆ, ಜಕ್ಕಣಿ, ಸೋಂಕು ಎಂದು ಕರೆದುದು ಗಮನಾರ್ಹ. ಹೀಗೆ ಗಾಳಿಯು ದೈವ ಮತ್ತು ದೆವ್ವ ಎನ್ನುವ ಎರಡು ಅರ್ಥಗಳಲ್ಲಿ ಜನಪದ ಸಂಸ್ಕೃತಿಯಲ್ಲಿ ಪ್ರಚಲಿತದಲ್ಲಿದೆ. 'ಗಾಳಿ ಬದುಕು', 'ಗಾಳಿ ಪಾಲಾಗು', 'ಗಾಳಿಯಾಗು' ಮೊದಲಾದ ಬೈಗುಳಗಳಲ್ಲಿ ಮತ್ತು 'ಗಾಳಿ ಹಿಡಿದವನ್ಹಂಗೆ', 'ಗಾಳಿ ಹೊಕ್ಕವನ್ಹಂಗೆ', 'ಗಾಳಿ ಚೇಷ್ಟೆ' ಈ ನುಡಿಗಳಲ್ಲಿ ಗಾಳಿಗೆ ದೆವ್ವ, ಪಿಶಾಚಿ ಎನ್ನುವ ದುಷ್ಟಶಕ್ತಿಯ ಅರ್ಥವಿದೆ".[೨೦] ಕನ್ನಡ ನಿಘಂಟುವಿನಲ್ಲಿ ಗಾಳಿ ಪೂಜೆ ಎಂದರೆ ದೆವ್ವಗಳಿಗೆ ಪೂಜೆ ಮಾಡುವುದು ಎಂದಿದೆ. ಮೈಯಲ್ಲಿ ಬಂದ ದೈವ. ದೇವರು ಕಣ್ಣಿಗೆ ಕಾಣಲಾರವು. ಗಾಳಿಯು ಸಹ ಕಣ್ಣಿಗೆ ಕಾಣುವುದಿಲ್ಲ. ಅದನ್ನು ಪ್ರಾಣವೆಂದು ಕರೆಯಲಾಗುತ್ತದೆ. ಗಾಳಿ ಶಕ್ತಿದೇವತೆಯೂ ಹೌದು. ಸಾಮೂಹಿಕವಾಗಿ ಬರುತ್ತಿದ್ದ ರೋಗಗಳಿಗೆ ಇಡೀ ಗ್ರಾಮವೇ ತುತ್ತಾಗುತ್ತಿದ್ದ ಕಾಲದಲ್ಲಿ ದುಷ್ಟಶಕ್ತಿಯೇ ಇದಕ್ಕೆ ಕಾರಣ ಎಂದು ಭಾವಿಸಿ, ಆ ಶಕ್ತಿಗೆ ತಮ್ಮ ಕಲ್ಪನೆಯ ರೂಪಕೊಟ್ಟು, ಪೂಜಿಸಿರುವ ಅನೇಕ ಬಗೆಯ ದೇವತೆಗಳುಂಟು. ಅವು ಗಾಳಿಯಮ್ಮ, ಗಾಳೆವ್ವ, ಗಾಳಿಮಾರೆವ್ವ, ಗಾಳಿದುರುಗಮ್ಮನಾಗಿ ಇಂದಿಗೂ ಪೂಜಿಸಲ್ಪಡುತ್ತವೆ. ರೋಗ-ರುಜಿನಗಳಿಗೆ ದೇವತೆಗಳು ಕಾರಣವೆಂದು, ಅಮ್ಮನನ್ನು ಕಳುಹಿಸುವುದು, ಗುಳೇ ಹೋಗುವುದು, ಎಡೆ ಹಾಕುವುದು, ಬೇವಿನಸೀರೆ ಉಡಿಸುವುದು ಹೀಗೆ ಪೂಜೆ, ವ್ರತ, ಹರಕೆ ಸಲ್ಲಿಸುವುದರ ಮೂಲಕ ದೇವತೆಗಳನ್ನು ತೃಪ್ತಿಪಡಿಸುತ್ತಾ ಬಂದಿದ್ದಾರೆ. ಅಮ್ಮನನ್ನು ಊರಿಂದ ಊರಿಗೆ ಗಡಿ ದಾಟಿಸುವುದರಿಂದ, ಗುಳೇ ಹೋಗುವುದರಿಂದ, ಗ್ರಾಮ ಸ್ವಚ್ಛಗೊಂಡು ರೋಗದ ಭೀಕರತೆ ಕಡಿಮೆಯಾಗುವುದೆಂಬ ಆಶಯ ಆಚರಣೆಯಲ್ಲಿದೆ. ಅಕಾಲ ಮರಣಕ್ಕೆ ತುತ್ತಾದ ಅತೃಪ್ತ ಆತ್ಮಗಳು ಭೂತ, ಪ್ರೇತ, ದೆವ್ವ, ಪಿಶಾಚಿಗಳಾಗಿ ಗಾಳಿಯಲ್ಲಿ ಅಲೆಯುತ್ತಿರುತ್ತವೆ. ಬಸುರಿ, ಬಾಣಂತಿ ಹಸುಗೂಸುಗಳನ್ನು ಹೆಚ್ಚಾಗಿ ಕಾಡುತ್ತವೆಂಬ ನಂಬಿಕೆ. ಗಾಳಿಯು ಜನಪದ ಸಂಸ್ಕೃತಿಯಲ್ಲಿ ದೇವರೆನ್ನುವುದಕ್ಕಿಂತ ದೆವ್ವ ಎನ್ನುವ ಅರ್ಥದಲ್ಲಿ ಹೆಚ್ಚಾಗಿ ಪ್ರಚಲಿತದಲ್ಲಿದೆ. ಜನಪದ ಸಂಸ್ಕೃತಿಯಲ್ಲಿ ಗಾಳಿ ಪುರುಷ ದೈವವಾಗಿಯೂ ಗುರುತಿಸಲ್ಪಟ್ಟಿದೆ. ಧಾನ್ಯದ ರಾಶಿಯನ್ನು ತೂರಲು ಸಹಾಯಕ ಗಾಳಿದೇವನಾಗಿರುವನು. ಕಣ ಮಾಡುವಾಗ ಗಾಳಿ ಬೀಸುವ ದಿಕ್ಕಿನ ಕಡೆ ಎಡೆಹಿಡಿದು, ಹುಲಿಗೋ ಎಂದು ಕೂಗಿದರೆ ಗಾಳಿ ಬೀಸುತ್ತದೆನ್ನುವ ನಂಬಿಕೆಯಿದೆ. ಕೃಷಿಕ ಸಮಾಜವು ಗಾಳಿಯ ಚಲನೆಯನ್ನು ಈ ರೀತಿಯಾಗಿ ಅರ್ಥೈಸಿದೆ. "ತೆಂಕಣ ಗಾಳಿ ಮಳೆ ತರುತ್ತದೆ. ಮೂಡಣ ಗಾಳಿ ಬೀಸಿದರೆ ಫಸಲು ಚೆನ್ನಾಗಿ ಬರುತ್ತದೆ. ಪಡುವಣ ಗಾಳಿ ಬೀಸಿದರೆ ಹಣ್ಣುಗಳು ಯಥೇಚ್ಛವಾಗಿ ಬೆಳೆಯುತ್ತವೆ. ಆಷಾಢ ಗಾಳಿ ಬೀಸಿದರೆ ಹಸಿವು ಹೆಚ್ಚಾಗುತ್ತದೆ" ಎಂಬುದು ಜನಪದರ ಅನುಭವದ ಮಾತಾಗಿದೆ. ಹುಣಸೆಮರ, ಆಲದಮರ, ಬೇವಿನಮರ ಮತ್ತು ಜಾಲಿಮರ, ಕಳ್ಳಿಗಿಡಗಳಲ್ಲಿ ಗಾಳಿ ಇದೆ. ರಾತ್ರಿ ಸಮಯದಲ್ಲಿ ಗಿಡದ ಬುಡದಲ್ಲಿ ಕೂಡಬಾರದೆಂಬ ನಂಬಿಕೆಯಿದೆ. ಆ ಸಮಯದಲ್ಲಿ ಗಿಡ ಮರಗಳು ಆಮ್ಲಜನಕ ತೆಗೆದುಕೊಂಡು, ಇಂಗಾಲದ ಡೈ ಆಕ್ಸೈಡ್ ಹೊರಹಾಕುತ್ತವೆ. ಇದು ಮಾನವನ ಉಸಿರಾಟಕ್ಕೆ ಹಾನಿಕಾರಕ ಎಂಬುದು ವೈಜ್ಞಾನಿಕ ಕಾರಣ. ಧೂಳುಗಾಲಿನಿಂದ ಮನೆಯೊಳಗೆ ಪ್ರವೇಶಿಸಿದರೆ, ಕಾಲಿನ ಮೂಲಕ ಗಾಳಿ ಒಳ ಪ್ರವೇಶಿಸುತ್ತದೆಂಬ ನಂಬಿಕೆ ಇದೆ. ಕಾಲು ತೊಳೆದು ಮನೆ ಸೇರಬೇಕೆಂಬ ನಂಬಿಕೆ ಇದೆ. ಈ ರೀತಿಯ ಗಾಳಿ ಸಂಬಂಧಿ ನಂಬಿಕೆಗಳನ್ನು ಮೂಢನಂಬಿಕೆ

ಎನ್ನಲಾಗದು. ಅವುಗಳಲ್ಲಿಯ ಸತ್ಯಾಸತ್ಯತೆ ಅರಿಯಬೇಕಿದೆ. ಮನುಷ್ಯನಿಗೆ ಬದುಕು ಮುಖ್ಯ. ಬದುಕುವ ಆಶಯ ಹೊಂದಿದವರಿಗೆ ಹುಲ್ಲುಕಡ್ಡಿಯಾದರೂ ಆಶ್ರಯವಾಗಬಲ್ಲದು. ಯಾವ ಆಚರಣೆಯನ್ನಾದರೂ ನಂಬಿಕೆಯಿಂದ ಮಾಡಬಲ್ಲ ಮನಃಸ್ಥಿತಿ ಜನಪದರದ್ದಾಗಿದೆ. ಜನಪದರಿಗೆ ದೇವರು, ದೆವ್ವಗಳು ಬದುಕಿನ ಅಂಗಗಳಾಗಿವೆ. ನಂಬಿಕೆಗಳ ಮೂಲಕ ಗಾಳಿ ದೆವ್ವಗಳಿಗೆ ಜೀವಕೊಟ್ಟು, ರೂಪಕೊಟ್ಟು, ಮಾತನಾಡಿಸಿ, ಕುಣಿಸಿ ಮನದ ಉದ್ವೇಗವನ್ನು ಕಡಿಮೆ ಮಾಡಿಕೊಳ್ಳುವುದುಂಟು.

ಮೆಣಸಿನಕಾಯಿ ಇಳಿ ತೆಗೆಯುವುದು, ಪೊರಕೆ ಕಡ್ಡಿ ಮುರಿದು ಸುಡುವುದು, ಅರಳೆಯನ್ನು ಗೋಡೆಗೆ ಅಂಟಿಸಿ ಸುಡುವುದು, ಮಂತ್ರಿಸಿದ ಅರಿಶಿಣದ ಬೇರನ್ನು ತೋಳಿಗೆ ಕಟ್ಟುವುದು, ಭತ್ತ, ಗೋಧಿಯ ತೆನೆಯನ್ನು ಮನೆಯ ಸೂರಿಗೆ ನೇತು ಹಾಕುವುದು ದೈವೀ ಭಯ ನಿವಾರಣೆಗಾಗಿ. ಈ ರೀತಿಯ ಕ್ರಿಯೆಗಳು ತಾತ್ಕಾಲಿಕವಾಗಿ ಆ ಕ್ಷಣದಲ್ಲಿ ಮಾನಸಿಕ ಧೈರ್ಯ ನೀಡಿ, ಭಯ ನಿರ್ಮೂಲನೆಗೆ ಕಾರಣವಾಗಿವೆ. ಜನ - ಜಾನುವಾರುಗಳ ರೋಗ-ರುಜಿನಗಳಿಂದ ನೊಂದ ಜನ ತಮ್ಮ ಕಷ್ಟ ನಿವಾರಣೆಗಾಗಿ ದೈವಗಳ ಮೊರೆ ಹೋಗುವುದು, ಬಲಿ ನೀಡುವುದು ಸಾಮಾನ್ಯವಾದುದಾಗಿದೆ. ಹೀಗೆ ಗಾಳಿಯು ತನ್ನ ನಿರಾಕಾರತ್ವ ಹಾಗೂ ಸ್ಪರ್ಶ ಗುಣದಿಂದ ದೈವತ್ವದ ಸ್ಥಾನ ಪಡೆದಿದೆ.

ಪ್ರಕೃತಿ ಸಹಜವಾದ ಗಾಳಿ ಋತುಮಾನದ ಜೊತೆ ಬೇರೆ ಬೇರೆ ಹೆಸರುಗಳಿಂದ ಗುರುತಿಸಲ್ಪಡುತ್ತದೆ. "ಈಶಾನ್ಯದಿಂದ ಬೀಸುವ ಗಾಳಿಯನ್ನು ಸ್ಮಶಾನ ಗಾಳಿ ಎಂದೂ, ಆಗ್ನೇಯ ದಿಕ್ಕಿನಿಂದ ಬೀಸುವುದನ್ನು ಕುಂಬಾರ ಗಾಳಿ ಎಂದೂ, ವಾಯುವ್ಯ ದಿಕ್ಕಿನಿಂದ ಬೀಸುವ ಗಾಳಿಗೆ ಗಂಗೆ ಗಾಳಿ ಎಂದೂ ಕರೆಯುತ್ತಾರೆ" (ಕೆ.ವೈ. ನಾರಾಯಣಸ್ವಾಮಿ, ೨೦೦೦, ಪು. ೫೮). ಹೀಗೆ ಗಾಳಿ ಬೀಸುವಿಕೆಯಿಂದ ಜನ, ಜಾನುವಾರುಗಳ ಆರೋಗ್ಯದಲ್ಲಿ ಏರುಪೇರುಗಳಾಗುವುದು ಸಹಜ. ಆಚರಣೆಗಳ ಮುಖೇನ ಗಾಳಿ ದೈವವನ್ನು ಸಂತೃಪ್ತಗೊಳಿಸಿ, ರೋಗ-ರುಜಿನಗಳನ್ನು ವಾಸಿ ಮಾಡಿಕೊಳ್ಳುವ ಆಶಯ ಆಚರಣೆಯಲ್ಲಿದೆ.

೩.೪.೧. ಗುಳೆ ಲಕ್ಕಮ್ಮನ ಜಾತ್ರೆ

ಲಕ್ಕಮ್ಮ ಜಾನುವಾರುಗಳ ಅಧಿದೇವತೆ. ಕೂಡ್ಲಿಗಿ ಜನರು ಮೂರು ವರ್ಷಕ್ಕೊಮ್ಮೆ ಗುಳೆ ಹೋಗುವುದರ ಮೂಲಕ ಲಕ್ಕಮ್ಮನ ಜಾತ್ರೆ ಆಚರಿಸುತ್ತಾರೆ. ಸಾಂಕ್ರಾಮಿಕ ರೋಗ ಅಥವಾ ಪ್ರಾಕೃತಿಕ ವಿಕೋಪಕ್ಕೆ ಬಲಿಯಾದ ಗ್ರಾಮದ ಜನ ಒಂದೆಡೆಯಿಂದ ಇನ್ನೊಂದೆಡೆಗೆ ವಲಸೆ ಹೋಗುವುದೇ ಗುಳೆ ಹೋಗುವುದು. ಗ್ರಾಮದೇವತೆಗಳ ಹಬ್ಬ ಊರ ಒಳಗೆ ಆಚರಣೆಗೊಂಡರೆ, ಈ ದೇವತೆಗೆ ಊರ ಹೊರಗೆ ಹಬ್ಬ ನೆರವೇರುವುದು ಇಲ್ಲಿಯ ವೈಶಿಷ್ಟ್ಯವಾಗಿದೆ. ಅಂದು ಯಾರ ಬಲತ್ಕಾರವಿಲ್ಲದೆ ಇಡೀ ಊರೇ ಗುಳೆ ಹೋಗುತ್ತದೆ. ಅಬಾಲವೃದ್ಧರಾದಿಯಾಗಿ ಜಾನುವಾರುಗಳನ್ನು ಕರೆದೊಯ್ಯುತ್ತಾರೆ. ಜಾತ್ರೆಗಾಗಿ ತಳಿರುತೋರಣಗಳಿಂದ ಸಿಂಗರಿಸುವಂತಿಲ್ಲ. ಸಗಣಿ ಸಾರಿಸುವಂತಿಲ್ಲ. ಈ ನಿಷೇಧಗಳು ಕಷ್ಟಗಳ ವಾಸ್ತವ ಸ್ಥಿತಿಯನ್ನು ತಿಳಿಸುತ್ತದೆ. ಅಲ್ಲದೆ ಆಚರಣೆಯ ಮುಖೇನ ದೈವಕ್ಕೆ ಮಾಡುವ ಪ್ರತಿಭಟನೆಯು ಹೌದು. ಗುಳೆ ಹೋಗುವ ಹಿಂದಿನ ದಿನ ದೇವಿಯನ್ನು ಪ್ರತಿಷ್ಠಾಪಿಸಿ, ಉಡಿ ತುಂಬಿ ಪೂಜಿಸುತ್ತಾರೆ. ಭಕ್ತರಿಂದ ಪೂಜಿಸಲ್ಪಟ್ಟ ಲಕ್ಕಮ್ಮ ಉತ್ಸವದ ಮೂಲಕ ಊರುಬಿಟ್ಟು ಹೊರಡುತ್ತಾಳೆ. ಆ ದಿನ ಯಾರೂ ಗ್ರಾಮ ಪ್ರವೇಶಿಸುವುದಿಲ್ಲ, ಮನೆಗಳಿಗೆ ಬೀಗ ಹಾಕದಿದ್ದರೂ

ಯಾವುದೇ ಕಳ್ಳತನ ನಡೆಯುವುದಿಲ್ಲ. ಇದಕ್ಕೆ ಕಾರಣ ದೇವಿಯ ಉಗ್ರಕೋಪಕ್ಕೆ ಬಲಿಯಾಗುತ್ತೇವೆ ಎಂಬ ಭಯ.

ತಾವು ಬುಟ್ಟಿಯಲ್ಲಿ ತಂದ ದವಸ-ಧಾನ್ಯಗಳಿಂದ ಅಡುಗೆ ತಯಾರಿಸಿ ಸಾಮೂಹಿಕವಾಗಿ ಭೋಜನ ಮಾಡುತ್ತಾರೆ. ಸಂಜೆ ದೇವಿಯೊಂದಿಗೆ ಉತ್ಸವ ಗ್ರಾಮ ಪ್ರವೇಶಿಸುತ್ತದೆ. ಗ್ರಾಮದ ಸುತ್ತ ಸಮೃದ್ಧಿಯ ಸಂಕೇತವಾಗಿ ಸಸ್ಯಮೂಲ ಚರಗ ಚೆಲ್ಲಲಾಗುತ್ತದೆ. ಇಲ್ಲಿ ಯಾವುದೇ ಬಲಿ ನೀಡಿಕೆಯಿಲ್ಲ, ಸಾಂಕ್ರಾಮಿಕ ರೋಗಗಳಿಂದ ಜನ-ಜಾನುವಾರುಗಳ ರಕ್ಷಣೆಗೆಂದು ಆಚರಣೆಗೊಳ್ಳುತ್ತದೆ. ಊರಿನ ಪ್ರವೇಶ ದ್ವಾರದಲ್ಲಿ ಹಾಕಿರುವ ಅಗ್ಗಿಷ್ಟಿಕೆಯಿಂದ ತಮ್ಮ ಮನೆಗಳಿಗೆ ಬೆಂಕಿ ತೆಗೆದುಕೊಂಡು ಹೋಗುತ್ತಾರೆ. ಮುಚ್ಚಿದ ಮನೆಗಳ ಬಾಗಿಲಿಗೆ ಪೂಜೆ ಸಲ್ಲಿಸಿ, ಬಾಗಿಲು ತೆರೆದು, ತಾವು ತಂದ ಬೆಂಕಿಯಿಂದ ಮನೆಯ ದೀಪ ಬೆಳಗಿಸುತ್ತಾರೆ. ಇಲ್ಲಿ ದೀಪ ಲಕ್ಕಮ್ಮನ ಪ್ರತೀಕವಾಗಿರುವುದು. ದೀಪದ ಮೂಲಕ ದೈವ ತಮ್ಮೆಲ್ಲರ ಮನೆಗಳಿಗೆ ಪ್ರವೇಶಿಸಿದೆ ಎಂದು ನಂಬುತ್ತಾರೆ.

ಈ ಗ್ರಾಮದೇವತೆಯನ್ನು ಗುಳೇದ ಲಕ್ಕವ್ವ, ಗುಳೆಲಕ್ಕವ್ವ, ಲಕ್ಕಮ್ಮ ಎಂದು ಕರೆಯುವುದುಂಟು. 'ಲಕ್ಕಮ್ಮ' ಎಂದರೆ ಲಕ್ಷ್ಮಮ್ಮನ ತದ್ಭವ ರೂಪ. ಲಕ್ಷ್ಮಿಯ ಪ್ರತೀಕ; ಮುನಿದ ದೈವವನ್ನು ಆಹ್ವಾನಿಸಲು ಜನ-ಜಾನುವಾರುಗಳು ಊರು ಬಿಡುತ್ತಾರೆ. ಏಕೆಂದರೆ ಲಕ್ಷ್ಮಿಯು ಕಾಲಿಟ್ಟ ಸ್ಥಳದಲ್ಲಿ ಬಲಿಯನ್ನು ಸಹಜವಾಗಿ ನೀಡಬೇಕು. ಅಂತೆಯೇ ಆ ದೇವಿ ಬಂದಾಗ ಯಾವುದೇ ಜನ-ಜಾನುವಾರು ಊರಲ್ಲಿದ್ದರೆ, ಲಕ್ಷ್ಮಿಯು ಬಲಿ ತೆಗೆದುಕೊಳ್ಳುತ್ತಾಳೆಂಬ ಭೀತಿಯೇ ಗುಳೆ ಹೋಗಲು ಕಾರಣ.

ಮರಿಯಮ್ಮನಹಳ್ಳಿ ಸಮೀಪದ ಗರಗ ಗ್ರಾಮದಲ್ಲಿ ಮುಂಗಾರು ಬಿತ್ತನೆ ಮುಂಚೆ ಲಕ್ಕಮ್ಮನ ಜಾತ್ರೆ ನಡೆಯುತ್ತದೆ. ಅಂದು ಯಾರೂ ಗ್ರಾಮ ಪ್ರವೇಶಿಸದಂತೆ ಗ್ರಾಮದ ಸುತ್ತಮುತ್ತ ಮುಳ್ಳುಬೇಲಿ ಹಾಕಿ ನಿರ್ಬಂಧಿಸಿರುತ್ತಾರೆ. ಇಲ್ಲಿ ಬಲಿ ಪದ್ಧತಿ ಇದೆ. ದೇವಿ ಗ್ರಾಮಕ್ಕೆ ಪ್ರವೇಶಿಸುವ ಮುನ್ನ ಬಲಿ ನೀಡಿ ಆಕೆಯನ್ನು ಶಾಂತಗೊಳಿಸುತ್ತಾರೆ. ಜಾತ್ರೆಯಲ್ಲಿ ಸಾಮೂಹಿಕ ವನಭೋಜನದ ಮೂಲಕ ಹಳೆಯ ಜಗಳ, ಮನಸ್ತಾಪಗಳನ್ನು ಮರೆತು ಒಂದಾಗುತ್ತಾರೆ. ಜಾತಿ, ಭೇದವಿರದ ಸಂಭ್ರಮದ ಆಚರಣೆಯಿದು. ಸ್ಥಳೀಯರ ಹೇಳಿಕೆಯ ಪ್ರಕಾರ 'ಗುಳೆ ಲಕ್ಕವ್ವನ ಜಾತ್ರೆ ಮಾಡೋದ್ರಿಂದ ಊರು ಸುಭಿಕ್ಷೆಯಾಗುತ್ತದೆ. ಮಕ್ಕಳು, ಜಾನುವಾರುಗಳ ಆರೋಗ್ಯ ಚೆನ್ನಾಗಿರುತ್ತದೆ'. ಹಿಂದೆ ಪ್ಲೇಗು, ಕಾಲರಾದಂತಹ ರೋಗಗಳು ಹರಡದಂತೆ ಊರನ್ನು ಸ್ವಚ್ಛವಾಗಿಡಲು, ಒಂದು ದಿನ ಮಾತ್ರ ಎಲ್ಲವನ್ನು ಖಾಲಿ ಮಾಡಿಸಿ, ಕ್ರಿಮಿ, ಕೀಟ ಹರಡದಂತೆ ಮಾಡುವ ಉಪಾಯ ಲಕ್ಕವ್ವನ ಜಾತ್ರೆಯ ಹಿನ್ನೆಲೆಯಾಗಿತ್ತು. ಹಿಂದೆ ವೈದ್ಯಕೀಯ ಚಿಕಿತ್ಸೆಗಳಿಲ್ಲದ ಸಮಯದಲ್ಲಿ ಸ್ವಾಭಾವಿಕವಾಗಿ ಗುಳೇ ಹೋಗುತ್ತಿದ್ದುದುಂಟು. ಅದನ್ನು ಸಾಂಕೇತಿಕವಾಗಿ ಈ ಜಾತ್ರೆ ಪ್ರತಿನಿಧಿಸುವಂತಿದೆ.

ರೋಗ ರುಜಿನಗಳು ಬಂದಾಗ ಜನ-ಜಾನುವಾರುಗಳು ಒಂದು ದಿನದ ಮಟ್ಟಿಗೆ ಊರು ಬಿಡುವುದರಿಂದ ಬ್ಯಾಕ್ಟೀರಿಯಾಗಳು ನಾಶ ಹೊಂದುತ್ತವೆಂಬುದು ವೈಜ್ಞಾನಿಕ ಸತ್ಯ. ಜನಪದ ಸಂಸ್ಕೃತಿಯಲ್ಲಿ ಲಕ್ಕಮ್ಮನ ಜಾತ್ರೆ ವಿಶೇಷ ಆಚರಣೆಯಾಗಿ ಮಹತ್ವ ಪಡೆದಿದೆ. ಜನತೆಯ ಆರೋಗ್ಯದ ದೃಷ್ಟಿಯಿಂದ ವೈಚಾರಿಕತೆಯ ಹಿನ್ನೆಲೆಯಲ್ಲಿ ಇಂದಿಗೂ ಜನ ಮನ್ನಣೆಯನ್ನು ಪಡೆದ ಆಚರಣೆಯಾಗಿ ಉಳಿದುಕೊಂಡು ಬಂದಿದೆ.

೩.೪.೨. ಅಮ್ಮನ ಕಳಿಸುವ ಆಚರಣೆ

ಸಮಾಜದಲ್ಲಿ ಹೆಣ್ಣು ದೇವರುಗಳು ಪ್ರಭಾವ ಬೀರಲು ಹೆಣ್ಣಿಗೆ ಹಿಂದೆ ಕೊಡುತ್ತಿದ್ದ ಶ್ರೇಷ್ಠ ಸ್ಥಾನವೇ ಮುಖ್ಯಕಾರಣ. ಪುರುಷರಿಗಿಂತ ಸ್ತ್ರೀ ಉನ್ನತ ಸ್ಥಾನದವಳು, ಆಕೆ ಪವಿತ್ರಳು ಎಂಬ ಭಾವನೆಯೆ ಹೆಣ್ಣು ದೈವಗಳ ಪ್ರಾಧಾನ್ಯತೆಗೆ ಕಾರಣ. ಇಂತಹ ಹಿನ್ನೆಲೆಗಳು ಅಮ್ಮನ ಕಳುಹಿಸುವ ಆಚರಣೆಗೆ ಕಾರಣವಾಗಿರಲು ಸಾಧ್ಯವಿದೆ. ಜನ, ಜಾನುವಾರುಗಳ ರೋಗ, ಮಳೆ ಬೆಳೆ ಇಲ್ಲದೆ ಭೂಮಿ ಬರಡಾದಾಗ, ಸಿಡುಬು, ದಡಾರ, ಪ್ಲೇಗ್ ಇತ್ಯಾದಿ ಸಾಂಕ್ರಾಮಿಕ ರೋಗಗಳು ಉಲ್ಬಣಿಸಿದಾಗ, ದೈವ ಮುನಿಸಿಕೊಂಡಿದೆ ಎಂಬ ಭಾವನೆ ಜನಪದರಿಗಿದೆ. ತಾವು ನಂಬಿದ ದೈವವನ್ನು ಭಯ, ಭಕ್ತಿಯಿಂದ ಪೂಜಿಸಿ, ರೋಗ ನಿವಾರಿಸಿಕೊಳ್ಳುವ ಆಚರಣೆ ಇದು. ಬಳ್ಳಾರಿ ಜಿಲ್ಲೆಯ ಗ್ರಾಮೀಣ ಭಾಗಗಳಲ್ಲಿ ಮಾತೃದೇವತಾ ಪೂಜಾ ವಿಧಿಗಳ ಮೂಲಕ ಆಚರಿಸಲ್ಪಡುವುದು ಕಂಡುಬಂದಿದೆ. ಅಮ್ಮನನ್ನು ರಥ ಅಥವಾ ಕುಂಭದಲ್ಲಿ ಕಳುಹಿಸುತ್ತಾರೆ.

ಹೊಸಪೇಟೆಯ ಏಳುಕೇರಿಯಲ್ಲಿರುವ ಬೇಡ ಸಮುದಾಯದವರು ಬುಡಕಟ್ಟು ಆಚರಣೆಗಳನ್ನು ಉಳಿಸಿಕೊಂಡು ಬಂದಿದ್ದಾರೆ. ಇಲ್ಲಿ ವಿಶೇಷವಾಗಿ ಅಮ್ಮನ ಕಳುಹಿಸುವ ಆಚರಣೆ ನೆರವೇರುತ್ತದೆ. ಅಮ್ಮನನ್ನು ಸಾಮಾನ್ಯವಾಗಿ ಮಂಗಳವಾರ ಕಳುಹಿಸುತ್ತಾರೆಂದು 'ಸಾರು' ಹಾಕಲಾಗುತ್ತದೆ. ಅಂದು ರೈತರು ಹೊಲಗಳಿಗೆ ಹೋಗುವಂತಿಲ್ಲ. ಬಂಡಿ ಕಟ್ಟುವಂತಿಲ್ಲ. ಅಂದು ಆಚಾರಿಗಳು ಬೆತ್ತಲೆಯಾಗಿ ಕುಡುಗೋಲು ಮುಟ್ಟದ ಅತ್ತಿ ಗಿಡವನ್ನು ಕಡಿದು ತಂದು ದೇವಿಯ ಮೂರ್ತಿ ಮಾಡುತ್ತಾರೆ. ಅಂದು ದೇವಿ ಸೀರೆ, ಹೂ, ಕುಂಕುಮ, ಭಂಡಾರಗಳಿಂದ ಶೃಂಗಾರಗೊಳ್ಳುತ್ತಾಳೆ. ಇಲ್ಲಿ ದೇವಿ ಮೂರ್ತಿಯು ತಿದ್ದಿ ಮಾಡಿದ ಸುಂದರ ಆಕೃತಿಯಾಗಿರದೆ, ಭಯಾನಕವಾಗಿ ಅಲಂಕರಿಸಿರುವುದುಂಟು. ಅಲಂಕೃತ ಮೂರ್ತಿಯು ರೋಗದ ಸಂಕೇತವಾಗಿರುತ್ತದೆ. ಊರಮ್ಮನ ಕಟ್ಟೆ ಸುತ್ತ ತಡಿಕೆ ಕಟ್ಟಲಾಗಿದ್ದು, ಮುಖ ಮಾತ್ರ ಕಾಣಲು ರಂಧ್ರವಿರುತ್ತದೆ. ಚಿಕ್ಕಮಕ್ಕಳು ಮೊದಲು ದೇವಿಯನ್ನು ನೋಡಬಾರದೆಂಬ ನಂಬಿಕೆಯಿದೆ. ಇದರಿಂದಲೇ ದೈವದ ಭೀಕರತೆ ತಿಳಿಯುತ್ತದೆ. 'ದೂಳುಮರಿ' ಎಂದು ಕುರಿಯನ್ನು ಬಲಿ ನೀಡಿ ದೇವಿಯನ್ನು ಶಾಂತಗೊಳಿಸುತ್ತಾರೆ.

ಅಮ್ಮ ತನಗಿಷ್ಟವಾದವರ ಮೈಮೇಲೆ ಬಂದು ತನ್ನ ಆಸೆಗಳನ್ನು ನಿವೇದಿಸಿಕೊಳ್ಳುತ್ತಾಳೆ. ಉಡಿ ತುಂಬಿ ಪೂಜಿಸಿದ ವಸ್ತುಗಳನ್ನು ಮನೆಗೆ ತೆಗೆದುಕೊಂಡು ಹೋಗುವಂತಿಲ್ಲ. ಅಮ್ಮನ ಕಳುಹಿಸುವಾಗ ಹಿಂದೆ ಕೋಣ ಬಲಿ ಕೊಡಲಾಗುತ್ತಿತ್ತೆಂದು ಹೇಳಲಾಗುತ್ತಿದೆ. ಮೆರವಣಿಗೆಯಲ್ಲಿ ಅಮ್ಮನ ರಥದ ಜೊತೆ ಪೂಜಿಸಿದ ಸಾಮಗ್ರಿ, ಕಸ, ಕಡ್ಡಿಗಳನ್ನು ಸಂಪೂರ್ಣವಾಗಿ ಒಯ್ಯುತ್ತಾರೆ. ರಥದ ಬದಲಾಗಿ ಕೆಲವೊಮ್ಮೆ ಗರ್ಭ ಪ್ರತೀಕವಾದ ಕುಂಭದಲ್ಲಿ ಕಳುಹಿಸುವ ಪದ್ಧತಿ ಇದೆ. ಕುಬುಸದ ಕಣ, ಕುಂಕುಮ, ಭಂಡಾರಗಳಿಂದ ಸಿಂಗರಿಸಿದ ಕುಂಭವನ್ನು ಪುರುಷರು ಹೊರುತ್ತಾರೆ. ಕುಂಭ ಹೊತ್ತವನ ಮೈಮೇಲೆ ಅಮ್ಮ ಬರುತ್ತಾಳೆಂಬ ನಂಬಿಕೆಯಿದೆ. ಹೀಗೆ ಸಕಲ ಗೌರವಗಳಿಂದ ಗ್ರಾಮದ ಗಡಿಯಾಚೆ ಸಾಗಿಸುತ್ತಾರೆ. ಹೀಗೆ ಪ್ರತಿ ಗ್ರಾಮದವರಿಂದ ದಾಟಿಸಲ್ಪಟ್ಟ ಅಮ್ಮ, ಅಂತಿಮವಾಗಿ ಹಂಪಿ ರಸ್ತೆಯಲ್ಲಿರುವ ಗಾಳೆಮ್ಮನ ಗುಡಿ ಸೇರುತ್ತಾಳೆ. ಇಲ್ಲಿಂದ ಮುಂದೆ ಸಾಗುವಂತಿಲ್ಲ. ಏಕೆಂದರೆ ಗಾಳೆಮ್ಮನ ಗುಡಿ ಮಾರಿದೈವಗಳ ತವರೆಂದು ನಂಬುತ್ತಾರೆ. ಇಲ್ಲಿಂದ ಮುಂದೆ ದಾಟಿಸುವ ಕ್ರಿಯೆ ಇಂದಿಗೂ ನಡೆದಿಲ್ಲ. ಹಿಂದೆ ಬಯಲಲ್ಲಿ ಇರುತ್ತಿದ್ದ ದೈವಗಳು ಇಂದು ಗುಡಿ ಸೇರಿ ಪೂಜಿಸಲ್ಪಡುತ್ತಿವೆ.

ಜನಪದ ಸಂಸ್ಕೃತಿಯಲ್ಲಿ ಗಾಳಿ ದೈವವು ಗಾಳೆಮ್ಮನಾಗಿ, ರಕ್ಷಕ ದೈವಕ್ಕಿಂತ, ಶಿಕ್ಷಕ ದೈವವಾಗಿ ಹೆಚ್ಚು ಪ್ರಚಲಿತದಲ್ಲಿದೆ.

ಸಂಡೂರು ತಾಲೂಕಿನ ಬಂಡ್ರಿ, ಯಶವಂತನಗರ, ಧರ್ಮಾಪುರದ ಮಾರ್ಗವಾಗಿ ನಾರಿಹಳ್ಳದಲ್ಲಿ ಅಮ್ಮನನ್ನು ಕಳುಹಿಸುತ್ತಾರೆ. ಇಲ್ಲಿ ಗಂಡು, ಹೆಣ್ಣು ಜೋಡಿ ಮೂರ್ತಿಗಳಿದ್ದರೂ ಪೂಜೆಗೊಳ್ಳುವುದು ಹೆಣ್ಣುಮೂರ್ತಿ ಮಾತ್ರ. ರೋಗ ಪ್ರತೀಕವಾದ ಈ ಮೂರ್ತಿಗಳಿಗೆ ಚಕ್ರ ಜೋಡಿಸಿ ಎಳೆದೊಯ್ಯುತ್ತಾರೆ. ಇವು ಚರ ದೈವಗಳಾಗಿದ್ದು, ಆಚರಣೆಯ ಮೂಲಕ ಹಳ್ಳಿಯನ್ನು ಪರಿಶುದ್ಧಗೊಳಿಸಿ ಕೆಡುಕನ್ನು ಕೊಂಡೊಯ್ಯುತ್ತವೆಂಬ ನಂಬಿಕೆಯಿದೆ.

ಕಳಿವೆಮ್ಮನ ಆಚರಣೆ

ಹಗರಿಬೊಮ್ಮನಹಳ್ಳಿ ತಾಲೂಕು ಬಾಚಿಗೊಂಡನಹಳ್ಳಿಯಲ್ಲಿ 'ಕಳಿವೆಮ್ಮ'ನ ಆಚರಣೆಯಿದೆ. ಪ್ರತಿಯೊಬ್ಬರು ಮನೆಯನ್ನು ಸ್ವಚ್ಛಗೊಳಿಸಿ ಕುಂಬಾರರ ಮನೆಯಿಂದ ಕುಂಭ ತರುತ್ತಾರೆ. ನೀರು ತುಂಬಿದ ಕುಂಭವನ್ನು ಅಕ್ಕಿಯ ರಾಶಿಯ ಮೇಲಿಟ್ಟು 'ಕಳಿವೆಮ್ಮ'ನೆಂದು ಪ್ರತಿಷ್ಠಾಪಿಸುತ್ತಾರೆ. ಕಳಿವೆಮ್ಮನನ್ನು ಹಸಿರು ಬಳೆ, ಬೇವಿನ ಎಲೆಗಳಿಂದ ಶೃಂಗರಿಸುತ್ತಾರೆ. ರೋಗ ಪ್ರತೀಕವಾದ ಅಮ್ಮನಾಗಿರುವ ಕಾರಣ, ಪೂಜಿಸಿ, ಹೋಳಿಗೆ ಎಡೆ ನೀಡಿದ ತಕ್ಷಣ ಹೊರತರುತ್ತಾರೆ. ಗ್ರಾಮದವರೆಲ್ಲಾ ಒಟ್ಟಾಗಿ ಸೇರಿ 'ಉಧೋ ಉಧೋ' ಎನ್ನುತ್ತಾ ಊರಿಂದೂರಿಗೆ ಸಾಗಿಸುತ್ತಾರೆ. ಹೀಗೆ ಏಳು ಗ್ರಾಮ ದಾಟಿಸಿದರೆ ಅಮ್ಮ ಬರುವುದಿಲ್ಲವೆಂಬ ನಂಬಿಕೆಯಿದೆ. ಹೀಗೆ ಬಳ್ಳಾರಿ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ನಿರಂತರವಾಗಿ ನಡೆದ ಗಡಿ ದಾಟಿಸುವಿಕೆ, ಕಾಡಂಚಿನ ತೋಪು, ಕೆರೆ, ಹೊಳೆ, ಹಳ್ಳ ಸೇರುತ್ತಿರುವುದು ಕ್ಷೇತ್ರಕಾರ್ಯದಲ್ಲಿ ಕಂಡುಬಂದಿದೆ.

ಹೋಳಿಗೆಮ್ಮನ ಆಚರಣೆ

ಕೂಡ್ಲಿಗಿಯಲ್ಲಿ ಜುಲೈ ತಿಂಗಳಲ್ಲಿ ಹೋಳಿಗೆಮ್ಮನ ಆಚರಣೆ ನೆರವೇರುತ್ತದೆ. ಅಂದು ಮಡಿಯಿಂದ ಸ್ತ್ರೀಯರು ಹೋಳಿಗೆ ಎಡೆಯನ್ನು ಊರಮ್ಮನ ಕಟ್ಟೆಗೆ ತರುತ್ತಾರೆ. ಎಡೆ ಅರ್ಪಿಸಿ ಮಾತನಾಡದೇ ಮೌನವಾಗಿ ಹಿಂದಿರುಗಿ ನೋಡದೆ ಹೊರಡುತ್ತಾರೆ. ಹಿಂದಿರುಗಿ ನೋಡಿದರೆ, ಮಾತನಾಡಿದರೆ ಮಾರಿರೂಪದ ಅಮ್ಮ ತಮ್ಮ ಮನೆಗೆ ಬರುವಳೆಂಬ ಭಯ ಈ ರೀತಿಯ ಆಚರಣೆಗೆ ಕಾರಣವಾಗಿದೆ. ಅಂದು ಊಟಕ್ಕೆ ಯಾರನ್ನೂ ಕರೆಯುವಂತಿಲ್ಲ. ಯಾರಿಗೂ ಊಟ ಕೊಡುವಂತಿಲ್ಲ. ಉಗ್ರ ಸಾಂಕ್ರಾಮಿಕ ರೋಗಗಳು ಆಹಾರದ ಮೂಲಕ ಮನೆಯಿಂದ ಮನೆಗೆ ಹರಡುವುದನ್ನು ತಡೆಗಟ್ಟುವ ಸರಳ ವಿಧಾನವಿದು. ಹಸಿದ ಬಾಲಕರು, ಪ್ರಾಣಿಗಳು ಎಡೆಹೋಳಿಗೆ ತಿಂದರೆ ಅಮ್ಮ ಸಂತೃಪ್ತಗೊಳ್ಳುವಳೆಂದು ನಂಬುತ್ತಾರೆ. ಇದೇ ರೀತಿ ಸಂಡೂರಿನಲ್ಲಿಯೂ ಅಮ್ಮನಿಗೆ ಹೋಳಿಗೆ ಎಡೆ ನೀಡಿ, ಮಡಿಲಕ್ಕಿ ತುಂಬುತ್ತಾರೆ.

ಕಸ, ಕಡ್ಡಿ, ಹರಿದು ಹಾಳಾದ ಗೃಹೋಪಯೋಗಿ ವಸ್ತುಗಳ ಕಸದ ರಾಶಿಯೇ ಅಮ್ಮನಾಗಿದ್ದಾಳೆ. ಊರಿಂದೂರಿಗೆ ಸಾಗಿಸುವಾಗ, ಆಯಾ ಊರಿನ ದರಿದ್ರವನ್ನು ಗುಡಿಸಿಕೊಂಡು ಹೋಗುತ್ತಾಳೆಂಬುದು ಜನರ ನಂಬಿಕೆ. ಊರಿನ ಕೊಳೆಯನ್ನು ಶುದ್ಧಗೊಳಿಸುವ ತಂತ್ರಗಾರಿಕೆ ಆಚರಣೆಯದ್ದಾಗಿದೆ. ಊರೊಟ್ಟಿನ ಇಂಥ ಆಚರಣೆಯ ಮೂಲ ಉದ್ದೇಶ ಊರಿನ ರಕ್ಷಣೆ. ಇಲ್ಲಿ ಅಮ್ಮ ರೋಗ ನಿವಾರಿಸುವ ವೈದ್ಯದೇವತೆ, ಮಳೆ ಬೆಳೆ ನೀಡುವ ಕೃಷಿದೇವತೆ, ಊರು ಶುದ್ಧಿಗೊಳಿಸುವ ಶುಚಿದೇವತೆಯಾಗಿರುವಳು. ಕಸದ ಜೊತೆ ಕ್ರಿಮಿ,

ಕೀಟಾದಿಗಳು ಜಲ ಮೂಲ ಸೇರುತ್ತವೆ. ಅಮ್ಮ ರೋಗ ತರುವ ಹಾಗೂ ನಿಯಂತ್ರಿಸುವ ದೈವ. ಸಾಮಾನ್ಯವಾಗಿ ಅಮ್ಮನ ವಾಸಸ್ಥಾನ ಊರ ಹೊರವಲಯವಾಗಿರುತ್ತದೆ. ಕಲ್ಲುಕಂಬಗಳನ್ನು ಎದುರುಬದುರಾಗಿ ನಿಲ್ಲಿಸಿ, ಅವೆರಡರ ಮೇಲೆ ಅಗಲವಾದ ಚಪ್ಪಡಿ ಕಲ್ಲು ಮಲಗಿಸಿ, ಅದರೊಳಗೊಂದು ಸಣ್ಣ ಗುಂಡಕಲ್ಲು ಇಟ್ಟು ಅಮ್ಮನೆಂದು ಪೂಜಿಸುತ್ತಾರೆ. ಅಮ್ಮನ ವಾಸಸ್ಥಾನ ಇಂಥದೆಂದು ನಿರ್ದಿಷ್ಟವಾಗಿ ಹೇಳುವಂತಿಲ್ಲ. ಗಾಳಿದೈವವಾದ ಈಕೆಯು ದುಷ್ಟಶಕ್ತಿಗಳನ್ನು ಊರು ಪ್ರವೇಶಿಸದಂತೆ ನಿರ್ಬಂಧಿಸುತ್ತಾಳೆಂಬ ಕಾರಣದಿಂದ ಊರ ಹೊರವಲಯ ಈಕೆಯ ನೆಲೆಯಾಗಿರಬೇಕು.

ಪಶುಪಾಲಕ, ವಲಸೆಗಾರ ಬೇಡ ಸಮುದಾಯಗಳಿರುವ ಗ್ರಾಮಗಳಲ್ಲಿ ಅಮ್ಮನ ಆಚರಣೆ ಹೆಚ್ಚಾಗಿ ಕಂಡುಬರುತ್ತದೆ. ಇದು ಅವರ ಅಲೆಮಾರಿ ಸಂಸ್ಕೃತಿಯ ಸೂಚಕವಾಗಿದೆ. ಗಡಿಯಲ್ಲಿ ವಸ್ತುಗಳನ್ನು ಬಿಟ್ಟು ಬರುವ ಪ್ರಕ್ರಿಯೆಯು, ಹಿಂದಿರುಗದಂತೆ ಮುಂದೆ ಹೋಗುತ್ತಲೇ ಇರುವ ವಲಸೆಗಾರಿಕೆಯ ಲಕ್ಷಣವಾಗಿದೆ.

ಊರೂರು ಸುತ್ತುವ ಮಾರಿ (ಊರು ಮಾರಿ)

ಬುಡಕಟ್ಟು, ಅಲೆಮಾರಿ ಜನಾಂಗವೊಂದು ಚಿಕ್ಕ ಪೆಟ್ಟಿಗೆಯಾಕಾರದ ಗುಡಿಯಲ್ಲಿ ಅಮ್ಮನನ್ನು ಇಟ್ಟುಕೊಂಡು ಮನೆಮನೆಗೆ ಬರುತ್ತಾರೆ. ಉರಿಮೆ, ತಮಟೆ, ವಾದ್ಯಗಳೊಂದಿಗೆ ಕುಟುಂಬ ಸಮೇತ ಊರೂರು ಅಲೆಯುತ್ತಾರೆ. ಊರುಮಾರಿಯೆಂದು ಕರೆಯಲ್ಪಡುವ ಈ ದೈವಕ್ಕೆ ಹಣ, ಧಾನ್ಯ ನೀಡಿ ಪೂಜಿಸುತ್ತಾರೆ. ತಮ್ಮ ಮಕ್ಕಳಿಗೆ ಸಿಡುಬು, ದಡಾರ ಆಗದಂತೆ ಅಮ್ಮ ಕಾಯುವಳೆಂದು ನಂಬುತ್ತಾರೆ. ಹಲವೊಮ್ಮೆ ಇವರಿಂದ ಪಡೆದ ಪ್ರಸಾದ ರೂಪದ ಬೇವಿನಸೊಪ್ಪು, ಅರಿಶಿಣವನ್ನು ಮಕ್ಕಳ ಮೈಗೆ ಲೇಪಿಸಿದಾಗ ರೋಗವಾಸಿ ಯಾಗಿರುವುದುಂಟು. ಊರೂರು ಅಲೆಯುವ ಪೆಟ್ಟಿಗೆ ದೇವರಾಗಿರುವುದರಿಂದ, ಊರುಮಾರಿ ಎಂದು ಕರೆಯಲ್ಪಡುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ಕಂಡುಬರುವ ಇಂಥ ಅಲೆಮಾರಿ ಜನಾಂಗಗಳು ಅಮ್ಮನ ಹೆಸರಲ್ಲಿ ಪಡೆಯುವ ದವಸ, ಹಣ ಮತ್ತು ಹಳೆಬಟ್ಟೆಯಿಂದ ಜೀವನ ಸಾಗಿಸುತ್ತಾರೆ.

ತೊಟ್ಟಮ್ಮ, ದೊಡ್ಡಮ್ಮ

ಮೈಮೇಲೆ ಚಿಕ್ಕ ಚಿಕ್ಕ ಗುಳ್ಳೆಗಳಾದರೆ ತೊಟ್ಟಮ್ಮನೆಂದೂ, ದೊಡ್ಡ ದೊಡ್ಡ ಗುಳ್ಳೆಗಳಾದರೆ ದೊಡ್ಡಮ್ಮನೆಂದು ಗುರುತಿಸುತ್ತಾರೆ. ಈ ರೀತಿಯ ಅಮ್ಮ ಕಾಣಿಸಿಕೊಂಡಾಗ ಹೊರಗೆ ಬಿಡದೆ, ಮನೆಯಲ್ಲಿ ಪ್ರತ್ಯೇಕವಾಗಿಸುತ್ತಾರೆ. ನೀರು ತುಂಬಿದ ಗುಳ್ಳೆಗಳೇ ಅಮ್ಮನ ಲಕ್ಷಣ. ಬಿಳಿ ಒದ್ದೆ ಬಟ್ಟೆಯನ್ನು ದೇಹದ ಮೇಲೆ ಹೊದಿಸಿ, ಬೇವಿನ ಎಲೆ, ಕುಡುಗೋಲನ್ನು ಅಕ್ಕಪಕ್ಕ ಇಡುತ್ತಾರೆ. ಒದ್ದೆಯಾದ ಬಿಳಿ ಬಟ್ಟೆ ಸ್ವಚ್ಛತೆ ಹಾಗೂ ತಂಪುಕಾರಕ ಗುಣವುಳ್ಳದ್ದು. ಖನಿಜಗಳಿಗೂ ದೇಹದ ಅನಾರೋಗ್ಯವನ್ನು ಗುಣಪಡಿಸುವ ಶಕ್ತಿಯಿದೆ. ಕುಡುಗೋಲಿನ ಸ್ಪರ್ಶದಿಂದ ನಿರ್ದಿಷ್ಟ ಪ್ರಮಾಣದ ಖನಿಜಾಂಶ ದೇಹಕ್ಕೆ ಸಿಗಲೆಂಬ ಜಾಣ್ಮೆ ಜನಪದರದ್ದಾಗಿದೆ. ಅಮ್ಮ ಬಂದವರಿಗೆ ಬೇವಿನಸೊಪ್ಪು, ಎಣ್ಣೆ ಬೆರೆಸಿದ ಉಗುರು ಬೆಚ್ಚಗಿನ ನೀರಿನಿಂದ ದಿನಕ್ಕೆರಡು ಬಾರಿ ಸ್ನಾನ ಮಾಡಿಸಲಾಗುತ್ತದೆ. ಎಣ್ಣೆ ಗಾಯದ ಬಿಗಿತ ಕಡಿಮೆ ಮಾಡಿದರೆ, ಬೇವು ಗಾಯ ಮಾಯಿಸುವಿಕೆಗೆ ಸಹಾಯಕವಾದುದು. ಬೇವು ಶಕ್ತಿಯ ಸಂಕೇತವಾಗಿ ಅಮ್ಮನ ಆಚರಣೆಗಳಲ್ಲಿ ಬಳಸಲ್ಪಡುತ್ತಿದೆ. ಈ ಹಿನ್ನೆಲೆಯಲ್ಲಿ ಹಲವೊಮ್ಮೆ ಬೇವಿನ ತಪ್ಪಲನ್ನು ಹಾಸಿಗೆಯ ಸುತ್ತ ಹಾಕುವುದುಂಟು. ದೈವವೇ ಬರಿಸಿದ

ರೋಗವಾದ್ದರಿಂದ ವೈದ್ಯರ ಹತ್ತಿರ ತೋರಿಸುವಂತಿಲ್ಲ. ಕುಟುಂಬದ ಹಿರಿಯರೇ ಇಂದಿಗೂ ಜನಪದ ವೈದ್ಯರು, ಆಚರಣೆಯ ಮಾರ್ಗದರ್ಶಕರು ಆಗಿದ್ದಾರೆ. ಪ್ರತಿದಿನ ಸಂಜೆ ಹನ್ನೊಂದು ಬಗೆಯ ಧಾನ್ಯಗಳನ್ನು ಸೇರಿಸಿ ಗುಗ್ಗರಿ ಮಾಡಿ ಬಾಗಿಲ ಹೊರಭಾಗದಲ್ಲಿ ನಿಂತು ಮಕ್ಕಳಿಗೆ ಹಂಚುತ್ತಾರೆ. ಅಮ್ಮ ಬಂದ ಮಕ್ಕಳ ಹತ್ತಿರ ಬೇರೆ ಮಕ್ಕಳು ಸುಳಿಯುವಂತಿಲ್ಲ. ಗುಗ್ಗರಿ ಹಂಚುವಿಕೆಯಿಂದ ಮಕ್ಕಳಲ್ಲಿಯ ಅಪೌಷ್ಟಿಕತೆ ನಿವಾರಣೆಯಾಗಿ, ನಿರೋಧಕ ಶಕ್ತಿ ಹೆಚ್ಚುತ್ತದೆ. ಹೀಗೆ ಸತತವಾಗಿ ಅಮ್ಮ ಹನ್ನೊಂದು ದಿನ ಆಚರಿಸಲ್ಪಡುತ್ತಾಳೆ. ಅಂತಿಮವಾಗಿ ಬೆಳ್ಳುಳ್ಳಿ, ಈರುಳ್ಳಿ, ಉಪ್ಪು ನೀಡಿ, ಅಮ್ಮನ ಉಗ್ರತೆಯನ್ನು ತಣ್ಣಗಾಗಿಸುತ್ತಾರೆ. ಇವು ಔಷಧಿಯ ಗುಣವುಳ್ಳವಾಗಿವೆ.

ಹಗರಿಬೊಮ್ಮನಹಳ್ಳಿ ಭಾಗಗಳಲ್ಲಿ ಮಣ್ಣಿನ ಕುಡಿಕೆಯಲ್ಲಿ ಹರಕೆಯ ವಸ್ತುಗಳನ್ನಿಟ್ಟು 'ನಮ್ಮ ಮಕ್ಕಳಿಗೆ ಬೇಗ ಗುಣವಾಗಲಿ, ಮತ್ತೊಮ್ಮೆ ಎಡೆ ಹಾಕುತ್ತೀವಿ' ಎಂದು ಹರಕೆ ಹಾಕಿ, ಅಮ್ಮನನ್ನು ಗಡಿ ದಾಟಿಸುತ್ತಾರೆ. ಇತ್ತೀಚೆಗೆ ಕೆಲವೊಂದು ರೋಗಗಳಿಗೆ ಅಮ್ಮ ಎಂಬ 'ವಿಶೇಷಣ'ವನ್ನು[೫೧] ಸೇರಿಸಿ, ಶಿಕ್ಷಿಸುವ ದೈವಗಳೆಂದು ಕರೆಯುವುದುಂಟು.

ಸಿತ್ಲಾಪೂಜೆ : ಲಂಬಾಣಿ ಸಮುದಾಯದಲ್ಲಿ ಜೂನ್ ತಿಂಗಳಲ್ಲಿ ಸಿತ್ಲಾಪೂಜೆ ಪ್ರಚಲಿತದಲ್ಲಿದೆ. ಇದು ಅಮ್ಮನ ಆಚರಣೆಯನ್ನು ಹೋಲುವಂತಿದೆ. ತಾಂಡದ ಹಿರಿಯರು ದಿನ ನಿರ್ಧರಿಸಿ ಊರ ಹೊರವಲಯದಲ್ಲಿ ತಾತ್ಕಾಲಿಕವಾದ ಹಸಿರು ಸೊಪ್ಪಿನ ಚಪ್ಪರ ಹಾಕುತ್ತಾರೆ. ಹಸಿರು ಸಸ್ಯಗಳಿಗೆ ರೋಗ ಉಲ್ಬಣವಾಗದಂತೆ ತಡೆಯುವ ಶಕ್ತಿ ಇದೆ. ಚಪ್ಪರದಡಿಯಲ್ಲಿ ಪ್ರತಿಷ್ಠಾಪಿಸಿದ ಐದು ಸುಣ್ಣಲೇಪಿತ ಸಣ್ಣ ಕಲ್ಲುಗಳು ಅಮ್ಮನನ್ನು ಪ್ರತಿನಿಧಿಸುತ್ತವೆ. ತಾಂಡದ ಮಹಿಳೆಯರು ನವಧಾನ್ಯಗಳ ಗುಗ್ಗರಿಯನ್ನು ಕಂಚಿನ ತಟ್ಟೆಯಲ್ಲಿ ಹಾಕಿಕೊಂಡು, ತಂಬಿಗೆಯಲ್ಲಿ ನೀರು ತುಂಬಿಕೊಂಡು ಆಗಮಿಸುತ್ತಾರೆ. ರೋಗ ನಿರೋಧಕ ಗುಣವುಳ್ಳ ಕಂಚು ಲಂಬಾಣಿಗರ ಆಚರಣೆಯಲ್ಲಿ ಪ್ರಮುಖ ಸ್ಥಾನ ಪಡೆದಿದೆ. ಕಂಚಿನ ತಟ್ಟೆಯಲ್ಲಿಯ ಗುಗ್ಗರಿಯನ್ನು ಪ್ರಸಾದವೆಂದು ಮಕ್ಕಳಿಗೆ ತಿನ್ನಿಸುತ್ತಾರೆ. "ಕಂಚಿನ ಲೋಹಕ್ಕೆ ರೋಗಗಳನ್ನು ಗುಣಪಡಿಸುವ ಮತ್ತು ಪೀಡೆ, ಪಿಶಾಚಿ, ಗ್ರಹ ಕಾಟ ತಡೆಗಟ್ಟುವ ಗುಣವಿದೆ. ಮೈರೋಗ, ಮನೋರೋಗಗಳಿಗೂ ಉತ್ತಮವಾದುದಾಗಿದೆ".[೫೨] ಇಲ್ಲಿ ಪೂಜಿಸಿದ ವಸ್ತುಗಳಲ್ಲಿ ಗಾಳಿ ರೂಪದ ಅಮ್ಮನಿರುವಳೆಂಬ ಕಾರಣ ಮುಟ್ಟುವಂತಿಲ್ಲ. ಹಾಡುವುದಕ್ಕೆ, ಜಾಗರಣೆ ಮಾಡುವುದಕ್ಕೆ ನಿಷೇಧವಿದೆ. ಪೂಜಿಸಿದ ನಂತರವೂ ರೋಗಲಕ್ಷಣಗಳು ಪುನಃ ಕಾಣಿಸಿಕೊಂಡರೆ, ಮತ್ತೊಮ್ಮೆ ಆಚರಿಸುವುದಾಗಿ ಹರಕೆ ಕಟ್ಟಿಕೊಳ್ಳುತ್ತಾರೆ. ಊರೊಟ್ಟಿನ ಈ ಆಚರಣೆಯ ಪುನರಾವರ್ತನೆಯಿಂದ ಊರು ಸ್ವಚ್ಛಗೊಂಡು ರೋಗಗಳು ಸಂಪೂರ್ಣ ನಾಶಗೊಳ್ಳುತ್ತವೆ.

ಈ ರೀತಿಯ ಮಾತೃಮೂಲ ನೆಲೆಯ ಜನಪದರ ಆಚರಣೆಗಳು, ವಿಧಿ, ವಿಧಾನಗಳು, ಬದುಕಿನ ಏರುಪೇರುಗಳು, ಚಿಂತನಾಕ್ರಮಗಳು, ದಿನನಿತ್ಯದ ಬದುಕಿನ ನೆಲೆಯನ್ನು ಗಟ್ಟಿಗೊಳಿಸಿ, ಜೀವನೋತ್ಸಾಹ ಮೂಡಿಸುತ್ತವೆ.

ಪ್ರಕೃತಿ ಮತ್ತು ಮಾನವನ ನಡುವೆ ಬೇರ್ಪಡಿಸಲಾರದಂಥ ನಿಕಟ ಸಂಬಂಧವಿದೆ. ಹಾಗಾಗಿಯೇ ಸಾಹಿತ್ಯ ಪ್ರಕಾರಗಳಲ್ಲಿ ಮನುಷ್ಯ - ಪ್ರಕೃತಿ ಸಂಬಂಧವನ್ನು, ತಾಯಿ ಮತ್ತು ಮಗುವಿನ ಸಂಬಂಧಕ್ಕೆ ಹೋಲಿಸಲಾಗಿದೆ.

ಪ್ರಕೃತಿಯ ಆಧಾರವಿಲ್ಲದೆ, ನೆರವಿಲ್ಲದೆ, ದಯೆಯಿಲ್ಲದೆ ಮನುಷ್ಯನು ಮಾತ್ರವಲ್ಲ ಯಾವುದೇ ಜೀವ ಜಂತುವಾಗಲೀ ಬದುಕಲು ಅಸಾಧ್ಯ. ಪ್ರಕೃತಿಯ ಅತ್ಯಮೂಲ್ಯ ಕೊಡುಗೆಗಳಾದ ನೆಲ, ಜಲ, ಅಗ್ನಿ, ಗಾಳಿ ಇವೆಲ್ಲವೂ ಜಗತ್ತಿನ ಪ್ರತಿಯೊಂದು ಜೀವಿಗೂ ಜೀವಧಾತುಗಳು. ಅವುಗಳನ್ನು ಹೊರತುಪಡಿಸಿದರೆ ಅಸ್ತಿತ್ವವೇ ಇಲ್ಲದಂತಾಗುವುದು. ಈ ಸತ್ಯವನ್ನು ಬಹು ಪುರಾತನ ಕಾಲದಿಂದಲೂ ಮಾನವ ಅರಿತಿದ್ದಾನೆ. ಈ ಅರಿವೇ ಮಾನವನನ್ನು ಇಂದಿನ ತನಕವೂ ಸಾಗಿ ಬರಲು ಸಹಾಯಕವಾಗಿದೆ ಎಂದರೆ ತಪ್ಪಾಗಲಾರದು. ನೆಲ, ಜಲ, ಅಗ್ನಿ ಮತ್ತು ವಾಯುಗಳಿಗೆ ಸಂಬಂಧಿಸಿದ ಜನಪದ ಆಚರಣೆ - ಸಂಪ್ರದಾಯಗಳೆಲ್ಲವೂ ತನ್ನಿಂದ ತಾನೇ ಉದಯಿಸಿದವುಗಳಲ್ಲ. ಅವುಗಳ ಹಿಂದೆ ಮಾನವನ ಅನುಭವಗಳಿವೆ, ಸಂಕಷ್ಟಗಳಿವೆ, ಸುಖ-ದುಃಖಗಳಿವೆ. ಆಯಾ ಕಾಲಮಾನಕ್ಕೆ ತಕ್ಕಂತೆ ಬದಲಾಗುತ್ತಾ ಬಂದಿರುವ ಆಚರಣೆಗಳು-ಸಂಪ್ರದಾಯಗಳು ಮತ್ತೊಂದು ಕಾಲಮಾನಕ್ಕೆ ಅಪ್ರಸ್ತುತವೆನಿಸಬಹುದು ಅಥವಾ ಮೌಢ್ಯವೆನಿಸಬಹುದು. ಆದರೆ ಅವುಗಳ ಸಂಖ್ಯೆ ಅತ್ಯಂತ ಕಡಿಮೆ ಎಂದೇ ಹೇಳಬೇಕು. ಆಚರಣೆಗಳ ಒಟ್ಟು ಫಲಿತಾಂಶಗಳನ್ನು ಗಮನಿಸಿದರೆ ಅವು ಒಂದಲ್ಲ ಒಂದು ರೀತಿಯಲ್ಲಿ ಮಾನವನ ಬೆಳವಣಿಗೆಗೆ ಮತ್ತು ಪ್ರಕೃತಿಯ ಉಳಿಕೆಗೆ ಪೂರಕವಾಗಿವೆ.

ಟಿಪ್ಪಣಿಗಳು

೧. ಹರಿಲಾಲ ಪವಾರ್, ೨೦೦೯, ಜಾನಪದ ಆಯಾಮ, ಪು. ೪೬.

೨. ಕೆ.ವೈ. ನಾರಾಯಣಸ್ವಾಮಿ, ೨೦೦೦, ನೀರದೀವಿಗೆ, ಪು. ೨೧೨.

೩. ಹಿ.ಚಿ. ಬೋರಲಿಂಗಯ್ಯ, ೨೦೦೦, ಬುಡಕಟ್ಟು ದೈವರಾಧನೆ, ಪು. ೧೨.

೪. ಕುಂಡಂತಾಯ .ಕೆ.ಎಲ್., ೨೦೦೩, ನಂಬಿಕೆ ನಡಾವಳಿಗಳು, ಪು. ೪೯.

೫. ಕನ್ನಡ ವಿಷಯ ವಿಶ್ವಕೋಶ, ೨೦೦೬, ಪು. ೪೨೮.

೬. ಹುಳ್ಳಿ ಹೂರಣ;- ಜನಪದರ ಆಡುಮಾತಿನಲ್ಲಿ ದ್ವಿದಳ ಧಾನ್ಯವಾದ ಹುರುಳಿ ಉಳ್ಳಿಯಾಗಿರುತ್ತದೆ. ಹುಳ್ಳಿಯನ್ನು ಬೇಯಿಸಿ, ಬೆಲ್ಲದೊಂದಿಗೆ ಒರಳಲ್ಲಿ ರುಬ್ಬಿ ತಯಾರಿಸಿದ ಸಿಹಿ ಪದಾರ್ಥ.

೭. ಮಿಳ್ಳಿ ಕಣಕ:- ಹುರುಳಿಯ ಮೇಲುಭಾಗದ ಸಿಪ್ಪೆ ಗಟ್ಟಿಯಾಗಿದ್ದೂ, ಎಷ್ಟು ಬೇಯಿಸಿದರೂ ಮೆತ್ತಗಾಗದೆ ಹಾಗೆ ಉಳಿದಿರುತ್ತದೆ. ಅದನ್ನು ವಿನೋದಕ್ಕಾಗಿ ಮಿಳ್ಳಿ ಕಣಕ ಎನ್ನುತ್ತಾರೆ.

೮. ಕೆ.ವೈ. ನಾರಾಯಣಸ್ವಾಮಿ, ೨೦೦೦, ನೀರದೀವಿಗೆ, ಪು. ೨೦.

೯. ಅದೇ. ಪು. ೪೨.

೧೦. ಎಸ್.ಎಸ್. ಹಿರೇಮಠ, ೨೦೧೦, ಯೋಗದರ್ಶನ, ಪು. ೭೧.

೧೧. ಕರಿಗಂಬಳಿ ಗುರುಸಿದ್ಧರಿಗೆ ತೋರಿಸುವ ಪೂಜ್ಯ ಭಾವನೆಯನ್ನು ಆಯಗಾರರಿಗೂ ತೋರಿಸುತ್ತಾರೆ. ಆಯಗಾರರನ್ನು ಕರಿಗಂಬಳಿ ಗುರುಸಿದ್ಧರ ಪ್ರತಿನಿಧಿಗಳೆಂದು ಪರಿಭಾವಿಸಿದ್ದಾರೆ.

೧೨. ಡಾ. ಹೆಬ್ಬಾಲೆ ಕೆ. ನಾಗೇಶ್, ೨೦೦೭, ಜಾನಪದ ಕರ್ನಾಟಕ, ಸಂಪುಟ ೬, ಸಂಚಿಕೆ ೨, ಪು. ೫.

೧೩. ಎಂ.ಜಿ. ಈಶ್ವರಪ್ಪ, ೧೯೯೯, ಜಾನಪದ ಇಬ್ಬನಿಗಳು , ಪು. ೫೯.

೧೪. ಕಿಲಾರಿ:- ದೇವರೆತ್ತುಗಳನ್ನು ಕಾಯಲು ದೀಕ್ಷೆ ಪಡೆದವನ ಹೆಸರನ್ನು ಸೂಚಿಸುತ್ತದೆ. ಆತ ಅರಣ್ಯದಲ್ಲಿ ದನಕರುಗಳ ಪಾಲಕನಾಗಿದ್ದು, ಆಗಾಗ್ಗೆ ಮಾತ್ರ ಸಂಸಾರ ವಾಸಿಸುವ ಹಟ್ಟಿಗೆ ಬರಬೇಕು. ಈತನಿಗೆ ಹಟ್ಟಿಯವರು ದವಸ ಧಾನ್ಯ ನೀಡುತ್ತಾರೆ. ಹೀಗೆ ದೇವರಿಗೆ ಬಿಟ್ಟ ಎತ್ತುಗಳನ್ನು ಕಾಯುವವರಿಗೆ ಕಿಲಾರಿಗಳೆಂದು ಕರೆಯುತ್ತಾರೆ.

೧೫. ಡಾ. ಕೃಷ್ಣಮೂರ್ತಿ ಹನೂರು, ೧೯೯೩, ಮ್ಯಾಸಬೇಡರ ಸಂಸ್ಕೃತಿ, ಪು. ೧೭.

೧೬. ಭಂಡಾರ:- ಅರಿಶಿಣ, ಕುಂಕುಮ, ವೀಳ್ಯದೊಂದಿಗೆ ಸ್ವಲ್ಪ ದಕ್ಷಿಣೆ ಕೊಟ್ಟು ಉತ್ಸವದಲ್ಲಿ ಪಾಲ್ಗೊಳ್ಳುವಂತೆ ಆಹ್ವಾನಿಸುವುದು.

೧೭. ಆಪು:- ನೀರಿನಲ್ಲಿ ಬೆಳೆದ ಹಗುರಾದ ದಂಟಿನ ಸಸ್ಯ.

೧೮. ಎಸ್.ಕೆ. ರಾಮಚಂದ್ರರಾವ್, ೧೯೮೦, ಮೂರ್ತಿಶಿಲ್ಪ ಹಿನ್ನೆಲೆ, ಪು. ೨೨೮.

೧೯. ಸ್ಥಿರ ಮುತ್ತೈದೆ:- ಅಂಬಿಗರ ಮನೆಯ ಮಹಿಳೆಯಾಗಿದ್ದು, ಉತ್ಸವ ಮುಗಿಯುವವರೆಗೂ ಸಾಕ್ಷಾತ್ ಗಂಗಾಂಬಿಕೆಯೆಂದು ಪೂಜಿಸಲ್ಪಡುವಳು.

೨೦. ಸೂರು ಖರ್ಜಿಕಾಯಿ:- ಹಾಲು, ತುಪ್ಪದಲ್ಲಿ ಗೋಧಿ ಹಿಟ್ಟು ಕಲಿಸಿ ಬೆಲ್ಲದ ಪುಡಿ ತುಂಬಿ, ತುಪ್ಪದಲ್ಲಿ ಕರಿದ ಖರ್ಜಿಕಾಯಿ, ಅಂಬಿಗರ ಮನೆಯಲ್ಲಿ ಮಾತ್ರ ಗಂಗಮ್ಮನಿಗಾಗಿ ತಯಾರಿಸಿದ ವಿಶೇಷ ಎಡೆಯಾಗಿದೆ.

೨೧. ಗಂಡಾರತಿ:- ಗೋಧಿಗೆ ನೀರು ಚುಮುಕಿಸಿ, ನೆರಳಲ್ಲಿ ಒಣಗಿಸಿ, ಸ್ವಲ್ಪ ಹಸಿ ಇರುವಾಗಲೇ, ಬೀಸುವ ಕಲ್ಲಿನಿಂದ ಬಟ್ಟಲಿನಾಕಾರ ಮಾಡಿ ಕಂಚಿನ ತಟ್ಟೆಯಲ್ಲಿಟ್ಟು, ಅದರಲ್ಲಿ ಎಣ್ಣೆ, ಬತ್ತಿ ಹಾಕಿ ದೀಪ ಉರಿಸುತ್ತಾರೆ.

೨೨. ಡಾ. ಕಡ್ಲಬಾಳ ಪನ್ನಂಗಧರ, ೨೦೧೧, ಹಂಪ ಸಾಗರದ ಗಂಗಾಂಬಿಕೆ, ಪು. ೮.

೨೩. ಕೆ.ವೈ. ನಾರಾಯಣಸ್ವಾಮಿ, ೨೦೦೦, ನೀರದೀವಿಗೆ, ಪು. ೭೮.

೨೪. ಎಂ.ಎಸ್. ಸುಂಕಾಪುರ, ೧೯೭೬, ಜೀವನ ಜೋಕಾಲಿ, ಹೋಳಿಹಾಡುಗಳು, ಪು. ೮.

೨೫. ಎಸ್.ಎಸ್. ಹಿರೇಮಠ, ೧೯೯೨, ಕರ್ನಾಟಕ ಸಂಸ್ಕೃತಿ ಪರಂಪರೆ, ಭಾಗ-೧ ಹಬ್ಬಗಳು, ಪು. ೧೪೦.

೨೬. ಡಾ. ರಂಗಾರೆಡ್ಡಿ ಕೋಡಿರಾಂಪುರ, ೨೦೧೦, ಜನಪದ ಸಂಸ್ಕೃತಿ, ಪು. ೧೭.

೨೭. ನಗಾರಿ:- ಒಂದು ಬಗೆಯ ದೊಡ್ಡ ಚರ್ಮ ವಾದ್ಯ.

೨೮. ಎಸ್.ಎಸ್. ಹಿರೇಮಠ, ೧೯೯೩, ಕರ್ನಾಟಕ ಸಂಸ್ಕೃತಿ ಪರಂಪರೆ ಭಾಗ-೨, ಜಾತ್ರೆಗಳು, ಪು. ೧೩೬.

೨೯. ವಸ್ತುರೂಪದ ಬಾಗಿನ:- ಸೀರೆ, ಕುಪ್ಪಸ, ಬಳೆ, ಬೆಂಡೋಲೆ, ಅರಿಶಿಣ, ಕುಂಕುಮ, ಕಾಡಿಗೆ, ಕನ್ನಡಿ, ಬಾಚಣಿಕೆ, ಇವನ್ನು ಮೊರದಲ್ಲಿಟ್ಟು ಮುತ್ತೈದೆಯರಿಗೆ ನೀಡುವುದು.

೩೦. ಡಾ. ಸ.ಚಿ. ರಮೇಶ್, ೨೦೦೪, ಜಾನಪದ ಕರ್ನಾಟಕ, ಸಂಪುಟ ೩, ಸಂಚಿಕೆ ೧, ಪು. ೪೪.

೩೧. ಡಾ. ಬಿ. ಶಿವರಾಮ ಶೆಟ್ಟಿ, ೨೦೦೦, ಸಸ್ಯ ಜಾನಪದ, ಪು. ೩೧.

೩೨. ಅದೇ. ಪು. ೩೨.

೩೩. ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೬, ಚಿನ್ನಗರಿ ಸಿರಿ, ಪು. ೧೬೭.

೩೪. ಅರವಿಂದ ಮಾಲಗತ್ತಿ (ಸಂ), ೨೦೦೬, ಜಾನಪದ ವಿಶ್ವಕೋಶ, ಪು. ೬೮೦.

೩೫. ಕಪ್ಪು:- ಒಣಗಿದ ಬಾಳೆ ಎಲೆ, ಬೂದಿ, ಬೇವಿನ ಎಲೆಯ ಜೊತೆ ಜೋಕುಮಾರನ ರೋಮಗಳೆಂದು, ಕೂದಲನ್ನು ಸೇರಿಸಿ ತಯಾರಿಸಿರುತ್ತಾರೆ.

೩೬. ಮಳೆಯ ಏಳು ನಕ್ಷತ್ರಗಳು:- ಪೂರ್ವಾಷಾಢ, ಜೇಷ್ಠ, ಮೂಲಾ, ಉತ್ತರಾಷಾಢ, ಶ್ರಾವಣ, ಭಾದ್ರಪದ, ಉತ್ತರಭಾದ್ರ.

೩೭. ಕೆ.ವೈ. ನಾರಾಯಣಸ್ವಾಮಿ, ೨೦೦೦, ನೀರದೀವಿಗೆ, ಪುಟ ೭೮.

೩೮. ಕೊಂತೆಮ್ಮ ಗುಡಿದುಂಬುವಳು: ಗುಡಿಗಳಲ್ಲಿ, ಮನೆಯ ಜಗುಲಿಗಳಲ್ಲಿ ಗೌರಿಯನ್ನು ಪ್ರತಿಷ್ಠಾಪಿಸುತ್ತಾರೆ. ಆ ದಿನವನ್ನು ಕೊಂತೆಮ್ಮ ಗುಡಿದುಂಬುವ ದಿನವೆಂದು ಕರೆಯುತ್ತಾರೆ. ಗೌರಿ ಹುಡುಗಿಯರು ಪೂಜಿಸಿ, ಆರತಿ ಬೆಳಗಿ ಸಂಭ್ರಮಿಸುತ್ತಾರೆ. ಈ ಸಮಯ ಗೌರಿ ಹುಡುಗಿಯರಿಗೆ ವಿಶೇಷವಾದುದಾಗಿದೆ.

೩೯. ಕ್ಯಾತನಹಳ್ಳಿ ರಾಮಣ್ಣ, ೧೯೮೫, ಕೊಂತಿ ಪೂಜೆ ಒಂದು ಅಧ್ಯಯನ, ಪು. ೩೩.

೪೦. ಡಾ. ಕೃಷ್ಣಮೂರ್ತಿ ಹನೂರು, ೧೯೯೩, ಮ್ಯಾಸಬೇಡರ ಸಂಸ್ಕೃತಿ, ಪು. ೪೭.

೪೧. ಅದೇ. ಪು. ೯೩.

೪೨. ನರೇಂದ್ರ ನಾಯಕ್, ೧೯೯೨, ಪವಾಡಗಳ ರಹಸ್ಯ ಬಯಲು, ಪು. ೨೭.

೪೩. ಎಚ್.ಎಲ್. ನಾಗೇಗೌಡ (ಸಂ), ಕನ್ನಡ ಜಾನಪದ ಕೋಶ, ಪು. ೭೦೩.

೪೪. ಮಹದೇವ ಶಂಕನಪುರ, ೨೦೦೧, ಮಾರಿ ಹಬ್ಬಗಳು, ಪು. ೧೩೯.

೪೫. ವೀರೇಶ ಬಡಿಗೇರ, ೨೦೦೯, ಸಂಸ್ಕೃತಿ ಸಂಕಥನ, ಪು. ೪೫.

೪೬. ಅನಂತ ಚಿನಿವಾರ, ೨೦೦೪, ಓ ಮನಸ್ಸೇ, ಸೈನ್ಸ್‌ಪೇಜ್, ಪು. ೨.

೪೭. ಡಾ. ದಸ್ತಗೀರ ಅಲೀಬಾಯಿ, ೧೯೬೭, ಜಾನಪದ ಗಂಗೋತ್ರಿ, ಪು. ೭೮.

೪೮. ಹೆಜ್ಜೆಮೇಳ ಅಥವಾ ಆಲಾಯಿ ಕುಣಿತ:- ವೃತ್ತಾಕಾರದ ಅಗಲವಾದ ಗುಂಡಿ ತೋಡಿ ಬೆಂಕಿ ಹಾಕಿ ಕೊಂಡ ನಿರ್ಮಿಸಿ ಅದರ ಸುತ್ತ ಹಾಡುತ್ತ ಕುಣಿಯುವ ನೃತ್ಯಕ್ಕೆ ಹೆಜ್ಜೆಮೇಳ ಅಥವಾ ಆಲಾಯಿ ಕುಣಿತ ಎಂಬ ಹೆಸರು ಬಳಕೆಯಲ್ಲಿದೆ.

೪೯. ಷಹಸೀನಾ ಬೇಗಂ, ೨೦೦೦, ಕರ್ನಾಟಕದ ಮುಸ್ಲಿಮ್ ಜಾನಪದ, ಪು. ೧೩೮.

೫೦. ಡಾ. ಸಿ.ಕೆ. ನಾವಲಗಿ, ೧೯೯೭, ಜಾನಪದ ಗಂಗೋತ್ರಿ, ಪು. ೩೨.

೫೧. ಪ್ಲೇಗಮ್ಮ, ಕಾಲರಮ್ಮ, ಸಿಡುಬಿನಮ್ಮ, ಸುಂಕಿನಮ್ಮ ಇತ್ಯಾದಿ ವಿಶ್ಲೇಷಣೆಗಳಿರುತ್ತವೆ.

೫೨. ಡಾ. ಜಿ.ಶಂ. ಪರಮಶಿವಯ್ಯ, ೧೯೯೩, ಜಾನಪದ ಗಂಗೋತ್ರಿ, ಪು. ೪೧.

❑❑❑

ಅಧ್ಯಾಯ : ನಾಲ್ಕು

ಜೀವ ಸಂಬಂಧಿ ಆಚರಣೆಗಳು

೪.೨.೧೦.೧. ಸಿಡಿಬಂಡಿ ರಥೋತ್ಸವ

೪.೨.೧೦.೨. ಪ್ರಾಣಿ ಬಲಿ

೪.೨.೧೦.೩. ಗಾವು ಜಿಗಿಯುವುದು

೪.೨.೧೦.೪. ಹುಲುಸು (ರಕ್ತ ಚರಗ) ಚೆಲ್ಲುವುದು

೪.೨.೧೦.೫. ದೂಳುಗಾಯಿ ಹೊಡೆಯುವುದು (ಸಿಡಿಗಾಯಿ ಹೊಡೆಯುವುದು)

೪.೨.೧೦.೬. ಬಾಳೆದಿಂಡಿನ ಹರಕೆ

೪.೨.೧೦.೭. ಹಾರುಗೋಳಿ ರಥೋತ್ಸವ

೪.೨.೧೦.೮. ಕಂಪ್ಲಿ ಕಾಳೆಮ್ಮನ ಹರಕೆ

೪.೨.೧೦.೯. ಮಹಾಸತಿ ವೀರನಾಗಮ್ಮ

ಅಧ್ಯಾಯ : ನಾಲ್ಕು

ಜೀವ ಸಂಬಂಧಿ ಆಚರಣೆಗಳು

ಪೀಠಿಕೆ

ಜೀವ ಜಗತ್ತು ಸಂಕೀರ್ಣಮಯವಾದುದು. ವೈವಿಧ್ಯತೆಯಿಂದ ಕೂಡಿದ ಸಮೃದ್ಧಿಯ ಜೀವಜಾಲ. ಒಂದಕ್ಕೊಂದು ಹೊಂದಿಕೊಂಡು ಒಂದರ ಮೇಲೊಂದು ಬದುಕುವುದು, ಒಂದನ್ನು ತಿಂದು ಇನ್ನೊಂದು ಜೀವಿಸುವುದು, ಒಂದರ ಮೇಲೆ ಇನ್ನೊಂದು ನಿಯಂತ್ರಣ ಸ್ಥಾಪಿಸಿಕೊಳ್ಳುವುದು ಜೀವಜಾಲದ ಲಕ್ಷಣವಾಗಿದೆ. ಸಸ್ಯಗಳು ಅನೇಕ ಬಗೆಯ ಕ್ರಿಮಿಕೀಟಗಳಿಗೆ ಆಸರೆಯಾಗಿವೆ. ಮರಗಿಡಗಳು ಶುದ್ಧೀಕರಿಸಿದ ಗಾಳಿಯನ್ನು ನೀಡುವುದರೊಂದಿಗೆ ಬಿಸಿಲಿನ ಶಾಖದಿಂದ ಪ್ರಾಣಿಗಳಿಗೆ ರಕ್ಷಣೆ ಒದಗಿಸುತ್ತವೆ. ಸಸ್ಯಗಳು ಭೂಮಿಯ ಮಣ್ಣನ್ನು ರಕ್ಷಿಸಿ, ಭೂಮಿಯ ಫಲವತ್ತತೆ ಹೆಚ್ಚಿಸುವಲ್ಲಿ ಮಾನವನಿಗೆ ಸಹಾಯಕ. ಹೀಗೆ ಒಂದಲ್ಲಾ ಒಂದು ರೀತಿಯಲ್ಲಿ ಆಧಾರವಾದದ್ದು. ಸಸ್ಯ ಪರಿಸರ, ಒಡನಾಡಿಯಾದದ್ದು ಪ್ರಾಣಿ ಪರಿಸರ. ಮಾನವನ ಬೌದ್ಧಿಕತೆ ಬೆಳೆದಂತೆ ತನ್ನ ಅಧ್ಯಯನ ಹಾಗೂ ಅನುಕೂಲಕ್ಕಾಗಿ ಜೀವಜಾಲವು ಪ್ರಾಣಿ ಜಗತ್ತು ಮತ್ತು ಸಸ್ಯ ಜಗತ್ತೆಂದು ವಿಂಗಡಣೆಗೊಂಡಿದೆ. ಹಿಂದಿನ ಮಾನವ ತನ್ನ ಸಂಬಂಧ ಕೇವಲ ಮಾನವ ಜಗತ್ತಿಗಷ್ಟೇ ಸೀಮಿತವೆಂದು ಭಾವಿಸಿದ್ದಿಲ್ಲ. ಏಕೆಂದರೆ ತನ್ನ ಸುತ್ತಲಿನ ಪರಿಸರವನ್ನೆಲ್ಲಾ ತನ್ನ ಬದುಕಿನ ಮೌಲ್ಯಗಳ ತಳಹದಿಯಾಗಿ ಹೊಂದಿಸಿಕೊಳ್ಳುವ ಅಗತ್ಯತೆ ಆತನಿಗಿತ್ತು. ಅದಕ್ಕನುಗುಣವಾಗಿ ಪರಿಸರವನ್ನು ಅಳವಡಿಸಿಕೊಳ್ಳುವಾಗ, ನಿಸರ್ಗದ ಗುಣವನ್ನು ದೈವತ್ವಕ್ಕೆ ಹೊಂದಿಸಿಕೊಂಡಿದ್ದಾನೆ. ಪ್ರತಿಯೊಂದು ಸಂಸ್ಕೃತಿಯ ಮೌಲ್ಯ ವ್ಯವಸ್ಥೆಗಳು ಪರಿಸರದ ಸಂವೇದನೆಯ ಆಶ್ರಯದಲ್ಲಿ ರೂಪುಗೊಂಡಿವೆ. ಪ್ರಾಣಿ ಸಸ್ಯಗಳ ಸಂಬಂಧದ ನೆಲೆಯಲ್ಲಿ ಸಂಸ್ಕೃತಿಯು ಸಮರ್ಥವಾಗಿ ತನ್ನನ್ನು ಅಭಿವ್ಯಕ್ತಿಸಿಕೊಂಡಿದೆ. ಮಾನವನ ವಿಕಾಸದ ಹಾದಿಯು ಸಸ್ಯಸಂಕುಲ, ಪ್ರಾಣಿ ಜಗತ್ತಿನ ಅಸ್ತಿತ್ವದ ಜೊತೆಯಲ್ಲಿ ಸಾಗಿ ಬಂದಿದೆ. ಸಸ್ಯ, ಪ್ರಾಣಿ, ಮಾನವ ಸಮುದಾಯಗಳು ಪರಸ್ಪರಾವಲಂಬಿಗಳಾಗಿವೆ. ನೈಸರ್ಗಿಕ ಸಮತೋಲನಕ್ಕೆ ಈ ಮೂರು ಘಟಕಗಳ ಅಸ್ತಿತ್ವವು ಮುಖ್ಯ. ಮಾನವ ಪ್ರಕೃತಿಯ ಜೀವಸಂಕುಲದಲ್ಲಿ ಒಂದು ಭಾಗ ಮಾತ್ರ. ಹಣ್ಣು, ಹಂಪಲು, ಗೆಡ್ಡೆಗೆಣಸು ತಿಂದು ಜೀವಿಸುತ್ತಿದ್ದ ಕಾಡುಪ್ರಾಣಿಯೆಂಬುದು ಪ್ರಾಗೈತಿಹಾಸಿಕ ಕಾಲದ ಅವಲೋಕನದಿಂದ ತಿಳಿದುಬರುತ್ತದೆ. ಕ್ರಮೇಣ ಜೀವನ ಕ್ರಮ ಬದಲಾವಣೆಗೊಂಡಂತೆ, ಬೇಟೆ, ಕೃಷಿ, ಪಶುಪಾಲನೆಯನ್ನು ಉಪಕಸುಬಾಗಿಸಿಕೊಂಡ. ನಿಸರ್ಗದಲ್ಲಾದ ಬದಲಾವಣೆಯನ್ನು ಅರಿತ ಮಾನವ ಋತುಮಾನಕ್ಕನುಗುಣವಾಗಿ ಆಚರಣೆಗಳನ್ನು ಸೃಷ್ಟಿಸಿಕೊಂಡ; ಆಗ ಇಡೀ ಕಾಡು ದೈವೀಕರಣಗೊಂಡಿತು. ಜೀವ ಜಗತ್ತೆಲ್ಲಾ ಆಚರಣೆಗೆ ಒಳಪಟ್ಟವು. ತನ್ನ ಬದುಕಿನ ರೀತಿ-ನೀತಿಗಳಿಗೆ ತಕ್ಕಂತೆ ಪ್ರಾಣಿಗಳ ಗುಣಗಳು

ಪರಿವರ್ತನೆಗೊಂಡವು. ಪಶುಪಾಲನಾ ಹಂತ ಹಾಗೂ ಕೃಷಿ ವಿಕಾಸದ ನಂತರ ಪ್ರಾಣಿ ಜಗತ್ತನ್ನು ಪಳಗಿಸಿ ಜಾಣ್ಮೆಯಿಂದ ಬಳಸಿಕೊಳ್ಳತೊಡಗಿದ. ಮಾಂಸ ಮತ್ತು ರಕ್ತ ದೈವಕ್ಕೆ ಬೇಕಾದ ಆಹಾರವೆಂದು ತರ್ಕಿಸಿದ ಮಾನವ, ಇಂದಿಗೂ ತನ್ನ ಸಮುದಾಯದ ಆಚರಣೆಗಳಲ್ಲಿ ಎಡೆಯಾಗಿಸಿಕೊಂಡಿದ್ದಾನೆ. ಹೀಗೆ ಜೈವಿಕ ಆಹಾರ ಸರಪಳಿ ಮಾನವ ಮತ್ತು ಪ್ರಾಣಿಗಳ ಮಧ್ಯ ರೂಪ ಪಡೆದಿದೆ.

ಜನಪದರ ದಿನನಿತ್ಯದ ಬದುಕು ಪ್ರಕೃತಿಯ ಮಡಿಲಲ್ಲಿ, ಪ್ರಕೃತಿಯೊಂದಿಗಿನ ಒಡನಾಟದಿಂದ ಜೀವಜಾಲವನ್ನು ಬದುಕಿನ ಒಂದು ಅಂಗವಾಗಿ ಪರಿಗಣಿಸಿದ್ದಾರೆ. ಪೂರ್ವಿಕರು ಪ್ರಕೃತಿಯನ್ನು ದೇವರೆಂದು ಭಾವಿಸಿ, ಪ್ರಕೃತಿ ಸಹಜವಾದ ಬದುಕನ್ನು ಬದುಕಿದ್ದಾರೆ. ತಮ್ಮ ಅನುಭವದ ನೆಲೆಯಲ್ಲಿ ಆಚರಣೆಗಳ ಮೂಲಕ ಪರೋಕ್ಷವಾಗಿ ಸಸ್ಯ ಮತ್ತು ಪ್ರಾಣಿ ಪರಿಸರ ನಾಶವಾಗದಂತೆ ನೋಡಿಕೊಂಡಿದ್ದಾರೆ. ಅವರ ಧಾರ್ಮಿಕ ಆಚರಣೆ ಸಂಪ್ರದಾಯ ನಂಬಿಕೆ ನಡೆನುಡಿಗಳೆಲ್ಲಾ ಪ್ರಕೃತಿ ಉಳಿವಿನ ತಂತ್ರಗಾರಿಕೆಯಿಂದ ಕೂಡಿವೆ. ಸಹಜ ಬದುಕಿಗೆ ನಿಷ್ಠರಾಗುವಂತೆ ಬದುಕಲು ಬೇಕಾದ ಅಂಶಗಳನ್ನೆಲ್ಲಾ ನಂಬಿಕೆ, ವಿಧಿ-ನಿಷೇಧದ ಮೂಲಕ ರೂಢಿಸಿಕೊಂಡಿದ್ದಾರೆ. ಮಾನವ ಸಮಾಜದಲ್ಲಿ ರಕ್ಷಣೆ, ಆಶ್ರಯ, ಅವಲಂಬನೆ ಹಾಗೂ ಅಸ್ತಿತ್ವ ಸಾಧಿಸುವುದಕ್ಕಾಗಿ ಜೀವಜಗತ್ತನ್ನು ದೇವತೆಯಾಗಿ ಅಭಿವ್ಯಕ್ತಿಸಿಕೊಂಡಿದ್ದಾನೆ. ಇಂದಿಗೂ ಅನೇಕ ಸಮುದಾಯಗಳು ಪ್ರಾಣಿ ಮತ್ತು ಸಸ್ಯವನ್ನು ತನ್ನ ಜನಾಂಗದ ಕುಲ ಚಿಹ್ನೆಯಾಗಿ, ಪೂರ್ವಜರಾಗಿ, ಕುಲಬಂಧುವಾಗಿ ಆರಾಧಿಸುತ್ತಿರುವುದನ್ನು ಕಾಣಲಾಗುತ್ತಿದೆ. "ಜನಪದ ಜಗತ್ತು ತನ್ನ ವೈಶಿಷ್ಟ್ಯಗಳನ್ನು ತೋರುವುದು ಅದು ತನ್ನ ಸುತ್ತಲಿನ ಸಸ್ಯವರ್ಗ ಮತ್ತು ಪ್ರಾಣಿ ವರ್ಗಕ್ಕೆ ಹೇಗೆ ಪ್ರತಿಕ್ರಿಯಿಸಿದೆ ಎಂಬ ಮೂಲಕ"(ಡಾ. ಪುರುಷೋತ್ತಮ ಬಿಳಿಮಲೆ, ೧೯೯೦, ಪು. ೨). ಜೀವನ ಸಮೃದ್ಧಿಯಾಗಿರಲು ಪರಿಸರ ಕಾರಣ. ಪರಿಸರ ನಾಶವಾದರೆ ಜೀವಜಾಲ ನಾಶಗೊಳ್ಳುವುದು ಖಂಡಿತ. ಪರಿಸರದಲ್ಲಿಯ ಜೀವಿಗಳು ತಮ್ಮ ಸಂಪನ್ಮೂಲ ಮಾತ್ರವಲ್ಲ. ನಮ್ಮ ಜೀವನ ಮೂಲವೂ ಹೌದೆಂಬುದನ್ನು ಅರಿಯಬೇಕಿದೆ. ಸಸ್ಯಗಳು ಸಮೃದ್ಧವಾಗಿ ಬೆಳೆಯಬೇಕಾದರೆ, ಪರಿಸರಕ್ಕೆ ಅನುಗುಣವಾಗಿ ಪ್ರಾಣಿಗಳಿರಬೇಕು. ಪ್ರಾಣಿಗಳು ತಮ್ಮ ಪೀಳಿಗೆಯನ್ನು ಮುಂದುವರಿಸಿಕೊಂಡು ಹೋಗಲು ವಿವಿಧ ರೀತಿಯ ಸಸ್ಯವರ್ಗದ ಅವಲಂಬನೆ ಅತ್ಯಗತ್ಯ. ಭೂಮಿಯ ಮೇಲಿನ ಈ ಅವಲಂಬನೆಗಳು ಪರಿಸರಕ್ಕನುಸಾರವಾಗಿ ಉಳಿಯಬೇಕಿದೆ.

ಆಚರಣೆಗಳು ಭೌತಿಕ ಪರಿಸರವನ್ನು ನಾಶ ಮಾಡದೇ ಪ್ರಕೃತಿ ಸಮತೋಲನವನ್ನು ಕಾಪಾಡಿಕೊಳ್ಳಲು ಸಹಕಾರಿಯಾಗಿವೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. "ಪರಿಸರ ವಿಜ್ಞಾನಿಗಳ ಗ್ರಹಿಕೆಯಂತೆ ಆಹಾರದ ಪಿರಮಿಡ್ಡಿನ ತಳದಲ್ಲಿ ಸಸ್ಯ ಸಂಕುಲವಿದೆ. ಅದನ್ನಾಧರಿಸಿ ಜೀವಿಸುತ್ತಿರುವ ಪ್ರಾಣಿ ಜಗತ್ತಿದೆ. ಇವೆರಡೂ ಉತ್ಪಾದನಾ ಸಾಮರ್ಥ್ಯ ಹೊಂದಿರುವಂಥವುಗಳು. ಇವೇ ಭೂಮಂಡಲದ ಬುನಾದಿ. ಇವುಗಳ ಆಸರೆಯಲ್ಲಿ ಮಾನವ ಪ್ರಪಂಚವಿದೆ" (ಹಿ.ಚಿ. ಬೋರಲಿಂಗಯ್ಯ, ೨೦೦೧, ಪು. ೫೨). ಇಂಥ ಹೊಂದಾಣಿಕೆಯ ಜೀವಜಾಲದಲ್ಲಿ ಜೀವಜಗತ್ತಿನ ಕ್ಷೀಣಿಸುವಿಕೆಯಿಂದ ಪ್ರಕೃತಿ ಸಮತೋಲನ ತಪ್ಪುವುದು ಸಹಜ. ಪರಿಸರ ಸಮೃದ್ಧವಾಗಿದ್ದಲ್ಲಿ, ಜೀವಜಾಲವೂ ಸಮೃದ್ಧವಾಗಿರುತ್ತದೆ. ಪ್ರಕೃತಿ ನಾಶವಾದರೆ ಮಾನವ, ಪ್ರಾಣಿ, ಪಕ್ಷಿ ಹೀಗೆ ಚರಾಚರಗಳ ಜೀವನಕ್ರಮವೇ ನಾಶಗೊಳ್ಳುತ್ತದೆ. ಪರಿಸರ ಬರೀ ಮಾನವ ಸಂಪನ್ಮೂಲ ಮಾತ್ರವಲ್ಲ,

ಜೀವನ ಮೌಲ್ಯವೂ ಹೌದು. ಇಂದಿನ ನಾಗರಿಕ ಮಾನವ ದಿನೇ ದಿನೇ ಸ್ವಾರ್ಥಿಯಾಗುತ್ತಿದ್ದಾನೆ. ತನ್ನ ಐಷಾರಾಮಿ ಜೀವನಕ್ಕೆ ಕಾಡಿನ ಸಂಪತ್ತು ಲೂಟಿಯಾಗುತ್ತಿದೆ. ತನ್ನ ವಿನೋದಕ್ಕೆ ಕಾಡಿನ ಪ್ರಾಣಿಗಳು ಬಲಿಯಾಗುತ್ತಿವೆ. ಪ್ರಕೃತಿಗೆ ಮಾನವ ಸಮೂಹವನ್ನು ರಕ್ಷಿಸುವ ಶಕ್ತಿಯಿದೆ. ಸಸ್ಯ ಹಾಗೂ ಪ್ರಾಣಿ ವರ್ಗ ಪರಿಸ್ಪರಾವಲಂಬಿಗಳಾಗಿ ವಿಕಾಸಗೊಳ್ಳುತ್ತಾ ಬಂದ ಸತ್ಯವನ್ನು ನಾವಿಂದು ಅರಿಯಬೇಕಿದೆ.

ಸಸ್ಯ ಮತ್ತು ಪ್ರಾಣಿಗಳ ಆರ್ಥಿಕ ಪರಿಕಲ್ಪನೆ ಬಂದುದು ಅವುಗಳ ಬಳಕೆ ಸಂಸ್ಕೃತೀಕರಣವಾದಾಗ. ಅವುಗಳ ಅಸ್ತಿತ್ವವನ್ನೇ ಮಾನವ ಸಂಸ್ಕೃತಿ ಇಂದು ಕಡೆಗಣಿಸುತ್ತದೆ. ಆಹಾರಕ್ಕೆ ಅನುಕೂಲಕ್ಕೆ, ಅಭಿವೃದ್ಧಿಗೆ, ವೈಭವಕ್ಕೆ ಜೀವಸಂಪತ್ತನ್ನು ಬಳಸಿ ಕಸದ ರಾಶಿ ಮಾಡಲಾಗಿದೆ. ಅವು ತಮ್ಮ ಮೂಲ ಅಸ್ತಿತ್ವವನ್ನೇ ಕಳೆದುಕೊಳ್ಳುವ ಹಂತ ತಲುಪಿವೆ. ಇಂದು ಎಲ್ಲಾ ಜೀವ ಹಾಗೂ ನಿರ್ಜೀವ ವಸ್ತುಗಳು ಮಾನವನ ಭೋಗಕ್ಕೆ ಬಳಸಲ್ಪಡುತ್ತಿವೆ. ಜೀವ ಜೀವದ ಸಂಬಂಧದ ಬದುಕು ಸ್ತಬ್ಧಗೊಳ್ಳುತ್ತಿದೆ. ಮನುಷ್ಯಕೇಂದ್ರಿತ ಆಲೋಚನೆ, ದುರಾಸೆ ಅತಿಯಾಗುತ್ತಾ ಎಲ್ಲವೂ ಮಾರಾಟದ ಸರಕಾಗುತ್ತಿವೆ. ಭೌತಿಕ ಪರಿಸರದ ನಾಶ ಇಂದು ಜನಜೀವನದ ಮೇಲೆ ಹೆಚ್ಚು ಪ್ರಭಾವ ಬೀರಿದೆ. ಜೀವಜಾಲದ ನಾಶದಿಂದ ಅಪೂರ್ವ ಸಂಸ್ಕೃತಿ ನಾಶ ಹೊಂದುವ ಹಂತ ತಲುಪಿದೆ. ಪ್ರತಿಯೊಂದು ಜೀವಿಗೂ ಭೂಮಿಯ ಮೇಲೆ ಬದುಕುವ ಹಕ್ಕಿದೆ. ಇದು ಬರೀ ನೈತಿಕ ಕಾರಣವಾಗಿರದೇ ಮಾನವನ ಉಳಿವಿನ ಪ್ರಶ್ನೆಯೂ ಹೌದು. ಜನಪದರು ಪ್ರಕೃತಿ ಆರಾಧಕರು. ತಮ್ಮ ವಿನಯ, ವಿವೇಕ, ಜಾಣ್ಮೆಯಿಂದ ಆಚರಣೆ, ವಿಧಿ-ನಿಷೇಧಗಳ ಬಿಗಿ ಭದ್ರತೆಯಲ್ಲಿ, ಉಳಿಸಿಕೊಂಡು ಬಂದ ಜೀವಜಾಲದ ರಕ್ಷಣೆಯಾಗಬೇಕಾದರೆ, ಆಧುನಿಕತೆಯ ಅಬ್ಬರದಲ್ಲೂ ಮಾನವ ಜನಪದರ ಆಚರಣೆಗಳತ್ತ ಮುಖ ಮಾಡಬೇಕಾಗಿದೆ. ಅವುಗಳ ಪರಂಪರೆಯನ್ನು ಉಳಿಸಿ ಬೆಳೆಸಿ ಮುಂದುವರಿಸಿಕೊಂಡು ಹೋಗುವ ಅಗತ್ಯತೆ ಇದೆ.

೪.೧. ಸಸ್ಯ ಸಂಬಂಧಿ ಆಚರಣೆಗಳು

ಮಾನವನ ಹುಟ್ಟು - ಬೆಳವಣಿಗೆಯಲ್ಲಾ ಪ್ರಕೃತಿಯ ಮಡಿಲಲ್ಲೇ. ಮಾನವನಿಗಿಂತ ಮುನ್ನ ಸಸ್ಯ ಸಂಪತ್ತು ಭೂಮಿಯ ಮೇಲೆ ಉದಯಿಸಿದೆ. ಅವು ಜೀವಧಾತುವಾದ ವಾಯು ಮತ್ತು ಪರಿಸರವನ್ನು ಜತನವಾಗಿ ಕಾಪಾಡಿಕೊಂಡು ಬಂದಿವೆ. ಪ್ರಕೃತಿಯಲ್ಲಿರುವ ಗಿಡ, ಮರ ಜೀವಸಂಕುಲ ಮಾನವನ ಜೀವನಕ್ಕೆ ಆಧಾರವೆಂದರಿತು ಅವುಗಳ ಬೆಳವಣಿಗೆ ಹಾಗೂ ಸಂರಕ್ಷಣೆಗೆ ಹಲವಾರು ಮಾರ್ಗಗಳನ್ನು ಕಂಡುಕೊಂಡ. ಗಿಡಮರಗಳಿಗೂ ಜೀವವಿದೆ, ಭಾವ ಸಂವೇದನೆಯಿದೆ ಎಂಬುದನ್ನು ತನ್ನ ಅನುಭವದ ನೆಲೆಯಲ್ಲಿ ಅರಿತ. ಮಾನವನ ದಿನನಿತ್ಯದ ಬದುಕಿನಲ್ಲಿ ಸಸ್ಯಸಂಕುಲ ಹಲವಾರು ರೀತಿಯಲ್ಲಿ ಬಳಸಲ್ಪಟ್ಟಿದೆ. ಹೀಗೆ ತಮ್ಮ ಬದುಕಿನ ಒಳಿತಿಗಾಗಿ ನೆರವಾದ ಸಸ್ಯಗಳಲ್ಲಿ ಭಕ್ತಿ, ಗೌರವ, ಭಯ ಮೂಡಿತು. ಅವುಗಳಲ್ಲಿ ದೈವತ್ವವನ್ನು ಕಂಡುಕೊಂಡ. ತನ್ನ ಜೀವನಾನುಭವದಿಂದ ಅವುಗಳ ಉಪಯೋಗವನ್ನರಿತ. ಶುಭ; ಅಶುಭ ಕಾರ್ಯಗಳೆರಡರಲ್ಲೂ ಬಳಸಲ್ಪಡುವುದರ ಮೂಲಕ ಸಸ್ಯಸಂಕುಲದ ಉಳಿವಿಗೆ ಮಾನವ ಕಾರಣನಾದ.

ಮನುಷ್ಯನ ರಕ್ಷಣೆ, ಆಶ್ರಯ, ಅವಲಂಬನೆ ಹಾಗೂ ಅಸ್ತಿತ್ವದಿಂದಾಗಿ ಸಸ್ಯಗಳು ದೇವತೆಯಾಗಿ ಅಭಿವ್ಯಕ್ತಿಗೊಂಡಿವೆ. ಈ ಹಿನ್ನೆಲೆಯಲ್ಲಿ ಸಸ್ಯ ಸಂಬಂಧಿ ಆಚರಣೆ, ನಂಬಿಕೆ, ಸಂಪ್ರದಾಯಗಳೂ ರೂಪ

ತಳೆದಿವೆ. ಸಸ್ಯದ ಗಿಡ, ಮರ, ಬಳ್ಳಿ, ಎಲೆ, ಕಾಂಡ, ತೊಗಟೆ, ಬೇರು, ನಾರು, ಹೂ, ಕಾಯಿ, ಹಣ್ಣು ಹೀಗೆ ಎಲ್ಲವೂ ಬದುಕಿಗೆ ಅಗತ್ಯ ಸಂಪನ್ಮೂಲಗಳು. ಇವೆಲ್ಲವೂ ಹಸಿರು ಹಂದರ, ತಳಿರುತೋರಣಗಳಾಗಿ ಹಬ್ಬ, ಜಾತ್ರೆ, ಶುಭಕಾರ್ಯಗಳಲ್ಲಿ ಶೃಂಗರಿಸಲ್ಪಡುತ್ತವೆ. ಅರಿಶಿಣ, ಅಕ್ಕಿ, ತೆಂಗು, ಅಡಿಕೆ, ವೀಳ್ಯ, ಹೊಂಬಾಳೆ, ಫಲೋತ್ಪತ್ತಿಯ ಸಂಕೇತಗಳಾಗಿ ಆಚರಣೆಯಲ್ಲಿ ಪ್ರಾಶಸ್ತ್ಯ ಪಡೆದಿವೆ.

ಆದಿಮಾನವರು ದೈಹಿಕ ತೊಂದರೆಗಳಿಗೆ ಪೂರ್ಣಪ್ರಮಾಣದಲ್ಲಿ ಸಸ್ಯಗಳನ್ನು ಔಷಧಿಯನ್ನಾಗಿಸಿಕೊಂಡಿದ್ದರು. ಇಂದಿನ ಜನಸಾಮಾನ್ಯರಿಗೆ ಸಸ್ಯಗಳ ಪರಿಚಯವೇ ಅಪರೂಪವಾಗಿದೆ. ಅವುಗಳ ಔಷಧಿಯ ಗುಣಗಳ ಬಗೆಗಿನ ಮಾಹಿತಿಯೇ ಇಲ್ಲವೆಂದೇ ಹೇಳಬೇಕು.

"ಮಾನವ ಎಂದೂ ಸ್ವತಂತ್ರನಲ್ಲ, ಸ್ವಾವಲಂಬಿಯೂ ಅಲ್ಲ, ಅವನು ಸದಾ ಪರತಂತ್ರ ಹಾಗೂ ಪರಾವಲಂಬಿ. ಅವನು ನಿಸರ್ಗವನ್ನೊಲಿಸಿಕೊಂಡು, ಅದರ ಪ್ರಯೋಜನವನ್ನು ಪಡೆಯುವುದಾದರೆ ಸುಖವಾಗಿ ಬಾಳುತ್ತಾನೆ. ಅದರ ವಿರುದ್ಧವಾಗಿ ಸೆಣಸಿ, ಹೋರಾಟ ನಡೆಸುವುದಾದರೆ ಅವನು ನಿರ್ನಾಮವಾಗುತ್ತಾನೆ. ನಿಸರ್ಗದ ರಕ್ಷಣೆಯಿರುವತನಕ ಅವನಿಗೆ ಭಯವಿಲ್ಲ".[೧] ಅದಕ್ಕಾಗಿಯೇ ಜನಪದರಿಗೆ ಬದುಕಿನ ಒಳಿತಿಗೆ ನೆರವಾಗುವ ಸಸ್ಯಗಳ ಬಗ್ಗೆ ಭಕ್ತಿ, ಗೌರವದ ಜೊತೆ ದೈವೀ ನೆಲೆಯೆಂಬ ಭಾವನೆಯಿದೆ.

ದೇವಾಲಯದ ಕಲ್ಪನೆ ಮೂಡುವ ಮುನ್ನ ಮರವನ್ನು ದೇವರ ನೆಲೆಗಳೆಂದು ಪರಿಗಣಿಸುತ್ತಿದ್ದರು. ತಮ್ಮಂತೆ ಇರುವ ಮತ್ತೊಂದು ಜೀವಿ ಎಂದು ತಿಳಿಯಲಾಗಿತ್ತು. ನ್ಯಾಯ ಪಂಚಾಯಿತಿಗಳು ಮರದಡಿಯಲ್ಲಿ ನಡೆಯುತ್ತಿದ್ದವು. ಮರ ಮುಟ್ಟಿ ಪ್ರಮಾಣ ಮಾಡಬೇಕಿತ್ತು. ಹೀಗೆ ಸಸ್ಯ ಸಂಪತ್ತು ದೈವೀ ಸ್ವರೂಪ ಪಡೆಯುವುದಲ್ಲದೆ, ನ್ಯಾಯಕ್ಕೆ ಸಾಕ್ಷಿಯಾಗುತ್ತಿದ್ದುದುಂಟು.

ಮನುಷ್ಯ ಅಲೆಮಾರಿಯಾಗಿದ್ದ ದಿನಗಳಿಂದಲೂ ಗಿಡ, ಮರಗಳ ಜೊತೆ ಅಪಾರವಾದ ಭಾವನಾತ್ಮಕ ಸಂಬಂಧ ಬೆಳೆಸಿಕೊಂಡಿದ್ದಾನೆ. ಬೃಹದಾಕಾರದ ಮರಗಳು ದೈವೀಸ್ಥಾನದ ನೆಲೆಗಳಾಗಿರಬೇಕು. ಅಂತಹ ಮರಗಳನ್ನು ಕಡಿಯದಂತೆ ಮಾಡಲು ಅನೇಕ ವಿಧಿ-ನಿಷೇಧಗಳನ್ನು ಕಡ್ಡಾಯಗೊಳಿಸಿದ್ದರು. ಅವುಗಳ ಮೇಲಿನ ಗೌರವಸೂಚಕವಾಗಿ, ಕೆಲವನ್ನು ತಮ್ಮ ಕುಲದೇವತೆಗಳನ್ನಾಗಿ, ಕುಲ ಲಾಂಛನಗಳನ್ನಾಗಿ ಮಾಡಿಕೊಂಡಿದ್ದರು. ಧಾರ್ಮಿಕ ಆಚರಣೆಗಳಲ್ಲಿ ಅಧಿದೈವವನ್ನಾಗಿ ಮೆರೆಸಿರುವುದನ್ನು ಇತಿಹಾಸ ತಿಳಿಸುತ್ತದೆ. ಇಂದು ಕೂಡ ಅನೇಕ ಜನಪದ ದೇವರುಗಳೆಲ್ಲಾ ಕಾಡಿನ ಮಧ್ಯದಲ್ಲಿವೆ. ಪ್ರಕೃತಿಯ ಸಮತೋಲನದ ಉಳಿವಿಗಾಗಿ, ನಾಗಬನ, ಭೂತದ ಕಾಡು, ದೇವರ ಕಾಡುಗಳೆಂದು ಹೆಸರಿಟ್ಟು ಭಯ ಭಕ್ತಿಯಿಂದ ಅವನ್ನು ಕಾಪಾಡಿಕೊಂಡು ಬಂದಿದ್ದಾನೆ. ಇಂತಹ ಪವಿತ್ರ ವನಗಳಿಂದಾಗಿ ಇಂದಿಗೂ ದೊಡ್ಡ ದೊಡ್ಡ ಮರಗಳು, ಔಷಧಿ ಸಸ್ಯಗಳು ಕೆಲಮಟ್ಟಿಗಾದರೂ ಉಳಿದು ಬಂದಿವೆ.

ದೆವ್ವ ಹಿಡಿದವರಿಗೆ ಬೇವಿನ ಸೊಪ್ಪಿನ ಏಟು ಕೊಟ್ಟು ಸ್ವಾಸ್ಥ್ಯಕ್ಕೆ ತರಲಾಗುತ್ತದೆ. ವಿಜ್ಞಾನ-ತಂತ್ರಜ್ಞಾನದಲ್ಲಿ ಪರಿಹಾರವಾಗದೆ ಇರುವ ಸಮಸ್ಯೆಗಳಿಗೆ ಸಸ್ಯ ಸಂಕುಲಗಳ ಮೂಲಕ ಮತ್ತು ಆಚರಣೆಗಳ ಮೂಲಕ ಪರಿಹಾರ ಕಂಡುಕೊಳ್ಳಲಾಗುತ್ತದೆ. ಪೈರಿಗೆ ರೋಗರುಜಿನಗಳು ಬಾರದಿರಲೆಂದು ಜೋಕುಮಾರನ ಕಪ್ಪು, ಕಾಮಣ್ಣನ ಬೂದಿಯನ್ನು ಎರಚುತ್ತಾರೆ. ಸೀಗೆ ಹುಣ್ಣಿಮೆ, ಎಳ್ಳಮವಾಸ್ಯೆ, ಭಾರತ ಹುಣ್ಣಿಮೆ ಸಂಕ್ರಾಂತಿಯಲ್ಲಿ ಸಸ್ಯಗಳ

ಬೆಳವಣಿಗೆಯ ಹಂತಕ್ಕನುಗುಣವಾಗಿ ಚರಗ ಚೆಲ್ಲಲಾಗುತ್ತದೆ. ಇವೆಲ್ಲಾ ಆಚರಣೆಯ ಮೂಲಕ ನಡೆಯುವ ಕೀಟ ಹತೋಟಿ ಕ್ರಮಗಳಾಗಿದ್ದು, ಬೆಳೆ ಆರೋಗ್ಯಪೂರ್ಣವಾಗಲು ಸಹಾಯಕವಾಗಿವೆ. ಯುಗಾದಿಯಲ್ಲಿ ಬೇವು ತಿನ್ನುವುದು, ಮಹಾನವಮಿಯಲ್ಲಿ ಬನ್ನಿ ಮುಡಿಯುವುದು, ಶಿವರಾತ್ರಿಯಲ್ಲಿ ಬಿಲ್ವಪತ್ರೆ, ಉತ್ತರಾಣಿ ಬಳಸುವುದು, ಸಂಕ್ರಾಂತಿಯಲ್ಲಿ ಹೊಸ ಧಾನ್ಯ, ತರಕಾರಿ ಬಳಸಲ್ಪಡುವುದು, ಇವೆಲ್ಲಾ ಮಾನವನ ಆರೋಗ್ಯಕ್ಕೆ ಉಪಯುಕ್ತ ಸಸ್ಯ ಮೂಲಳೆಂಬ ಕಾರಣದಿಂದ. ಹೀಗೆ ಮಾನವ ಸಸ್ಯಗಳಲ್ಲಿರುವ ಔಷಧೀಯ ಗುಣಗಳನ್ನರಿತು, ಋತುಮಾನಕ್ಕೆ ಅನುಗುಣವಾಗಿ ಆಚರಣೆಯ ನೆಪದಲ್ಲಿ ಆಹಾರವಾಗಿಸಿಕೊಂಡಿದ್ದಾನೆ. ಪೈರಿನ ಬೆಳವಣಿಗೆಯ ಹಂತಗಳನ್ನು ಆಧಾರವಾಗಿರಿಸಿಕೊಂಡು, ಕೃಷಿ ಆಚರಣೆಗಳು ನೆರವೇರುತ್ತವೆ. ಮಾವಿನ ಮರದ ವಿವಿಧ ಹಂತಗಳನ್ನು ಹಬ್ಬಗಳ ಜೊತೆಗೆ ಹೊಂದಿಸಿ ಹೇಳುವುದನ್ನು ಗಮನಿಸಬಹುದು. ಬನದ ಹುಣ್ಣಿಮೆಗೆ ಬನ ಒಡಿತ್ತೈತೆ (ಹೂ ಬಿಡು), ಭರತ ಹುಣ್ಣಿಮೆಗೆ ಬಾರಿಕಾಯಷ್ಟು, ಹೋಳಿ ಹುಣ್ಣಿಮೆಗೆ ಹೋಳುಗಾಯಿ, ಕಾರಹುಣ್ಣಿಮೆಗೆ ಕಡಿಗಾಯಿ ಹೀಗೆ ಹೂ ಬಿಡುವುದರಿಂದ ಹಿಡಿದು ಹಬ್ಬಗಳ ಜೊತೆ ಸಸ್ಯಗಳ ಬೆಳವಣಿಗೆಯ ಹಂತಗಳನ್ನು ಹೋಲಿಸಲಾಗುತ್ತದೆ. ಗಿಡಮರಗಳು ಚೈತನ್ಯ ಸ್ವರೂಪಿಯಾದವು. ಅವುಗಳಿಗೆ ಆತ್ಮವಿದೆ ಎಂಬ ಭಾವನೆಯಿಂದ ಜಾತಿಗಳಾಗಿ ವಿಭಾಗಿಸಿದ್ದಾರೆ. ಅರಳಿ ಗಂಡೆಂದು, ಬೇವು ಹೆಣ್ಣೆಂದು ಪರಿಭಾವಿಸಿ ಮದುವೆ ಮಾಡಿಸುವ ಸಂಪ್ರದಾಯ ಇಂದಿಗೂ ಪ್ರಚಲಿತದಲ್ಲಿದೆ.

ಸಸ್ಯ ಸಂಪತ್ತಿನ ನಾಶದಿಂದ ಜನಪದ ಸಂಸ್ಕೃತಿ ಹಾಗೂ ಜೀವನಕ್ರಮ ಕಮರುತ್ತಿದೆ. ಮಾನವನ ರಕ್ಷಣೆ, ಆಶ್ರಯ, ಅವಲಂಬನೆ, ಅಸ್ತಿತ್ವಕ್ಕಾಗಿ ಸಸ್ಯಸಂಕುಲದ ಅಗತ್ಯತೆಯಿದೆ. ಅದನ್ನು ಆಚರಣೆಗಳ ಮುಖೇನ ಅಭಿವ್ಯಕ್ತಿಸಲಾಗುತ್ತಿದೆ. ವೃಕ್ಷಗಳಲ್ಲಿ ಸಂತಾನ ಫಲ ನೀಡುವ ಶಕ್ತಿ ಇದೆ ಎಂಬ ನಂಬಿಕೆಯಿದೆ. ಅವುಗಳಿಂದಾಗಿ ಸೃಷ್ಟಿ ಸೌಂದರ್ಯಯುತವಾಗಿದೆ. ಅರಣ್ಯ ಬರೀ ಮರಗಳ ಸಮೂಹವಲ್ಲ. ಅದೊಂದು ಜೀವಂತ ಪರಿಸರವಾಗಿದೆ. ಸಸ್ಯ ಲೋಕವಿಲ್ಲದ ಮಾನವನ ಬದುಕು ಸಾಧ್ಯವಿಲ್ಲವೆಂಬುದನ್ನು ಸಂಶೋಧನೆಗಳು ದೃಢಪಡಿಸಿವೆ. ಒಟ್ಟಿನಲ್ಲಿ ಸಸ್ಯದೊಂದಿಗಿನ ಮಾನವನ ಸಂಬಂಧ ಅನಿವಾರ್ಯ ಮತ್ತು ಅವಿಭಾಜ್ಯವಾದುದಾಗಿದೆ.

೪.೧.೧. ಸಂಕ್ರಾಂತಿ

ಕೃಷಿಕರ ಸಮೃದ್ಧಿಯ ಹಬ್ಬ ಸಂಕ್ರಾಂತಿ. ಇದು ಪುಷ್ಯಮಾಸದ ಚತುರ್ಥಿಯಂದು ಆಚರಿಸಲ್ಪಡುತ್ತದೆ. ಸಾಮಾನ್ಯವಾಗಿ ಸಂಕ್ರಾಂತಿ ಜನವರಿ ೧೪ ಅಥವಾ ೧೫ನೇ ದಿನಾಂಕದಂದು ಬರುತ್ತದೆ. ಭೌಗೋಳಿಕ ಹಿನ್ನೆಲೆಯ ಪ್ರಕಾರ ಸೂರ್ಯನು ಮಕರ ವೃತ್ತದಿಂದ ಕರ್ಕಾಟಕ ವೃತ್ತಕ್ಕೆ ಸ್ಥಾನಪಲ್ಲಟ ಮಾಡುವ ಆ ದಿನವನ್ನು ಮಕರ ಸಂಕ್ರಾಂತಿ ದಿನವೆಂದೂ, ಉತ್ತರಾಯಣ ಪುಣ್ಯಕಾಲವೆಂದೂ ಕರೆಯುತ್ತಾರೆ. ಮಕರ ಸಂಕ್ರಾಂತಿಯಂದು ಸ್ವರ್ಗದ ಬಾಗಿಲು ತೆರೆದಿರುತ್ತದೆಂದು, ಆ ಸಮಯದಲ್ಲಿ(ದಿನ) ಸಾವು ಬಂದರೆ ಮುಕ್ತಿ ದೊರಕುತ್ತದೆಂಬ ನಂಬಿಕೆಯಿದೆ. ಮಹಾಭಾರತದಲ್ಲಿ ಇಚ್ಛಾಮರಣಿ ಭೀಷ್ಮ ಕುರುಕ್ಷೇತ್ರದ ರಣಭೂಮಿಯಲ್ಲಿ ಮರಣ ಹೊಂದಲು ಆ ದಿನಕ್ಕಾಗಿ ಕಾದನು ಎಂಬುದಾಗಿ ಪುರಾಣಗಳಲ್ಲಿ ಉಲ್ಲೇಖವಿದೆ.

"ಸಂಕ್ರಾಂತಿಯೆಂದರೆ ಉಜ್ವಲ ಬೆಳಕು, ಜೀವನದ ಹೊಸ ತಿರುವು ಎಂದರ್ಥ"(ರಾಮು ಮುಲಗಿ, ೨೦೧೦, ಪು. ೨೩೪). ಹೊಲದ ಬೆಳೆ ಕಣ ಸೇರುವ ಸಮಯ. ಮನೆಯಲ್ಲಿ ಹೊಸ ಧಾನ್ಯಗಳು ತುಂಬಿ,

ಸುಗ್ಗಿಯ ಸಂಭ್ರಮದಲ್ಲಿ ಚಿಂತೆ ದೂರಾಗಿಸುವ ಕಾಲ. ಮದುವೆ, ಹಬ್ಬ, ಜಾತ್ರೆ, ರಥೋತ್ಸವ, ಶುಭಕಾರ್ಯಗಳಿಗೆ ಪ್ರಾಶಸ್ತ್ಯವಾದ ಬಿಡುವಿನ ಕಾಲ.

ಅಂಗಳವನ್ನು ಸಗಣಿಯಿಂದ ಸಾರಿಸಿ, ರಂಗವಲ್ಲಿಗಳಿಂದ ಅಲಂಕರಿಸುವುದು, ದನದ ಕೊಟ್ಟಿಗೆಗೆ ಸುಣ್ಣ ಮತ್ತು ಕೆಂಪು ಮಣ್ಣಿನಿಂದ ಪಟ್ಟೆ ಹಾಕುವುದು, ಉತ್ತರಾಣಿಕಡ್ಡಿ, ಮಾವಿನ ಸೊಪ್ಪನ್ನು ಕೊಟ್ಟಿಗೆಗೆ ಹಾಗೂ ಧಾನ್ಯ ತುಂಬಿದ ಕಣಜಕ್ಕಿಟ್ಟು ಪೂಜಿಸುವುದು ಹಬ್ಬದ ವಿಶೇಷತೆ. ಸಗಣಿ, ಸುಣ್ಣ, ಕೆಂಪುಮಣ್ಣು, ಉತ್ತರಾಣಿಕಡ್ಡಿ, ಮಾವಿನಸೊಪ್ಪುಗಳೆಲ್ಲವೂ ಕೀಟನಿವಾರಕ ಗುಣದ ಹಿನ್ನೆಲೆಯಲ್ಲಿ ಬಳಸಲ್ಪಡುತ್ತವೆ. ಹೀಗೆ ಆಚರಣೆಯ ಹಿಂದಿನ ಆರೋಗ್ಯಪರ ಕಾಳಜಿಯನ್ನು ಆಚರಣೆಯ ಪ್ರತಿ ಹಂತದಲ್ಲೂ ಕಾಣುತ್ತೇವೆ.

ಸಂಕ್ರಾಂತಿಯ ಮುಖ್ಯ ಆಚರಣೆ ಎಳ್ಳು ಬೀರುವುದು. ಎಳ್ಳು ದಾನ ಮಾಡಿದರೆ ಪುಣ್ಯ ಪ್ರಾಪ್ತಿಯಾಗುವುದೆಂಬ ನಂಬಿಕೆಯಿದೆ. ಅಂದು ದೇವರಿಗೆ ಎಳ್ಳು, ಬೆಲ್ಲವೇ ನೈವೇದ್ಯ. ಹೊಸಬಟ್ಟೆ ತೊಟ್ಟು ಅಲಂಕರಿಸಿಕೊಂಡ ಹೆಣ್ಣುಮಕ್ಕಳು ಸಡಗರದಿಂದ ಮನೆಮನೆಗೆ ಹೋಗಿ ಎಳ್ಳು, ಬೆಲ್ಲ ಬೀರುತ್ತಾರೆ. "ಎಳ್ಳು, ಬೆಲ್ಲ ತಿಂದು ಒಳ್ಳೆಯ ಮಾತಾಡೋಣ" ಎನ್ನುವ ಸ್ನೇಹಭಾವ ಪ್ರದರ್ಶಿಸುವ, ಉತ್ತಮ ಸಂವಹನ ವೃದ್ಧಿಸುವ ಹಬ್ಬ ಸಂಕ್ರಾಂತಿ. ಎಳ್ಳು ಬೀರುವ ಪ್ರಯುಕ್ತ ಮಿತ್ರರ ಭೇಟಿ ಪರಸ್ಪರ ಕುಶಲೋಪರಿಗಳೊಂದಿಗೆ ಸ್ನೇಹವನ್ನು ಪುನರುಜ್ಜೀವನಗೊಳಿಸುವುದು; ಇವೆಲ್ಲವೂ ಸಮರಸದ ಬಾಳ್ವೆಗೆ ನಾಂದಿಯಾಗುತ್ತವೆ.

ಎಳ್ಳಿನ ಜೊತೆ ಕಡಲೆ, ಉರಿಗಡಲೆ, ಕೊಬ್ಬರಿ, ಬೆಲ್ಲ ಸೇರಿಸುತ್ತಾರೆ. ಈ ಸಮಯದಲ್ಲಿ ಚಳಿಯಿಂದ ಒಡೆದ ಚರ್ಮಕ್ಕೆ, ಎಣ್ಣೆಕಾಳುಗಳ ಸೇವನೆ ಅವಶ್ಯ. ಜಿಡ್ಡಿನ ಆಹಾರ ಸೇವನೆ ಚಳಿಯಿಂದ ದೇಹವನ್ನು ರಕ್ಷಿಸುವುದಾಗಿದೆ. ಹೆಣ್ಣುಮಕ್ಕಳಿಗೆ ಹೊಸ ಉಡುಗೆ ತೊಡಿಸಿ, ಹಸೆಯ ಮೇಲೆ ಕೂರಿಸಿ, ಆರತಿ ಮಾಡುವ ಸಂಪ್ರದಾಯವಿದೆ. ಎಳ್ಳಿನ ದೀಪ ಹಚ್ಚುವುದರಿಂದ ಶನಿಯನ್ನು ದೂರ ಮಾಡಬಹುದೆಂಬ ನಂಬಿಕೆ. ಆದ್ದರಿಂದ ಮಹಿಳೆಯರು ತಮ್ಮ ಅಖಂಡ ಸೌಭಾಗ್ಯದ ಪ್ರಾಪ್ತಿಗಾಗಿ "ಎಳ್ಳಿನ ವ್ರತ" ಮಾಡುವ ಪದ್ಧತಿ ಇದೆ. ಮದುವೆ, ಒಸಗೆ ಶಾಸ್ತ್ರಗಳಲ್ಲಿ ಎಳ್ಳಿನ ಬಳಕೆ ಕಡ್ಡಾಯವಾಗಿರುತ್ತದೆ. ಈ ಆಚರಣೆಗಳಲ್ಲಿ ಎಳ್ಳು ಫಲವಂತಿಕೆಯ ಸಂಕೇತ. ಇದನ್ನು ಸಮರ್ಥಿಸುವ ಅಂಶವೆಂದರೆ ೯ನೇ ಶತಮಾನದ ಬ್ರಹ್ಮಗುಪ್ತ ಈ ರೀತಿಯಾಗಿ ಉಲ್ಲೇಖಿಸಿದ್ದಾನೆ. "ಇದೊಂದು ಋತು ಪರಿವರ್ತನೆಯ ಕಾಲ. ಇದನ್ನು ಸ್ತ್ರೀ ಸಂಕೇತದಿಂದ ಗುರುತಿಸಲಾಗುತ್ತದೆ" (ಜಾನಪದ ವಿಷಯ ವಿಶ್ವಕೋಶ, ಪು. ೧೨೨೦).

ಬಳ್ಳಾರಿ ಜಿಲ್ಲೆಯಲ್ಲಿ ಸಂಕ್ರಾಂತಿ ಹಬ್ಬದಲ್ಲಿ ತಯಾರಿಸುವ ಅಡುಗೆಗಳಲ್ಲಿ ವಿಶೇಷತೆ ಇದೆ. ಎಣ್ಣೆಬದನೆಕಾಯಿ, ಕಾಳುಪಲ್ಯಗಳು, ಕೆಂಪು ಚಟ್ನಿ, ಶೇಂಗಾ, ಪುಟಾಣಿ, ಗುರೆಳ್ಳು ಚಟ್ನಿ ಪುಡಿಗಳು, ಗಟ್ಟಿ ಮೊಸರು, ಎಳ್ಳುಹಚ್ಚಿದ ಕಟುಕು ಸಜ್ಜೆ ರೊಟ್ಟಿ, ಜೋಳದ ರೊಟ್ಟಿ, ಎಳೆ ಸೌತೆಕಾಯಿ, ಗಜ್ಜರಿ, ಮೂಲಂಗಿ, ಪಚ್ಚಡಿಗಳು, ಹುಗ್ಗಿ, ಹೋಳಿಗೆ, ಗೆಣಸು, ಕುಂಬಳಕಾಯಿ ಪ್ರಮುಖವಾದುವಾಗಿವೆ. ಇವು ಹೊಸ ಧಾನ್ಯಗಳಿಂದ ತಯಾರಿಸಲ್ಪಟ್ಟ ಹಬ್ಬದ ಅಡುಗೆಗಳಾಗಿವೆ. ಇವುಗಳಿಗೂ ಹವಾಮಾನಕ್ಕೂ ನೇರಸಂಬಂಧ ಕಂಡುಬರುತ್ತದೆ. ಈ ಎಲ್ಲಾ ಆಹಾರಗಳು ಪೌಷ್ಟಿಕ ಹಾಗೂ ಔಷಧಿಯ ಗುಣಗಳಿಂದ ಕೂಡಿದವುಗಳಾಗಿವೆ. ಆಯಾ ಋತುಮಾನಗಳಲ್ಲಿ ಸಮೃದ್ಧವಾಗಿ ದೊರೆಯುವ ಸಸ್ಯೋತ್ಪನ್ನಗಳು ಮಾತ್ರ ಆ ಸಮಯದ ಆಚರಣೆಗಳಲ್ಲಿ

ಬಳಸಲ್ಪಡುತ್ತವೆ. ಹಬ್ಬಕ್ಕೆ ತಯಾರಿಸಿದ ರುಚಿಕಟ್ಟಾದ ಖಾದ್ಯಗಳಲ್ಲಿ ಆರೋಗ್ಯವರ್ಧಕ ಗುಣಗಳಿವೆ. ಅವು ಔಷಧಿರೂಪದಲ್ಲಿ ಆರೋಗ್ಯ ಕಾಪಾಡುವಂಥವುಗಳಾಗಿವೆ. ಸಂಕ್ರಾಂತಿಯ ಪುರುಷ ಯಾವ ವಾಹನದ ಮೇಲೆ ಪ್ರಯಾಣ ಮಾಡುತ್ತಾನೆಂಬುದನ್ನು ಪಂಚಾಂಗಗಳಿಂದ ತಿಳಿದ ನಂತರ, ಆ ವರ್ಷದ ಮಳೆ-ಬೆಳೆ, ಲೆಕ್ಕಾಚಾರಗಳು ನಡೆಯುತ್ತವೆ. ಯಾವ ಪ್ರಾಣಿಯ ಮೇಲೆ ಸವಾರಿ ಮಾಡುತ್ತಾನೋ ಆ ವರ್ಷ ಆ ಪ್ರಾಣಿಗೆ ಕಷ್ಟ ತಪ್ಪಿದ್ದಲ್ಲ ಎನ್ನುವ ನಂಬಿಕೆ ಇಂದಿಗೂ ಚಾಲ್ತಿಯಲ್ಲಿದೆ. "ಜೀವರಾಶಿಯ ಚೇತನ ಸೂರ್ಯ. ಭೂಮಿ ತನ್ನ ದಿಕ್ಕು ಬದಲಿಸಿದಂತೆ, ತನ್ನ ಪರಿಧಿಯಲ್ಲಿ ತಿರುವು ಪಡೆದು ಸೂರ್ಯನ ಸಮೀಪಕ್ಕೆ ಸಾಗುತ್ತದೆ. ಬೇಸಿಗೆಯತ್ತ ಭೂಮಿ ಸಾಗಲಾರಂಭಿಸುವ ಶುಭ ಕಾಲವಿದು".[೨] ಸಂಕ್ರಮಣವೆಂದರೆ ಚಲಿಸುವಿಕೆ, ಸಂಧಿಕಾಲ, ಒಟ್ಟಿಗೆ ಸೇರು ಎಂಬುದಾಗಿದೆ. ಪರಿವರ್ತನೆ ಎಂದರೆ ಬದಲಾವಣೆ ಎಂದು ಅರ್ಥ. ನಕ್ಷತ್ರ-ಗ್ರಹಗಳ ಚಲನೆಯಲ್ಲಿನ ಪರಿವರ್ತನಾ ಕಾಲವನ್ನು ಜನಪದರು ಶುಭವೆಂದು ಪರಿಗಣಿಸಿ, ಅದಕ್ಕೆ ಹಬ್ಬದ ಮಹತ್ವ ನೀಡಿದ್ದಾರೆ.

ಸಂಕ್ರಾಂತಿಯ ಸಮಯದಲ್ಲಿ "ಶಂಖಿನ ಗಾತ್ರದ ಚಳಿ ಹೋಗಿ, ಸಾಸಿವೆ ಗಾತ್ರದ ಸೆಖೆ ಹುಟ್ಟುತ್ತದೆಂಬ" ಮಾತಿದೆ. ಮೈ ಮರಗಟ್ಟಿಸುವ ಚಳಿಯಿಂದ ಹೊರಬಂದು, ಹೊಸ ಚೈತನ್ಯದಾಯಕವಾದ ಬೇಸಿಗೆಯತ್ತ ಸಾಗುವ ಕಾಲವಿದು. ಮರಗಿಡಗಳಲ್ಲಿ ಎಲೆ ಉದುರಿರುತ್ತವೆ. ಪ್ರಕೃತಿಯ ಮಡಿಲಲ್ಲಿಯ ಇಂಥ ಏರಿಳಿತಗಳಿಗೆ ಮಾನವನ ದೇಹ ಸ್ಪಂದಿಸುವುದಕ್ಕಾಗಿ ಸಂಕ್ರಾಂತಿಯಲ್ಲಿ ಬರುವ ಹಲವಾರು ಆಚರಣೆಗಳು ಮಹತ್ವ ಪಡೆದಿವೆ. ನೂರಾರು ವರ್ಷಗಳಿಂದ ರೂಢಿಸಿಕೊಂಡು ಬಂದ ಆರೋಗ್ಯಪರ ಜಾಣ್ಮೆ ಆಚರಣೆಗಳ ಮೂಲಕ ಸಾಗಿ ಬಂದಿವೆ. ಸರ್ವಶಕ್ತನಾದ ಸೂರ್ಯ ಚೈತನ್ಯದಾಯಕ, ಸಂಪತ್ತಿನ ಒಡೆಯ, ಕ್ಷೇಮಪರಿಪಾಲಕ, ಸಪ್ತದೇವತೆಗಳಲ್ಲಿ ಪ್ರಮುಖನು ಆಗಿರುವನು. ಸಕಲ ಸಮೃದ್ಧಿಯ ಮೂಲ ಸೂರ್ಯ, ಸೂರ್ಯನಿಲ್ಲದ ಸೃಷ್ಟಿ ಅಸಾಧ್ಯ ಎಂಬ ಜನಪದ ನಂಬಿಕೆಗಳ ಹಿನ್ನೆಲೆಯಲ್ಲಿ, ಆಚರಣೆಗಳಲ್ಲಿ ಸೂರ್ಯ ಆರಾಧನಾ ದೈವವಾಗಿದ್ದಾನೆ.

ಶಿಷ್ಟ ಹಾಗೂ ಜನಪದರ ಸಂಕ್ರಾಂತಿ ಆಚರಣೆಯಲ್ಲಿ ಸಾಕಷ್ಟು ಭಿನ್ನತೆಯಿದೆ. ನಗರ ಪ್ರದೇಶಗಳಲ್ಲಿ ಚಿಕ್ಕ ಮಕ್ಕಳನ್ನು ಹಸೆಯ ಮೇಲೆ ಕೂರಿಸಿ, ವಿವಿಧ ಹಣ್ಣುಗಳನ್ನು ಎರೆಯುತ್ತಾರೆ. ಜನಪದ ಆಚರಣೆಯಲ್ಲಿ ನೈಜತೆಯಿದೆ. ಯಾವುದೇ ಆಡಂಬರಗಳಿಲ್ಲ. ಜಾನುವಾರುಗಳ ರೋಗ ನಿವಾರಣೆ ಹಾಗೂ ಸಮೃದ್ಧಿ ಸಂಕೇತಿಸುವ ಹಾಗೂ ವರ್ಷವಿಡೀ ದುಡಿದು, ಬೆಳೆದ ಧಾನ್ಯಗಳ ಜೊತೆ ಸಂಭ್ರಮಿಸುವ ಆಚರಣೆಯಾಗಿದೆ. ಋತುಮಾನಕ್ಕೆ ತಕ್ಕಂತೆ ವಾತಾವರಣದ ವೈಪರೀತ್ಯಗಳ ಕಾರಣದಿಂದ ಸಮುದಾಯದ ಆರೋಗ್ಯದ ಮೇಲೆ ಆಗಬಹುದಾದ ಪರಿಣಾಮವನ್ನು ನಿಯಂತ್ರಿಸುವ ಆರೋಗ್ಯ ಪಾಲನೆಯ ತತ್ವಗಳು ಆಚರಣೆಯಲ್ಲಿ ಗುಪ್ತಗಾಮಿನಿಯಾಗಿ ಮುಂದುವರಿಯುತ್ತಿದೆ.

ಗಡಿಗೆ ಉಡಿ

ಹಗರಿಬೊಮ್ಮನಹಳ್ಳಿ ತಾಲೂಕಿನ ಬಾಚಿಗೊಂಡನಹಳ್ಳಿಯ ಸುತ್ತಮುತ್ತಲಿನ ಗ್ರಾಮಗಳಲ್ಲಿ ಸಂಕ್ರಾಂತಿ ಹಬ್ಬದಲ್ಲಿ ಗಡಿಗೆ ಉಡಿ ನೀಡುವ ಆಚರಣೆಯಿದೆ. ಹಬ್ಬದ ದಿನ ಕುಂಬಾರರ ಮನೆಯಿಂದ ಐದು ಗಡಿಗೆಗಳನ್ನು ತರುತ್ತಾರೆ. ರಂಗೋಲಿಯಿಂದ ಸಿಂಗರಿಸಿದ ಪ್ರತ್ಯೇಕ ಸ್ಥಳದಲ್ಲಿ ಅವನ್ನು ಪ್ರತಿಷ್ಠಾಪಿಸುತ್ತಾರೆ. ಕಬ್ಬು, ಬಾರೆಹಣ್ಣು, ಕಡ್ಲಿಗಿಡ, ಬಾಳೆಹಣ್ಣು, ಶೇಂಗ, ಬೆಲ್ಲ, ಎಳ್ಳು, ಕೊಬ್ರಿಯನ್ನು ಗಡಿಗೆಯಲ್ಲಿ ತುಂಬಿಸಿ ತಾಂಬೂಲದೊಂದಿಗೆ

ಉಡಿ ನೀಡುತ್ತಾರೆ. ತವರಿಗೆ ಆಗಮಿಸಿದ ಮುತ್ತೈದೆಯರು ಗಡಿಗೆ ಉಡಿಯೊಂದಿಗೆ ಮರಳುವ ಸಂಪ್ರದಾಯವಿದೆ. ಹಿಂದೆ ಮಾನವ ಒಂದೆಡೆ ನೆಲೆನಿಂತಾಗ, ಆಹಾರ ಸಂರಕ್ಷಣೆ ಪ್ರಮುಖವಾದುದಾಗಿತ್ತು. ಅದಕ್ಕಾಗಿ ಮಣ್ಣಿನ ಮಡಿಕೆಗಳು ಬಳಸಲ್ಪಡುತ್ತಿದ್ದವು. ಇಲ್ಲಿ ಫಲಸಮೃದ್ಧಿಯ ಪ್ರತೀಕವಾದ ಪದಾರ್ಥಗಳು ಗಡಿಗೆ ಉಡಿಯ ರೂಪದಲ್ಲಿ ವಿನಿಮಯವಾಗುತ್ತವೆ. ಅಲ್ಲದೆ ಪೂಜಿಸಿದ ಗಡಿಗೆಯೆಂಬ ಭಾವನೆಯಿಂದ, ವರ್ಷಪೂರ್ತಿ ಗಡಿಗೆಯಲ್ಲಿ ಅಡುಗೆ ಮಾಡುತ್ತಾರೆ. ಗಡಿಗೆಯಲ್ಲಿ ತಯಾರಿಸಿದ ಅಡುಗೆ ರುಚಿಕರವಾದದ್ದು ಹಾಗೂ ಆರೋಗ್ಯಕ್ಕೆ ಪೂರಕವಾದುದಾಗಿದೆ. ಇತ್ತೀಚೆಗೆ ತಣ್ಣೀರಿನ ಗಡಿಗೆಗಳು ಹೆಚ್ಚಾಗಿ ಬಳಸಲ್ಪಡುತ್ತಿವೆ. ಸ್ಟೀಲ್, ಅಲ್ಯುಮಿನಿಯಂ ಸ್ಥಳವನ್ನು ಪುನಃ ತಾಮ್ರ, ಕಂಚು ಆಕ್ರಮಿಸಿವೆ. ಈಗಿನ ಆಧುನಿಕ ಯುಗದಲ್ಲೂ, ತಾಮ್ರ, ಕಂಚು, ಮಣ್ಣಿನ ವಸ್ತುಗಳಿಗೆ ಆಚರಣೆಗಳಲ್ಲಿ ಪ್ರಾಶಸ್ತ್ಯವಿದೆ. ಕಾರಣ ಅವುಗಳಲ್ಲಿ ರಾಸಾಯನಿಕವಿಲ್ಲವೆಂಬುದನ್ನು ಅರಿತಿದ್ದಾರೆ. ಹೀಗೆ ಜನಪದರು ಹಿಂದಿನಿಂದ ರೂಢಿಸಿಕೊಂಡು ಬಂದ ಪದ್ಧತಿಗಳಿಗೆ ನಾವಿಂದು ಮೊರೆಹೋಗುತ್ತಿದ್ದೇವೆ.

ಭೌಗೋಳಿಕ ಪರಿಸರ, ವಾಯುಗುಣ, ನೆಲ, ಜಲಗಳಲ್ಲಿ ಪ್ರಾದೇಶಿಕ ಭಿನ್ನತೆಗಳಿವೆ. ಆದಕಾರಣ ಸಸ್ಯ ಉತ್ಪನ್ನಗಳಲ್ಲಿ ವ್ಯತ್ಯಾಸವಿರುತ್ತದೆ. ಮಾನವನ ದೈಹಿಕ ಪೋಷಣೆಗೆ, ಬೆಳವಣಿಗೆಗೆ, ವಿವಿಧ ಜೈವಿಕ ಕ್ರಿಯೆಗಳಿಗೆ, ಎಲ್ಲಾ ರೀತಿಯ ಪೌಷ್ಠಿಕಾಂಶಗಳ ಅಗತ್ಯತೆಯಿದೆ. ಜಗತ್ತಿನ ಸಮಸ್ತ ಜೀವರಾಶಿಗಳ ಅಳಿವು, ಉಳಿವು ಆಹಾರದ ಮೇಲೆ ಅವಲಂಬನೆಯಾಗಿದೆ. ಇಂಥ ಪ್ರಮುಖ ಅಂಶಗಳ ಹಿನ್ನೆಲೆಯಲ್ಲಿ ತವರು ಹಾಗೂ ಗಂಡನ ಮನೆಯವರ ಉಡಿ ವಿನಿಮಯದ ಮೂಲಕ ಊರಿಂದೂರಿಗೆ ಹೊಸ ಧಾನ್ಯಗಳ ವಿನಿಮಯ ಮಾಡುವ ತಂತ್ರಗಾರಿಕೆ ಜನಪದರದ್ದು. ಬೀಗರ ಮಧ್ಯೆ ಕೊಡು-ಕೊಳ್ಳುವ ಕ್ರಿಯೆಗಳು ಆಚರಣೆಯ ಮೂಲಕ ನಡೆಯುತ್ತವೆ. ಪರಸ್ಪರ ಸ್ನೇಹ, ಸೌಹಾರ್ದತೆ(ಸಹೃದಯತೆ) ಉಂಟಾಗುವುದಲ್ಲದೆ, ಉತ್ತಮ ತಳಿಯ ಬೀಜಗಳ ರವಾನೆ ಹಾಗೂ ಹಂಚಿ ಉಣ್ಣುವ ಗುಣಗಳು ಕಂಡುಬರುತ್ತವೆ. ನಿಸರ್ಗದ ಮಡಿಲಲ್ಲಿ ಬೆಳೆದ ಸಸ್ಯ ಉತ್ಪನ್ನಗಳು, ಜನಪದರಿಗೆ ಅಮೂಲ್ಯ ವಸ್ತುಗಳಾಗಿವೆ. ಅವು ತಮ್ಮಲ್ಲಿರುವ ಜೀವಪೋಷಕ ಅಂಶಗಳಿಂದ ಆಚರಣೆಗಳಲ್ಲಿ ಅಗ್ರಸ್ಥಾನ ಪಡೆದಿವೆ. ಸಸ್ಯ ಉತ್ಪನ್ನಗಳ ವಿನಿಮಯದೊಂದಿಗೆ ಮಾನವನ ಸಂಬಂಧ ಬೆಸೆಯುವಿಕೆಯನ್ನು ಆಚರಣೆಯಲ್ಲಿ ಕಾಣುತ್ತೇವೆ.

೪.೧.೨. ಬೆದರುಗೊಂಬೆ(ಬೆಚ್ಚು)

ರೈತನ ಬೆಳೆಗೆ ರಕ್ಷಾಕವಚವಾಗಿ, ಪೈರಿಗೆ ದೃಷ್ಟಿ ತಾಗದಿರಲೆಂದು ಬೆದರು ಅಥವಾ ಬೆಚ್ಚು ನಿಲ್ಲಿಸುವ ಆಚರಣೆಯಿದೆ. ಜೋಕುಮಾರನ ಹಬ್ಬ ಹಾಗೂ ಸಂಕ್ರಾಂತಿ ಹಬ್ಬದ ಸಮಯದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಚರಗ ಚೆಲ್ಲಿ, ಬೆಚ್ಚುಗಳನ್ನು ವಿಧಿವತ್ತಾಗಿ ನಿಲ್ಲಿಸುತ್ತಾರೆ. ಬೆಚ್ಚು, ಬೆದರು ಶಬ್ದಗಳೇ ಸೂಚಿಸುವಂತೆ ಪಶು, ಪಕ್ಷಿಗಳನ್ನು, ಕಳ್ಳರನ್ನು ಹೆದರಿಸಲು, ಭಯಪಡಿಸಲು, ಅಂಜಿಕೆ ಹುಟ್ಟಿಸಲು ಮಾಡಿದ ಅತಿಮಾನುಷಾಕೃತಿಯನ್ನು ಬೆದರುಗೊಂಬೆಗಳೆಂದು ಕರೆಯುತ್ತಾರೆ.

ಬೆಚ್ಚು ನಿಲ್ಲಿಸುವ ಪದ್ಧತಿ ಬಹಳ ಹಿಂದಿನಿಂದಲೇ ಇರುವಂತೆ ಕಾಣುತ್ತದೆ. ಜನ್ನ ಕವಿ ತನ್ನ ಯಶೋಧರ ಚರಿತೆಯಲ್ಲಿ "ಪಾಪದ ಜೋಳದ ಬೆಳಸಿಂಗೆ ಬೆಚ್ಚುಗಟ್ಟಿದ ತೆರೆದಿಂದ" ಎಂಬ ಪದ ಪ್ರಯೋಗಿಸಿದ್ದಾನೆ. ಋಗ್ವೇದ ಕಾಲದಲ್ಲೂ ಜೋಳದ ಜಮೀನಿನಿಂದ ಹಕ್ಕಿಗಳನ್ನು ದೂರವಿರಿಸಲು ಬೆದರುಗೊಂಬೆಗಳನ್ನು ನಿಲ್ಲಿಸಲಾಗುತ್ತಿತ್ತು ಎಂದು ತಿಳಿದು ಬರುತ್ತದೆ".[೩]

ಗದ್ದೆಗಳಲ್ಲಿ ದೃಷ್ಟಿ ನಿವಾರಣೆಗಾಗಿ ಒಣ ಹುಲ್ಲಿನಿಂದ ಮಾನವ ಅಥವಾ ಪ್ರಾಣಿಯ ಆಕೃತಿಯನ್ನು ಮಾಡಿ, ಅದಕ್ಕೆ ಹಳೆಯ ಅಂಗಿ ತೊಡಿಸಿ, ಸುಣ್ಣದ ಬೊಟ್ಟುಗಳನ್ನಿಟ್ಟ ಮಡಿಕೆಯನ್ನು ಬೋರಲು ಹಾಕುತ್ತಾರೆ. ಹೊಲಗಳಿಗೆ ಕಟ್ಟಿಗೆಯಿಂದ ಮಾಡಿದ ಶಿಲುಬೆಯಾಕೃತಿಗೆ ಸುಣ್ಣಬಳಿದ ಗಡಿಗೆಯನ್ನು ಬೋರಲು ಹಾಕಿ, ಕಣ್ಣು, ಕಿವಿ, ಬಾಯಿ ಬರೆದು, ಅಂಗಿ ಹಾಕುತ್ತಾರೆ. ಅದು ಗಾಳಿಗೆ ಅಲುಗಿದಾಗ ಮನುಷ್ಯನೆಂದು ಭ್ರಮಿಸಿ ಪ್ರಾಣಿಗಳು ಭಯಪಡುತ್ತವೆ. ಬಿಳಿ ಬಣ್ಣವು ಬೇಗನೆ ಕಣ್ಣಿಗೆ ಗೋಚರಿಸಿ ಹೆದರಿಕೆ ಹುಟ್ಟಿಸುತ್ತದೆ.

ಮೆಣಸಿನಕಾಯಿ, ಸೌತೆಕಾಯಿ, ಹಲಸಂದೆ ಬಳ್ಳಿ, ಟೊಮೇಟೊಗಿಡಗಳಿರುವ ಹೊಲಗಳಲ್ಲಿ ಶಾಶ್ವತವಾದ ಬೆಚ್ಚು ನಿಲ್ಲಿಸುವ ಪದ್ಧತಿ ಇದೆ. ಹಲವಾರು ಗಡಿಗೆಗಳಿಗೆ ಸುಣ್ಣ ಬಳಿದು ಅಲ್ಲಲ್ಲಿ ಕೋಲಿಗೆ ಬೋರಲು ಹಾಕುತ್ತಾರೆ. ಪಶುಪಕ್ಷಿಗಳ ರಕ್ಷಣೆಯ ಜೊತೆ ಸುಣ್ಣ ಕ್ರಿಮಿನಾಶಕ ವಸ್ತುವಾಗಿದೆ. ಆದ್ದರಿಂದ ಕಾಯಿಗಳಿಗೆ ಕ್ರಿಮಿಬಾಧೆಯಾಗದೆಂಬ ಮೂಲ ಉದ್ದೇಶ ಆಚರಣೆಯದ್ದಾಗಿದೆ. ಅಡಿಕೆ, ಬಾಳೆ, ತೆಂಗಿನ ತೋಟಗಳಲ್ಲಿ ಆಳೆತ್ತರದ ಮನುಷ್ಯನ ಆಕೃತಿಯ ಬೆಚ್ಚುಗಳನ್ನು ನಿಲ್ಲಿಸುತ್ತಾರೆ.

ಈ ಆಚರಣೆಯ ಒಡಲೊಳಗೆ ಪ್ರಾಣಿಗಳನ್ನು ಹೆದರಿಸುವ ತಂತ್ರಜ್ಞಾನವಿದೆ. ಹಗಲಿನಲ್ಲಿ ಕಾಳು ತಿನ್ನಲು ರಾತ್ರಿ ಇಲಿಗಳನ್ನು ಬೇಟೆಯಾಡಲು ಬರುವ ಗೂಬೆ, ನಿಶಾಚರಗಳಂತಹ ಪಕ್ಷಿಗಳಿಗೆ ಆಸರೆಯಾಗಿರುತ್ತದೆ. ಇದು ಹಗಲು, ಇರುಳು, ಕೀಟ ನಿಯಂತ್ರಣದ ಆಸರೆ ತಾಣವಾಗಿ, ರೈತನ ಬೆಳೆಗೆ ರಕ್ಷಾಕವಚವಾಗಿದೆ. ಕೆಟ್ಟ ಕಣ್ಣಿನ ದೃಷ್ಟಿಯನ್ನು ನಿಗ್ರಹಿಸಿ ಬೆಳೆಗೆ ಅತಿಮಾನುಷ ರಕ್ಷಣೆ ನೀಡುತ್ತವೆ.

ಇತ್ತೀಚೆಗೆ ನಗರ ಪ್ರದೇಶಗಳಲ್ಲಿ ವಿಶಿಷ್ಟ ರೀತಿಯ ಬೆದರುಗೊಂಬೆಗಳು ಕಂಡುಬರುತ್ತವೆ. ಅಪೂರ್ಣ ಕಟ್ಟಡಕ್ಕೆ ನಿಲ್ಲಿಸುವ ಬೆದರುಬೊಂಬೆಗಳು ಮಾಯಾ, ಮಂತ್ರ, ಭಾನಾಮತಿಯ ಭ್ರಮೆ ಹುಟ್ಟಿಸುವಂತಿರುತ್ತವೆ. ಕಟ್ಟಡ ನಿರ್ಮಾಣದ ಕಚ್ಚಾವಸ್ತುಗಳನ್ನು ಕದಿಯದಿರಲೆಂಬ ತಂತ್ರಗಾರಿಕೆ ಇದಾಗಿರಬೇಕು. ಆದರೆ ಇದು ಜನಪದ ಮೂಲದ ಬೆದರು, ಬೆಚ್ಚಿನ ಮುಂದುವರೆದ ಭಾಗವೆಂಬುದನ್ನು ಮರೆಯುವಂತಿಲ್ಲ.

೪.೧.೩. ಸಸ್ಯಮೂಲ ಚರಗ ಚೆಲ್ಲುವ ಆಚರಣೆ

ಹೊಲಗಳಲ್ಲಿ ಪೈರು ಬೆಳೆದಾಗ ರೈತರು ಭೂಮಿತಾಯಿಗೆ ನೈವೇದ್ಯವೆಂದು ಹೊಲಗದ್ದೆಗಳಲ್ಲಿ ಚೆಲ್ಲುವ ಆಹಾರ ಪದಾರ್ಥವೇ ಚರಗ. ಸಸ್ಯಮೂಲ ಚರಗ ಮತ್ತು ರಕ್ತ ಚರಗವೆಂಬ ಎರಡು ವಿಧಗಳಿವೆ. ರಕ್ತ ಚರಗ ಪ್ರಾಣಿ ಬಲಿಯಾಗಿದ್ದು, ಅಮ್ಮನ ಹಬ್ಬಗಳಲ್ಲಿ ಊರಿನ ಹುಲುಸನ್ನು ಕಾಪಾಡುವುದಾಗಿದೆ. ಹಿರಿಯ ಸಂಶೋಧಕರಾದ ಡಾ. ಚಿದಾನಂದಮೂರ್ತಿಯವರ ಅಭಿಪ್ರಾಯದಂತೆ, ಪ್ರಾಕ್ತಾನ ಮಾನವನ ಬಲಿಯ ಸಂಕೇತ. ಚರಗದ ಹಿಂದೆ ಇರುವ ಇನ್ನೊಂದು ಅರ್ಥದ ಪ್ರಕಾರ "ಆರ್ಯ ದೇವತೆಗಳೆಲ್ಲಾ ಅಂತರಿಕ್ಷ ದೇವತೆಗಳು. ಅಗ್ನಿ ಧೂಮದ ಮೂಲಕ ಹವಿಸ್ಸನ್ನು ಅವರಿಗೆ ತಲುಪಿಸುತ್ತಾರೆ. ದ್ರಾವಿಡ ದೇವತೆಗಳು ಹೂಳುವಿಕೆ ಮತ್ತು ರಕ್ತ ಚೆಲ್ಲುವ ಕ್ರಿಯೆಯ ಮೂಲಕ ಭೂದೇವಿಯನ್ನು ಸಂತೃಪ್ತಗೊಳಿಸುತ್ತಾರೆ"(ಉದ್ಧೃತ:ಡಾ. ವೀರೇಶ ಬಡಿಗೇರ, ೨೦೦೯, ಪು. ೬೯).

ಋತುಮಾನಕ್ಕೆ ಅನುಗುಣವಾಗಿ ಬೆಳೆಗಳ ಬೆಳವಣಿಗೆಯ ಹಂತ ಹಂತಗಳಲ್ಲಿ ಬರುವ ಹುಣ್ಣಿಮೆ, ಅಮವಾಸ್ಯೆಗಳಲ್ಲಿ ಚರಗದ ಆಚರಣೆ ನೆರವೇರುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚಾಗಿ ಜೋಕುಮಾರನ ಹಬ್ಬ,

ಸಂಕ್ರಾಂತಿ, ಎಳ್ಳಮವಾಸ್ಯೆ ಹಾಗೂ ರಾಶಿ ಪೂಜೆಗಳಲ್ಲಿ ಚರಗ ಚೆಲ್ಲುವ ಸಂಪ್ರದಾಯವಿದೆ. ಜೋಕುಮಾರನ ಹಬ್ಬದಲ್ಲಿ ಎರಡು ತಿಂಗಳ ಬೆಳೆಯಿರುವ ಹಂತವಾದ್ದರಿಂದ ಕೀಟಗಳು ಬಾಲ್ಯಾವಸ್ಥೆಯ ಹಂತದಲ್ಲಿರುತ್ತವೆ. ಜೋಕುಮಾರನ ಕಪ್ಪನ್ನು ಸೇರಿಸಿ ಅಳ್ಳಂಬಲಿ ಮಾಡಿ ಹೊಲದಲ್ಲಿ ಚರಗ ಚೆಲ್ಲುವ ಸಂಪ್ರದಾಯವಿದೆ. ಈ ಉಪಾಯವು ಕೀಟಗಳತ್ತ ಪಕ್ಷಿಗಳನ್ನು ಆಕರ್ಷಿಸಿ ತಿನ್ನುವಂತೆ ಮಾಡುವ ಜೈವಿಕ ಕೀಟ ಹತೋಟಿ ವಿಧಾನವೂ ಹೌದು.

ಬಸಿರುಡುಗೆ ತೊಡಿಸುವುದು

ಎಳ್ಳಮವಾಸ್ಯೆ ಚರಗವು ಮುಂಗಾರು ಬೆಳೆ ಕಟಾವು, ಹಿಂಗಾರು ಬೆಳೆ ಬಿತ್ತನೆ, ಏಕಕಾಲದಲ್ಲಿ ನಡೆಯುವ ಸಂಕೀರ್ಣ ಸಮಯದಲ್ಲಿ ನೆರವೇರುವ ಆಚರಣೆಯಾಗಿದೆ. ಆ ದಿನ ಬಂಡಿ ತೊಳೆದು, ಚಕ್ರಕ್ಕೆ ಕೀಲೆಣ್ಣೆ ಹಾಕಿ ಎತ್ತುಗಳಿಗೆ ಮೈ ತೊಳೆದು, ಕೋಡುಗಳಿಗೆ ಬಣ್ಣ ಹಚ್ಚಿ, ಹಣೆಗೆಜ್ಜೆ, ಕೊರಳ ಗಂಟೆ, ಜೂಲು ಹಾಕಿ ಎತ್ತು ಗಾಡಿಗಳನ್ನು ಅಲಂಕರಿಸುತ್ತಾರೆ. ಹೆಣ್ಣುಮಕ್ಕಳು ಹೊಸಬಟ್ಟೆ ತೊಟ್ಟು ಎಳ್ಳಿನ ಅಡುಗೆಯೊಂದಿಗೆ ಎತ್ತಿನ ಬಂಡಿಗಳಲ್ಲಿ ಹೊಲಕ್ಕೆ ಹೋಗುತ್ತಾರೆ. ಬನ್ನಿ ಗಿಡದ ಕೆಳಗೆ ಐದು ಗುಂಡು ಕಲ್ಲುಗಳನ್ನು ಪ್ರತಿಷ್ಠಾಪಿಸಿ 'ಭರಮದೇವ'ರೆಂದು ಪೂಜಿಸುತ್ತಾರೆ. ಕಲ್ಲುಗಳು ಕುಂತಿಯ ಪುತ್ರರಾದ ಪಾಂಡವರ ಪ್ರತೀಕ, ಹೊಲದ ಬೆಳೆಗೆ ಅರಿಶಿಣ, ಕುಂಕುಮ, ಸೀರೆ, ಕುಪ್ಪಸ, ಬಳೆ ತೊಡಿಸಿ, ಆರತಿ ಬೆಳಗಿ ಉಡಿ ತುಂಬುತ್ತಾರೆ. ಈ ರೀತಿಯಾಗಿ ಬಸಿರುಡುಗೆ ತೊಡಿಸಿ ಭೂದೇವಿಗೆ "ಸೀಮಂತದ ಊಟ" ಉಣಿಸುತ್ತಾರೆ. ಸಿರುಗುಪ್ಪ ತಾಲೂಕಿನ ತೆಕ್ಕಲಕೋಟೆ ಸುತ್ತಲಿನ ಗ್ರಾಮಗಳಲ್ಲಿ ಹೊಸ ಮದುಮಕ್ಕಳು ವಿಶೇಷವಾಗಿ ಭಾಗವಹಿಸುವುದು ಕ್ಷೇತ್ರಕಾರ್ಯದಿಂದ ಕಂಡುಬಂದಿದೆ. ರೈತರು ನಸುಕಿನಲ್ಲಿ ಯಾರೊಂದಿಗೂ ಮಾತನಾಡದೇ, ಅಂಬಲಿಗಡಿಗೆಯನ್ನು ಹೊಲಕ್ಕೆ ತರುತ್ತಾರೆ. ಜೋಳ, ಅವರೆ, ಅಕ್ಕಿಯಿಂದ ತಯಾರಿಸಿದ ಕಿಚಡಿಯನ್ನು ಚರಗ ರೂಪದಲ್ಲಿ ಚೆಲ್ಲುತ್ತಾರೆ.

ಜನಪದರ ಪ್ರಕಾರ ಎಳ್ಳಮವಾಸ್ಯೆಯಿಂದ ಚಳಿ ಎಳ್ಳುಕಾಳಿನಷ್ಟು ಪ್ರಮಾಣದಲ್ಲಿ ಕಡಿಮೆಯಾಗಿ, ಅಷ್ಟೇ ಪ್ರಮಾಣದ ಬಿಸಿಲು ಪ್ರಾರಂಭವಾಗುವ ಸಮಯ. ಈ ದಿನಗಳಲ್ಲಿ ಎಳ್ಳುಕಾಳಿನಷ್ಟು ಹೊಟ್ಟೆ ಹಿಗ್ಗುವುದು. ಹೆಚ್ಚು ಊಟ ಮಾಡಿದರೂ ಹೊಟ್ಟೆ ಕೆಡುವುದಿಲ್ಲ ಎಂಬ ನಂಬಿಕೆಯಿದೆ. ಈ ಉದ್ದೇಶದಿಂದಲೇ ಹಬ್ಬದ ಆಚರಣೆಯ ನೆಪದಲ್ಲಿ ವಿಶೇಷ ಅಡುಗೆ ತಯಾರಿಸಿ, ಬಂಧುಗಳೊಂದಿಗೆ ಹೊಲದಲ್ಲಿ ಊಟ ಮಾಡುತ್ತಾರೆ.

ಎಳ್ಳಮವಾಸ್ಯೆ ಹಬ್ಬವು ಇಂದು ನಗರಗಳಿಗೂ ವ್ಯಾಪಿಸಿದೆ. ಪ್ರೇಕ್ಷಣೀಯ ಸ್ಥಳಗಳಿಗೆ, ಉದ್ಯಾನವನಗಳಿಗೆ ತೆರಳಿ, ಬಂಧುಮಿತ್ರರೊಂದಿಗೆ ಸಾಮೂಹಿಕ ಭೋಜನ ಮಾಡುವ ಪರಿಪಾಠ ಬೆಳೆಯುತ್ತಿದೆ. ಹಂಪಿಯಲ್ಲಿ ಎಳ್ಳಮವಾಸ್ಯೆ ಪ್ರಯುಕ್ತ ತುಂಗಭದ್ರಾ ನದಿಯಲ್ಲಿ ಸ್ನಾನ ಮಾಡಿ, ಬಳಿಕ ವಿರೂಪಾಕ್ಷೇಶ್ವರನಿಗೆ ವಿಶೇಷ ಪೂಜೆ ಸಲ್ಲಿಸುತ್ತಾರೆ.

ರಾಶಿಬುತ್ತಿ ರೈತನ ಕೊನೆಯ ಚರಗ. ಭೂದೇವಿಗೆ ಎಡೆ ಹಿಡಿಯುವ ಕೊನೆಯ ಪ್ರಕ್ರಿಯೆ ಇದಾಗಿದೆ. ಸಂಡೂರು ತಾಲೂಕಿನ ಸುಶೀಲಾನಗರದ ಸುತ್ತಲಿನ ಗ್ರಾಮಗಳಲ್ಲಿ ಸಜ್ಜೆ ಕಡುಬಿನಿಂದ ದೊಡ್ಡದಾದ ಉಂಡೆ ತಯಾರಿಸಿ, ಧಾನ್ಯ ರಾಶಿ ಪೂಜಿಸಿ, ಚರಗ ಚೆಲ್ಲಿ, ಸಾಮೂಹಿಕ ಭೋಜನ ಮಾಡುತ್ತಾರೆ.

ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ, ಹಡಗಲಿ, ಹೊಸಪೇಟೆ ತಾಲೂಕುಗಳಲ್ಲಿ ಎಲೆತೋಟಗಳಿಗೆ ಕರಿಸಿಬ್ಬು, ಬಿಳಿಸಿಬ್ಬು ರೋಗ ಬಂದರೆ ಔಷಧಿ ಸಿಂಪಡಿಸಬಾರದೆಂಬ ನಿಷೇಧವಿದೆ. ಎಲೆತೋಟ ದೈವೀ ಸ್ವರೂಪ ಎಂಬ

ಭಾವನೆಯೇ ಇದಕ್ಕೆ ಕಾರಣ. ಈ ಭಾಗಗಳಲ್ಲಿ ಅಮಾವಾಸ್ಯೆ, ಹುಣ್ಣಿಮೆಗೊಮ್ಮೆ ಅಡುಗೆಯನ್ನು ನೀರಲ್ಲಿ ಬೆರೆಸಿ ಚರಗ ಚೆಲ್ಲುವ ಪದ್ಧತಿ ಪ್ರಚಲಿತದಲ್ಲಿದೆ. ಚರಗದ ಮೂಲಕ ಕೀಟ ನಿವಾರಣೆ ಮಾಡುವ ಸರಳ ವಿಧಾನ ಇದಾಗಿದೆ. ಚರಗದೊಳಗಿನ ಆಹಾರ ಪದಾರ್ಥಗಳು ಬೆಳೆಗಳ ಮೇಲೆ ಬಿದ್ದಾಗ, ಆಹಾರದ ಚೂರನ್ನು ತಿನ್ನಲು ಬಂದ ಪಕ್ಷಿಗಳು ಅಲ್ಲಿರುವ ಹುಳುಗಳನ್ನು ಆಯ್ದು ತಿನ್ನಲು ಪ್ರಾರಂಭಿಸುತ್ತವೆ. ಹೊಲಗಳಲ್ಲಿ ಚೆಲ್ಲುವ ಸಸ್ಯಾಹಾರಿ ಚರಗ ರೈತನ ಬದುಕಿನ ಹುಲುಸನ್ನು ರಕ್ಷಿಸುತ್ತದೆ. ಚರಗ ಚೆಲ್ಲುವ ಸಮಯದಲ್ಲಿ ಕೂಗುವ 'ಹೋಲಿಗ್ಯಾ' ಎಂಬುದು ರೈತನಿಗೆ ಮಂತ್ರ ಶಕ್ತಿಯ ಪದವಿದ್ದಂತೆ. ಎಲ್ಲಿಯವರೆಗೆ ಈ ಕೂಗು ಕೇಳಿಸುತ್ತದೆಯೋ, ಅಷ್ಟು ವ್ಯಾಪ್ತಿಯವರೆಗೆ ಬೆಳೆಗಳು ಸಮೃದ್ಧವಾಗಿರುತ್ತವೆ ಎಂಬ ನಂಬಿಕೆಯಿದೆ.

ಇಂದು ಕ್ರಿಮಿನಾಶಕ, ರಸಗೊಬ್ಬರಗಳ ಬಳಕೆಯಿಂದ ಮಣ್ಣಿನಲ್ಲಿ ಎರೆಹುಳುಗಳ ಸಂಖ್ಯೆ ಕಡಿಮೆಯಾಗಿ, ಭೂಮಿ ಫಲವತ್ತತೆ ಕಡಿಮೆಯಾಗುತ್ತಿದೆ. ತೆನೆ ಬಂದ ಸಂದರ್ಭದಲ್ಲಿ ತೆನೆ ತಿನ್ನುವ ಹಕ್ಕಿಗಳನ್ನು ಕವಣೆ ಕಲ್ಲಿನಿಂದ ಓಡಿಸುತ್ತಾರೆ. ಹಕ್ಕಿಗಳು ತಿನ್ನುವ ಧಾನ್ಯ ಅಲ್ಪಪ್ರಮಾಣ. ಅವು ಹೆಚ್ಚಾಗಿ ಕ್ರಿಮಿ-ಕೀಟಗಳನ್ನು ತಿಂದು ಬದುಕುತ್ತವೆ. ಆದರೆ ಹಕ್ಕಿಗಳ ನಾಶದಿಂದ ಕೀಟಗಳ ವೃದ್ಧಿಯಾಗುತ್ತದೆ. ಇಂದು ರಾಸಾಯನಿಕ ವಸ್ತುಗಳ ವಿಷಪೂರಿತ ವಾಸನೆಯಿಂದ ಪಕ್ಷಿಗಳು ಹೊಲದ ಕಡೆ ಆಕರ್ಷಿತವಾಗುತ್ತಿಲ್ಲ. ಉಪಕಾರಿ, ಅಪಕಾರಿ ಕೀಟಗಳೆರಡೂ ಹೊಲಗಳಲ್ಲಿ ಇರುತ್ತವೆ. ಉಪಕಾರಿ ಕೀಟಗಳು, ಅಪಕಾರಿ ಕೀಟಗಳನ್ನು ತಿಂದು ಬೆಳೆಗಳನ್ನು ರಕ್ಷಿಸುವ ಜೈವಿಕ ಕೀಟ ಹತೋಟಿ ಕ್ರಮ ಆಚರಣೆಯಲ್ಲಿದೆ. ಇಂದು ಅಪಕಾರಿ ಕೀಟ ನಿವಾರಣೆಗೆ ಬಳಸುವ ಕೀಟನಾಶಕಗಳು, ಉಪಕಾರಿ ಕೀಟಗಳ ನಾಶಕ್ಕೂ ಕಾರಣವಾಗುತ್ತಿವೆ.

ವಕ್ತೃಗಳ ಹೇಳಿಕೆಯ ಪ್ರಕಾರ ಈಗಿನ ಬೆಳೆಗಳಿಗಿಂತ ಹಿಂದೆ ರೋಗದ ಪ್ರಮಾಣ ಕಡಿಮೆ ಇತ್ತೆಂದು, ಎಂತಹ ಕ್ರಿಮಿನಾಶಕ ಸಿಂಪಡಿಸಿದರೂ, ಕಡಿಮೆಯಾಗದ ಕೆಲವು ರೋಗಗಳು ಚರಗದಿಂದ ನಿವಾರಣೆಯಾಗುವವು ಎಂಬುದಾಗಿದೆ. ಬೆಳೆಗಳಿಗೆ ಕೀಟ ವಂಶವೃದ್ಧಿಯಾಗುವ ಸಮಯದಲ್ಲಿ ಹಂತಹಂತವಾಗಿ ಚರಗ ಚೆಲ್ಲುವ ಸಂಪ್ರದಾಯ ವೈಜ್ಞಾನಿಕ ಕ್ರಮವಾಗಿದೆ. ಬೆಳೆಗಳಿಗೆ ಬರುವ ರೋಗಗಳನ್ನು ರೈತರು ಆಚರಣೆಯ ಮೂಲಕ ಪರಿಹರಿಸಿಕೊಳ್ಳುವ ಜೈವಿಕ ಕೀಟ ಹತೋಟಿ ವಿಧಾನ ಇದಾಗಿದೆ.

೪.೧.೪. ಜುಂಜಪ್ಪನ ತೋಪಿನ ಆಚರಣೆ

ಪಶುಪಾಲನಾ ಸಂಸ್ಕೃತಿಯನ್ನು ರೂಢಿಸಿಕೊಂಡ ಸಂದರ್ಭದಲ್ಲಿ ಬುಡಕಟ್ಟು ಜನರು ತಮ್ಮ ಪಶುಸಂಪತ್ತಿಗೆ ಆಸರೆಯಾದ ಗುಡ್ಡ, ಬೆಟ್ಟ, ಪರ್ವತಗಳ ಬಗ್ಗೆ ಭಯ, ಭಕ್ತಿ ಬೆಳೆಸಿಕೊಂಡಿದ್ದರು. ಕಾಲಾನಂತರ ಅಲ್ಲಿರುವ ಗಿಡ, ಮರಗಳನ್ನು ದೈವವೆಂದು ಪೂಜಿಸಿದರು. ಇಂಥ ದೈವಾರಾಧನೆ ಕೂಡ್ಲಿಗಿ ಸಮೀಪದ ಅರಣ್ಯ ಮಧ್ಯದಲ್ಲಿ ನೆರವೇರುತ್ತದೆ. ಬಳ್ಳಾರಿ ಹಾಗೂ ಚಿತ್ರದುರ್ಗ ಜಿಲ್ಲೆಯ ಕಾಡುಗೊಲ್ಲ ಸಮುದಾಯದವರು ಮೂರನೇ ಶ್ರಾವಣ ಸೋಮವಾರ ಪಾಲ್ಗೊಳ್ಳುವ ಆಚರಣೆ ಇದು. ತಲೆಯ ಮೇಲೆ ಕಂಬಳಿ ಹಾಕಿಕೊಂಡು, ಮಣ್ಣಿನ ಹೊಸ ಕುಂಬಗಳಲ್ಲಿ ಮೀಸಲು ಹಾಲು, ತುಪ್ಪ, ಮೊಸರನ್ನು ಹೊತ್ತು ಕಾಲುನಡಿಗೆಯಲ್ಲಿ ಗುಂಪು ಗುಂಪಾಗಿ ಬರುತ್ತಾರೆ. ಕುಂಭ ಹೊರುವವರು ಉಪವಾಸವಿದ್ದು ಬರಿಗಾಲಿನಿಂದ ನಡೆಯುತ್ತಾರೆ. ಕುಂಭದಲ್ಲಿರುವ ಮೀಸಲನ್ನು ಅಲ್ಲಿರುವ ಶಿಲಾರೂಪಿ ಬಸವಣ್ಣನಿಗೆ ಎರೆಯುತ್ತಾರೆ. ಇಲ್ಲಿ ಬಿಲ್ವಪತ್ರೆ ಮರಗಳು ದೇವರೆಂದು ಪೂಜಿಸಲ್ಪಡುತ್ತವೆ.

ರಾತ್ರಿಯೆಲ್ಲಾ ಭಜನೆ, ದೇವರ ಸ್ತುತಿ ಕಾರ್ಯಕ್ರಮಗಳು ನೆರವೇರುತ್ತವೆ. ತಾವು ತಂದ ದವಸದಿಂದ ಅಡುಗೆ ತಯಾರಿಸಿ, ದೇವರಿಗೆ ನೈವೇದ್ಯ ಮಾಡಿ ಸಾಮೂಹಿಕ ಭೋಜನ ಮಾಡುತ್ತಾರೆ.

ಪಶುಪಾಲಕ ಸಂಸ್ಕೃತಿಯವರಾದ ಕಾಡುಗೊಲ್ಲರ ನೆಲೆ ಚಿತ್ರದುರ್ಗ ಜಿಲ್ಲೆ. ಇದು ಭೌಗೋಳಿಕವಾಗಿ ಬಳ್ಳಾರಿ ಜಿಲ್ಲೆಯಿಂದ ಬೇರ್ಪಟ್ಟಿದೆ. ಆದರೂ ಕಾಡುಗೊಲ್ಲರ ಆಚರಣೆಗಳಲ್ಲಿ ಎರಡು ಜಿಲ್ಲೆಗಳಲ್ಲಿ ಸಾಮ್ಯತೆಯಿದೆ. ಕಾಡುಗೊಲ್ಲರ ಸಾಂಸ್ಕೃತಿಕ ವೀರ ಜುಂಜಪ್ಪ. ಆದಕಾರಣ ಸಾವಿರಾರು ಬಿಲ್ವಪತ್ರೆ ಮರಗಳಿರುವ ಈ ಸ್ಥಳವು ಜುಂಜಪ್ಪನ ತೋಪು ಎಂಬ ಹೆಸರು ಪಡೆದಿರಬೇಕು. ಇಲ್ಲಿಯ ದೈವವಾದ ಬಸವಣ್ಣ ಇವರ ದೃಷ್ಟಿಯಲ್ಲಿ ಜುಂಜಪ್ಪ. ದೇವರ ಹೆಸರಲ್ಲಿ ಬಿಟ್ಟ ಎತ್ತನ್ನು ಜುಂಜಪ್ಪನ ಬಸವ ಎಂದು ಕರೆಯುತ್ತಾರೆ. ಅದನ್ನು ಅಲಂಕರಿಸಿಕೊಂಡು ಜುಂಜಪ್ಪನ ಕಥೆ ಹೇಳುತ್ತಾ, ಊರಾಡಿ ಹೊಟ್ಟೆ ಹೊರೆಯುವ ಅರೆ ವೃತ್ತಿಗಾಯಕರು ಈ ಭಾಗದಲ್ಲಿದ್ದಾರೆ. ಬಲಿ ಸಂಪ್ರದಾಯವಿರದ ಇಲ್ಲಿಯ ಆಚರಣೆಗಳು ಶೈವಾರಾಧನೆಗೆ ಸಂಬಂಧಿಸಿದವುಗಳಾಗಿವೆ. ಕಾಡುಗೊಲ್ಲರ ಪುರಾಣಗಳಲ್ಲಿ ಶಿವ ಹಾಗೂ ವೀರಭದ್ರರ ಕಥೆಗಳ ದಟ್ಟ ಪ್ರಭಾವವಿದೆ. ವೀರಭದ್ರನಲ್ಲಿಯ ಉಗ್ರತೆಯನ್ನು ಜುಂಜಪ್ಪನಲ್ಲಿ ಕಂಡುಕೊಂಡಿದ್ದಾರೆ. ತೀ.ನಂ. ಶಂಕರನಾರಾಯಣರವರ ಪ್ರಕಾರ ಜುಂಜಪ್ಪನ ಪುರಾಣ ಶೈವ ಮತ್ತು ವೈಷ್ಣವ ಸಂಪ್ರದಾಯಗಳಿಂದ ಹುಟ್ಟಿದ ಮಿಶ್ರಪುರಾಣ. ಜುಂಜಪ್ಪನನ್ನು ವೀರಭದ್ರನ ಅವತಾರವೆಂಬಂತೆ ಚಿತ್ರಿಸಲಾಗಿದೆ. ಇಲ್ಲಿ ಶೈವ ಸಂಪ್ರದಾಯದ ಪ್ರಭಾವ ಎದ್ದು ಕಾಣುತ್ತದೆಂಬ ಅಭಿಪ್ರಾಯ ತರ್ಕಬದ್ಧವಾಗಿದೆ. ಪ್ರಕೃತಿಯ ಆರಾಧಕರಾದ ಕಾಡುಗೊಲ್ಲರು ಕಾಲಕಾಲಕ್ಕೆ ಉಂಟಾದ ಧಾರ್ಮಿಕ ಪ್ರಭಾವಕ್ಕೆ ಒಳಪಟ್ಟು, ಅವರ ಸಾಂಪ್ರದಾಯಿಕ ಆಚರಣೆಗಳಲ್ಲಿ ವೀರಶೈವ ಧರ್ಮದ ಪ್ರಭಾವ ಇರುವುದನ್ನು ಇಲ್ಲಿಯ ಆಚರಣೆಯ ಹಿನ್ನೆಲೆಯಲ್ಲಿ ಕಂಡುಬರುತ್ತದೆ.

ವಕ್ತೃಗಳ ಹೇಳಿಕೆಯ ಪ್ರಕಾರ ಎತ್ತಪ್ಪ, ಜುಂಜಪ್ಪರು ಕೈಲಾಸದಲ್ಲಿ ಮಾಡಿದ ತಪ್ಪಿನ ಪ್ರಾಯಶ್ಚಿತ್ತಕ್ಕಾಗಿ ಭೂಲೋಕಕ್ಕೆ ಬಂದವರು. ಇಲ್ಲಿ ಬಂದು ಆದರ್ಶಪ್ರಾಯರಾಗಿ ಬದುಕಿ ಮತ್ತೆ ಕೈಲಾಸಕ್ಕೆ ಹೋದರು. ಕಾಡುಗಳಲ್ಲಿ ಅಲೆದಾಡುವ ದನಗಾಹಿಗಳಾದ ಇವರಿಗೆ ಕಂಬಳಿ, ಮಳೆ, ಗಾಳಿ, ಬಿಸಿಲಿನಿಂದ ರಕ್ಷಣೆ ನೀಡುತ್ತದೆ. ಇವರ ಆಚರಣೆಗಳಲ್ಲಿ ಕಂಬಳಿ ಬಳಕೆ ಶುಭಸೂಚಕ.

ಗೋವಿನ ಕೆಚ್ಚಲಿನ ರಂಧ್ರಗಳಲ್ಲಿ ಮುಕ್ಕೋಟಿ ದೇವತೆಗಳು ನೆಲೆಸಿದ್ದಾರೆಂಬ ನಂಬಿಕೆಯಿದೆ. ಹಾಲು ಅಮೃತ ಸಮಾನ, ಪವಿತ್ರವಾದದ್ದು. ಇವರಲ್ಲಿ ಹಾಲು ಮೀಸಲಿಡುವುದು ಕಟ್ಟುನಿಟ್ಟಿನ ಆಚರಣೆಯಾಗಿದೆ. ಮೀಸಲಿಟ್ಟ ಹೈನು ಪದಾರ್ಥವನ್ನು ಯಾರೂ ಬಳಸಬಾರದೆಂಬ ನಿಷೇಧವಿದೆ. ಕುಂಭಗಳಲ್ಲಿ ಮೀಸಲು ಪದಾರ್ಥಗಳನ್ನು ಹೊತ್ತು ತರುತ್ತಾರೆ. ಪ್ರಕೃತಿ ನೀಡಿದ ಸಮೃದ್ಧಿಯನ್ನು ಬಸವಣ್ಣನಿಗೆ ಎರೆಯುವುದರ ಮೂಲಕ ಪುನಃ ಪ್ರಕೃತಿಗೆ ಅರ್ಪಿಸುವ ದೈವೀಭಾವ ಇಲ್ಲಿದೆ. ಉಪವಾಸವಿರುವುದು, ಬರಿಗಾಲಿನಿಂದ ನಡೆಯುವುದು ಬುಡಕಟ್ಟು ಸಂಸ್ಕೃತಿಯ ಆಚರಣೆಗಳಲ್ಲಿಯ ಪವಿತ್ರತೆಯ ಸೂಚಕಗಳಾಗಿವೆ. ಇಂದು ನಾಗರಿಕತೆಯ ಪ್ರಭಾವವಿದ್ದರೂ, ಅರಣ್ಯ ಸಮೀಪದ ಪ್ರತ್ಯೇಕ ಹಟ್ಟಿಗಳಲ್ಲಿ ವಾಸಿಸುವುದು; ಪಶುಸಂಗೋಪನೆ, ಹೈನುಗಾರಿಕೆಯನ್ನು ಮೂಲವೃತ್ತಿಯನ್ನಾಗಿಸಿಕೊಂಡಿರುವುದು ಮತ್ತು ತಮ್ಮ ಆರಾಧನಾ ದೈವಕ್ಕೆ ಆ ವಸ್ತುಗಳನ್ನು ಅರ್ಪಿಸುವುದು ಇವೆಲ್ಲವೂ ಬುಡಕಟ್ಟು ಸಂಸ್ಕೃತಿಯ ಕುರುಹುಗಳಾಗಿವೆ.

ಕಾಡುಗಳ ಒಡನಾಟದಲ್ಲಿ ಬೆಳೆದುಬಂದ ಇವರಿಗೆ ಅಲ್ಲಿಯ ಒಂದೊಂದು ಬಿಲ್ವಪತ್ರೆ ಮರವು ಆರಾಧನಾ ದೈವವಾಗಿ ಕಂಡಿರಲು ಸಾಧ್ಯವಿದೆ. ಸ್ವಾಭಾವಿಕವಾಗಿ ಹುಟ್ಟಿದ ಇಲ್ಲಿಯ ಮರಗಳನ್ನು ಯಾರೂ ಕಡಿಯಬಾರದೆಂಬ ನಿಷೇಧವಿದೆ. ಶಿವಾರ್ಚನೆಗೆ ಯೋಗ್ಯವಾದ ಬಿಲ್ವ ರೋಗನಿವಾರಕ ಗುಣಗಳಿಂದ ಕೂಡಿದೆ. ಎಲೆ, ಕಾಯಿ, ಹಣ್ಣು, ಬೇರು ಮತ್ತು ತೊಗಟೆಗಳಿಂದ ಔಷಧಿಗಳನ್ನು ತಯಾರಿಸಲಾಗುತ್ತದೆ. ಬಿಲ್ವಪತ್ರೆಯ ಸತತ ಸೇವನೆ ಹಲವಾರು ರೋಗ ನಿವಾರಣೆಗೆ ಕಾರಣವಾಗಿದ್ದು, ಆಯುರ್ವೇದದಲ್ಲಿ ಬಳಸಲಾಗುತ್ತದೆ. ರಾತ್ರಿಯೆಲ್ಲಾ ದೈವಾರಾಧನೆ ಮಾಡಿ, ಸಾಮೂಹಿಕ ಭೋಜನದೊಂದಿಗೆ ಆಚರಣೆ ಮುಕ್ತಾಯಗೊಳ್ಳುತ್ತದೆ. ಬೇರೆ ಬೇರೆ ಗ್ರಾಮವಾಸಿಗಳಾದರೂ, ತಮ್ಮ ಪೆಟ್ಟಿಗೆ ದೈವಗಳೊಂದಿಗೆ ಆಚರಣೆಯ ನೆಪದಲ್ಲಿ ಒಂದೆಡೆ ಸೇರುತ್ತಾರೆ. ಇದು ಅವರಲ್ಲಿ ಒಗ್ಗಟ್ಟು, ಸಾಮರಸ್ಯ, ಏಕತೆಯನ್ನು ಮೂಡಿಸುವುದಾಗಿದೆ. ದೈವಕ್ಕೆ ಅರ್ಪಿತವಾದ ಕಾಡು ಸಾರ್ವಜನಿಕರಿಂದ ನಾಶವಾಗಬಾರದೆಂಬ ತತ್ವ ಆಚರಣೆಯದ್ದಾಗಿದೆ.

ಯಾವುದೋ ಅಗೋಚರ ಶಕ್ತಿ ಅಡಗಿದೆ ಎಂದು ಭಾವಿಸಿ ಆ ಶಕ್ತಿಯನ್ನು ಸಂಪ್ರೀತಗೊಳಿಸುವುದೇ ಜುಂಜಪ್ಪನ ತೋಪಿನ ಆಚರಣೆಯ ಹಿನ್ನೆಲೆ. ಇಂಥ ದೈವೀಭಾವಗಳೇ ಇಂದಿಗೂ ಸಾವಿರಾರು ಬಿಲ್ವಪತ್ರೆ ಮರಗಳ ಉಳಿವಿಗೆ ಕಾರಣವಾಗಿರುವುದು ಗಮನಾರ್ಹ. ಆಚರಣೆ ವರ್ಷಕ್ಕೊಮ್ಮೆ ನಡೆದರೂ, ಸ್ಥಳೀಯರ ಭಯ, ಭಕ್ತಿ ಮರಗಳ ಉಳಿವಿಗೆ ಕಾರಣವಾಗಿದೆ. ಹಿಂದೆ ಭೂತದ ಕಾಡು, ದೇವರ ಕಾಡು, ನಾಗಬನ ಎಂದೆಲ್ಲಾ ಹೆಸರಿಟ್ಟು, ಮನುಷ್ಯ ಪ್ರವೇಶಿಸುವುದನ್ನು ನಿರ್ಬಂಧಿಸಿ ಸಾವಿರಾರು ಕಾಡುಗಳ ಉಳಿವಿಗೆ ಜನಪದರು ಕಾರಣರಾಗಿದ್ದಾರೆ. ಇಂದು ಅರಣ್ಯ ಇಲಾಖೆಯವರು ಬೇಲಿ ಹಾಕಿ, ಕಾನೂನು ಜಾರಿಗೊಳಿಸಿದರೂ ಉಳಿಯದ ಕಾಡುಗಳು, ಆಚರಣೆಯಲ್ಲಿದ್ದ ಭಯ, ಭಕ್ತಿಯಿಂದ ಉಳಿದಿರುವುದು ಜಾನಪದ ಆಚರಣೆಗಳ ಜೀವಂತಿಕೆಗೆ ಸಾಕ್ಷಿಯಾಗಿವೆ.

೪.೧.೫. ಮುಳ್ಳು ಸಂಬಂಧಿ ಆಚರಣೆ (ಬ್ಯಾಟಿಮರ ತರುವ ಆಚರಣೆ)

ಮಾನವನ ದಿನನಿತ್ಯದ ಬದುಕಿಗೆ ಸಸ್ಯಗಳು ಹಲವಾರು ರೀತಿಯಲ್ಲಿ ಸಹಾಯಕವಾಗಿವೆ. ಸಸ್ಯಗಳ ಬಗ್ಗೆ ಜನಪದರಿಗೆ ಭಯ, ಭಕ್ತಿ, ಗೌರವ ಇದೆ. ಇಂಥ ಭಾವನೆಗಳು ಸಸ್ಯಾರಾಧನೆಗೆ ನಾಂದಿಯಾಗಿವೆ. ಸಸ್ಯ ಪ್ರಭೇದಗಳಲ್ಲಿ ಒಂದಾದ ಮುಳ್ಳು ಸಹ ಬ್ಯಾಟಿಮರದ ಆಚರಣೆಯಲ್ಲಿ ಪೂಜನೀಯ ಸ್ಥಾನ ಪಡೆದಿದೆ. ಹಗರಿಬೊಮ್ಮನಹಳ್ಳಿ ತಾಲೂಕು ಕಡಲಬಾಳು, ಮೋರಗೇರಿ, ಬೆಣಕಲ್ಲು, ಅನೇಕಲ್ಲು ಗ್ರಾಮಗಳಲ್ಲಿ ಬ್ಯಾಟಿ ಮರದ ಆಚರಣೆ ಪ್ರಚಲಿತದಲ್ಲಿದೆ. ಯುಗಾದಿ ಹಬ್ಬದ ಸಮಯದಲ್ಲಿ ಹನುಮಪ್ಪನ ಜಾತ್ರೆಗಳು ನಡೆಯುತ್ತವೆ. ಜಾತ್ರೆಯ ಮರುದಿನ ಬ್ಯಾಟಮರದ ಆಚರಣೆ ನಡೆಯುತ್ತದೆ.

ಹಿಂದೆ ಬೇಟೆ ಸಂಸ್ಕೃತಿಯಲ್ಲಿ ಪ್ರಾಣಿ ಬಲಿಯಾಗುವಿಕೆಯಿತ್ತು. ಬೇಟೆಗೆ ಬಲಿಯಾಗುವ ಪ್ರಾಣಿಗಳ ಆಶ್ರಯತಾಣ ಮುಳ್ಳಿನ ಗಿಡಗಳು. ಅವುಗಳ ನಾಶವೇ ಬ್ಯಾಟಿಮರದ ಆಚರಣೆಯ ಹಿನ್ನೆಲೆಯಿರಬೇಕು. ಈ ಭಾಗದಲ್ಲಿ ವಿಶೇಷವಾಗಿ ಬೇಟೆ ಆಡುವವರು ಬೇಡ ಜನಾಂಗದವರು. ಇವರಲ್ಲಿ ಒಬ್ಬರು ಪೂಜಾರಿಗಳಾಗಿ ಬ್ಯಾಟಿಮರ ತರುತ್ತಾರೆ. ನೀರ ಕೊಡ ಹೊತ್ತ ಪೂಜಾರಿ ಭಕ್ತರೊಂದಿಗೆ ಹನುಮದೇವರ ಧ್ವಜ ಹಿಡಿದು ಕಾಡಿಗೆ ತೆರಳುತ್ತಾರೆ. ದಷ್ಟಪುಷ್ಟವಾಗಿ ಬೆಳೆದ ಗಂಡುಗಾರಿ "ಮುಳ್ಳಿನ ಕಂಟಿಯ"[೪] ಗಿಡವನ್ನು ಹುಡುಕಿ ಪೂಜಿಸಿ, ಅದರ

ಸುತ್ತ ನೀರು ಹಾಕುತ್ತಾರೆ. ಆಯುಧಗಳನ್ನು ಬಳಸದೇ ಕೈಯಿಂದ ಮಣ್ಣು ಬಗೆದು ಬೇರು ಸಮೇತ ಗಿಡವನ್ನು ಕಿತ್ತು ತರುವ ಸಂಪ್ರದಾಯವಿದೆ. ಮುಳ್ಳು ತುಂಬಿದ ಪಲ್ಲಕ್ಕಿಯೊಂದಿಗೆ, ಬ್ಯಾಟಿ ಗಿಡ ಹಾಗೂ ಹನುಮಪ್ಪನ ಉತ್ಸವಮೂರ್ತಿಯ ಮೆರವಣಿಗೆ ನಡೆಯುತ್ತದೆ.

ಬ್ಯಾಟಿಮರ ಹೊರುವುದು ಹಾಗೂ ಮುಳ್ಳು ಪಲ್ಲಕ್ಕಿಯಲ್ಲಿ ಮಲಗುವುದು ಪೂಜಾರಿಗಳ ಕೆಲಸ. ಇವರು ಒಂದು ವಾರ ಕಾಲ ಹಾಲು, ಹಣ್ಣು ಸೇವಿಸುತ್ತಾ ಉಪವಾಸ ಮಾಡುತ್ತಾರೆ. ದೈವದ ಉತ್ಸವ ಪ್ರತಿ ಮನೆಯ ಮುಂದೆ ಸ್ತ್ರೀಯರಿಂದ ಆರತಿಯೊಂದಿಗೆ ಪೂಜಿಸಲ್ಪಡುತ್ತದೆ. ಹೊಳೆಯಲ್ಲಿ ಗಂಗೆ ಪೂಜೆ ನೆರವೇರಿಸಿದ ನಂತರ ಭಕ್ತರು ಉತ್ಸವದೊಂದಿಗೆ ಮರಳುತ್ತಾರೆ. “ನದಿ ಮೂಲಗಳು ಜನಪದರಿಗೆ ಪೂಜನೀಯವಾದುವು. ನಿಸರ್ಗ ಸಹಜ ನದಿ ತೀರದಲ್ಲಿ ಮಾನವನ ಬದುಕು ಮೊಳಕೆಯೊಡೆದು ಬೇರೂರಿತು”.[೫] ಈ ಹಿನ್ನೆಲೆಯಲ್ಲಿ ಮುಳ್ಳಿನ ಆಚರಣೆಗಳಲ್ಲಿ ಜನಪದರು ದೈವವನ್ನು ಜಲಮೂಲಕ್ಕೆ ಒಯ್ಯುವುದು ಜಲ ಸಂಸ್ಕೃತಿಗೆ ನೀಡಿದ ಮಾನ್ಯತೆಯಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ನಾಯಕ, ತಳವಾರ, ವಾಲ್ಮೀಕಿ ಮತ್ತು ದಾಸರು ಎಂದು ಕರೆಯಲ್ಪಡುವ ಬುಡಕಟ್ಟು ಸಮುದಾಯದವರು ಸಾಮಾನ್ಯವಾಗಿ ಹನುಮಪ್ಪನ ಪೂಜಾರಿಗಳಾಗಿರುತ್ತಾರೆ.

ಮ್ಯಾಸಬೇಡ ಹಾಗೂ ಕಾಡುಗೊಲ್ಲ ಸಮುದಾಯದವರು ತಮ್ಮ ಗುಡಿಸಲುಗಳ ಸುತ್ತ ಮುಳ್ಳುಬೇಲಿ ಹಾಕಿ ರಕ್ಷಣೆ ಮಾಡಿಕೊಂಡು ಬದುಕುತ್ತಿರುವುದು ಬಳ್ಳಾರಿ ಜಿಲ್ಲೆಯ ಹಲವು ಭಾಗಗಳಲ್ಲಿ ಇಂದಿಗೂ ಕಂಡುಬರುತ್ತಿದೆ. ಇವರ ದೈವಗಳ ಗುಡಿಸಲುಗಳ ಸುತ್ತಲೂ ದಟ್ಟವಾದ ಮುಳ್ಳುಬೇಲಿಯಿರುತ್ತದೆ. ಮುಳ್ಳು, ಜನ ಮತ್ತು ಜಾನುವಾರುಗಳನ್ನು ರಕ್ಷಿಸುವುದು ವಾಸ್ತವ ಸಂಗತಿ. ಬ್ಯಾಟಿಮರದ ಆಚರಣೆಯ ಮೂಲಕ ಸಸ್ಯಾರಾಧನೆಗೆ ಮುಳ್ಳು ಪಾತ್ರವಾಗಿರುವುದು ಬುಡಕಟ್ಟು ಸಂಸ್ಕೃತಿಯನ್ನು ಸಂಕೇತಿಸುತ್ತದೆ.

ಬ್ಯಾಟಿಮರ ತರಲು ಹನುಮಪ್ಪನ ಧ್ವಜ ಹಿಡಿದು ನಡೆಯುವುದು ವಿಜಯದ ಸಂಕೇತ. ಪ್ರಕೃತಿಯೊಡನೆ ಪ್ರಭುತ್ವ ಸಾಧಿಸಲು ಕಂಡುಕೊಂಡ ಮಾರ್ಗವು ಹೌದು. ಹನುಮಪ್ಪನ ಉತ್ಸವದಲ್ಲಿ ಮಾತ್ರ ಬ್ಯಾಟಿಮರದ ಆಚರಣೆಗಳು ನೆರವೇರುವುದು ಕ್ಷೇತ್ರಕಾರ್ಯದಲ್ಲಿ ಕಾಣಲಾಗಿದೆ. ಜನಪದರ ದೃಷ್ಟಿಯಲ್ಲಿ ಬ್ರಹ್ಮಚಾರಿಯಾದ ಹನುಮಪ್ಪ ತನ್ನ ವೀರ್ಯಶಕ್ತಿಯ ಬಲದಿಂದ ವಿಘ್ನನಿವಾರಕ ಹಾಗೂ ಅಸಾಧಾರಣ ಶಕ್ತಿಯುಳ್ಳವನಾಗಿರುವನು. ಸೀತೆಯನ್ನು ಹುಡುಕಿದವ; ಸಂಜೀವಿನಿ ಪರ್ವತ ತಂದವ. ಆದ್ದರಿಂದ ಕಾಡಿನ ಜ್ಞಾನ ಹನುಮಪ್ಪನಿಗೆ ಇದೆ ಎಂಬುದು ಜನಪದರ ನಂಬಿಕೆ.

ಈ ಆಚರಣೆಯಲ್ಲಿ ವಿಶೇಷವಾಗಿ ದೇವದಾಸಿಯರು ಚೌರ ಬೀಸುತ್ತಾರೆ. ಇದಕ್ಕೆ ಕಾರಣ ಹಿಂದೆ ಹಂಪಿ ಪರಿಸರದಲ್ಲಿ ಹೆಚ್ಚಾಗಿ ಹನುಮಪ್ಪನ ಗುಡಿಗಳಲ್ಲಿ ಮುತ್ತು ಕಟ್ಟುತ್ತಿದ್ದು. “ಲಂಕೆಯನ್ನು ಸುಟ್ಟು ಸೀತೆಯನ್ನು ಕಾಪಾಡಿದವ, ನಮ್ಮನ್ನು ಕಾಪಾಡುತ್ತಾನೆಂಬ ಆಶಯ ದೇವದಾಸಿ ಮಹಿಳೆಯರಲ್ಲಿತ್ತು”.[೬] ಇಂಥ ನಂಬಿಕೆಗಳಿಂದ ಇವರು ಹನುಮಪ್ಪನ ಉತ್ಸವಗಳಲ್ಲಿ ಸೇವಕಿಯರಾಗಿ ಪಾಲ್ಗೊಳ್ಳುತ್ತಿರಬೇಕು. ಹಿಂದೆ ದೇವದಾಸಿ ಸಂಪ್ರದಾಯ ಧಾರ್ಮಿಕ ಶ್ರದ್ಧೆ ಮತ್ತು ಮಾತೃದೇವತಾರಾಧನೆಯ ಹಿನ್ನೆಲೆಯಲ್ಲಿ ಬೆಳೆದು ಬಂದಿತ್ತು. ಇಂದು ಅದು ಆರ್ಥಿಕ ದುಸ್ಥಿತಿ, ಮನೆತನದ ಪದ್ಧತಿ ಹಾಗೂ ಕಾಣದ ಕೈಗಳ ಒತ್ತಡಕ್ಕೆ ಸಿಲುಕಿ ಅನಿಷ್ಟ ಪದ್ಧತಿಯಾಗಿ ಪರಿಣಮಿಸಿದೆ. ಅಂತ್ಯಗೊಳ್ಳಬೇಕಾದ ಸಂಪ್ರದಾಯ ಆಚರಣೆಯ ಮೂಲಕ ವೈಭವೀಕರಣಗೊಳ್ಳುತ್ತಿದೆ. ಇಂಥ ಅನಿಷ್ಟ ಪದ್ಧತಿಗಳನ್ನು ಕೈಬಿಡಬೇಕು. ಅವು ಮುಂದಿನ ಪೀಳಿಗೆಗೆ ನೀಡುವ ತಪ್ಪು ಸಂದೇಶವಾಗಿ ಪರಿಣಮಿಸಬಾರದು.

ಬೆಣಕಲ್ಲಿನಲ್ಲಿ ಪೂಜಾರಪ್ಪ ವಾದ್ಯಗಳ ಅಬ್ಬರದ ಮಧ್ಯ ಕೈಯಲ್ಲಿ ಬೆತ್ತ ಹಿಡಿದು ಜೋರಾಗಿ ಬಂದು, ಮುಳ್ಳಿನ ಪಲ್ಲಕ್ಕಿಯನ್ನೇರಿ ಮೈಚಾಚಿ ಮಲಗುತ್ತಾನೆ. ಈತ ಮುಳ್ಳಿನ ಪಲ್ಲಕ್ಕಿಯಿಂದ ಮೇಲೇಳುವುದು ಉತ್ಸವ ಮುಗಿದ ನಂತರ. ಇದು ಸುಮಾರು ಎರಡು ತಾಸಿನ ಅವಧಿಯಾಗಿರುತ್ತದೆ. ಹೀಗೆ ಮುಳ್ಳುಗುಡ್ಡೆಯ ಮೇಲೆ ಜಿಗಿಯುವುದು, ಹಾರುವುದು, ಮಲಗುವುದು ಇವೆಲ್ಲವೂ ಹಿಂದೆ ಅಲೆಮಾರಿ ಜೀವನದ ನಂತರ ಮಾನವ ಭೂಮಿ ಹದಗೊಳಿಸಿಕೊಂಡಿರುವುದರ ಸಂಕೇತಗಳಾಗಿವೆ.

ಸಂಡೂರು ತಾಲೂಕಿನ ಧರ್ಮಾಪುರದಲ್ಲಿ ಶ್ರೀಗಂಡಿನರಸಿಂಹಸ್ವಾಮಿ ರಥೋತ್ಸವದ ಸಮಯದಲ್ಲಿ ಬ್ಯಾಟಿಮರದ ಆಚರಣೆ ಇದೆ. ಇಲ್ಲಿ ಬ್ಯಾಟಿಮರ ತರುವ ಪೂಜಾರಿ ಲಕ್ಷ್ಮಿಪುರದ ತಿಮ್ಮಪ್ಪ. ವಕ್ತೃಗಳ ಹೇಳಿಕೆಯ ಪ್ರಕಾರ ಬ್ಯಾಟಿಮರ ತರುವಾಗ ಪೂಜಾರಪ್ಪ ಎಚ್ಚರ ತಪ್ಪುತ್ತಾನೆ. ಆಚರಣೆಯ ನಂತರ ನೀರು ಚುಮುಕಿಸಿದಾಗ ಪ್ರಜ್ಞೆ ಬರುತ್ತದೆ. ಅಂದರೆ ಇಲ್ಲಿ ಒಬ್ಬರು ಸತ್ತು ಮತ್ತೊಬ್ಬರು ಹುಟ್ಟುತ್ತಾರೆಂಬ ನಂಬಿಕೆಯಿದೆ. ಗುಡಿಯನ್ನು ಮೂರು ಸುತ್ತು ಹಾಕುವುದರೊಳಗೆ ಜೀವ ದೈವಕ್ಕೆ ಬಲಿಯಾಗಿ, ಪುನಃ ಮರುಹುಟ್ಟು ಪಡೆಯುತ್ತದೆ. ಇದು ನರಬಲಿಯನ್ನು ಸಂಕೇತಿಸುತ್ತದೆ.

ಕೃಷಿಕರಿಗೆ ಮೇವು ಸಂಗ್ರಹಣೆ, ಕಣ ಮಾಡುವಲ್ಲಿ ಮುಳ್ಳುಬೇಲಿ ಸಹಾಯಕವಾದುದಾಗಿದೆ. ಊರ ಹೊರಗೆ ಹನುಮಪ್ಪನಿರುವುದು ಊರು ಕಾಯಲೆಂಬ ಆಶಯದಿಂದ. ಕೃಷಿಕರ ರಕ್ಷಣಾ ಕವಚವಾದ ಮುಳ್ಳು ಸಹ ಹನುಮಪ್ಪನಷ್ಟೇ ಮುಖ್ಯ. ಈ ಕಾರಣಗಳಿಂದ ಮುಳ್ಳುಸಂಬಂಧಿ ಆಚರಣೆಗಳು ಸಾಮಾನ್ಯವಾಗಿ ಹನುಮಪ್ಪನ ಗುಡಿಯಿರುವ ಊರುಗಳಲ್ಲಿ ಮಾತ್ರ ಪ್ರಚಲಿತದಲ್ಲಿರುವುದು ಕ್ಷೇತ್ರಕಾರ್ಯದಲ್ಲಿ ಗಮನಿಸಲಾಗಿದೆ. ಊರಮ್ಮನ ಜಾತ್ರೆಗಳಲ್ಲಿ ಹುಲುಸು ಕದಿಯದಿರಲೆಂಬ ಆಶಯದಿಂದ, ಮುಳ್ಳುಬೇಲಿ ಊರ ರಕ್ಷಕವಾಗಿರುತ್ತದೆ. ಹೀಗೆ ರಕ್ಷಣಾ ಮೂಲವಾದ ಮುಳ್ಳು ಆಚರಣೆಯಲ್ಲಿ ಪೂಜನೀಯ ಸ್ಥಾನ ಪಡೆದಿದೆ.

ಪಶುಪಾಲಕ ವರ್ಗ ಕೃಷಿಮೂಲಕ್ಕೆ ಬಂದಾಗ, ಆಯುಧಗಳ ಉಪಯೋಗವಿಲ್ಲದ ಕಾರಣ, ಭೂ ಸಾಗುವಳಿ ನಡೆಸಲು ಕೈಯಿಂದ ಮುಳ್ಳಿನ ಕಂಟಿಗಳನ್ನು ಕಿತ್ತು ಸಾಗುವಳಿಯೋಗ್ಯ ಭೂಮಿಯಾಗಿ ಪರಿವರ್ತಿಸುತ್ತಿದ್ದರು. ಅದು ತಮ್ಮ ಬಲಪ್ರದರ್ಶನವೂ ಆಗಿತ್ತು. ಇಂದು ಬೇರು ಸಹಿತ ಕೈಯಿಂದ ಬಗೆದು ತರುವುದು ಸಾಹಸದ ಪ್ರತೀಕ ಹಾಗೂ ದೇಹದಾರ್ಢ್ಯ ಪ್ರದರ್ಶನವಾಗಿದೆ. ಈ ರೀತಿಯ ಸಾಹಸಿ ಪ್ರವೃತ್ತಿಗಳು ಆಚರಣೆಯ ರೂಪದಲ್ಲಿ ಅಭಿವ್ಯಕ್ತಿಗೊಳ್ಳುತ್ತಿವೆ.

ಬಳ್ಳಾರಿ ಜಿಲ್ಲೆಯಲ್ಲಿ ಯುಗಾದಿಯ ನಂತರ ಬೇಟೆ ಆಚರಣೆಗಳು ಪ್ರಾರಂಭಗೊಳ್ಳುವವು. ಮುಳ್ಳಿನ ಪೊದೆಗಳು ಪ್ರಾಣಿಗಳಿಗೆ ಆಶ್ರಯ ತಾಣ, ಅವು ಬೇಟೆಗಾರರಿಂದ ತಪ್ಪಿಸಿಕೊಳ್ಳಲು ಮುಳ್ಳಿನ ಪೊದೆಗಳಲ್ಲಿ ಅವಿತುಕೊಂಡಿರುತ್ತವೆ. ಬೇಟೆಯ ರಕ್ಷಕವಾದ ಮುಳ್ಳನ್ನು ಪೂಜಿಸಿ, ಒಲಿಸಿದರೆ ಬೇಟೆ ಸಿಗುವುದೆಂಬ ನಂಬಿಕೆಯಿದೆ.

ಮುಳ್ಳುಗದ್ದುಗೆ ಪವಾಡ

ಹಡಗಲಿ ತಾಲೂಕಿನ ಹಿರೇಹಡಗಲಿಯಲ್ಲಿ ಹಾಲುಸ್ವಾಮಿ ಮಠವಿದೆ. ಇಲ್ಲಿ ಸೀಗೆಹುಣ್ಣಿಮೆಯಾದ ಮರುದಿನ ಮುಳ್ಳುಗದ್ದುಗೆ ಉತ್ಸವ ನಡೆಯುತ್ತದೆ. ಮಠದ ವಂಶಸ್ಥರಾದ ಹಾಲುಸ್ವಾಮಿಗಳು ಕೊರಳಲ್ಲಿ ರುದ್ರಾಕ್ಷಿ ಮಾಲೆ ಹಾಗೂ "ಕೈಪಾ"[೭] ಮಾತ್ರ ಧರಿಸಿ ಮುಳ್ಳುಗದ್ದುಗೆ ಏರುತ್ತಾರೆ. ಇದು ಕರಿಜಾಲಿ ಮುಳ್ಳುಗಳಿಂದ

ತುಂಬಿದ ಪಲ್ಲಕ್ಕಿಯಾಗಿದ್ದು, ಇಡೀ ರಾತ್ರಿ ಉತ್ಸವದಲ್ಲಿ ಸ್ವಾಮಿಗಳು ಪಾಲ್ಗೊಳ್ಳುತ್ತಾರೆ. ಅವರ ಮೈಮೇಲೆ ದೈವ ಆವಾಹನೆಯಾಗಿದ್ದು, ದೈವದ ಅಪ್ಪಣೆಯಂತೆ ಪಲ್ಲಕ್ಕಿ ಸಾಗುತ್ತದೆಂಬುದು ಭಕ್ತರ ಹೇಳಿಕೆ. ಆವೇಶಭರಿತರಾಗಿ ಮೇಲಕ್ಕೆ ಹಾರುವುದು, ಏಳುವುದು, ಕುಳಿತುಕೊಳ್ಳುವುದು ಇವೆಲ್ಲಾ ಮಾಟ, ಮಂತ್ರ, ಗಾಳಿಚೇಷ್ಟೆ ಇರುವ ಸ್ಥಳಗಳಲ್ಲಿ ಹೆಚ್ಚಾಗಿರುತ್ತದೆ. ಇದರಿಂದ ಆ ಸ್ಥಳದಲ್ಲಿಯ ದುಷ್ಟಶಕ್ತಿಗಳು ನಾಶವಾಗುವವೆಂದು ನಂಬುತ್ತಾರೆ. ದೇಹವನ್ನು ಉಗ್ರ ದಂಡನೆಗೆ ಒಳಪಡಿಸುವ ಶೈವ ಸಂಪ್ರದಾಯದ ಆಚರಣೆ ಇದಾಗಿದೆ. ಇದು ತಮ್ಮನ್ನು ತಾವೇ ಶಿಕ್ಷೆಗೆ ಒಳಪಡಿಸಿಕೊಂಡು ದೇಹದಂಡಿಸುವ ಕ್ರಮವಾಗಿದೆ. ಇಂಥ ಆಚರಣೆಗಳಲ್ಲಿ ಹಲಗೆ, ಕಹಳೆ, ಡೊಳ್ಳುಗಳ ನಾದ ಕಿವಿಗಳಿಗೆ ರೌದ್ರತೆಯ ಅನುಭವವನ್ನುಂಟು ಮಾಡುವುದಲ್ಲದೆ, ನೋವನ್ನು ಸಹಿಸುವ, ದೈವೀ ಪರವಶತೆ ಮೂಡಿಸುವ ಕ್ರಿಯೆಗಳಾಗಿವೆ. ಆಚರಣೆಯ ವಿಶೇಷತೆಯೆಂದರೆ, ಇದು ಮೂಲ ಕೃಷಿಕರ ಆಚರಣೆಯಾಗಿದ್ದರಿಂದ ಒರಟುತನದ ಜೊತೆ ಅಷ್ಟೇ ತಾಜಾತನವು ಇದೆ. ಭಕ್ತಿಯ ಉದ್ದೀಪನದ ಜೊತೆ, ಭಕ್ತಿಯ ಉದ್ರೇಕದ ಸ್ಥಿತಿಯನ್ನು ಆಚರಣೆಯಲ್ಲಿ ಕಾಣಲಾಗುತ್ತದೆ.

ಬಿಲ್ವ, ಬನ್ನಿ, ಜಾಲಿ, ಬಾರಿಗಿಡಗಳು ಜನಪದರ ಆಚರಣೆಯಲ್ಲಿಯ ಮುಳ್ಳು ಸಸ್ಯಗಳಾಗಿವೆ. ಮೊಹರಂ ಆಚರಣೆಯಲ್ಲಿ, ಅಲಾಯಿಕುಣಿ ಮುಚ್ಚಿ ಅದರ ಮೇಲೆ ಬಾರಿಗಿಡ ನೆಡುತ್ತಾರೆ. ಕುಣಿಯನ್ನು ಬಗೆಯಬಾರದೆಂಬ ರಕ್ಷಣಾತಂತ್ರ ಇಲ್ಲಿದೆ. ಸಸ್ಯರಾಶಿಯಲ್ಲಿ ಅಗೋಚರವಾದ ಶಕ್ತಿಯಿದೆ. ಅವುಗಳಿಗೂ ತಮ್ಮಂತೆ ಜೀವವಿದೆ ಎಂಬುದರ ಅರಿವು ಜನಪದರಿಗಿತ್ತು. ಅಪ್ರಯೋಜಕವೆಂದು ಕರೆಯಲ್ಪಡುವ ಮುಳ್ಳನ್ನು ಸಹ ಬದುಕಿನ ಪ್ರಯೋಜನಕ್ಕೆ ಬಳಸಿಕೊಂಡಿರುವುದು ಆಚರಣೆಯಲ್ಲಿ ಕಂಡುಬರುವ ಪ್ರಮುಖ ಅಂಶವಾಗಿದೆ.

೪.೧.೬. ಗುಡ್ಡದ ತಿಮ್ಮಪ್ಪನ ಜಾತ್ರೆ

ಜನಪದರು ಹೊಳೆ, ಪರ್ವತ, ವನ, ಭೂಮಿ ಹೀಗೆ ಪ್ರಕೃತಿಯ ವೈವಿಧ್ಯಗಳನ್ನು ಆರಾಧನಾ ದೈವಗಳನ್ನಾಗಿಸಿ ಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಹಗರಿಬೊಮ್ಮನಹಳ್ಳಿ ತಾಲೂಕಿನ ಆನೇಕಲ್ಲು ಗ್ರಾಮದಿಂದ ಮೂರು ಕಿಲೋಮೀಟರ್ ದೂರದ ಗುಡ್ಡದ ಮೇಲೆ ತಿಮ್ಮಪ್ಪನ ಜಾತ್ರೆ ನೆರವೇರುತ್ತದೆ. ನಾಗರಪಂಚಮಿಯ ಮೂರನೇ ದಿನದಂದು ಕಡ್ಲಬಾಳು, ಹೆಗ್ಡಾಳ, ಮರಬ್ಬಿಹಾಳ, ಹಂಪಾಪಟ್ಟಣ, ಎಚ್. ಓಬಳಾಪುರ, ಮಾದೂರು, ಪಿಲ್ಲಮ್ಮನಹಳ್ಳಿ, ಬೆಣಕಲ್ಲು, ಮೆಟ್ರಿ, ದಸಮಾಪುರ, ಕಣಿಕನಹಳ್ಳಿ ಹಾಗೂ ಸುತ್ತಲಿನ ತಾಂಡಗಳಿಂದ ಹನುಮಪ್ಪದೇವರ ಪಲ್ಲಕ್ಕಿಯೊಂದಿಗೆ ಭಕ್ತರು ಆಗಮಿಸುತ್ತಾರೆ. ಬೃಹದಾಕಾರವಾದ ಬಂಡೆಗಲ್ಲುಗಳ ಮಧ್ಯದ ಗುಹೆಯಲ್ಲಿರುವ ಅಸ್ಪಷ್ಟ ಶಿಲಾರೂಪಿ ದೈವ ಇದಾಗಿದೆ. ಇದು ಕಕ್ಕೆ, ಎಕ್ಕ, ತಂಗಡಿಯಂತಹ ಹೂಪತ್ರೆಗಳಿಂದ ಪೂಜಿಸಲ್ಪಡುತ್ತದೆ. ಆಮಂತ್ರಣ, ಪ್ರಚಾರಗಳ ಗದ್ದಲವಿಲ್ಲದೆ ಸುತ್ತಲಿನ ಗ್ರಾಮಗಳ ಜನ ಏಕಕಾಲಕ್ಕೆ ದಟ್ಟ ಅಡವಿಯಲ್ಲಿ ಒಂದು ನಿರ್ದಿಷ್ಟ ಸ್ಥಳದಲ್ಲಿ ಸೇರುವುದು ಸೋಜಿಗದ ಸಂಗತಿಯಾಗಿದೆ.

ಮಧ್ಯಾಹ್ನ ಪ್ರಾರಂಭವಾಗಿ ಸಾಯಂಕಾಲ ಮುಕ್ತಾಯಗೊಳ್ಳುವ ಅತೀ ಕಡಿಮೆ ಅವಧಿಯ ಜಾತ್ರೆ ಇದು. 'ಜಾತ್ರೆಗೆ ಹೋದವರು ಅದೇ ದಿನ ಮರಳಿ ಊರು ಸೇರಬೇಕು. ಇಲ್ಲವಾದರೆ ರಕ್ತಕಾರಿ ಸಾಯುತ್ತಾರೆ' ಎಂಬ ನಂಬಿಕೆ ಬಗ್ಗೆ ವಕ್ತೃಗಳು ತಿಳಿಸುತ್ತಾರೆ. ರಾತ್ರಿ ವೇಳೆ ಕಾಡುಪ್ರಾಣಿಗಳ ಆಕ್ರಮಣಕ್ಕೆ ತುತ್ತಾಗಬಾರದು, ವಿಷಜಂತುಗಳಿಂದ ತೊಂದರೆಯಾಗಬಾರದು, ಅರಣ್ಯ ವಾಸಿಗಳಿಂದ ದರೋಡೆಗಳು ಆಗಬಾರದೆಂಬ ಮುನ್ನೆಚ್ಚರಿಕೆ

ಈ ನಂಬಿಕೆಯ ಹಿನ್ನೆಲೆ. ಸರಳ ಜಾತ್ರೆಯಾಗಿ ಕಂಡುಬಂದರೂ, ಅಲ್ಲಿಯ ಸ್ವರೂಪವನ್ನು ಗಮನಿಸಿದಾಗ ಇದೊಂದು ಸಂಪೂರ್ಣ ವ್ಯಾಪಾರಕ್ಕೆ ಸಂಬಂಧಿಸಿದ್ದಾಗಿದೆ. ರೈತರ ದಿನಬಳಕೆಯ ಎಲ್ಲಾ ವಸ್ತುಗಳು ಮಾರಾಟಗೊಳ್ಳುತ್ತವೆ. ಈ ಹಿನ್ನೆಲೆಯಲ್ಲಿ ರೈತರು ವರ್ಷಕ್ಕೊಮ್ಮೆ ತಪ್ಪದೇ ಗುಡ್ಡದ ತಿಮ್ಮಪ್ಪನ ಜಾತ್ರೆಗೆ ಆಗಮಿಸುತ್ತಾರೆ.

ಹೊಸಪೇಟೆ, ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ ತಾಲೂಕುಗಳ ಗಡಿಭಾಗದಲ್ಲಿರುವ ಈ ಗುಡ್ಡದ ಸಾಲುಗಳು 'ರಾಮಮಲೆ' ಗುಡ್ಡಗಳೆಂದು ಕರೆಯಲ್ಪಡುತ್ತವೆ. ಸಂಡೂರು, ಹೊಸಪೇಟೆ ತಾಲೂಕಿನ ಗಣಿಗಾರಿಕೆಗೆ ಸಂಬಂಧಿಸಿದ 'ಲೋಹಾದ್ರಿಯ ಮಡಿಲೆಂದು' ಹೆಸರಿಸಲಾದ ಗುಡ್ಡ ಪ್ರದೇಶವಿದು. ಹಿಂದೆ ಇಲ್ಲಿ ದೊರೆಯುವ ಲೋಹದ ಅದಿರಿನಿಂದ ತಯಾರಿಸಿದ ಕೃಷಿ ಸಂಬಂಧಿ ವಸ್ತುಗಳ ವ್ಯಾಪಾರ ಕೇಂದ್ರ ಈ ಜಾತ್ರೆಯಾಗಿತ್ತು. ಕಬ್ಬಿಣ ತಯಾರಿಕೆ ಮತ್ತು ಉಪಯೋಗ ಕಲೆ, ನಾಗರಿಕತೆಯ ಕಾಲದಿಂದಲೂ ಲೋಹಾದ್ರಿಯ ಬೆಟ್ಟದ ಜನರಿಗೆ ತಿಳಿದಿತ್ತೆಂಬುದು ಐತಿಹಾಸಿಕ ಉತ್ಖನನದಲ್ಲಿ ಲೋಹದ ಕುಲುಮೆ ಪ್ರದೇಶಗಳು ಕಂಡುಬಂದಿದ್ದು ಈ ಊಹೆಯನ್ನು ಸಮರ್ಥಿಸುತ್ತದೆ.

ಸ್ಥಳೀಯರ ಹೇಳಿಕೆಯ ಪ್ರಕಾರ ಹಿಂದೆ ಸಾರಿಗೆ ವ್ಯವಸ್ಥೆಗಳಿಲ್ಲದ ಸಮಯದಲ್ಲಿ ಜಾತ್ರೆಗೆ ಆಗಮಿಸಿದವರಿಗೆ ಖರೀದಿ ಮತ್ತು ಸಾಗಾಣಿಕೆಗೆ ಅನುಕೂಲಕರ ಸ್ಥಳ ಇದಾಗಿತ್ತು. ಆದ್ದರಿಂದ ದೂರದ ಊರುಗಳಿಂದ ವ್ಯಾಪಾರಕ್ಕಾಗಿ ಜಾತ್ರೆಗೆ ಆಗಮಿಸುತ್ತಿದ್ದರು. ವೈವಿಧ್ಯಮಯವಾದ ದಿನಬಳಕೆ ವಸ್ತುಗಳು ಮಧ್ಯವರ್ತಿಗಳಿಂದ ಮಾರಾಟ ಗೊಳ್ಳುತ್ತಿದ್ದವು. ಅಂದು ಅಗತ್ಯಕ್ಕೆ ತಕ್ಕಷ್ಟು ಸಲಕರಣೆಗಳ ತಯಾರಿಕೆಗೆ ಅದಿರು ಬಳಕೆಯಾಗುತ್ತಿತ್ತು. ಅದು ಇಂದು ಜಾಗತಿಕ ಆಯಾಮವನ್ನು ಪಡೆದುಕೊಂಡಿದೆ. ಜನಪದರ ಜೀವನದ ಮೇಲೆ, ಪರಿಸರದ ಮೇಲೆ ಬರ್ಬರವಾದ ಪರಿಣಾಮವನ್ನುಂಟುಮಾಡುತ್ತಿದೆ. ಆಚರಣೆಯ ನೆಪದಲ್ಲಿ ಮಿತವಾಗಿ ವರ್ಷಕ್ಕೊಮ್ಮೆ ಬಳಸಲ್ಪಡುತ್ತಿದ್ದ ಖನಿಜಸಂಪತ್ತು ಇಂದು ಪ್ರತಿದಿನದ ಮಾರಾಟದ ಸರಕಾಗಿರುವುದು ಆತಂಕಕಾರಿ ಸಂಗತಿ ಯಾಗಿದೆ.

ಔಷಧಿಯ ಸಸ್ಯಗಳ ನಾರು-ಬೇರುಗಳಿಂದ ಗಿಡಮೂಲಿಕೆ ತಯಾರಿಸಿ, ಮಾರಾಟ ಮಾಡುವ ನಾಟಿ ವೈದ್ಯರು ಇಲ್ಲಿ ಪ್ರಾಮುಖ್ಯತೆ ಪಡೆದಿದ್ದಾರೆ. ದೇಸಿ ವೈದ್ಯಪದ್ಧತಿ ಬಳಕೆಯಿಂದ ಜನಸಾಮಾನ್ಯರ ಕಾಯಿಲೆ ವಾಸಿಯಾಗುವಲ್ಲಿ ಈ ಜಾತ್ರೆ ಸಹಾಯಕವಾಗಿರುವುದು ಗಮನಾರ್ಹ.

ಹಿಂದೆ ಜನ ಜಾನುವಾರುಗಳು ರೋಗಗಳಿಂದ ಮುಕ್ತವಾಗಲು ಇಲ್ಲಿಯ ಸಮುದಾಯಕ್ಕೆ ಒಂದು ದೈವದ ಅಗತ್ಯತೆ ಇತ್ತು. ಆ ಕೊರತೆಯನ್ನು ನೀಗಲು ನೀರಿರುವ ಈ ಗುಡ್ಡಪ್ರದೇಶ ಜನಪದರ ದೃಷ್ಟಿಯಲ್ಲಿ ಸೂಕ್ತ ಸ್ಥಳವಾಗಿ ಆಯ್ಕೆಗೊಂಡಿರಬೇಕು. ವನ್ಯಪ್ರಾಣಿಗಳ ಬೇಟೆಗಾರರು, ಪಶುಸಂಗೋಪನೆ, ಕುರಿ ಸಾಗಾಣಿಕೆ, ಕಾಡುಹಣ್ಣು ಹಾಗೂ ಜೇನು ಮಾರಾಟ, ಔಷಧಿ ಸಸ್ಯಗಳ ಸಂಗ್ರಹ ಮತ್ತು ಶುದ್ಧೀಕರಣ, ಅರಣ್ಯ ವಸ್ತುಗಳನ್ನು ಖರೀದಿಸಿ ಮಾರುವವರು, ಕೃಷಿಕರು, ಗುಡ್ಡದ ಪರಿಸರದ ಸುತ್ತಮುತ್ತ ತಾಂಡ, ಹಟ್ಟಿ, ಕೇರಿ, ಗ್ರಾಮಗಳೆಂದು ಗುರುತಿಸಲ್ಪಟ್ಟ ಪ್ರದೇಶಗಳಲ್ಲಿ ವಾಸಿಸುವ ಬುಡಕಟ್ಟು ಸಮುದಾಯಗಳಾಗಿವೆ. ಹಿಂದೆ ರಾಮಮಲೆ ಗುಡ್ಡದ ಸುತ್ತಲಿನ ಪ್ರದೇಶ ಬುಡಕಟ್ಟು, ಆದಿವಾಸಿ ಜನರ ವಾಸಸ್ಥಳವಾಗಿತ್ತು ಎಂಬುದು ವಕ್ತೃಗಳ ಹೇಳಿಕೆ.

ಇಲ್ಲಿ ಲಂಬಾಣಿ, ಮ್ಯಾಸನಾಯಕ, ಊರುನಾಯಕ, ಕಾಡುಕುರುಬ, ಗೊಲ್ಲ, ಹಗಲುವೇಷಗಾರ, ಬುಡುಬುಡುಕೆ, ಹಕ್ಕಿಪಿಕ್ಕಿ ಹೀಗೆ ಹಲವಾರು ಸಮುದಾಯಗಳ ಅಂತರಂಗದಲ್ಲಿ ಅಡಗಿದ ಹಾಡು, ಕಲಾಕುಸುರಿ ಕೌಶಲ್ಯಗಳು, ಕಲೆಗಳು ಆಚರಣೆಯ ನೆಪದಲ್ಲಿ ಪ್ರದರ್ಶನಗೊಳ್ಳುತ್ತಿವೆ. ಈ ಭಾಗದಲ್ಲಿ ಕರಕುಶಲತೆ ಹೆಚ್ಚಾಗಿರುವುದು ಲಂಬಾಣಿ ಮಹಿಳೆಯರಲ್ಲಿ. ಅವರು ತಯಾರಿಸಿದ ಸಾಂಸ್ಕೃತಿಕ ಪಳಿಯುಳಿಕೆಗಳೆಂದು ಕರೆಯುವ ದೇಸಿವಸ್ತುಗಳಾದ ಬುಟ್ಟಿಗಳು, ಕಟ್ಟಿಗೆಯ ಚಿತ್ತಾರದ ವಸ್ತುಗಳು, ಕಸೂತಿ ಕೈಚೀಲಗಳು, ಬಟ್ಟೆಗಳು, ಆಭರಣಗಳು ಹೀಗೆ ಕರಕುಶಲ ವಸ್ತುಗಳಿಗೆ ಈ ಜಾತ್ರೆ ಕೇಂದ್ರ ಮಾರುಕಟ್ಟೆಯಾಗಿದ್ದು, ಅವರ ಕೌಶಲ್ಯ ಪ್ರದರ್ಶನಕ್ಕೆ ಸೂಕ್ತ ವೇದಿಕೆಯಾಗಿದೆ. ಇಂದಿಗೂ ಸಹ ಲಂಬಾಣಿಗರು ವಿಶೇಷವಾಗಿ ಹೊಸಬಟ್ಟೆ ಧರಿಸಿ, ಹಾಡು ಹಾಡುತ್ತಾ, ಕೋಲಾಟವಾಡುತ್ತಾ ಜಾತ್ರೆಗೆ ಆಗಮಿಸುವುದು ಕಂಡುಬರುತ್ತದೆ. ಹೀಗೆ ತಮ್ಮ ಕ್ರಿಯಾತ್ಮಕ ವೃತ್ತಿಕೌಶಲ್ಯದಿಂದ ಎದೆಯಾಳದ ಪದಗಳ ಜ್ಞಾನಭಂಡಾರದಿಂದ ಜನಪದರು ಸಂತಸದ ಕ್ಷಣಗಳನ್ನು ಆಸ್ವಾದಿಸುವುದು ಆಚರಣೆಯ ಹಿನ್ನೆಲೆಯಲ್ಲಿ ಅಡಗಿದ ಕೌತುಕದ ಸಂಗತಿಯಾಗಿದೆ. ಇಂದು ಜಾಗತೀಕರಣದ ಫಲವಾಗಿ ಬುಡಕಟ್ಟು ಸಮುದಾಯಗಳ ಪಾರಂಪರಿಕ ದೇಸೀಜ್ಞಾನ, ಕಲೆಗಳು ಪಲ್ಲಟಗೊಳ್ಳುತ್ತಿವೆ. ಕಾರಣ ತಮ್ಮ ಮೂಲವೃತ್ತಿಗಳನ್ನು ತ್ಯಜಿಸಿ ಅದಿರು ಉದ್ಯಮದಲ್ಲಿ ಕೂಲಿಗಳಾಗುತ್ತಿದ್ದಾರೆ.

ಇಲ್ಲಿಯ ದೈವ ತಿಮ್ಮಪ್ಪನಾಗಿರುವುದರ ಹಿನ್ನೆಲೆ ಗಮನಾರ್ಹ. ಇಲ್ಲಿಯ ಉತ್ಪನ್ನಗಳನ್ನು ಹೆಚ್ಚಾಗಿ ಖರೀದಿಸುವವರು ಆಂಧ್ರ ಮೂಲದ ವೈಶ್ಯ ಸಮುದಾಯದವರು. ಅವರ ಆರಾಧ್ಯದೈವ ತಿರುಪತಿ ತಿಮ್ಮಪ್ಪ. ಹಿಂದೆ ಇಲ್ಲಿಯ ಸಮುದಾಯಗಳ ಆರಾಧನಾ ದೈವ ಹನುಮಪ್ಪನಾಗಿದ್ದು, ಇಂದು ಆರ್ಥಿಕ ಸ್ಥಿತಿವಂತಿಕೆಯುಳ್ಳವರ ಪ್ರಭಾವದಿಂದ ತಿಮ್ಮಪ್ಪನಾಗಿರಬೇಕು. ಇಂದಿಗೂ ಸ್ಥಳೀಯ ಗ್ರಾಮಗಳ ಜನರು ಜಾತ್ರೆಯಲ್ಲಿ ಹನುಮಪ್ಪನ ಪಲ್ಲಕ್ಕಿಯನ್ನು ತರುವುದು. ಇಲ್ಲಿರುವ ಶಿಲಾರೂಪಿ ಮೂಲದೈವ ಹನುಮಪ್ಪನೆಂಬುದನ್ನು ಸ್ಪಷ್ಟಪಡಿಸುತ್ತದೆ. ಇತ್ತೀಚೆಗೆ ಆಧುನಿಕತೆಯ ಸ್ಪರ್ಶದಿಂದ ಪಿಲೋಬನಹಳ್ಳಿಯಲ್ಲಿ ಪೂಜೆಗೊಳ್ಳುವ ಬೆಳ್ಳಿಯ ಲೋಹದ ಉತ್ಸವಮೂರ್ತಿಯನ್ನು ಜಾತ್ರೆಯ ಸಮಯದಲ್ಲಿ ತಂದು ಪೂಜಿಸುವುದು ಆಚರಣೆಯಲ್ಲಾದ ಸ್ಥಿತ್ಯಂತರ. ವ್ಯಾಪಾರೀಕರಣ ವಿಸ್ತರಣೆಯಾದಂತೆ ಸುತ್ತುಮುತ್ತಲಿನ ಗುಡ್ಡಗಳಲ್ಲಿ ಅಲ್ಲಲ್ಲಿ ತಿಮ್ಮಪ್ಪನ ಜಾತ್ರೆಗಳು ಏರ್ಪಡುತ್ತಿವೆ.

ಶ್ರಾವಣಮಾಸ ಜಿಟಿ ಜಿಟಿ ಮಳೆಗಾಲದ ಸಮಯ. ಆಗ ಸಸ್ಯ ಸಂಪತ್ತು ಹೆಚ್ಚಾಗಿ ದೊರೆಯುವುದೆಂಬ ಉದ್ದೇಶದಿಂದ ಜಾತ್ರೆ ಹಮ್ಮಿಕೊಂಡಿರಲು ಸಾಧ್ಯವಿದೆ. ಅಲಿಖಿತವಾಗಿ ನಡೆದುಕೊಂಡು ಬಂದ ಈ ಆಚರಣಾ ಪದ್ಧತಿಗಳು ಪರಸ್ಪರ ನಂಬಿಕೆಯ ಮೇಲೆ ಇಂದಿಗೂ ನಡೆಯುತ್ತಿವೆ. ಜನಸಂಪರ್ಕವಿರದ ನಿರ್ಜನ ಪ್ರದೇಶದಲ್ಲಿ ಆಚರಣೆಯ ನೆಪದಲ್ಲಿ ವರ್ಷಕ್ಕೊಂದು ದಿನ ಒಂದೆಡೆ ಸೇರುವುದು, ಪರಸ್ಪರ ಅಗತ್ಯ ವಸ್ತುಗಳ ಖರೀದಿ, ಕುಶಲ ವಿಚಾರ ವಿನಿಮಯ, ಹೊಸ ಬಟ್ಟೆ ಧರಿಸಿ ಸಂಭ್ರಮಿಸುವುದು, ಕೋಲಾಟ, ಸಾಮೂಹಿಕ ಹಾಡುಗಳಿಂದ ಮನೋರಂಜನೆ ನೀಡುವಿಕೆ ಇವೆಲ್ಲವೂ ಆಧುನಿಕತೆಯ ಸ್ಪರ್ಶದಿಂದ ಮುಕ್ತವಾಗಿ ಇಂದಿಗೂ ಸಂಭ್ರಮದ ಆಚರಣೆಗಳಾಗಿ ಉಳಿದಿರುವುದು ಅವುಗಳಲ್ಲಿಯ ಉಪಯೋಗಿ ತತ್ವಗಳಿಂದಾಗಿ ಎಂಬುದನ್ನು ಮನಗಾಣಬೇಕಿದೆ.

೪.೨. ಪ್ರಾಣಿ ಸಂಬಂಧಿ ಆಚರಣೆಗಳು

ಆದಿಮಾನವನ ಜೀವನ ಗುಹೆ, ಪೊಟರೆಗಳಲ್ಲಿ ಪ್ರಾರಂಭಗೊಂಡಾಗ ತನ್ನ ಸುತ್ತಲಿನ ಪ್ರಕೃತಿಯ ಜೊತೆ ಒಂದಲ್ಲಾ ಒಂದು ರೀತಿಯ ಸಂಬಂಧ ಬೆಸೆದುಕೊಂಡ. ಆಹಾರ, ನಿದ್ರೆ, ಮೈಥುನಗಳಲ್ಲಿ ತನ್ನಂತೆ ಇರುವ

ಪ್ರಾಣಿ ಸಮೂಹದಲ್ಲಿ ಹೆಚ್ಚಿನ ಭಿನ್ನತೆಯನ್ನು ಕಂಡುಕೊಳ್ಳಲಿಲ್ಲ. ಮಾನವನ ಬದುಕಿನ ಮೊದಲ ಹಂತದಲ್ಲಿ ಬೇಟೆ ಉದ್ದೇಶ ಆಹಾರ ಮೂಲದ್ದಾಗಿತ್ತು. ಕಾಲಕ್ರಮೇಣ ಅವುಗಳ ಉಪಯೋಗವನ್ನರಿತು, ಪಳಗಿಸಿ ತನ್ನ ಬದುಕಿನ ಕ್ಷೇಮಾಭಿವೃದ್ಧಿಯನ್ನು ಕಂಡುಕೊಂಡ ಕೆಲವು ಪ್ರಾಣಿ-ಪಕ್ಷಿಗಳ ಅದ್ಭುತ ಶಕ್ತಿಯನ್ನರಿತು ಭಯಭಕ್ತಿಯಿಂದ ಆರಾಧಿಸತೊಡಗಿದ. ದುಃಖಕ್ಕೆ ಕಾರಣವಾದುವನ್ನು ನಾಶಪಡಿಸುವ ಪ್ರಯತ್ನವು ನಡೆಯಿತು. ಕ್ರೂರ ಪ್ರಾಣಿಗಳಿಂದ ಭಯಮುಕ್ತನಾಗಲು ವಿಶೇಷ ಆರಾಧನೆಗಳನ್ನು ಆರಂಭಿಸಿದ. ಕೃಷಿ ಆವಿಷ್ಕಾರದ ಮೂಲಕ ಮಾನವ ಒಂದೆಡೆ ನೆಲೆನಿಂತ. ನವೀನ ತಂತ್ರಜ್ಞಾನಗಳನ್ನು ಆವಿಷ್ಕರಿಸಿದ. ಆಗ ಪ್ರಾಣಿಗಳು ಸಾಗಾಣಿಕೆ ಮತ್ತು ಕೃಷಿ ಚಟುವಟಿಕೆಯಲ್ಲಿ ಅವಿಭಾಜ್ಯ ಅಂಗಗಳಾದವು. ಪ್ರಾಣಿ ಸಮಾಜವು ಮಾನವನ ಸೇವೆಗಾಗಿ ಇರುವ ಸಮಾಜವಾಗಿ ಅಭಿವ್ಯಕ್ತಗೊಂಡಿತು. ಹೀಗೆ ಪ್ರಾಣಿಗಳ ಒಡನಾಟದಲ್ಲಿ ಮಾನವನ ಬದುಕು ಸಾಗಿ ಬಂದಿತು. ಅವುಗಳ ಬಗೆಗೆ ನಾನಾ ರೀತಿಯ ಭಾವನೆ, ಕಲ್ಪನೆ, ನಂಬಿಕೆಗಳು ರೂಢಿಗೊಂಡವು.

ಕಾಲಕ್ರಮೇಣ ನಂಬಿಕೆಗೆ ಹೆಸರಾದ ನಾಯಿ, ಸಹನಶೀಲ ಗುಣ ಹೊಂದಿದ ಕತ್ತೆ, ದುಡಿಮೆಗೆ ಸಹಾಯಕವಾದ ಎತ್ತು, ಹಾಲು ಕೊಡುವ ಎಮ್ಮೆ, ಆಕಳು ಜನಪದರ ಜೀವನ ಸಂಗಾತಿಗಳಾದವು. ತದನಂತರ ಎತ್ತು ನಂದಿಯಾಗಿ, ನಾಯಿ ಬೀರಲಿಂಗ ದೈವವಾಗಿ, ಹಂದಿ, ವರಹಾವತಾರವಾಗಿ, ಹಾವು ನಾಗದೇವತೆಯಾಗಿ, ಕುದುರೆ ಶಕ್ತಿ ಸಂಕೇತವಾಗಿ, ಗೋವು ಗೋಮಾತೆಯಾಗಿ, ಮಂಗ ಹನುಮಂತನಾಗಿ ದೈವರೂಪ ಪಡೆದುಕೊಂಡವು. ಹಾವಿಗೆ ಹಾಲೆರೆಯುವುದು ಸಂತಾನ ದೈವವಾದ ನಾಗನಿಗೆ ಭಯಭಕ್ತಿಯಿಂದ ಸಲ್ಲಿಸುವ ಕೃತಜ್ಞತೆಯಾಗಿದೆ. ಕರೆ ಹರಿಯುವುದು, ಕಿಚ್ಚು ಹಾಯಿಸುವುದು, ಸಂಕ್ರಾಂತಿ ಹಾಗೂ ಹಟ್ಟಿ ಹಬ್ಬದಲ್ಲಿ ಜಾನುವಾರುಗಳ ಆರೈಕೆ ಮಾಡುವುದು, ತಮ್ಮ ಕೃಷಿ ಚಟುವಟಿಕೆಯಲ್ಲಿ ಸಹಾಯಕವಾದ ಪ್ರಾಣಿ ಎಂಬ ಅಭಿಮಾನದಿಂದಾಗಿ, ಹಂದಿ ಹೇಸಿಗೆ ಪ್ರಾಣಿಯಾಗಿದ್ದರೂ, ಗೃಹಪ್ರವೇಶಿಸಿದರೆ ಲಕ್ಷ್ಮಿಯಾಗಿ ಪೂಜಿಸಲ್ಪಡುತ್ತದೆ. ತಮ್ಮ ಬದುಕಿಗೆ ಗಂಡಾಂತರಕಾರಿಯಾಗಬಹುದಾದ ಪ್ರಾಣಿಗಳು ಸಹ ದೈವತ್ವಕ್ಕೇರಿ ಪೂಜಿಸಲ್ಪಡುತ್ತವೆ. ಗಣಪನ ಆಚರಣೆಯಲ್ಲಿ ಬರುವ ಆನೆ, ಹಾವು, ಇಲಿ ಮಾನವನಿಗಿರುವ ಪ್ರಾಣಿಗಳ ಅವಲಂಬನೆಯನ್ನು ತಿಳಿಸುತ್ತದೆ.

ಪ್ರಾಣಿ ಮತ್ತು ಮಾನವನನ್ನು ಮಿಶ್ರ ಮಾಡಿದ ಗಣಪನ ಆಕೃತಿಯ ಸೃಷ್ಟಿಯ ಹಿಂದೆ ಪ್ರಾಣಿ ಸಮಾಜದೊಂದಿಗಿನ ಮನುಷ್ಯನ ಸಾಮರಸ್ಯದ ನೆಲೆಯನ್ನು ಕಾಣಲಾಗುತ್ತದೆ. ಬೇಟೆಯ ಸಂಸ್ಕೃತಿಯ ಕಾಲದಲ್ಲಿ ಆಯುಧಗಳನ್ನು ಮಾನವ ಆರಾಧಿಸುತ್ತಿದ್ದ ಎಂಬುದಕ್ಕೆ ಇಂದಿಗೂ ಉಳಿದು ಬಂದಿರುವ ಆಯುಧ ಪೂಜೆಯೇ ಸಾಕ್ಷಿಯಾಗಿದೆ. ಹಿಂದೆ ಮಾನವನಿಗೆ ಸಹಾಯಕವಾದ, ರಕ್ಷಾಕವಚವಾದ ಪ್ರಾಣಿಗಳು ಸತ್ತಾಗ ದೇವರಾಗುತ್ತಿದ್ದವು. ಜಾನುವಾರುಗಳು ಸತ್ತರೆ ಅವುಗಳಿಗೆ ವಿಶೇಷ ಸಮಾಧಿ ಮಾಡಿ 'ಗುಟ್ಟೆ' ಕಟ್ಟಿ, ಹಬ್ಬ-ಹರಿದಿನಗಳಲ್ಲಿ ಪೂಜಿಸುವ ಕ್ರಮ ಇಂದಿಗೂ ಇದೆ. ಇಂದಿಗೂ ಕುಲದೇವತೆಗಳಾಗಿ ಪ್ರಾಣಿವರ್ಗ ಗುರುತಿಸಲ್ಪಟ್ಟಿವೆ. ಆಯಾ ಕುಲಚಿಹ್ನೆ ಹೊಂದಿದ ಪ್ರಾಣಿಗಳನ್ನು ಆಯಾ ಕುಲದವರು ನಾಶ ಮಾಡುವಂತಿಲ್ಲ. ಈ ಕಾರಣದಿಂದ ಹತ್ತಾರು ಪ್ರಾಣಿ ಪಕ್ಷಿಗಳು ಪೂಜನೀಯ ಸ್ಥಾನಕ್ಕೇರಿ ಇಂದಿಗೂ ಸುರಕ್ಷಿತವಾಗಿವೆ. ಅನೇಕ ರಾಜಮನೆತನಗಳು ಇದಕ್ಕೆ ಹೊರತಾಗಿಲ್ಲ. ಅರ್ಜುನನ ಕಪಿಧ್ವಜ, ದುರ್ಯೋಧನನ ಸರ್ಪಧ್ವಜ, ವಿಜಯನಗರದ ಅರಸರಿಗೆ ಹಂದಿ ಕುಲ ಚಿಹ್ನೆಯಾದದ್ದು ಉತ್ತಮ ಉದಾಹರಣೆ. ಇಂದಿಗೂ ಜನಪದರ ಮಧ್ಯದಲ್ಲಿಯ ಕುಲಚಿಹ್ನೆಗಳು ಅರ್ಥಪೂರ್ಣತೆಯನ್ನು ಪಡೆದುಕೊಂಡಿವೆ.

ಮಹಾಸತಿ, ತ್ಯಾಗಜೀವಿ ಎಂದು ಗುರುತಿಸಲ್ಪಟ್ಟ ಮಹಿಳೆಯರ ನೆನಪಿನ ಆಕೃತಿಗಳು ಇಂದಿಗೂ ಇವೆ. ಅವು ಅತಿಮಾನುಷ ಶಕ್ತಿಯಾಗಿ ಮಾಸ್ತೆಮ್ಮನ ರೂಪದಲ್ಲಿ ಪೂಜಿಸಲ್ಪಡುತ್ತಿವೆ. ಬಲಿ ಅರ್ಪಣೆಯೆಂದರೆ ಜೀವನದ ನಿರಂತರತೆಯನ್ನು ನಿಯಮಿತವಾಗಿ ಕಾಪಾಡುವುದೆಂಬ ನಂಬಿಕೆಯಿದೆ. ಹಿಂದಿನ ಉಗ್ರಬಲಿ ಆಚರಣೆಗಳಿಂದು ಇಲ್ಲವಾದರೂ ಕೋಣ, ಕೋಳಿ, ಕುರಿ ನೀಡಿಕೆ ಮುಂದುವರೆದಿದೆ. ಪ್ರಾಣಿಬಲಿಯ ಪರ್ಯಾಯವಾಗಿ ಲಿಂಬೆ, ತೆಂಗು, ಬಾಳೆ ನೀಡಿಕೆಯು ಇಂದು ಹೆಚ್ಚಾಗಿ ಪ್ರಚಲಿತದಲ್ಲಿದ್ದು, ಅದನ್ನು ಪ್ರಾಣಿಗಳ ಉಳಿಯುವಿಕೆಗೆ ಆಚರಣೆಗಳಲ್ಲಿ ನಡೆಯುವ ಸ್ಥಿತ್ಯಂತರವಾಗಿ ಗುರುತಿಸಬಹುದಾಗಿದೆ.

ಪ್ರಾಣಿಶಕ್ತಿ ಹಾಗೂ ಅವುಗಳ ಅಭಿವ್ಯಕ್ತಿಯ ಹಿನ್ನೆಲೆಯು ಹಲವಾರು ನಂಬಿಕೆಗಳ ಹುಟ್ಟಿಗೆ ಕಾರಣವಾಗಿದೆ. ಈ ನಂಬಿಕೆಗಳು ಆಯಾ ಪ್ರದೇಶದ ಜನರ ಮನೋಭಾವನೆಯನ್ನು ಅವಲಂಬಿಸಿದವುಗಳಾಗಿವೆ. ಬೆಕ್ಕು ಅಡ್ಡ ಬಂದರೆ ಅಪಶಕುನ, ಹಲ್ಲಿ ನುಡಿದರೆ ಮನಸ್ಸಿನಲ್ಲಿ ಅಂದುಕೊಂಡದ್ದು ನೆರವೇರುತ್ತದೆ. ಬೆಳಿಗ್ಗೆ ಎದ್ದು ನರಿಮುಖ ನೋಡಿದರೆ ಅದೃಷ್ಟ ಹೀಗೆ ಪ್ರಾಣಿ ಪಕ್ಷಿಗಳು ಶುಭ ಅಶುಭ ನುಡಿಯುವ ಭವಿಷ್ಯ ಸೂಚಕ ಜೀವರಾಶಿಗಳಾಗಿ ಕಂಡುಬಂದಿವೆ. ಹಿಂದೆ ಸಾವಿನ ದೂತನಾಗಿ ಸಂದೇಶ ಕಳುಹಿಸುತ್ತಿದ್ದ ಪಾರಿವಾಳವನ್ನು, ಇಂದು ಶಾಂತಿಯ ಸಂಕೇತವಾಗಿ ಹಾರಿ ಬಿಡಲಾಗುತ್ತದೆ. ಸಮಾಧಿಯ ಮುಂದೆ ಇಟ್ಟ ಅನ್ನವನ್ನು ಕಾಗೆ ಮುಟ್ಟಬೇಕು, ಅದು ಶನಿದೇವರ ವಾಹನ, ಕಾಗೆ ಕೂಗು ಮರಣದ ಸೂಚನೆ ಎಂಬ ನಂಬಿಕೆಗಳಿವೆ. ಇವು ಪ್ರಾಣಿಗಳಲ್ಲಿ ಮುಂದಿನ ಅಪಾಯ ಗ್ರಹಿಸುವ ಸಾಮರ್ಥ್ಯವಿದೆ ಎಂಬ ಹಿನ್ನೆಲೆಯಲ್ಲಿ ಉದಯಿಸಿದ ನಂಬಿಕೆಗಳಾಗಿವೆ.

ಕುದುರೆ ಶಕ್ತಿಗೆ ಹೆಸರಾದ ಪ್ರಾಣಿಯಾದ್ದರಿಂದ ಶಕ್ತಿದೇವತೆಗಳ ವಾಹನವಾಗಿಸಿದ್ದಾರೆ. ಆನೆ ಕಾಡಲ್ಲಿ ನಿರ್ಭಯವಾಗಿ ತಿರುಗಾಡುತ್ತಿರುವ ಸೂಕ್ಷ್ಮಬುದ್ಧಿಗೆ ಹೆಸರಾದ ಪ್ರಾಣಿ; ಅದನ್ನು ವಿಜಯದ ಲಾಂಛನವಾಗಿ, ಶಿಲ್ಪಕಲೆಗಳಲ್ಲಿ, ಜಂಬೂ ಸವಾರಿಯಲ್ಲಿ ಇಂದಿಗೂ ಬಳಸಲಾಗುತ್ತಿದೆ. ಜನಪದರ ಮೂಲಕ ಬೆಳೆದುನಿಂತ ಪುಣ್ಯಕೋಟಿಯ ಪ್ರಸಂಗ ಮಹತ್ವದ ಕಥನವಾಗಿದೆ. ಹೀಗೆ ಪ್ರಾಣಿ ವರ್ಗವು ಜನಪದರ ಆಚರಣೆಗಳಲ್ಲಿ ವಾಹನ, ಸೇವಕ, ಬಲಿನೀಡಿಕೆಯ ರೂಪಗಳಾಗಿ, ಕುಲಬಂಧುವಾಗಿ, ಮಾನವನ ಯಜಮಾನಿಕೆಗೆ ಒಳಪಟ್ಟಂತೆ ಅಭಿವ್ಯಕ್ತಗೊಂಡಿವೆ. "ಮಾನವನ ಶಕ್ತಿಗೆ ಒಂದು ಸಮಾನ ಮತ್ತು ಪರ್ಯಾಯ ಶಕ್ತಿ ಪ್ರಾಣಿಗಳಲ್ಲಿದೆ ಅಥವಾ ಮಾನವನ ಕೊರತೆಗಳನ್ನೆಲ್ಲಾ ತುಂಬಿಕೊಡಬಹುದಾದ ಶಕ್ತಿ ಪ್ರಾಣಿ ಸಮಾಜಕ್ಕಿದೆ".[೮] ಇಂಥ ಕಾರಣಗಳು ಪ್ರಾಣಿಗಳನ್ನು ದೈವತ್ವಕ್ಕೇರಿಸಿ, ಆರಾಧಿಸಲು ಕಾರಣವಾಗಿರಬೇಕು. ಕೃಷಿಕರಿಗೂ ಈ ದೈವಗಳಿಗೂ ನಿಕಟವಾದ ಸಂಬಂಧವಿದೆ. ಭೌಗೋಳಿಕ ವಾತಾವರಣಕ್ಕೆ ಅನುಗುಣವಾಗಿ ತನ್ನ ಕೃಷಿ ಚಟುವಟಿಕೆಯೊಂದಿಗೆ, ಬೆಳೆಗಳೊಂದಿಗೆ ಸಂಬಂಧ ಕಲ್ಪಿಸಿ ದೇವತಾ ಪ್ರಾಣಿಗಳು ಆರಾಧಿಸಲ್ಪಟ್ಟಿವೆ. ಒಂದೊಂದು ಪ್ರಾಣಿಯು, ಒಂದೊಂದು ದೇವತೆಯ ಹೆಸರಲ್ಲಿ ಗುರುತಿಸಲ್ಪಟ್ಟಿವೆ. ಪ್ರಾಣಿ ಸಮುದಾಯಕ್ಕಾಗಿಯೇ ವಿಶೇಷ ಹಬ್ಬ ಆಚರಣೆಗಳುಂಟು. ಕೃಷಿಕರ ಆಚರಣೆಗಳಲ್ಲಿ ಇವು ಪ್ರಮುಖ ಪಾತ್ರವಹಿಸಿಕೊಂಡಿವೆ.

ಇಡೀ ಪರಿಸರದ ಆಸ್ತಿ ಪ್ರಾಣಿ ಜಗತ್ತಾಗಿದೆ. ಇಂಥ ಮಹತ್ವದ ಸ್ಥಾನ ಪಡೆದ ಪ್ರಾಣಿ ವರ್ಗ ಸರಳವಾಗಿ, ಸುಗಮವಾಗಿ, ಆರೋಗ್ಯ ಪೂರ್ಣವಾಗಿ ಜೀವಿಸಲು, ಸಸ್ಯ ಸಂಪತ್ತಿನ ಅಗತ್ಯತೆಯಿದೆ. ಈ ಹಿನ್ನೆಲೆಯಲ್ಲಿ ಸಸ್ಯ

ಸಂಪತ್ತು ಸಮೃದ್ಧವಾಗಿ ಬೆಳೆಯಬೇಕಾದರೆ ಪರಿಸರಕ್ಕೆ ಅನುಗುಣವಾಗಿ ಪ್ರಾಣಿ ವರ್ಗಗಳು ಇರಬೇಕಾಗುತ್ತದೆ. ಹೀಗೆ ಪ್ರಾಣಿ ವರ್ಗದ ಉಳಿವಿಗೆ ಪರಿಸರದ ಅವಲಂಬನೆಗೆ ಜನಪದರ ಹಬ್ಬ, ಆಚರಣೆ, ವಿಧಿ-ನಿಷೇಧಗಳು ಸಹಾಯಕವಾಗಿವೆ.

೪.೨.೧. ಕರೆ ಹರಿಯುವ ಆಚರಣೆ

ರೈತರ ಸಮುದಾಯದಿಂದ ಜೇಷ್ಠಮಾಸದ ಹುಣ್ಣಿಮೆಯ ದಿನ ಜಾನುವಾರುಗಳಿಗಾಗಿ ಕರೆ ಹರಿಯುವ ಆಚರಣೆ ನೆರವೇರುತ್ತದೆ. ಇದನ್ನು ಕಾರಹಬ್ಬ, ಕಾರಹುಣ್ಣಿಮೆ, ಕಾರ್ಹುಣಿಮೆ ಎಂದು ಕರೆಯುವ ವಾಡಿಕೆ ಇದೆ. " "ಕಾರ್" ಪದವನ್ನು ಬಿಡಿಸಿ ಅರ್ಥೈಸಿದಾಗ ಮಳೆಗಾಲ ಎಂದೂ, ಮುಂಗಾರು, ಹಿಂಗಾರು ಮಳೆಗಳ ಮೋಡಗಳು ಕಪ್ಪಾಗಿ ಆಕಾಶದಲ್ಲಿ ಒಂದಕ್ಕೊಂದು ಪ್ರತಿಬಿಂಬಿಸುವ ಕಾಲ ಎಂದು ಹೇಳಬಹುದಾಗಿದೆ"(ರಾಮು ಮುಲಗಿ, ೨೦೧೦, ಪು. ೧೭೦). ಮಳೆಗಾಲದ ಮೊದಲ ಹುಣ್ಣಿಮೆಯನ್ನು ಸಂತೋಷದಿಂದ ಸ್ವಾಗತಿಸುವ ಆಚರಣೆ ಇದು. ಹಲವೊಮ್ಮೆ ಬಿತ್ತನೆಕಾರ್ಯ ಪೂರ್ಣಗೊಂಡು ಫಸಲು ಮೊಳಕೆಯೊಡೆದು ರೈತರಿಗೂ, ಎತ್ತುಗಳಿಗೂ ಬಿಡುವಿನ ಸಮಯವೂ ಹೌದು. ಕನ್ನಡ ವಿಷಯ ವಿಶ್ವಕೋಶದ ಪ್ರಕಾರ "ಕನ್ನಡ ನಾಡಿನ ಇತಿಹಾಸದಲ್ಲಿ ಸಾವಿರ ವರ್ಷಗಳ ಹಿಂದಿನಿಂದಲೂ ಕಾರುಹುಣ್ಣಿಮೆಯ ಹೆಸರು ಬಳಕೆಯಲ್ಲಿದ್ದಂತೆ ಕಾಣುವುದು. ೧೦೦೭ ಮತ್ತು ೧೧೦ಳನೆಯ ವರ್ಷಗಳ ಶಿಲಾಶಾಸನಗಳಲ್ಲಿ ಕಾರುಹುಣ್ಣಿಮೆ ಎಂಬ ಮಾತು ಬಂದಿದೆ". ಇದರಿಂದ ನದಿ ಬಯಲಿನ ನಾಗರಿಕತೆಯ ಕಾಲದಿಂದಲೂ ಜಾನುವಾರುಗಳು ಮಾನವನ ಬದುಕಿನಲ್ಲಿ ಒಂದಲ್ಲಾ ಒಂದು ರೀತಿಯಲ್ಲಿ ಸಂಬಂಧ ಹೊಂದಿವೆ. ಹೀಗಾಗಿ ಜನಪದರ ಬದುಕಿನ ಎಲ್ಲಾ ಸ್ತರಗಳಲ್ಲೂ ಜಾನುವಾರುಗಳ ಸಮ್ಮಿಲನವಿದೆ. ಬಳ್ಳಾರಿ ಜಿಲ್ಲೆಯ ಹಡಗಲಿ, ಹಗರಿಬೊಮ್ಮನಹಳ್ಳಿ, ಹೊಸಪೇಟೆ, ಸಿರುಗುಪ್ಪ, ಬಳ್ಳಾರಿ ತಾಲ್ಲೂಕುಗಳ ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚಾಗಿ ಈ ಕಾರುಹುಣ್ಣಿಮೆಯನ್ನು ಆಚರಿಸುತ್ತಾರೆ.

ಮೋರಗೇರಿ ಗ್ರಾಮದಲ್ಲಿ ಕಲ್ಲುಕಂಬಗಳಿಗೆ ಮಾವಿನ ತೋರಣ ಕಟ್ಟಿ, ಬಲಿಷ್ಠವಾದ ಎತ್ತುಗಳನ್ನು ಅಗಸಿಯ ಮುಖಾಂತರ ಹಾಯಿಸುತ್ತಾರೆ. ತೋರಣ ಹರಿದುಕೊಂಡು ಹೋದ ಎತ್ತು ಮಾತ್ರ ಮೆರವಣಿಗೆಗೆ ಆಯ್ಕೆಯಾಗುತ್ತದೆ. ಮರಿಯಮ್ಮನಹಳ್ಳಿ, ಬಾಚಿಗೊಂಡನಹಳ್ಳಿಯಲ್ಲಿ ಗ್ರಾಮದ ಎಲ್ಲಾ ಎತ್ತುಗಳನ್ನು ತಾಲೀಮು ನಡೆಸಿ, ಸಾಲಾಗಿ ನಿಲ್ಲಿಸಿ ಓಡಿಸುವ ಕ್ರಮವಿದೆ. ಅಗಸಿ ಬಾಗಿಲಲ್ಲಿರುವ ಉದ್ದನೆಯ ಕಟ್ಟಿಗೆಗೆ ಮಾವು, ಬೇವುಗಳ ತೋರಣದೊಂದಿಗೆ ಕೊಬ್ಬರಿ ಬಟ್ಟಲು ಅರಿಶಿಣಕೊಂಬು, ಉತ್ತುತ್ತಿ ಮತ್ತು ಕರಿಗಡುಬು ಕಟ್ಟುತ್ತಾರೆ. ತೋರಣ ಹರಿದುಕೊಂಡು ಓಡಿಬಂದ ಎತ್ತನ್ನು ಪೂಜಿಸಿ, ಮಂಡಕ್ಕಿ ಕೊಬ್ಬರಿ ಹಂಚಿ ಮೆರವಣಿಗೆ ಮಾಡಲಾಗುತ್ತದೆ.

ಬಳ್ಳಾರಿ ತಾಲೂಕು ಯರಂಗಳಿಗೆ ಗ್ರಾಮದಲ್ಲಿ ಕರೆಹರಿಯುವಾಗ ಅಗಸಿಯ ಬಾಗಿಲಲ್ಲಿ ಸಾಲುಗಟ್ಟಿ ಜನರು ನಿಲ್ಲುತ್ತಾರೆ. ಹಾಯುವ, ಒದೆಯುವ, ಡುರಕಿಹಾಕುವ, ಬೆದರಿಸುವ ಭಯಾನಕ ಸ್ವಭಾವದ ಎತ್ತುಗಳಾಗಿದ್ದರೂ, ಚಾಕಚಕ್ಯತೆಯಿಂದ ಕೊರಳಲ್ಲಿಯ ಕೊಬ್ಬರಿ ಬಟ್ಟಲನ್ನು ಕಿತ್ತುಕೊಳ್ಳುವ ಸಾಹಸ ಪ್ರದರ್ಶನ ನಡೆಯುತ್ತದೆ. ಕೂಡ್ಲಿಗಿ ತಾಲೂಕಿನಲ್ಲಿ "ಕಲೆತಾಗ ಕಾರುಣ್ಣಿಮೆ" ಎಂದು ತಮಗೆ ಅನುಕೂಲವಾದಾಗ ಆಚರಿಸಲಾಗುತ್ತದೆ.

ನಿರ್ಣಾಯಕ ಪಾತ್ರಧಾರಿ. ಅದು ಸ್ಪರ್ಧೆಗೆ ಚೇತನವನ್ನುಂಟುಮಾಡುವ ಶಕ್ತಿಯಾಗಿದೆ. ಅದ್ದರಿಂದಲೇ ಪೂಜನೀಯ ಸ್ಥಾನ ಪಡೆದಿದೆ.

ಆ ವರ್ಷದ ಮಳೆ, ಬೆಳೆ, ಭವಿಷ್ಯ ಸೂಚಕವನ್ನು ಕಾರಹುಣ್ಣಿಮೆಯಲ್ಲಿ ಕಾಣುತ್ತೇವೆ. ಕೆಂಪು ಬಣ್ಣದ ಎತ್ತು ಕರೆಹರಿದರೆ ಕೆಂಪು ಧಾನ್ಯಗಳು ಸಮೃದ್ಧವಾಗಿ ಬೆಳೆದು, ಉತ್ತಮ ಮಳೆಯಾಗುವುದು ಹಾಗೂ ಬೆಳೆಗಳಿಗೆ ರೋಗಬಾಧೆಯಾಗದು. ಬಿಳಿಎತ್ತು ಕರೆಹರಿದರೆ ಜೋಳ, ಕುಸುಬೆಯಂತಹ ಬಿಳಿಫಲಗಳು ಸಮೃದ್ಧಿಯಾಗಿ, ಹಿಂಗಾರು ಉತ್ತಮಗೊಳ್ಳುತ್ತದೆಂಬುದು ರೈತರ ಅನುಭವದ ಮಾತು.

ಮೊದಲ ದಿನ ಸ್ವಚ್ಛಗೊಂಡ, ಕೊಟ್ಟಿಗೆಯಲ್ಲಿ ಜಾನುವಾರುಗಳು ಪೂಜಿಸಲ್ಪಡುತ್ತವೆ. ಜಾನುವಾರುಗಳಿಗೆ "ಸಂಗಟಿ"[೧೦]ಯೊಂದಿಗೆ, ಮೆಣಸು, ಬಜೆ, ಅಜ್ವಾನಗಳಿಂದ ತಯಾರಿಸಿದ ಸಸ್ಯಮೂಲ ಔಷಧಿಯನ್ನು "ಗೊಟ್ಟ"[೧೧]ದಲ್ಲಿ ಹಾಕಿ ಕುಡಿಸುತ್ತಾರೆ. ಇದರಿಂದ ಕಫ, ಪಿತ್ತದೋಷ ನಿವಾರಣೆಯಾಗಿ ಜಾನುವಾರುಗಳು ಪುಷ್ಟಿಗೊಳ್ಳುತ್ತವೆಂಬುದು ಜಾನಪದ ವೈದ್ಯರ ಅಭಿಪ್ರಾಯವಾಗಿದೆ. ಹೀಗೆ ಒಂದು ಆಚರಣೆಯ ಮೂಲಕ ಹಲವಾರು ಉದ್ದೇಶಗಳು ಈಡೇರಿದಂತಾಗುತ್ತದೆ. ಹಲವೆಡೆ ಕಾರುಹುಣ್ಣಿಮೆಯಂದು ಬಿತ್ತುವ ಬೀಜಗಳನ್ನು ಪೂಜಿಸುವ ಸಂಪ್ರದಾಯವಿದೆ. ಹಗೇವುಗಳ ಧಾನ್ಯಗಳು, ಬಣವಿಗಳ ಹುಲ್ಲು ಕರೆಹರಿದ ನಂತರ ಬಳಸಲ್ಪಡುತ್ತವೆ. ಜಾನುವಾರುಗಳ ರೋಗರುಜಿನಗಳನ್ನು ಗುರುತಿಸುವ ಹಬ್ಬ ಇದಾಗಿದೆ.

೪.೨.೨. ಮಣ್ಣೆತ್ತಿನ ಅಮವಾಸ್ಯೆ

ಕಾರುಹುಣ್ಣಿಮೆಯ ನಂತರ ಬರುವುದೇ ಮಣ್ಣೆತ್ತಿನ ಅಮವಾಸ್ಯೆ. ಕಾರುಹುಣ್ಣಿಮೆಯಂದು ಜೀವಂತ ಎತ್ತುಗಳಿಗೆ ಪೂಜೆ ಸಲ್ಲಿಸಿದರೆ, ಮಣ್ಣೆತ್ತಿನ ಅಮವಾಸ್ಯೆಯಂದು ಮಣ್ಣಿನ ಎತ್ತುಗಳು ಪೂಜಿಸಲ್ಪಡುತ್ತವೆ. ಮಣ್ಣಿನ ಬಸವನಿಗೆ ಮಣ್ಣೆತ್ತು ಎಂದು ಕರೆಯುವ ವಾಡಿಕೆಯಿದೆ. " 'ಎತ್ತು' ಇದು ಅಚ್ಚಕನ್ನಡದ ಶಬ್ದವಾಗಿದ್ದು, ಬಸವನೆಂದು ಅರ್ಥ ಸೂಚಿಸುತ್ತದೆ".[೧೨] ಬಸವ ಶಬ್ದದ ತದ್ಭವರೂಪ ವೃಷಭ. ಬಳ್ಳಾರಿ ಜಿಲ್ಲೆಯ ಎಲ್ಲಾ ಭಾಗಗಳಲ್ಲಿ ಈ ಆಚರಣೆಯಿದೆ. ತಮ್ಮ ಹೊಲದ ಮಣ್ಣಿನಿಂದ ಅಲಂಕಾರಿಕವಾದ ಜೋಡಿ ಎತ್ತುಗಳು ಮತ್ತು ಗ್ವಾದಲಿ ತಯಾರಿಸುತ್ತಾರೆ. ಅವು ದೇವರ ಜಗುಲಿಯ ಮೇಲೆ ಪ್ರತಿಷ್ಠಾಪನೆಗೊಂಡು ಪೂಜಿಸಲ್ಪಡುವವು. ಗ್ವಾದಲಿಗೆ ಹಾಕುವ ಹಸಿರುಹುಲ್ಲು ಮತ್ತು ಜೋಳದ ಕಾಳುಗಳು ಸಮೃದ್ಧಿಯ ಸಂಕೇತವಾಗಿರುವವು. ದನಗಳ ರೋಗರುಜಿನಗಳನ್ನು ಗುರುತಿಸುವುದಕ್ಕಾಗಿ ಬರುವ ಕಾರುಹುಣ್ಣಿಮೆಯಂತೆ ಮಣ್ಣೆತ್ತಿನ ಹಬ್ಬದಲ್ಲೂ ವಿಶೇಷತೆಯಿದೆ. ಅಂದು ಜಾನುವಾರುಗಳು ಸ್ವಚ್ಛಗೊಳ್ಳುತ್ತವೆ. ಅವು ಗೆಜ್ಜೆಸರ, ಗಂಟೆ, ಹಣೆಗೆಜ್ಜೆ ಕಟ್ಟಿಕೊಂಡು, ಮೈತುಂಬಾ ರಂಗು ಹಚ್ಚಿಕೊಂಡು ಅಲಂಕೃತಗೊಳ್ಳುತ್ತವೆ.

ರೈತನ ಜೀವನಾಡಿಯಾದ ಎತ್ತಿನಪೂಜೆ ಬಹಳ ಪ್ರಾಚೀನವಾದುದು. "ಹರಪ್ಪ ಮತ್ತು ಮೆಹಂಜೋದಾರೊ ಸಂಸ್ಕೃತಿಯ ಉತ್ಖನನದಲ್ಲಿ ಎತ್ತುಗಳ ಚಿತ್ರವುಳ್ಳ ಮುದ್ರೆಗಳು ದೊರಕಿವೆ. ಕ್ರಿ.ಪೂ. ೩೦೦ರಲ್ಲಿ ಭಾರತಕ್ಕೆ ಬಂದ ಮೆಗಸ್ತನೀಸನು ರೈತರು ಬೇಸಾಯಕ್ಕಾಗಿ ಎತ್ತನ್ನು ಬಳಸುತ್ತಿದ್ದುದಾಗಿ ಉಲ್ಲೇಖಿಸಿದ್ದಾನೆ".[೧೩] ಶಿವನ ಶಾಪದಿಂದ ನಂದಿ ಭೂಮಿಗೆ ಬಂದು ಹೊಲ ಹೂಳುವ ಕಾಯಕದಲ್ಲಿ ನಿರತನಾದನೆಂದು ಜನಪದ ಪುರಾಣಗಳು

ತಿಳಿಸುತ್ತವೆ 'ಮಣ್ಣೆತ್ತಾದೊಡೇನು? ತನ್ನೆತ್ತು ಗೆಲ್ಲಬೇಕೆಂಬುದಕ್ಕೊಲವನು' ಎನ್ನುವ ಬಸವಣ್ಣನವರ ವಚನದಲ್ಲಿ ಮಣ್ಣೆತ್ತಿನ ಪ್ರಸ್ತಾಪವಾಗಿರುವುದು ಕಂಡುಬಂದಿದೆ. ಈ ಎಲ್ಲಾ ಅಂಶಗಳು ಹಿಂದಿನಿಂದಲೂ ಮಣ್ಣೆತ್ತಿನ ಆಚರಣೆ ಇತ್ತೆಂಬುದನ್ನು ಸ್ಪಷ್ಟಪಡಿಸುತ್ತವೆ. ಇದು ಕೃಷಿಕರ ಮೊದಲ ಮಣ್ಣಿನ ಪೂಜೆಯು ಹೌದು. ಆದರೆ "ಆರ್ಯ ಸಂಪ್ರದಾಯದಲ್ಲಾಗಲೀ, ಸಂಸ್ಕೃತ ಕಾವ್ಯಗಳಲ್ಲಾಗಲೀ, ಶಿಲಾಶಾಸನ ಉಲ್ಲೇಖಗಳಲ್ಲಾಗಲೀ, ಮಣ್ಣೆತ್ತಿನ ಪೂಜೆ ಕಂಡುಬರುವುದಿಲ್ಲ"(ಗದ್ದಗಿಮಠ, ೧೯೮೮, ಪು. ೬೮). ಇದರಿಂದ ಶೈವ ಸಂಸ್ಕೃತಿಯಲ್ಲಿ ಮಾತ್ರ ಈ ಆಚರಣೆ ವಿಶೇಷತೆಯನ್ನು ಪಡೆದಿತ್ತೆಂದು ತಿಳಿದುಬರುತ್ತದೆ.

ಜನಪದ ಕತೆಯ ಪ್ರಕಾರ ಮಣ್ಣೆತ್ತನ್ನು ಪೂಜಿಸಿ ತನ್ನ ಪಾತಿವ್ರತ್ಯದ ಪ್ರಭಾವದಿಂದ ಸತ್ತ ಗಂಡನ ಪ್ರಾಣ ಹಿಂದಿರುಗಿ ಪಡೆದವಳು ಶಿವಶರಣೆ ಚೆನ್ನಮ್ಮ. ಈ ಪ್ರಸಂಗ ಜೇಷ್ಠಬಹುಳ ಅಮವಾಸ್ಯೆ ದಿನ ಸಂಭವಿಸಿದುದರಿಂದ ಮಣ್ಣೆತ್ತಿನ ಅಮವಾಸ್ಯೆ ಎಂದು ಕರೆಯುವ ವಾಡಿಕೆಯಿದೆ. ಈಗಲೂ ರೋಹಿಣಿ ನಕ್ಷತ್ರಕ್ಕೆ "ಚೆನ್ನಮ್ಮನ ದಂಡೆ" ಎಂದು ಕರೆಯುತ್ತಾರೆ.

ಸಲವೊ ಬಸವ ಮಣ್ಣೆತ್ತಾಗಿ
ಎನ್ನ ಗಂಡನ ಪ್ರಾಣನೀಡೋ ಬಸವ ಮಣ್ಣೆತ್ತಾಗಿ
ಅಂಗೈಯಾಗಿರುವ ಮಣ್ಣೆತ್ತು
ಅಂಗದ ಲಿಂಗವೆ, ಚಿನ್ಮಯ ಲಿಂಗವೆ ಮಣ್ಣೆತ್ತು

ಜನಪದರ ಪ್ರಕಾರ ದೀರ್ಘಕಾಲ ಮುತ್ತೈದೆತನ ಸಿಗಲೆಂಬ ಆಶಯದಿಂದ ಮಹಿಳೆಯರು ವಿಶೇಷವಾಗಿ ಮಣ್ಣೆತ್ತುಗಳನ್ನು ಪೂಜಿಸುತ್ತಾರೆ. ಮಣ್ಣಿನ ಎತ್ತು ತಯಾರಿಸುವುದರಿಂದ ಅವರ ಹೊಲಗಳ ಮಣ್ಣಿನ ಪರೀಕ್ಷೆಯನ್ನು ಮಾಡಿಕೊಳ್ಳಬಹುದಾಗಿದೆ. ಇತ್ತೀಚೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಮಾರಾಟಕ್ಕಿಟ್ಟ ಬಣ್ಣ ಬಣ್ಣದ ಎತ್ತುಗಳನ್ನು ತಂದು ಪೂಜಿಸುವುದಿದೆ.

ಮಣ್ಣಿನಲ್ಲಿ ಹುಟ್ಟಿ, ಮಣ್ಣಿಗೆ ಸೇರುವ ನಾವು ಮಣ್ಣಿಗೆ ಕೃತಜ್ಞತೆಯನ್ನು ಸಲ್ಲಿಸಬೇಕೆಂಬುದು ಹಾಗೂ ಉತ್ತು-ಬಿತ್ತಲು ಕೃಷಿಕರ ಜೀವನಾಡಿಯಾದ ಎತ್ತುಗಳು ಅತಿಮುಖ್ಯವೆಂಬುದು ಆಚರಣೆಯ ಹಿನ್ನೆಲೆಯಾಗಿದೆ. ಜೀವನಾಧಾರವಾದ ಮಣ್ಣು, ಎತ್ತುಗಳ ರೂಪದಲ್ಲಿ ಪೂಜಿಸಲ್ಪಟ್ಟು ಮರಳಿ ಮಣ್ಣಿಗೆ ಸೇರುತ್ತಿರುವುದು, ನೆಲಮೂಲಕ್ಕೆ ಆಚರಣೆಯ ಮೂಲಕ ಜನಪದರು ನೀಡುವ ಗೌರವವಾಗಿದೆ.

೪.೨.೩. ಬಸವ ಜಯಂತಿ

ಕೃಷಿಕರಿಗೆ ಒಕ್ಕಲುತನಕ್ಕೆ ಎತ್ತುಗಳು ಮೂಲಾಧಾರ. ಎತ್ತು ಬಸವಣ್ಣನೇ ಆಗಿದ್ದಾನೆ. ಬಸವಣ್ಣನನ್ನು ನಂದಿಯ ಅವತಾರವೆಂದು ಪೂಜಿಸುತ್ತಾರೆ. ಬಳ್ಳಾರಿ, ಸಿರುಗುಪ್ಪ ತಾಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ಬಸವ ಜಯಂತಿಯಂದು ಪಲ್ಲಕ್ಕಿ ಉತ್ಸವ ನೆರವೇರುತ್ತದೆ. ಎತ್ತುಗಳನ್ನು ಶೃಂಗರಿಸಿ, ಬಂಡಿಯ ರೂಪದ ಪಲ್ಲಕ್ಕಿಯಲ್ಲಿ ಬಸವಣ್ಣನ ಭಾವಚಿತ್ರವಿಟ್ಟು, ಹರಾಜಿನಲ್ಲಿ ಗೆದ್ದ ಎತ್ತುಗಳಿಂದ ಪಲ್ಲಕ್ಕಿ ಎಳೆಸುತ್ತಾರೆ. ಇದು ಊರೊಟ್ಟಿನ ಆಚರಣೆ. ಆದಕಾರಣ ಮೆರವಣಿಗೆಯಲ್ಲಿ ಪ್ರತಿ ಮನೆಯಿಂದ ಕಳಸ ಹಿಡಿದ ಮುತ್ತೈದೆ ಹಾಗೂ

ಒಂದು ಜೊತೆ ಎತ್ತುಗಳು ಪಾಲ್ಗೊಳ್ಳುತ್ತವೆ. ಜನಪದರ ದೃಷ್ಟಿಯಲ್ಲಿ ಬಸವೇಶ್ವರ ಹಾಗೂ ಬಸವಣ್ಣ ಸಮಾನರು. ಕೃಷಿ ಕೆಲಸಕ್ಕೆ ಮುಖ್ಯವಾಗಿ ಎತ್ತುಗಳು ಬೇಕು. ಎತ್ತು ಶಿವನ ವಾಹನವಾಗಿರುವಂತೆ, ಬಸವಣ್ಣ ನಂದಿಯ ಅವತಾರ. ಆದ್ದರಿಂದ ಬಸವಣ್ಣನನ್ನು ದ್ವಿತೀಯ ಶಂಭು ಎಂದು ಪುರಾಣಗಳಲ್ಲಿ ಹಾಗೂ ಜನಪದ ಕಾವ್ಯಗಳಲ್ಲಿ ಬಣ್ಣಿಸಿದ್ದಾರೆ. ಹಾಗೆಂದೇ ಕೃಷಿಕರಿಂದ ಬಸವಣ್ಣ ಎತ್ತುಗಳ ರೂಪದಲ್ಲಿ ಪೂಜಿಸಲ್ಪಡುತ್ತಾನೆ.

"ಬಸವನ ಹಬ್ಬವು ಶುದ್ಧಾಂಗವಾಗಿ ರೈತರ ಹಬ್ಬವಾಗಿದ್ದು, ಅದು ಲಿಂಗಾಯುತ ಸಮುದಾಯದಲ್ಲಿ ಸುಲಭವಾಗಿ ಬಸವ ಜಯಂತಿಯಾಯಿತು. ಆ ದಿನ ನಡೆಯುವ ಎತ್ತುಗಳ ಮೆರವಣಿಗೆ ವ್ಯವಸಾಯಕ್ಕೆ ಸಂಬಂಧಿಸಿದ್ದು"(ಡಾ. ಎಂ. ಚಿದಾನಂದಮೂರ್ತಿ, ಜನ ಜನಪದ ಜಾನಪದ, ಪು. ೨೦೯). ಹೀಗೆ ಹಬ್ಬಗಳನ್ನು ಸಮಕಾಲೀನವಾಗಿ ನೋಡಿದರೆ ಅವುಗಳಿಗೆ ಸಾಮಾಜಿಕ, ಮತೀಯ, ಶೈಕ್ಷಣಿಕ ಆಯಾಮಗಳಿರುವುದು ಕಂಡುಬರುತ್ತದೆ. ಹಬ್ಬ ಮತ್ತು ಕ್ರೀಡೆಗಳು, ಹಬ್ಬ ಮತ್ತು ಮನೋರಂಜನೆಗಳು, ಹಬ್ಬ ಮತ್ತು ಆಚರಣೆಗಳನ್ನು ಹಳ್ಳಿಗರು ತಮ್ಮ ಏಕತಾನದ ಜೀವನದಲ್ಲಿ ಕಂಡುಕೊಂಡ ಬಗೆಯನ್ನು ಡಾ. ಎಂ. ಚಿದಾನಂದಮೂರ್ತಿಯವರು "ಪ್ರಸ್ತುತ ಹಬ್ಬಗಳ ಹಿಂದೆ ಪ್ರಾಕ್ತಾನತೆ" ಎಂಬ ಲೇಖನದಲ್ಲಿ ವಿವರಿಸಿದ್ದಾರೆ.

ಉತ್ತಿ ಬಿತ್ತುವ ಮಂತ್ರ । ಬಿತ್ತಿ ಬೆಳೆಯುವ ಮಂತ್ರ ।
ಸತ್ಯ ಶಿವಮಂತ್ರ ನಿನ್ಹೆಸರು । ಬಸವಯ್ಯ ಮರ್ತ್ಯದೊಳು ಮಂತ್ರ ಜೀವನಕೆ ।

ಹೀಗೆ ಕೃಷಿಕರು ಮಹಾತ್ಮ ಬಸವೇಶ್ವರರನ್ನು ತಮಗೆ ಸಹಕಾರಿಯಾದ ಎತ್ತಿನ ಪರಿಕಲ್ಪನೆಯ ಮೂಲಕ ಸ್ಮರಿಸಿಕೊಳ್ಳುವುದು ಗಮನಾರ್ಹ. ಪ್ರತೀ ಸೋಮವಾರ ಬಸವಣ್ಣನ ವಾರ ಎಂದು ಎತ್ತುಗಳ ಮೈತೊಳೆದು ಪೂಜಿಸುತ್ತಾರೆ, ಅಂದು ಗಳೇವು ಹೂಡುವುದಿಲ್ಲ.

ಕೃಷಿ ಕೃತ್ಯ ಕಾಯಕದಿಂದಾದಡೇನು ।
ತನುಮನ ಬಳಸಿ ತಂದು ದಾಸೋಹವ ಮಾಡುವ ।
ಪರಮ ಸದ್ಭಕ್ತನ ಪಾದವ ತೋರಯ್ಯ ಎನಗೆ ।

ಎನ್ನುವ ಬಸವಣ್ಣನವರ ವಚನದ ಪ್ರಕಾರ, ದೇಹ ಮತ್ತು ಮನಸ್ಸಿನ ದಂಡನೆಯಿರದೇ ಕೃಷಿ ಕೆಲಸ ಅಸಾಧ್ಯ. ಉಪಜೀವನಕ್ಕೆ ಬೇಕಾದಷ್ಟನ್ನು ಪಡೆದು ಉಳಿದದ್ದನ್ನು ದಾಸೋಹಕ್ಕೆ, ಜಂಗಮಕ್ಕೆ (ಸಮಾಜ ಸೇವೆಗೆ) ಅರ್ಪಿಸಬೇಕು ಎಂಬುದಾಗಿದೆ. ಕೃಷಿಕರೇ ಅಂಥ ಸದ್ಭಕ್ತರಾಗಿರುವರೆಂಬ ಭಾವದ ಮಾರ್ಮಿಕತೆಯು ವಚನದಲ್ಲಿ ಕಂಡುಬಂದಿದೆ. ಲೌಕಿಕ ಬದುಕಿನಲ್ಲಿ ನೆಮ್ಮದಿ, ಆಧ್ಯಾತ್ಮಿಕ ಸಾಧನೆಯತ್ತ ಒಲವು ಮೂಡಿಸಿದ ಶರಣ ಸಮೂಹವನ್ನು ಸ್ಮರಿಸುವುದರ ಜೊತೆ ರೈತನ ಬೆನ್ನೆಲುಬಾದ ಎತ್ತುಗಳನ್ನು ಮೆರವಣಿಗೆ ಮಾಡಿ ಪೂಜಿಸುವುದು ಇಂದು ಬಸವ ಜಯಂತಿಯ ಆಚರಣೆಯಲ್ಲಿ ಕಂಡುಬಂದ ಅಂಶವಾಗಿದೆ.

ಬಸವಣ್ಣನ ಭಾವಚಿತ್ರವಿರುವ ಪಲ್ಲಕ್ಕಿಯನ್ನು ಎಳೆಯುವ ಎತ್ತುಗಳನ್ನು ಹರಾಜಿನಲ್ಲಿ ಗೆಲ್ಲಬೇಕೆಂಬ ನಿಯಮವಿದೆ. ಊರಲ್ಲಿರುವ ಎತ್ತುಗಳ ಜೋಡಿಗಳ ಪೈಕಿ ಅತ್ಯುತ್ತಮವಾದ ಜೋಡಿಗಳನ್ನು ಗುರುತಿಸಿ ಅವುಗಳಿಗೆ ಈ ಗೌರವ ಸಲ್ಲಿಸುತ್ತಿದ್ದಿರಬೇಕು. ಕಾಲಾನಂತರದಲ್ಲಿ ಹಳ್ಳಿಗಳಲ್ಲಿ ಸಾಮಾಜಿಕ, ರಾಜಕೀಯ, ಸ್ಥಾನಮಾನಗಳಿಂದ

ಬಲಾಢ್ಯರ ಎತ್ತುಗಳು, ಉಳಿದವರ ಎತ್ತುಗಳಿಗಿಂತ ಸುಮಾರಾಗಿದ್ದರೂ, ಅವರ ಎತ್ತುಗಳೇ ಪಲ್ಲಕ್ಕಿ ಎಳೆಯುವ ಪದ್ಧತಿ ಬಂದಾಗ, ಈ ಸಮಸ್ಯೆಯನ್ನು ಪರಿಹರಿಸಲು ಹಾಗೂ ಖರ್ಚು ವೆಚ್ಚಗಳನ್ನು ಸರಿದೂಗಿಸಲು ಹರಾಜಿನ ಪದ್ಧತಿ ರೂಢಿಗೆ ಬಂದಿರುವುದಾಗಿದೆ.

ಮೂಲ ಕೃಷಿಕರ ಆಚರಣೆಯಾದರೂ, ಆಧುನಿಕತೆಗೆ ತಕ್ಕಂತೆ ಮಾರ್ಪಾಟಾಗಿರುವುದು ಗಮನಾರ್ಹ ಅಂಶವಾಗಿದೆ. ತಾವು ಸಂರಕ್ಷಿಸಿದ ಎತ್ತುಗಳು ಜಾತ್ರೆ, ಉತ್ಸವಗಳಲ್ಲಿ ಪ್ರದರ್ಶನಗೊಳ್ಳಬೇಕೆಂಬ ಹಂಬಲ ಕೃಷಿಕರದು. ಎತ್ತುಗಳನ್ನು ಶೃಂಗರಿಸಿ ಕಾಲ್ನಡಿಗೆಯಲ್ಲಿ ಜಾತ್ರೆಗಳಿಗೆ ಕರೆತರುವುದು ಇದೇ ಆಶಯವಾಗಿದೆ. ಕೊಟ್ಟೂರಿನ ಕೊಟ್ಟೂರೇಶ್ವರ ಜಾತ್ರೆಯಲ್ಲಿ ಹಾಗೂ ಕುರುವತ್ತಿಯ ಬಸವೇಶ್ವರ ಜಾತ್ರೆಯಲ್ಲಿ ಈ ರೀತಿಯಾಗಿ ಅಲಂಕೃತಗೊಂಡ ಎತ್ತುಗಳು ಕಂಡುಬರುತ್ತವೆ. ಸಿರುಗುಪ್ಪ ತಾಲೂಕಿನ ರಾರಾವಿ ಗ್ರಾಮದ ಹುತ್ತಿನ ಯಲ್ಲಮ್ಮದೇವಿ ಜಾತ್ರೆಯಲ್ಲಿ ರೈತರು ಎತ್ತುಗಳನ್ನು ಕರೆತರುತ್ತಾರೆ. ಎತ್ತುಗಳ ವ್ಯಾಪಾರ ನಡೆಯುವುದರೊಂದಿಗೆ ಉತ್ತಮವಾದ ಎತ್ತುಗಳಿಗೆ ಪ್ರೋತ್ಸಾಹವಾಗಿ ಎ.ಪಿ.ಎಂ.ಸಿ. ವತಿಯಿಂದ ಬಹುಮಾನ ನೀಡಲಾಗುತ್ತದೆ.

೪.೨.೪. ಜಾನುವಾರುಗಳನ್ನು ದೇವರಿಗೆ ಬಿಡುವುದು

ಎತ್ತು ಶಿವನ ವಾಹನ; ನಂದಿಯ ಅಂಶ. ಈ ನಂಬಿಕೆಯ ಹಿನ್ನೆಲೆಯಲ್ಲಿ ದೇವರಿಗೆ ಗೂಳಿ ಬಿಡುವ ಪದ್ಧತಿ ಇದೆ. ಬಳ್ಳಾರಿ ಜಿಲ್ಲೆಯಲ್ಲಿ ಆಯಾ ಭಾಗದ ಸ್ಥಳೀಯ ದೈವದ ಹೆಸರಲ್ಲಿ ಗೂಳಿ ಬಿಡಲಾಗುತ್ತದೆ.

"ಎತ್ತುಗುತ್ತಮ ಲಿಂಗಮುಂದ್ರೆಯನ್ನೊತ್ತಿದರೆಯದು ಬಸವನೆಂಬರು" ಎಂದು ಮಹಾಲಿಂಗರಂಗರು ಹೇಳಿದ ಮಾತು ಗೂಳಿ ಬಿಡುವ ಸಂಪ್ರದಾಯದ ಉಲ್ಲೇಖ ೧೧ನೇ ಶತಮಾನದ ಶಾಸನವೊಂದರಲ್ಲಿ ಉಪಲಬ್ಧವಿದೆ".[೧೯] ಕುರುಗೋಡು ಬಸವೇಶ್ವರ ಜನಪದರ ಆಡುಮಾತಿನಲ್ಲಿ ಬಸವನಾಗಿದ್ದಾನೆ. ಇಲ್ಲಿ ಬೇಟೆ ಸಂಸ್ಕೃತಿಯ ನಂತರ ಬಂದ ಕೃಷಿ ಸಂಸ್ಕೃತಿಯ ಪ್ರತೀಕವಾಗಿ ಆರಾಧಿಸಲ್ಪಟ್ಟಿರಲು ಸಾಧ್ಯವಿದೆ. ಹಂಪಿಯ ವಿರೂಪಾಕ್ಷನ ಗುಡಿಯ ಎದುರಿಗೆ ಬಸವನಿರುವಂತೆ, ಇಡೀ ವಿಜಯನಗರ ಸಾಮ್ರಾಜ್ಯಕ್ಕೆ ಹಾಗೂ ಹಂಪಿ ವಿರೂಪಾಕ್ಷನಿಗೆ ಎದುರಾಗಿ ಇರುವುದು ಕುರುಗೋಡಿನ ಬಸವಮೂರ್ತಿ ಎಂಬ ಪ್ರತೀತಿ ಇದೆ. ಹಂಪಿ ಜಾತ್ರೆಯ ದಿನ ಇಲ್ಲಿಯೂ ಆಚರಣೆಗಳು ನಡೆಯುವುದನ್ನು ಗಮನಿಸಿದಾಗ, ವಿಜಯನಗರ ಸಾಮ್ರಾಜ್ಯ ಕಾಲದಿಂದಲೂ ಈ ಪ್ರದೇಶದಲ್ಲಿ ಬಸವನ ಆಚರಣೆ ಪ್ರಚಲಿತದಲ್ಲಿದೆಯೆಂದು ತಿಳಿದುಬರುತ್ತದೆ. ಹದಿನೈದು ಅಡಿ ಇರುವ ಇಲ್ಲಿಯ ಏಕಶಿಲಾಮೂರ್ತಿಯು ನಿತ್ಯ ಬೆಳೆಯುತ್ತಿತ್ತೆಂದೂ, ದೈವಭಕ್ತೆಯಾದ ಶರಣೆ ನೀಲಮ್ಮಳ ಹಸ್ತಸ್ಪರ್ಶವಾದ ನಂತರ ಬೆಳೆಯುತ್ತಿಲ್ಲವೆಂಬ ನಂಬಿಕೆಯಿದೆ. ಇಂಥ ಹಿನ್ನೆಲೆ ಹೊಂದಿದ ಕುರುಗೋಡು ದೊಡ್ಡ ಬಸವೇಶ್ವರ ದೈವದ ಹೆಸರಲ್ಲಿ ಗೂಳಿ ಬಿಡುವ ಸಂಪ್ರದಾಯವಿದೆ. ಗೂಳಿಯ ಬಲಭಾಗದ ತೊಡೆಗೆ ಲಿಂಗಮುದ್ರೆ ಹಾಕುವುದರೊಂದಿಗೆ ದೈವಕ್ಕೆ ಅರ್ಪಿಸುತ್ತಾರೆ.

ಅದೇ ರೀತಿಯಾಗಿ ಕೂಡ್ಲಿಗಿ ತಾಲೂಕಿನ ಪೂಜಾರಹಳ್ಳಿ ಬಸವಣ್ಣ ದೈವಕ್ಕೆ ಗೂಳಿ ಬಿಡುವ ಪದ್ಧತಿಯಿದೆ. ಪಶುಪಾಲನೆಯ ಸಂಕ್ರಮಣ ಸ್ಥಿತಿಯಲ್ಲಿ ಉದ್ಭವಗೊಂಡ ಲಿಂಗವನ್ನು ಶಿವಲಿಂಗವೆಂದು ಪರಿಗಣಿಸಿ ಬಸವ ಎಂದು ಕರೆಯಲಾಗುತ್ತದೆ. ಇಲ್ಲಿಯೂ ಗೂಳಿಗೆ ಮುದ್ರೆ ಹಾಕಿ ಸ್ವತಂತ್ರವಾಗಿರಲು ಬಿಡುತ್ತಾರೆ. "ಸಿಂಧೂ ಬಯಲಿನ ಜನರು ಪೂಜಿಸುವ ಗೂಳಿಯಂತೆ, ಪಶುಪತಿ ಆರಾಧನೆಯಂತೆ ಇಲ್ಲಿ ಸಮೂಹ ದೇವತೆಗಳನ್ನು

ಸಹ ಪೂಜಿಸುತ್ತಾರೆ(ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೬, ಪು. ೧೬೨). ಇಲ್ಲಿ ದೀಪಾವಳಿ ಸಮಯದಲ್ಲಿ ದೇವರೆತ್ತುಗಳನ್ನು ಓಡಿಸುವ ಪದ್ಧತಿ ಇದೆ. ಇದು ಮನೋರಂಜನೆಯ ಜೊತೆ ಅವುಗಳ ದೈಹಿಕ ಬಲಾಢ್ಯತೆಯನ್ನು ಪರೀಕ್ಷಿಸುವುದಾಗಿದೆ.

ಕೂಡ್ಲಿಗಿ ತಾಲೂಕಿನಲ್ಲಿ ಕಾಡುಗೊಲ್ಲ ಸಮುದಾಯದವರು ಪಾತೇಲಿಂಗ ದೈವದ ಹೆಸರಲ್ಲಿ ಮುದ್ರೆ ಒತ್ತಿದ ಎತ್ತನ್ನು ಬಿಡಲಾಗುತ್ತದೆ. ಎತ್ತು ಯಾವ ದಿಕ್ಕಿಗೆ ಹೊರಡುತ್ತದೊ, ಆ ದಿಕ್ಕಿನ ಜನರು ಆಹ್ವಾನಿಸಿ, ಕರಿಗಂಬಳಿ ಹಾಸಿ, ಅಕ್ಕಿ, ಕಾಣಿಕೆ ನೀಡುತ್ತಾರೆ. ಮಕ್ಕಳಾಗದ ಹೆಂಗಸರನ್ನು ಬಸವ ದಾಟಿದರೆ ಮಕ್ಕಳಾಗುತ್ತದೆ ಎಂಬ ನಂಬಿಕೆಯಿದೆ. ಬಾವಿ ತೋಡಿಸುವಾಗ ಬಸವ ಅತ್ತಿತ್ತ ಓಡಾಡಿ ಗಂಜಲುಹಾಕಿ ನಿಂತರೆ, ಆ ಜಾಗವನ್ನು ನಿಗದಿಪಡಿಸಿಕೊಳ್ಳುತ್ತಾರೆ. ಹಟ್ಟಿಗೆ ಅನಿಷ್ಟ ಕಾಡದಿರಲಿ, ರೋಗರುಜಿನಗಳು ಬಾರದಿರಲೆಂಬ ಆಶಯದಿಂದ ಪಾತೇಲಿಂಗದ ಉತ್ಸವ ಹೊರಡಿಸುತ್ತಾರೆ. “ಕಾಸೆಕಟ್ಟಿದ”[೧೫] ಬಸವ ಉತ್ಸವದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಹಬ್ಬ, ಜಾತ್ರೆ ವಿಶೇಷ ದಿನಗಳಲ್ಲಿ ಗೂಳಿಯನ್ನು ಮೈತೊಳೆದು, ಕೋಡುಗಳಿಗೆ ಎಣ್ಣೆ ಹಚ್ಚಿ ತಿಲಕವಿಟ್ಟು ಪೂಜಿಸುತ್ತಾರೆ. ಉತ್ಸವದ ಮುಂಭಾಗದಲ್ಲಿ ಬಣ್ಣದ ಬಟ್ಟೆಯ ಜೂಲಾ ಹಾಕಿ, ಅಲಂಕರಿಸಿದ ಗೂಳಿಯಿರುತ್ತದೆ. ಅದರ ಮೇಲೆ ನಗಾರಿ ಇರಿಸಿ ಬಡಿಯುತ್ತಾ ಉತ್ಸವದ ಮುಂದೆ ನಡೆಸಿಕೊಂಡು ಹೋಗುತ್ತಾರೆ. ಇದು ಬಸವನಿಗೆ ಉತ್ಸವಗಳಲ್ಲಿ ಜನಪದರು ನೀಡಿರುವ ಧಾರ್ಮಿಕ ಮನ್ನಣೆಯಾಗಿದೆ.

ಕಾಡುಗೊಲ್ಲ ಸಮುದಾಯದವರು ದೈವಕ್ಕೆ ಮೀಸಲಿಟ್ಟ ಕುರಿಯನ್ನು ‘ಜನ್ನಿಗೆ’ ಎಂದು ಕರೆಯುತ್ತಾರೆ. ಇದರ ಹಾಲು ಪವಿತ್ರ ತೀರ್ಥವಾಗಿ ಹೆತ್ತ ಸೂತಕ ಕಳೆಯಲು ಬಳಸಲ್ಪಡುತ್ತದೆ. ದೈವಕ್ಕೆ ಬಿಟ್ಟ ಕುರಿಯೆಂದು ಜಾಗರೂಕತೆಯಿಂದ ಸಲಹುತ್ತಾರೆ. ಪೂಜಾರಿಯ ವಿನಃ ಇತರರು ಮುಟ್ಟಬಾರದೆಂಬ ನಿಷೇಧವಿದೆ. ಸದೃಢವಾದ ಕುರಿಯ ಹಾಲು ಹೆಚ್ಚು ಪೌಷ್ಠಿಕಾಂಶದಿಂದ ಕೂಡಿದ್ದು, ಹಸುಕೂಸಿನ ಆರೋಗ್ಯ ವೃದ್ಧಿಗೆ ಸಹಾಯಕವಾಗಿರುವುದು ಆಚರಣೆಯ ಹಿನ್ನೆಲೆಯಲ್ಲಿ ಗಮನಿಸುವ ಅಂಶವಾಗಿದೆ.

ಹಂಪಿ ಪರಿಸರದಲ್ಲಿ ದನಕರುಗಳನ್ನು ಬಸವಿ ಬಿಡುವ ಸಂಪ್ರದಾಯವಿದೆ. ಆಕಳು ಬಂಜೆಯಾಗಿದ್ದರೆ, ಹುಟ್ಟಿದ ಕರುಗಳು ಸಾಯುತ್ತಿದ್ದರೆ, ಗುಂಪಿನಲ್ಲಿಯ ಆಕಳುಗಳು ಸಾಯುತ್ತಿದ್ದರೆ, ಅಂಥವುಗಳನ್ನು ಬಸವಿ ಬಿಡುತ್ತಾರೆ. ಆಕಳಿಗೆ ಸ್ನಾನ ಮಾಡಿಸಿ, ಗುಡಿಗೆ ಎಳೆತಂದು, ಕುಂಕುಮ, ಹೂಪತ್ರೆ ಹಾಕಿ ದೈವದ ಹೆಸರಲ್ಲಿ ಪೂಜಿಸುವುದರೊಂದಿಗೆ ಸ್ವತಂತ್ರವಾಗಿಸುತ್ತಾರೆ. ಲಿಂಗ ಮುದ್ರೆ ಹಾಕಿರದಿದ್ದರೂ ಹಾಲು ಕರೆಯುವಂತಿಲ್ಲ. ಕಟ್ಟಿಹಾಕುವಂತಿಲ್ಲ. ಯಾರ ಮನೆ ಮುಂದೆ ನಿಲ್ಲುವುದೋ, ಅವರು ಆಹಾರ ನೀಡಿ ಗೌರವಿಸುತ್ತಾರೆ. ಹಂಪಿಯ ಪರಿಸರದಲ್ಲಿ ಇಂಥ ಅಸಂಖ್ಯಾತ ಆಕಳು ಕಂಡುಬರುತ್ತವೆ. “ಆಕಳ ಹೊಟ್ಯಾಗ ಅಚ್ಚೇರು ಬಂಗಾರ” ಎನ್ನುವ ಗಾದೆಯಂತೆ ಸಗಣಿ, ಗಂಜಲು ಎಲ್ಲವೂ ನಿತ್ಯೋಪಯೋಗಿಯಾದವುಗಳಾಗಿವೆ. ಪ್ರತಿದಿನ ಗೋಪೂಜೆ ಮಾಡುವವರಿದ್ದಾರೆ. ಜಾನುವಾರುಗಳನ್ನು ಸಂರಕ್ಷಿಸಲಾಗದವರಿಗೆ ಈ ಪದ್ಧತಿ ಸಹಾಯಕವಾಗಿದೆ. ರೋಗಗ್ರಸ್ತ ನಿಶಕ್ತವಾಗಿರುವ ದನಕರುಗಳು ದಷ್ಟಪುಷ್ಟವಾಗಿ ಬೆಳೆದು ಉತ್ತಮ ಸಂತಾನೋತ್ಪತ್ತಿ ನೀಡಲೆಂಬ ಆಶಯ ಆಚರಣೆಯ ಹಿನ್ನೆಲೆಯಲ್ಲಿದೆ.

"ಮಾಧವಾಚಾರ್ಯ ತನ್ನ ಜೈಮಿನಿಯ ನ್ಯಾಯ ಮಾಲೆಯಲ್ಲಿ ಆಕಳುಗಳಿಗೆ ಗರ್ಭಕಟ್ಟಿಸಲು ಮೀಸಲಿಟ್ಟ ಹೋರಿಯನ್ನು 'ವೃಷ' ಎಂದು ಕರೆದಿದ್ದಾರೆ. ಮಿತಾಕ್ಷರದಲ್ಲಿ ಅದನ್ನು "ಮಹೋಕ್ಷ" ಎಂದು ಕರೆಯಲಾಗಿದೆ".[೧೬] ಎತ್ತು ಲಿಂಗಮುದ್ರೆಯ ಸಂಕೇತದಿಂದ ದೇವರೆತ್ತಾಗುತ್ತದೆ. ಸತ್ತಾಗಲೂ ಸಂಸ್ಕಾರ ನಡೆಯುತ್ತದೆ. ಹೊಸಹಟ್ಟಿ, ಗುಡೇಕೋಟೆ ಮಾರ್ಗಮಧ್ಯದಲ್ಲಿ ಬಸವಣ್ಣನನ್ನು ಅವಸಾನದ ನಂತರ ಸಮಾಧಿ ಮಾಡಿದ್ದಾರೆ. ಇದು ಮಧ್ಯಕಾಲದಲ್ಲಿ ನಿರ್ಮಿಸಿದ್ದುದೆಂದು ಹೇಳಲಾಗುತ್ತದೆ. ಈ ಭಾಗದ ಪಶುಪಾಲಕರು ಗೂಳಿ, ಬಸವಣ್ಣ ಸತ್ತರೆ ಮನುಷ್ಯನಿಗೆ ಮಾಡಿದಂತೆ ಶವಸಂಸ್ಕಾರ ಮಾಡುತ್ತಾರೆ. ಸಾರ್ವಜನಿಕರ ಬಳಕೆಗೆ ಗೋವು ಲಭಿಸಲಿ, ಊರಿನ ಆಕಳುಗಳಿಗೆ ಗರ್ಭ ಧರಿಸಲು ಬೀಜದ ಹೋರಿಯೊಂದಿರಲಿ ಎಂಬ ಆಶಯವೇ ಆಚರಣೆಯದ್ದಾಗಿದೆ. ಲಿಂಗಮುದ್ರೆಯ ಸಂಕೇತದಿಂದ ಧರ್ಮದ ಅಂಗವಾಗಿರಿಸಿರುವುದು, ಜಾನುವಾರುಗಳನ್ನು ಮಾರಾಟ ಮಾಡದಿರಲಿ ಹಾಗೂ ಸ್ವಂತ ಉಪಯೋಗಕ್ಕೆ ಬಳಸದೆ ಸಾರ್ವಜನಿಕರ ಆಸ್ತಿಯಾಗಲೆಂಬ ಉಪಾಯವಾಗಿದೆ. ಸಾಮಾಜಿಕ ಪ್ರಯೋಜನದ ಜೊತೆ ಸಾಮಾಜಿಕ ತಿಳುವಳಿಕೆ ನೀಡುವ ಅಂಶಗಳು ಆಚರಣೆಯಲ್ಲಿ ಕಂಡುಬಂದಿವೆ.

೪.೨.೫. ಕೋಲೆ ಬಸವನ ಆಚರಣೆ

ಮುದ್ರೆಯಿರುವ ಎತ್ತುಗಳನ್ನು ಕೊಳ್ಳುವ, ಮಾರುವ, ಕೃಷಿಕಾರ್ಯಗಳಿಗೆ ಬಳಸುವಂತಿಲ್ಲ. ದೇವರಿಗೆ ಬಿಟ್ಟ ಹಸು, ಎತ್ತುಗಳಿಗೆ ಸೂಕ್ತ ತರಬೇತಿ ನೀಡಿ ನಡೆಸುವ ಆಚರಣಾತ್ಮಕ ಕಲೆ ಕೋಲೆಬಸವನ ಆಟವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ದೇವರಿಗೆ ಬಿಟ್ಟ ಆಕಳನ್ನು ಕಪಿಲೆ ಎಂದು, ಗಂಡು ಕರು ಇದ್ದರೆ ಗೂಳಿ ಎಂದು ಕರೆಯುತ್ತಾರೆ. "ಕಪಿಲೆ ಶಬ್ದವು ಕವಿಲೆ ಎಂಬುದರ ತದ್ಭವ ರೂಪ. ಕಪಿಲೆಗೆ ಬೂದಿಬಣ್ಣದ ಆಕಳು ಎಂಬ ಅರ್ಥವಿದೆ. ಕಪಿಲೆ, ಬಸವ ಎಂಬ ಎರಡು ಪದಗಳು ಕೋಲೆಬಸವ, ಕೌಲೆತ್ತು, ಗಂಗೆತ್ತು"[೧೭] ಎಂದು ರೂಪಾಂತರ ಹೊಂದಿದೆ. ಇದನ್ನು ದೇವರೆಂದು ಭಾವಿಸಿ ಮುಟ್ಟಿ ನಮಸ್ಕರಿಸುತ್ತಾರೆ. ಇದಕ್ಕೆ ಬಡಿಯುವಂತಿಲ್ಲ.

ಬಳ್ಳಾರಿ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಗೊಲ್ಲ ಸಮುದಾಯ ಹಾಗೂ ಆರ್ಥಿಕವಾಗಿ ಹಿಂದುಳಿದ ಬುಡಕಟ್ಟು ಸಮುದಾಯಗಳು ಕವಲೆತ್ತು ಆಡಿಸುವುದನ್ನು ಉಪಕಸುಬಾಗಿಸಿಕೊಂಡಿದ್ದಾರೆ. ಕವಲೆತ್ತಿನವರು ಕುರುಬರೆಂದು, ಹತ್ತಿ ಕಂಕಣದವರೆಂದೂ ಹೇಳುವುದುಂಟು. ಎತ್ತು, ಆಕಳುಗಳಿಗೆ ಜನರಿಂದ ಬೇಡಿ ಪಡೆದ ಬಟ್ಟೆಗಳನ್ನು ತೊಡಿಸುತ್ತಾರೆ. ಮೈಗೆ ಝೂಲಾ, ಕೋಡಣಸು, ಬಣ್ಣದ ಬಟ್ಟೆಗಳಿಂದ ಅಲಂಕಾರಗೊಳಿಸಿ, ಗಂಟೆ, ಕಡಗ, ಗಗ್ಗರ, ಗೆಜ್ಜೆ ಕಟ್ಟಿರುತ್ತಾರೆ. ಬೆನ್ನ ಮೇಲಿನಿಂದ ಎರಡು ಬದಿಗೂ ಇಳಿಬಿಟ್ಟ ಬಟ್ಟೆ ಚೀಲಗಳಲ್ಲಿ ದಾನಿಗಳು ನೀಡಿದ ಕಾಳು ಸಂಗ್ರಹಣೆಯಾಗಿರುತ್ತವೆ. ನುರಿತ ಅನುಭವಿ ಗೊಲ್ಲ ಸಮುದಾಯದವರು ಇವುಗಳ ತರಬೇತುದಾರರಾಗಿರುತ್ತಾರೆ. ಜನ ಸೇರುವ ಹಬ್ಬ, ಉತ್ಸವ, ಜಾತ್ರೆ, ಸಂತೆಗಳಲ್ಲಿ ಹೆಚ್ಚಾಗಿ ಇವುಗಳ ಪ್ರದರ್ಶನ ನೀಡುತ್ತಾರೆ. ಇತ್ತೀಚೆಗೆ ನಗರಗಳಲ್ಲಿ ಒಂಟಿ ಎತ್ತನ್ನು ಶೃಂಗರಿಸಿಕೊಂಡು ಓಲಗ ಊದುತ್ತಾ ಭಿಕ್ಷೆ ಬೇಡುವುದು ಕಂಡು ಬರುತ್ತಿದೆ.

ಸಾಮಾನ್ಯವಾಗಿ ಶಿವನ ಪತ್ನಿಯರಾದ ಗಂಗೆ, ಗೌರಿಯರ ಮನಸ್ತಾಪದ ಪ್ರಸಂಗಗಳು ಪ್ರದರ್ಶನಗೊಳ್ಳುತ್ತವೆ. ಅಲ್ಲದೆ ಬಸವನನ್ನು ರಾಮನೆಂತಲೂ, ಹಸುವನ್ನು ಸೀತೆಯೆಂತಲೂ, ಪುಟ್ಟ ಕರುವನ್ನು ಲಕ್ಷ್ಮಣನೆಂತಲೂ ಸಂಬೋಧಿಸಿ, ಪಾತ್ರಕ್ಕೆ ತಕ್ಕಂತೆ ಅಲಂಕರಿಸುವ ಪದ್ಧತಿ ಇದೆ. ರಾಮ ಸೀತೆಯರ ವಿವಾಹದ ರೀತಿ, ವಧುವರರ ಮುನಿಸು, ಅವರುಗಳ ಬೇಡಿಕೆ, ಮಧ್ಯಸ್ಥಗಾರರ ಸಮಾಧಾನ, ರಾಮನ ಚಮತ್ಕಾರದ ಪ್ರದರ್ಶನ, ಬಸವ ಕಾಲೂರಿ ನಮಸ್ಕರಿಸುವ ರೀತಿ ಹೀಗೆ ಹಂತ ಹಂತವಾಗಿ ಪ್ರಹಸನ ಮಾದರಿಯಲ್ಲಿ

ಪ್ರದರ್ಶಿಸಲ್ಪಡುತ್ತದೆ. ಹಣೆಯ ಮೇಲೆ ತಗಡಿನಿಂದ ತಯಾರಿಸಿದ ರಾಮ, ಹನುಮಂತರ ಲಾಂಛನವಿರುತ್ತದೆ. ಇದು ಅವರ ಅಲೆಮಾರಿ ಜೀವನದ ಸಂಕೇತವು ಹೌದು. ಗ್ರಾಮ ಮಧ್ಯದ ಬಯಲಿನಲ್ಲಿ ಶಹನಾಯಿ, ಶೃತಿ, ಲಯ, ತಾಳಗಳೊಂದಿಗೆ ಈ ರೀತಿಯ ಪ್ರದರ್ಶನ ನಡೆಯುತ್ತಿರುತ್ತದೆ. ಪ್ರತಿ ಮನೆಯವರು ಧಾನ್ಯ ನೀಡಿ ಗೌರವಿಸುತ್ತಾರೆ.

ಶ್ರೀಶೈಲಮಲ್ಲಿಕಾರ್ಜುನ, ತಿರುಪತಿಯ ವೆಂಕಟರಮಣ ದೇವರ ಪ್ರತಿಮೆಗಳನ್ನಿಟ್ಟು ಪೂಜಿಸುತ್ತಾರೆ. ಅಲೆಮಾರಿ ಬುಡಕಟ್ಟುಗಳಾದ ಕವಲೆತ್ತಿನವರು, ತಮ್ಮ ಆರಾಧ್ಯದೈವ ಶ್ರೀಶೈಲ ಮಲ್ಲಿಕಾರ್ಜುನನೆಂದು ಹೇಳುತ್ತಾರೆ. ಇವರು ಹಿಡಿದ ಧ್ವಜ ಬಿಳಿ ಹಾಗೂ ಕೆಂಪು ವರ್ಣಗಳಿಂದ ಕೂಡಿದ್ದು, ಕೆಂಪು ಮಲ್ಲಿಕಾರ್ಜುನನ ಸಂಕೇತ, ಬಿಳಿ ವೆಂಕಟರಮಣನ ಸಂಕೇತವೆಂದು ಹೇಳುತ್ತಾರೆ. ಮೂಲತಃ ಆಂಧ್ರದವರೆಂದು, ತಮಿಳುನಾಡಿನ ಮಧುರೈ ಕಡೆಯರೆಂದೂ, ಹೇಳಿಕೊಳ್ಳುತ್ತಾರೆ. ಇವರ ಭಾಷೆ ತಮಿಳು, ತೆಲುಗುಮಿಶ್ರಿತ ಕನ್ನಡವಾಗಿರುತ್ತದೆ.

ರಾಮತಾತ ಈ ಸಮುದಾಯದ ಐತಿಹಾಸಿಕ ವ್ಯಕ್ತಿ. ಹಿಂದೆ ರಾಮ ಎಂಬ ಗೊಲ್ಲ ಸಮುದಾಯದವನು ಎತ್ತಿನೊಂದಿಗೆ ಹೋದವನು ಮರಳಿ ಬಂದಿರುವುದಿಲ್ಲ. ಈತ ಕುರುಬ ಕನ್ಯೆಯನ್ನು ವಿವಾಹವಾಗಿ, ವೈರಿಗಳಿಂದ ಕೊಲ್ಲಲ್ಪಟ್ಟವನಾಗಿದ್ದು, ಪವಾಡ ಪುರುಷನೆಂದು, ವೆಂಕಟರಮಣನ ಅವತಾರವೆಂದು ಹೇಳುತ್ತಾರೆ. ಯಾವುದೇ ರೋಗರುಜಿನಗಳಾದರೂ ಈತನ ಹೆಸರಲ್ಲಿ ಹರಕೆ ಕಟ್ಟಿಕೊಳ್ಳುವುದುಂಟು. ಕವಲೆತ್ತಿಗೆ ರಾಮತಾತನೆಂದು ಹೆಸರಿಸುತ್ತಾರೆ. ಆಂಧ್ರಪ್ರದೇಶದ ವರಂಗಲ್ ಜಿಲ್ಲೆಯ ನಾಲಗೊಂಡಾ ಇವರ ಗುರುಸ್ಥಾನವಾಗಿದ್ದು, ಇವರ ಗುರುಗಳಿಗೆ ವರ್ಷಕ್ಕೊಮ್ಮೆ ಕಾಣಿಕೆ ನೀಡಿ ಆಶೀರ್ವಾದ ಪಡೆಯುತ್ತಾರೆಂದು ಕ್ಷೇತ್ರಕಾರ್ಯದಿಂದ ತಿಳಿದುಬಂದಿದೆ.

ಕೌಲೆತ್ತಿನ ಕಾಲಡಿ ಮಕ್ಕಳನ್ನು ನುಗ್ಗಿಸುವುದರಿಂದ ಬಾಲಗ್ರಹ, ಕಿರುಚಾಡುವಿಕೆ ಮೊದಲಾದ ಕಾಯಿಲೆಗಳು ಗುಣವಾಗುತ್ತವೆಂಬ ನಂಬಿಕೆಯಿದೆ. ಅಕ್ಕಿ, ಬೆಲ್ಲ, ಹಣ್ಣುಗಳನ್ನು ನೀಡಿ ಪೂಜಿಸುವುದು ಜನಪದರಿಗಿರುವ ದೈವೀಭಾವದಿಂದ. ಕೃಷಿ ಭೂಮಿಯಿಲ್ಲದ ಅಲೆಮಾರಿಗಳಾದ ಇವರು ಕವಲೆತ್ತು ಆಡಿಸುವುದನ್ನು ವೃತ್ತಿಯನ್ನಾಗಿಸಿ ಕೊಂಡಿದ್ದಾರೆ. "ಕಾಡಿ ತಿನ್ನೋದಕ್ಕಿಂತ, ಬೇಡಿ ಉಣ್ಣೋದೆ ಲೇಸು", "ಬೇಡಿ ಉಂಡ್ರೆ ಬೇಕಾದಷ್ಟು" ಎನ್ನುವ ನಾಣ್ಣುಡಿಯಂತೆ ಕವಲೆತ್ತಿನವರು ಮೋಸ ಮಾಡದೆ, ಕಳ್ಳತನ ಮಾಡದೆ ಬೇಡಿ ತಿನ್ನುವವರಾಗಿದ್ದಾರೆ. ಅಲೆಮಾರಿ ಕುಟುಂಬಗಳಾದ ಕಾರಣ ಇವರ ಮಕ್ಕಳು ಅನಕ್ಷರಸ್ಥರಾಗಿದ್ದು, ಉದ್ಯೋಗಾವಕಾಶಗಳಿಂದ ವಂಚಿತರಾಗಿದ್ದಾರೆ. ಸರ್ಕಾರ ಇಂಥವರಿಗೆ ಒಂದೆಡೆ ನೆಲೆನೀಡಿ, ಸಾಕ್ಷರರನ್ನಾಗಿ ಮಾಡಿ, ಉದ್ಯೋಗ ಅವಕಾಶ ಕಲ್ಪಿಸಿಕೊಡುವ ಅಗತ್ಯತೆಯಿದೆ. ದೈವೀ ಹಿನ್ನೆಲೆಯಲ್ಲಿ ಬೆಳೆದುಬಂದ ಆಚರಣಾತ್ಮಕ ಜಾನಪದ ಕಲೆ ಇಂದು ಹೊಸ ರೂಪ ಪಡೆಯುತ್ತಿದೆ. ಪೌರಾಣಿಕ ಪ್ರಜ್ಞೆಯನ್ನು ಜಾಗೃತಗೊಳಿಸುವಿಕೆ, ಜೀವನದ ಆದರ್ಶ ಮೌಲ್ಯಗಳ ಪ್ರತಿಪಾದನೆ, ಜನರನ್ನು ರಂಜಿಸುವ ಕಲಾತ್ಮಕತೆ, ಆಚರಣೆಯ ಹಿನ್ನೆಲೆಯಲ್ಲಿ ಕಂಡುಬರುವ ಪ್ರಮುಖ ಅಂಶಗಳಾಗಿವೆ.

೪.೨.೬. ಕಿಚ್ಚು ಹಾಯಿಸುವ ಆಚರಣೆ

ಸಂಕ್ರಾಂತಿಯ ಪ್ರಮುಖ ಆಕರ್ಷಣೆ ಕಿಚ್ಚು ಹಾಯಿಸುವುದು. ರೈತನ ಜೀವನಾಧಾರವಾದ ಜಾನುವಾರುಗಳ ಹಬ್ಬ. ರಾಸುಗಳನ್ನು ಸ್ವಚ್ಛಗೊಳಿಸಿ ವಿವಿಧ ಬಗೆಯ ಗಂಟೆ ಸರ, ಹೂ, ಹಾರ ಹಾಕಿ, ಕೋಡುಗಳಿಗೆ ಬಣ್ಣ ಹಚ್ಚಿ ಕೋಡಣಸುಗಳಿಂದ ಶೃಂಗರಿಸಲಾಗುತ್ತದೆ. ಹೆಚ್ಚಾಗಿ ಊರ ಹೆಬ್ಬಾಗಿಲಲ್ಲಿ ಹಾಕಿದ ಹುಲ್ಲುರಾಶಿಗೆ ಬೆಂಕಿ

ಹಚ್ಚುತ್ತಾರೆ. ಪ್ರಜ್ವಲಿಸುವ ಬೆಂಕಿ ಜ್ವಾಲೆಯಲ್ಲಿ ವಾದ್ಯಮೇಳದೊಂದಿಗೆ ಬಸವ ನಂತರ ಇತರ ರಾಸುಗಳು ಕಿಚ್ಚು ಹಾಯುತ್ತವೆ. ವಾದ್ಯಗಳ ಸದ್ದು, ಆನಂದದ ವಾತಾವರಣ ಸೃಷ್ಟಿಸುತ್ತಾದರೂ, ಗಂಟೆ, ಗಗ್ಗರಗಳ ನಾದದ ಸದ್ದು, ಜೊತೆಗೆ ಜನರ ಕೇಕೆ, ಕಿರುಚಾಟಗಳಿಂದ ರಾಸುಗಳು ಬೆದರಿ ಅನಿವಾರ್ಯವಾಗಿ ಓಡಲಾರಂಭಿಸುತ್ತವೆ. ಸದ್ದು, ಗದ್ದಲಗಳು ಹೆಚ್ಚಾದಂತೆಲ್ಲಾ, ಬೆದರಿದ ರಾಸುಗಳು ಹೆಚ್ಚು ಮೇಲಕ್ಕೆ ಹಾರುತ್ತವೆ.

ಉರಿಯುವ ಬೆಂಕಿ ಜ್ವಾಲೆಯಲ್ಲಿ ಅಲಂಕೃತಗೊಂಡ ಎತ್ತುಗಳ ಜೊತೆ, ಅವುಗಳ ಒಡೆಯರು ಜಿಗಿಯುವ ದೃಶ್ಯ ಜನ ಮತ್ತು ಜಾನುವಾರುಗಳ ನಡುವಿನ ಸ್ಪರ್ಧೆಯಂತೆ ಗೋಚರಿಸುತ್ತದೆ. ಸಾಯಂಕಾಲ ನಡೆಯುವ ಆಚರಣೆ ಇದಾಗಿದ್ದು, ಈ ಸಮಯ ಆಚರಣೆಗೆ ಮೆರಗು ನೀಡುವಂಥದ್ದಾಗಿದೆ. ಕಿಚ್ಚು ಹಾಯ್ದು ಬಂದ ರಾಸುಗಳ ಕಾಲು ತೊಳೆದು, ಪಾದಗಳಿಗೆ ಕುಂಕುಮ, ವಿಭೂತಿ ಹಚ್ಚಿ ಪೂಜಿಸಿ ಬರಮಾಡಿಕೊಳ್ಳಲಾಗುತ್ತದೆ. ಬೆದರಿದ ರಾಸುಗಳಿಗೆ ಮೈದಡವಿ ಎಡೆ ತಿನ್ನಿಸುತ್ತಾರೆ. ಇದು ಜನಪದರಿಗಿರುವ ಪ್ರಾಣಿಗಳ ಬಗೆಗಿನ ಅನ್ಯೋನ್ಯತೆಯನ್ನು ತಿಳಿಸುತ್ತದೆ. ಆ ದಿನ ವ್ಯವಸಾಯಕ್ಕೆ ಎತ್ತುಗಳನ್ನು ಬಳಸುವಂತಿಲ್ಲ. ಹಸುವಿನ ಹಾಲು ಕರೆಯುವಂತಿಲ್ಲ. ಕೆಲವೆಡೆ ಕಬ್ಬಿಣದ ಬಳೆಯಿಂದ ಬರೆ ಹಾಕುತ್ತಾರೆ. ಕಿಚ್ಚು ಹಾಯ್ದು ಬಂದ ರಾಸುಗಳಿಗೆ ಒನಕೆಯನ್ನು ಬಾಗಿಲಲ್ಲಿ ಅಡ್ಡ ಇಟ್ಟು, ಅದರ ಮೇಲೆ ದಾಟಿಸುವ ಪದ್ಧತಿ ಇದೆ. ಕಬ್ಬಿಣವು ಸತ್ವಯುತವಾದ ಗಟ್ಟಿ ಲೋಹ, ಹೆಚ್ಚು ಕಾಯುವ ಗುಣ ಹೊಂದಿರುವುದಾಗಿದೆ. ದುಷ್ಟಶಕ್ತಿ ನಿವಾರಣೆಗೆ ಜನಪದರ ಆಚರಣೆಗಳಲ್ಲಿ ಕಬ್ಬಿಣ ಪ್ರಮುಖ ಸ್ಥಾನ ಪಡೆದಿದೆ. ಸಂಕ್ರಾಂತಿಯ ದಿನ ಕಬ್ಬಿಣದ ದಾನ ಶ್ರೇಷ್ಠವೆಂಬ ಪ್ರತೀತಿ ಇದೆ. ಕಬ್ಬಿಣದಲ್ಲಿಯ ಖನಿಜಾಂಶಗಳು ಹಲವಾರು ರೋಗ ನಿರೋಧಕ ಗುಣಗಳನ್ನು ಹೊಂದಿವೆ ಎಂಬುದು ಜನಪದರ ಅನುಭವದ ಮಾತಾಗಿದೆ. ಜಾನುವಾರುಗಳಿಗೆ ಕಾಯಿಲೆ ಬಾರದಿರಲೆಂಬ ಆಶಯದಿಂದ ಕಬ್ಬಿಣ ಕಾಯಿಸಿ ಬರೆ ಹಾಕುವುದುಂಟು.

ಹಬ್ಬದ ಸಮಯದಲ್ಲಿ ಜಾನುವಾರುಗಳ ಸ್ವಚ್ಛತೆಗಾಗಿ ಜಲಮೂಲಕ್ಕೆ ಕರೆದೊಯ್ಯುವ ಸಂಭ್ರಮವು ಜನಪದರಿಂದ ಹೀಗೆ ವ್ಯಕ್ತವಾಗಿದೆ.

ತುಪ್ಪನ್ನವನ್ನುಂಡು ಪಟ್ಟೆ ಸಾಲೆಯ ಸುತ್ತಿ
ಹೂವಿನ ಹಣೆಯಗ್ಗ, ಬಲಗೈಲಿ ತಕ್ಕೊಂಡು
ಹೋರಿ ಮೈ ತೊಳೆಯಾಲು ಹೊರಟರು

ಇದು ಹೊಲಗದ್ದೆಗಳಲ್ಲಿ ಕೊಯ್ಲು ಮುಗಿದು, ದನಕರುಗಳು ಕೃಷಿ ಕಾರ್ಯದಿಂದ ವಿರಮಿಸುವ ಕಾಲ. ಜನಪದರ ಪ್ರಕಾರ ವರ್ಷವಿಡೀ ತಮಗಾಗಿ ದುಡಿದ ರಾಸುಗಳಿಗೆ ಪೂಜಿಸುವುದು, ಅವುಗಳಿಗೆ ದೃಷ್ಟಿ ತಾಗದಿರಲೆಂಬುದು ಆಚರಣೆಯ ಆಶಯವಾಗಿದೆ. ಇದು ಯಶಸ್ವಿ ಸುಗ್ಗಿಗೆ ಕಾರಣೀಭೂತವಾದ ರಾಸುಗಳಿಗೆ ಸಲ್ಲಿಸುವ ಕೃತಜ್ಞತೆಯಾಗಿದೆ.

ಸೂರ್ಯ, ಸಂಕ್ರಾಂತಿಯಿಂದ ಶಿವರಾತ್ರಿಯವರೆಗೆ ಕರುವಿನ ಮೇಲೆಯೂ, ಶಿವರಾತ್ರಿಯಿಂದ ಗೌರಿ ಹಬ್ಬದವರೆಗೆ ಬಸವನ ಮೇಲೆಯು ಪ್ರಯಾಣ ಮಾಡುತ್ತಾನೆಂಬ ನಂಬಿಕೆಯಿದೆ. ಸಂಕ್ರಾಂತಿಯು ಸೂರ್ಯಾರಾಧನೆಯ ಜೊತೆ, ರಾಸುಗಳ ಆರಾಧನೆಯು ಆಗಿದೆ. ಕೃಷಿಕರು ರಾಸುಗಳಲ್ಲಿ ದೇವತೆಯನ್ನು ಕಾಣುತ್ತಾರೆ.

ಕಾಮಧೇನುವೆಂದು ಗೌರವಿಸುತ್ತಾರೆ. ಈಶ್ವರನ ವಾಹನವನ್ನಾಗಿಸಿ ದೈವತ್ವಕ್ಕೇರಿಸಿದ್ದಾರೆ. ಸಂಕ್ರಾಂತಿ ಸಮಯದಲ್ಲಿ ಹೇಳುವ ಗೋವಿನ ಕಥನವು ರಾಸುಗಳ ಶ್ರೇಷ್ಠತೆಯನ್ನು ತಿಳಿಸುತ್ತದೆ. ಸಂಕ್ರಮಣ ಕಾಲದಲ್ಲಿ ಜಲಚರ ಪ್ರಾಣಿ, ಪಕ್ಷಿಗಳು ಹಾಗೂ ಮನುಷ್ಯರ ಮೇಲೆ ಪ್ರಕೃತಿ ತನ್ನ ಪ್ರಭಾವ ಬೀರುತ್ತದೆಂಬುದು ವೈಜ್ಞಾನಿಕ ಸತ್ಯ. ಇದರಿಂದ ಜಾನುವಾರುಗಳಲ್ಲಿ ಚರ್ಮವ್ಯಾಧಿಗಳು ಬರುವುದುಂಟು. ಅವುಗಳ ಮೈ ಸುಡುವಷ್ಟು ತೀಕ್ಷ್ಣವಾದ ಕೆಂಡದ ಬಿಸಿಯಲ್ಲಿ ಓಡಿಸುವುದರಿಂದ, ಧನುರ್ಮಾಸದ ಕುಳಿರ್ಗಾಳಿಗೆ ಮುದುಡಿದ ರಾಸುಗಳ ದೇಹಕ್ಕೆ ಬೆಚ್ಚನೆಯ ಅನುಭವ ನೀಡುತ್ತದೆ. ಕೊನೆಯಲ್ಲಿ ಇನ್ನುಳಿದ ಸೋಂಕು, ಕ್ರಿಮಿಗಳು ನಾಶವಾಗಲೆಂಬ ಹಿನ್ನೆಲೆಯಲ್ಲಿ ಬೆಂಕಿ ಆರಿದ ಮೇಲೆ ಬೂದಿಯನ್ನು ರಾಸುಗಳ ಮೈಗೆ ತಿಕ್ಕುತ್ತಾರೆ. ಇದರಿಂದ ಹುಳು, ಹುಪ್ಪಟಿ, ಜಿಗಣೆ, ಉಣ್ಣೆಗಳು ಬೆಂಕಿಯ ಬಿಸಿಗೆ ನಾಶವಾಗಿ ರಾಸುಗಳ ಮೈ ಹಗುರಾಗಲೆಂಬುದಾಗಿದೆ. ಹಿಂದೆ ರಾಸುಗಳಿಗೆ ಚಪ್ಪೆರೋಗ ಬರುತ್ತಿದ್ದು, ಒಂದೊಂದಾಗಿ ಸಾವನ್ನಪ್ಪುತ್ತಿದ್ದವು; ಅದನ್ನು ತಡೆಗಟ್ಟುವ ಉದ್ದೇಶ ಈ ಆಚರಣೆಯದ್ದಾಗಿರಬೇಕು. ಮನುಷ್ಯನಿಗೆ ಬರುವ ರೋಗಗಳಿಗೆ ಮಾರಿ, ಮಸಣಿ, ದುರ್ಗಿ, ಭೂತಗಳನ್ನು ಪೂಜಿಸುವಂತೆ, ಸಂಕ್ರಾಂತಿಯಲ್ಲಿ ಕಿಚ್ಚು ಹಾಯಿಸುವುದರ ಮೂಲಕ ಜಾನುವಾರುಗಳ ರೋಗರುಜಿನಗಳನ್ನು ತಡೆಗಟ್ಟಲಾಗುತ್ತದೆ.

೪.೨.೭. ಕೊಂತಿ ಬಸಪ್ಪನ ಆಚರಣೆ

ಬಳ್ಳಾರಿ ಜಿಲ್ಲೆಯ ಹಡಗಲಿ, ಹಗರಿಬೊಮ್ಮನಹಳ್ಳಿ ಮತ್ತು ಕೂಡ್ಲಿಗಿ, ಬಳ್ಳಾರಿ, ಸಿರುಗುಪ್ಪ ತಾಲೂಕುಗಳಲ್ಲಿ ಕೊಂತಿ ಬಸಪ್ಪನ ಆಚರಣೆಯಿದೆ. ದೊಡ್ಡಗೌರಿ ಹುಣ್ಣಿಮೆಯಲ್ಲಿ ಗೌರಿಯನ್ನು ಕಳುಹಿಸಿದ ನಂತರ ಗೌರಿ ಹುಡುಗಿಯರು ಮಾತ್ರ ಆಚರಿಸುವ ಸ್ತ್ರೀ ಪ್ರಧಾನ ಆಚರಣೆಯಿದು. ಕನ್ಯೆಯರು ಸಿಂಗಾರಗೊಂಡು ಓಣಿಯ ಮನೆಯೊಂದರ ಮಾಳಿಗೆಯ ಮೇಲೆ ಸೇರುತ್ತಾರೆ. ರಂಗೋಲಿ ಬರೆದು ಮಧ್ಯದಲ್ಲಿ ಹುತ್ತದ ಮಣ್ಣಿನಿಂದ ತಯಾರಿಸಿದ ಕೊಂತಿ ಬಸಪ್ಪನನ್ನಿಟ್ಟು, ಗರಿಕೆ, ಪತ್ರೆಗಳಿಂದ ಪೂಜಿಸಿ, ಸಾಮೂಹಿಕ ಭೋಜನ ಮಾಡುತ್ತಾರೆ. ಪೂಜಿಸಿದ ಬಸವನನ್ನು ಮರುದಿನ ಹೊಲದಲ್ಲಿ ಚೆಲ್ಲುವುದರ ಮೂಲಕ ಗೌರಿಹಬ್ಬದ ಆಚರಣೆ ಕೊನೆಗೊಳ್ಳುತ್ತದೆ.

ರಂಗೋಲೆ ಶುಭದ ಸಂಕೇತ. "ರಂಗೋಲೆ ವೇದ ಕಾಲದಿಂದ ಬಂದ ಕಲೆಯಾಗಿದೆ. ವಾತ್ಸಾಯನ ಕಾಮಸೂತ್ರದ ೬೪ ಕಲೆಗಳಲ್ಲಿ ರಂಗೋಲಿ ಕಲೆ ಒಂದಾಗಿದೆ".[೧೮] ಇದು ಸೌಂದರ್ಯಾರಾಧನೆಯನ್ನು ತಿಳಿಸುವಂಥದ್ದು. ಕನ್ಯೆಯರ ಬಯಕೆಗಳ ಅಭಿವ್ಯಕ್ತಿ ಮಾಧ್ಯಮಗಳಲ್ಲಿ ರಂಗೋಲಿ ಕಲೆಯು ಒಂದು. ರಂಗೋಲಿಯಲ್ಲಿಯ ಸೂರ್ಯ, ಚಂದ್ರರ ಚಿತ್ರಗಳು ಪುರುಷಾಗಮನದ ಸೂಚಕಗಳಾಗಿ ಕಂಡುಬರುತ್ತವೆ. ಯೌವನದ ಬಯಕೆಗಳ ಅಭಿವ್ಯಕ್ತಿ ಈ ಆಚರಣೆಯಲ್ಲಿನ ರಂಗೋಲಿ ಸಂಕೇತಿಸುತ್ತದೆ.

ಗೌರಿಹುಡುಗಿಯರು ತಾವು ಕೋಲಾಟವಾಡಿದ ಕಟ್ಟಿಗೆಗಳಿಂದ ತೊಟ್ಟಿಲು ಕಟ್ಟುತ್ತಾರೆ. ಅದರಲ್ಲಿ ಬಸವನನ್ನಿಟ್ಟು ತೂಗಿ ಸಂಭ್ರಮಿಸುತ್ತಾರೆ. ಕನ್ಯೆಯರ ಮುಂದಿನ ವೈವಾಹಿಕ ಬದುಕಿನಲ್ಲಿ ನಡೆಯುವ ಜೈವಿಕ ಕ್ರಿಯೆಗಳಿಗೆ ಸನ್ನದ್ಧರನ್ನಾಗಿ ಮಾಡುವುದು ಆಚರಣೆಯ ಹಿಂದಿನ ಆಶಯವಾಗಿರಬೇಕು. ಕೃಷಿಕರ ಆಚರಣೆಗಳಲ್ಲಿ ಬಸವ ಅಗ್ರಪಂಕ್ತಿಯಲ್ಲಿ ನಿಲ್ಲುತ್ತಾನೆ. ಬಸವನ ಆರಾಧನೆಯಲ್ಲಿ ದೈವೀಭಾವದ ಜೊತೆ ಪುರುಷಾಗಮನದ ನೆಲೆಯು ಕಂಡುಬರುತ್ತದೆ. ಕನ್ಯೆಯರು ಮಾತ್ರ ಭಾಗವಹಿಸುವುದರಿಂದ, ಮುಕ್ತತೆಗೆ ಅವಕಾಶವಿದೆ. ಸರಿ

ರಾತ್ರಿಯವರೆಗೆ ಬೆಳದಿಂಗಳ ಬೆಳಕಲ್ಲಿ ಸಂಭ್ರಮದಿಂದ ಆಟಗಳನ್ನಾಡುವುದರ ಮೂಲಕ ಮನೋರಂಜನೆ ಹೊಂದುತ್ತಾರೆ. ಈ ರೀತಿಯ ಆಟಗಳು ಮಾನವನ ಉತ್ಪಾದನಾ ಚಟುವಟಿಕೆಯ ಪ್ರಕಟರೂಪಗಳೆಂದು ಮಾನವಶಾಸ್ತ್ರಜ್ಞರು ವಿವರಿಸಿದ್ದಾರೆ. ಬೆಳದಿಂಗಳ ಬೆಳಕಲ್ಲಿ ನಡೆಯುವ ಈ ಆಚರಣೆಯನ್ನು ಚಂದ್ರನ ವೃದ್ಧಿಕ್ಷಯಗಳೊಂದಿಗೆ ಹೋಲಿಸಬಹುದಾಗಿದೆ. ಚಂದ್ರನ ವೃದ್ಧಿ ಸಮಯದಲ್ಲಿ ಬೀಜ ಬಿತ್ತಿದರೆ, ಫಸಲು ಚಂದ್ರನಂತೆ ವೃದ್ಧಿಯಾಗುತ್ತದೆಂಬ ನಂಬಿಕೆಯಿದೆ. ಸಸ್ಯಗಳ ಬೆಳವಣಿಗೆಗೆ ಚಂದ್ರ ಉತ್ತೇಜನಕಾರಿಯಾದಂತೆ, ಹೆಣ್ಣಿನ ಫಲವಂತಿಕೆಗೂ ಉತ್ತೇಜನಕಾರಿಯಾಗಿರುವನು ಎಂಬುದು ಜನಪದರ ಆಶಯವಾಗಿದೆ. ಬೆಳದಿಂಗಳ ಚಂದ್ರನ ಬೆಳಕು ಹಳ್ಳಿಯನ್ನು ಶುಭ್ರಗೊಳಿಸುವುದಲ್ಲದೆ, ಆಚರಣೆಗೆ ಉತ್ತೇಜನಕಾರಿಯಾದುದಾಗಿದೆ. ಈ ಬೆಳಕು ಮನಸ್ಸಿಗೆ ಆನಂದ ಹಾಗೂ ಉತ್ಸಾಹದಾಯಕವಾದುದಾಗಿದೆ.

ಓಣಿಯ ಎಲ್ಲರ ಮನೆಯಿಂದ ತಂದ ಸಜ್ಜೆ ರೊಟ್ಟಿ, ಎಣ್ಣೆಗಾಯಿಪಲ್ಯ, ಕಾಳು, ಚಟ್ನಿ, ಮೊಸರು ಹೀಗೆ ವಿವಿಧ ಆಹಾರ ಪದಾರ್ಥಗಳನ್ನು ತಂದು ಸಾಮೂಹಿಕ ಭೋಜನ ಮಾಡುತ್ತಾರೆ. ಇದನ್ನು ಕೊಂತಿ ರೊಟ್ಟಿ ಊಟವೆಂತಲೂ ಕರೆಯುವ ವಾಡಿಕೆಯಿದೆ. ಬಳ್ಳಾರಿ ಜಿಲ್ಲೆಯ ಹಲವು ಭಾಗಗಳಲ್ಲಿ ಆಚರಣೆಯ ಸ್ವರೂಪಗಳು ಭಿನ್ನವಾದರೂ, ಆಶಯ ಒಂದೇ ಆಗಿರುವುದು ಕ್ಷೇತ್ರಕಾರ್ಯದಿಂದ ತಿಳಿದುಬಂದಿದೆ. ಮಾತೃಪ್ರಧಾನ ಮೌಲ್ಯಗಳನ್ನು ಸಾಬೀತುಪಡಿಸುವ ಸ್ತ್ರೀಪ್ರಧಾನ ಆಚರಣೆ. ಹೆಣ್ಣು ಅಧಿಕ ಶಕ್ತಿವಂತಳು, ಸೃಷ್ಟಿಯು ಆಕೆಯ ಅಧೀನ ಎಂಬ ನಂಬಿಕೆಯಿದೆ. ಕೃಷಿ ಸಮಾಜದ ಕಲ್ಪನೆಯಲ್ಲಿ ದೇವರೆಂದರೆ ಹೆಣ್ಣು. ಜೀವಸೃಷ್ಟಿಯ ಸಾದೃಶ್ಯರೂಪ. ಕಾರಣ ಪ್ರಕೃತಿ ಕೂಡ ಹೆಣ್ಣೇ, ಕೊಂತಿ ಪೂಜೆಯ ನಂತರ ಬರುವ ಆಚರಣೆ ಇದು. ಹಿರಿಯ ಸಂಶೋಧಕರಾದ ಡಾ. ಎಂ. ಚಿದಾನಂದಮೂರ್ತಿಯವರ ಪ್ರಕಾರ ಕೊಂತಿ ಒಬ್ಬ ಪ್ರಜನನ ದೇವತೆ. ಜನಪದರ ಪ್ರಕಾರ ಈಕೆ ತಾಯ್ತನದ ಸಂಕೇತ. ಬೆಳಕಿನ ಪ್ರತಿರೂಪ, ಪರಾಕ್ರಮಿ ಮಕ್ಕಳನ್ನು ಪಡೆದವಳು. ಕೊಂತಿ ಬಸಪ್ಪನೆಂದರೆ ಕೊಂತಿಯ ಮಗನೆಂದೂ ತಿಳಿಯಲು ಸಾಧ್ಯತೆವಿದೆ.

ಜನಪದರ ಆಚರಣೆಗಳಲ್ಲಿ ಬಳಸುವ ವಸ್ತುಗಳು ಆಚರಣೆಯ ಆಶಯವನ್ನು ಬಿಂಬಿಸುವಂಥವುಗಳಾಗಿವೆ. ಮಾಳಿಗೆಯ ಮೇಲೆ ನಡೆಯುವ ಆಚರಣೆಯಾದ್ದರಿಂದ, ಮಾಳಿಗೆ ಸಾಂಕೇತಿಕವಾಗಿ ನೆಲ ಮತ್ತು ಆಕಾಶವನ್ನು ಬೇರ್ಪಡಿಸುವಂಥದ್ದು. ಇಲ್ಲಿ ಬೆಳದಿಂಗಳು, ರಂಗೋಲೆ, ಹುತ್ತದ ಮಣ್ಣು, ಮಾಳಿಗೆ ಬಿಡಿ ಬಿಡಿ ವಸ್ತುಗಳಾಗಿವೆ. ಆದರೆ ಆಚರಣೆಯ ಹಿಂದಿನ ಆಶಯಗಳು ಅವನ್ನು ಇಡಿಯಾಗಿಸಿವೆ.

೪.೨.೮. ನಾಗಾರಾಧನೆ

ಪ್ರಾಣಿ ಜೀವಿಗಳಿಗಿಂತ ಭಿನ್ನವಾಗಿ ಜೀವಿಸುವ ಮಾನವನಿಗೆ ಪ್ರಕೃತಿಯಲ್ಲಿನ ವೈಪರೀತ್ಯಗಳನ್ನು ಜಯಿಸುವ ಅನಿವಾರ್ಯತೆಯಿತ್ತು. ತನ್ನ ಅಸ್ತಿತ್ವವನ್ನು ಹುಡುಕುವ ಹಿನ್ನೆಲೆಯಲ್ಲಿ ಭಕ್ತಿ, ಭಯಮೂಲವಾದ ಹಲವಾರು ಆಚರಣೆ ಸಂಪ್ರದಾಯಗಳು ಸೃಷ್ಟಿಯಾದವು. ಅವು ಇಂದು ನಮಗೆ ಆದಿಮ ಸಂಸ್ಕೃತಿಯ ಅತ್ಯಮೂಲ್ಯ ಕೊಡುಗೆಗಳೆಂದೇ ಪರಿಗಣಿತವಾಗಿವೆ. ಈ ಹಿನ್ನೆಲೆಯಲ್ಲಿ ಬಹುಪ್ರಾಚೀನ ಆರಾಧನಾ ಸಂಪ್ರದಾಯಗಳಲ್ಲಿ ನಾಗಾರಾಧನೆಯು ಒಂದು. "ಕ್ರಿ.ಪೂ. ೨೬೦೦ ವರ್ಷಗಳ ಹಿಂದೆಯೇ ಸುಮೇರಿಯನ್ ದೊರೆ ಗುದಿಯನ ಸುರಪಾತ್ರೆಯ ಮೇಲಿರುವ ನಾಗ ಮಿಥುನದ ಸ್ವಾರಸ್ಯದ ಚಿತ್ರಣದಿಂದಲೇ ನಾಗಸಂಬಂಧಿ ಆಚರಣೆಗಳ ಪ್ರಾಚೀನತೆಯನ್ನು ತಿಳಿಯಬಹುದು".[೫] ಇದಲ್ಲದೆ "ಕ್ರಿ.ಪೂ. ೩-೪ ಸಾವಿರ ವರ್ಷಗಳ ಹಿಂದೆಯೇ ಮೂರ್ತಿಪೂಜೆ

ಸಂಸ್ಕೃತಿ ಬೆಳೆದು ಬಂದಿರುವುದಕ್ಕೆ ಸ್ಪಂದವ ಸಂಸ್ಕೃತಿ ನಿದರ್ಶನ ನೀಡುತ್ತದೆ".[೨೦] ವೃಕ್ಷಪೂಜೆ, ನಾಗಪೂಜೆ ಆ ಕಾಲದಲ್ಲಿ ರೂಢಿಯಲ್ಲಿತ್ತು. ಭಾರತದಲ್ಲಿ ಇವೆಲ್ಲಾ ದ್ರಾವಿಡ ಸಂಸ್ಕೃತಿಯ ಪಳಿಯುಳಿಕೆಗಳು ಎಂಬುದನ್ನು ಪುರಾತತ್ವ ಶೋಧ ಬೆಳಕಿಗೆ ತಂದಿದೆ. "ಚಕ್ರವರ್ತಿ ಜನಮೇಜಯನು ಸರ್ಪಯಾಗದಲ್ಲಿ ಸತ್ತ ಸರ್ಪಗಳ ಹತ್ಯೆಯ ಪ್ರಾಯಶ್ಚಿತ್ತಕ್ಕಾಗಿ ವೈದಿಕ ವಿಧಿವಿಧಾನಗಳಲ್ಲಿ ಈ ಆಚರಣೆ ನಡೆಸುತ್ತಿದ್ದ"(ಉದ್ಧೃತ: ಎಸ್. ಮೋಹನ್, ಪು. ೭). ಹೀಗೆ ಆರ್ಯ, ದ್ರಾವಿಡ ಸಂಕರವಾದ ನಾಗಪೂಜೆಯನ್ನು ಸರ್ವರು ಆಚರಿಸುತ್ತಾರೆ. ಇದು ಪ್ರಾಚೀನ ಕಾಲದ ಆಚರಣೆಯಾದ್ದರಿಂದ ಜನಪದರಲ್ಲಿ ಹೆಚ್ಚು ಮಹತ್ವ ಪಡೆದಿದೆ. ನಾಗಚತುರ್ಥಿಯನ್ನು ನಾಗರ ಪಂಚಮಿ, ಗರುಡಷಷ್ಠಿ, ಹುತ್ತಮುರಿಯುವ ಆಚರಣೆ ಎಂದು ಕರೆಯುತ್ತಾರೆ.

ಬಳ್ಳಾರಿ ಜಿಲ್ಲೆಯ ಎಲ್ಲಾ ಭಾಗಗಳಲ್ಲೂ ನಾಗಾರಾಧನೆ ಪ್ರಚಲಿತದಲ್ಲಿದೆ. ಹುತ್ತ ಅಥವಾ ನಾಗರ ಮೂರ್ತಿಶಿಲ್ಪಗಳಿಗೆ ಹಾಲೆರೆದು ಪೂಜೆ ಸಲ್ಲಿಸಲಾಗುತ್ತದೆ. ಹೊಸಪೇಟೆ ತಾಲೂಕಿನ ಹೊಸ ಮಲಪನಗುಡಿಯಲ್ಲಿ ಪುರಾತನ ಹುತ್ತ ಪೂಜಿಸಲ್ಪಡುತ್ತದೆ. ಸಾಮಾನ್ಯವಾಗಿ ಅರಳಿ, ಬೇವಿನ ಮರದ ಕಟ್ಟೆಗಳು ನಾಗರ ಪ್ರತಿಮೆಗಳು ಪ್ರತಿಷ್ಠಾಪನೆಗೊಂಡ ಸ್ಥಳಗಳಾಗಿರುತ್ತವೆ. ಈ ರೀತಿಯ ಪ್ರತಿಮೆಗಳು ಹೊಲಗಳಲ್ಲೂ ಕಂಡುಬರುತ್ತವೆ. ಬುಡಕಟ್ಟು ಸಮುದಾಯಗಳ ಅಧ್ಯಯನದ ಪ್ರಕಾರ, ಇದು ಹೊಲಗಳಲ್ಲಿ ಬೆಳೆ ಹುಲುಸಾಗಿ ಬರಲು ನಡೆಸುವ ಸಂಭೋಗ ಕ್ರಿಯೆಯ ಸಾಂಕೇತಿಕ ರೂಪ. "ಬೇವು, ಅರಳಿ ಮರಗಳು ಔಷಧಿ ಸಸ್ಯಗಳು ಹಾಗೂ ಬೇವು ಎಲ್ಲಾ ಜನಪದ ದೈವಗಳ ವಿಧಿಯಾಚರಣೆಗಳಲ್ಲಿ ಬಳಕೆಯಾಗುತ್ತದೆ. ಇದು ಸಹ ಕಾಮದ ಇನ್ನೊಂದು ರೂಪ".[೨೧] ಸಸ್ಯ ವಿಜ್ಞಾನಿಗಳ ಪ್ರಕಾರ ಈ ಮರಗಳು ಪ್ರಾತಃಕಾಲದಲ್ಲಿ ಸುಮಧುರ ಪರಿಮಳಭರಿತ ಘನೀಭೂತವಾದ ಆಮ್ಲಜನಕ (ಪ್ರಾಣವಾಯು) ಹೊರಸೂಸುತ್ತವೆ. ಇದು ಮಾನವನ ಆರೋಗ್ಯ ಮತ್ತು ಜನನೇಂದ್ರಿಯದ ಮೇಲೆ ಒಳ್ಳೆಯ ಪ್ರಭಾವ ಬೀರುತ್ತದೆ. ನಾಗಷಷ್ಠಿ ಎಂದರೆ ಸೃಷ್ಟಿ, ಮರುಹುಟ್ಟು ಎಂದು ತಿಳಿಯಲು ಸಾಧ್ಯವಿದೆ. ನಾಗರ ಪ್ರತಿಮೆಗಳಿರುವ ನಾಗರಕಟ್ಟೆಗಳು ಆಚರಣೆಗಳಲ್ಲಿ ಸಂತಾನ ದೈವದ ನೆಲೆಗಳಾಗಿವೆ.

ದೈವಗಳು ಜನಪ್ರಿಯವಾಗಲು ಅವುಗಳ ಮೂಲದಲ್ಲಿರುವ ವಿಶಿಷ್ಟ ಶಕ್ತಿಯ ಆರೋಪವೇ ಕಾರಣ. ಆ ಶಕ್ತಿಯನ್ನು ಗುರುತಿಸಲು ಆಚರಣೆಗಳು ಸಹಾಯಕವಾಗುವವು. ಈ ಹಿನ್ನೆಲೆಯಲ್ಲಿ ನಾಗರದೈವಗಳನ್ನು ಹಾಗೂ ಅವುಗಳ ಆಚರಣೆಗಳಲ್ಲಿಯ ವಿಸ್ತೃತ ರೂಪವನ್ನು ಈ ಕೆಳಕಂಡಂತೆ ಗಮನಿಸಿದರೆ ಇದು ಮೂಲ ಸಂತಾನ ದೈವವೆಂಬುದು ಸ್ಪಷ್ಟವಾಗುತ್ತದೆ.

ಮಕ್ಕಳಾಗದವರು ಆಲಿಂಗನದಲ್ಲಿ ನಿಂತ ಭಂಗಿಯ ಜೋಡಿ ನಾಗಗಳ ಶಿಲ್ಪವನ್ನು ಕೆತ್ತಿಸಿ ಕೊಡುತ್ತಾರೆ. ಅದೇ ರೀತಿ ಮಕ್ಕಳಾದ ನಂತರ ಒಂದು ದೊಡ್ಡ ಹಾಗೂ ಒಂದು ಚಿಕ್ಕ ಹಾವಿನ ಮರಿ ಇರುವ ನಿಂತ ನಾಗಗಳ ಭಂಗಿಯ ಶಿಲ್ಪ ಕೊಡುವ ಪದ್ಧತಿ ಇದೆ. ಮದುವೆಗೆ ಮುನ್ನ ಹೆಣ್ಣುಮಕ್ಕಳು ಒಂದೇ ಹಾವನ್ನು ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಮದುವೆಯಾದ ನಂತರ ಅತ್ತೆ ಮನೆಯವರು ಇನ್ನೊಂದು ಹಾವನ್ನು ಹಾಕಿಸಿ ಜೋಡಿ ಆಲಿಂಗನದ ಹಾವುಗಳಾಗಿ ಪರಿವರ್ತಿಸುವ ಸಂಪ್ರದಾಯವಿದೆ. ಮನೋವಿಜ್ಞಾನಿಗಳ ಪ್ರಕಾರ ನಾಗರಹಾವು ಕನಸಿನಲ್ಲಿ ಬಂದರೆ, ಅದು ಕಾಮೋದ್ರೇಕದ ಅನುಭವ ಸೂಚಕ. ಗಂಡಿನ ನಿರ್ಲಕ್ಷ್ಯತೆಗೆ ಒಳಗಾದ ಹೆಣ್ಣಿನ ಬಯಕೆ ತೀರಿಸುವಲ್ಲಿ, ಕಾಮದ ಪ್ರತೀಕವಾದ ನಾಗನ ಪಾತ್ರ ಜನಪದ ಕಥೆಗಳಲ್ಲಿ ಬಿಂಬಿತವಾಗಿದೆ. ಹೀಗೆ

ನಾಗ ಸಂತಾನ ದೈವವಾಗಿ ಬೆಳೆದಿರುವುದು ಅಧಿಕವಾಗಿ ಕಂಡುಬರುತ್ತದೆ. ಬಳ್ಳಾರಿ ದುರುಗಮ್ಮ ಹುತ್ತರೂಪಿ ದೈವವಾಗಿರುವಳು. ಹೊಸಪೇಟೆ ಸಮೀಪದಲ್ಲಿರುವ ನಾಗೇನಹಳ್ಳಿ ಗ್ರಾಮಕ್ಕೆ ಹೊಂದಿಕೊಂಡಂತೆ ಇರುವ ಧರ್ಮರಗುಡ್ಡದ ಗವಿಯಲ್ಲಿ ನಿಜಲಿಂಗಮ್ಮ ದೇವತೆಯ ಮೂರ್ತಿ ಇದೆ. ಈ ಮೂರ್ತಿ ಸಪ್ತದೇವತೆ ಅಥವಾ ಹಾವಿನ ರೂಪ ಹೊಂದಿರುವಂಥದ್ದು. ಕಾಮಲಾಪುರದ ಹತ್ತಿರದ ವಿದ್ಯಾರಣ್ಯದ ಹೊಲವೊಂದರಲ್ಲಿ ಒಂಬತ್ತು ಹೆಡೆಯುಳ್ಳ ನಾಗಸರ್ಪದ ಪ್ರತಿಮೆಯಿದ್ದು, ಕೈಯಲ್ಲಿ ಆಯುಧಗಳನ್ನು ಹಿಡಿದಿದೆ. ಇದರಿಂದ ಈ ಪ್ರದೇಶಗಳು ನಾಗಾರಾಧನೆಯ ಮೂಲ ನೆಲೆಗಳಾಗಿರಲು ಸಾಧ್ಯವಿದೆ.

ನಾಗರಹಾವನ್ನು ಹತ್ಯೆಗೈಯುವಂತಿಲ್ಲ. ಸತ್ತ ಹಾವಿಗೆ ಮನುಷ್ಯರಿಗೆ ಮಾಡುವ ಕ್ರಿಯಾವಿಧಿಗಳು ನೆರವೇರುತ್ತವೆ. ಹಿರಿಯರು ಹಾವಿನ ರೂಪದಲ್ಲಿ ಮರುಹುಟ್ಟು ಪಡೆದಿರುವರೆಂಬ ನಂಬಿಕೆಯಿದೆ. ಹಗರಿಬೊಮ್ಮನ ಹಳ್ಳಿ, ಕೂಡ್ಲಿಗಿ ಭಾಗಗಳಲ್ಲಿ ಗರ್ಭ ಪ್ರತೀಕವಾದ ಮಡಿಕೆ, ಕುಡಿಕೆಗಳಲ್ಲಿ ಸಮೃದ್ಧಿಯ ಸಂಕೇತವಾಗಿ ಗೋದಿ, ಭತ್ತದ ಧಾನ್ಯಗಳನ್ನು ಬೆಳೆಸಿ ನಾಗಗಳಿಗೆ ಅರ್ಪಿಸುತ್ತಾರೆ.

ನಾಗರಪಂಚಮಿ ವಿಶೇಷವಾಗಿ ಸ್ತ್ರೀಯರ ಸಡಗರ, ಸಂಭ್ರಮದ ಹಬ್ಬವಾಗಿದೆ.

ಪಂಚಮಿ ಹಬ್ಬ ಬಂದಿತು ಸನಿಹಾಕ |
ಅಣ್ಣಾ ಬರಲಿಲ್ಲ ಯಾಕೋ ಕರಿಯಾಕ |

ಈ ಜನಪದ ಹಾಡಿನಲ್ಲಿ ಹೆಣ್ಣುಮಕ್ಕಳು ತವರಿಗೆ ಬರಲು ಅಣ್ಣನ ದಾರಿ ಕಾಯುವ ಕಾತುರತೆ ಇದೆ. ಹೊಸ ಮದುಮಕ್ಕಳು ತವರಿನಲ್ಲಿ ಹಾಲೆರೆಯುವ ಸಂಪ್ರದಾಯ ಕಡ್ಡಾಯವಾಗಿದೆ. ಜನಪದ ಕಥೆಯೊಂದರ ಪ್ರಕಾರ ರೈತಾಪಿ ಸಹೋದರರಿಬ್ಬರು ಹಾವಿನ ಕಡಿತದಿಂದ ಮರಣ ಹೊಂದಿರುತ್ತಾರೆ. ಅವರ ತಂಗಿ ನಾಗನನ್ನು ಪೂಜಿಸಿ, ಸಂಪ್ರೀತಗೊಳಿಸಿ, ಅಣ್ಣಂದಿರನ್ನು ಬದುಕಿಸಿದ ಪ್ರಸಂಗದ ಪ್ರತೀಕವಾದ ಆಚರಣೆ ಇದಾಗಿದೆ. ಈ ಹಿನ್ನೆಲೆಯಲ್ಲಿ ಹೊಸದಾಗಿ ಮದುವೆಯಾದ ಹೆಣ್ಣುಮಕ್ಕಳು ಹುತ್ತದ ಮಣ್ಣಿನಿಂದ ನಾಗಮೂರ್ತಿ ತಯಾರಿಸಿ ಜಗುಲಿಯ ಮೇಲಿಟ್ಟು ಪೂಜಿಸುತ್ತಾರೆ. ನಾಗಪೂಜೆ ಮಾಡುವುದರಿಂದ ಬಂಜೆಗೂ ಮಕ್ಕಳಾಗುತ್ತವೆಂಬ ನಂಬಿಕೆ ಬಳ್ಳಾರಿ ಜಿಲ್ಲೆಯಲ್ಲಿದೆ.

ಸ್ತ್ರೀ ಮತ್ತು ಪುರುಷರೂಪದ ನಾಗಗಳ ಕಲ್ಪನೆಯಿದೆ. ಒಂಟಿ ನಾಗಕ್ಕಿಂತ ಒಂದಕ್ಕೊಂದು ತಳುಕು ಹಾಕಿಕೊಂಡ ಜೋಡಿ ನಾಗಗಳು ಹೆಚ್ಚಾಗಿ ಕಂಡುಬರುತ್ತವೆ. ಶ್ರಾವಣ ಮಾಸವೆಂದರೆ ಜಿಟಿಜಿಟಿ ಮಳೆಗಾಲ, ಹಚ್ಚಹಸಿರಿನ ವಾತಾವರಣ, ಬಹುತೇಕ ಹುತ್ತ ಹಾಗೂ ಬಿಲಗಳಲ್ಲಿ ನೀರು ತುಂಬಿ, ಅದರಲ್ಲಿ ವಾಸಿಸುವ ಇಲಿ, ಹೆಗ್ಗಣಗಳು ಹೊರಬರುವ ಸಾಧ್ಯತೆ ಹೆಚ್ಚು. ಈ ಸಮಯದಲ್ಲಿ ಆಹಾರ ಹುಡುಕುತ್ತಾ ಹಾವುಗಳು ಮನೆ ಪ್ರವೇಶಿಸಿ, ಹಾನಿ ಮಾಡುವವೆಂಬ ಭಯವಿರುತ್ತದೆ. ಭಯ ಮುಕ್ತರಾಗಲು ಹುತ್ತದೊಳಕ್ಕೆ ಹಾಲೆರೆಯುವ ಸಂಪ್ರದಾಯ ರೂಢಿಸಿಕೊಂಡಿರಬೇಕು. ಈ ಹಿನ್ನೆಲೆಯಲ್ಲಿ 'ಹುತ್ತವನ್ನು ಅಗೆಯಬಾರದು', 'ಹುತ್ತವನ್ನು ಸುತ್ತು ಹಾಕಬಾರದು', 'ಹುತ್ತಕ್ಕೆ ಉಗುಳಬಾರದು' ಎನ್ನುವ ನಿಷೇಧಗಳು ಉದಯಿಸಿರಲು ಸಾಧ್ಯವಿದೆ. ಹೊಲಗಳಲ್ಲಿ ಬೆಳೆ ಹಾಳು ಮಾಡುವ ಹುಳು, ಹುಪ್ಪಡಿಗಳನ್ನು ತಿಂದು ರೈತರಿಗೆ ಉಪಕಾರಿಯಾದ ನಾಗಗಳು, ಕೃಷಿಕರ ಶ್ರದ್ಧೆ, ಭಕ್ತಿಯ ಆರಾಧನೆಗೆ ಪಾತ್ರವಾಗಿವೆ. ಇಲ್ಲಿ ನಾಗಗಳು ರಕ್ಷಕ ಹಾಗೂ ಶಿಕ್ಷಕ ದೈವಗಳಾಗಿವೆ.

ಜನಪದರ ಅನುಭವದ ಪ್ರಕಾರ ಮಾನವನ ದೇಹಕ್ಕೆ ಮಳೆ, ಚಳಿಯಿಂದ ರಕ್ಷಿಸಿಕೊಂಡು ಆರೋಗ್ಯವಾಗಿರಲು, ಕೊಬ್ಬಿನಾಂಶವಿರುವ ಪದಾರ್ಥಗಳ ಅಗತ್ಯತೆಯಿದೆ. ಆದ್ದರಿಂದ ನಾಗರಪಂಚಮಿಯಲ್ಲಿ ಎಳ್ಳು, ಕೊಬ್ಬರಿ, ಕಾಳು, ಬೆಲ್ಲ ಇತ್ಯಾದಿ ಪದಾರ್ಥಗಳಿಂದ ತಯಾರಾದ ಹಬ್ಬದ ಅಡುಗೆಗಳು, ಪ್ರಕೃತಿ ವೈಪರೀತ್ಯಕ್ಕೆ ತಕ್ಕಂತೆ ದೇಹವನ್ನು ಸುಸ್ಥಿತಿಯಲ್ಲಿಡುತ್ತವೆ. ಶ್ರಾವಣ ಮಾಸದಲ್ಲಿ ಮಾಂಸ ಆಹಾರ ಸೇವನೆಗೆ ನಿಷೇಧವಿದೆ.

ನಾಗರಪಂಚಮಿಯನ್ನು ಜೋಕಾಲಿ ಹಬ್ಬವೆಂತಲೂ ಕರೆಯುವ ಪ್ರತೀತಿ ಇದೆ. ಸ್ತ್ರೀಯರು ಜೋಕಾಲಿ ಜೀಕಿ ಆನಂದಿಸಿದರೆ, ಪುರುಷರಿಗಿದು ಶೌರ್ಯ ಪ್ರದರ್ಶನದ ಸ್ಪರ್ಧೆಯಾಗಿದೆ. ಮರದ ತುದಿಗೆ ಕೊಬ್ಬರಿ ಬಟ್ಟಲಿನ ಸರವನ್ನು ಕಟ್ಟಿರುತ್ತಾರೆ. ಜೋಕಾಲಿ ಜೀಕುತ್ತಾ ಹೋಗಿ ಬಾಯಿಂದ ಕೊಬ್ಬರಿ ಸರ ತಂದವರಿಗೆ ಗೆದ್ದ ಸಂಭ್ರಮ. ಹೀಗೆ ಮನೋರಂಜನಾತ್ಮಕ ದೃಷ್ಟಿಯಿಂದ ಉದಯಿಸಿದ ಆಚರಣಾಮೂಲವಾದ ಸ್ಪರ್ಧೆಗಳು ಇಂದು ಅನಾರೋಗ್ಯಕರವಾದ ಜೂಜಾಟಗಳಾಗಿವೆ. ಆರ್ಥಿಕ ಪ್ರಬಲತೆ, ಶೋಕಿಜೀವನ ಹಾಗೂ ಪ್ರತಿಷ್ಠೆಯ ಸಂಕೇತವಾಗಿ ಸ್ಥಿತ್ಯಂತರಗೊಂಡಿವೆ.

೪.೨.೯. ಹುತ್ತಮುರಿಯುವ ಆಚರಣೆ

ಹಗರಿಬೊಮ್ಮನಹಳ್ಳಿ ತಾಲೂಕಿನ ಕಡ್ಲಬಾಳು ಗ್ರಾಮದ ಹರಿಜನ ಕೇರಿಯಲ್ಲಿ ಹುತ್ತ ಮುರಿಯುವ ಆಚರಣೆ ನೆರವೇರುತ್ತದೆ. ನಾಗರ ಪಂಚಮಿಯ ಮರುದಿನ ಹಾಲೆರೆದು ಪೂಜಿಸಿದ ಹುತ್ತದ ಮಣ್ಣನ್ನು ತಂದು, ಅದಕ್ಕೆ ಸಗಣಿ, ಗೋಮೂತ್ರ, ಹಾಲು, ಅರಿಶಿಣ ಸೇರಿಸಿ ಕೃತಕವಾಗಿ ಹುತ್ತದ ಆಕೃತಿಯನ್ನು ನಿರ್ಮಿಸುತ್ತಾರೆ. ಅದು ಸ್ತ್ರೀಯರಿಂದ ಒಂದು ದಿನಪೂರ್ತಿ ಹಾಲೆರೆದು ಪೂಜಿಸಲ್ಪಡುತ್ತದೆ. ಮರುದಿನ ಹುತ್ತಕ್ಕೆ ಹಾಲು, ನೀರು ಅರಿಶಿಣ ಸೇರಿಸಿ, ಕೆಸರಿನ ರೂಪಕ್ಕೆ ಪರಿವರ್ತಿಸುತ್ತಾರೆ. ನವದಂಪತಿಗಳು, ಸ್ನೇಹಿತರು, ಬಂಧುಗಳು ಹೀಗೆ ಪರಸ್ಪರರು ಕೆಸರಿನ ಎರಚಾಟವಾಡುತ್ತಾರೆ. ಪರಸ್ಪರ ಪ್ರೀತಿ, ಸಲುಗೆ, ಸ್ನೇಹ ಏರ್ಪಡುವ ಮನೋರಂಜನಾತ್ಮಕ ಆಟ ಇದಾಗಿದೆ.

ಕೃಷಿಕರ ವ್ಯವಸ್ಥಿತ ಬದುಕಿನ ಸಮೃದ್ಧಿಯ ಕ್ರಿಯೆಯಾಗಿ ಈ ಆಚರಣೆ ಗುರುತಿಸಿಕೊಂಡಿದೆ. ಈ ರೀತಿಯ ಎರಚಾಟದ ಆಚರಣೆಗಳು ಹಲವಾರು ಸಾಂಸ್ಕೃತಿಕ ಒಳನೋಟಗಳತ್ತ ಗಮನ ಸೆಳೆಯುತ್ತವೆ. ಬಹುಶಃ ಇದು ಹುಲುಸಿನ ಸಾಂಕೇತಿಕ ಆಚರಣೆಯಾಗಿರಬೇಕು. ಬಲಿಯಾಚರಣೆಯಲ್ಲಿ ರಕ್ತ ಹೇಗೆ ಭೂಮಿಯೊಂದಿಗೆ ಬೆರೆತು ಫಲಸಮೃದ್ಧಿಗೆ ಕಾರಣವಾಗಿರುವುದೋ, ಹಾಗೆ ಕೆಸರಿನ ಓಕುಳಿಯು ಮನದ ಬಯಕೆಯ ಅಭಿವ್ಯಕ್ತಿಗೆ ಪೂರಕವಾಗಿರಲು ಸಾಧ್ಯವಿದೆ. ಫಲಸಮೃದ್ಧಿಯ ಆಚರಣಾ ವಿಧಿಗಳಲ್ಲಿ ನಾಗಾರಾಧನೆಯು ಒಂದಾಗಿದೆ. ಕೆಸರೆರಚಾಟದಲ್ಲಿ ಬುಡಕಟ್ಟು ಸಂಸ್ಕೃತಿಗಳ ಸಂಘರ್ಷ, ಸಮನ್ವಯತೆಗಳು ಕಂಡುಬರುತ್ತದೆ. "ಇತರ ಮಣ್ಣುಗಳಿಗಿಂತ ಹುತ್ತದ ಮಣ್ಣು ಭಿನ್ನ ಸ್ವರೂಪ ಪಡೆದಿದೆ. ಆಚರಣೆಯ ಮೂಲಕ ಹಾಲು, ತುಪ್ಪ, ಮೊಸರನ್ನು ಹುತ್ತಕ್ಕೆ ಎರೆಯುವುದು, ರೋಗನಿವಾರಕ ಗುಣ ಹೊಂದಿದ ಬೂಷ್ಟು ಬೆಳೆಯಲು ಸಹಾಯಕ ವಾಗುತ್ತದೆ" (ಬಿ.ಎಸ್. ಸೋಮಶೇಖರ್, ೨೦೦೮, ಪು. ೯೭). ಆದಕಾರಣ ನಿರ್ದಿಷ್ಟಪಡಿಸಿದ ಹುತ್ತಕ್ಕೆ ಮಾತ್ರ ಹಾಲೆರೆದು ಪೂಜಿಸುವುದುಂಟು. ಬೂಷ್ಟ್‌ಭರಿತ ಮಣ್ಣಿಗೆ ಚರ್ಮರೋಗ ನಿವಾರಕ ಗುಣವಿದೆ. ನೈಸರ್ಗಿಕ ಸಂಪನ್ಮೂಲಗಳು ರೋಗ ನಿವಾರಣೆಯಲ್ಲಿ ಪ್ರಮುಖ ಪಾತ್ರ ಪಡೆದಿವೆ. ಈ ರೀತಿ ದೇಸೀ ಆರೋಗ್ಯ ಪರಂಪರೆಗಳು ಆಚರಣೆಯಲ್ಲಿ ಕಂಡುಬಂದಿವೆ.

ದೇಹದ ಯಾವುದಾದರೂ ಭಾಗದಲ್ಲಿ ವರ್ತುಲಾಕಾರವಾಗಿ ಸುತ್ತು ಬಂದು, ಕೂಡಿಕೊಂಡ ಜಾಗದಲ್ಲಿ ಸರ್ಪದ ಹೆಡೆಯಂತೆ ಕಂಡರೆ ಅದನ್ನು ಸರ್ಪಸುತ್ತು ಎನ್ನುತ್ತಾರೆ. ಅದಕ್ಕೆ ನಾಗದೋಷವೇ ಕಾರಣವೆಂಬ ನಂಬಿಕೆಯಿದೆ. ನಾಗದೋಷ ಪರಿಹಾರಕ್ಕಾಗಿ ಹುತ್ತ ಪೂಜಿಸಿ, ಹುತ್ತದ ಮಣ್ಣನ್ನು ಪ್ರಸಾದ ರೂಪದಲ್ಲಿ ಮನೆಗೆ ತರುತ್ತಾರೆ. ಅದನ್ನು ಔಷಧವೆಂದು ಪರಿಗಣಿಸಿ, ರೋಗಪೀಡಿತ ಚರ್ಮಕ್ಕೆ ನಿಯಮಿತವಾಗಿ ಲೇಪಿಸುವ ಕ್ರಮವಿದೆ. ಅರಿಶಿಣ, ಗೋಮೂತ್ರ, ಸಗಣಿ, ಬೇವಿನೆಲೆ ಇವುಗಳಲ್ಲಿ ಸಹಜವಾಗಿ ಚರ್ಮಕ್ಕೆ ಬರುವ ಕಾಯಿಲೆಗಳನ್ನು ನಿವಾರಿಸುವ ಗುಣವಿರುವುದು ವೈಜ್ಞಾನಿಕ ಸತ್ಯವಾಗಿದೆ. ಹೀಗೆ ಜನಪದರು ಇಂದ್ರಿಯಾನುಭವದ ಮೂಲಕ ದೇಹದಲ್ಲಾಗುವ ಬದಲಾವಣೆಗಳನ್ನು ಗ್ರಹಿಸುತ್ತಾರೆ. ನಂತರ ಆಚರಣೆಯ ಮುಖೇನ ಪ್ರಾಕೃತಿಕ ಉತ್ಪನ್ನಗಳನ್ನು ಔಷಧಿಯಾಗಿ ಬಳಸಿ ರೋಗ ಗುಣಪಡಿಸಿಕೊಳ್ಳುವ ಜಾಣ್ಮೆ ಅವರದ್ದು. ಕೃಷಿಕರ ಕಾರ್ಯಗಳಲ್ಲಿ ಫಲವತ್ತಾದ ಹುತ್ತದ ಮಣ್ಣು ಹಲವಾರು ತೊಂದರೆಗಳನ್ನು ನಿವಾರಿಸಲು ಸಹಾಯಕವಾಗಿದೆ. ಜನಪದರ ಪ್ರಕೃತಿ ಸಹಜವಾದ ಬದುಕಿಗೆ ಪರಿಸರ ಅತೀಮುಖ್ಯ. ಪ್ರಕೃತಿ-ಪರಿಸರ ನಾಶವಾಗದಂತೆ ಉಳಿಸುವ ತಾಂತ್ರಿಕತೆ ಆಚರಣೆಯಲ್ಲಿದೆ. ಪ್ರತ್ಯಕ್ಷವಾಗಿ ತಿಳಿಯದ ಎಷ್ಟೋ ಅಂಶಗಳು ಆಚರಣೆಯ ಆಶಯವನ್ನು ಪರಾಂಬರಿಸಿ ನೋಡಿದಾಗ ಜನಪದರ ದೂರದೃಷ್ಟಿತ್ವ ಗೋಚರವಾಗುತ್ತದೆ. ಆಚರಣೆಗಳಲ್ಲಿ ಪರೋಕ್ಷವಾಗಿರುವ ಜೀವಪೋಷಕ ಅಂಶಗಳನ್ನು ಇಂದಿನವರು ತಿಳಿಯಬೇಕಿದೆ. ಸಂತಾನಪ್ರಾಪ್ತಿ, ಕೃಷಿಸಮೃದ್ಧಿ, ದೈಹಿಕ ವ್ಯಾಧಿಗಳ ನಿವಾರಣೆ, ಮನೋರಂಜನೆ; ಹೀಗೆ ಹಲವಾರು ಉದ್ದೇಶಗಳ ಈಡೇರಿಕೆ ಈ ಆಚರಣೆಯಲ್ಲಿ ಕಂಡುಬಂದಿವೆ.

೪.೨.೧೦. ಬಲಿ ಆಚರಣೆಗಳು

ಪ್ರಾಚೀನ ಕಾಲದಿಂದಲೂ ಜನಪದರು ನಿರ್ದಿಷ್ಟ ದೈವಕ್ಕೆ ಹಲವು ವಿಧದ ಬಲಿ ಆಚರಣೆಯ ಮೂಲಕ ಹರಕೆ ತೀರಿಸುತ್ತ ಬಂದಿರುವುದನ್ನು ಇತಿಹಾಸ ತಿಳಿಸುತ್ತದೆ. ಇಂಥ ಆಚರಣೆಗಳಲ್ಲಿ ಉಗ್ರ ಆಚರಣೆಯಾದ ಸಿಡಿ ಆಚರಣೆಯೂ ಒಂದು. ಈ ಆಚರಣೆ ಯಾವಾಗ ಪ್ರಾರಂಭವಾಯಿತೆಂಬ ನಿಖರ ಮಾಹಿತಿಗೆ ಲಿಖಿತ ಆಧಾರಗಳಿಲ್ಲ. ಸಿಡಿ ಎಂದರೆ ಚಲ್ಲಾಪಿಲ್ಲಿಯಾಗು, ಸ್ಫೋಟ, ಜಿಗಿ, ದೇವತೆಗಳ ಸೇವೆ ಹೀಗೆ ಹಲವು ಅರ್ಥಗಳಿವೆ. “ಹಿಂದೆ ಸಿಡಿದಲೆಯಾಗುವ ಹರಕೆ ಹೊತ್ತ ಜನ ಸಿಡಿಗಂಬಕ್ಕೆ ಕಟ್ಟಿರುತ್ತಿದ್ದ ಹಸಿ ಬಿದಿರಿನ ತುದಿಯನ್ನು ಬಗ್ಗಿಸಿ ತಮ್ಮ ತಲೆಯನ್ನು ಅದಕ್ಕೆ ಕಟ್ಟಿಕೊಂಡು, ಕತ್ತನ್ನು ಕತ್ತರಿಸುವಂತೆ ಮಾಡಿ, ತಮ್ಮ ವೀರಭಕ್ತಿ, ಸ್ವಾಮಿನಿಷ್ಠೆಯನ್ನು ಮೆರೆಯುತ್ತಿದ್ದರು”.[೨೨] ಶಾಸನಗಳು ಅಂಥವರನ್ನು ಪ್ರಶಂಸಿಸಿವೆ ಹಾಗೂ ವೀರದೀಕ್ಷೆ ತೊಡುವಂತೆ ಪ್ರೇರೇಪಿಸಿವೆ. “ನಂಬಿದ ಅರಸನಿಗೆ ಒಳ್ಳೆಯದಾಗಲಿ, ಮಕ್ಕಳಾಗಲೆಂದು ಬಯಸಿ ‘ಆಟಿಕ’ ಎನ್ನುವವ ಹರಕೆ ಮೂಲಕ ದೇಹತ್ಯಾಗ ಮಾಡಿದುದರ ಕುರಿತು (ಕ್ರಿ.ಶ. ೯೧೧೮) ಶಾಸನದಲ್ಲಿ ಉಲ್ಲೇಖವಾಗಿದೆ. (ಮಹಾಸಾಮಂತ ಬೊಪ್ಪರಸನ ರಾಣಿ ಮಾಯಾದೇವಿ ಗಂಡುಮಗು ಹೆತ್ತರೆ ಕೊಂಡಸಬಾವಿಯ ಬ್ರಹ್ಮದೇವರಿಗೆ ಸಿಡಿತಲೆ ಕೊಡುವೆನೆಂದು ದೇಕೆಯನಾಯಕ ಹರಕೆ ಮಾಡಿಕೊಂಡಿರುತ್ತಾನೆ”.[೨೩] ಮುಂದೆ ರಾಣಿ ಗಂಡುಮಗು ಹೆತ್ತಾಗ ಸಿಡಿದಲೆ ನೀಡುತ್ತಾನೆ.) ಅಂದು ಆತ್ಮಬಲಿಯು ರಾಜರಿಗೆ ತೋರುವ ನಿಷ್ಠೆ, ಅನ್ನದ ಋಣ, ವೀರರಿಗೆ ಆದರ್ಶಪ್ರಾಯವಾಗಿತ್ತು. ಈ ಆಚರಣೆಗಳು ಕಾಲಕ್ರಮೇಣ ದೈವಗಳೆಡೆಗೆ ಸಂಚರಿಸತೊಡಗಿದವು. ನಿಸರ್ಗಜೀವಿಯಾದ ಮಾನವ ಪ್ರಕೃತಿಯನ್ನು ದೇವರೆಂದು ಪೂಜಿಸಿದ. ಮಾನವ ರೂಪದ ದೇವರಿಗೆ ತಮ್ಮಂತೆ ಆಸೆಗಳಿವೆ ಎಂದು ತೃಪ್ತಿಪಡಿಸಲು ಪ್ರಯತ್ನಿಸಿದ. ಆಗ ಫಲವಂತಿಕೆಯ ಪ್ರತೀಕವಾದ ಭೂಮಿ ಮಾತೃದೇವತೆಯಾದಳು. ಉಗ್ರ ಆಚರಣೆಗಳ ಮೂಲಕ ಬಲಿ ನೀಡಿ ಶಕ್ತಿದೇವತೆಗಳನ್ನು ತೃಪ್ತಿಪಡಿಸಲು ಪ್ರಾರಂಭಿಸಿದರು. ನರಬಲಿಯು ಬರಬರುತ್ತಾ ಸಿಡಿಯ ಸಾಂಕೇತಿಕ ರೂಪ ತಾಳಿತು. ನಟನೆಯ ಮೂಲಕ ಸಿಡಿ ಆಡುವಿಕೆ ಈಗಲೂ ಹಲವು ಪ್ರದೇಶಗಳಲ್ಲಿ ಕಂಡುಬರುತ್ತದೆ.

೪.೨.೧೦.೧. ಸಿಡಿಬಂಡಿ ರಥೋತ್ಸವ

ಬಳ್ಳಾರಿ ಜಿಲ್ಲೆಯ ಉಗ್ರದೇವತೆ ಬಳ್ಳಾರಿ ದುರುಗಮ್ಮ. ಈ ದೇವತೆಗೆ ನೆರವೇರುವ ಸಿಡಿಬಂಡಿ ಆಚರಣೆಯು ತುಂಬಾ ವಿಶೇಷ ಮತ್ತು ಮಹತ್ವವುಳ್ಳದ್ದಾಗಿದೆ. ಹಿರಿಯ ಸಂಶೋಧಕ ಡಾ. ಎಂ.ಎಂ. ಕಲಬುರ್ಗಿಯವರ ಪ್ರಕಾರ ಬಳ್ಳಾರಿ ನಗರಕ್ಕೆ ಬಳಾರಿ ಎಂಬ ದೇವತೆಯ ಹೆಸರು ಪ್ರಾಪ್ತವಾಗಿವೆ. "ಇಲ್ಲಿ ಭಟ್ಟಾರಿಕಾ, ಬಟರಿ, ಬಳರಿ, ಬಳಾರಿ ಎಂದು ರೂಪ ವ್ಯತ್ಯಾಸಗಳಿದ್ದರೂ, ಬಳರಿಯೇ ಸಂಸ್ಕೃತೀಕರಣಗೊಂಡು ಬಟರಿ ಅಥವಾ ಭಟ್ಟಾರಿಕಾ ಆಗಿರಬಹುದಾಗಿದೆ"[೨೫] ಎಂದು ಬಳಾರಿ ದೇವತೆಯ ನಾಮ ಕುರಿತು ಚರ್ಚಿಸಿದ್ದಾರೆ. ಭಟಾರಿ ಎಂದರೆ ದುಷ್ಟಶಕ್ತಿಯ ವೈರಿ ಎಂದು ಅರ್ಥ. ಚತುರಾಸ್ಯ ನಿಘಂಟಿನಲ್ಲಿ (ಕ್ರಿ.ಶ. ೧೪೫೦) ಬಳರಿ ಎಂದರೆ ಮಹಾಕಾಳಿ ಎಂದಿದೆ. ಪ್ರಾಚೀನ ಕಾಲದಲ್ಲಿ ಬಳಾರಿ ದೇವತೆಯ ಆರಾಧನೆ ಹೆಚ್ಚಾಗಿದ್ದು ಶಾಸನಗಳಿಂದ ತಿಳಿದು ಬರುತ್ತದೆ. ಹರಪನಹಳ್ಳಿ ತಾಲೂಕಿನ ಸತ್ತೂರು ಗ್ರಾಮದ ಕ್ರಿ.ಶ. ೧೦೪೪ರ ಶಾಸನದಲ್ಲಿ ಬಳಾರಿ ದೇವತೆಯನ್ನು 'ಬನದ ಬಳರಿ' ಎಂದು ಕರೆಯಲಾಗಿದೆ. ಇಲ್ಲಿ ಬನದ ಬಳಾರಿ ಎಂಬ ಉಲ್ಲೇಖಗಳು ಬಳಾರಿ ದೇವತೆಯ ದೇವಾಲಯಗಳು ಊರು ಬಿಟ್ಟು ಅರಣ್ಯ ಪ್ರದೇಶದಲ್ಲಿ ಇರುವುದನ್ನು ಸಮರ್ಥಿಸುತ್ತವೆ. ಮದ್ಯ, ಮಾಂಸಗಳ ನೈವೇದ್ಯದ ಜೊತೆ ವಾಮಾಚಾರಗಳು ನಡೆಯುತ್ತಿದ್ದುದೇ ಇದಕ್ಕೆ ಕಾರಣವಾಗಿದೆ. ಬಳ್ಳಾರಿ ದುರುಗಮ್ಮ ಕೌಲುಬಜಾರದ ಗ್ರಾಮದೇವತೆ. ಕೌಲು ಬಜಾರಕ್ಕೂ, ಬಳ್ಳಾರಿ ದುರುಗಮ್ಮನ ದೇವಾಲಯಕ್ಕೂ ಸುಮಾರು ಅಂತರವಿದೆ. ಬಳಾರಿಯ ಆರಾಧಕರು ಕೌಳರು. ಇವರು ನೆಲೆಸಿದ ಪ್ರದೇಶವೇ ಕೌಲು ಬಜಾರವಾಗಿದೆ. ಕೌಳ ಎಂಬುದು ದೇವಿಯ ಆರಾಧಕರಾದ ಶಾಕ್ತಮತದವರ ಶಾಖೆಯಾಗಿದ್ದು, ಕೌಳ ಮತದವರನ್ನು ಸೂಚಿಸುತ್ತದೆ. ಪ್ರಾಚೀನ ಕಾಲದಲ್ಲಿ ಶಕ್ತಿ ಆರಾಧಕರಾದ ಕೌಳರು ಅಧಿಕಸಂಖ್ಯೆಯಲ್ಲಿ ಇಲ್ಲಿ ನೆಲೆಸಿದ್ದರೆಂದು ಇತಿಹಾಸ ತಿಳಿಸುತ್ತದೆ. "ಕೌಳರು ಚಂಡಿಯ ಆರಾಧಕರಾಗಿದ್ದು, ಅವರಿಗೆ ಚಂಡಿಯೇ ಪರಮದೈವ. ಬ್ರಹ್ಮ, ವಿಷ್ಣು, ಶಿವರೂ ಕೂಡ ಅವಳ ಅಧೀನದಲ್ಲಿರುವ ದೈವಗಳು. ಕೌಳಾಚಾರ್ಯರು ಮಾಂಸಹಾರ, ಮದ್ಯಪಾನಗಳೇ ಮೋಕ್ಷವೆಂದು ನಂಬಿದ್ದರೆಂಬುದನ್ನು ಸಮಯ ಪರೀಕ್ಷೆ ಮತ್ತು ಯಶಸ್ತಿಲಕ ಚಂಪೂಗಳಿಂದ ತಿಳಿಯ ಬಹುದಾಗಿದೆ".[೨೬] ಕೌಳರ ಆರಾಧನಾ ದೇವತೆಯಾದ ಬಳಾರಿಯು ಇಂದು ಬಳ್ಳಾರಿ ದುರುಗಮ್ಮ ಎಂಬ ಹೆಸರಿನಿಂದ ಕರೆಯಲ್ಪಡುತ್ತಾಳೆ. ಬಳ್ಳಾರಿ ದುರುಗಮ್ಮನ ಪಾರಂಪರಿಕ ಭಕ್ತರು ಗಾಣಿಗ ಜನಾಂಗದವರಾಗಿದ್ದು, ಇವರಿಂದಲೇ ಸಿಡಿ ಉತ್ಸವ ನೆರವೇರುತ್ತದೆ. ಇಂದಿಗೂ ಇವರು ಬಳ್ಳಾರಿಗೆ ಕುರಿ ಬಲಿಕೊಟ್ಟು, ಅದರ ಅಡುಗೆಯನ್ನು ನೈವೇದ್ಯ ಮಾಡಿ, ನಂತರ ಮದ್ಯ ಸೇವಿಸಿ ಮಾಂಸದೂಟ ಮಾಡುತ್ತಾರೆ. ಇದನ್ನೆಲ್ಲಾ ಗಮನಿಸಿದಾಗ ಗಾಣಿಗರು ಕೌಳ ಮತಾವಲಂಬಿಗಳಾಗಿದ್ದರೆಂಬುದರಲ್ಲಿ ಸಂಶಯವಿಲ್ಲ. ಇಂದಿಗೂ ಕೌಲುಬಜಾರದಲ್ಲಿ ಸಾಕಷ್ಟು ಸ್ತ್ರೀದೇವತೆಯ ದೇವಾಲಯಗಳಿವೆ. ಅಂಕಾಳೇಶ್ವರಿ ದೇವಾಲಯದಲ್ಲಿ ಉಗ್ರರೂಪದಲ್ಲಿ ನಿಂತಿರುವ ಮೂರ್ತಿ ಇದೆ. ಬಲಗೈಯಲ್ಲಿ ಮನುಷ್ಯನ ತಲೆಬುರುಡೆ, ಪಾದದ ಬಳಿ ಮಾಂತ್ರಿಕರು ಬಳಸುವ ಉದ್ದನೆಯ ಎಲುಬು ಹಿಡಿದಿದ್ದಾಳೆ. ಮತ್ತೊಂದು ಕಾಳಿ ದೇವಾಲಯದ ಪೂಜಾರಿ ಮುಸಲ್ಮಾನನಾಗಿದ್ದು, ಅಮವಾಸ್ಯೆಯಂದು ಸ್ಮಶಾನ ಪೂಜಿಸಿ, ತಲೆಬರುಡೆಗಳೊಂದಿಗೆ ಆಟವಾಡುತ್ತಾನೆಂಬುದು ಸ್ಥಳೀಯ ವಕ್ತೃಗಳ ಹೇಳಿಕೆಯಾಗಿದೆ. ಕುರಿ ಬಲಿ ನೀಡಿ ರಕ್ತಹೀರುವ ಇಂಥ ವಾಮಾಚಾರದ ಪಳಿಯುಳಿಕೆಗಳು ಕೌಲುಬಜಾರದಲ್ಲಿ ಇಂದಿಗೂ ಕಂಡುಬರುತ್ತವೆ.

ಇಂದು ಸಿಡಿ ಆಚರಣೆ ಗಾಣಿಗರ ನೇತೃತ್ವದಲ್ಲಿ ನಡೆಯುತ್ತದೆ. ಸಿಡಿ ಬಂಡಿ ಎಳೆಯುವ ಬಲಿಷ್ಠ ಎತ್ತುಗಳ ಆಯ್ಕೆ ಮತ್ತು ಆರೈಕೆಯಲ್ಲಿ ವಿಶೇಷತೆಯಿದೆ. ಆಯ್ಕೆಯಾದ ಎತ್ತುಗಳಿಂದ ಕೆಲಸ ಮಾಡಿಸುವಂತಿಲ್ಲ. ಕೋಡಿಗೆ

ಮಿರಿ ಮಿರಿ ಎಣ್ಣೆ ತಿಕ್ಕಿ, ರಿಬ್ಬನ್ ಕಟ್ಟಿ, ಹಣೆಗೆ ಕುಂಕುಮವಿಟ್ಟು, ಕೊರಳಿಗೆ ಗೆಜ್ಜೆಸರ ಹಾಕಿ, ಕಾಲುಗಳಿಗೆ, ಬೆನ್ನಿಗೆ ಆಕರ್ಷಕ ಬಣ್ಣದ ಬಟ್ಟೆ ಹಾಗೂ ಹೂದಂಡೆಗಳಿಂದ ಸರ್ವಾಲಂಕೃತಗೊಳಿಸುತ್ತಾರೆ. ಅವನ್ನು ಮೆರವಣಿಗೆಯ ಮೂಲಕ ದುರ್ಗಿಗುಡಿಗೆ ಕರೆತರಲಾಗುತ್ತದೆ. ಕೌಲುಬಜಾರದ ಗಾಣಿಗರ ಮೂಲಪುರುಷರು ಸಿರುಗುಪ್ಪ ನಿವಾಸಿಗಳಾಗಿದ್ದಾರೆ. ಆದಕಾರಣ ಅಲ್ಲಿಂದ ಜೋಡೆತ್ತು ಉತ್ಸವದಲ್ಲಿ ಭಾಗವಹಿಸುವುದು ಕಡ್ಡಾಯ. ವಿಶ್ವಕೋಶದ ಪ್ರಕಾರ ಗಾಣಿಗರು ಗಾಣದಿಂದ ಎಣ್ಣೆ ತೆಗೆದು ಜೀವನ ನಡೆಸುವವರು. ಗಾಣಿಗ ಪದ ತೆಲುಗಿನ ಗಾನುಗ ಪದದಿಂದ ಬಂದುದಾಗಿದೆ (ಅರವಿಂದ ಮಾಲಗತ್ತಿ, ಪು. ೪೩೨). ಇಲ್ಲಿಯ ಗಾಣಿಗರು ಆಂಧ್ರ ಮೂಲದವರಾಗಿದ್ದು, ಮಾತೃಭಾಷೆ ತೆಲುಗು ಆಗಿರುವುದು ಮೇಲಿನ ಮಾತನ್ನು ಸಮರ್ಥಿಸುತ್ತದೆ. ಕೌಲುಬಜಾರದ ಈಶ್ವರನ ಗುಡಿಯಲ್ಲಿ ಸಿಡಿಬಂಡಿಯ ಬಿಡಿ ಭಾಗಗಳನ್ನು ಇರಿಸಲಾಗುತ್ತದೆ. ಅವುಗಳನ್ನು ಸಾಂಪ್ರದಾಯಿಕವಾಗಿ ಪೂಜಿಸಿ ಹೊರತೆಗೆಯುತ್ತಾರೆ. ಈ ಹಿನ್ನೆಲೆಯಲ್ಲಿಯೂ ಇವರು ಗಾಣಿಗರೆಂದು ತಿಳಿಯಲು ಸಾಧ್ಯವಿದೆ. ೧೨ನೇ ಶತಮಾನದಲ್ಲಿ ಎಲ್ಲಾ ವೃತ್ತಿಮೂಲದವರು ಸಾಕಷ್ಟು ಸಂಖ್ಯೆಯಲ್ಲಿ ಶೈವರಾಗಿರುವುದು ಗಮನಾರ್ಹ. ಶಿವನ ಅರ್ಧಾಂಗಿ ಪಾರ್ವತಿಯ ಪ್ರತಿರೂಪ ದುರ್ಗಿ. ಶಕ್ತಿದೇವತೆಯಾದ ದುರ್ಗಿ ತಮ್ಮ ಮನೆಮಗಳೆಂದು ಕೌಲುಬಜಾರದಿಂದ ಗಾಣಿಗ ಸಮುದಾಯದ ಸ್ತ್ರೀಯರು ಸಿಡಿ ಉತ್ಸವದಲ್ಲಿ ಉಡಿಯಕ್ಕಿ ತುಂಬುತ್ತಾರೆ. ಕೌಲುಬಜಾರದಿಂದ ಬಂಡಿಯ ಮೇಲೆ ಸಿಡಿಗಂಬವನ್ನು ಏರಿಕೊಂಡು ಉತ್ಸವದ ಮೂಲಕ ದುರ್ಗಿ ಗುಡಿಗೆ ತರುತ್ತಾರೆ. ಸಿಡಿಗಂಬದ ತುದಿ ಭಾಗಕ್ಕೆ ದೇವಿಯ ಪ್ರತಿರೂಪವೆಂದು ಹುಲಿಯ ಮುಖವರ್ಣಿಕೆಯನ್ನು ಕಟ್ಟುತ್ತಾರೆ. ಇದು ದುರ್ಗಿಯಲ್ಲಿಯ ವ್ಯಾಘ್ರತೆಯನ್ನು ಸೂಚಿಸುತ್ತದೆ. ಸಿಡಿಗಂಬದ ತುದಿಗೆ ಭೂತಬಿಲ್ಲೆ(ಗೊಂಬೆ)ಯನ್ನು ಕಟ್ಟಿರುತ್ತಾರೆ. ಇದು ಕೈಯಲ್ಲಿ ಕತ್ತಿ, ತಲೆಗೆ ಪೇಟ, ಹೂವಿನಹಾರ, ಗುರಾಣಿ ಹಿಡಿದುಕೊಂಡಿರುತ್ತದೆ. ನರಬಲಿಯ ಸಾಂಕೇತಿಕ ರೂಪ ಇದಾಗಿದೆ. ಹಿಂದೆ ಎಲ್ಲಾ ಬಲಿಗಳಿಗಿಂತ ಮಾನವ ಬಲಿ ಸರ್ವಶ್ರೇಷ್ಠವಾಗಿದ್ದು, ಮಾತೃಪ್ರಧಾನ ಸಮಾಜದ ಕಾಲಸ್ಥಿತಿಯಲ್ಲಿ ಪುರುಷನೇ ಬಲಿಯಾಗುವುದು ಅನಿವಾರ್ಯವಾಗಿತ್ತು. ಈ ಹಿನ್ನೆಲೆಯಲ್ಲಿ ಇಂದು ಪುರುಷರೂಪದ ಗೊಂಬೆ ಬಲಿಯಾಗುವಿಕೆ ಇದೆ. ಸ್ಥಳೀಯ ವಕ್ತೃಗಳ ಹೇಳಿಕೆಯ ಪ್ರಕಾರ ಹಿಂದೆ ಮನುಷ್ಯ ಸಿಡಿ ಆಡುತ್ತಿದ್ದನೆಂದು, ಒಮ್ಮೆ ಸಿಡಿ ಆಡುವ ವ್ಯಕ್ತಿ ಬಿದ್ದು ಸಾವನ್ನಪ್ಪಿದನೆಂದು, ಅಂದಿನಿಂದ ಗೊಂಬೆಕಟ್ಟಿ ಆಡುವ ಸಂಪ್ರದಾಯ ಬಂದಿದೆ. ಸಿಡಿ ಆಚರಣೆಯು ವ್ಯಕ್ತಿಯ ಸಾವು ಬದುಕಿನ ನಡುವಿನ ಹೋರಾಟ. ಆಚರಣೆಯ ನಂತರ ವ್ಯಕ್ತಿ ಚೇತರಿಸಿಕೊಳ್ಳಲು ಹಲವಾರು ತಿಂಗಳು ಬೇಕಾಗುತ್ತಿತ್ತು. ಈ ಕಾರಣಗಳಿಂದ ಭಯಾನಕವಾದ ಸಿಡಿ ಆಚರಣೆ ಸಾಧುವಾಗುತ್ತಾ ಬಂದಿರಬೇಕು.

ಮೂಲದಲ್ಲಿ ಬೆನ್ನುಹುರಿಗೆ ಕಬ್ಬಿಣದ ಕೊಕ್ಕೆಯನ್ನು ಹಾಕಿ, ಅದಕ್ಕೆ ಹಗ್ಗವನ್ನು ಕಟ್ಟಿ ಮೇಲಿರುವ ಕಂಭಕ್ಕೆ ಬಿಗಿದಿರುತ್ತಿದ್ದರು. ಈ ರೀತಿ ಸಿಡಿ ಧರಿಸಿದವರನ್ನು ದೇವಸ್ಥಾನದ ಸುತ್ತಾ ಸುತ್ತಿಸುವ ಪರಿಪಾಠವಿತ್ತೆಂದು ತಿಳಿದುಬರುತ್ತದೆ. ಇಂದು ಸಿಡಗಂಬದ ತುದಿಗೆ ಎರಡು ದಪ್ಪನೆಯ ಹಗ್ಗ ಕಟ್ಟಿ, ಹಗ್ಗದ ತುದಿಯನ್ನು ಗಾಣಿಗರು ಆಚೆ, ಈಚೆ ಹಿಡಿದು ಬಂಡಿಯನ್ನು ನಿಯಂತ್ರಿಸುತ್ತಾರೆ. ಇದು ಅವರ ಮೂಲವೃತ್ತಿಯ ಸಾಂಕೇತಿಕ ರೂಪವು ಹೌದು. ರಥದ ಚಕ್ರಗಳಿಗೆ ತೆಂಗಿನಕಾಯಿ ಹೊಡೆದು ಹರಕೆ ತೀರಿಸುವುದು ಬಲಿಯ ಪ್ರತೀಕವಾಗಿದೆ. ಸಿಡಗಂಬ ಮೂರುಸುತ್ತು ಸುತ್ತುವವರೆಗೂ ಬಾಳೆಹಣ್ಣು ಎಸೆಯುತ್ತಾರೆ. ಒಂಟಿ ಫಲ ಹೊಂದಿದ ಬಾಳೆ, ಇಲ್ಲಿ ಬಲಿಗೆ ಪರ್ಯಾಯವಾಗಿ ಬಳಸಲ್ಪಡುತ್ತದೆ.

ಸಿಡಗಂಬದ ಆಚರಣೆಯಲ್ಲಿ ವಿಶೇಷವಾಗಿ ಮೇಟಿ ಕುಂಭವನ್ನು ಉತ್ಸವದಲ್ಲಿ ತರುತ್ತಾರೆ. ಕುಂಭಹೊತ್ತ ಮುತ್ತೈದೆ ದುರ್ಗಿಯ ಪ್ರತಿನಿಧಿ. ಗರ್ಭ ಪ್ರತೀಕವಾದ ಕುಂಭದ ಬಾಯಿ ಕಿರಿದಾಗಿದ್ದು, ಕುತ್ತಿಗೆ ಗಿಡ್ಡದಾಗಿ, ಹೊಟ್ಟೆ ದೊಡ್ಡದಾಗಿರುತ್ತದೆ. ಅದರಲ್ಲಿ ಜೋಳದ ಅನ್ನ ತುಂಬಿಸಿರುತ್ತಾರೆ. ಕುಂಭವು ಮಾತೃದೇವತೆಯ ಆಚರಣೆಗಳಲ್ಲಿ ಪೂಜಿಸಲ್ಪಡುವುದು ಸಾಮಾನ್ಯ. ಹಿಂದೆ ಕೋಣನ ಮೇಲೆ ಕುಂಭವನ್ನು ತಂದು, ಅದನ್ನು ದೇವಿಯ ಎದುರುಗಡೆ ಬಲಿ ನೀಡುವ ಸಂಪ್ರದಾಯವಿತ್ತು. ಸರ್ಕಾರ ಬಲಿಪದ್ಧತಿಯನ್ನು ನಿಷೇಧಿಸಿದ ಹಿನ್ನೆಲೆಯಲ್ಲಿ ಈ ಪದ್ಧತಿ ಇಂದು ಇಲ್ಲ. ಕುಂಭವು ದೇವಿಯ ಮುಂಭಾಗದ ಪಾದುಗಟ್ಟೆಯಲ್ಲಿ ಬೇವಿನಸೊಪ್ಪಿನ ಮೇಲೆ ಪ್ರತಿಷ್ಠಾಪನೆಗೊಳ್ಳುತ್ತದೆ. ಮಾತೃದೇವತೆಯ ಆರಾಧನೆಯಲ್ಲಿ ಬೇವು ಶಕ್ತಿಯ ಪ್ರತೀಕ. ಕೊಲೆಯಾದ ವ್ಯಕ್ತಿಯನ್ನು ಬೇವಿನ ತಪ್ಪಲಲ್ಲಿ ಇಡುವುದು ಸಾವಿನ ಪ್ರತೀಕವಾಗಿದೆ. ಈ ಆಚರಣೆಯಲ್ಲಿ ದುರ್ಗಿಯ ಪ್ರತೀಕವಾದ ಕುಂಭದಡಿಯಲ್ಲಿಯ ಬೇವು ಬಲಿಯಾಗುವಿಕೆಯನ್ನು ಸಂಕೇತಿಸುತ್ತದೆ. ಬಳ್ಳಾರಿ ಜಿಲ್ಲೆಯ ಪ್ರಮುಖ ಬೆಳೆಯಾದ ಜೋಳ ಆಚರಣೆಯಲ್ಲಿ ಸಮೃದ್ಧಿಯನ್ನು ಸೂಚಿಸುತ್ತದೆ. ಮಾತೃದೈವದ ಆಚರಣೆಗಳಲ್ಲಿ ಬಳಸಲ್ಪಡುವ ಕೆಂಪುವರ್ಣ ಹೆಣ್ಣಿನ ಮುಟ್ಟನ್ನು ಹಾಗೂ ಫಲವಂತಿಕೆಯನ್ನು ಸಂಕೇತಿಸುತ್ತದೆ. ಭಂಡಾರ ಬಂಗಾರವರ್ಣವಾಗಿದ್ದು, ಸುಖ, ಸಮೃದ್ಧಿಯ ಆಶಯವಾಗಿದೆ. ಈ ಸಮಯದಲ್ಲಿ ಖಡ್ಗ ಹೇಳಿದರೆ ದೇವಿ ಜಾಗೃತಗೊಳ್ಳುತ್ತಾಳೆಂಬ ನಂಬಿಕೆ ಇದೆ. ನಂತರ ಕುಂಕುಮ ತುಂಬಿಸಿಟ್ಟ ಕುಂಬಳಕಾಯಿ ನಿವಾಳಿಸಿ ಬಲಿ ನೀಡಲಾಗುತ್ತದೆ.

ಬಳ್ಳಾರಿ ದುರುಗಮ್ಮ ಹುತ್ತರೂಪಿ ದೈವ. ಇಲ್ಲಿ ಹುತ್ತ ಹಲವಾರು ವರ್ಷಗಳಿಂದ ಎಣ್ಣೆ, ಭಂಡಾರಗಳಿಂದ ಪೂಜಿಸಲ್ಪಡುತ್ತಿದೆ. ಗಟ್ಟಿಯಾಗಿ ನುಣುಪಿರುವ, ತೊಳೆದರೂ ಕೆಸರಾಗದ ಉಬ್ಬಿದ ಹುತ್ತದ ಮಧ್ಯಭಾಗವೇ ದುರ್ಗಿಯ ಬೆನ್ನು. ಅದನ್ನೇ ಇಂದು ಅಲಂಕರಿಸಿ ಪೂಜಿಸುತ್ತಾರೆ. ಮಾತೃದೈವ ಕೇಂದ್ರಿತ ಈ ಆಚರಣೆಯಲ್ಲಿ ಲಕ್ಷಾಂತರ ಭಕ್ತರ ಭಾಗವಹಿಸುವಿಕೆ ಸಾಂಸ್ಕೃತಿಕ ಅನನ್ಯತೆಯ ಪ್ರತೀಕವಾಗಿದೆ. ಇದು ಆಚರಣೆಯ ಮುಖೇನ ಸ್ತ್ರೀದೈವಗಳಿಗೆ ಸಿಗುತ್ತಿರುವ ಸಾಮಾಜಿಕ ಮನ್ನಣೆಯಿಂದ ಹಿಂದಿನ ಮಾತೃಪ್ರಧಾನ ಸಮಾಜ ದೀರ್ಘಾವಧಿಯಾದದ್ದು, ಪ್ರಭಾವಶಾಲಿಯಾದದ್ದು ಆಗಿರಬೇಕು ಎಂದು ಊಹಿಸಲು ಸಾಧ್ಯ. ಅದರ ಪಳಿಯುಳಿಕೆಗಳು ದುರ್ಗಮ್ಮನ ಸಿಡಿ ಆಚರಣೆಯಲ್ಲಿ ಕಂಡುಬರುತ್ತಿವೆ. ಅಂದಿನ ಸಿಡಿದಲೆ ಪರಂಪರೆ ಇಂದು ಸಿಡಿಬಂಡಿಯ ರೂಪದಲ್ಲಿ ಸ್ಥಿತ್ಯಂತರಗೊಂಡಿದೆ.

ಹಗರಿಬೊಮ್ಮನಹಳ್ಳಿ ತಾಲೂಕಿನ ಚಿಲಕಗೋಡು ಗ್ರಾಮದಲ್ಲಿ ಸಿಡಿ ಆಚರಣೆಯಿದೆ. ಅಮೃತ ಅಮವಾಸ್ಯೆಯ ದಿನ ನಡೆಯುವ ಆಚರಣೆ ಇದು. ಹರಿಜನರು ಇಲ್ಲಿ ಸಿಡಿ ಆಡುವುದು ಕ್ಷೇತ್ರಕಾರ್ಯದಲ್ಲಿ ಕಂಡುಬಂದಿದೆ. ಸಿಡಿಗಂಬಕ್ಕೆ ಬಿಲ್ಲಿನಾಕಾರದ ಕಮಾನನ್ನು ಕಟ್ಟಿರುತ್ತಾರೆ. ಅದು ಸಿಡಿ ಆಡುವವರ ಬೆನ್ನಿಗೆ ಕಟ್ಟಲ್ಪಟ್ಟಿರುತ್ತದೆ. ಇದನ್ನು ಕಂಬದಸಿಡಿ ಎಂದು ಕರೆಯುತ್ತಾರೆ. ವಿಜಯನಗರದ ಭಾಗ್ಯದೇವತೆ ಎಂಬ ದೈವವೊಂದು ಘತ್ತರಗಿಯಲ್ಲಿ ಭಾಗ್ಯಮ್ಮನಾಗಿದೆ. ಈ ದೈವದ ಹೆಸರಲ್ಲಿ ಅಲ್ಲಿ ಸಿಡಿಬಲಿಯು ಪ್ರಚಲಿತದಲ್ಲಿದೆ. ಇದರಿಂದ ವಿಜಯನಗರ ಅರಸರ ಆಳ್ವಿಕೆಯ ಸಮಯದಲ್ಲಿ ಸಿಡಿಬಂಡಿ ಆಚರಣೆ ಇತ್ತೆಂಬುದು ತಿಳಿದುಬರುತ್ತದೆ.

೪.೨.೧೦.೨. ಪ್ರಾಣಿ ಬಲಿ

ಜಗತ್ತಿನಾದ್ಯಂತ ಬಲಿ ಸಂಪ್ರದಾಯಗಳು ಜನಪದರ ಜೀವನದಲ್ಲಿ ಆವರಿಸಿಕೊಂಡಿವೆ. ಹಿಂದಿನ ಕಾಲದಲ್ಲಿ ರೋಗರುಜಿನಗಳಾದಾಗ ಮಳೆ-ಬೆಳೆ ಇಲ್ಲದಿದ್ದಾಗ ನೊಂದ ಜನ ತಮ್ಮ ಕಷ್ಟಗಳ ನಿವಾರಣೆಗಾಗಿ ದೇವಿಯ

ಮೊರೆಹೋಗುತ್ತಿದ್ದರು. ಬಲಿ ಅರ್ಪಿಸುವುದು ಬಹುತೇಕ ಹೆಣ್ಣುದೈವಗಳಿಗೆ ಮಾತ್ರ. ದೇವತೆಗೆ ಹರಕೆ ಹೊತ್ತು ಬಲಿ ನೀಡುವುದರ ಮೂಲಕ ತಮ್ಮ ಭಕ್ತಿಯನ್ನು ತೋರಿಸುತ್ತಿದ್ದರು. ಹೀಗೆ ಬಲಿ ನೀಡುವುದರಿಂದ ದೇವಿ ತೃಪ್ತಳಾಗಿ ರೋಗಗಳು ಇಲ್ಲವಾಗಿ ಮಳೆ, ಬೆಳೆಗಳಾಗುವವೆಂಬ ನಂಬಿಕೆ ಜನಪದರಲ್ಲಿದೆ. ಹಿಂದೆ ಪ್ರಾಣಿ ಬಲಿ ಇತ್ತೆಂಬುದಕ್ಕೆ ಇಂದಿಗೂ ಮುಂದುವರಿಸಿಕೊಂಡು ಬಂದ ಬಲಿ ಆಚರಣೆಗಳೇ ಸಾಕ್ಷಿ. ಮೈಲಾರಲಿಂಗನ ಜಾತ್ರೆಯಲ್ಲಿ ಗೊರವಪ್ಪಗಳು ದೇಹಕ್ಕೆ ಶಸ್ತ್ರಪವಾಡಗಳನ್ನು ಮಾಡಿಕೊಳ್ಳುವುದು, ರಕ್ತವನ್ನು ದೈವಕ್ಕೆ ಅರ್ಪಿಸುವುದು ಇವೆಲ್ಲಾ ಕ್ರಿಯೆಗಳು ನರಬಲಿ ಸಂಕೇತಗಳಾಗಿರಲು ಸಾಧ್ಯವಿದೆ. ವೀರಭದ್ರನ ಜಾತ್ರೆ, ಉತ್ಸವಗಳಲ್ಲಿ ಅಸ್ತ್ರವನ್ನು ದೇಹದ ಭಾಗದಲ್ಲಿ ಚುಚ್ಚಿಕೊಳ್ಳುವುದರ ಮುಖೇನ ರಕ್ತವನ್ನು ದೈವಕ್ಕೆ ಅರ್ಪಿಸುವುದು ಬಲಿ ಪದ್ಧತಿಯ ಬೆಳವಣಿಗೆಯ ಹಂತವಾಗಿರಲು ಸಾಧ್ಯ.

ಸಿದ್ಧಲಿಂಗಯ್ಯನವರ ಪ್ರಕಾರ "ಒಂದು ದೇವತೆಗೆ ಬಲಿ ಕೊಡುವುದು ಅರ್ಪಣೆ ಅಷ್ಟೇ ಅಲ್ಲ, ಒಂದು ಜನಾಂಗ ತನ್ನ ದೇವರೊಂದಿಗೆ ಒಂದಾಗುವುದನ್ನು ಸಾಧಿಸುವ ದಾರಿಯಾಗಿದೆ".[೨೧] ದೇವತೆಗಾಗಿ ರಕ್ತವನ್ನು ಚೆಲ್ಲುವುದರ ಮೂಲಕ ಒಂದು ಜನಾಂಗಕ್ಕೆ ದೇವತೆಯೊಡನೆ ಒಂದು ಬಗೆಯ ರಕ್ತಸಂಬಂಧ ಏರ್ಪಟ್ಟಿತೆಂದು ಜನ ಭಾವಿಸುತ್ತಾರೆ. ಬಲಿಗಾಗಿ ಪ್ರಾಣಿಗಳನ್ನು ಮೀಸಲು ಬಿಡುತ್ತಾರೆ. ಇವು ಯಾರ ಹೊಲ-ಗದ್ದೆಯಲ್ಲಿ ಬೇಕಾದರೂ ಮೇವನ್ನು ಪಡೆಯಬಹುದು. ಅದನ್ನು ಯಾರು ತಡೆಯುವಂತಿಲ್ಲ. ಹಾಗೇನಾದರೂ ತಡೆದು ಶಿಕ್ಷೆಗೊಳಪಡಿಸಿದರೆ, ದೈವದ ಕೋಪಕ್ಕೆ ತುತ್ತಾಗುತ್ತೇವೆಂಬ ಭಯವಿದೆ. ಬಳ್ಳಾರಿ ಜಿಲ್ಲೆಯಲ್ಲಿ ಊರಮ್ಮನ ಜಾತ್ರೆಯಲ್ಲಿ ಕೋಣ ಬಲಿ ಕೊಡುವ ಪದ್ಧತಿ ಇದೆ. ನರಬಲಿಯ ಪರ್ಯಾಯ ರೂಪವೇ ಕೋಣಬಲಿ. ಮಾತೃದೇವತೆಯ ಕಾಲದಲ್ಲಿ ಒಳಿತು, ಕೆಡುಕುಗಳಿಗೆ ಅಮ್ಮನೇ ಕಾರಣಳೆಂಬ ನಂಬಿಕೆಯಿತ್ತು. ರೋಗ ತಗುಲಿದರೆ ಅದನ್ನು ನಿವಾರಿಸುವವಳು ಅಮ್ಮ. ಫ್ರೇಜರ್ ಸಂಗ್ರಹಿಸಿದ ಮಾಹಿತಿಯ ಪ್ರಕಾರ ಧಾನ್ಯಗಳನ್ನು ಒಕ್ಕುವ ಮೊದಲು ನರಬಲಿ ಅಥವಾ ಪ್ರಾಣಿಬಲಿ ಅನಿವಾರ್ಯವೆಂದು ಆದಿಮ ಕೃಷಿಕರು ತಿಳಿದಿದ್ದರು. ತಾಯಿಯ ಗರ್ಭದಿಂದ ಮಗು ಜನಿಸುವಂತೆ, ಭೂಮಿಯಿಂದ ಧಾನ್ಯ ಬೆಳೆಯುವುದೆಂದು ಭಾವಿಸಿದ ಜನಪದರು, ಆ ಫಲವು ತಮಗೆ ದಕ್ಕಬೇಕಾದರೆ ಅದನ್ನು ಕಡಿಯುವುದು ಅಗತ್ಯವಾಗಿತ್ತು. ಬಲಿ ಆಚರಣೆಗಳ ಉಗಮಕ್ಕೆ ಇಂಥ ನಂಬಿಕೆಗಳು ಸಹಕಾರಿಯಾಗಿರಲು ಸಾಧ್ಯವಿದೆ. ಅಮ್ಮನ ಹಬ್ಬಗಳಲ್ಲಿ ಕೋಣಬಲಿ ಸಾಮಾನ್ಯ. ಕ್ರಿ.ಶ. ೧೧ನೇ ಶತಮಾನದ ಚಂದ್ರರಾಜನ ಮದನತಿಲಕವು ಬಲಿ ಆಚರಣೆಯನ್ನು ಈ ರೀತಿ ಸಾದರಪಡಿಸುತ್ತದೆ.

"ಬಳರಿಯ ನೋಂಪಿಗೆ ಬೀದಿಗೆ
ಮಳಿವರ ಮನೆಗಳ್ಗೆ ಮದ್ಯಪಿಗಳಲ್ಲಿಗೆ ಕೋ
ಮಳೆಯಂ ಪೋಗಲ್ಕಿತ್ತಡೆ
ಬಳರಿಗೆ ಪೊಯಲಿಡಹೋದ ಕುರಿಯಂತಕ್ಕು"[೨೨]

ಬಳರಿಯ ನೋಂಪಿಗೆ (ವ್ರತ, ಜಾತ್ರೆ) ಕೋಮಲೆಯರನ್ನು ಕಳಿಸಬಾರದು, ಕಳಿಸಿದ್ದೇ ಆದರೆ ಬಳರಿ ದೇವತೆಗೆ ರಕ್ಷಿಸೆಂದು ಮೊರೆಯಿಟ್ಟ ಕುರಿಯಂತಾಗುತ್ತದೆ ಎಂಬುದು, ಬಳರಿಗೆ ಕುರಿಬಲಿ ಕಡ್ಡಾಯವಾಗಿದ್ದಾಗ, ಆಕೆ ಕುರಿಯನ್ನು ಹೇಗೆ ತಾನೇ ರಕ್ಷಿಸುವಳು. ಇದರಿಂದ ಮದ್ಯಮಾಂಸಗಳ ಸೇವನೆಗಳಿಂದ ಕೂಡಿದ ಬಲಿ

ಆಚರಣೆ ಇತ್ತೆಂಬುದು ತಿಳಿದುಬರುತ್ತದೆ. ಬಸವಣ್ಣನವರು ತಮ್ಮ ವಚನದಲ್ಲಿ ಬಲಿ ನೀಡುತ್ತಿದ್ದ ಪ್ರಸಂಗವನ್ನು ಟೀಕಿಸಿದ್ದಾರೆ.

ಜಾತಿಪದ್ಧತಿಗೂ, ಬಲಿ ಆಚರಣೆಗೂ ಸಂಬಂಧವಿದೆ. ಇತ್ತೀಚೆಗೆ ಮೇಲುಜಾತಿಯವರ ಆಚರಣೆಗಳು ಬಲಿ, ಹಿಂಸೆಯಿರದ ಮೃದು ಆಚರಣೆಗಳಾಗಿ ಪರಿವರ್ತನೆಗೊಳ್ಳುತ್ತಿವೆ. ಕೆಳಜಾತಿಯವರ ಆಚರಣೆಗಳು ದೈಹಿಕ ಶ್ರಮ, ಬಲಿ, ಹಿಂಸೆಯನ್ನೊಳಗೊಂಡ ಆಚರಣೆಗಳಾಗಿರುವುದು ಕ್ಷೇತ್ರಕಾರ್ಯದಲ್ಲಿ ಕಂಡುಬಂದಿದೆ. ಬಲಿ ಆಚರಣೆಗಳಲ್ಲಿ ಕೋಣ ಕಡಿಯುವುದು. ಚರಗ ಚೆಲ್ಲುವುದು, ಕೆಳಜಾತಿಯವರಿಂದ ನೆರವೇರುತ್ತದೆ. ಹೊಸಪೇಟೆಯ ನಾಯಕ ಕೇರಿಗಳಲ್ಲಿ ಹರಿಜನರು ಪಟ್ಟದ ಕೋಣ ಕಡಿದರೆ, ನಾಯಕರಿಂದ ಹರಕೆಯ ಕೋಣ ಕಡಿಯಲ್ಪಡುತ್ತದೆ.

ಅಮ್ಮನ ಆಚರಣೆಗಳಲ್ಲಿ ಕೋಣ ಕಡಿಯುವುದು ಸಮೃದ್ಧಿ ಮೂಲವಾಗಿದ್ದರೂ, ಇದಕ್ಕೆ ಸಂಬಂಧಿಸಿದ ಪುರಾಣ ಸಾಮಾಜಿಕ ಅಂಶಗಳನ್ನು ಒಳಗೊಂಡಿದೆ. ಬ್ರಾಹ್ಮಣ ಕುಲದಲ್ಲಿ ಹುಟ್ಟಿದ ಸುಂದರ ಕನ್ಯೆಯ ಚೆಲುವನ್ನು ಕಂಡು ಹೊಲೆಯನೊಬ್ಬ ಅವಳನ್ನು ಮದುವೆಯಾಗುತ್ತಾನೆ. ಆದರೆ ಮದುವೆಯಾಗುವಾಗ ಆತ ತನ್ನ ಕುಲವನ್ನು ಮುಚ್ಚಿಡುತ್ತಾನೆ. ಮುಂದೆ ಮಕ್ಕಳೂ ಆಗುತ್ತವೆ. ಒಂದು ದಿನ ಆತನ ತಾಯಿ ತಂದ ಆಹಾರದಿಂದ ಆತ ಕೀಳು ಕುಲದವನೆಂದು ತಿಳಿಯುತ್ತದೆ. ಕೂಡಲೇ ರೌದ್ರಾವತಾರ ತಾಳಿ, ಆತನಿಗೆ ಕೋಣದ ರೂಪ ಹೊಂದಲೆಂದು ಶಾಪಕೊಟ್ಟು, ಆ ಕೋಣವನ್ನೇ ಬಲಿಯಾಗಿಸಿಕೊಳ್ಳುತ್ತಾಳೆ.

ಅಮ್ಮನ ಜಾತ್ರೆಗಳಲ್ಲಿ ತಮ್ಮ ನಾಯಕನ ಬಲಿಯನ್ನು ಪ್ರತಿಭಟಿಸಲು ಅಮ್ಮನನ್ನು ಅಶ್ಲೀಲ ಶಬ್ದಗಳಿಂದ ಬೈಯುವ ಪದ್ಧತಿ ಬಳ್ಳಾರಿ ಜಿಲ್ಲೆಯಲ್ಲಿದೆ. ಹೆಣ್ಣು ದೇವರ ಜಾತ್ರೆಗಳಲ್ಲಿ ಅಮ್ಮನನ್ನು ಬಯ್ಯಲು ಸೊನ್ನ ಗ್ರಾಮದಿಂದ ರಾಣಿಯರನ್ನು ಕರೆತರುತ್ತಾರೆ. ಅವರು ಜನಪದ ಹಾಡುಗಳ ಮೂಲಕ ದೈವವನ್ನು ಬಯ್ಯುತ್ತಾರೆ. ಹೀಗೆ ಜಾತ್ರೆಗಳಲ್ಲಿ ದೇವರನ್ನು ಬಯ್ಯುವುದು, ಹೊಗಳುವುದು ಸಹ ಒಂದು ಆಚರಣೆಯಾಗಿದೆ. ತಾರಾನಗರದ ವೀರಗಾಸೆಯವರು ಕಡಿ ಹೇಳುವುದರ ಮೂಲಕ ದೇವರನ್ನು ಹೊಗಳುತ್ತಾರೆ. ಈ ಆಚರಣೆಗಳು ಧಾರ್ಮಿಕ ಚೌಕಟ್ಟಿನಲ್ಲಿ ನಡೆಯುತ್ತಿರುತ್ತವೆ. ಇದು ತುಳಿಯಲ್ಪಟ್ಟ ಸಮುದಾಯದವರಿಂದ ಆಚರಣೆಗಳ ಮೂಲಕ ಶೋಷಕ ಸಮಾಜಕ್ಕೆ ತಮ್ಮ ಪ್ರತಿಭಟನೆಯನ್ನು ಸಲ್ಲಿಸುವ ರೀತಿಯೂ ಹೌದು. ಬಲಿ ಆಚರಣೆಯಲ್ಲಿ ಪ್ರಧಾನವಾದುದು ಕೋಣ ಬಲಿ. ಇತ್ತೀಚೆಗೆ ಕೋಣಬಲಿಯ ಬದಲು ಕುರಿಬಲಿಯನ್ನು ನೀಡುವ ಪದ್ಧತಿ ಹೆಚ್ಚಾಗುತ್ತಿದೆ. ಯಮಧರ್ಮರಾಯನ ವಾಹನವಾದ ಕೋಣ ಕೆಳಜಾತಿ ದೇವತೆಗಳಿಗೆ ಬಲಿಯಾಗುತ್ತಿದೆ ಎಂಬುದು, ಮೇಲುವರ್ಗದ ಪುರಾಣ ಮೂಲಗಳು ಹುಟ್ಟಿಸಿದ ಕಥೆಯಾಗಿದೆ. ಕೋಣ ಬಲಿ ಕೆಳವರ್ಗವನ್ನು ಹಿಂಸಿಸಿ ಸೇಡು ತೀರಿಸಿಕೊಳ್ಳಲು ನಡೆಸಿದ ಹುನ್ನಾರ ಎಂಬುದು ಕೆಳವರ್ಗದ ಜನರ ಮನೋಭಾವ.

ಗಾವು ಜಿಗಿಯುವುದು, ದೃಷ್ಟಿಮರಿ, ಕೊಂಡಮರಿ, ಧೂಳುಮರಿ, ಬಾನಾಮರಿ ಹೀಗೆ ನೀಡುವ ಬಲಿಗಳು ದೇವಿಗೆ ಮಾಡುವ ಶಾಂತಿಯ ಸಂಕೇತಗಳಾಗಿವೆ. ಬಲಿ ಅರ್ಪಿಸುವ ಪ್ರಾಣಿಯ ಮೇಲೆ ನೀರು ಚುಮುಕಿಸಿದಾಗ, ಅದು ತಲೆ ಅಲ್ಲಾಡಿಸಬೇಕೆಂಬ ಪ್ರತೀತಿ ಇದೆ. ಹೀಗೆ ತಲೆ ಅಲ್ಲಾಡಿಸಿದರೆ ಮಾತ್ರ ಒಂದೇ ಏಟಿಗೆ ಬಲಿ ನೀಡುತ್ತಾರೆ. ಯಾವ ಪ್ರಾಣಿಯೂ ಬಲಿ ನೀಡಿಕೆಗೆ ಸಮ್ಮತಿಸಲಾರದು. ಜನಪದರು ಪರಿಭಾವಿಸುವ ರೀತಿ ಇದಾಗಿದೆ. ಶರಣಾಗತಿಯ ಸಂಕೇತವಾಗಿ ಪ್ರಾಣಿಯ ಬಲಗಾಲನ್ನು ಕತ್ತರಿಸಿ ಅದರ ಬಾಯಿಗೆ ಅಡ್ಡಲಾಗಿ ಇಡುವುದು ಸಹ ಮೇಲಿನ ಆಶಯ ಹೊಂದಿರಲು ಸಾಧ್ಯವಿದೆ.

ದೀಪಾವಳಿ ಹಬ್ಬದಲ್ಲಿ ಬಲಿಪಾಡ್ಯಮಿಯ ದಿನದಂದು ಕೂಡ್ಲಿಗಿ ತಾಲೂಕು ಅಯ್ಯಗಳ ಮಲ್ಲಾಪುರ ಗ್ರಾಮದೇವತೆಯ ಜಾತ್ರೆ ನೆರವೇರುತ್ತದೆ. ಅಂದು ಕೋಣ ಬಲಿ ನೀಡುತ್ತಾರೆ. ಸ್ಥಳೀಯರ ಹೇಳಿಕೆಯ ಪ್ರಕಾರ ಬಲಿ ನೀಡಿಯಾದರೂ ಲಕ್ಷ್ಮಿಯನ್ನು ಒಲಿಸಿಕೊಳ್ಳುವ ಪ್ರಯತ್ನ ಇದು. ಬಳ್ಳಾರಿ ತಾಲೂಕು ಬೆಣಕಲ್ಲಿನಲ್ಲಿ ಐದು ವರ್ಷಕ್ಕೊಮ್ಮೆ, ಹಡಗಲಿ ತಾಲೂಕು ಗ್ರಾಮದೇವತೆಗೆ ರಾತ್ರಿ ನಾಲ್ಕು ಗಂಟೆಗೆ ಕೋಣ ಬಲಿ ನೀಡಿಕೆಯಿದೆ. ಮೂರು ದಿನಗಳ ಕಾಲ ಅದನ್ನು ರಕ್ಷಣೆ ಮಾಡುವುದು ಹರಿಜನ ಸ್ತ್ರೀಯರದ್ದಾಗಿರುತ್ತದೆ. ನಾಲ್ಕನೇ ದಿನ ಗಾವು ಜಿಗಿಯುವ ಆಚರಣೆಯಿದೆ. ಹೊಸಪೇಟೆ ಹತ್ತಿರದ ಮುನಿರಾಬಾದು ಹುಲಿಗೆಮ್ಮನಿಗೆ ಪ್ರತಿವರ್ಷ ಸುಮಾರು ನಾಲ್ಕು ನೂರು ಪ್ರಾಣಿಗಳನ್ನು ಬಲಿ ನೀಡಲಾಗುತ್ತದೆ. ಜಾತ್ರೆ, ಆಚರಣೆಗಳಲ್ಲಿ ಸಾಮೂಹಿಕ ಬದುಕಿನ ಭಾವನೆ, ಮನೋರಂಜನೆ, ಆಹಾರ ಬದಲಾವಣೆ, ಸಂಬಂಧಗಳ ಬೆಸೆಯುವಿಕೆ, ಹೀಗೆ ಸಮಷ್ಟಿಹಿತದ ಧನಾತ್ಮಕ ಭಾವಗಳಿವೆ. ಅದರ ಜೊತೆಗೆ ಮಾರಕ ಪ್ರಾಣಿ ಹಿಂಸೆಯಂತಹ ಋಣಾತ್ಮಕ ಚಿಂತನೆಗಳನ್ನು ಆಚರಣೆಗಳಲ್ಲಿ ಕಾಣಲು ಸಾಧ್ಯವಿದೆ. ಬಲಿ ನಿಷೇಧಕ್ಕೆ ಸರ್ಕಾರದ ಬಿಗಿ ಕಾನೂನು ಇದ್ದರೂ ಧರ್ಮದ ಹೆಸರಿನಲ್ಲಿ ಅಲ್ಲಲ್ಲಿ ಪ್ರಾಣಿ ಬಲಿ ನಡೆಯುತ್ತಲೇ ಇವೆ. ಧರ್ಮದ ಬಗ್ಗೆ ಮುಗ್ಧರಿಗೆ ಸರಿಯಾದ ತಿಳುವಳಿಕೆಯ ಕೊರತೆಯಿದೆ. ಅದಕ್ಕೆ ಅಕ್ಷರ ಜ್ಞಾನ ಅಗತ್ಯ. ಜನಜಾಗೃತಿಯ ವ್ಯಾಪಕ ಬೆಳವಣಿಗೆಯಿಂದ ಮಾತ್ರ ಮುಂದಿನ ತಲೆಮಾರಿಗೆ ಪ್ರಾಣಿ ಹಿಂಸೆಗಳು ತನ್ನ ಅಸ್ತಿತ್ವ ಕಳೆದುಕೊಳ್ಳಲು ಸಾಧ್ಯವಿದೆ. ಆಚರಣೆಗಳಲ್ಲಿ ಬಲಿ ನೀಡಿಕೆಗೆ ವ್ಯವಸ್ಥಿತವಾದ ಸ್ಥಳ ನಿರ್ಮಾಣವಾಗಬೇಕಿದೆ. ಒಂದೇ ಸಾರಿ ಸಾಕಷ್ಟು ಬಲಿ ನೀಡಿಕೆಯಿಂದ ಆ ಸ್ಥಳ ಮಲೀನಗೊಳ್ಳುತ್ತದೆ. ಆ ಸಮಯದಲ್ಲಿ ಹರಡಬಹುದಾದ ಸಾಂಕ್ರಾಮಿಕ ರೋಗಗಳ ನಿಯಂತ್ರಿಸುವಿಕೆ ಅತಿಮುಖ್ಯ. ಈ ನಿಟ್ಟಿನಲ್ಲಿ ಸರ್ಕಾರ, ಸಂಘಟನೆಗಳು, ಸಾರ್ವಜನಿಕರು ಸೂಕ್ತ ರೀತಿಯಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಕಡ್ಡಾಯವಾಗಬೇಕಿದೆ.

೪.೨.೧೦.೩. ಗಾವು ಜಿಗಿಯುವುದು

ಬಳ್ಳಾರಿ ಜಿಲ್ಲೆಯಲ್ಲಿ ಅಮ್ಮನ ಜಾತ್ರೆಗಳಲ್ಲಿ ಗಾವು ಜಿಗಿಯುವ ಆಚರಣೆ ಪ್ರಚಲಿತದಲ್ಲಿದೆ. ಇದು ಪೋತುರಾಜನಾದವನು ಕಪ್ಪು ಬಣ್ಣದ ಕುರಿಯನ್ನು ತನ್ನ ಹಲ್ಲುಗಳ ಮೂಲಕ ಸಿಗಿದು ರಕ್ತ ಕುಡಿದು ಮಾಂಸ ಸೇವಿಸುವ ಆಚರಣೆಯಾಗಿದೆ. ಗಾವು ಜಿಗಿಯುವ ವ್ಯಕ್ತಿಯೇ ಬಚ್ಚಿಟ್ಟ ಕುರಿಯನ್ನು ಹುಡುಕಿ ತರಬೇಕು. ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಕುರಿಯನ್ನು ರೋಷದಿಂದ ಹಿಡಿದು ತಂದು, ಅದರ ಕತ್ತು ಹಾಗೂ ಎರಡು ಕಾಲುಗಳನ್ನು ಕೈಗಳಿಂದ ಬಿಗಿಯಾಗಿ ಹಿಡಿದು ರಕ್ತ ಹೀರುತ್ತಾನೆ. ಈ ರೀತಿಯ ವರ್ತನೆಗಳು ಆದಿಮಾನವನ ಬೇಟೆ ಸಂಸ್ಕೃತಿಯನ್ನು ಸಂಕೇತಿಸುತ್ತವೆ. ಗಾವು ಜಿಗಿಯುವ ಹಕ್ಕು ವಂಶಪಾರಂಪರ್ಯವಾದುದು. ಗಾವು ಜಿಗಿಯುವ ವ್ಯಕ್ತಿ ಮಡಿಯಿಂದ ಉಪವಾಸವಿದ್ದು, ಪತ್ನಿಯಿಂದ ದೂರವಿರಬೇಕು. ಮನಃಶಾಸ್ತ್ರಜ್ಞರ ಪ್ರಕಾರ "ಉಪವಾಸವಿದ್ದ ವ್ಯಕ್ತಿಗೆ ರೋಷ, ಆವೇಶ ಹೆಚ್ಚಾಗಿರುತ್ತದೆ. ಈ ವೇಳೆಯಲ್ಲಿ ಏನು ಸಿಕ್ಕಿದರೂ ತಿಂದು ಬಿಡುವಷ್ಟು ಕೆಚ್ಚು ಇರುತ್ತದೆ".[೫೮] ಬಹುಶಃ ಈ ಹಿನ್ನೆಲೆಯಲ್ಲಿ ಗಾವು ಜಿಗಿಯುವ ವ್ಯಕ್ತಿಯ ಶಕ್ತಿ ಸಂಚಯಕ್ಕಾಗಿಯೇ ಉಪವಾಸವಿರುವ ನಿಯಮವನ್ನು ಅನುಸರಿಸಿಕೊಂಡು ಬಂದಿರಬೇಕು.

ಕೆಲವು ಜನಪದ ವಿದ್ವಾಂಸರು ಗಾವು ಜಿಗಿಯುವುದನ್ನು ಬೇಟೆ ಸಂಸ್ಕೃತಿಯ ಅವಶೇಷವಾಗಿ ಆಚರಣೆಯ ರೂಪದಲ್ಲಿ ಉಳಿದುಕೊಂಡು ಬಂದಿದೆ ಎನ್ನುತ್ತಾರೆ. ಇದು "ಮನುಷ್ಯನ ಮೃಗ-ಸದೃಶ್ಯವಾದ ಅವಸ್ಥೆಯಲ್ಲಿದ್ದಾಗಿನ

ಸ್ಥಿತಿಯ ಒಂದು ಪುನರಾವರ್ತನೆ ಅಥವಾ ಪುನರಾಭಿನಯವಾಗಿದೆ".[೫] ಗಾವು ಜಿಗಿಯುವ ಕ್ರಿಯೆಯು ಆದಿಮಾನವನ ಆಹಾರ ಭಕ್ಷಣೆಯ ಮಾನಸಿಕ ಕ್ರಿಯೆಯು ಹೌದು.

"ದೂಳ್ಮರಿ, ಹಲ್ಮರಿ, ಬ್ಯಾಟೆ ಸಿಗಿಯುವುದು, ಜಿಗಿಯುವುದು" ಹೀಗೆ ಹಲವು ಹೆಸರುಗಳಿಂದ ಕರೆಯಲ್ಪಡುತ್ತದೆ. ಕನ್ನಡ ನಿಘಂಟಿನ ಪ್ರಕಾರ "ಪೋತ ಎಂದರೆ ಪೋತು, ಹೋತ, ಗಂಡು ಮೇಕೆ ಎಂಬುದಾಗಿದೆ" (ಜಿ. ವೆಂಕಟಸುಬ್ಬಯ್ಯ, ಪು. ೫೮, ೭೩). ಬಲಿಯಾದ ಪ್ರಾಣಿಯನ್ನು ಜನಪದರು ದೈವವಾಗಿಸದೆ, ಅಮ್ಮನಿಗಿಂತ ಕೆಳಸ್ಥಾನವನ್ನು ಕಲ್ಪಿಸಿದ್ದಾರೆ. ಅದೇ ಮುಂದೆ ಪೋತು ಅಥವಾ ಪೋತುರಾಜನಾಯಿತು.

ಪೋತುರಾಜನನ್ನು ಶಿವನ ವರಪ್ರಸಾದವೆಂದು ಭಾವಿಸಲಾಗಿದೆ. ಜನಪದ ಪುರಾಣದ ಪ್ರಕಾರ ಕಲ್ಯಾಣದೇವಿ ಮತ್ತು ಶಿವಲಿಂಗರಾಜರೆಂಬ ಶಿವಭಕ್ತರು ಅನೇಕ ವರ್ಷಗಳ ಕಾಲ ಸಂತಾನವಿಲ್ಲದೆ ಶಿವನನ್ನು ಕುರಿತು ತಪಸ್ಸು ಆಚರಿಸುತ್ತಾರೆ. ಶಿವನು ಪ್ರತ್ಯಕ್ಷವಾಗಿ ಅರವತ್ತು ಸಿಂಹಬಲದ ಬಲಿಷ್ಠ ಮಗುವಾಗಲಿ ಎಂಬ ವರವನ್ನು ನೀಡಿದನು. ಹೀಗೆ ಜನಿಸಿದ ಮಗು ನಿತ್ಯ ಮೇಕೆಗಳ ಜೊತೆಯಲ್ಲಿ ಆಟಪಾಠಗಳಾಡುತ್ತಿದ್ದ ಕಾರಣ, ಅವನಿಗೆ ಪೋತುರಾಜ ಎಂದು ಪ್ರೀತಿಯಿಂದ ನಾಮಕರಣ ಮಾಡಿದ್ದರು. ಇದರಿಂದ ಪೋತುರಾಜ ಶೈವಸಂಪ್ರದಾಯ ದವನೆಂದು ತಿಳಿದುಬರುತ್ತದೆ. ಪೋತುರಾಜನೆಂದರೆ ಗ್ರಾಮದೇವತೆಯ ಸೇವಕನೆಂದೂ, ಗಂಡನೆಂದೂ, ಸಹೋದರನೆಂದೂ, ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿ ಪರಿಭಾವಿಸಲಾಗುತ್ತದೆ.

ಹಡಗಲಿ ತಾಲೂಕು ಬನ್ನಿಕಲ್ಲು ಗ್ರಾಮದಲ್ಲಿ ಗಾವು ಜಿಗಿಯುವ ಆಚರಣೆ ಪ್ರಚಲಿತದಲ್ಲಿದೆ. ಇಲ್ಲಿ ಗಾವು ಜಿಗಿಯುವವರು ಕುರುಬ ಸಮುದಾಯದವರಾಗಿದ್ದಾರೆ. ಇವರು ಕುಂಕುಮ, ಭಂಡಾರ ಲೇಪಿಸಿಕೊಂಡು, ಅರೆಬೆತ್ತಲೆಯಾಗಿ ಆಚರಣೆಯಲ್ಲಿ ಭಾಗವಹಿಸುತ್ತಾರೆ. ಈ ರೀತಿಯ ವರ್ತನೆಗಳು ಆದಿಮಾನವನ ಮೂಲಸ್ಥಿತಿಯನ್ನು ಸೂಚಿಸುತ್ತವೆ. ಚಡಿಯಿಂದ ಹೊಡೆದುಕೊಳ್ಳುತ್ತಾ, ಆರ್ಭಟಿಸುತ್ತಾ, ಬಚ್ಚಿಟ್ಟ ಕುರಿಮರಿಯನ್ನು ಹುಡುಕಿ ತರುತ್ತಾರೆ. ಅದನ್ನು ಪ್ರಾಣ ಬಿಡುವವರೆಗೂ ಕುತ್ತಿಗೆಯ ಭಾಗದಿಂದ ಚರ್ಮ ಜಿಗಿಯಲು ಪ್ರಾರಂಭಿಸುತ್ತಾರೆ. ಕೂಡ್ಲಿಗಿ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಹೆಚ್ಚಾಗಿ ಗ್ರಾಮದೇವತೆಯ ಆಚರಣೆಗಳಲ್ಲಿ ಗಾವು ಜಿಗಿಯುವುದು ಕಡ್ಡಾಯವಾಗಿದೆ. ಇತ್ತೀಚೆಗೆ ಕೂಡ್ಲಿಗಿ ಪಟ್ಟಣದಲ್ಲಿ ಒಂಬತ್ತು ವರ್ಷದ ನಂತರ ನಡೆದ ಊರಮ್ಮನ ಜಾತ್ರೆಯಲ್ಲಿ ಗಾವು ಜಿಗಿಯುವ ಆಚರಣೆ ನೆರವೇರಿತು.

ಮರಿಯಮ್ಮನಹಳ್ಳಿ ಸಮೀಪದ ಮಗಿಮಾವಿನಹಳ್ಳಿ ಗ್ರಾಮದೈವ ಉಡಚಲಮ್ಮದೇವಿ. ಹನ್ನೊಂದು ವರ್ಷದ ನಂತರ ನಡೆದ ಇಲ್ಲಿಯ ಜಾತ್ರೆಯಲ್ಲಿ ಗಾವು ಜಿಗಿಯುವ ಆಚರಣೆ ನೆರವೇರಿತು. "ಪೋತುರಾಜನ ಕಣ್ಣು ಹೋತಿನ ಮ್ಯಾಲೆ" ಎಂಬ ಜನಪದ ಗಾದೆಯಂತೆ, ಇಲ್ಲಿ ಒಟ್ಟು ಇಪ್ಪತ್ತೊಂದು ಜನ ಪೋತುರಾಜರಿದ್ದು, ಇವರು ಅಗಸಿಗೆ ಹಾಕಿದ ಬೇಲಿಯನ್ನು ಜಿಗಿದು, ಊರೊಳಗೆ ಬಚ್ಚಿಟ್ಟ ಕುರಿಯನ್ನು ತಂದು, ದೇವಿಯ ಮುಂದೆ ಗಾವು ಜಿಗಿದಿರುವುದು ಕ್ಷೇತ್ರಕಾರ್ಯದ ಸಮಯದಲ್ಲಿ ಕಂಡುಬಂದಿದೆ. ಕೂಡ್ಲಿಗಿ ಭಾಗದ ಜಾತ್ರೆಗಳಲ್ಲಿ ಗಾವು ಜಿಗಿಯುವವರು ಜಗಳೂರು ತಾಲೂಕು ಹಾಕನೂರು ಗ್ರಾಮದವರು. ಪೋತುರಾಜ ಮನೆತನದ ಹನುಮಂತಪ್ಪನವರ ಪ್ರಕಾರ "ಗಾವು ಜಿಗಿಯುವ ಸಂಪ್ರದಾಯ ನಮ್ಮ ಜನ್ಮಸಿದ್ಧ ಹಕ್ಕು. ಇದು ಪೂರ್ವಜರು ಮಾಡಿಕೊಂಡು ಬಂದ ಸಂಪ್ರದಾಯ, ನಾವು ಮುಂದುವರಿಸಿಕೊಂಡು ಬಂದಿದ್ದೇವೆ". ಗಾವು ಜಿಗಿಯುವುದು ಬರೀ

ಸಂಪ್ರದಾಯವಾಗಿರದೆ ಪ್ರತಿಷ್ಠೆಯ ಸಂಕೇತವು ಹೌದು. ಗಾವು ಜಿಗಿಯುವಾಗ ಮೇಕೆ ಮ್ಯಾವ್ ಎಂದು ಕಿರುಚಿದರೆ, ಆ ಗ್ರಾಮಕ್ಕೆ ಮುಂದೆ ಕೆಟ್ಟದ್ದಾಗುತ್ತದೆಂಬ ನಂಬಿಕೆಯಿದೆ. ಈ ಹಿನ್ನೆಲೆಯಿಂದ ಪೋತುರಾಜ ಮೊದಲು ಮೇಕೆಮರಿಯ ಬಾಯಿಗೆ ಬಾಯಿ ಹಾಕಿ ನಾಲಿಗೆಯನ್ನು ಹಲ್ಲಿನಿಂದ ಕಚ್ಚಿ ಕೀಳುತ್ತಾನೆ.

ಮತ್ತೊಂದು ಐತಿಹ್ಯದ ಪ್ರಕಾರ "ಪೋತುರಾಜನು ಶಿವಲಿಂಗ ಪಟ್ಟಣದ ಶಿವಲಿಂಗ ಮಹಾರಾಜನ ಮಗ. ಪಾಂಡವರು ವನವಾಸ ಮಾಡುವಾಗ, ಕೃಷ್ಣನ ಸಹಾಯದಿಂದ ಭೀಮನನ್ನು ಸೋಲಿಸುತ್ತಾನೆ. ಹನ್ನೆರಡು ಸಿಂಹಗಳ ಬಲವುಳ್ಳ ಈತನಿಗೆ ತಾಳೆಮರದ ಮೇಲಿರುವ ಮೇಕೆಯನ್ನು, ಬೆಟ್ಟದ ಮೇಲಿರುವ ಅನ್ನವನ್ನು ನೀಡುತ್ತೇನೆಂದು ಕೃಷ್ಣ ಹೇಳುತ್ತಾನೆ".[೨೦] ಈ ಕಾರಣದಿಂದ ಇಂದಿಗೂ ಅದನ್ನು ಪ್ರತಿನಿಧಿಸುವಂತೆ ಒಬ್ಬನನ್ನು ಪೋತುರಾಜನನ್ನಾಗಿಸಿ, ಅವನಿಗೆ ಕಪ್ಪು ಬಣ್ಣದ ಮೇಕೆಯನ್ನು ನೀಡಲಾಗುತ್ತದೆ.

೪.೨.೧೦.೪. ಹುಲುಸು (ರಕ್ತ ಚರಗ) ಚೆಲ್ಲುವುದು

ಊರಮ್ಮನ ಜಾತ್ರೆಗಳಲ್ಲಿ ಅತ್ಯಂತ ಮಹತ್ವದ ಮತ್ತು ಅಂತಿಮ ವಿಧಿಕ್ರಿಯೆ ಚರಗ ಚೆಲ್ಲುವುದು. ಹೊಲೆಯ (ಹರಿಜನ, ಮಾದಿಗ) ಎಂದು ಕರೆಯಲ್ಪಡುವ ವ್ಯಕ್ತಿ, ಆಚರಣೆಯಲ್ಲಿ ಉನ್ನತ ಸ್ಥಾನದಲ್ಲಿರುತ್ತಾನೆ. ಈತನು ಕೋಣದ ರಕ್ತದ ಜೊತೆ ಬೆರೆತ ಅನ್ನವನ್ನು ಬೆತ್ತಲೆಯಾಗಿ ಗ್ರಾಮದ ಗಡಿಯ ಸುತ್ತ ಹೊಲಗದ್ದೆಗಳಿಗೆ ಹುಲುಸುಚೆಲ್ಲುತ್ತಾ ಸಾಗುತ್ತಾನೆ. ಬೆತ್ತಲೆಯಾಗುವುದು ಹಾಗೂ ರಕ್ತಮಿಶ್ರಿತ ಆಹಾರ ಚೆಲ್ಲುವಿಕೆ ಬಲಿಯ ಸಂಕೇತವಾಗಿದೆ. ಇಲ್ಲಿಯೂ ಸಹ ಪುರುಷನ ಬಲಿಯಾಗುವಿಕೆಯಿದೆ. ಈತನ ಪತ್ನಿ ಬಿಳಿ ಸೀರೆಯುಟ್ಟು, ಆಚರಣೆ ಮುಗಿಯುವವರೆಗೂ ಮೂಗುತಿ ತಿರುಗಿಸುತ್ತಾ ಇರಬೇಕು. ಈ ವರ್ತನೆಗಳು ಹಿಂದೆ ನರಬಲಿ ಇತ್ತೆಂದು, ಬಲಿಯಾದವನ ಪತ್ನಿ ವಿಧವೆಯಾಗುತ್ತಿದ್ದಳೆಂಬುದನ್ನು ಸಾಬೀತುಪಡಿಸುತ್ತದೆ. ಚರಗ ಚೆಲ್ಲುವಾಗ ಭೂತಗಳ ಕಾಟದಿಂದ ತೊಂದರೆಯಾಗಬಾರದೆಂದು ಮೇಕೆಮರಿಯನ್ನು ಬಲಿ ಕೊಡಲಾಗುತ್ತದೆ. ಈ ವ್ಯಕ್ತಿಗಳಿಗೆ ಕಟ್ಟುನಿಟ್ಟಿನ ಉಪವಾಸ ಕ್ರಮವಿರುತ್ತದೆ. ತನ್ನ ಗಂಡನಿಗೆ ತೊಂದರೆಯಾದರೆ ತಿರುಗಿಸುವ ಮೂಗುತಿ ನಿಂತುಬಿಡುತ್ತದೆಂಬ ನಂಬಿಕೆಯಿದೆ. ಈ ರೀತಿ ಹುಲುಸು ಚೆಲ್ಲುವ ಸಮಯದಲ್ಲಿ ಹಗರಿಬೊಮ್ಮನಹಳ್ಳಿ ತಾಲೂಕಿನ ತಂಬ್ರಹಳ್ಳಿಯಲ್ಲಿ ಹರಿಜನ ವ್ಯಕ್ತಿಯೊಬ್ಬ ಸತ್ತಿದ್ದಕ್ಕೆ, ಅಂದಿನಿಂದ ಹುಲುಸು ಚೆಲ್ಲುವುದನ್ನು ನಿಲ್ಲಿಸಿದ್ದಾರೆ. ಅತಿಯಾದ ಉಪವಾಸ ಕ್ರಮ ಹಾಗೂ ಆಚರಣೆಯ ಬಗೆಗೆ ಹೊಂದಿದ ಭಯವೇ ವ್ಯಕ್ತಿಯ ಸಾವಿಗೆ ಕಾರಣವಾಗಲು ಸಾಧ್ಯವಿದೆ.

ಮಾತೃದೇವತೆಗಳಲ್ಲಿ ಶಿಕ್ಷಕ, ರಕ್ಷಕ ಗುಣಗಳೆರಡೂ ಕಂಡುಬರುತ್ತವೆ. ಇಂಥ ಪರಸ್ಪರ ವಿರೋಧಿ ಗುಣ ಹೊಂದಿರುವ ಶಕ್ತಿಯನ್ನು ಜನಪದರು ಒಪ್ಪಿಕೊಂಡಿದ್ದಾರೆ. ಅಲ್ಲದೆ ಆಕೆಗೆ ಮಾತೃಸ್ಥಾನ ಕಲ್ಪಿಸಿದ್ದಾರೆ. "ಸಾತ್ವಿಕ ತಾಮಸಗಳ ಸಂಯೋಜನೆಯಿಂದಲೇ ಬದುಕು ಗಟ್ಟಿಗೊಳ್ಳುವುದನ್ನು ಸಂಕೇತಿಸಲಿಕ್ಕಾಗಿ ಈ ಬಗೆಯ ಬಲಿ ಆಚರಣೆ ಬಂದಿರಬೇಕು"[೨೧] ಹುಲುಸು ಚೆಲ್ಲುವುದರಿಂದ ಉತ್ತಮ ಮಳೆ-ಬೆಳೆ ಸಮೃದ್ಧಿಯಾಗುವುದೆಂಬ ನಂಬಿಕೆಯೇ ಈ ಆಚರಣೆಯ ಮುಂದುವರಿಕೆಗೆ ಕಾರಣವಾಗಿದೆ. ಹುಲುಸಿನೊಂದಿಗೆ ಗ್ರಾಮದೇವತೆಯ ಸಂಚಾರವಾಗುತ್ತದೆ. ಆಗ ದೈವದ ಪಾದಸ್ಪರ್ಶದಿಂದ ಭೂಮಿಗಟ್ಟಿಗೊಂಡು ಫಲಸಮೃದ್ಧಿಯಾಗುವುದೆಂಬ ಆಶಯ ಜನಪದರದ್ದಾಗಿದೆ. ಗ್ರಾಮದ ಸುತ್ತ ಹುಲುಸಿನ ರೂಪದಲ್ಲಿ ದೈವಶಕ್ತಿ ಇದೆ ಎಂದು ಪರಿಭಾವಿಸುತ್ತಾರೆ. ಭಯಮುಕ್ತವಾದ

ಕ್ಷೇಮವಲಯದಲ್ಲಿ ಇದ್ದೇವೆಂಬುದು ಅವರ ನಂಬಿಕೆ. ಸುಪ್ತ ಮನಸ್ಸಿನಲ್ಲಿರುವ ಮಗುತನವು ಅಮ್ಮನನ್ನು ಆಶ್ರಯಿಸುವುದರ ಮೂಲಕ ತೃಪ್ತವಾಗಿ ಭಯನೀಗಿಸಿಕೊಳ್ಳುತ್ತದೆ. ಒಂದು ಗ್ರಾಮದವರೆಲ್ಲಾ ಇಂಥ ಬಿಡುಗಡೆಯ ಭಾಗ್ಯವನ್ನು ಅಮ್ಮನನ್ನು ಆಶ್ರಯಿಸುವುದರ ಮೂಲಕ ಪಡೆಯುತ್ತಾರೆ.

ಕೂಡ್ಲಿಗಿ ಗ್ರಾಮದ ಊರಮ್ಮನ ಜಾತ್ರೆಯಲ್ಲಿ, ದೊಡ್ಡ ಹಿಟ್ಟಿನ ಬುಟ್ಟಿಯಲ್ಲಿ, ಕಡಿದ ಕುರಿತಲೆಯನ್ನಿಟ್ಟು, ಕೆಳಸಮುದಾಯದ ವ್ಯಕ್ತಿಯ ತಲೆಯ ಮೇಲೆ ಆ ಪುಟ್ಟಿಯನ್ನಿಟ್ಟುಕೊಂಡು ತರುತ್ತಾರೆ. ದೇವಿಯ ಮುಂಭಾಗದ ತಗ್ಗಿನಲ್ಲಿ ಹುಗಿದು, ಜೋಳದ ಅನ್ನದ ಹುಲುಸನ್ನು ಚೆಲ್ಲುತ್ತಾರೆ. ಬಂಡ್ರಿ ಉಡಿಸಲಮ್ಮನ ಜಾತ್ರೆಯಲ್ಲಿ ಚರಗ ಚೆಲ್ಲುವವರು, ರಕ್ತವರ್ಣದ ಬಟ್ಟೆ ಕಟ್ಟಿಕೊಂಡಿರುತ್ತಾರೆ. ಕೆಂಪುವರ್ಣ ಬಲಿಯನ್ನು ಸಂಕೇತಿಸುತ್ತದೆ. ಸಂಡೂರು ತಾಲೂಕಿನ ಗ್ರಾಮಗಳಲ್ಲಿ ಅಮ್ಮನ ಜಾತ್ರೆಗಳಲ್ಲಿ ಊರ ಗಡಿಗೆ ಚರಗ ಚೆಲ್ಲುವ ವ್ಯಕ್ತಿ ಬೆತ್ತಲೆಯಾಗಿರುತ್ತಾನೆ. ಆತನನ್ನು 'ಭೂತಪಲ್ಲಿ' ಎಂದು ಕರೆಯಲಾಗುತ್ತದೆ.

೪.೨.೧೦.೫. ದೂಳುಗಾಯಿ ಹೊಡೆಯುವುದು (ಸಿಡಿಗಾಯಿ ಹೊಡೆಯುವುದು)

ಸಿಡಿತಲೆ ಸಲ್ಲಿಸಲು ಸಾಧ್ಯವಿರದಿದ್ದಾಗ ಸಿಡಿಗಾಯಿ ಹೊಡೆಯುವ ಪದ್ಧತಿ ರೂಢಿಗೆ ಬಂದಿರಬೇಕು. ದೂರದಿಂದ ತೆಂಗಿನಕಾಯಿ ಹೊಡೆಯುವುದನ್ನು ಸಿಡಿಗಾಯಿ ಹೊಡೆಯುವುದೆಂದು ಕರೆಯುತ್ತಾರೆ. ಬಲಿ ಪದ್ಧತಿಯನ್ನು ಹೋಲುವ ಈ ಆಚರಣೆ ಕುರುಗೋಡು ಗ್ರಾಮದಲ್ಲಿ ಪ್ರಚಲಿತದಲ್ಲಿದೆ. ದೊಡ್ಡಬಸವೇಶ್ವರ ಇಲ್ಲಿಯ ಗ್ರಾಮದೈವ. ಹೋಳಿಹುಣ್ಣಿಮೆಯಂದು ಈ ದೇವರ ಜಾತ್ರೆ ನೆರವೇರುತ್ತದೆ. ಪಕ್ಕದ ಊರುಗಳಾದ ಮುಷ್ಟಕಟ್ಟೆ, ಸೋಮಲಾಪುರ ಗ್ರಾಮದ ಜನರು ಕುಂಭಹೊತ್ತು ಜಾತ್ರೆಗೆ ಆಗಮಿಸುತ್ತಾರೆ. ಮಧ್ಯಾಹ್ನದ ಉರಿಬಿಸಿಲಿನ ಸಮಯದಲ್ಲಿ ಬಂದವರು ಕಾಲುತೊಳೆಯದೆ ಜೋರಾಗಿ ದೇವಸ್ಥಾನ ಪ್ರವೇಶ ಮಾಡುತ್ತಾರೆ. ದೈವವನ್ನು ಮೂರು ಸುತ್ತುಹಾಕಿ ದೈವದ ಎದುರಿನ ಕಟ್ಟೆಗೆ ದಪದಪನೆ ಕಾಯಿ ಹೊಡೆಯುತ್ತಾರೆ. ತೆಂಗು ನರಬಲಿಯನ್ನು ಸಂಕೇತಿಸುತ್ತದೆ. ವೈದಿಕ ಧರ್ಮದ ಹಿನ್ನೆಲೆಯಲ್ಲಿ ಪ್ರಾಣಬಲಿ ಹಿಂಸಾತ್ಮಕವಾದುದಾಗಿದೆ. ಈ ರೀತಿಯ ಕಾರಣಗಳಿಂದ ದೈವವನ್ನು ಸಂಪ್ರೀತಗೊಳಿಸಲು ಇತ್ತೀಚೆಗೆ ಸಸ್ಯವರ್ಗವನ್ನು ಅವಲಂಬಿಸಿರುವ ಸಾಧ್ಯತೆ ಇದೆ. ವಾಸ್ತವವಾಗಿ ತೆಂಗಿನಕಾಯಿ ಮನುಷ್ಯನ ರುಂಡವನ್ನು ಹೋಲುವುದೇ ಈ ಸಾದೃಶ್ಯ ಕಲ್ಪನೆಗಳಿಗೆ ಆಧಾರ. ತೆಂಗಿಗಿರುವ ಜುಟ್ಟು, ಮೂರು ಕಣ್ಣು, ಗಟ್ಟಿಯಾದ ಚಿಪ್ಪು, ಒಡೆದಾಗ ರಕ್ತಧಾರೆಯಂತೆ ಸೋರುವ ನೀರು ಹೀಗೆ ತೆಂಗು ನರಬಲಿಯ ಪ್ರತಿರೂಪವಾಗಿದೆ. ಶೈವಾರಾಧನೆಯ ಈ ಜಾತ್ರೆಯಲ್ಲಿ ಬಲಿಪದ್ಧತಿ ಇಲ್ಲವಾದರೂ, ಬೇರೆ ರೂಪದಲ್ಲಿ ಬಲಿ ಆಚರಣೆ ಸ್ಥಿತ್ಯಂತರವಾಗಿರುವುದು ಗಮನಾರ್ಹ ಅಂಶವಾಗಿದೆ. "ಹಂಪಿ ವಿರೂಪಾಕ್ಷನ ಜಾತ್ರೆಯಲ್ಲಿ ರಥಕ್ಕೆ ತಮ್ಮ ಮಕ್ಕಳನ್ನು ಎಸೆಯುವ ಪ್ರವೃತ್ತಿ ಇತ್ತೆಂದು ವಿದೇಶಿ ಪ್ರವಾಸಿಗರು ತಿಳಿಸಿದ್ದಾರೆ".[೨೨] ಇಂದು ಶಿಶುಬಲಿಯ ಪ್ರತೀಕವಾಗಿ ತೇರಿನ ಗಾಲಿಗೆ ತೆಂಗಿನಕಾಯಿ ಹೊಡೆಯುವ ಪದ್ಧತಿ ಇದೆ. ಬಳ್ಳಾರಿ ಜಿಲ್ಲೆಯ ಎಲ್ಲಾ ಭಾಗಗಳಲ್ಲೂ ತೇರಿಗೆ ತೆಂಗಿನಕಾಯಿ ಹೊಡೆಯುವ ಪದ್ಧತಿ ಕಂಡುಬರುತ್ತದೆ.

೪.೨.೧೦.೬. ಬಾಳೆದಿಂಡಿನ ಹರಕೆ

ಹೊಸಪೇಟೆ ತಾಲೂಕಿನ ಪಾಪಿನಾಯಕನಹಳ್ಳಿ ಗ್ರಾಮದೈವ ಅಂಕಾಲಮ್ಮ. ಫೆಬ್ರವರಿ ತಿಂಗಳಲ್ಲಿ ನಡೆಯುವ ಇಲ್ಲಿನ ಉತ್ಸವದಲ್ಲಿ ಬಾಳೆದಿಂಡಿನ ಪವಾಡದ ಆಚರಣೆ ಪ್ರಚಲಿತದಲ್ಲಿದೆ. ವಿಭೂತಿ, ಅರಿಶಿಣ, ಕುಂಕುಮ,

ಬೇವಿನಸೊಪ್ಪಿನಿಂದ ಅಲಂಕೃತಗೊಂಡ ಬಾಲಕನೇ ಆಚರಣೆಯಲ್ಲಿ ಪ್ರಮುಖ ವ್ಯಕ್ತಿ. ಇಲ್ಲಿ ಬಲಿಯ ಪ್ರತೀಕವಾಗಿ ಬೇವು ಬಳಸಲ್ಪಡುತ್ತದೆ. ಬಾಳೆದಿಂಡಿನೊಂದಿಗೆ ಬಾಲಕನನ್ನು ಹೊತ್ತವರು ಗುಡಿಯನ್ನು ಐದು ಸುತ್ತು ಸುತ್ತುತ್ತಾರೆ. ಆ ಸಮಯದಲ್ಲಿ ಬಾಲಕ ನಿರ್ಜೀವವಾಗುತ್ತಾನೆಂಬ ಪ್ರತೀತಿ ಇದೆ. ಜೋಗತಿಯರು ದೇವಿಯ ಎದುರು ಬಾಲಕನನ್ನು ಮಲಗಿಸಿ ಬಯ್ಯಲು ಪ್ರಾರಂಭಿಸುತ್ತಾರೆ. ಹರಕೆಯಲ್ಲಿ ಆಗುವ ಲೋಪದೋಷಗಳನ್ನು ತಿದ್ದಿಕೊಳ್ಳುತ್ತೇವೆಂದು, ನಾನಾ ರೀತಿಯ ಹರಕೆ ತೀರಿಸುತ್ತೇವೆಂದು, ಉತ್ಸವ ಆಚರಿಸುವುದಿಲ್ಲವೆಂದು ಹೀಗೆ ದೇವರನ್ನು ಹೆದರಿಸುವ ರೀತಿಯಲ್ಲಿ ಬಯ್ಯುತ್ತಾರೆ. ಪೂಜೆಯಲ್ಲಿ ಬಳಕೆಯಾಗುವ ತೀರ್ಥ ಜನಪದರಿಗೆ ಪವಿತ್ರವಾದುದು. ಇಂಥ ದೈವೀಶಕ್ತಿಯನ್ನು ಪಡೆದ ತೀರ್ಥ ಸಿಂಪಡಿಸಿದಾಗ ಮಾತ್ರ ಬಾಲಕನಿಗೆ ಪ್ರಜ್ಞೆ ಮರಳುತ್ತದೆಂಬ ನಂಬಿಕೆಯಿದೆ. ಇದು ಮೂಲದಲ್ಲಿ ನರಬಲಿ ಆಚರಣೆಯಾಗಿರಬೇಕು. ಇಂದು ಬಾಳೆದಿಂಡಿನ ಪವಾಡವಾಗಿ ಸ್ಥಿತ್ಯಂತರವಾಗಿರಲು ಸಾಧ್ಯವಿದೆ.

ಇಲ್ಲಿ ನರಬಲಿಗೆ ಬದಲಾಗಿ ಬಾಳೆ ಬಳಕೆಯಾಗುತ್ತಿದೆ. ಬಾಳೆ ಒಂದೇ ಫಲದೊಂದಿಗೆ ಅಂತ್ಯ ಕಾಣುವ ಸಸ್ಯ. 'ಗೊಗ್ಗರ ಹಲ್ಲಿನ ಮಗು ಹುಟ್ಟಿ ತಾಯಿಗೆ ಮರಣ' ಎನ್ನುವ ಜನಪದ ಗಾದೆಯಂತೆ, ಕಾಯಿ ಬಲಿಯುತ್ತಾ ಬಂದಂತೆ, ಬಾಳೆ ಕೃಶವಾಗುತ್ತಾ ಅಂತ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಬಾಳೆಯನ್ನು ಅನಿಷ್ಟದ ಜನನವೆಂದು ಹಲವೊಮ್ಮೆ ಜನಪದರು ಆಚರಣೆಗಳಲ್ಲಿ ಪರಿಭಾವಿಸಿರುವುದುಂಟು. ಇಲ್ಲಿ ಉಗ್ರನಾಟಕೀಯತೆಯ ಮೂಲಕ ಬಲಿ ನೀಡಿಕೆಯಾಗುತ್ತದೆ. ಆಧುನಿಕತೆ, ಶಿಷ್ಟ ಸಂಸ್ಕೃತಿಗಳ ಪ್ರಭಾವದ ನಡುವೆಯು ಪುರುಷರ ಬಲಿಯಾಗುವಿಕೆ ಮುಂದುವರಿದಿರುವುದು ಗಮನಾರ್ಹ. ಸ್ತ್ರೀದೈವಗಳ ಆಚರಣೆಗಳಲ್ಲಿ ಸಾಧ್ಯವಿದ್ದಷ್ಟು ಸ್ತ್ರೀಶಕ್ತಿ ತಮ್ಮ ಯಜಮಾನಿಕೆ ಪಟ್ಟವನ್ನು ಸಡಿಲಿಸದಿರುವುದು ಕಂಡುಬರುತ್ತದೆ. ಜನಪದ ಆಚರಣೆಗಳು ಮಾತೃ ಮೂಲದಿಂದ ಪ್ರೇರಿತವಾದವುಗಳು. ಹುಲಿಗಿಯ ಜಾತ್ರೆಯಲ್ಲಿಯು ಬಾಳೆದಿಂಡಿನ ಪವಾಡದ ಆಚರಣೆ ನೆರವೇರುತ್ತದೆ. ಹೊಸಪೇಟೆ ಪರಿಸರದಲ್ಲಿ ಬಾಳೆ ಬೆಳೆ ಹೆಚ್ಚಾಗಿರುವ ಕಾರಣ, ಅದು ಆಚರಣೆಗಳಲ್ಲಿ ಬಳಸಲ್ಪಡುತ್ತಿರುವ ಸಾಧ್ಯತೆ ಇದೆ.

೪.೨.೧೦.೭. ಹಾರುಗೋಳಿ ರಥೋತ್ಸವ

ಕಾಲದೊಂದಿಗೆ ಆಚರಣೆಗಳು ಸ್ಥಿತ್ಯಂತರಗೊಳ್ಳುವುದು ಸಾಮಾನ್ಯ. ಈ ಹಿನ್ನೆಲೆಯಲ್ಲಿ ವೈವಿಧ್ಯಮಯವಾಗಿ ಕೊಟ್ಟೂರಿನ ಬಿಕ್ಕಿಮರಡಿಯ ದುರುಗಮ್ಮ ದೇವಿಯ ರಥೋತ್ಸವ ನೆರವೇರುತ್ತದೆ. ಬಲಿ ರೂಪದ ಹಿಂಸಾತ್ಮಕ ಆಚರಣೆಯ ಬದಲಾಗಿ ವಂಶವೃದ್ಧಿ ಪೋಷಣೆಯ ಪ್ರತೀಕವಾಗಿ ಆಚರಿಸಲ್ಪಡುತ್ತದೆ. ಅಗಿ ಹುಣ್ಣಿಮೆಯಲ್ಲಿ ನಡೆಯುವ ರಥೋತ್ಸವದಲ್ಲಿ ಕೋಳಿಗಳನ್ನು ತೇರಿಗೆ ಹಾರಿಸುತ್ತಾರೆ. ರಥೋತ್ಸವದ ದಿನ ಹಾರಿಸಿದ ಕೋಳಿಗಳನ್ನು ಹಿಡಿದು ಭಕ್ತರು ತಿನ್ನದೇ ದೇವಿಯ ಕೃಪೆಯೆಂದು ಪರಿಭಾವಿಸಿ, ಜೋಪಾನ ಮಾಡಲಾಗುತ್ತದೆ. ಅವುಗಳ ವಂಶವೃದ್ಧಿಯಿಂದ ಬಂದ ಮರಿಗಳನ್ನು ಮುಂದಿನ ರಥೋತ್ಸವದಲ್ಲಿ ಹಾರಿಸಿ ಹರಕೆ ತೀರಿಸುತ್ತಾರೆ. ದೇವಿಯ ಜಾತ್ರೆಯಾದರೂ ಪ್ರಾಣಿಬಲಿ ನಿಷಿದ್ಧ. ಸತ್ತ ಕೋಳಿಗಳ ಶವಸಂಸ್ಕಾರ ಮಾಡುವ ಸಂಪ್ರದಾಯವಿದೆ. ಸಸ್ಯಮೂಲದಿಂದ ತಯಾರಾದ ಅಡುಗೆ ಮಾತ್ರ ದೇವಿಗೆ ನೈವೇದ್ಯ. ಹಿಂದೂ, ಮುಸ್ಲಿಮ್, ಕ್ರೈಸ್ತ ಮತ್ತು ಜೈನರು ಸೇರಿದಂತೆ ಅನ್ಯಧರ್ಮೀಯರ ಪಾಲ್ಗೊಳ್ಳುವಿಕೆಯಿದೆ. ಊರಹೊರವಲಯದ ಕೆರೆ ಅಂಗಳದಲ್ಲಿ ಕೆಲವೇ

ತಾಸುಗಳಲ್ಲಿ ಮುಕ್ತಾಯಗೊಳ್ಳುವ ಆಚರಣೆ ಇದು. ಫಲವಂತಿಕೆಯ ಪ್ರತೀಕವಾದ ದೈವವಾಗಿರುವುದರಿಂದ, ದೇವಿಯ ದರ್ಶನ ಪಡೆದರೆ ಮಕ್ಕಳಾಗುತ್ತವೆಂಬ ನಂಬಿಕೆಯಿದೆ. ಇದೇ ಆಶಯದಿಂದ ನವದಂಪತಿಗಳು ಹೆಚ್ಚಾಗಿ ಜಾತ್ರೆಗೆ ಆಗಮಿಸುತ್ತಾರೆ.

ಕೊಟ್ಟೂರಿನ ಹತ್ತಿರವಿರುವ ಉಜ್ಜಯಿನಿ ಗ್ರಾಮದಲ್ಲಿ ಪಂಚಪೀಠಗಳಲ್ಲಿ ಒಂದಾದ ಉಜ್ಜಯಿನಿ ಜಗದ್ಗುರು ಮರುಳಸಿದ್ಧೇಶ್ವರರ ಮಠವಿದೆ. ಹಿಂದೆ ಜರ್ಮಲಿ ಪಾಳೇಗಾರರು ಮಠದ ಭಕ್ತರಾಗಿದ್ದರು. ದುರುಗಮ್ಮ ದೇವತೆ ಉಜ್ಜಯಿನಿಯ ಜಗದ್ಗುರುಗಳ ಸಹೋದರಿ ಹಾಗೂ ಜರ್ಮಲಿ ಪಾಳೇಗಾರರ ಶಕ್ತಿದೇವತೆ ಆಗಿರುವಳೆಂಬ ಪ್ರತೀತಿ ಇದೆ. ಇದರಿಂದ ದೇವಿಗೆ ಲಿಂಗದೀಕ್ಷೆಯಾಗಿದೆ ಎಂಬುದು ಸ್ಥಳೀಯ ವಕ್ತೃಗಳ ಹೇಳಿಕೆಯಾಗಿದೆ. ಈ ಕಾರಣ ದೇವಿಗೆ ಪ್ರಾಣಿಬಲಿ ನೀಡದೆ, ಪಶುಪಕ್ಷಿಗಳ ಸಂತತಿ ಹೆಚ್ಚಾಗಲೆಂಬ ಆಶಯದಿಂದ ಕೋಳಿತೂರುವ ಸಂಪ್ರದಾಯ ಬೆಳೆದುಬಂದಿರಬೇಕು.

ಆಚರಣೆಗಳಲ್ಲಿ ಆಗುವ ಬದಲಾವಣೆಗಳು ಸಮಾಜದ ಬದಲಾವಣೆಯನ್ನು ಅವಲಂಬಿಸಿವೆ. ಕೆಳವರ್ಗದವರ ಆಚರಣೆಗಳು ತಮಗಿಂತ ಮೇಲಿನವರ ಪ್ರಭಾವಕ್ಕೆ ಒಳಗಾಗುತ್ತಿವೆ. ಕೆಲವೊಮ್ಮೆ ಮೂಲ ಆಚರಣೆಗಳು ಸ್ಥಿತ್ಯಂತರಗೊಳ್ಳುತ್ತವೆ. ತಮಗೆ ತಿಳಿದೋ, ತಿಳಿಯದೆಯೋ, ಧಾರ್ಮಿಕ ವಿಧಿ-ವಿಧಾನದಲ್ಲೂ, ದೈವದ ವಿಚಾರದಲ್ಲೂ ಬದಲಾವಣೆಗಳು ಆಗುತ್ತವೆ. ಬಲಿ ಪಡೆಯುತ್ತಿದ್ದ, ಮಾಂಸಹಾರಿಗಳಾಗಿದ್ದ ದೈವಗಳು ಸಸ್ಯಾಹಾರಿ ಗಳಾಗಿರುವುದು ಮೇಲಿನ ಆಶಯದಿಂದಾಗಿ ಮತ್ತು ಭಕ್ತ ಸಮೂಹದಲ್ಲಿ ಉಂಟಾಗುವ ಬದಲಾವಣೆಯೇ ಇದಕ್ಕೆ ಕಾರಣವಿರಲು ಸಾಧ್ಯವಿದೆ. ಪ್ರಾಣಿಕೇಂದ್ರಿತ ಉಗ್ರ ಆಚರಣೆ ಇಂದು ದೈವದ ಹೆಸರಲ್ಲಿ ಅಹಿಂಸಾ ರೂಪ ಪಡೆದಿದೆ. ಈ ಆಚರಣೆ ಮಾನವರ ಮಧ್ಯದ ಜಾತಿಭೇದ ನಿವಾರಿಸುವ ಆಶಯ ಹೊಂದಿದೆ.

೪.೨.೧೦.೯. ಕಂಪ್ಲಿ ಕಾಳೆಮ್ಮನ ಹರಕೆ

ಕಾಳೆಮ್ಮ ಕಂಪ್ಲಿ ಮೀನುಗಾರರ ದೈವ. ಏಪ್ರಿಲ್, ಮೇ ತಿಂಗಳಲ್ಲಿ ಇಲ್ಲಿ ಹರಕೆ ತೀರಿಸುವ ಆಚರಣೆ ನೆರವೇರುತ್ತದೆ. ಸಾಹಸ ಪ್ರದರ್ಶನದ ಮೂಲಕ ದೇಹವನ್ನು ನಾನಾ ವಿಧವಾಗಿ ದಂಡಿಸಿಕೊಳ್ಳುವ ಹರಕೆ ಇಲ್ಲಿ ಕಂಡುಬರುತ್ತದೆ. ಭಕ್ತರು ಕಬ್ಬಿಣದ ಕೊಕ್ಕೆ ಬೆನ್ನಿಗೆ ಹಾಕಿಕೊಂಡು, ನೈಲಾನು ಹಗ್ಗವನ್ನು ಮಾರುತಿ ಕಾರಿಗೆ, ಆಟೋಕ್ಕೆ ಕಟ್ಟಿ, ಸುಮಾರು ಎರಡು ತಾಸುಗಳ ಕಾಲ, ಒಂದೂವರೆ ಕಿಲೋಮೀಟರ್‌ನಷ್ಟು ದೂರ ಎಳೆದು ಹರಕೆ ತೀರಿಸುತ್ತಾರೆ. ಕೆನ್ನೆಗೆ ಮಾರುದ್ದದ ಶಸ್ತ್ರ ಹಾಕಿಸಿಕೊಂಡು ಕಬ್ಬಿಣದ ಗುಂಡು ಹಾಗೂ ದೇವಿಯ ತೇರನ್ನು ಎಳೆಯುತ್ತಾರೆ. ಪ್ರತಿವರ್ಷ ಮೀನುಗಾರ ಯುವಕರು ಈ ರೀತಿಯ ಹರಕೆ ತೀರಿಸುವುದು ಇಲ್ಲಿಯ ಸಂಪ್ರದಾಯ. ತನ್ನ ತಪ್ಪುಗಳಿಗೆ ಪ್ರಾಯಶ್ಚಿತ ಮಾಡಿಕೊಳ್ಳುವುದಕ್ಕಾಗಿ ಹರಕೆಯ ರೂಪದಲ್ಲಿ ದೇಹ ದಂಡಿಸಲಾಗುತ್ತದೆಂಬುದು ಭಕ್ತರ ಹೇಳಿಕೆಯಾಗಿದೆ. ಈ ರೀತಿಯಾಗಿ ದೇವರು ಮೈದುಂಬಿದ್ದನ್ನು ಪ್ರಸ್ತುತಪಡಿಸುವುದು, ಪೂಜಾಕ್ರಮದಲ್ಲಿ ತನ್ಮಯರಾಗುವುದು, ಭಕ್ತಿಯ ಪರಾಕಾಷ್ಠೆಯನ್ನು ಹರಕೆಯ ಮೂಲಕ ವಿಶದಪಡಿಸುವುದು ಜನಪದ ಆಚರಣೆಗಳಲ್ಲಿ ಸಾಮಾನ್ಯ. ಮಹಿಳೆಯರು ಕಳಸ, ಕನ್ನಡಿ ಹಿಡಿದು, ಕೆನ್ನೆಗೆ ಶಸ್ತ್ರ ಹಾಕಿಸಿಕೊಳ್ಳುವುದರ ಮೂಲಕ ಹರಕೆ ತೀರಿಸುತ್ತಾರೆ. ಇಲ್ಲಿ ಸಾಹಸ ಪ್ರದರ್ಶನದ ಹರಕೆಗಳು ಪುರುಷರಿಗೆ ಮಾತ್ರ. ಮಾತೃಪ್ರಧಾನ ಮೂಲದ ದೈವವಾದ್ದರಿಂದ ಇಲ್ಲಿಯೂ ಬಲಿಯಾಗುವುದು ಪುರುಷರು. ಈ ಹಿನ್ನೆಲೆಯಲ್ಲಿ ಹರಕೆ ತೀರಿಸುವ ಮುನ್ನ ಯುವಕರು ಹನ್ನೊಂದು ದಿನಗಳ ಪರ್ಯಂತ ಧಾರ್ಮಿಕ ವಿಧಿ, ವಿಧಾನಗಳನ್ನು ಅನುಸರಿಸುತ್ತಾರೆ. ಇವು

ಬಲಿಯಾಗುವ ಜೀವಿಯನ್ನು ನಿತ್ರಾಣಗೊಳಿಸಲು, ಹರಕೆ ತೀರಿಸುವಾಗ ಏಕಾಗ್ರತೆ ಉಂಟುಮಾಡಲು, ಭಕ್ತಿಯ ಪರಾಕಾಷ್ಠೆಯನ್ನು ಪ್ರದರ್ಶಿಸಲು, ಜೀವಿಗಳಲ್ಲಿ ಅಗಾಧವಾದ ಶಕ್ತಿ ಅಡಗಿದೆಯೆಂಬ ದೈವೀಭಾವ ಮೂಡಿಸಲು, ಮಾನಸಿಕ ಸದೃಢತೆ ಉಂಟುಮಾಡಲು ನಡೆಸುವ ಪೂರ್ವಭಾವೀ ತಯಾರಿಗಳಾಗಿವೆ. ಸಿಡಿ ರೂಪದ ಆಚರಣೆಗಳು ಆಧುನಿಕತೆಗೆ ತಕ್ಕಂತೆ ಈ ರೀತಿಯಾಗಿ ಬದಲಾವಣೆಗೊಂಡಿರಲು ಸಾಧ್ಯ. ಏಕೆಂದರೆ ಕಬ್ಬಿಣದ ಕೊಕ್ಕೆಯನ್ನು ಬೆನ್ನಿಗೆ, ಬಾಯಿಗೆ ಸಿಕ್ಕಿಸಿಕೊಂಡು ವಸ್ತುಗಳನ್ನು ಎಳೆಯುವುದರಿಂದ, ಇವು ಬೆನ್ನುಸಿಡಿ, ಬಾಯಿಸಿಡಿ ಪ್ರಕಾರದ ಆಚರಣೆಯನ್ನು ಹೋಲುವಂತಿದೆ. ಇತ್ತೀಚೆಗೆ ಸಿಡಿ ರೂಪದ ಆಚರಣೆಗಳು ಸ್ವರೂಪಗಳಲ್ಲಿ ಸ್ಥಿತ್ಯಂತರಗೊಂಡರೂ, ಆಚರಣೆಯ ಆಶಯಗಳನ್ನು ಶಾಶ್ವತವಾಗಿ ಮುಂದುವರಿಸಿಕೊಂಡು ಬರುತ್ತಿವೆ.

೪.೨.೧೦.೯. ಮಹಾಸತಿ ವೀರನಾಗಮ್ಮ

ಪತಿಯು ಮರಣ ಹೊಂದಿದಾಗ ಪತ್ನಿ ವಿಧವೆಯಾಗುವುದು ಸಾಮಾನ್ಯ. ಆದರೆ ಆಕೆ ಧಾರ್ಮಿಕ ನಿಯಮಗಳಿಗೆ ಅನುಗುಣವಾಗಿ ಉರಿಯುವ ಚಿತೆ ಏರಿ ಸಾವಿನಲ್ಲಿ ಜೀವನದ ಅಂತ್ಯ ಕಾಣುವುದು ಹಿಂಸಾಮೂಲವಾದದ್ದು. ಈ ರೀತಿಯ ಆಚರಣೆಗಳು ಹತ್ತೊಂಬತ್ತನೆಯ ಶತಮಾನದ ಆದಿ ಭಾಗದವರೆಗೂ ದಟ್ಟವಾಗಿದ್ದವು ಎಂಬುದನ್ನು ಇತಿಹಾಸ ತಿಳಿಸುತ್ತದೆ. ದೇಕಬ್ಬೆಯ ಶಾಸನ ಮೊಟ್ಟಮೊದಲ ಸತಿಸಹಗಮನ ಪದ್ಧತಿ ತಿಳಿಸುವ ಶಾಸನ. ಪತಿಯ ಮರಣದ ನಂತರ ಅಗ್ನಿಗೆ ಆಹುತಿಯಾದ ಪ್ರಸಂಗವಿರುವ ಶಾಸನ ಇದು. ಹಿಂದಿನ ಸಾಮಾಜಿಕ ಸಂಸ್ಕೃತಿಯು ಒಪ್ಪಿಗೆ ಮತ್ತು ನಂಬಿಕೆಗಳ ಮೂಲಕ ಆತ್ಮಬಲಿಯನ್ನು ಪ್ರಧಾನ ಆಚರಣೆಯನ್ನಾಗಿಸಿತ್ತು. ಇವು ಸಾಮಾಜಿಕ ಮೂಢನಂಬಿಕೆಗಳಿಂದ ಪ್ರೇರಣೆ ಪಡೆದವುಗಳಾಗಿದ್ದವು.

ಬಳ್ಳಾರಿ ತಾಲೂಕು ಮೋಕ ಗ್ರಾಮದ ಅಕ್ಕಪಕ್ಕದಲ್ಲಿರುವ ಎರಡು ಸ್ಮಾರಕಗಳಿಗೆ ಲಿಖಿತ ದಾಖಲೆಗಳಿಲ್ಲ. ಇಲ್ಲಿ ದೈವವಾಗಿ ಆಚರಿಸಲ್ಪಡುವವಳು ವೀರನಾಗಮ್ಮ. ವಕ್ತೃಗಳ ಹೇಳಿಕೆಯ ಪ್ರಕಾರ ಸದ್ಗುಣಶೀಲೆಯಾದ ಹೆಣ್ಣು ನಾಗಮ್ಮಳಿಗೆ ದಂಡಿಗೆ ಹೋದ ಗಂಡನ ಸಾವಿನಸುದ್ದಿ ತಿಳಿಯುತ್ತಿದ್ದಂತೆ, ಆಕೆ ದೇಹತ್ಯಾಗಕ್ಕೆ ಸಿದ್ಧಳಾಗುತ್ತಾಳೆ. ತನ್ನ ಮೂರು ತಿಂಗಳ ಹಸುಗೂಸನ್ನು ಲೆಕ್ಕಿಸದೆ ಅಗ್ನಿ ಪ್ರವೇಶಕ್ಕೆ ಕಾತರಿಸುತ್ತಾಳೆ. ಗಂಡಿಗೆ ಆಧೀನವಾಗಿದ್ದ ಹೆಣ್ಣು ಸಾವಿನಲ್ಲೂ ಅವನನ್ನು ಅನುಸರಿಸಿದರೆ, ಸ್ವರ್ಗದಲ್ಲಿ ಗಂಡಿನ ಸಾಹಚರ್ಯದಲ್ಲಿ ಸುಖಿಯಾಗಿರಲು ಸಾಧ್ಯವಿದೆ ಎನ್ನುವ ತಾತ್ವಿಕ ಹಂಬಲ ಅವಳದಾಗಿತ್ತು. ಬೆಂಕಿಗೆ ಹಾರಿ ಪಾತಿವ್ರತ್ಯವನ್ನು ಸಾಬೀತುಪಡಿಸುವ ಹಂಬಲವನ್ನು ಆಕೆ ವ್ಯಕ್ತಪಡಿಸುತ್ತಾಳೆ. ತಂದೆ, ತಾಯಿ, ಅತ್ತೆ, ಮಾವ ಹೀಗೆ ಎಲ್ಲರ ಮಾತನ್ನು ಲೆಕ್ಕಿಸದೇ ಹಠದಿಂದ ಅಗ್ನಿ ಪ್ರವೇಶಿಸುತ್ತಾಳೆ. ಸ್ತ್ರೀ ಸತಿಯಾಗುವ ಸಂದರ್ಭದಲ್ಲಿ ಮಗಳ, ಸೊಸೆಯ ಅಗಲಿಕೆಯನ್ನು ತಕ್ಷಣ ತಡೆದುಕೊಳ್ಳಲು ಸಾಧ್ಯವಿಲ್ಲದ ಕಾರಣ ಸುತ್ತಲ ಜನ ಅಗ್ನಿ ಪ್ರವೇಶ ಬೇಡವೆಂದು ಹೇಳುವವರೇ ಹೊರತು ಆ ಆಚರಣೆಯಲ್ಲಿ ನಂಬಿಕೆ ಕಳೆದುಕೊಂಡಿರುವುದಿಲ್ಲ. ಏಕೆಂದರೆ ಅಂದು ಅವರ್‍ಯಾರು ಆ ಪದ್ಧತಿಯ ವಿರುದ್ಧ ಸಿಡಿದೇಳಲಿಲ್ಲ. ಅವರಲ್ಲಿಯ ಮೌನವೇ ಆಚರಣೆಗೆ ಸಿಕ್ಕ ಸಮ್ಮತಿಯಾಗಿತ್ತು.

ಕನ್ನಡಿ ಕೈ ಜಾರಿದಾಗ, ಕೆಟ್ಟಕನಸು ಬಿದ್ದಾಗ, ಇವು ಅಶುಭ ಸೂಚಕಗಳೆಂದು ತಿಳಿಯುತ್ತಾಳೆ. ಗಂಡನ ಸಾವಿನ ಸುದ್ದಿ ಈ ನಂಬಿಕೆಗಳನ್ನು ಸಾಬೀತುಪಡಿಸುತ್ತವೆ. ಈ ರೀತಿಯ ನಂಬಿಕೆಗಳು ಪುರುಷಪ್ರಧಾನ ಸಮಾಜದ ಹುನ್ನಾರವೆಂಬುದನ್ನು ಮರೆಯುವಂತಿಲ್ಲ.

ವಕ್ತೃಗಳ ಹೇಳಿಕೆಯ ಪ್ರಕಾರ 'ಅತ್ತೆಗಂಜಿ, ಮಾವಗಂಜಿ, ಸುತ್ತೇಳು ನೆರೆಗಂಜಿ, ಮತ್ತೆ ಗಂಡನಿಗಂಜಿ, ಗುಟ್ಟಾಗಿ ಸಂಸಾರ ಮಾಡಿದ ಗರತಿ ನಾನಾಗಿದ್ದರೆ, ತನ್ನವರ ಮರೆಯದೆ, ತನ್ನೂರ ಜರಿಯದೆ, ತವರವರ ಮುಡಿಗೆ ಹೂ ತಂದ ಮಗಳು ನಾನಾಗಿದ್ದರೆ, ನಾನುಟ್ಟ ಸೀರೆಯ ನೆರಿಗೆಗಳು, ತೊಟ್ಟ ಬಳೆಗಳು ಅಳಿಯದಿರಲಿ ಎನ್ನುತ್ತಾ ಅಗ್ನಿ ಪ್ರವೇಶಿಸಿದಳೆಂಬುದಾಗಿದೆ. ವಿಧವೆ ತಾನಾಗಿಯೇ ಮರಣವನ್ನು ಸ್ವಇಚ್ಛೆಯಿಂದ ಆಹ್ವಾನಿಸಬೇಕೆಂಬ ಪರೋಕ್ಷ ಕಟ್ಟಳೆ ಅಂದಿನ ಸಮಾಜದಲ್ಲಿತ್ತು. ಗಂಡ ಜೀವಂತ ಇರುವಾಗ ಆಗಲಿ, ಸತ್ತ ನಂತರವಾಗಲಿ, ಹೆಂಡತಿ ಜೊತೆಯಲ್ಲೇ ಇರಬೇಕೆಂಬ ಸ್ವಾರ್ಥವನ್ನು ಆಚರಣೆಯ ಹಿನ್ನೆಲೆಯಲ್ಲಿ ಗಮನಿಸಬೇಕು. ಗಂಡ ಸತ್ತಾಗ ಹೆಂಡತಿ ಬದುಕಿರಬಾರದೆಂಬ ನಿಷೇಧಾತ್ಮಕ ಮನಸ್ಥಿತಿಗೆ ಪುರುಷ ಸಮಾಜದ ಚಿಂತನೆಗಳು ಮುಖ್ಯಕಾರಣ. ಹೆಣ್ಣು ಅಬಲೆ, ಗಂಡಿನ ಅಸ್ತಿತ್ವವಿಲ್ಲದೆ ಬಾಳಲಾರಳು ಎಂಬ ತಾತ್ಸಾರಭಾವ, ಹೆಣ್ಣಿನ ಶೀಲದ ಬಗೆಗಿನ ಸಂಶಯ, ಅವಳ ಸೌಂದರ್ಯವೇ ಮಾರಕವಾಗುವುದು, ಜಾತಿಕಟ್ಟಳೆ ಮೀರುವುದು ಇವೆಲ್ಲವೂ ಹೆಣ್ಣಿಗೆ ಪುರುಷಪ್ರಧಾನ ಸಮಾಜ ವಿಧಿಸಿದ ಕಟ್ಟುಪಾಡುಗಳಾಗಿವೆ. ಸತಿಹೋದ ಹೆಣ್ಣು ಸ್ವರ್ಗ ಪಡೆಯುತ್ತಾಳೆಂಬ ಆಧಾರವಿಲ್ಲದ ಭರವಸೆಯ ಮಾತುಗಳು ಪಿತೃಪ್ರಧಾನ ಚಿಂತನಕ್ರಮದಲ್ಲಿ ಪ್ರಮುಖ ಪ್ರೇರಕಶಕ್ತಿಯಾಗಿವೆ. "ಸಾಮಾನ್ಯ ಹೆಣ್ಣಾಗಿ ಹುಟ್ಟಿ, ಪುರುಷ ಪ್ರಧಾನ್ಯತೆಯನ್ನು ಒಪ್ಪಿಕೊಂಡು, ವಿಧೇಯವಾಗಿ ಬದುಕಿ ಗಂಡನ ಸಾವಿನೊಂದಿಗೆ ಬದುಕನ್ನು ಕೊನೆಗಾಣಿಸಿಕೊಂಡ ಸ್ತ್ರೀ ಮಾತ್ರ ಸಾವಿನ ನಂತರ ಅಪ್ರತಿಮ ಶಕ್ತಿಶಾಲಿಯಾಗಿ ಮಾತೃದೇವತೆಯಾಗಿ ನೆಲೆಗೊಳ್ಳುತ್ತಾಳೆಂದು ಜನರು ಪರಿಭಾವಿಸುತ್ತಿದ್ದರು".[೨೨] ಇದು ಪುರುಷ ಚಿಂತನೆಗೆ ತದ್ವಿರುದ್ಧವಾಗಿರುವುದೇ ಆಗಿದೆ. ವೀರನಾಗಮ್ಮ ಸಹಗಮನ ಪದ್ಧತಿಗೆ ಬಲಿಯಾಗಿ ಮಹಾಸತಿ ಎಂದು ಖ್ಯಾತಿ ಪಡೆದು ದೈವತ್ವಕ್ಕೇರಿದ್ದಾಳೆ. 'ಮುತ್ತೈದಿ ಸಾವಂತ್ರಿ, ಸತ್ಯುಳ್ಳ ಗರತಿ, ಉಘೇ, ಉಘೇ ಎಂಬುದು ಜನರು ಅಗ್ನಿಪ್ರವೇಶ ಸಮಯದಲ್ಲಿ ಹಾಕುವ ಜಯಕಾರ. ಇದು ಹೆಣ್ಣಿನ ನರಬಲಿಯನ್ನು ಸಮಷ್ಟಿಹಿತದ ನೆಪದಲ್ಲಿ ಪುರುಷಪ್ರಧಾನ ಸಮಾಜ ನೀಡಿದ ಒಪ್ಪಿಗೆಯಾಗಿ ಕಂಡುಬರುತ್ತದೆ. ನಾಗಮ್ಮ ಇಂದಿಗೂ ಮೋಕ ಗ್ರಾಮದ ಮಾತೃದೈವವಾಗಿದ್ದಾಳೆ. ವೈವಾಹಿಕ ಬದುಕನ್ನು ಪ್ರಾರಂಭಿಸುವ ಮದುಮಕ್ಕಳಿಂದ ಫಲವಂತಿಕೆ ದೈವವಾಗಿ ಪೂಜಿಸಲ್ಪಡುತ್ತಾಳೆ. ಮದುವೆಯ ಆಚರಣೆಗಳನ್ನು ಪ್ರಾರಂಭಿಸುವ ಮುನ್ನ ನಾಗಮ್ಮನ ಸ್ಮಾರಕಕ್ಕೆ ಪೂಜೆ ಸಲ್ಲಿಸುವುದು ಕಡ್ಡಾಯವಾಗಿದೆ.

ನಾಗಮ್ಮನ ಸ್ಮಾರಕದ ಪಕ್ಕದಲ್ಲಿ ಆಕೆಯ ನಾದಿನಿ ಬಟ್ಟಲು ತಿಮ್ಮಕ್ಕನ ಸ್ಮಾರಕವಿದೆ. ಆಕೆಯ ಸ್ಮಾರಕದಿಂದ ಗಾಳಿಯು ಸೋಕದಂತೆ ಮುಖಕ್ಕೆ ಮುಸುಕು ಹಾಕಿಕೊಂಡು, ಎಡ ಭಾಗಕ್ಕೆ, ಎಡಗೈಯಲ್ಲಿ ಆರತಿ ಬೆಳಗಿ ಎಡೆ ನೀಡುತ್ತಾರೆ. ಇದರ ಹಿನ್ನೆಲೆಯನ್ನು ಗಮನಿಸಿದರೆ ನಾಗಮ್ಮನ ನಾದಿನಿ ಬಟ್ಟಲು ತಿಮ್ಮಕ್ಕ ಬದುಕಿನ ನೋವು, ನಲಿವುಗಳನ್ನರಿಯದ, ಅತೀ ಕಿರಿ ವಯಸ್ಸಿನಲ್ಲಿ ವಿಧವೆಯಾದವಳು. ಅತ್ತಿಗೆಯಂತೆ ತಾನು ಅಗ್ನಿ ಪ್ರವೇಶ ಮಾಡಿ ಮಹಾಸತಿಯಾಗುವ ಬಯಕೆ ವ್ಯಕ್ತಪಡಿಸುತ್ತಾಳೆ. ಸತಿಯಾಗದೆ ವಿಧವೆಯಾಗಿ ಅನುಭವಿಸಿದ ಶೋಷಣೆ, ಹಿಂಸೆಗಳ ಅನುಭವ ಆಕೆಯ ಈ ನಿರ್ಧಾರಕ್ಕೆ ಕಾರಣವಾಗಿರಲು ಸಾಧ್ಯ. 'ಹುಲಿಯ ಕಂಡು ನರಿ ಬರೆ ಬರೆಸಿಕೊಂಡಂತೆ ಆದೀತು ಮಗಳೆ, ಅದರ ಗೊಡವೆ ಬ್ಯಾಡ ಸುಮ್ಮನಿರು' ಎನ್ನುವ ತಂದೆಯ ಮಾತನ್ನು ಧಿಕ್ಕರಿಸುತ್ತಾಳೆ. ಅಗ್ನಿಪ್ರವೇಶ ಮಾಡುವೆನೆಂದು ಚಿತೆಯ ಸುತ್ತ ಪ್ರದಕ್ಷಿಣೆ ಹಾಕುತ್ತಿರುವಾಗಲೇ ಬೆಂಕಿಯ ಬಿಸಿ ಬಡಿದು ಹೌಹಾರಿ

‘ನಾ ಒಲ್ಲೆ, ನಾ ಒಲ್ಲೆ’ ಎಂದು ಓಡುತ್ತಾಳೆ. ಆಗ ಅವಳ ಅಣ್ಣ ರಟ್ಟೆ ಹಿಡಿದು ಎಳೆತಂದು ‘ಚಿತೆ ಹೊತ್ತಿಸಿ ಅಗ್ನಿದೇವನನ್ನು ಆಹ್ವಾನಿಸಿದ ಮೇಲೆ ಆತನಿಗೆ ಉಣಲಿಕ್ಕದೆ ಕಳಿಸಲಾಗದು. ನಮ್ಮ ಮನೆಯ ಮರ್ಯಾದೆ ಕಳಿಬ್ಯಾಡ, ನೀನೇ ನಿನ್ನ ಚಿತೆ ಹಚ್ಚಿಕೊಂಡಿ, ನಡಿ ಈಗ ಚಿತೆ ಏರು’ ಎಂದನೆಂಬುದು ವಕ್ತೃಗಳ ಹೇಳಿಕೆ.

ಅಬಲೆಯರನ್ನು ಸತಿ ಆಚರಣೆಯ ಮೂಲಕ ಜೀವಂತ ದಹಿಸುವ ಹುನ್ನಾರ ಅಂದಿನ ಸಮಾಜ ವ್ಯವಸ್ಥೆಯಲ್ಲಿತ್ತು ಎಂಬುದನ್ನು ಈ ಐತಿಹ್ಯ ತಿಳಿಸುತ್ತದೆ. ತಿಮ್ಮಕ್ಕನ ಕುಟುಂಬದವರ ನಿರ್ಧಾರ, ಗಂಡಿನ ಅನುಪಸ್ಥಿತಿಯಲ್ಲಿ ಹೆಣ್ಣಿನ ಜೀವ ಅಪ್ರಸ್ತುತವೆಂಬುದನ್ನು ತಿಳಿಸುವಂತಿದೆ. ‘ಮೋಕ ನಾಯಕರ ಮನೆತನಕ್ಕೆ ಬಂದ ಸೊಸೆಯರು ಸಾಲು ರಂಡೆರಾಗಲಿ, ಮೋಕಾದ ಹೆಣ್ಣುಮಕ್ಕಳ ಮನೆ ತುಂಬಿಸಿಕೊಂಡವರ ಮನೆ ಹುಟ್ಟಡಗಲಿ’ ಎನ್ನುವ ಸಾವಿನ ಮುನ್ನ ಆಕೆ ಕೊಟ್ಟ ಶಾಪ ಸತಿ ಆಚರಣೆಯಲ್ಲಿ ಅಡಗಿದ ಉಗ್ರ ಪ್ರತಿಭಟನೆಯನ್ನು ತಿಳಿಸುತ್ತದೆ. ಶೋಷಣೆಯ ವಿರುದ್ಧ ಪ್ರತಿಭಟಿಸುವ, ಹೆಣ್ಣಿನ ಹಕ್ಕನ್ನು ಪ್ರಶ್ನಿಸುವ ದಿಟ್ಟತನ ಆಕೆಯಲ್ಲಿತ್ತು. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ಕಳೆದುಕೊಂಡ ದನಿಯನ್ನು ಮರುಸ್ಥಾಪಿಸುವ ಪ್ರಯತ್ನ ತಿಮ್ಮಕ್ಕಳದಾಗಿತ್ತು.

“ವೈದಿಕ ಸಂಪ್ರದಾಯದಂತೆ ಹೆಣ್ಣು ಗಂಡಿನ ಅಧೀನ. ಅವನನ್ನು ಅನುಸರಿಸಿ ಸತ್ತರೆ, ಸ್ವರ್ಗದಲ್ಲಿ ಅವನೊಡನೆ ಸುಖವಾಗಿರಬಹುದು”.[೨೪] ಈ ರೀತಿಯ ಕಲ್ಪನಾತೀತ ಸಂಪ್ರದಾಯಕ್ಕೆ ಬಲಿಯಾದವಳು ನಾಗಮ್ಮ, ಆದರೆ ನಾಗಮ್ಮನನ್ನು ವೈಭವೀಕರಿಸಿ ದೈವತ್ವಕ್ಕೇರಿಸಿದ ಸಮಾಜವೇ, ತಿಮ್ಮಕ್ಕನ ಶೋಷಣೆಯ ಸ್ಥಿತಿಗೂ ಕಾರಣವಾಗಿರುವುದು ಗಮನಾರ್ಹ. ಮಾತೃಪ್ರಧಾನ ವ್ಯವಸ್ಥೆಯ ಮೇಲೆ, ಪುರುಷಪ್ರಧಾನ ವ್ಯವಸ್ಥೆ ಮಾಡಿದ ಆಕ್ರಮಣವನ್ನು ಪ್ರತಿಭಟಿಸದೇ, ಒಪ್ಪಿ ಬಲಿಯಾದವಳು ನಾಗಮ್ಮ. ಆದರೆ ಬಟ್ಟಲು ತಿಮ್ಮಕ್ಕನ ಪ್ರತಿಭಟನಾ ಮಾದರಿಯೇ ಬೇರೆ. ಅದು ಸ್ತ್ರೀಪರ ಕಾಳಜಿಯನ್ನು ಎತ್ತಿಹಿಡಿಯುವುದಲ್ಲದೆ, ಅದನ್ನು ಕುಸಿಯದಂತೆ ನೋಡಿಕೊಳ್ಳುವಂಥದ್ದಾಗಿದೆ. ಈ ಆಚರಣೆಯಲ್ಲಿ ಕಂಡುಬಂದ ಪ್ರಮುಖ ಅಂಶಗಳನ್ನು ಗಮನಿಸಿದರೆ,

* ಆಚರಣೆಯನ್ನು ಅನುಸರಿಸಿದವಳನ್ನು ದೈವತ್ವಕ್ಕೇರಿಸುವುದು.
* ಹೆಣ್ಣಿನ ಬದುಕುವ ಹಕ್ಕನ್ನು ಜೀವಂತ ಸುಡುವ ಅಮಾನುಷ ಕೃತ್ಯ.
* ಕಟ್ಟುಪಾಡನ್ನು ನಿರಾಕರಿಸಿದವಳನ್ನು ಶೋಷಿಸುವುದು.

ಇಂದಿಗೂ ಸ್ಮಾರಕಗಳೆರಡೂ ಅಕ್ಕಪಕ್ಕದಲ್ಲಿವೆಯಾದರೂ, ಆಚರಣೆಯ ವಿಧಿವಿಧಾನಗಳು ಬೇರೆಯಾಗಿರುವುದು ಮೇಲಿನ ಅಂಶಗಳಿಗೆ ಸಾಕ್ಷಿಯಾಗಿದೆ.

ಕೂಡ್ಲಿಗಿ ತಾಲೂಕು ಕಾನಾಮಡುಗು ಗ್ರಾಮದಲ್ಲಿ ಮಹಾಸತಿ ಆಚರಣೆ ಏರ್ಪಡುತ್ತದೆ. ಗ್ರಾಮ ಮಧ್ಯದ ಬೇವಿನ ಕಟ್ಟೆಯ ಮೇಲಿರುವ ಮಾಸ್ತಿಗಲ್ಲು, ಗ್ರಾಮದ ಪ್ರಮುಖ ದೇವತೆ ಮಾಸ್ತ್ಯೆಮ್ಮನಾಗಿ ಪೂಜಿಸಲ್ಪಡುತ್ತದೆ. ವಕ್ತೃಗಳ ಹೇಳಿಕೆಯ ಪ್ರಕಾರ ಗಂಡನ ಮನೆಯವರ ಕಿರುಕುಳ ತಾಳಲಾರದೆ, ಬುಡಬುಡುಕೆಯ ಜೇಬಿನಲ್ಲಿ ಬಟ್ಟೆಯ ಬೊಂಬೆಯಾಗಿ ಈ ಗ್ರಾಮಕ್ಕೆ ರಕ್ಷಣೆ ಬೇಡಿ ಬಂದವಳು ಈ ಮಾಸ್ತ್ಯೆಮ್ಮ. ಈ ರೀತಿಯಾಗಿ ಕಟ್ಟಿಗೆ, ಬಟ್ಟೆ, ಕಲ್ಲಿನ ರೂಪದಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ಸಂಚರಿಸುವ ದೈವಗಳು ಪಶುಪಾಲಕ ವರ್ಗದ ಆರಾಧನಾ ಕ್ರಮವನ್ನು ಸೂಚಿಸುತ್ತದೆ. ತನ್ನನ್ನು ರಕ್ಷಣೆ ಮಾಡಿದ ಗ್ರಾಮವನ್ನು ತಾನು ರಕ್ಷಿಸಬೇಕೆಂಬ ಉದ್ದೇಶದಿಂದ

ಕೊಂಡ ಹಾಯ್ದು ಸತಿಯಾಗಿದ್ದಾಳೆ. ಮಾಸ್ತ್ಯೆಮ್ಮ ಮೂಲತಃ ಗೊಲ್ಲ ಸಮುದಾಯದವಳಾಗಿದ್ದರೂ, ಸಂಸಾರದ ಸಾಂಸ್ಥಿಕ ಚೌಕಟ್ಟಿನ ಅಧೀನತೆಯನ್ನು ಹಾಗೂ ಜಾತಿಯ ಮೇರೆಯನ್ನು ಮೀರಿ ಗ್ರಾಮ ರಕ್ಷಕ ದೈವವಾಗಿ ಎಲ್ಲಾ ಸಮುದಾಯದವರಿಂದ ಪೂಜಿಸಲ್ಪಡುತ್ತಿದ್ದಾಳೆ.

ಹಗರಿಬೊಮ್ಮನಹಳ್ಳಿ ತಾಲೂಕು ಮಾದೂರಿನ ಮಾಸ್ತ್ಯೆಮ್ಮ ಮೂಲತಃ ಆನೇಕಲ್ ಗ್ರಾಮದವಳು, ಮಾದೂರು ಆಕೆಯ ಗಂಡನ ಮನೆ. ದಂಡಿಗೆ ಹೋದ ಗಂಡನ ಮರಣದ ಸುದ್ದಿ ತಿಳಿದು ಸತಿ ಹೋದಳೆಂಬ ಐತಿಹ್ಯವಿದೆ. ಹೊಸಪೇಟೆ ತಾಲೂಕು ರಾಮಸಾಗರದಲ್ಲೂ ಇದೇ ಪ್ರಕಾರವಾದ ಮಾಸ್ತ್ಯೆಮ್ಮನ ಆಚರಣೆಯಿದೆ. ಬಳ್ಳಾರಿ ಜಿಲ್ಲೆಯಲ್ಲಿರುವ ಮೇಲಿನ ಮೂರು ಮಾಸ್ತಿ ದೈವಗಳಿಗೆ ವರ್ಷಕ್ಕೊಮ್ಮೆ ಜಾತ್ರೆ ನಡೆಸಿ, ಪ್ರಾಣಿ ಬಲಿ ನೀಡುವ ಆಚರಣೆಯಿರುವುದು ಕ್ಷೇತ್ರಕಾರ್ಯದಿಂದ ತಿಳಿದುಬಂದಿದೆ. ಕೆಳವರ್ಗದ ಸ್ತ್ರೀಯರಾದರೂ ದೇಹತ್ಯಾಗದಿಂದ ದೈವತ್ವ ಪಡೆದವರಾಗಿದ್ದಾರೆ. ಇದು ನಿಜಕ್ಕೂ ಕ್ರಾಂತಿಕಾರಕ ವಿಚಾರ. ದೇವರು, ಧರ್ಮ, ಆಧ್ಯಾತ್ಮ ಕ್ಷೇತ್ರದಿಂದ, ಪುರುಷಪ್ರಧಾನ ಸಮಾಜದಿಂದ ಬಹಿಷ್ಕೃತರಾದ ಸ್ತ್ರೀವರ್ಗ, ಇಂದು ದೈವತ್ವಕ್ಕೇರಿ ಪೂಜಿಸಲ್ಪಡುತ್ತಿದ್ದಾರೆ.

ಜನಪದರು ದೈವಪರಿಕಲ್ಪನೆಯ ಮೂಲಕ, ದಿನನಿತ್ಯದ ಬದುಕಿನಲ್ಲಿಯ ಸ್ತ್ರೀಶೋಷಣೆ ವ್ಯವಸ್ಥೆಗೆ ಸ್ತ್ರೀ ನಿಜವಾಗಿ ಶಕ್ತಿದೇವತೆಯೆಂಬುದನ್ನು ಆಚರಣೆಯ ಮೂಲಕ ಸಾದರಪಡಿಸಿದ್ದಾರೆ. ಇಂದಿಗೂ ವಿಶೇಷವಾಗಿ ಆಚರಿಸಲ್ಪಡುವ ಮಾಸ್ತಿ ಆಚರಣೆಗಳು ಸ್ತ್ರೀಯರ ಸತ್ವ, ಸಾಧ್ಯತೆಗಳನ್ನು ಪ್ರತಿನಿಧಿಸುವಂತಿವೆ.

ಮಧ್ಯಯುಗದಲ್ಲಿ ಮುಸ್ಲಿಮರ ದಾಳಿ ಹೆಚ್ಚಾದಾಗ ರಾಜಪರಿವಾರದಲ್ಲಿ ಸತಿ ಆಚರಣೆ ಹೆಚ್ಚಾಗಿ ಪ್ರಚಲಿತದಲ್ಲಿತ್ತು. ಯುದ್ಧದಲ್ಲಿ ಮಡಿದವರ ಅಥವಾ ಸೋತವರ ಆಸ್ತಿಯ ಜೊತೆ ಅವರ ಪತ್ನಿಯರು ಹಸ್ತಾಂತರವಾಗಬೇಕಿತ್ತು. ಅಂದು ಪಾವಿತ್ರ್ಯದ ಕಲ್ಪನೆಯಲ್ಲಿ ಹೆಣ್ಣಿನ ಹಸ್ತಾಂತರ ಗಂಡಿಗೆ ಸಹಿಸದ ಸಂಗತಿಯಾಗಿತ್ತು. ಹೀಗಾಗಿ ಶೀಲದ ಪಾವಿತ್ರ್ಯತೆಯನ್ನು ಹೇರಿ, ಮುಕ್ತಿಯ ಆಸೆ ತೋರಿಸಿ, ಸತ್ತವರೊಂದಿಗೆ ಜೀವಂತ ಸುಡುವ ಹುನ್ನಾರ ಅಂದಿನ ಸಮಾಜದಲ್ಲಿತ್ತು. ರಾಜಶಾಹಿ, ಪ್ರಜಾಪ್ರಭುತ್ವದ ಹೋರಾಟದ ನೆಲೆಯಲ್ಲಿ ವೇಳೆವಾಳಿ, ಲೆಂಕವಾಳಿ, ಗರುಡ, ಸಹಗಮನ ಇತ್ಯಾದಿ ನರಬಲಿಗಳು ಉದಯಿಸಿದ್ದವು. ಅವು ಪುರುಷನ ಪ್ರಾಮಾಣಿಕತೆ ಹಾಗೂ ಆತ್ಮ ಬಲಿಗೆ ಕಾರಣವಾದುದಲ್ಲದೆ, ಹೆಣ್ಣನ್ನು ಬಲಿಯಾಗಿಸಿತ್ತು.

ಮನು ಧರ್ಮಶಾಸ್ತ್ರವು 'ಪುತ್ರನಾರ್ಮಸ್ತು ಪೂಜತೇ ರಮಂತೇ ತತ್ರದೇವತಾ' ಎಲ್ಲಿ ನಾರಿಯರಿಗೆ ಪೂಜನೀಯ ಸ್ಥಾನವಿದೆಯೋ, ಅಲ್ಲಿ ದೇವತೆಗಳು ವಾಸಿಸುತ್ತಾರೆಂದು ಹೇಳುತ್ತದೆ. ಅದೇ ಮನು ಧರ್ಮಶಾಸ್ತ್ರವು 'ನಸ್ತ್ರೀ ಸ್ವಾತಂತ್ರ್ಯಮರ್ಹತಿ' ಸ್ತ್ರೀಗೆ ಸ್ವಾತಂತ್ರ್ಯವೆಂಬುದು ಇಲ್ಲ ಎಂಬ ತದ್ವಿರುದ್ಧವಾದ ಅಭಿಪ್ರಾಯವನ್ನು ತಿಳಿಸುತ್ತದೆ. ಇಂಥ ವೈರುಧ್ಯ ಅಭಿಪ್ರಾಯಗಳು ಅಂದಿನ ಸಮಾಜದಲ್ಲಿಯ ಸ್ತ್ರೀಯರನ್ನು ದೈವತ್ವಕ್ಕೆರಿಸಿತ್ತೇ ಹೊರತು, ಸ್ವಾತಂತ್ರ್ಯ, ಸಮಾನತೆಯನ್ನು ನೀಡಲಿಲ್ಲ ಎಂಬುದು ಗಮನಾರ್ಹ ಸಂಗತಿಯಾಗಿದೆ. ಈ ರೀತಿಯ ಮನೋಭಾವಗಳಿಂದ ಸತಿಪದ್ಧತಿ ಉದಯಿಸಿರಲು ಸಾಧ್ಯವಿದೆ. ಕಾಲಾನಂತರ ಹಲವಾರು ಸಮಾಜಮುಖಿ ಚಿಂತಕರು, ಸಂಘಟನೆಗಳು, ಸರ್ಕಾರ ಜನರಲ್ಲಿ ಜಾಗೃತಿಯನ್ನು ಮೂಡಿಸಿವೆ. ಲಾರ್ಡ್ ವಿಲಿಯಂ ಬೆಂಟಿಕ್ ಬಂಗಾಳದ ಗೌರ್ನರ್ ಆಗಿದ್ದಾಗ ಕ್ರಿ.ಶ. ೧೮೨೯ರಲ್ಲಿ ಸತಿಪದ್ಧತಿ ನಿಷೇಧಿಸಿ ಕಾನೂನು ಜಾರಿಗೆ ತರಲಾಗಿತ್ತು.

ರಾಜಾರಾಮ್ ಮೋಹನ್‌ರಾಯ್, ಈಶ್ವರಚಂದ್ರ ವಿದ್ಯಾಸಾಗರ್, ದಯಾನಂದ ಸರಸ್ವತಿ, ಇವರು ಸತಿಪದ್ಧತಿ ನಿರ್ಮೂಲನೆಗೆ ಶ್ರಮಿಸಿದ ಮಹನೀಯರಾಗಿದ್ದಾರೆ. ಜನರ ನಂಬಿಕೆಯೊಡನೆ ಬೆಳೆದ ಇಂಥ ಅನಿಷ್ಟ ಆಚರಣೆಗಳು ಸಂಪೂರ್ಣ ನಶಿಸುವುದು ಅತ್ಯಗತ್ಯವಾಗಿದೆ.

ನೈಸರ್ಗಿಕವಾಗಿ ಸಂಪದ್ಭರಿತವಾಗಿದ್ದ ನಮ್ಮ ದೇಶ ಈಗ ಆಧುನಿಕ ತಂತ್ರಜ್ಞಾನದಿಂದ ಹಂತ ಹಂತವಾಗಿ ಮಾನವ ನಿರ್ಮಿತ ವಸ್ತುಗಳಿಂದ ತುಂಬಿ ತುಳುಕಲಾರಂಭಿಸಿದೆ. ಅಜ್ಞಾನ, ಅತ್ಯಾಶೆಗಳಿಂದ ಮತ್ತು ಇತರೆ ಜೀವಿಗಳ ಬಗೆಗಿನ ಅಸಡ್ಡೆಯಿಂದ ನಿಸರ್ಗ ಧ್ವಂಸವಾಗುತ್ತಿದೆ. ಇದಕ್ಕೆ ಈಗಾಗಲೇ ಅತಿವೃಷ್ಟಿ, ಅನಾವೃಷ್ಟಿ, ಸುನಾಮಿ, ಭೂಕಂಪಗಳ ಮೂಲಕ ಅಗಣಿತವಾದ ರೀತಿಯಲ್ಲಿ ಬೆಲೆ ತೆರುತ್ತಿದ್ದೇವೆ. ಪೂರ್ವಜರಿಂದ ನಾವು ಪಡೆದಿದ್ದೇನು? ನಮ್ಮಿಂದಾಗುವ ತಪ್ಪುಗಳೇನು? ಮುಂದಿನ ನಮ್ಮ ತಲೆಮಾರಿಗೆ ಉಳಿಸಬೇಕಾದುದೇನು ಎಂಬೀ ಪ್ರಶ್ನೆಗಳನ್ನು ನಮಗೆ ನಾವೇ ಕೇಳಿಕೊಳ್ಳಬೇಕಾಗಿದೆ. ಹಾಗಾಗಿ ಪರಿಸರವನ್ನು, ನಿಸರ್ಗವನ್ನು ಹಿಮ್ಮೆಟ್ಟಿಸಿ ಏಳಿಗೆ ಸಾಧಿಸುವ ಮಾನವನ ಧೋರಣೆಯನ್ನು ಬದಲಾಯಿಸಬೇಕಾದ ಪರ್ವಕಾಲದಲ್ಲಿ ನಾವಿದ್ದೇವೆ. ಸಸ್ಯ ಸಂಬಂಧಿ ಆಚರಣೆಗಳ ಹಿಂದೆ ನಮ್ಮ ಪ್ರಕೃತಿಯನ್ನು ರಕ್ಷಿಸುವ, ಅಭಿವೃದ್ಧಿಪಡಿಸುವ ಉದ್ದೇಶಗಳಿವೆ. ದೇವರುಗಳ ಹೆಸರಿಡಿದು ಕಾಪಾಡುವ ಮತ್ತು ಆಯಾ ಪ್ರದೇಶಗಳ ವಾತಾವರಣಕ್ಕೆ ಸರಿ ಹೊಂದುವ ಗಿಡ-ಮರ-ಬಳ್ಳಿಗಳ ನಾಟಿ ಮತ್ತು ರಕ್ಷಣೆಗಳ ಬಗ್ಗೆ ಪುರಾತನ ಕಾಲದ ಮಾನವರಿಗೆ ಚೆನ್ನಾಗಿ ತಿಳಿದಿತ್ತು ಎಂಬುದೇ ಒಂದು ವಿಶೇಷ. ಅಂತಹ ಸೂಕ್ಷ್ಮ ವಿಷಯಗಳನ್ನು ಇಂದಿನ ಜನಸಾಮಾನ್ಯರು, ಅದರಲ್ಲಿಯೂ ಯುವ ಪೀಳಿಗೆ ತಿಳಿದುಕೊಳ್ಳುವುದು ಅತ್ಯಗತ್ಯವಾಗಿದೆ. ಮನುಷ್ಯ-ಮನುಷ್ಯರ ಸಹವಾಸದಲ್ಲಿ ಸಾವಿರಾರು ವರ್ಷಗಳಿಂದ ಬಾಳಿ ಬದುಕಿದಂತೆಯೇ ಪ್ರಾಣಿ-ಪಕ್ಷಿಗಳ ಒಡನಾಟದಲ್ಲಿಯೂ ಮನುಷ್ಯ ಬದುಕು ಸಾಗಿ ಬಂದಿರುವುದನ್ನು ಇತಿಹಾಸ ತಿಳಿಸುತ್ತದೆ. ಪ್ರಾಣಿಗಳ ಜೊತೆಯಲ್ಲಿ ಬದುಕುತ್ತಲೇ ಅವುಗಳ ಬಗೆಗೆ ನಾನಾ ರೀತಿಯ ಭಾವನೆಗಳನ್ನು, ಕಲ್ಪನೆಗಳನ್ನು ಮತ್ತು ನಂಬಿಕೆಗಳನ್ನು ರೂಢಿಸಿಕೊಂಡು ಬರಲಾಗಿದೆ. ಕ್ರಮೇಣ ಅವುಗಳೇ ಆಚರಣೆಗಳಾಗಿ ತಲೆತಲಾಂತರದಿಂದ ಮುಂದುವರಿದುಕೊಂಡು ಬಂದಿವೆ.

ಪ್ರಾಣಿ ಸಂಬಂಧಿ ಆಚರಣೆಗಳಲ್ಲಿ ಕೆಲವೊಂದು ಮೂಢನಂಬಿಕೆಗಳು ಪ್ರಚಲಿತದಲ್ಲಿರಲು ಸಾಧ್ಯ. ಹುತ್ತಕ್ಕೆ ಹಾಲೆರೆಯುವುದರಿಂದ, ಜೀವಂತ ಹಾವುಗಳಿಗೆ ಹಾಲೆರೆಯುವುದರಿಂದ ಏನೂ ಪ್ರಯೋಜನವಿಲ್ಲ ಎಂಬುದನ್ನು ಮನಗಾಣಬೇಕಾಗಿದೆ. ಗಾವು ಜಗಿಯುವಂಥ ಬೀಭತ್ಸ ಆಚರಣೆಗಳು ನಮಗೆ ಬೇಕಾಗಿದೆಯೇ ಎಂಬುದನ್ನು ಪ್ರಶ್ನಿಸಿಕೊಳ್ಳಬೇಕಾಗಿದೆ. ಒಟ್ಟಾರೆಯಾಗಿ ಸಸ್ಯ ಮತ್ತು ಪ್ರಾಣಿಗಳಿಗೆ ಸಂಬಂಧಿಸಿದ ನೂರಾರು ಆಚರಣೆಗಳು ಪರಿಸರದ ಬೆಳವಣಿಗೆಗೆ ಪ್ರಾಣಿಗಳ ಮೇಲಿನ ಪ್ರೀತಿ ಕರುಣೆಯನ್ನು ಹೆಚ್ಚಿಸುವ ಪರೋಕ್ಷ ಉದ್ದೇಶಗಳನ್ನು ಒಳಗೊಂಡಿವೆ. ಅವು ಹಿರಿಯರ ಸಮಪಾಲು ಸಮಬಾಳು ತತ್ವದಡಿಯಲ್ಲಿ ಉದಯಿಸಿ ಮುಂದುವರಿದುಕೊಂಡು ಬಂದಿವೆ.

ಟಿಪ್ಪಣಿಗಳು

೧. ಉದ್ಧೃತ : ಡಾ. ಎಸ್. ಮೋಹನ್, ೨೦೧೧, ಜಾಪನದ ಸೆಲೆ, ಪು. ೫೦.

೨. ಮಲ್ಲಿಕಾರ್ಜುನ ಹೊಸಪಾಳ್ಯ, ೨೦೦೮, ಕೃಷಿ ಆಚರಣೆ, ಪು. ೬೫.

೩. ಡಾ. ಎಂ.ಜಿ. ಈಶ್ವರಪ್ಪ, ೧೯೯೯, ಜಾನಪದ ಇಬ್ಬನಿ, ಪು. ೬೩.

೪. ಮುಳ್ಳಿನ ಕಂಟಿ - ಕಾರಿ ಮುಳ್ಳಿನ ಜಾತಿಗೆ ಸೇರಿದ ಸಸ್ಯ ವರ್ಗ.

೫. ಜೀ.ಶಂ. ಪರಮಶಿವಯ್ಯ (ಸಂ), ೧೯೯೩, ಜಾನಪದ ಗಂಗೋತ್ರಿ, ಸಂಪುಟ ೬, ಸಂಚಿಕೆ ೩, ಪು. ೫೯.

೬. ನಾಗೇಶ್ ಹೆಬ್ಬಾಲೆ ಕೆ. (ಸಂ), ೨೦೦೬, ಜಾನಪದ ಕರ್ನಾಟಕ, ಸಂಪುಟ-೫, ಸಂಚಿಕೆ-೨, ಪು. ೨೩.

೭. ಕೈಪಾ:- ಬಾಳೆದಿಂಡಿನಿಂದ ಮಾಡಿದ ಒಳಉಡುಪು, ಮುಳ್ಳುಗದ್ದುಗೆ ಉತ್ಸವದಲ್ಲಿ ಮಾತ್ರ ಬಳಸುತ್ತಾರೆ.

೮. ಹಿ.ಶಿ. ರಾಮಚಂದ್ರೇಗೌಡ, ೨೦೦೧, ಜಾನಪದ ಸಾಹಿತ್ಯ ದರ್ಶನ, ಭಾಗ-೨೪, ಪು. ೭೨.

೯. ಅರವಿಂದ ಮಾಲಗತ್ತಿ (ಸಂ), ೨೦೦೬, ಕನ್ನಡ ವಿಷಯ ವಿಶ್ವಕೋಶ, ಪು. ೨೮೩.

೧೦. ಸಂಗಟಿ:- ಜೋಳದಿಂದ ತಯಾರಿಸಿದ ದ್ರವರೂಪದ ಗಂಜಿ.

೧೧. ಗೊಟ್ಟ:- ಬಿದಿರಿನಲ್ಲಿ ಮಾಡಿದ ಕೊಳವೆ. ಜಾನುವಾರುಗಳಿಗೆ ದ್ರವರೂಪದ ಪದಾರ್ಥ ಕುಡಿಸಲು ಬಳಸುವ ಸಾಧನ. ದನಗಳ ಗಂಟಲಿಗೆ ಗೊಟ್ಟದ ತುದಿಯನ್ನು ಇಟ್ಟು ಕುಡಿಸಲು ಅನುಕೂಲವಾಗುವಂತೆ ಚೂಪಾಗಿ ಮಾಡಿರುತ್ತಾರೆ.

೧೨. ಕನ್ನಡ ನಿಘಂಟು, ೨೦೧೧, ಕನ್ನಡ ಸಾಹಿತ್ಯ ಪರಿಷತ್ತು, ಪು. ೮೬೫.

೧೩. ಎಸ್.ಎಸ್. ಇಮ್ರಾಪುರ, ೧೯೯೩, ಜಾನಪದ ದರ್ಶನ, ಪು. ೮೩.

೧೪. ಡಾ. ಎಂ.ಜಿ. ಬಿರಾದಾರ, ೧೯೮೭, ಜಾನಪದ ಜೀವಾಳ, ಪು. ೨೭.

೧೫. ಕಾಸೆಕಟ್ಟು:- ಪಾತೇಲಿಂಗನ ಉತ್ಸವ ಹೊರಡುವಾಗ ಬಸವನನ್ನು ತಮ್ಮ ಪರಿವಾರವೆಂದು ಪರಿಗಣಿಸುತ್ತಾರೆ. ನಡು ಬಿಗಿಯಾಗಿರಲಿ ಎಂದು ಸೊಂಟದ ಮೇಲೆ ಕಪ್ಪನೆಯ ದಟ್ಟಿಯನ್ನು ಹೊದಿಸುತ್ತಾರೆ. ಅದನ್ನೇ ಕಾಸಿ(ಕಾಸೆ) ಎಂದು ಕರೆಯುತ್ತಾರೆ.

೧೬. ಡಾ. ಎಂ. ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. ೪೧೦.

೧೭. ಡಾ. ಎಂ.ಎಸ್. ಲಠ್ಠೆ, ೨೦೦೫, ಕವಲೆತ್ತಿನವರು, ಪು. ೯೮.

೧೮. ಪಿ.ಆರ್. ತಿಪ್ಪೇಸ್ವಾಮಿ, ೨೦೦೯, ಜಾನಪದ ಆಯಾಮಗಳು, ಪು. ೧೭೫.

೧೯. ಉದ್ಧೃತ : ಮೋಹನ್ ಎಸ್. ೨೦೧೦, ನಾಗಾರಾಧನೆ : ಪರಂಪರೆ-ಸ್ಥಿತ್ಯಂತರಗಳು, ಪು. ೧.

೨೦. ಡಾ. ಅರವಿಂದ ಮಾಲಗತ್ತಿ (ಸಂ), ೨೦೦೬, ಕನ್ನಡ ವಿಷಯ ವಿಶ್ವಕೋಶ, ಪು. ೭೮೮.

೨೧. ಡಾ. ರಂಗಾರೆಡ್ಡಿ ಕೋಡಿರಾಂಪುರ, ೨೦೧೦, ಜನಪದ ಸಂಸ್ಕೃತಿ, ಪು. ೮೪.

೨೨. ಡಾ. ಎಸ್. ಲಕ್ಷ್ಮೀದೇವಿ, ೨೦೦೭, ಗ್ರಾಮ ಮತ್ತು ಶಿಷ್ಟ ದೇವತೆಗಳು, ಪು. ೧೪೫.

೨೩. ಡಾ. ಗೋವಿಂದ, ೨೦೦೧, ಬಳ್ಳಾರಿ ಜಿಲ್ಲಾ ಜನಪದ ದೈವಗಳು, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಪು. ೧೭೨.

೨೪. ಜೆ.ಎಂ. ನಾಗಯ್ಯ, ೨೦೦೨, ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ, ಪು. ೩.

೨೫. ಎಸ್.ಎಸ್. ಹಿರೇಮಠ, ೧೯೯೩, ಕರ್ನಾಟಕ ಸಂಸ್ಕೃತಿ ಪರಂಪರೆ, ಭಾಗ ೨, ಜಾತ್ರೆಗಳು, ಪು. ೨೮೪.

೨೬. ಸಿದ್ಧಲಿಂಗಯ್ಯ, ೧೯೯೮, ಸುವರ್ಣ ಜಾನಪದ, ಪು. ೧೨೮.

೨೭. ಜೆ.ಎಂ. ನಾಗಯ್ಯ, ೨೦೦೨, ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ, ಪು. ೪.

೨೮. ಎಚ್.ಎಸ್. ಸಿದ್ದಗಂಗಪ್ಪ, ೧೯೬೮, ದೇವಿ ಆರಾಧನೆಗೆ ಸಂಬಂಧಿಸಿದ ಕೆಲವು ಜನಪದ ಆಚರಣೆಗಳು, ಪು. ೪೩.

೨೯. ಡಾ. ಸಿದ್ದಲಿಂಗಯ್ಯ, ೧೯೯೭, ಗ್ರಾಮದೇವತೆ, ಪು. ೧೧೦.

೩೦. ಡಾ. ಎಂ. ಸುಮಿತ್ರ, ೨೦೦೧, ಕರಗ ಸಂಪ್ರದಾಯ, ಪು. ೬೬.

೩೧. ಎಸ್.ಎಸ್. ಹಿರೇಮಠ, ೧೯೯೩, ಕರ್ನಾಟಕ ಸಂಸ್ಕೃತಿ ಪರಂಪರೆ, ಭಾಗ ೨, ಜಾತ್ರೆಗಳು, ಪು. ೧೧೯.

೩೨. ಗೋವಿಂದ, ೨೦೦೧, ಬಳ್ಳಾರಿ ಜಿಲ್ಲಾ ಜನಪದ ದೈವಗಳು, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಪು. ೨೧೪.

೩೩. ಕೆ.ವೈ. ನಾರಾಯಣಸ್ವಾಮಿ, ೨೦೦೦, ನೀರದೀವಿಗೆ, ಪು. ೧೩೩.

೩೪. ಡಾ. ಬಸವರಾಜ ಕಲ್ಗುಡಿ, ೧೯೯೫, ಮಹಾಸತಿ ಆಚರಣೆ, ಪು. ೬೭.

❑❑❑

ಅಧ್ಯಾಯ : ಐದು

ಸಮಾರೋಪ

ಅಧ್ಯಾಯ : ಐದು

ಸಮಾರೋಪ

ಜನಪದರ ಕಂಠಸ್ಥ ಸಾಹಿತ್ಯವು ಒಗಟು, ಗಾದೆ, ಕಥೆ, ಹಾಡಿನ ರೂಪದಲ್ಲಿ ಹೊರಹೊಮ್ಮಿದೆ. ಜನಪದರ ಜ್ಞಾನಸಾಮಗ್ರಿಯ ಮತ್ತೊಂದು ಮಗ್ಗುಲಾಗಿ ಆಚರಣೆ, ನಂಬಿಕೆ, ಸಂಪ್ರದಾಯ ಬೆಳೆದು ಬಂದಿದೆ. ಜನಪದ ಸಾಹಿತ್ಯ ಒಂದು ಭಾಷಿಕ ಸಾಮಾಗ್ರಿ ಎನಿಸಿದರೆ, ಇನ್ನೊಂದು ಆಚರಣಾ ರೂಪದ ಸಾಮಗ್ರಿ ಎನಿಸುತ್ತದೆ. ಪ್ರಸ್ತುತ ಜನಪದ ಆಚರಣೆಗಳು ಕೇವಲ ಸಂಪ್ರದಾಯದ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಸ್ಥಿರಸಂಸ್ಕೃತಿಯಾಗಿಲ್ಲ. ಅವು ಸಮಷ್ಟಿ ಪ್ರಜ್ಞೆಯಿಂದ ಕೂಡಿದ್ದು, ಸಾರ್ವಕಾಲಿಕವಾದುದು. ತನ್ನದೇ ಆದ ತತ್ವಸಿದ್ಧಾಂತಗಳ ಮೂಲಕ ಚರಸಂಸ್ಕೃತಿಯಾಗಿ ಚಲಾವಣೆಗೆ ಬಂದಿವೆ. ಬದುಕಿನ ಜೊತೆ ಹಿಂದಿನಿಂದ ಬಂದ ಆಚರಣೆಗಳನ್ನು ಅನುಸರಿಸಿ, ಮುಂದುವರಿಸಿಕೊಂಡು ಹೋಗುವುದು ಜನಪದರ ಸಹಜ ಸ್ವಭಾವ. ಹಿರಿಯರ ಪರಂಪರಾಗತ ಅನುಭವದಿಂದ ಒಡಮೂಡಿದ ನಂಬಿಕೆ, ಆಚರಣೆ, ವಿಧಿ-ನಿಷೇಧಗಳೆಲ್ಲವೂ ಬದುಕಿನ ಮಾರ್ಗಸೂಚಿಗಳಾಗಿವೆ. ಅವುಗಳನ್ನು ದೇವವಾಣಿಯಂತೆ, ವೇದವಾಕ್ಯದಂತೆ ಪಾಲಿಸಿಕೊಂಡು ಬಂದಿದ್ದಾರೆ. ಆಚರಣೆಗಳು ಕುಟುಂಬ, ಸಮಾಜ, ಗ್ರಾಮಗಳನ್ನು ಒಗ್ಗೂಡಿಸಿವೆ. ಜನರಲ್ಲಿ ಪರಸ್ಪರ ಸಹಕಾರ, ಸಾಮರಸ್ಯ ಭಾವೈಕ್ಯತೆಯನ್ನೇರ್ಪಡಿಸಿ ಅವರ ಸಾಮೂಹಿಕ ಬದುಕಿನಲ್ಲಿ ಶಾಂತಿಯನ್ನು ನೀಡುವಂಥವುಗಳಾಗಿವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಪ್ರಚಲಿತದಲ್ಲಿರುವ ಸಂಸ್ಕೃತಿಯ ಬೇರುಗಳಂತಿರುವ ಜನಪದ ಆಚರಣೆಗಳ ಹಲವು ಮುಖಗಳನ್ನು ವಿಶ್ಲೇಷಣೆಗೆ ಒಳಪಡಿಸುವುದರ ಮೂಲಕ ಅವುಗಳಲ್ಲಿಯ ಜೀವನಮೌಲ್ಯ ಹಾಗೂ ಮಾನವ ಸಂಬಂಧವನ್ನು ಅರಿಯಲು ಪ್ರಯತ್ನಿಸಲಾಗಿದೆ.

ನಾಗರಿಕ, ಅಕ್ಷರಸ್ಥ ಸಮಾಜ ಜನಪದ ಆಚರಣೆ, ನಂಬಿಕೆ, ಪರಂಪರೆಗಳನ್ನು ದೂರಸರಿಸಿ ಅಲಕ್ಷ್ಯದಿಂದ ನೋಡತೊಡಗಿದೆ. ಈ ನಿಲುವುಗಳಿಗೆ ಅಂಟಿಕೊಂಡವರು ತಮ್ಮದೇ ಆದ ಪರಂಪರೆಯಿಂದ ದೂರವಾಗಿಬಿಡುವ ಸಾಧ್ಯತೆಯಿದೆ. ಇಂದು ನೆಲ, ಜಲ, ವಾಯು, ಗಿಡ ಮರ, ಪ್ರಾಣಿ, ಪರಿಸರ ಶುದ್ಧತೆಯಿಂದ ಕೂಡಿದೆ ಎಂದರೆ, ಆಚರಣೆಗಳ ಮೂಲಕ ಜನಪದರು ಹೊಂದಿದ ಕಾಳಜಿ ಕಾರಣವಾಗಿದೆ. ಅಂಥ ಆಚರಣೆಗಳ ಹಿಂದಿರುವ ಜ್ಞಾನ ಪರಂಪರೆಯನ್ನು ಅರಿಯಬೇಕಿದೆ. ಅವುಗಳನ್ನು ಉಪಯುಕ್ತ ದೃಷ್ಟಿಯಿಂದ ಪರಾಮರ್ಶೆಗೆ ಒಳಪಡಿಸಿದಾಗ ಆಧುನಿಕ ಜಗತ್ತು ಹೇರಿರುವ ಸಂಕಷ್ಟಗಳಿಂದ ಪಾರಾಗಲು ಸಾಧ್ಯ. ಪರಾವಲಂಬನೆಯಿಂದ ಸ್ವಾವಲಂಬನೆಯ ಕಡೆ ಚಲಿಸಿ ಬದುಕನ್ನು ಸಾರ್ಥಕಗೊಳಿಸಿಕೊಳ್ಳಲು ಸಾಧ್ಯ.

ಆಚರಣೆಗಳಿಗೆ ನಂಬಿಕೆಗಳು ಪ್ರಬಲ ಪ್ರೇರಣೆಯಾಗಿವೆ. ಆಚರಣೆ ಮತ್ತು ನಂಬಿಕೆಗಳು ಕಾಲದೊಂದಿಗೆ ತಳುಕು ಹಾಕಿಕೊಂಡಿವೆ. ಇಂಥ ಕಾಲನಿರ್ಣಯದ ಬದುಕಿಗೆ ಬಳ್ಳಾರಿ ಜಿಲ್ಲೆ ಹೊರತಾಗಿಲ್ಲ. ಸಿಡಿ ಉತ್ಸವ, ಕಾರಣೀಕೋತ್ಸವ ಹಾಗೂ ಸ್ತ್ರೀದೈವಗಳ ಜಾತ್ರೆ, ಹಬ್ಬ, ಕೃಷಿ ಆಚರಣೆಗಳು ಕಾಲಮಾನಕ್ಕೆ ಅನುಗುಣವಾಗಿ ಆಚರಿಸಲ್ಪಡುತ್ತಿವೆ. ಫಲವತ್ತತೆಯ ಕಾಲ, ಧಾರ್ಮಿಕವಾಗಿ ಅಪವಿತ್ರಕಾಲ, ಆರ್ಥಿಕವಾಗಿ ದುರ್ಭಿಕ್ಷೆಯ ಕಾಲ, ಹವಾಮಾನದ ದೃಷ್ಟಿಯಿಂದ ಕೆಟ್ಟಕಾಲ, ರೋಗಗಳು ಉಲ್ಬಣಿಸುವ ಕಾಲ, ಈ ರೀತಿಯ ಸಂದರ್ಭಗಳ ಲೆಕ್ಕಾಚಾರಗಳಿಂದ ಆಚರಣೆಗಳ ಸಮಯ ನಿರ್ಧಾರಗೊಂಡಿರುವುದನ್ನು ಕ್ಷೇತ್ರಕಾರ್ಯದಲ್ಲಿ ಗಮನಿಸಲಾಗಿದೆ. ಆಯಾ ಕಾಲಮಾನಕ್ಕೆ ನಿಗದಿಗೊಂಡಂತೆ ಆಚರಣೆಗಳು ಏರ್ಪಟ್ಟಾಗ ಮಾತ್ರ ಅವುಗಳ ಫಲಶಕ್ತಿ ಪಡೆಯಲು ಸಾಧ್ಯ. ಇತ್ತೀಚಿನ ದಿನಗಳಲ್ಲಿ ಆಚರಣೆಗಳು ನಡೆಯುವ ಸ್ಥಳ, ಕಾಲ, ಆ ಸಮಯದಲ್ಲಿ ಬಳಸಲ್ಪಡುವ ವಸ್ತುಗಳ ಬದಲಾವಣೆಯಿಂದ ಅವುಗಳ ಫಲಶಕ್ತಿ ಕುಂಠಿತಗೊಳ್ಳುತ್ತಿದೆ. ಹೊಸಪೇಟೆ, ಸಿರುಗುಪ್ಪ, ಬಳ್ಳಾರಿ ತಾಲೂಕುಗಳ ಕೆಲವು ಪ್ರದೇಶಗಳಲ್ಲಿ ನೀರಾವರಿ ಸೌಲಭ್ಯವಿರುವ ಪ್ರಯುಕ್ತ ಅಲ್ಲಿನ ಕೃಷಿಕಾರ್ಯ ನಿಗದಿತ ಮಳೆಗಾಲವನ್ನು ಆಧರಿಸಿಲ್ಲ. ಅಲ್ಲಿಯ ಆಚರಣೆಗಳು ಸ್ಥಳೀಯ ಭೌಗೋಳಿಕ ಹಿನ್ನೆಲೆಯಲ್ಲಿ ಆಚರಿಸಲ್ಪಡುತ್ತಿವೆ. ವ್ಯವಸ್ಥಿತ ರಸ್ತೆಗಳು, ವಾಹನ ಸೌಲಭ್ಯವಿರುವ ಈ ಕಾಲಮಾನದಲ್ಲಿಯೂ ಕಾಲ್ನಡಿಗೆಯಲ್ಲಿ ಸಂಪ್ರದಾಯ ನಿಷ್ಠೆಯಿಂದ ಹಂಪಿಯಾತ್ರೆ ಕೈಗೊಳ್ಳುವ ಜಲಸಂಬಂಧಿ ಆಚರಣೆಗಳಿವೆ. ಅವು ತುಂಗಭದ್ರಾ ನದಿ ತೀರದ ಎಡಬಲ ದಂಡೆಗಳಲ್ಲಿ ವೈವಿಧ್ಯಮಯವಾಗಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿವೆ.

ಜೀವಪರವಾದ ಮಾನವ ಸಂಸ್ಕೃತಿಯನ್ನು ಕಟ್ಟಿಕೊಡುವ ಗಣಪ, ಕಾಮಣ್ಣ, ದೀಪಾವಳಿ ಹಬ್ಬದಂತಹ ಆಚರಣೆಗಳಿಂದು ವ್ಯಾಪಾರೀಕರಣಗೊಳ್ಳುತ್ತಿವೆ. ಪರಿಸರಮಾಲಿನ್ಯ, ಶಬ್ದಮಾಲಿನ್ಯ, ಕೃತಕ ರಾಸಾಯನಿಕ ವಸ್ತುಗಳ ಬಳಕೆಯಿಂದ ಆಚರಣೆಯಲ್ಲಿರುವ ಜೀವಮುಖಿ ಅಂಶಗಳು ಗೌಣವಾಗುತ್ತಿವೆ. ಹಿರಿಯರ ಅನುಭವದ ನೆಲೆಯಲ್ಲಿ ಆಚರಣೆಗಳನ್ನು ಅವು ಹೊಂದಿದ ವಿಶಾಲ ವ್ಯಾಪ್ತಿಗೆ ಧಕ್ಕೆಯಾಗದಂತೆ ಉಳಿಸಿಕೊಳ್ಳುವುದು ಅನಿವಾರ್ಯವಾದುದಾಗಿದೆ. ಆಧುನಿಕತೆಯ ಪ್ರಭಾವಕ್ಕೆ ಸಿಲುಕಿ ಆಚರಣೆಗಳಿಂದು, ವರ್ತಮಾನಕ್ಕೆ ತಕ್ಕಂತೆ ಸ್ಥಿತ್ಯಂತರಗೊಳ್ಳುತ್ತಿರುವುದು ಸಹಜ. ಅವುಗಳಲ್ಲಿಯ ಜೀವಮುಖಿ ಅಂಶಗಳಿಗೆ ಧಕ್ಕೆಯಾಗದಂತೆ, ಅವು ಲಾಭಮುಖಿಯಾಗುವಂತೆ ಗಮನಹರಿಸುವ ಅಗತ್ಯತೆ ಇಂದಿನ ಸಮಾಜದ್ದಾಗಬೇಕಿದೆ. ಮೌಖಿಕ ಶಾಸನಗಳಂತೆ ನಡೆದುಬಂದ ಸಂಪ್ರದಾಯ, ಆಚರಣೆಗಳು ಆಗಾಗ ಅತಿರೇಕದ ವರ್ತನೆಗಳಾಗುತ್ತವೆ. ಶಾಂತಿ, ಸೌಹಾರ್ದತೆಯನ್ನು ಕಾಪಾಡಲು ಸರ್ಕಾರಿ ಆದೇಶ ನೀಡುವ ಹಂತಕ್ಕೆ ತಲುಪುತ್ತಿವೆ. ಕಾನೂನಿಗಿಂತ ಮಿಗಿಲಾಗಿ ಸಾರ್ವಜನಿಕರ ಸೌಹಾರ್ದಯುತ ವರ್ತನೆಗಳಿಲ್ಲಿ ಮುಖ್ಯ. ಭಾವನಾತ್ಮಕ ನೈತಿಕ ಕ್ರಿಯಾತ್ಮಕ, ಮಾನಸಿಕ ಸಂವೇದನೆಗಳು ಆಚರಣೆಯಲ್ಲಿ ಇನ್ನೂ ಹೆಚ್ಚು ಹೆಚ್ಚು ಪಾಲನೆಯಾಗಬೇಕಿದೆ.

ಎಲೆಗೌರಿ ಆಚರಣೆ, ಕುಂಭೋತ್ಸವ, ತೊಗೆರೊಟ್ಟಿ ಚೆನ್ನಮ್ಮನ ಆಚರಣೆ, ಕೊಂತಿಪೂಜೆ ಇವೆಲ್ಲ ಹೆಣ್ಣಿನ ಫಲವಂತಿಕೆಯನ್ನು ಸಂಕೇತಿಸುವ ಪ್ರಧಾನ ಆಚರಣೆಗಳಾಗಿವೆ. ಆಧುನಿಕತೆಯ ಸೆಳೆತಕ್ಕೆ ಬಲಿಯಾಗದೇ, ವಾಣಿಜ್ಯೀಕರಣಗೊಳ್ಳದೇ ಮೂಲಸ್ವರೂಪದಲ್ಲಿ ಆಚರಿಸಲ್ಪಡುತ್ತಿವೆ.

ವಟ್ಟು ಬಡಿಯುವುದು, ಹುತ್ತ ಮುರಿಯುವುದು, ಕೆಂಡ ತೂರುವುದು, ಪಂಜಿನ ಸೇವೆಗಳಂಥ ಆಚರಣೆಗಳು ಜನಪದರ ಬದುಕಿನ ಸಂಘರ್ಷ, ಹೋರಾಟ, ಶೌರ್ಯ ಪ್ರದರ್ಶನಗಳ ಜೊತೆ ನೈಜವಾಗಿ ಮನೋರಂಜನೆ

ನೀಡುವಂಥವುಗಳಾಗಿವೆ. ಸಾಮೂಹಿಕ ಸಹಭಾಗಿತ್ವ, ಐಕ್ಯತೆ, ಪರಸ್ಪರ ಸ್ನೇಹ ಸೌಹಾರ್ದತೆ ಇತ್ಯಾದಿ ಫಲಿತಾಂಶಗಳನ್ನು ಆಚರಣೆಗಳು ನೀಡುತ್ತಿವೆ.

ಕೃಷಿಕರು ಅವಿರತ ಶ್ರಮಿಕರು, ಆಚರಣೆಗಳ, ಹಬ್ಬಗಳ ಬಿಡುವಿನ ಕಾಲ ಅವರಿಗೆ ದಣಿವಾರಿಸಿಕೊಳ್ಳುವ ಸಮಯ. ಯುಗಾದಿ, ದಸರ, ದೀಪಾವಳಿ, ಶ್ರಾವಣಮಾಸದ ಸಂದರ್ಭಗಳಲ್ಲಿ ಕಣ್ಣಿಗೆ ಬಟ್ಟೆ ಕಟ್ಟಿ ಗಡಿಗೆ ಒಡೆಯುವುದು. ಲಿಂಬೆಹಣ್ಣು, ತೆಂಗಿನಕಾಯಿ ತೂರುವುದು ಇತ್ಯಾದಿ ಶೌರ್ಯ ಪ್ರದರ್ಶನದ ಜೊತೆ ಮನೋರಂಜನೆ ನೀಡುವ ಆಚರಣಾತ್ಮಕ ಆಟಗಳಾಗಿವೆ. ಇಂದು ಇಸ್ಪೀಟ್ ಆಟವಾಗಿ ಪರಿವರ್ತನೆಗೊಂಡಿವೆ. ಹೀಗೆ ಆಚರಣಾ ಮೂಲವಾದ ಸ್ಪರ್ಧೆಗಳಿಂದು ಅನಾರೋಗ್ಯಕರವಾದ ಜೂಜಾಟಗಳಾಗಿ, ಆರ್ಥಿಕ ಪ್ರಬಲತೆಯ ಶೋಕಿಜೀವನ ಹಾಗೂ ಪ್ರತಿಷ್ಠೆಯ ಸಂಕೇತವಾಗಿ ಸ್ಥಿತ್ಯಂತರಗೊಂಡಿವೆ.

ಎಲ್ಲಾ ಧರ್ಮಗಳ ಜನರು ಸೇರಿ ಆಚರಿಸುವ ಆಚರಣೆಗಳು ಸ್ಥಿತ್ಯಂತರಗೊಂಡು ತಮ್ಮ ತಮ್ಮ ಧಾರ್ಮಿಕ ಆಚರಣೆಗಳನ್ನು ತಾವು ಮಾಡಲು ಆರಂಭಿಸಿರುವುದನ್ನು ಕಾಣಲಾಗುತ್ತದೆ. ಇಂಥ ಸಂದರ್ಭದಲ್ಲಿ ಬೇರೊಂದು ಧರ್ಮಕ್ಕೆ, ಸಮುದಾಯಕ್ಕೆ, ಸಂಸ್ಕೃತಿಗೆ, ಕಾಲಕ್ಕೆ ಸಂಬಂಧಿಸಿದ ಮೊಹರಂ ಆಚರಣೆಯು ತಮ್ಮ ಗ್ರಾಮದ ಆಚರಣೆಯಾಗಿ ಸ್ಥಿತ್ಯಂತರಗೊಂಡಿರುವುದು ಗಮನಾರ್ಹ. ಬಳ್ಳಾರಿ ಜಿಲ್ಲೆಯಲ್ಲಿ ಮುಸ್ಲಿಂ ಬಾಂಧವರು ವಾಸವಿರದ ಗ್ರಾಮಗಳಲ್ಲೂ ಇಂದು ನಿಷ್ಠೆಯಿಂದ ಮೊಹರಂ ಆಚರಿಸಲ್ಪಡುತ್ತಿದೆ. ಜನಪದರಿಗಿರುವ ಸ್ಥಳೀಕರಿಸಿ ಕೊಳ್ಳುವ ಗುಣದ ಜೊತೆ ಜಾತಿ ಸಾಮರಸ್ಯ, ಪರಧರ್ಮ ಸಹಿಷ್ಣುತೆಯನ್ನು ಅಭಿವ್ಯಕ್ತಿಸುವ ಸಂಗತಿಯಾಗಿದೆ.

ಆಚರಣೆಗಳಲ್ಲಿ ಬಳಸಲ್ಪಡುವ ಉಡುಗೆ, ತೊಡುಗೆ, ಅಡುಗೆ, ಅಲಂಕಾರ, ಊಟ, ಉಪಚಾರ, ಬಣ್ಣದ ಬಳಕೆ, ಚಿತ್ರ, ರಂಗೋಲಿ, ಹಾಡು, ಕುಣಿತ, ನಡೆನುಡಿ, ಆಚಾರ-ವಿಚಾರಗಳನ್ನೆಲ್ಲಾ ವಿಭಿನ್ನವಾಗಿ ವಿಶ್ಲೇಷಣೆಗೆ ಒಳಪಡಿಸಿದಾಗ ಅವುಗಳೆಲ್ಲಾ ಧನಾತ್ಮಕ ಚಿಂತನೆಗಳನ್ನು ಹೊಂದಿರುವುದು ಕಂಡುಬಂದಿದೆ. ಆಚರಣೆಗಳಲ್ಲಿರುವ ಪ್ರತಿಯೊಂದು ಕ್ರಿಯೆಯು ಪ್ರಾಮುಖ್ಯತೆಯನ್ನು ಪಡೆದು, ಸೂಕ್ಷ್ಮವಾಗಿ ಅಧ್ಯಯನಕ್ಕೆ ಒಳಪಡಿಸುವ ಅಂಶಗಳಾಗಿವೆ. ಅವುಗಳ ಹಿಂದಿರುವ ಜನಪದರ ಮನಸ್ಸುಗಳ ಜಾಣ್ಮೆ ಬೆರಗುಂಟುಮಾಡುವಂತಿದೆ. ಇಂದಿನ ನಾಗರಿಕರ ದೃಷ್ಟಿಯಲ್ಲಿ ಅಶಿಕ್ಷಿತರೆಂದು ಕರೆಯಲ್ಪಡುವ ಜನಪದರ ಆಚರಣೆಗಳಲ್ಲಿ ವೈಜ್ಞಾನಿಕವಾಗಿ ಸಮರ್ಥ ಉತ್ತರ ನೀಡುವಂಥ ಅಂಶಗಳನ್ನು ಕಾಣಲಾಗುತ್ತಿದೆ. ಬಳ್ಳಾರಿ ಜಿಲ್ಲೆ ಇಂಥ ಹಲವಾರು ಆಚರಣೆಗಳಿಗೆ ಮೂಲ ನೆಲೆಯಾಗಿದೆ. ಪವಾಡ, ಬಲಿ, ದೇಹದಂಡನೆಯಂತಹ ಆಚರಣೆಗಳು ಸಾಕಷ್ಟು ಕಂಡುಬಂದಿವೆ. ಈ ಆಚರಣೆಗಳು ನೆರವೇರುವ ಸಮಯದಲ್ಲಿಯ ಭಕ್ತರ ಮಾನಸಿಕ ಸ್ಥಿತಿಯನ್ನು ಮನೋವೈಜ್ಞಾನಿಕ ನೆಲೆಯಲ್ಲಿ ಅವಲೋಕಿಸಿದಾಗ ಮತ್ತಷ್ಟು ಸೂಕ್ಷ್ಮ ಮಾಹಿತಿಗಳನ್ನು ತಿಳಿಯಲು ಸಾಧ್ಯವಿದೆ.

ರೋಗರುಜಿನಗಳು ಬಂದಾಗ ಜನ - ಜಾನುವಾರುಗಳು ಗ್ರಾಮ ತೊರೆಯುವುದರಿಂದ ರೋಗಾಣುಗಳು ನಾಶ ಹೊಂದುತ್ತವೆಂಬುದು ಜನಪದ ನಂಬಿಕೆ. ಈ ಹಿನ್ನೆಲೆಯಲ್ಲಿ ಕೂಡ್ಲಿಗಿ, ಮರಿಯಮ್ಮನಹಳ್ಳಿ ಪರಿಸರಗಳಲ್ಲಿ ಗುಳೆಲಕ್ಕಮ್ಮನ ಜಾತ್ರೆ ವಿಶೇಷವಾಗಿ ಆಚರಿಸಲ್ಪಡುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ ಗಾಳಿ ದೈವಗಳು ಗಾಳೆಮ್ಮನಾಗಿ, ಕಳುವೆಮ್ಮನಾಗಿ ರಕ್ಷಕ ದೈವವೆನ್ನುವುದಕ್ಕಿಂತ, ಶಿಕ್ಷಕ ದೈವಗಳಾಗಿ ಹೆಚ್ಚು ಪ್ರಚಲಿತದಲ್ಲಿವೆ. ಪಶುಪಾಲಕ, ವಲಸೆಗಾರ, ಬೇಡ ಸಮುದಾಯ ಹೊಂದಿರುವ ಗ್ರಾಮಗಳಲ್ಲಿ ಅಮ್ಮನ ಆಚರಣೆ ಹೆಚ್ಚಾಗಿ ಕಂಡುಬರುತ್ತವೆ.

ತೊಟ್ಟಿಮ್ಮ, ದೊಡ್ಡಮ್ಮ, ಸೀತ್ಲಾಪೂಜೆಗಳು ಅಮ್ಮನ ಆಚರಣೆಗಳಾಗಿವೆ. ಒಟ್ಟಾರೆಯಾಗಿ ಅಮ್ಮನ ಆಚರಣೆಗಳಲ್ಲಿ ವೈದ್ಯೋಪಚಾರವಿಲ್ಲದೇ, ರೋಗ ಗುಣಪಡಿಸುವ ಆಚರಣಾತ್ಮಕ ಉಪಚಾರಗಳು ಕಂಡುಬಂದಿವೆ. ಅವುಗಳಲ್ಲಿರುವ ವೈಚಾರಿಕ ದೃಷ್ಟಿಕೋನ ಹಾಗೂ ಆರೋಗ್ಯಪರ ಕಾಳಜಿಗಳಿಂದ ಇಂದಿಗೂ ಜನಮನ್ನಣೆ ಪಡೆದವುಗಳಾಗಿವೆ. ಈ ರೀತಿಯ ಮಾತೃಮೂಲ ನೆಲೆಯಲ್ಲಿ ಜನಪದ ಆಚರಣೆಗಳು ವಿಧಿವಿಧಾನಗಳು ದಿನನಿತ್ಯದ ಬದುಕಿನ ಏರುಪೇರುಗಳನ್ನು, ಚಿಂತನಾಕ್ರಮಗಳನ್ನು ಗಟ್ಟಿಗೊಳಿಸುವ ತಂತ್ರಗಾರಿಕೆ ಹೊಂದಿವೆ. ಅವು ಜೀವನೋತ್ಸಾಹ ಮೂಡಿಸುವಂಥವುಗಳಾಗಿವೆ.

ಹಗರಿಬೊಮ್ಮನಹಳ್ಳಿಯಲ್ಲಿ ಪ್ರಚಲಿತದಲ್ಲಿರುವ 'ಗಡಿಗೆ ಉಡಿ' ಆಚರಣೆಯಲ್ಲಿ ಉಡಿಯ ಮೂಲಕ ಉತ್ತಮ ತಳಿಬೀಜಗಳು ಊರಿಂದೂರಿಗೆ ರವಾನೆಯಾಗುತ್ತವೆ. ಇಂದಿನ ಆಧುನಿಕ ಯುಗದಲ್ಲಿಯೂ ಗಡಿಗೆಗಳು ಉಡಿಯ ರೂಪವನ್ನು ಪ್ರತಿನಿಧಿಸುತ್ತಿವೆ. ಜನಪದರು ಆಚರಣೆಗಳಲ್ಲಿ ಮಣ್ಣು, ತಾಮ್ರ, ಕಂಚಿನ ವಸ್ತುಗಳಿಗೆ ಪ್ರಾಶಸ್ತ್ಯ ನೀಡುತ್ತಾ ಬಂದಿದ್ದಾರೆ. ಕಾರಣ ಅವುಗಳಲ್ಲಿ ರಾಸಾಯನಿಕಗಳಿಲ್ಲವೆಂಬ ತಿಳುವಳಿಕೆ ಅವರಿಗಿತ್ತು. ಅಮ್ಮನ ಆಚರಣೆ, ಶಸ್ತ್ರ ಪವಾಡ, ಬಲಿ ಆಚರಣೆಗಳಲ್ಲಿ ರೋಗನಿರೋಧಕವಾಗಿ ನಿರ್ದಿಷ್ಟ ಪ್ರಮಾಣದ ಲೋಹಗಳು ಬಳಸಲ್ಪಡುತ್ತಿರುವುದನ್ನು ಗಮನಿಸಬೇಕು.

ಹಬ್ಬ ಆಚರಣೆಗಳಲ್ಲಿಯ ಆಹಾರ ಪದಾರ್ಥಗಳು ಔಷಧಿಯ ಗುಣ ಹೊಂದಿವೆ. ಆಯಾ ಋತುಮಾನಗಳಲ್ಲಿ ಸಮೃದ್ಧವಾಗಿ ದೊರೆಯುವ ಸಸ್ಯೋತ್ಪನ್ನಗಳಿಗೆ ಮಹತ್ವ ನೀಡುತ್ತಿರುವುದು ಕ್ಷೇತ್ರಕಾರ್ಯದಿಂದ ಕಂಡುಬಂದಿದೆ. ಋತುಮಾನದ ವೈಪರೀತ್ಯದಿಂದ ಸಮುದಾಯದ ಆರೋಗ್ಯದ ಮೇಲೆ ಆಗಬಹುದಾದ ಪರಿಣಾಮವನ್ನು ನಿಯಂತ್ರಿಸುವ, ಆರೋಗ್ಯಪಾಲನೆಯ ತತ್ವಗಳು ಆಚರಣೆಗಳಲ್ಲಿ ಗುಪ್ತಗಾಮಿನಿಯಾಗಿ ಮುಂದುವರಿಯುತ್ತಿದೆ.

ಜನಪದರು ಪ್ರಕೃತಿಯಲ್ಲಿ ದೈವತ್ವವನ್ನು ಕಂಡಿದ್ದಾರೆ. ಇಂದಿಗೂ ಜನ ಸಂಪರ್ಕವಿರದ ನಿರ್ಜನ ಪ್ರದೇಶಗಳಲ್ಲೂ ಆಚರಣೆಗಳು ನಡೆಯುತ್ತಿವೆ. ಯಾವುದೇ ಆಮಂತ್ರಣವಿರದೇ ವರ್ಷಕ್ಕೊಮ್ಮೆ ನಿಗದಿತ ಸಮಯದಲ್ಲಿ ಆಚರಣೆಯ ನೆಪದಲ್ಲಿ ಒಂದೆಡೆ ಸೇರುತ್ತಾರೆ. ಈ ಹಿನ್ನೆಲೆಯಲ್ಲಿ ಗುಡ್ಡದ ತಿಮ್ಮಪ್ಪನ ಜಾತ್ರೆ, ಜುಂಜಪ್ಪನ ತೋಪಿನ ಆಚರಣೆ ಹೀಗೆ ಹಲವಾರು ಆಚರಣೆಗಳು ಬಳ್ಳಾರಿ ಜಿಲ್ಲೆಯಲ್ಲಿ ಪ್ರಚಲಿತದಲ್ಲಿವೆ. ಇಲ್ಲಿ ಪರಸ್ಪರ ಅಗತ್ಯವಸ್ತುಗಳ ಖರೀದಿ, ಕುಶಲ ವಿಚಾರ ವಿನಿಮಯ, ಸಾಮೂಹಿಕ ನೃತ್ಯ, ಹಾಡುಗಳಿಂದ ಮನೋರಂಜನೆ ಪಡೆಯುತ್ತಾರೆ. ಇಂಥ ಉಪಯೋಗಿ ತತ್ವಗಳನ್ನು ಮೈಗೂಡಿಸಿಕೊಂಡ ಆಚರಣೆಗಳು ಆಧುನಿಕತೆಯ ಸ್ಪರ್ಶದಿಂದ ಮುಕ್ತವಾಗಿ ಇಂದಿಗೂ ಸಂಭ್ರಮದ ಆಚರಣೆಗಳಾಗಿ ಸಾಗಿಬಂದಿವೆ.

ಚರಗ ಚೆಲ್ಲುವ, ಬೆಚ್ಚು ನಿಲ್ಲಿಸುವ ಆಚರಣೆಗಳಲ್ಲಿ ಪ್ರಾಣಿ-ಪಕ್ಷಿಗಳನ್ನು ಹೆದರಿಸುವ ತಂತ್ರಗಾರಿಕೆಯಿದೆ. ಔಷಧಿಯಿಂದ ವಾಸಿಯಾಗದ ಫಸಲಿಗೆ ಬೀಳುವ ರೋಗಗಳು, ಆಚರಣೆಯಿಂದ ನಿವಾರಣೆಗೊಳ್ಳುತ್ತಿವೆ. ಮುಳ್ಳು ಕೃಷಿ ಚಟುವಟಿಕೆಗಳಲ್ಲಿ ರಕ್ಷಣಾ ಮೂಲವಾಗಿ ಬಳಸಲ್ಪಡುತ್ತದೆ.

ಜಿಲ್ಲೆಯಲ್ಲಿ ಹೆಚ್ಚಾಗಿ ಕೃಷಿ ಮೂಲ ಹೊಂದಿದ ಆಚರಣೆಗಳು ಪ್ರಚಲಿತದಲ್ಲಿವೆ. ಅವು ಪ್ರಕೃತಿಯೊಂದಿಗೆ ಗಾಢ ಸಂಬಂಧ ಬೆಸೆದುಕೊಂಡಿವೆ. ಹಸಿರುಕ್ರಾಂತಿಯ ಪರಿಣಾಮದಿಂದ ವೈವಿಧ್ಯಮಯ ಬೆಳೆ ಪದ್ಧತಿ ನಶಿಸಿ, ಏಕಬೆಳೆ ಪದ್ಧತಿ ಚಾಲ್ತಿಯಲ್ಲಿದೆ. ಸಾಂಪ್ರದಾಯಿಕ ತಳಿಗಳ ಬದಲಾಗಿ, ಹೈಬ್ರೀಡ್ ತಳಿಗಳು ಪಾದಾರ್ಪಣೆ ಮಾಡಿವೆ. ಈ ಎಲ್ಲಾ ಕಾರಣಗಳಿಂದ ಕೆಲವು ಆಚರಣೆಗಳು ಮೂಲಸ್ವರೂಪ ಕಳೆದುಕೊಳ್ಳುವ ಹಂತ ತಲುಪಿವೆ.

ಹೀಗೆ ಸಾಂಪ್ರದಾಯಿಕ ವಾತಾವರಣ ಇಲ್ಲವಾದರೆ ರೈತರ ಜೀವನಕ್ರಮ ಅಭದ್ರ - ಅತಂತ್ರ ಸ್ಥಿತಿ ತಲುಪುವ ಸಾಧ್ಯತೆಯಿದೆ. ಜನಪದರು ಹಲವಾರು ಆಚರಣೆಗಳ ಮೂಲಕ ಮಣ್ಣನ್ನು ಪೂಜನೀಯವಾಗಿಸಿದ್ದಾರೆ. ಹೊಲಕ್ಕೆ ಹೋಗುವಾಗ ಸಗಣಿ ಅಥವಾ ಹಿಡಿ ಮಣ್ಣನ್ನಾದರೂ ಒಯ್ಯುಬೇಕೆಂಬ ನಂಬಿಕೆ ಇದೆ. ಬಳ್ಳಾರಿ ಜಿಲ್ಲೆಯಲ್ಲಿ ಇಂದು ಮಣ್ಣು ಮಾರಾಟದ ಸರಕಾಗಿದೆ. ಆಧುನಿಕತೆಯ ಅಬ್ಬರದಲ್ಲಿ ವೈಜ್ಞಾನಿಕ ಅಭಿವೃದ್ಧಿ ಪಥದಲ್ಲಿ ಇರುವಂತೆ ಭ್ರಮಿಸಿರುವ ಇಂದಿನ ನಾಗರಿಕರು ತಾಳ್ಮೆಯಿಂದ ಯೋಚಿಸಬೇಕಿದೆ. ಹಿರಿಯರ ಜ್ಞಾನ ಶ್ರದ್ಧೆ, ಬೇಸಾಯ ಕ್ರಮಗಳು, ಸಮಷ್ಠಿ ಪ್ರಜ್ಞೆಗಳು ಆಚರಣೆಯ ಮೂಲಕ ಕಿರಿಯ ತಲೆಮಾರುಗಳಿಗೆ ಸರಿಯಾದ ಕ್ರಮದಲ್ಲಿ ರವಾನೆಯಾಗುತ್ತಿಲ್ಲ. ಈ ನೆಲಮೂಲ ಬದುಕಿನ ಆಶಯಗಳಿಗೆ ವರ್ತಮಾನದ ಸಂಗತಿಗಳು ಅಡ್ಡಿಪಡಿಸುತ್ತಿವೆ. ಈ ದುರಂತದಿಂದ ತಪ್ಪಿಸಿಕೊಳ್ಳಲು ಪುನಃ ಆಧುನಿಕ ಮಾನವ ಆಚರಣೆಗಳಿಗೆ ಮೊರೆ ಹೋಗಬೇಕಿದೆ. ಅವುಗಳ ಆಳದಲ್ಲಿಯ ಸಂದೇಶಗಳನ್ನು ಅರಿಯುವ ಪ್ರಯತ್ನವಾಗಬೇಕು. ದೈವೀಭಯದ ಹಿನ್ನೆಲೆಯಲ್ಲಿ ಜೀವಧಾತುವಿನ ಉಳಿಯುವಿಕೆಗೆ ಕಾರಣವಾಗುವ ಆಚರಣೆಗಳನ್ನು ಅಸಡ್ಡೆಯಿಂದ ನೋಡುವುದು ಸರಿಯಲ್ಲ. ಮೌಢ್ಯತೆಯನ್ನು ಬದಿಗೊತ್ತಿ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ಇಷ್ಟೆಲ್ಲಾ ತೊಡಕುಗಳ ಮಧ್ಯೆ, ಬರೀ ಗ್ರಾಮಗಳಷ್ಟೇ ಅಲ್ಲ, ಪಟ್ಟಣಗಳಲ್ಲೂ ಹಲವು ಸ್ಥಿತ್ಯಂತರದ ನಡುವೆ ಆಚರಣೆಗಳು ನಿತ್ಯನೂತನವಾಗಿ ಆಚರಿಸಲ್ಪಡುತ್ತಿರುವುದನ್ನು ಗಮನಿಸಬೇಕು. ರೈತರ ಒಡನಾಡಿಯಾದ ಬಸವ ಇಂದು ನಗರ ಪ್ರದೇಶಗಳಲ್ಲಿ ಬಣ್ಣ ಬಣ್ಣದ ಮಣ್ಣೆತ್ತಾಗಿ ಪೂಜಿಸಲ್ಪಡುತ್ತಿದೆ. ರೈತರ ಹಬ್ಬವಾದ ಬಸವಣ್ಣನ ಹಬ್ಬ, ಇಂದು ನಗರ ಪ್ರದೇಶಗಳಲ್ಲಿ ಬಸವ ಜಯಂತಿಯಾಗಿ ವೈಭವೀಕರಣಗೊಂಡಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಕರೆ ಹರಿಯುವುದು, ಕೊಂತಿ ಬಸವನ ಆಚರಣೆ ಜಾನುವಾರುಗಳನ್ನು ದೇವರಿಗೆ ಬಿಡುವುದು, ಮೌಲ್ಯಯುತವಾದ ಆಚರಣೆಗಳಾಗಿ ತಮ್ಮ ಮೂಲ ಸ್ವರೂಪದಲ್ಲೇ ಉಳಿದಿರುವುದನ್ನು ಬಳ್ಳಾರಿ ಜಿಲ್ಲೆಯಾದ್ಯಂತ ಕಾಣುತ್ತೇವೆ.

ಬಳ್ಳಾರಿ ಜಿಲ್ಲೆಯಲ್ಲಿ ನಾಗರಕಟ್ಟೆ, ನಾಗರಶಿಲ್ಪಗಳಿರದ ಗ್ರಾಮಗಳಿಲ್ಲ. ಸಂತಾನ ದೈವವಾದ ನಾಗಾರಾಧನೆಯ ಹಿನ್ನೆಲೆಯಲ್ಲಿ ತಮಗರಿಯದೇ ಜನಪದರು ರೂಢಿಸಿಕೊಂಡು ಬಂದಿರುವ ವೈಜ್ಞಾನಿಕ, ಮನೋವೈಜ್ಞಾನಿಕ ಸತ್ಯಾಂಶಗಳನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ. ಇಂದು ನಾಗರಪಂಚಮಿ ಸ್ತ್ರೀಯರ ಸಡಗರದ ಹಬ್ಬವಾಗಿದ್ದು ಬಂಧುಗಳ ನಡುವಿನ ಸಾಮರಸ್ಯವನ್ನು ಮಾನವ ಸಂಬಂಧಗಳ ನೆಲೆಯನ್ನು ಗಟ್ಟಿಗೊಳಿಸುವುದಾಗಿದೆ. ಕೃಷಿ ಅಭಿವೃದ್ಧಿ, ದೈಹಿಕ ವ್ಯಾಧಿ, ಮನೋರಂಜನೆ ಹೀಗೆ ಹಲವು ಉದ್ದೇಶಗಳ ಈಡೇರಿಕೆಯನ್ನು ಹಗರಿಬೊಮ್ಮನಹಳ್ಳಿ ಭಾಗದಲ್ಲಿ ನಡೆಯುವ ಹುತ್ತ ಮುರಿಯುವ ಆಚರಣೆಯಲ್ಲಿ ಕಾಣಲಾಗಿದೆ. ಹೀಗೆ ಆಚರಣೆಗಳಲ್ಲಿ ನೈಸರ್ಗಿಕ ಸಂಪನ್ಮೂಲಗಳಿಂದ ರೋಗ ನಿವಾರಿಸುವ ಕ್ರಮಗಳು ಅಂತರ್ಗತಗೊಂಡಿವೆ.

ಬಳ್ಳಾರಿಯಲ್ಲಿ ನಡೆಯುವ ಉಗ್ರದೇವತೆ ದುರುಗಮ್ಮನ ಸಿಡಿ ಉತ್ಸವ ವಿಶೇಷವಾಗಿದೆ. ಪ್ರಭಾವಶಾಲಿ ಹಾಗೂ ದೀರ್ಘಾವಧಿಯದ್ದಾದ ಮಾತೃಮೂಲ ಸಮಾಜದ ಪಳಿಯುಳಿಕೆಗಳು ಇಲ್ಲಿಯ ಆಚರಣೆಗಳಲ್ಲಿ ಕಾಣಸಿಗುತ್ತವೆ. ಬಳ್ಳಾರಿ ಜಿಲ್ಲೆಯಲ್ಲಿ ನಡೆಯುವ ಸಿಡಿ ಉತ್ಸವಗಳು, ಬಲಿ ಆಚರಣೆಗಳು ಇತಿಹಾಸದಲ್ಲಿ ಉಗ್ರ ಬಲಿ ಆಚರಣೆಗಳಾಗಿದ್ದು, ಇಂದು ಸಿಡಿಗಾಯಿ ಒಡೆಯುವುದು, ಬಾಳೆದಿಂಡಿನ ಆಚರಣೆಗಳಾಗಿ ಸ್ಥಿತ್ಯಂತರಗೊಂಡಿವೆ. ಪ್ರಾಣಿಕೇಂದ್ರಿತ ಉಗ್ರ ಆಚರಣೆಯಾದ ಕೊಟ್ಟೂರಿನ ಹಾರುಗೋಳಿ ರಥೋತ್ಸವವು, ಇಂದು ವಂಶಾಭಿವೃದ್ಧಿ ಪೋಷಣೆಯ ಆಚರಣೆಯ ಪ್ರತೀಕವಾಗಿ ಆಚರಿಸಲ್ಪಡುತ್ತಿವೆ.

ಒಟ್ಟಾರೆಯಾಗಿ ಆಚರಣೆಗಳಲ್ಲಿಯ ವಿಧಿ-ವಿಧಾನಗಳನ್ನು ಅವಲೋಕಿಸಿದಾಗ ಅವು ಹಲವಾರು ಜೀವಮುಖಿ ಅಂಶಗಳತ್ತ ಬೆಳಕು ಚೆಲ್ಲುತ್ತವೆ. ಅವುಗಳ ಮುನ್ನೆಡೆಗೆ ಭಕ್ತಿ, ನಂಬಿಕೆ, ಭಯದ ಲೇಪನವಿದೆ. ಇಂದಿನ ಜ್ಞಾನಿಗಳು ಜಾನಪದವೆಲ್ಲ ಅನಾಗರಿಕವಾದದ್ದು, ಮೌಢ್ಯಮೂಲವಾದದ್ದು ಎಂದು ತಿರಸ್ಕರಿಸದೆ, ಅವುಗಳಲ್ಲಿ ಅಡಗಿದ ಜೀವಮುಖಿ ಅಂಶಗಳನ್ನು ಸೂಕ್ಷ್ಮವಾಗಿ ಸಂಶೋಧನೆಗೆ ಒಳಪಡಿಸುವ ಅಗತ್ಯತೆಯಿದೆ. ಹಾಗಾದಾಗ ಮಾತ್ರ ಅದು ಜ್ಞಾನದ ಗಣಿಯಾಗುತ್ತದೆ. ಹೊಸ ಸಾಧ್ಯತೆಗಳ ಉಗಮಕ್ಕೆ ಮಾರ್ಗಸೂಚಿಯಾಗುತ್ತದೆ.

ಪಾಶ್ಚಾತ್ಯ ರಾಷ್ಟ್ರಗಳು ಹಳೆಯದರೊಂದಿಗೆ ಮುಂದೆ ಸಾಗುತ್ತಿವೆ. ನಾವಿಂದು ಹಿಂದಿನ ಸಂಪ್ರದಾಯಗಳನ್ನು ಬಿಟ್ಟು ಮುನ್ನೆಡೆಯುತ್ತಿದ್ದೇವೆ. ನಮ್ಮಲ್ಲಿಯ ಜನಪದ ಆಚರಣೆಗಳು ವಿದೇಶಿಯರನ್ನು ಬೆರಗುಗೊಳಿಸುತ್ತಿವೆ. ಹಂಪಿ, ಹೊಸಪೇಟೆ ಪರಿಸರದಲ್ಲಿ ವಿದೇಶಿಯರು ಆಚರಣೆಗಳಲ್ಲಿ ಪಾಲ್ಗೊಳ್ಳುವುದು ಇದಕ್ಕೆ ಸಾಕ್ಷಿ. ಬಳ್ಳಾರಿ ಜಿಲ್ಲೆಯಲ್ಲಿ ಜೀವಪೋಷಕವಾದ, ಪರಿಸರಸ್ನೇಹಿಯಾದ ಸಮಷ್ಟಿಹಿತ ಕಾಪಾಡುವ ಆಚರಣೆಗಳಿಗೆ ಕೊರತೆಯಿಲ್ಲ. ಅವುಗಳನ್ನು ಅಂತರ್‌ಶಿಸ್ತೀಯ ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸಿದಾಗ ಮತ್ತಷ್ಟು ಮಾಹಿತಿಗಳನ್ನು ಅರಿಯಲು ಸಾಧ್ಯವಿದೆ.

ಬಳ್ಳಾರಿ ಜಿಲ್ಲೆಯ ಆಚರಣೆಗಳಲ್ಲಿ ಕೆಲವು ಭಿನ್ನತೆಗಳಿದ್ದರೂ, ಆಚರಣೆಯ ಆಶಯ ಒಂದೇ ರೀತಿಯದ್ದಾಗಿದೆ. ಜನರ ಬದುಕಿನ ಸಿದ್ಧಾಂತವಾಗಿ, ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿ ಭೌಗೋಳಿಕ ವೈಚಿತ್ರ್ಯಗಳಿಗೆ ತಕ್ಕಂತೆ ವಿಶೇಷ ಮಾನ್ಯತೆಯನ್ನು ಪಡೆದುಕೊಂಡಿವೆ. ಜಿಲ್ಲೆಯ ಸಂಪೂರ್ಣ ಆಚರಣೆಗಳ ಅಧ್ಯಯನ ಪರಿಪೂರ್ಣಗೊಂಡಿದೆಯೆಂಬ ಹೆಗ್ಗಳಿಕೆಯ ಮಾತು ನನ್ನದಲ್ಲ. ಇನ್ನೂ ಈ ನೆಲೆಯಲ್ಲಿ ಮುಂದುವರಿಯುವವರಿಗೆ ವಿಪುಲವಾದ ಅವಕಾಶವಿದೆಯೆಂದು ಹೇಳಬಯಸುತ್ತೇನೆ.

ಪ್ರಸ್ತುತ ಅಧ್ಯಯನದ ಮುಖ್ಯ ಫಲಿತಗಳು

೧. ದೈವಕ್ಕೆ ಅರ್ಪಿತವಾದ ಕಾಡು, ಜಾನುವಾರುಗಳು ಸಾರ್ವಜನಿಕರಿಂದ ನಾಶವಾಗದೇ ಆಚರಣೆಯ ನೆಪದಲ್ಲಿ ಇಂದಿಗೂ ಪ್ರಕೃತಿ ಸಮತೋಲನವನ್ನು ಕಾಪಾಡುತ್ತಿವೆ.

೨. ಬಳ್ಳಾರಿ ಜಿಲ್ಲೆಯ ಬುಡಕಟ್ಟು ಸಮುದಾಯಗಳು ಮೂಲ ವೃತ್ತಿ ತ್ಯಜಿಸಿ ಆದಿರು ಉದ್ಯಮದಲ್ಲಿ ಸುರಕ್ಷಿತ ಕ್ರಮಗಳಿಲ್ಲದೆ ಕೂಲಿಗಳಾಗಿದ್ದು, ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಜಾತ್ರೆ, ಉತ್ಸವಗಳಲ್ಲಿ ವರ್ಷಕ್ಕೊಮ್ಮೆ ಕೃಷಿ ಉಪಯೋಗಿ ವಸ್ತುಗಳಾಗಿ ಮಾರಾಟವಾಗುತ್ತಿದ್ದ ಖನಿಜ ಸಂಪತ್ತಿಂದು ಪ್ರತಿದಿನದ ಮಾರಾಟದ ಸರಕಾಗುತ್ತಿರುವುದು ಆತಂಕಕಾರಿ ಸಂಗತಿಯಾಗಿದೆ. ಬುಡಕಟ್ಟು ಸಮುದಾಯಗಳ ಜಾತ್ರೆ, ಉತ್ಸವಗಳಲ್ಲಿ ಪ್ರದರ್ಶಿಸುತ್ತಿದ್ದ ಜನಪದ ಕಲೆ, ಕಸೂತಿ, ನೃತ್ಯ, ಕಲೆಗಳು ಕಣ್ಮರೆಯಾಗುತ್ತಿವೆ.

೩. ಜೀವಪರವಾದ, ಕೃಷಿಪರವಾದ, ಮನುಷ್ಯ ಸಂಸ್ಕೃತಿ ಕಟ್ಟಿಕೊಡುವ ಗಣಪ, ಕಾಮಣ್ಣ, ಓಕುಳಿ, ದೀಪಾವಳಿ ಹಬ್ಬಗಳಿಂದು ವ್ಯಾಪಾರೀಕರಣಗೊಳ್ಳುತ್ತಿವೆ. ಜಲಮಾಲಿನ್ಯ, ಶಬ್ದಮಾಲಿನ್ಯ, ವಾಯುಮಾಲಿನ್ಯ ಮತ್ತು ಪರಿಸರ ಮಾಲಿನ್ಯಗೊಳ್ಳುತ್ತಿದೆ.

೪. ಮನೋರಂಜನಾ ಕೇಂದ್ರಿತವಾದ ಆಚರಣಾತ್ಮಕ ಕ್ರೀಡೆಗಳಿಂದು, ಆರ್ಥಿಕ ಪ್ರಬಲರಿಂದ, ಹಣಕೇಂದ್ರಿತವಾದ, ಶೋಕಿ ಜೀವನದ, ಪ್ರತಿಷ್ಠೆಯ ಸಂಕೇತವಾಗಿ, ಅನಾರೋಗ್ಯಕರ ಜೂಜಾಟಗಳಾಗಿ ಸ್ಥಿತ್ಯಂತರಗೊಳ್ಳುತ್ತಿವೆ.

೫. ಅಮ್ಮನ ಆಚರಣೆಗಳಲ್ಲಿ ಗ್ರಾಮನೈರ್ಮಲ್ಯ, ಮಕ್ಕಳ ಅಪೌಷ್ಟಿಕತೆ ನಿವಾರಣೆ, ಸಾಂಕ್ರಾಮಿಕ ರೋಗಗಳಿಂದ ರಕ್ಷಿಸುವ ತಂತ್ರಗಾರಿಕೆಯಿದೆ. ಆಚರಣೆಯ ಮೂಲಕ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೊಂಡು ರೋಗ ಗುಣಪಡಿಸುವುದು ಕಂಡುಬಂದಿದೆ.

೬. ಉಗ್ರ ಬಲಿ ಆಚರಣೆಗಳಿಂದು, ವಂಶಾಭಿವೃದ್ಧಿ ಹಾಗೂ ಪ್ರಾಣಿ ಪೋಷಣೆಯ ಸರಳ ಆಚರಣೆಗಳಾಗಿ ಸ್ಥಿತ್ಯಂತರಗೊಂಡಿವೆ. ಬಲಿ ನಿಷೇಧಕ್ಕೆ ಸರ್ಕಾರದ ಬಿಗಿ ಕಾನೂನುಗಳಿದ್ದರೂ, ಅಲ್ಲಲ್ಲಿ ಇಂದಿಗೂ ಪ್ರಾಣಿಬಲಿ ನಡೆಯುತ್ತಿವೆ. ಒಂದೇ ಸಾರಿ ಸಾಕಷ್ಟು ಬಲಿ ನೀಡಿಕೆಯಿಂದ ಸ್ಥಳ ಮಲಿನತೆಯಾಗಿ, ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆಯಿದೆ. ವ್ಯವಸ್ಥಿತ ಸ್ಥಳ ನಿರ್ಮಾಣ, ಭಕ್ತರಿಗೆ ಸೂಕ್ತ ತಿಳುವಳಿಕೆ, ಸರ್ಕಾರ, ಸಂಘಟನೆ, ಸಾರ್ವಜನಿಕರ ಮಾರ್ಗದರ್ಶನದ ಅಗತ್ಯವಿದೆ.

೭. ಹೆಣ್ಣಿನ ಬದುಕುವ ಹಕ್ಕನ್ನು ಜೀವಂತವಾಗಿ ಸುಡುವ ಅಮಾನುಷ ಕೃತ್ಯಗಳು ನಿರ್ಮೂಲನೆ ಗೊಂಡಿದ್ದರೂ, ಅದರ ಪಳಿಯುಳಿಕೆ ರೂಪಗಳು ಇಂದಿನ ಮಾಸ್ತ್ಯಮ್ಮನ ಆಚರಣೆಯಲ್ಲಿ ಕಂಡುಬರುತ್ತವೆ.

೮. ಇಂದಿಗೂ ತೆರೆಮರೆಯಲ್ಲಿ ನೆರವೇರುವ ದೇವದಾಸಿ ಪದ್ಧತಿ ಸಂಪೂರ್ಣ ನಿಷೇಧಗೊಳ್ಳಬೇಕಿದೆ. ಸಮಾಜ, ಸಂಘಟನೆ, ಸರ್ಕಾರದ ಸಹಾಯದಿಂದ ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳು ಅನುಷ್ಠಾನವಾಗಬೇಕು. ಮೂಲಭೂತ ಸೌಲಭ್ಯಗಳು ಅವಶ್ಯಕವೆಂಬುದು ಈಗಾಗಲೇ ಈ ಸಂಪ್ರದಾಯಕ್ಕೆ ಬಲಿಯಾದವರ ಬೇಡಿಕೆಯಾಗಿದೆ.

೯. ದೈವೀ ಆರಾಧನೆಯ ಹಿನ್ನೆಲೆಯಲ್ಲಿ ಉಗಮಿಸಿದ ತೆಪ್ಪೋತ್ಸವ, ಸಿಡಿ ಉತ್ಸವ, ಕುಂಭೋತ್ಸವ, ಮೊಹರಂ ಊರೊಟ್ಟಿನ ಆಚರಣೆಗಳಾಗಿದ್ದು, ಪರಸ್ಪರ ಧಾರ್ಮಿಕ ಸಾಮರಸ್ಯ, ಸೌಹಾರ್ದತೆ, ಪ್ರೀತಿ, ವಾತ್ಸಲ್ಯ, ಆತ್ಮೀಯತೆ ವೃದ್ಧಿಸುವ ಆಶಯ ಹೊಂದಿವೆ.

೧೦. ಬಳ್ಳಾರಿ ಜಿಲ್ಲೆಯ ವಿಶೇಷ ಆಚರಣೆಗಳಾದ ವಟ್ಟು ಬಡಿಯುವ, ಕೆಂಡ ತೂರುವ, ಹುತ್ತಮುರಿಯುವ, ಪಂಜಿನ ಸೇವೆಯಂತಹ ಆಚರಣೆಗಳಲ್ಲಿ ಜನಪದರ ಬದುಕಿನ ಸಂಘರ್ಷ, ಹೋರಾಟ, ಶೌರ್ಯ ಪ್ರದರ್ಶನಗಳ ಜೊತೆ ನೈಜ ಮನೋರಂಜನೆ ನೀಡುವ ಅಂಶಗಳನ್ನು ಗುರುತಿಸಲಾಗಿದೆ.

೧೧. ವಾಹನ ಸೌಲಭ್ಯಗಳಿಲ್ಲದ ನಿರ್ಜನ ಪ್ರದೇಶದಲ್ಲಿ, ಯಾವುದೇ ಆಮಂತ್ರಣವಿರದೇ ನಿಗದಿತ ಸಮಯದಲ್ಲಿ ಜುಂಜಪ್ಪನ ತೋಪು ಹಾಗೂ ಗುಡ್ಡದ ತಿಮ್ಮಪ್ಪನ ಜಾತ್ರೆ ಇಂದಿಗೂ ನೆರವೇರುತ್ತವೆ. ಆಚರಣೆಯ ನೆಪದಲ್ಲಿ ಒಂದೆಡೆ ಸೇರುವುದು, ಪರಸ್ಪರ ಕುಶಲೋಪರಿ, ಅಗತ್ಯ ವಸ್ತು ಖರೀದಿ, ಸಾಮೂಹಿಕ ನೃತ್ಯ, ಹಾಡು, ಮನೋರಂಜನೆಗಳಂಥ ಉಪಯೋಗಿ ತತ್ವಗಳಿಂದ ಆಧುನಿಕತೆಯ ಸ್ಪರ್ಶದಿಂದ ಮುಕ್ತವಾಗಿ ಆಚರಿಸಲ್ಪಡುತ್ತಿವೆ.

೧೨. ಜಾನುವಾರುಗಳ ರೋಗರುಜಿನಗಳಿಗೆ ನೈಸರ್ಗಿಕ ಔಷಧೋಪಚಾರ, ಆರೈಕೆಗಳು ಜಾನುವಾರುಗಳಿಗೆ ಸಂಬಂಧಿಸಿದ ಆಚರಣೆಗಳಲ್ಲಿ ಕಂಡುಬಂದಿದ್ದು, ಅವುಗಳೊಂದಿಗಿನ ಮಾನವನ ಅವಿನಾಭಾವ ಸಂಬಂಧ ಗಟ್ಟಿಗೊಳಿಸುವ ಕ್ರಿಯೆಗಳಾಗಿವೆ.

೧೩. ಕೋಲೆ ಬಸವನ ಆಚರಣೆಯಲ್ಲಿ ಪೌರಾಣಿಕ ಪ್ರಜ್ಞೆ ಜಾಗೃತಗೊಳಿಸುವಿಕೆ, ಜೀವನಾದರ್ಶ ಮೌಲ್ಯಗಳ ಪ್ರತಿಪಾದನೆ, ಜನರನ್ನು ರಂಜಿಸುವ ಕಲಾತ್ಮಕತೆ ಇದೆ. ಕವಲೆತ್ತು ಆಡಿಸುವ ಸಮುದಾಯದವರು ಇಂದಿಗೂ ಅಲೆಮಾರಿಗಳಾಗಿದ್ದು, ಅವರ ಮಕ್ಕಳು ಅನಕ್ಷರರಾಗಿದ್ದು, ಉದ್ಯೋಗಾವಕಾಶಗಳಿಂದ ವಂಚಿತರಾಗುತ್ತಿದ್ದಾರೆ.

೧೪. ಹುತ್ತಮುರಿಯುವ ಆಚರಣೆಯಲ್ಲಿ ಪರಸ್ಪರ ಪ್ರೀತಿ, ಸಲುಗೆ, ಮನೋರಂಜನೆ ಜೊತೆಗೆ ದೈಹಿಕ ವ್ಯಾಧಿಗಳ ನಿವಾರಣಾ ಕ್ರಮ ಕಂಡುಬಂದಿದೆ.

೧೫. ಮೊಹರಂ ಹಾಗೂ ಕೊಂಡ ಹಾಯುವ ಆಚರಣೆಗಳ ನೆಪದಲ್ಲಿ ಪರಿಸರ ನಾಶ ಮಾಡದೇ, ಪ್ರಕೃತಿ ಸಮತೋಲನ ಕಾಪಾಡಿಕೊಳ್ಳುವ ನೆಲೆಯಲ್ಲಿ ಉರುವಲಿನ ಮಿತ ಬಳಕೆ ಅಥವಾ ಪರ್ಯಾಯ ವ್ಯವಸ್ಥೆ ಬಗ್ಗೆ ಗಮನಹರಿಸಬೇಕಾಗಿದೆ.

೧೬. ದೈವದ ಹೆಸರಲ್ಲಿ ಮುದ್ರೆ ಹಾಕಿಸಿಕೊಂಡ ದಾಸ-ದಾಸಿಯರು ದೈವದ ಪರಿಚಾರಕರೆಂದು ಗುರುತಿಸಿಕೊಳ್ಳುತ್ತಾರೆ. ಇವರು ತಪ್ಪು ಮಾಡುವಂತಿಲ್ಲ, ಸುಳ್ಳು ಹೇಳುವಂತಿಲ್ಲ, ಇವರಿಗಿರುವ ವಿಧಿನಿಷೇಧಗಳು ದೈವೀಭಯದ ನೆರಳಲ್ಲಿ ಸಮಾಜವನ್ನು ಸುಸ್ಥಿತಿಯಲ್ಲಿಡುವ ಆಶಯವಿದೆ.

❑❑❑

ಅನುಬಂಧ

೧. ಪರಾಮರ್ಶನ ಗ್ರಂಥಗಳು

೨. ವಕ್ತೃ ವಿವರ

೩. ಸಾಂಸ್ಕೃತಿಕ ಪದಕೋಶ

೪. ಜನಪದ ಹಾಡುಗಳು

೫. ಛಾಯಾಚಿತ್ರಗಳು

೧. ಪರಾಮರ್ಶನ ಗ್ರಂಥಗಳು

೧. ಅಂಬಳಿಕೆ ಹಿರಿಯಣ್ಣ, ೧೯೯೯, ಮಲೆನಾಡಿನ ವೈಷ್ಣವ ಒಕ್ಕಲಿಗರ ಸಂಸ್ಕೃತಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೨. ಅರವಿಂದ ಮಾಲಗತ್ತಿ (ಪ್ರ.ಸಂ.), ೨೦೦೬, ಕನ್ನಡ ವಿಷಯ ವಿಶ್ವಕೋಶ (ಜಾನಪದ), ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೩. ಅರವಿಂದ ಮಾಲಗತ್ತಿ (ಪ್ರ.ಸಂ.), ೧೯೯೯, ಜಾನಪದ ತತ್ತ್ವಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೪. ಆರ್ಯಾಂಬ ಪಟ್ಟಾಬಿ, ೨೦೦೮, ಲೇಖಾನುಬಂಧ (ಲೇಖನಗಳ ಸಂಕಥನ), ರವಿ ಪಬ್ಲಿಕೇಷನ್ಸ್ ಚಾಮರಾಜಪುರ, ಮೈಸೂರು.

೫. ಇಮ್ರಾಪುರ ಎಸ್.ಜಿ. (ಸಂ.), ೧೯೯೩, ಜಾನಪದ ಸಾಹಿತ್ಯ ದರ್ಶನ (ಭಾಗ-೧೮), ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೬. ಈಶ್ವರಪ್ಪ ಎಂ.ಜಿ., ೧೯೯೯, ಜಾನಪದ ಇಬ್ಬನಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೭. ಈರಯ್ಯ ಕಿಲ್ಲೇದಾರ, ೨೦೦೮, ಸಾಂಪ್ರದಾಯಿಕ ಒಕ್ಕಲುತನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೮. ಕರಿಬಸಪ್ಪ ಎ., ೨೦೦೩, ಬಳ್ಳಾರಿ ಜಿಲ್ಲೆಯ ಐತಿಹ್ಯಗಳು, ಪುಸ್ತಕ ಪ್ರಾಧಿಕಾರ, ಬೆಂಗಳೂರು.

೯. ಕಲಬುರ್ಗಿ ಎಂ.ಎಂ. (ಸಂ.), ೧೯೯೪, ಆಕಾಶ ಜಾನಪದ (ಜಾನಪದ ಸಾಹಿತ್ಯ ದರ್ಶನ), ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೦. ಕಲಬುರ್ಗಿ ಎಂ.ಎಂ. (ಸಂ.), ೧೯೮೭, ಜಾನಪದ ಸಾಹಿತ್ಯ ದರ್ಶನ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೧. ಕಡ್ಲಬಾಳ ಪನ್ನಂಗಧರ, ೨೦೧೧, ಹಂಪಸಾಗರ ಗಂಗಾಂಬಿಕೆ (ಚರಿತ್ರೆ, ಸಂಸ್ಕೃತಿ ಮತ್ತು ದೈವಗಳ ಅಧ್ಯಯನ), ಅಭಿವ್ಯಕ್ತಿ, ಹಂಪಸಾಗರ, ಬಳ್ಳಾರಿ ಜಿಲ್ಲೆ.

೧೨. ಕ್ಯಾತನಹಳ್ಳಿ ರಾಮಣ್ಣ, ೧೯೮೫, ಕೊಂತಿ ಪೂಜೆ : ಒಂದು ಅಧ್ಯಯನ, ಉಷಾ ಪ್ರೆಸ್, ಮೈಸೂರು.

೧೩. ಕುಡಂತಾಯ ಕೆ.ಎಲ್., ೨೦೦೩, ನಂಬಿಕೆ ನಡವಳಿಕೆ, ಸರಸ್ವತಿ ಪ್ರಕಾಶನ, ಕುಂಜೂರು.

೧೪. ಕೃಷ್ಣಮೂರ್ತಿ ಅಗ್ರಹಾರ, ೧೯೭೬, ಬೆಳ್ಳಿಂಗೃಪ್ಪನ ಪೂಜೆ, ಮುಂಗಾರು ಪ್ರಕಾಶನ, ಬೆಂಗಳೂರು.

೧೫. ಕೃಷ್ಣಮೂರ್ತಿ ಹನೂರು, ೧೯೯೩, ಮ್ಯಾಸಬೇಡರು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೧೬. ಕೃಷ್ಣಯ್ಯ ಎಸ್.ಎ. (ಸಂ.), ೧೯೯೨, ಬಾಚಿಗೊಂಡನಹಳ್ಳಿ ಮತ್ತು ಏಣಗಿ ಬಸಾಪುರದ ಜಾನಪದ ಗೀತೆಗಳು, ಪ್ರಾದೇಶಿಕ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ.

೧೭. ಟಿ.ಎಸ್. ವೇಣುಗೋಪಾಲ ಮತ್ತು ಶೈಲಜಾ (ಅನುವಾದ), ಕೊಸಾಂಬಿ ಡಿ.ಡಿ. (ಮೂಲ), ೨೦೧೧, ಪ್ರಾಚೀನ ಭಾರತದ ಸಂಸ್ಕೃತಿ ಮತ್ತು ನಾಗರೀಕತೆ, ಚಿಂತನ ಪುಸ್ತಕ ಪ್ರಕಾಶನ, ಬೆಂಗಳೂರು ೪೧.

೧೮. ಖಂಡೋಬ ಪಿ.ಕೆ., ೧೯೯೩, ಜಾನಪದ ಮುನ್ನೋಟ, ಸಂಗೀತ ಪಬ್ಲಿಕೇಶನ್ಸ್, ಗುಲ್ಬರ್ಗಾ.

೧೯. ಗದ್ದಗಿಮಠ ಬಿ.ಎಸ್., ೧೯೮೮, ಗದ್ದಗಿಮಠರ ಬರಹಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೨೦. ಗವೀಶ ಹಿರೇಮಠ (ಸಂ.), ೨೦೦೭, ಸುಡುಗಾಡು ಸಿದ್ಧರು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೨೧. ಗಾಯತ್ರಿ ನಾವಡ, ೧೯೯೯, ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು, ಸಿರಿ ಪ್ರಕಾಶನ, ಹೊಸಪೇಟೆ.

೨೨. ಗಾಯತ್ರೀ ನಾವಡ, ೨೦೦೩, ಮಹಿಳಾ ಸಂಕಥನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೨೩. ಗುರುದೇವ್ ಆರ್. ಮಾಗಡಿ ಡಾ., ೨೦೦೪, ಕರ್ನಾಟಕ ಜಾನಪದೀಯ ಸಸ್ಯಗಳು, ದಿವ್ಯಚಂದ್ರ ಪ್ರಕಾಶನ, ಬೆಂಗಳೂರು.

೨೪. ಗುರುಪ್ರಸಾದ್ ಸಿ.ಟಿ., ೨೦೦೫, ಏಳು ಊರಿನ ದೇವತೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೨೫. ಗುರುಪ್ರಸಾದ್ ಎಚ್.ಎಸ್., ೨೦೦೮, ವಲಸಿಗರ ನೆಲೆ : ಮರಿಯಮ್ಮನಹಳ್ಳಿ ಸಂಕಥನ, ಅಪರಂಜಿ ಪ್ರಕಾಶನ, ಚಿಕ್ಕಮಗಳೂರು.

೨೬. ಗುರುಮೂರ್ತಿ ಕೆ.ಜಿ., ೧೯೭೯, ಜನಪದ ಸಮಾಜ ಮತ್ತು ಸಂಸ್ಕೃತಿ, ಪ್ರಸಾರಾಂಗ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨೭. ಗೋವಿಂದರಾಜು ಟಿ., ೧೯೯೩, ಗೊಂಬೆರಾಮರ ಸಂಸ್ಕೃತಿ, (ಉಪಸಂಸ್ಕೃತಿ ಅಧ್ಯಯನ ಮಾಲೆ), ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೨೮. ಗೋವಿಂದರಾಜು ಟಿ. (ಸಂ.), ೨೦೦೩, ಜನಪದ ವೈದ್ಯ, ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ, ಬೆಂಗಳೂರು.

೨೯. ಗೋವಿಂದರಾಜು ಟಿ., ೨೦೦೬, ಪ್ರಾಚ್ಯ ಜಾನಪದ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೩೦. ಚಕ್ಕೆರೆ ಶಿವಶಂಕರ್, ೨೦೦೩, ಜನಪದ ತಂತ್ರಜ್ಞಾನ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೩೧. ಚಲುವರಾಜು, ೨೦೦೦, ಹಂಪಿಯ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೩೨. ಚಿದಂಬರಯ್ಯ ಅಳಿಲಘಟ್ಟ, ೨೦೦೯, ದೇವರು ಹಾಗೂ ಪ್ರಕೃತಿಯಲ್ಲಿ ದೇವತಾರಾಧನೆ, ಹೇಮಂತ ಸಾಹಿತ್ಯ ಪ್ರಕಾಶನ, ರಾಜಾಜಿನಗರ, ಬೆಂಗಳೂರು.

೩೩. ಚಿದಾನಂದಮೂರ್ತಿ ಎಂ., ೧೯೭೭, ಗ್ರಾಮೀಣ, ಮಲ್ಲಿಗೆ ಗ್ರಂಥಮಾಲೆ-೩೧, ಬೆಂಗಳೂರು.

೩೪. ಚಿದಾನಂದಮೂರ್ತಿ ಎಂ., ೨೦೦೨, ಜನ-ಜನಪದ-ಜಾನಪದ (ಸಂಪುಟ-೨), ಸಪ್ನ ಬುಕ್‌ಹೌಸ್, ಬೆಂಗಳೂರು.

೩೫. ಚಿನ್ನಪ್ಪಗೌಡ ಕೆ., ೨೦೦೦, ಸೇರಿಗೆ, ಮದಿಪು ಪ್ರಕಾಶನ, ಮಂಗಳಗಂಗೋತ್ರಿ, ಮಂಗಳೂರು.

೩೬. ಚೇತನ ಕುಮಾರ ಆರ್., ೨೦೧೦, ಜನಪದ ವೃತ್ತಿಗಾಯಕರು, ಶುಭೋದಯ ಪ್ರಕಾಶನ, ಸಿರುಗುಪ್ಪ, ಬಳ್ಳಾರಿ.

೩೭. ಜಯಲಕ್ಷ್ಮೀ ಸೀತಾಪುರ, ೨೦೦೪, ಜನಪದ ಒಕ್ಕಲು, ತಳಗವಾದಿ ಪ್ರಕಾಶನ, ಮೈಸೂರು.

೩೮. ಜಗನ್ನಾಥ ಹೆಬ್ಬಾಳೆ, ೧೯೯೫, ವೀರಭದ್ರ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೩೯. ಜೀನಹಳ್ಳಿ ಸಿದ್ಧಲಿಂಗಪ್ಪ, ೧೯೮೨, ಜಾನಪದ ಸಂಯೋಜನೆ, ಪ್ರೇಮ ಪ್ರಕಾಶನ, ಜೀನಹಳ್ಳಿ, ದಾವಣಗೆರೆ.

೪೦. ಜ್ಯೋತಿ ಶಶಿಕುಮಾರ್, ೨೦೦೭, ಮಹಿಳಾ ಸಾಮಾಜಿಕತೆ, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೪೧. ತಲ್ವಾಡಿ ಬಿ.ಎಸ್., ೨೦೦೪, ದಕ್ಷಿಣ ಕರ್ನಾಟಕ ಕ್ರೈಸ್ತ ಜನಪದ ಸಾಹಿತ್ಯ, ಭರತ್ ಪ್ರಕಾಶನ, ಬನಶಂಕರಿ, ಬೆಂಗಳೂರು.

೪೨. ದಯಾನಂದ ಕಿನ್ನಾಳ, ೨೦೧೦, ಬಳ್ಳಾರಿ ಜಿಲ್ಲೆಯ ರಂಗಭೂಮಿ, ಪ್ರಭುದೇವರ ಜನಕಲ್ಯಾಣ ಸಂಸ್ಥೆ, ವಿರಕ್ತಮಠ, ಸಂಡೂರು.

೪೩. ದಾದಾಪೀರ್ ಬಿ.ಸಿ., ೧೯೯೩, ಪಿಂಜಾರರ ಸಂಸ್ಕೃತಿ (ಉಪಸಂಸ್ಕೃತಿ ಅಧ್ಯಯನ ಮಾಲೆ), ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೪೪. ದಾಸೇಗೌಡ ಜಿ.ವಿ., ೧೯೭೩, ನಮ್ಮ ಜನಪದ ನಂಬಿಕೆಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೪೫. ದುರ್ಗಾದಾಸ್ ಕೆ.ಆರ್., ೧೯೯೬, ಬಳ್ಳಾರಿ ಜಿಲ್ಲೆಯ ಬಯಲಾಟಗಳು, ಸಮತಾ ಪ್ರಕಾಶನ, ಬೆಳಗಾವಿ.

೪೬. ನಾಗಯ್ಯ ಜೆ.ಎಂ., ೧೯೯೧, ಬಳ್ಳಾರಿ ಜಿಲ್ಲೆಯ ಶಾಸನಗಳು, ೧೯೯೧, ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ.

೪೭. ನಾಗಯ್ಯ ಜೆ.ಎಂ., ೨೦೦೨, ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ, ಲೋಹಿಯಾ ಪ್ರಕಾಶನ, ಬಳ್ಳಾರಿ.

೪೮. ನಾಗಲೋಟಿಮಠ ಸ.ಜ., ೨೦೧೦, ಆರೋಗ್ಯಪಾಲನೆ ಮತ್ತು ಮೂಢ ಆಚಾರಗಳು, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು.

೪೯. ನಾಗಲೋಟಿಮಠ ಸ.ಜ., ೨೦೦೧, ಉತ್ತರ ಕರ್ನಾಟಕದಲ್ಲಿ ಪ್ರಾಣಿ ಬಲಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೫೦. ನಾಯಕ್ ಡಿ.ಬಿ., ೧೯೯೪, ಲಂಬಾಣಿ ಸಂಸ್ಕೃತಿ (ಉಪ ಸಂಸ್ಕೃತಿ ಅಧ್ಯಯನ ಮಾಲೆ), ೧೯೯೪, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೫೧. ನಾಯಕ್ ಡಿ.ಬಿ., ೨೦೦೨, ದೇಶಿ ಸಂಸ್ಕೃತಿ, ಬಂಜಾರ ಪ್ರಕಾಶನ, ಗುಲ್ಬರ್ಗಾ.

೫೨. ನಾಯಕ ಹಾ.ಮಾ., ೧೯೯೭, ಕರ್ನಾಟಕ ವಿಷಯ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೫೩. ನಾರಾಯಣಸ್ವಾಮಿ ಕೆ.ವೈ., ೨೦೦೦, ನೀರದೀವಿಗೆ, ಲೋಹಿಯಾ ಪ್ರಕಾಶನ, ಬಳ್ಳಾರಿ.

೫೪. ನಿಂಗಣ್ಣ ಸಣ್ಣಕ್ಕಿ, ೧೯೯೩, ಗೊಂದಲಿಗರ ಸಂಸ್ಕೃತಿ (ಉಪ ಸಂಸ್ಕೃತಿ ಅಧ್ಯಯನ ಮಾಲೆ), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೫೫. ಪರಮೇಶ್ವರಪ್ಪ ಟಿ. (ಸಂ.), ೧೯೯೬, ಹಂಪಿ ಪರಂಪರೆ, ಶ್ರೀ ವಿದ್ಯಾವಿಜಯನಗರ ಹಂಪಿ ಹೆರಿಟೇಜ್ ಟ್ರಸ್ಟ್, ಆನೆಗೊಂದಿ, ಹೊಸಪೇಟೆ.

೫೬. ಪುರುಷೋತ್ತಮ ಬಿಳಿಮಲೆ, ೧೯೯೦, ಕರಾವಳಿ ಜಾನಪದ, ಮಂಗಳಗಂಗೋತ್ರಿ, ದಕ್ಷಿಣ ಕನ್ನಡ ಜಿಲ್ಲೆ.

೫೭. ಪುರುಷೋತ್ತಮ ಬಿಳಿಮಲೆ, ೧೯೯೭, ಕೂಡುಕಟ್ಟು, ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ.

೫೮. ಪುರುಷೋತ್ತಮ ಬಿಳಿಮಲೆ, ೨೦೦೮, ಜನ ಸಂಸ್ಕೃತಿ (ಜಾನಪದ ಲೇಖನಗಳು), ಕನ್ನಡ ಸಂಘ, ಕ್ರೈಸ್ಟ್ ಯುನಿವರ್ಸಿಟಿ, ಬೆಂಗಳೂರು.

೫೯. ಪುರುಷೋತ್ತಮ ಬಿಳಿಮಲೆ, ೧೯೯೫, ಹಂಪಿ ಜಾನಪದ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೬೦. ಬಸವರಾಜ ಪೊಲೀಸ್ ಪಾಟೀಲ, ೨೦೦೧, ಜಾನಪದ ಚಿಂತನೆ, ಅಮರ ಪ್ರಕಾಶನ, ಕಲ್ಬುರ್ಗಿ.

೬೧. ಬಸವರಾಜ ವಿ. ಮೂಲಿಮನಿ, ೨೦೦೧, ಹಾಲೋಕುಳಿ, ವಿಶ್ವಾಸ್ ಪ್ರಿಂಟ್ಸ್, ಬೆಂಗಳೂರು.

೬೨. ಬಸವರಾಜ ಸಬರದ (ಪ್ರ.ಸಂ.), ಹೆಚ್.ಟಿ. ಪೋತೆ (ಸಂ.), ೨೦೦೮, ಜಾನಪದ ಆಯಾಮಗಳು, ಕನ್ನಡ ಅಧ್ಯಯನ ಸಂಸ್ಥೆ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ.

೬೩. ಬಿರಾದಾರ ಮ.ಗು., ೧೯೮೭, ಜಾನಪದ ಜೀವಾಳ, ಪುಸ್ತಕ ಅಕಾಡೆಮಿ, ಕಲ್ಬುರ್ಗಿ.

೬೪. ಬೆಟಗೇರಿ ಕೃಷ್ಣಶರ್ಮ, ೨೦೧೧, ನಮ್ಮ ಸಂಸ್ಕೃತಿ ಪರಂಪರೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೬೫. ಬೋರಲಿಂಗಯ್ಯ ಹಿ.ಚಿ., ೧೯೯೬, ಕರ್ನಾಟಕ ಜಾನಪದ ಕಲೆಗಳ ಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೬೬. ಬೋರಲಿಂಗಯ್ಯ ಹಿ.ಚಿ., ೧೯೯೪, ದಾಸಪ್ಪ-ಜೋಗಪ್ಪ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೬೭. ಭಾನುಮತಿ ವೈ.ಸಿ., ೧೯೯೪, ಮಲೆನಾಡಿನ ಶೈವ ಒಕ್ಕಲಿಗರು, ಜಾನಪದೀಯ ಅಧ್ಯಯನ, ಮಿತ್ರ ಪ್ರಿಂಟರ್ಸ್, ವಿದ್ಯಾರಣ್ಯಪುರಂ, ಮೈಸೂರು.

೬೮. ಮಂಜುನಾಥ ಬೇವಿನಕಟ್ಟಿ, ೨೦೦೩, ಜನ ಜಾನಪದ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೬೯. ಮಲ್ಲಿಕಾರ್ಜುನ ಕುಂಬಾರ, ೨೦೧೦, ಜಾನಪದ ಲೇಖನಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೭೦. ಮಲ್ಲಿಕಾರ್ಜುನ ಹೊಸಪಾಳ್ಯ, ೨೦೦೮, ಕೃಷಿ ಆಚರಣೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೭೧. ಮಹದೇವ ಸಿ. (ಸಂ.), ೨೦೧೨, ಮೈಲಾರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೭೨. ಮಾಧವ ಐತಾಳ್ (ಕನ್ನಡ ಅನುವಾದ), ವಂದನಾಶಿವ (ಮೂಲ), ೨೦೦೫, ಬತ್ತದ ಚಿಲುಮೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೭೩. ಮೂಲಗಿ ಆರ್.ಬಿ., ೨೦೧೦, ಜನಪದ ಸಂಪ್ರದಾಯಗಳು, ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ.

೭೪. ಮೃತ್ಯುಂಜಯ ಹೊರಕೇರಿ, ೧೯೯೮, ರೈತ ಜಾನಪದ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೭೫. ಮೊಗಳ್ಳಿ ಗಣೇಶ್, ೨೦೦೫, ಆದಿಮ, ಸಾರಂಗ, ತಿಪಟೂರು.

೭೬. ಮೊಗಳ್ಳಿ ಗಣೇಶ್, ೨೦೦೬, ಮೌಖಿಕ ಕಥನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೭೭. ಮೋಹನ್ ಎಸ್., ೨೦೧೦, ನಾಗಾರಾಧನೆ : ಪರಂಪರೆ ಮತ್ತು ಸ್ಥಿತ್ಯಂತರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೭೮. ಯಳನಾಡು ಅಂಜನಪ್ಪ, ೧೯೯೩, ಹಗಲುವೇಷದವರ ಸಂಸ್ಕೃತಿ (ಉಪಸಂಸ್ಕೃತಿ ಅಧ್ಯಯನ ಮಾಲೆ), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೭೯. ರಂಗಾರೆಡ್ಡಿ ಕೋಡಿರಾಂಪುರ, ೨೦೧೦, ಜನಪದ ಸಂಸ್ಕೃತಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೮೦. ರಮೇಶ್ ಸ.ಚಿ., ೨೦೧೦, ಕರ್ನಾಟಕದ ಜನಪದ ಆಚರಣೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೮೧. ರಮೇಶ್ ಸ.ಚಿ., ೨೦೦೮, ಕರಾವು, ಅಂಶು ಪ್ರಕಾಶನ, ಹೊಸಪೇಟೆ.

೮೨. ರಮೇಶ್ ಸ.ಚಿ. (ಸಂ.), ೨೦೧೧, ಜಾನಪದ ಸೆಲೆ, ಅಖಿಲ ಭಾರತ ಜಾನಪದ ಸಮ್ಮೇಳನ, ಬೀದರ.

೮೩. ರಮೇಶ್ ಸ.ಚಿ., ೨೦೧೧, ಬಲೀಂದ್ರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೮೪. ರಮೇಶ್ ಸ.ಚಿ., ೨೦೦೫, ಬುನಾದಿ : ಜಾನಪದ ಅಧ್ಯಯನ ಲೇಖನಗಳು, ಅಂಶು ಪ್ರಕಾಶನ, ಹೊಸಪೇಟೆ.

೮೫. ರಮೇಶ್ ಸ.ಚಿ., ೨೦೦೫, ನೀರು : ಒಂದು ಜಾನಪದ ನೋಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೮೬. ರಾಜಶೇಖರ ನೆಗಳೂರ, ೨೦೦೫, ಬಳ್ಳಾರಿ ಜಿಲ್ಲೆಯ ಪ್ರದರ್ಶನ ಕಲೆಗಳು, ಸಾರಾ ಎಂಟರ್‌ಪ್ರೈಸರ್ಸ್, ಸುಭಾಷ್‌ನಗರ, ಮೈಸೂರು.

೮೭. ರಾಮಚಂದ್ರೇಗೌಡ ಹಿ.ಶಿ., ೨೦೦೯, ಜನಪದ ಸಂಸ್ಕೃತಿ, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು.

೮೮. ರಾಮಕೃಷ್ಣ ಜಿ. (ಅನುವಾದ), ದೇವಿಪ್ರಸಾದ ಚಟ್ಟೋಪಾಧ್ಯಾಯ (ಮೂಲ), ೨೦೧೧, ಲೋಕಾಯತ, ನವಕರ್ನಾಟಕ ಪಬ್ಲಿಕೇಷನ್ಸ್, ಪ್ರೈ.ಲಿ., ಬೆಂಗಳೂರು.

೮೯. ರುದ್ರಪ್ಪ ಕೆ., ೧೯೯೪, ಬಳ್ಳಾರಿ ಜಿಲ್ಲೆಯ ಜನಪದ ಸಾಹಿತ್ಯ, ಶ್ರೀ ಸಿದ್ಧವೀರ ಶಿವಾಚಾರ್ಯ ಜ್ಞಾನ ಪ್ರಕಾಶನ ಪುರ.

೯೦. ಲಕ್ಕಪ್ಪಗೌಡ ಎಚ್.ಜೆ. (ಸಂ.), ೧೯೮೪, ವಿಶಿಷ್ಟ ಜಾನಪದ, ಸ್ನಾತಕೋತ್ತರ ಕೇಂದ್ರ, ಬಿ.ಆರ್. ಪ್ರಾಜೆಕ್ಟ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೯೧. ಲಕ್ಕಪ್ಪಗೌಡ ಎಚ್.ಜೆ. (ಸಂ.), ೧೯೯೮, ಸುವರ್ಣ ಜಾನಪದ, ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ, ಬೆಂಗಳೂರು.

೯೨. ಲಕ್ಷ್ಮೀದೇವಿ ಎಸ್., ೨೦೦೭, ಗ್ರಾಮ ಹಾಗೂ ಶಿಷ್ಟ ದೇವತೆಗಳು, ಚಿತ್ಕಾಲ ಪ್ರಕಾಶನ, ಕುಪ್ಪಂ.

೯೩. ಲಿಂಗಯ್ಯ ಡಿ. ಪ್ರೊ., ಚಕ್ಕೆರೆ ಶಿವಶಂಕರ್, ೨೦೦೮, ದೈವ ಜಾನಪದ, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು.

೯೪. ವಾಲಿ ಎಂ.ಎನ್., ೨೦೦೬, ಕೃಷಿ ಜಾನಪದ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೯೫. ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೨, ಅಕ್ಕಮ್ಮನ ಆಚರಣೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೯೬. ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೬, ಚಿನ್ನಹಗರಿ ಸಿರಿ, ಚಿನ್ನಹಗರಿ ಪ್ರಕಾಶನ, ಪೂಜಾರಹಳ್ಳಿ, ಬಳ್ಳಾರಿ ಜಿಲ್ಲೆ.

೯೭. ವಿವೇಕ ರೈ ಬಿ.ಎ., ೧೯೯೫, ಅನ್ವಯಿಕ ಜಾನಪದ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೯೮. ವೀರೇಶ ಬಡಿಗೇರ, ೧೯೯೬, ರಾಶಿಬುತ್ತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.
೯೯. ವೀರೇಶ ಬಡಿಗೇರ, ೨೦೦೯, ಸಂಸ್ಕೃತಿ ಸಂಕಥನ, ಮಯ ಪ್ರಕಾಶನ, ಕಮಲಾಪುರ, ಬಳ್ಳಾರಿ ಜಿಲ್ಲೆ.
೧೦೦. ವೆಂಕಟೇಶ ಇಂದ್ವಾಡಿ (ಸಂ.), ೨೦೦೨, ದೇವ-ದೇವಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.
೧೦೧. ಶಂಕರನಾರಾಯಣರಾವ್ ಎನ್.ಪಿ., ೨೦೦೫, ಪಂಜಿರಿಯರವ (ಸಮಾಜ ಮತ್ತು ಜಾನಪದ ಇತಿಹಾಸ), ಅಭಿನವ ಪ್ರಕಾಶನ, ಬೆಂಗಳೂರು.
೧೦೨. ಶಾರದಾ ಶಾಮಣ್ಣ, ೧೯೯೩, ಜಾನಪದದ ನೆಲೆಯಲ್ಲಿ ಮಹಿಳೆ, ಕಳಸ ಪ್ರಕಾಶನ ಶಂಕರಪುರ, ಬೆಂಗಳೂರು.
೧೦೩. ಶಾಲಿನಿ ರಘುನಾಥ (ಪ್ರ.ಸಂ.), ೨೦೦೯, ಜಾನಪದ ಸಾಹಿತ್ಯ ದರ್ಶನ-೨೯ (ಜಾನಪದ ಸಂಶೋಧನೆ), ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
೧೦೪. ಶಾಸ್ತ್ರಿ ಎಸ್.ಆರ್., ೧೯೮೦, ದೇವಾಲಯಗಳು ಮತ್ತು ಲೈಂಗಿಕ ಶಿಲ್ಪ, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು.
೧೦೫. ಶಿವರಾಮ ಶೆಟ್ಟಿ ಬಿ., ೨೦೦೦, ಸಸ್ಯ ಜಾನಪದ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.
೧೦೬. ಶ್ರೀಮತಿ ಎಚ್.ಎಸ್., ೨೦೦೯, ಸ್ತ್ರೀವಾದಿ ಭಾಷಾಶಾಸ್ತ್ರ ಪ್ರವೇಶಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.
೧೦೭. ಷಹಸೀನಾ ಬೇಗಂ, ೨೦೦೦, ಕರ್ನಾಟಕ ಮುಸ್ಲಿಂ ಜಾನಪದ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
೧೦೮. ಸಬಿಹಾ ಭೂಮಿಗೌಡ., ೨೦೦೮, ಮಹಿಳೆ : ಸಂಘಟನೆ ಮತ್ತು ಹೋರಾಟ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
೧೦೯. ಸಂಧ್ಯಾರೆಡ್ಡಿ ಕೆ.ಆರ್. (ಸಂ.), ೨೦೦೩, ಮಹಿಳಾ ಜಾನಪದ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.
೧೧೦. ಸಂಪಟೂರು ವಿಶ್ವನಾಥ್ (ಸಂ.), ೨೦೦೭, ಹಬ್ಬಗಳು ಮತ್ತು ದಿನಾಚರಣೆಗಳು, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು.
೧೧೧. ಸಿದ್ಧಗಂಗಪ್ಪ ಎಚ್.ಎಚ್., ೨೦೦೮, ಜನಪದ ಹಬ್ಬಗಳು, ಶ್ರೀ ಸಿದ್ಧಗಂಗಾ ಪ್ರಕಾಶನ, ತುಮಕೂರು.
೧೧೨. ಸಿದ್ಧಲಿಂಗಯ್ಯ, ೧೯೯೭, ಗ್ರಾಮದೇವತೆ, ಮಾಲತಿ ಪ್ರಕಾಶನ, ಬೆಂಗಳೂರು.
೧೧೩. ಸುಂಕಾಪುರ ಎಂ.ಎಸ್. (ಸಂ.), ೧೯೭೪, ಜೀವನ ಜೋಕಾಲಿ - ಹೋಳಿ ಹಾಡುಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
೧೧೪. ಸುಬ್ಬಣ್ಣ ರೈ, ೧೯೯೮, ಗಾಳಿಮ್ಮ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.
೧೧೫. ಸುಮಿತ್ರ ಎಂ., ೨೦೦೨, ಕರಗ ಸಂಪ್ರದಾಯ, ಅಂಕಿತ ಪ್ರಕಾಶನ, ಬೆಂಗಳೂರು.

೧೧೬. ಸುರೇಶ್ ಕೆ.ಎಂ., ೨೦೦೧, **ಕರ್ನಾಟಕ ದೇವಾಲಯಗಳ ಕೋಶ : ಬಳ್ಳಾರಿ ಜಿಲ್ಲೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೧೧೭. ಸೋಮಣ್ಣ, ೨೦೦೦, **ಕೊಂತಿಪೂಜೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೧೧೮. ಸೋಮಶೇಖರ ಇಮ್ರಾಪುರ (ಪ್ರ.ಸಂ.), ೨೦೦೧, **ಜಾನಪದ ಸಾಹಿತ್ಯ ದರ್ಶನ (ಪರಿಸರ ಮತ್ತು ಜನಪದ ಸಂಸ್ಕೃತಿ)**, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೧೯. ಸೋಮಶೇಖರ ಬಿ.ಎಸ್., ೨೦೦೮, **ಆಹಾರ ಮತ್ತು ಆರೋಗ್ಯ**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೧೨೦. ಹಂಪ ನಾಗರಾಜಯ್ಯ, ೧೯೮೫, **ಆಕಾಶ ಜಾನಪದ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೨೧. ಹಿರಿಯಣ್ಣ ಎ., ೧೯೭೮, **ಕಾಡುಗೊಲ್ಲರ ಜಾನಪದ ಗೀತೆಗಳು**, ಕನ್ನಡ ಅಧ್ಯಯನ ಸಂಸ್ಥೆ, ಬೆಂಗಳೂರು.

೧೨೨. ಹಿರೇಮಠ ಎಸ್.ಎಸ್., ೧೯೯೩, **ಜಾತ್ರೆಗಳು**, ಸಮತಾ ಪ್ರಕಾಶನ, ಹೊಸಪೇಟೆ.

೧೨೩. ಹಿರೇಮಠ ಎಸ್.ಎಸ್., ೨೦೧೦, **ಯೋಗದರ್ಶನ**, ಸಮತಾ ಪ್ರಕಾಶನ, ಸಾಣೆಕೊಪ್ಪ, ಬೆಳಗಾವಿ.

೧೨೪. ಹಿರೇಮಠ ಎಸ್.ಎಸ್., ೧೯೯೨, **ಹಬ್ಬಗಳು**, ಸಮತಾ ಪ್ರಕಾಶನ, ಹರಪನಹಳ್ಳಿ.

೧೨೫. ಹುರಿಕಡ್ಲಿ ಶಿವಕುಮಾರ ಹಾಗೂ ಇತರರು (ಸಂ.), ೧೯೯೮, **ಸೂರ್ಯಕಾಂತಿ (ಸ್ಮರಣ ಸಂಚಿಕೆ)**, ಹಗರಿಬೊಮ್ಮನಹಳ್ಳಿ.

ಅಪ್ರಕಟಿತ ಪ್ರಬಂಧಗಳು

೧. ಗೋವಿಂದ, ೨೦೦೧, ಬಳ್ಳಾರಿ ಜಿಲ್ಲಾ ಜನಪದ ದೈವಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ತಿಪ್ಪೇಸ್ವಾಮಿ ಬಿ., ೨೦೦೭, **ಮೋಕ : ಒಂದು ಸಾಂಸ್ಕೃತಿಕ ಅಧ್ಯಯನ (ಎಂ.ಫಿಲ್)**, ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ (ಆಂಧ್ರಪ್ರದೇಶ).

ನಿಯತಕಾಲಿಕೆಗಳು

೧. ಪರಮಶಿವಯ್ಯ ಜೀ.ಶಂ., (ಸಂ.), ೧೯೯೩, **ಜಾನಪದ ಗಂಗೋತ್ರಿ (ಸಂಪುಟ ೬, ಸಂಚಿಕೆ ೧)**, ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ, ಬೆಂಗಳೂರು.

೨. ಮಂಜುನಾಥ ಬೇವಿನಕಟ್ಟಿ (ಸಂ.), ೨೦೦೯, **ಜಾನಪದ ಕರ್ನಾಟಕ (ಸಂಪುಟ ೭, ಸಂಚಿಕೆ-೨)**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೩. ಲಕ್ಕಪ್ಪಗೌಡ ಎಚ್.ಜೆ. (ಸಂ.), ೧೯೯೭, **ಜಾನಪದ ಗಂಗೋತ್ರಿ (ಸಂಪುಟ ೯, ಸಂಚಿಕೆ ೨)**, ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ, ಬೆಂಗಳೂರು.

೪. ರಮೇಶ್ ಸ.ಚಿ. (ಸಂ.), ೨೦೧೦, **ಜಾನಪದ ಕರ್ನಾಟಕ (ಸಂಪುಟ ೯, ಸಂಚಿಕೆ ೨)**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೫. ರಮೇಶ್ ಸ.ಚಿ. (ಸಂ.), ೨೦೦೪, ಜಾನಪದ ಕರ್ನಾಟಕ (ಸಂಪುಟ ೪, ಸಂಚಿಕೆ ೧), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೬. ರುದ್ರಯ್ಯ ಎಂ.ಬಿ., ೧೯೯೫, ಸದ್ಧರ್ಮ ಸ್ಮರಣ ಸಂಚಿಕೆ, ಕನ್ನಡ ಸಾಹಿತ್ಯ ಪರಿಷತ್ತು, ಕೂಡ್ಲಿಗಿ.

೭. ಹೆಬ್ಬಾಲೆ ಕೆ. ನಾಗೇಶ್ (ಸಂ.), ೨೦೦೬, ಜಾನಪದ ಕರ್ನಾಟಕ, ಸಂಪುಟ-೫, ಸಂಚಿಕೆ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೮. ಹೆಬ್ಬಾಲೆ ಕೆ. ನಾಗೇಶ್ (ಸಂ.), ೨೦೦೬, ಜಾನಪದ ಕರ್ನಾಟಕ, ಸಂಪುಟ-೫, ಸಂಚಿಕೆ-೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೯. ಹೆಬ್ಬಾಲೆ ಕೆ. ನಾಗೇಶ್ (ಸಂ.), ೨೦೦೭, ಜಾನಪದ ಕರ್ನಾಟಕ, ಸಂಪುಟ-೬, ಸಂಚಿಕೆ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೧೦. ಹೆಬ್ಬಾಲೆ ಕೆ. ನಾಗೇಶ್ (ಸಂ.), ೨೦೦೭, ಜಾನಪದ ಕರ್ನಾಟಕ, ಸಂಪುಟ-೬, ಸಂಚಿಕೆ-೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ದಿನಪತ್ರಿಕೆಗಳು

೧. ಪ್ರಜಾವಾಣಿ ದಿನಪತ್ರಿಕೆ

೨. ವಿಜಯ ಕರ್ನಾಟಕ ದಿನಪತ್ರಿಕೆ

೩. ಕನ್ನಡ ಪ್ರಭ ದಿನಪತ್ರಿಕೆ

೪. ಸುಧಾ ವಾರಪತ್ರಿಕೆ

೫. ತರಂಗ ವಾರಪತ್ರಿಕೆ

□□□

೨. ವಕ್ತೃಗಳ ವಿವರ

ಕೂಡ್ಲಿಗಿ

ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ	ಊರು
೧.	ಗೊಂಚಿಗಾರ ಬೋರಯ್ಯ	೭೦	ವ್ಯವಸಾಯ	ಪೂಜಾರಹಳ್ಳಿ
೨.	ಚಿತ್ತಮ್ಮ	೬೦	ವ್ಯವಸಾಯ	ಗೊಲ್ಲರಹಟ್ಟಿ
೩.	ಚಿನ್ನಮ್ಮ	೭೦	ವ್ಯವಸಾಯ	ಶಿವಪುರ
೪.	ಚಂದ್ರಪ್ಪ ಗೆದ್ದಲಗಟ್ಟೆ	೫೦	ವ್ಯವಸಾಯ	ಗೆದ್ದಲಗಟ್ಟೆ
೫.	ನಡುವಲಮನೆ ತಿಪ್ಪೇಸ್ವಾಮಿ	೫೫	ವ್ಯವಸಾಯ	ಗೆದ್ದಲಗಟ್ಟೆ
೬.	ನಾಗರಾಜ	೬೫	ವ್ಯವಸಾಯ	ಕಾನಾಮಡುಗು
೭.	ಬಣಕಾರ ಸಿದ್ಧಪ್ಪ	೭೦	ವ್ಯವಸಾಯ	ಐಯ್ಯಗಳ ಮಲ್ಲಾಪುರ
೮.	ಬಂಡ್ರಿದೇವೀರಪ್ಪ	೫೦	ವ್ಯವಸಾಯ	ಕ್ಯಾಸನಕೆರೆ
೯.	ಭೀಮಣ್ಣ	೫೫	ಪತ್ರಕರ್ತರು	ಗಜಾಪುರ
೧೦.	ಯರ‍್ರಿಸ್ವಾಮಿ	೫೦	ವ್ಯಾಪಾರಿ	ಕೊಟ್ಟೂರು
೧೧.	ರವಿಕುಮಾರ್ ಎನ್.ಎಮ್.	೫೫	ಬರಹಗಾರರು	ಕಾನಾಹೊಸಳ್ಳಿ
೧೨.	ಲಲ್ಯಾನಾಯಕ	೬೫	ವ್ಯವಸಾಯ	ಶ್ರೀಕಂಠಾಪುರ ತಾಂಡ
೧೩.	ವೃಷಭೇಂದ್ರ	೪೫	ಪತ್ರಕರ್ತರು	ಕೂಡ್ಲಿಗಿ
೧೪.	ಸಣ್ಣಯ್ಯ	೬೦	ವ್ಯವಸಾಯ	ಗೊಲ್ಲರಹಟ್ಟಿ
೧೫.	ಸಣ್ಣವೀರಪ್ಪ	೬೦	ಮಠದ ಮುಖ್ಯಸ್ಥರು	ಉಜ್ಜಯಿನಿ
೧೬.	ಸರೋಜಮ್ಮ	೫೦	ಮನೆಗೆಲಸ	ನೆಲ್ಕುದುರೆ
೧೭.	ಸಾಕಮ್ಮ	೬೦	ವ್ಯವಸಾಯ	ಹಿರೇಹೆಗ್ಡಾಳ್
೧೮.	ಸಿದ್ಧನಗೌಡ	೫೫	ವ್ಯವಸಾಯ	ವಿರೂಪಾಪುರ
೧೯.	ಸಿದ್ಧರಾಮಹಿರೇಮಠ	೫೦	ಉಪನ್ಯಾಸಕರು	ಕೂಡ್ಲಿಗಿ
೨೦.	ಹನುಮಂತಪ್ಪ	೭೦	ವ್ಯವಸಾಯ	ಕ್ಯಾಸನಕೆರೆ
೨೧.	ಹುಲ್ಲುಬಸಪ್ಪ	೮೦	ವ್ಯವಸಾಯ	ಕಕ್ಕುಪ್ಪಿ

ಬಳ್ಳಾರಿ

ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ	ಊರು
೧.	ಅಕ್ಕಿಗಂಗಮ್ಮ	೬೦	ವ್ಯವಸಾಯ	ಚಾನಾಳ್
೨.	ಅಂಬಮ್ಮ ಚೆಲವಾದಿ	೬೫	ಕೂಲಿ	ಕೊರ್ಲಗುಂದಿ
೩.	ಎರಿಸ್ವಾಮಿ	೬೦	ವ್ಯವಸಾಯ	ಪರಮದೇವರಹಳ್ಳಿ
೪.	ಕಟ್ಟಂಬಲಿ ರಾಮಪ್ಪ	೬೫	ವ್ಯವಸಾಯ	ಹಂದ್ಯಾಳ್
೫.	ಕೊಲ್ಲಮ್ಮ	೬೦	ವ್ಯವಸಾಯ	ಹೊಸಯರಗುಡಿ
೬.	ಗಾದೆಪ್ಪ	೭೫	ವ್ಯವಸಾಯ	ವದ್ದಟ್ಟಿ
೭.	ಗುರುಬಸಮ್ಮ	೬೫	ವ್ಯವಸಾಯ	ಹೊಣೆನೂರು
೮.	ಚನ್ನಬಸಮ್ಮ	೫೦	ವ್ಯವಸಾಯ	ಬಸರಕೋಡು
೯.	ಜಯಕೃಷ್ಣ	೬೦	ವ್ಯವಸಾಯ	ಸಿಂದುವಾಳ
೧೦.	ತಿಪ್ಪೇಸ್ವಾಮಿ .ಟಿ.	೪೦	ಶಿಕ್ಷಕರು	ಜಾಲಿಹಾಳು
೧೧.	ತಿಮ್ಮಪ್ಪ	೫೫	ವ್ಯವಸಾಯ	ಗೋನಾಳ್
೧೨.	ತಿಮ್ಮಪ್ಪ	೬೦	ಕೂಲಿ	ಶಿವಪುರ
೧೩.	ನರಸಿಂಗಪ್ಪ	೬೫	ವ್ಯವಸಾಯ	ಹಂದ್ಯಾಳ್
೧೪.	ನಾಗರಾಜ	೬೦	ವ್ಯವಸಾಯ	ಬೊಮ್ಮನಾಳ
೧೫.	ಪಾಲಮ್ಮ	೫೦	ಕೂಲಿ	ರೂಪನಗುಡಿ
೧೬.	ಬಸವರಾಜ ಟಿ.ಎಚ್.ಎಂ.	೭೦	ಜಾನಪದ ಕಲಾವಿದರು	ಬಳ್ಳಾರಿ
೧೭.	ಭೀಮರೆಡ್ಡಿ	೬೫	ವ್ಯವಸಾಯ	ಕೊರ್ಲುಗುಂದಿ
೧೮.	ಪ್ರಭುಲಿಂಗಸ್ವಾಮಿಗಳು	೫೫	ಪೂಜಾರಿ	ಕುರುಗೋಡು
೧೯.	ಮಲ್ಲಿಕಾರ್ಜುನ	೬೦	ವ್ಯವಸಾಯ	ಹಗರಿ
೨೦.	ಮಲ್ಲಯ್ಯ ವಗ್ಗರು	೬೦	ವ್ಯವಸಾಯ	ಮಹಾನಂದಿಕೊಟ್ಟಂ
೨೧.	ಮಹೇಶ್‌ಗೌಡ	೫೫	ವ್ಯವಸಾಯ	ಯರಂಗಳಗಿ
೨೨.	ರಹೀಮ್	೫೦	ವ್ಯವಸಾಯ	ಜಾಲಿಹಾಳ್
೨೩.	ರಾಮಚಂದ್ರ	೬೦	ಕೂಲಿ	ಕೊಳಗಲ್ಲು
೨೪.	ರಾಮಾಂಜಿನಿ	೪೦	ಕೂಲಿ	ಕುಂಟನಾಳ್
೨೫.	ಶಾಂತಪ್ಪ	೬೫	ವ್ಯವಸಾಯ	ಸಂಗನಕಲ್ಲು
೨೬.	ಶಾಂತಮ್ಮ	೫೫	ಕೂಲಿ	ಹಡ್ಲಿಗಿ
೨೭.	ಸಿದ್ಧಮ್ಮ	೫೫	ವ್ಯವಸಾಯ	ಹೊಸಯರಗುಡಿ
೨೮.	ಹನುಮಂತರೆಡ್ಡಿ	೬೫	ನಿವೃತ್ತ ಉಪನ್ಯಾಸಕರು	ಕುರುಗೋಡು
೨೯.	ಹೊನ್ನೂರಸ್ವಾಮಿ	೬೫	ವ್ಯವಸಾಯ	ರೂಪನಗುಡಿ

ಹಗರಿಬೊಮ್ಮನಹಳ್ಳಿ

ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ	ಊರು
೧.	ಇಟಗಿ ಕಲ್ಲೇಶಪ್ಪ	೭೦	ಲೇಖಕರು	ಹಗರಿಬೊಮ್ಮನಹಳ್ಳಿ
೨.	ಈರಮ್ಮ	೫೫	ವ್ಯವಸಾಯ	ಬಾಚಿಗೊಂಡನಹಳ್ಳಿ
೩.	ಈಶಪ್ಪ	೭೦	ವ್ಯಾಪಾರ	ಉತ್ತಂಗಿ
೪.	ಓಂಪ್ರಕಾಶ್	೫೫	ವ್ಯವಸಾಯ	ಹೊಸಕೆರೆ
೫.	ಕರಿಯಪ್ಪ	೫೫	ಶಿಕ್ಷಕರು	ಬಸರಕೋಡು
೬.	ಕಾಸೀಮ್‌ಸಾಬ್	೮೨	ವ್ಯವಸಾಯ	ಬಾಚಿಗೊಂಡನಹಳ್ಳಿ
೭.	ಕುಮಾರ್	೨೮	ಸಂಶೋಧನಾ ವಿದ್ಯಾರ್ಥಿ	ನೆಲ್ಕುದರಿ
೮.	ಗುರುಮೂರ್ತಿ ಪೆಂಡಕೂರ್	೭೦	ಸಾಹಿತಿ	ರಾಮನಗರ
೯.	ಗುರುಸಿದ್ಧಯ್ಯ ಹಿರೇಮಠ	೬೫	ವ್ಯವಸಾಯ	ಕಡ್ಲಬಾಳು
೧೦.	ಗಂಗಮ್ಮ ಹುರಿಕಡ್ಲಿ	೫೯	ವ್ಯವಸಾಯ	ಬಾಚಿಗೊಂಡನಹಳ್ಳಿ
೧೧.	ಗಂಗಮ್ಮ ಹೆಚ್.ಎಂ.	೫೫	ವ್ಯವಸಾಯ	ಬಾಚಿಗೊಂಡನಹಳ್ಳಿ
೧೨.	ದೇವೀರಮ್ಮ	೬೦	ಗೃಹಿಣಿ	ನೆಲ್ಕುದ್ರಿ
೧೩.	ನಾಗಮ್ಮ	೫೦	ವ್ಯವಸಾಯ	ಮೊರಗೆರೆ
೧೪.	ಪದ್ಮಾವಿಠಲ್	೬೦	ಸಮಾಜಸೇವಕರು	ರಾಮನಗರ
೧೫.	ಪರ್ವತಪ್ಪ	೫೦	ವ್ಯವಸಾಯ	ಮೊರಗೆರೆ
೧೬.	ಪ್ರಭುಲಿಂಗ	೬೦	ವ್ಯವಸಾಯ	ಮೊರಗೆರೆ
೧೭.	ಬಾಲನಗೌಡ್ರ ಬಸವನಗೌಡ	೮೭	ವ್ಯವಸಾಯ	ಅಂಬಳಿ
೧೮.	ಮೇಟಿಕೊಟ್ರಪ್ಪ	೭೯	ಲೇಖಕರು	ಬಸರಕೋಡು
೧೯.	ರತ್ನಮ್ಮ	೪೫	ವ್ಯವಸಾಯ	ನೆಲ್ಕುದುರೆ
೨೦.	ರೇಣುಕ	೪೫	ವ್ಯವಸಾಯ	ಬಾಚಿಗೊಂಡನಹಳ್ಳಿ
೨೧.	ವೀರಬಸಪ್ಪ	೭೦	ವಿಶ್ರಾಂತಿ	ಹಗರಿಬೊಮ್ಮನಹಳ್ಳಿ
೨೨.	ವೇದಮೂರ್ತಿ	೪೦	ವೈದ್ಯರು	ಹಗರಿಬೊಮ್ಮನಹಳ್ಳಿ
೨೩.	ಸಿದ್ಧಲಿಂಗಮ್ಮ	೬೫	ಗೃಹಿಣಿ	ಹಗರಿಬೊಮ್ಮನಹಳ್ಳಿ
೨೪.	ಹುರಿಕಡ್ಲಿ ಶಿವಕುಮಾರ	೬೦	ಬರಹಗಾರರು/ ವ್ಯವಸಾಯ	ಬಾಚಿಗೊಂಡನಹಳ್ಳಿ

ಹೂವಿನಹಡಗಲಿ

ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ	ಊರು
೧.	ಅನ್ನಪೂರ್ಣಮ್ಮ	೬೮	ವ್ಯವಸಾಯ	ಮೈಲಾರ
೨.	ಈಶ್ವರಪ್ಪ	೮೦	ವ್ಯವಸಾಯ	ಇಟಗಿ
೩.	ಎಂ.ಪಿ.ಎಂ. ಕೊಟ್ರಸ್ವಾಮಿ	೫೦	ಶಿಕ್ಷಕರು	ಹಡಗಲಿ
೪.	ಜಯಲಿಂಗಪ್ಪ ಎತ್ತನಹಳ್ಳಿ	೫೦	ವ್ಯವಸಾಯ	ಹೊಳಲು
೫.	ತಾಯಮ್ಮ	೫೯	ವ್ಯವಸಾಯ	ಮುದೇನೂರು
೬.	ಪಾರ್ವತಮ್ಮ	೬೫	ವ್ಯವಸಾಯ	ಹಡಗಲಿ
೭.	ಬಸವರಾಜಪ್ಪ ಹಲವಾಗಲು	೪೮	ವ್ಯವಸಾಯ	ಲಿಂಗನಾಯ್ಕನಹಳ್ಳಿ
೮.	ರೇಣುಕ	೫೫	ವ್ಯವಸಾಯ	ಅಡವಿಮಲ್ಲನಕೆರೆ
೯.	ಲಿಂಗಪ್ಪ ಇಟಗಿ	೫೬	ವ್ಯವಸಾಯ	ಮೈಲಾರ
೧೦.	ಶಾಂತಮೂರ್ತಿ ಕುಲಕರ್ಣಿ	೫೮	ಉಪನ್ಯಾಸಕರು	ಹಡಗಲಿ
೧೧.	ಶಾಂತಮ್ಮ ನೀರಿಗೆ	೪೦	ವ್ಯವಸಾಯ	ಹೊಲಳು
೧೨.	ಶಿವಾನಂದಪ್ಪ	೫೦	ವ್ಯವಸಾಯ	ಕುರುವತ್ತಿ
೧೩.	ಶೈಲಜಾ ಪವಾಡ ಶೆಟ್ರು	೩೦	ಉಪನ್ಯಾಸಕರು	ಮೈಲಾರ
೧೪.	ಸೋಮಣ್ಣ ಪೂಜಾರಿ	೪೫	ವ್ಯವಸಾಯ	ಹಗರನೂರು
೧೫.	ಹನುಮಕ್ಕ	೬೫	ವ್ಯವಸಾಯ	ಮಾಲವಿ
೧೬.	ಹಮೀನಾಬಿ	೭೦	ವ್ಯವಸಾಯ	ಹಡಗಲಿ
೧೭.	ಹಾಲುಸ್ವಾಮಿಗಳು	೬೦	ಪೂಜಾರಿ	ಹಿರೇಹಡಗಲಿ
೧೮.	ಹಾಲೇಶ್ ತುರುಕಾಣಿ	೪೦	ವ್ಯವಸಾಯ	ಬೂದನೂರು
೧೯.	ಹುಸೇನ್ ಪೀರಾ	೫೦	ಫಕೀರರು	ಹಡಗಲಿ
೨೦.	ಹೇಮಾಕ್ಷಮ್ಮ	೬೮	ವ್ಯವಸಾಯ	ಹಡಗಲಿ.

ಹೊಸಪೇಟೆ

ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ	ಊರು
೧.	ಕಾಕುಬಾಳು ಹನುಮಂತಪ್ಪ	೭೦	ವ್ಯವಸಾಯ	ಕಾಕುಬಾಳು
೨.	ಗಜೇಂದ್ರ	೫೦	ವ್ಯವಸಾಯ	ಗಾಳೆಮ್ಮನಗುಡಿ
೩.	ಗಾಳೆಮ್ಮ	೫೫	ವ್ಯವಸಾಯ	ಹಂಪಿ
೪.	ಗುರುಪ್ರಸಾದ್	೩೫	ಉಪನ್ಯಾಸಕರು	ಮರಿಯಮ್ಮನಹಳ್ಳಿ
೫.	ಚನ್ನಬಸವಯ್ಯ	೫೦	ವ್ಯವಸಾಯ	ನಾಗೇನಹಳ್ಳಿ
೬.	ಚನ್ನಬಸವಯ್ಯ	೬೫	ವ್ಯವಸಾಯ	ಡಾಣಾಪುರ
೭.	ಜೀವನ್‌ಸಾಬ್ ವಾಲೀಕಾರ್	೪೦	ಜಾನಪದ ಗಾಯಕರು/ ಶಿಕ್ಷಕರು	ಹೊಸಪೇಟೆ

೮.	ತಾಯಮ್ಮ	೪೦	ಮಡಿವಾಳರು	ಅಮರಾವತಿ
೯.	ದುರುಗಪ್ಪ	೬೫	ವ್ಯವಸಾಯ	ಕಾಮಲಾಪುರ
೧೦.	ದುರುಗಪ್ಪ	೭೫	ವ್ಯವಸಾಯ	ಮೆಟ್ರಿ
೧೧.	ಪೊಂಪನಗೌಡ	೭೦	ವ್ಯವಸಾಯ	ರಾಮಸಾಗರ
೧೨.	ಭರಮಪ್ಪ	೭೦	ವ್ಯವಸಾಯ	ಅನಂತಶಯನಗುಡಿ
೧೩.	ಭೀಮಪ್ಪ	೭೫	ವ್ಯವಸಾಯ	ಅನಂತಶಯನಗುಡಿ
೧೪.	ಮಹೇಶ	೬೦	ವ್ಯವಸಾಯ	ಹೊಸಪೇಟೆ
೧೫.	ಮಂಗಳ	೫೬	ವ್ಯವಸಾಯ	ಹೊಸಪೇಟೆ
೧೬.	ಮಲ್ಲಿಕಾರ್ಜುನ .ಹೆಚ್.	೬೫	ವ್ಯವಸಾಯ	ರಾಮಸಾಗರ
೧೭.	ಮಾರೆಮ್ಮ	೬೦	ವ್ಯವಸಾಯ	ಪಾಪಿನಾಯ್ಕನಹಳ್ಳಿ
೧೮.	ಮೋಹನ ಜೋಶಿ	೬೫	ಶಾಸ್ತ್ರಿಗಳು	ಹಂಪಿ
೧೯.	ಯಲ್ಲಪ್ಪ ಭಂಡಾರದಾರ್	೪೦	ಜಾನಪದ ಗಾಯಕರು	ಹೊಸಪೇಟೆ
೨೦.	ಶ್ರೀಧರರಾವ್	೭೦	ನಿವೃತ್ತಿ ಶಿಕ್ಷಕರು	ಕಾಮಲಾಪುರ
೨೧.	ಸುಜಾತ .ಹೆಚ್.	೫೩	ಗೃಹಿಣಿ	ರಾಮಸಾಗರ
೨೨.	ಸುಜಾತ ರೇವಣಸಿದ್ಧಪ್ಪ	೪೫	ಗ್ರಂಥಪಾಲಕರು	ಹೊಸಪೇಟೆ
೨೩.	ಹುಲಿಗೆಮ್ಮ	೬೫	ವ್ಯವಸಾಯ	ಗಾದಿಗನೂರು

ಸಿರುಗುಪ್ಪ

ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ	ಊರು
೧.	ಚಂದ್ರಮ್ಮ	೫೫	ವ್ಯವಸಾಯ	ಅಚ್ಚೊಳ್ಳಿ
೨.	ಬಸಮ್ಮ ಹರಿಜನ	೫೪	ವ್ಯವಸಾಯ	ಕೆ. ಸೂಗೂರು
೩.	ಬೀರಳ್ಳಿ ರಾಮರೆಡ್ಡಿ	೭೦	ರಂಗ ಕಲಾವಿದರು	ಬೀರಳ್ಳಿ
೪.	ಭೀಮಪ್ಪ	೭೮	ವಿಶ್ರಾಂತಿ	ತೆಕ್ಕಲಕೋಟೆ
೫.	ಮಾರೆಪ್ಪ	೬೦	ವ್ಯವಸಾಯ	ಇಬ್ರಾಹಿಂಪುರ
೬.	ಮಾರೆಕ್ಕ	೪೫	ವ್ಯವಸಾಯ	ರಾವಿಹಾಳ್
೭.	ರಾಮಣ್ಣ	೬೫	ವ್ಯವಸಾಯ	ಅಗಸನೂರು
೮.	ರೇಣುಕಮ್ಮ	೫೦	ವ್ಯವಸಾಯ	ರಾರಾವಿ
೯.	ವೀರೇಶ	೪೫	ಪೂಜಾರಿ	ಬಲಕುಂದಿ
೧೦.	ವೀರೇಶ್‌ಬಾಬು	೫೫	ವ್ಯವಸಾಯ	ಕರೂರು
೧೧.	ವೀರೇಂದ್ರ ರಾವಿಹಾಳ್	೪೪	ವ್ಯಾಪಾರಿ	ತೆಕ್ಕಲಕೋಟೆ
೧೨.	ಶಿವಲಿಂಗಪ್ಪ ಹಂದ್ಯಾಳ	೪೦	ಶಿಕ್ಷಕರು	ಕೆ. ಸೂಗೂರು
೧೩.	ಶೇಕ್ಷಾವಲಿ	೫೮	ವ್ಯವಸಾಯ	ಸಿರಿಗೇರಿ
೧೪.	ಸೋಮಪ್ಪ	೫೫	ವ್ಯವಸಾಯ	ತೆಕ್ಕಲಕೋಟೆ
೧೫.	ಹನುಮಕ್ಕ	೬೦	ಕೂಲಿ	ಬಿ.ಎಂ. ಸೂಗೂರು

೧೬.	ಹನುಮಂತಪ್ಪ	೬೪	ಒಕ್ಕಲುತನ	ಒಳಬಳ್ಳಾರಿ
೧೭.	ಹಳೇಕೋಟೆ ಈರಮ್ಮ	೫೦	ವ್ಯವಸಾಯ	ಆಲೂರು ಹೊಸಳ್ಳಿ
೧೮.	ಹುಲುಗಪ್ಪ	೫೯	ವ್ಯವಸಾಯ	ಅಗಸನೂರು
೧೯.	ಹೊನ್ನೂರಮ್ಮ	೬೫	ಕೂಲಿ	ಹೊನ್ನಾರಳ್ಳಿ
೨೦.	ಹಂದ್ಯಾಳ ಪೊತಯ್ಯ	೬೦	ವ್ಯವಸಾಯ	ಆಲೂರು ಹೊಸಳ್ಳಿ

ಸಂಡೂರು

ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ	ಊರು
೧.	ಅಜ್ಜನಗೌಡ್ರು	೮೦	ವ್ಯವಸಾಯ	ಹಿರೆಕೆರೆಯಾಗಿನಹಳ್ಳಿ
೨.	ಉಳ್ಳಾಗಡ್ಡಿ ಕೊಮಾರಪ್ಪ	೬೮	ವ್ಯವಸಾಯ	ತಾರಾನಗರ
೩.	ಕಾಳಮ್ಮ	೮೦	ವ್ಯವಸಾಯ	ಧರ್ಮಾಪುರ
೪.	ಕಾಳೆ ವಿ.ಟಿ.	೭೦	ಚಿತ್ರಕಲಾವಿದರು	ಸಂಡೂರು
೫.	ಕುಮಾರಸ್ವಾಮಿ	೬೫	ವ್ಯವಸಾಯ	ದೌತಲ್‌ಪುರ
೬.	ಕುಮಾರಸ್ವಾಮಿ .ಬಿ.	೫೫	ವ್ಯವಸಾಯ	ಅಪ್ಪೇನಹಳ್ಳಿ
೭.	ತಿಪ್ಪಮ್ಮ	೬೦	ಗೃಹಿಣಿ	ಬಂಡ್ರಿ
೮.	ತಿಪ್ಪೇರುದ್ರ	೩೫	ಉಪನ್ಯಾಸಕರು	ಸಂಡೂರು
೯.	ಬಣಕಾರ ಬಸವರಾಜ	೪೫	ಪತ್ರಕರ್ತರು	ಸಂಡೂರು
೧೦.	ಬಸವನಗೌಡ	೮೦	ವ್ಯವಸಾಯ	ಸುಶೀಲಾನಗರ
೧೧.	ಬಸವರಾಜ ವಸೂತಿ	೭೦	ನಿವೃತ್ತ ಉಪನ್ಯಾಸಕರು	ಸಂಡೂರು
೧೨.	ಮಹಮದ್ ಅಯಾಬ್	೫೦	ವಕೀಲರು	ಕೃಷ್ಣಾನಗರ
೧೩.	ಮಲ್ಲಿಕಾರ್ಜುನಪ್ಪ	೭೦	ವ್ಯವಸಾಯ	ಹೊಸದರೋಜಿ
೧೪.	ಮಲ್ಲಿಕಾರ್ಜುನಯ್ಯ	೬೫	ವ್ಯವಸಾಯ	ಹೊಸದರೋಜಿ
೧೫.	ಮಾರುತಿ	೬೨	ವ್ಯವಸಾಯ	ತಾಳೂರು
೧೬.	ವಿಶಾಲಾಕ್ಷಿ	೫೦	ವ್ಯವಸಾಯ	ಅಪ್ಪೇನಹಳ್ಳಿ
೧೭.	ವೀರಣ್ಣ .ಎನ್.	೫೯	ಶಿಕ್ಷಕರು	ಸಂಡೂರು
೧೮.	ವೀರಭದ್ರಪ್ಪ	೭೫	ವ್ಯವಸಾಯ	ಬಂಡ್ರಿ
೧೯.	ಶಾಂತಮ್ಮ .ಎನ್.	೫೫	ಗೃಹಿಣಿ	ಸುಶೀಲಾನಗರ
೨೦.	ಶಂಕ್ರಯ್ಯ	೭೦	ವ್ಯವಸಾಯ	ಉಬ್ಬಲಗಂಡಿ
೨೧.	ಷಣ್ಮುಖಪ್ಪ	೬೦	ವ್ಯವಸಾಯ	ಮುದುಕುಲಪೆಂಟೆ
೨೨.	ಸುಭಾನ್‌ಸಾಬ್	೬೫	ವ್ಯವಸಾಯ	ಸುಶೀಲಾನಗರ
೨೩.	ಸೂಗಪ್ಪ	೬೦	ವ್ಯವಸಾಯ	ತಾಳೂರು
೨೪.	ಸಿದ್ಧರಾಮಣ್ಣ	೬೦	ವ್ಯವಸಾಯ	ಸುಶೀಲಾನಗರ
೨೫.	ಸೋಮಕ್ಕ	೫೦	ವ್ಯವಸಾಯ	ಮುದುಕುಲಪೆಂಟೆ

❑❑❑

೩. ಸಾಂಸ್ಕೃತಿಕ ಪದಕೋಶ

ಅಂಬಲಿ

ಇದನ್ನು ಸಂಗಟಿ, ಕಟಂಬಲಿ ಎಂತಲೂ ಕರೆಯುತ್ತಾರೆ. ಚರಗ ಚೆಲ್ಲಲು ಮಾಡಿದ ದ್ರವರೂಪದ ಆಹಾರ, ಜೋಳ ಅಥವಾ ಅಕ್ಕಿಯಿಂದ ತಯಾರಿಸಿರುತ್ತಾರೆ. ಅಂಬಲಿ ತುಂಬಿದ ಗಡಿಗೆಗಳನ್ನು ಪೂಜಿಸಿ ಬೆಳಗಿನ ಜಾವದಲ್ಲಿ ಚರಗ ಚೆಲ್ಲುತ್ತಾರೆ.

ಅಗಸಿ ಬಾಗಿಲು

ಇದು ಗ್ರಾಮ ಪ್ರವೇಶದ ಪ್ರಮುಖ ದ್ವಾರ. ಅಗಸಿ ಬಾಗಿಲಿನ ಮುಂಭಾಗದಲ್ಲಿ ಬುಡ್ಡೆಕಲ್ಲು ಪ್ರತಿಷ್ಠಾಪನೆಗೊಂಡಿರುತ್ತದೆ. ಗ್ರಾಮದಲ್ಲಿ ನೆರವೇರುವ ಶುಭ ಕಾರ್ಯಗಳು, ಜಾತ್ರೆ, ಉತ್ಸವಗಳು ಅಗಸಿಯ ಬಾಗಿಲಿನ ಮೂಲಕ ಗ್ರಾಮ ಪ್ರವೇಶಿಸುವುದು ಹಾಗೂ ಗ್ರಾಮ ತೊರೆಯುವುದು. ಇದು ಹಬ್ಬ ಉತ್ಸವಗಳ ಸಮಯದಲ್ಲಿ ತಳಿರು ತೋರಣಗಳಿಂದ ಶೃಂಗಾರಗೊಂಡಿರುತ್ತದೆ.

ಅಗಿನ ತುಳಿಯುವುದು

ಅಗ್ನಿ ಅಥವಾ ಬೆಂಕಿ ತುಳಿಯುವುದು ಬಳ್ಳಾರಿ ಜಿಲ್ಲೆಯ ಆಡುಮಾತಿನಲ್ಲಿ ಅಗಿನ ತುಳಿಯುವುದಾಗಿದೆ.

ಅಲಾಯಿ ಕುಣಿ

ಮೊಹರಂ ಆಚರಣೆಯಲ್ಲಿ ಬೆಂಕಿಯನ್ನು ಉರಿಸಲು ನಿರ್ಮಿಸಿದ ತಗ್ಗು. ಕೆಂಡ ಹಾಕಿದ ಕುಣಿ. ದೈವಗಳೊಂದಿಗೆ ಭಕ್ತರು ಕುಣಿ ಪ್ರವೇಶಿಸಿ ಕೆಂಡ ತುಳಿಯುತ್ತಾರೆ. ಬೇಡಿಕೆ ಈಡೇರಿದವರು ಉಪ್ಪು ಹಾಕುತ್ತಾರೆ.

ಅಲಾಯಿ ಆಡುವುದು

ಅಲಾಯಿ ಕುಣಿಯ ಸುತ್ತ ವೈಯಕ್ತಿಕವಾಗಿ ಹಾಗೂ ಸಾಮೂಹಿಕವಾಗಿ ಕುಣಿಯುವುದು. ಭಕ್ತಿ ಪರವಶತೆಯ ಜೊತೆ ಮನೋರಂಜನೆ ನೀಡುವುದಾಗಿದೆ. ಹುಲಿವೇಷದವರು, ತಪ್ಪಡಿ ಹೊಡೆಯುವವರು ಹಾಗೂ ಹಲವೊಮ್ಮೆ ದೈವಗಳು ಕುಣಿಯುವುದುಂಟು.

ಆಪು

ಹಗುರಾದ ದಂಟಿನ ಸಸ್ಯ. ಜಲಸಂಬಂಧಿ ಆಚರಣೆಗಳಲ್ಲಿ ಹಗುರಾದ ತೇಲುವ ಚಟ್ಟಿ ತಯಾರಿಸಲು ಬಳಸಲಾಗುತ್ತದೆ. ಕೆರೆ, ನದಿ, ಹೊಳೆ ದಂಡೆಯಲ್ಲಿ ಹುಲುಸಾಗಿ ಬೆಳೆದಿರುವ ಸಸ್ಯ.

ಹಿಡಿಜೋಳ

ಒಂದು ಕೈಮುಷ್ಠಿಯಲ್ಲಿ ಹಿಡಿಯಬಹುದಾದಷ್ಟು ಪ್ರಮಾಣದ ಜೋಳ. ಕೂಡ್ಲಿಗಿ ತಾಲೂಕು ಉಜ್ಜಯನಿ ಗ್ರಾಮದ ಮಳೆ ಬೀಜ ತರುವ ಆಚರಣೆಯಲ್ಲಿ ಹಿಡಿಜೋಳ ಪದ ಬಳಸಲ್ಪಡುತ್ತದೆ. ಪ್ರತಿ ಮನೆಯವರು ಹಿಡಿಜೋಳವನ್ನು ತಂದು ಬಿತ್ತುವ ಬೀಜದಲ್ಲಿ ಬೆರೆಸುತ್ತಾರೆ.

ಇಳಿ ತೆಗೆಯುವುದು

ದೃಷ್ಟಿ ತೆಗೆಯುವ ಪದ್ಧತಿಯನ್ನು ಇಳಿ ತೆಗೆಯುವುದು ಎಂದು ಹೇಳುತ್ತಾರೆ. ಆರತಿ ಮಾಡಿ ಚೆಲ್ಲುವ ವಿಧಾನ. ಮಕ್ಕಳಿಗೆ ದೃಷ್ಟಿ ತಾಗಿದಾಗ, ಶುಭ ಕಾರ್ಯಗಳಲ್ಲಿ, ದೈವಗಳ ಆಚರಣೆಗಳಲ್ಲಿ, ನಿಂಬೆಹಣ್ಣು ಅಥವಾ ತೆಂಗಿನಕಾಯಿಯನ್ನು ಇಳಿ ತೆಗೆದು ಜೋರಾಗಿ ನೆಲಕ್ಕೆ ಅಪ್ಪಳಿಸುತ್ತಾರೆ. ಕುಂಕುಮ, ಅರಿಶಿಣ ಬೆರೆತ ನೀರನ್ನು ತಟ್ಟೆಯಲ್ಲಿ ಹಾಕಿಕೊಂಡು ಆರತಿ ಮಾಡಿ ಚೆಲ್ಲುತ್ತಾರೆ. ಮೇಲಿನ ಎರಡೂ ಕ್ರಮಗಳಲ್ಲಿ ಇಳಿ ತೆಗೆಯಲಾಗುತ್ತದೆ.

ಕಂಕಿ

ಧಾನ್ಯ ತುಳಿಸಿದಾಗ ಉಳಿಯುವ ಹುಲ್ಲಿನ ಭಾಗ. ಇದನ್ನು ಜಾನುವಾರುಗಳ ಮೇವಾಗಿ ಬಳಸುತ್ತಾರೆ. ಕಣ ಮಾಡುವಾಗ ಸಗಣಿಯಿಂದ ಮಾಡಿದ ಗುರ್ಜಿಗೆ ಕಂಕಿ ಚುಚ್ಚಿ ರಾಶಿಯ ಮೇಲಿಟ್ಟು ಪೂಜಿಸುತ್ತಾರೆ.

ಕಡಿ ಹೇಳುವುದು

ಇದಕ್ಕೆ ಖಡ್ಗ ಅಥವಾ ಒಡಪು ಹೇಳುವುದೆಂತಲೂ ಕರೆಯುತ್ತಾರೆ. ದೈವದ ಆಚರಣೆಗಳಲ್ಲಿ ಆವೇಶಭರಿತರಾಗಿ ದೈವದ ಮಹಿಮೆಯನ್ನು ಉಗ್ಗಡಿಸುವುದಾಗಿದೆ. ಬಳ್ಳಾರಿ ದುರುಗಮ್ಮನ ಸಿಡಿ ಆಚರಣೆಯಲ್ಲಿ ಮೇಟಿಕುಂಭ ತಂದ ನಂತರ ಕಡಿ ಹೇಳಿದರೆ, ದೈವ ಜಾಗೃತಗೊಳ್ಳುತ್ತಾಳೆಂಬ ನಂಬಿಕೆಯಿದೆ. ಮೈಲಾರಲಿಂಗನ ಆಚರಣೆಯಲ್ಲಿ, ವೀರಭದ್ರದೇವರ ಆಚರಣೆಯಲ್ಲಿ, ಕೊಂಡ ಹಾಯುವಾಗ, ಅಸ್ತ್ರ ಹಾಕುವಾಗ ವೀರಾವೇಶದಿಂದ ಕಡಿ ಹೇಳಲಾಗುತ್ತದೆ.

ಕಂಬಳಿ ಕೊಪ್ಪೆ

ಕಂಬಳಿಯನ್ನು ಗೊರಬಿನಂತೆ ಮಾಡಿ ತಲೆಯ ಮೇಲೆ ಹಾಕಿಕೊಳ್ಳುವ ವಿಧಾನ. ಈ ರೀತಿ ಮಳೆಯಲ್ಲಿ ಮೈನೆನೆಯದಂತೆ ರಕ್ಷಣೆಗಾಗಿ ಬಳಸುತ್ತಾರೆ. ಉಜ್ಜಯನಿಯ ಮಳೆಬೀಜ ತರುವ ಆಚರಣೆಯಲ್ಲಿ ಆಯಗಾರರು ಹಿರೇಸಿಂದೋಗಿಗೆ ಕಾಲ್ನಡಿಗೆಯಲ್ಲಿ ಹೊರಟಾಗ ಕಂಬಳಿಕೊಪ್ಪೆ ಇಡುತ್ತಾರೆ.

ಕಣಕ

ಮೈದಾಹಿಟ್ಟು ಅಥವಾ ಗೋಧಿ ಹಿಟ್ಟಿಗೆ ನೀರು ಬೆರೆಸಿ ಮೃದುವಾಗಿ ನಾದಿ ಕಲೆಸಿರುವುದೇ ಕಣಕ. ಈ ರೀತಿ ಹದಗೊಳಿದ ಹಿಟ್ಟಿನ ಒಳಗೆ ಹೂರಣ ಸೇರಿಸಿ ಹೋಳಿಗೆ ಮಾಡುತ್ತಾರೆ.

ಕರಿಕೆ

ಗರಿಕೆ ಎಂತಲೂ ಕರೆಯುವ ಇದು ಒಂದು ಜಾತಿಯ ಹುಲ್ಲು. ಇದು ಬೆಳೆದು ಪೈರಿನ ಜೊತೆ ಸ್ವಾಭಾವಿಕವಾಗಿ ಹುಟ್ಟಿರುತ್ತದೆ. ಇದನ್ನು ಕಳೆ ಎಂತಲೂ ಕರೆಯುತ್ತಾರೆ. ಗಣಪನ ಪೂಜೆಗೆ ಗರಿಕೆ ಶ್ರೇಷ್ಠವಾದುದಾಗಿದೆ.

ಕವಣೆ ಕಲ್ಲು

ಕ್ಯಾಟರ್‌ಬಿಲ್ ಎಂತಲೂ ಕರೆಯುತ್ತಾರೆ. ಇದು 'ವಿ' ಆಕಾರದ ಸಾಧನವಾಗಿದೆ. ಫಸಲನ್ನು ತಿನ್ನಲು ಬಂದ ಪಕ್ಷಿಗಳನ್ನು ಓಡಿಸಲು ಬಳಸುವ ಸುಲಭ ವಿಧಾನ.

ಕಳಿವೆಮ್ಮ

ನೀರು ತುಂಬಿದ ಹೊಸ ಕುಂಭವನ್ನು ಹಸಿರುಬಳೆ, ಬೇವಿನ ಎಲೆಗಳಿಂದ ಶೃಂಗಾರಗೊಳಿಸಿ ಪೂಜಿಸುತ್ತಾರೆ. ನಂತರ ಪೂಜಿಸಿದ ಅಮ್ಮನನ್ನು ಸಾಮೂಹಿಕವಾಗಿ ಊರ ಹೊರಗೆ ಕಳುಹಿಸುತ್ತಾರೆ. ರೋಗ ಪ್ರತೀಕವಾದ ಅಮ್ಮನನ್ನು ಊರಿಂದ ಊರಿಗೆ ಗಡಿದಾಟಿಸಿ ಕಳುಹಿಸುವ ಅಮ್ಮನಿಗೆ ಕಳಿವೆಮ್ಮನೆಂದು ಕರೆಯಲಾಗುತ್ತದೆ.

ಕಾಸೆಕಟ್ಟುವುದು

ಬಸವಣ್ಣನಿಗೆ ಸೊಂಟದ ಮೇಲೆ ದಪ್ಪನೆಯ ಬಣ್ಣದ ದಟ್ಟಿಯನ್ನು ಹೊದಿಸಿ, ನಡುವಿಗೆ ಬಿಗಿಯಾಗಿ ಕಟ್ಟುತ್ತಾರೆ. ಅದನ್ನು ಕಾಸೆ (ಕಾಸಿ) ಕಟ್ಟುವುದೆಂದು ಕರೆಯುತ್ತಾರೆ.

ಕಾರಣೀಕೋತ್ಸವ

ಕಾರ್ಣಿಕ ಅಥವಾ ಕಾರಣಿಕ, ಮೈಲಾರಲಿಂಗನ ಜಾತ್ರೆಯಲ್ಲಿ ನಡೆಯುವ ಒಂದು ಮುಖ್ಯ ಆಚರಣೆಯಾಗಿ ಬಳ್ಳಾರಿ ಜಿಲ್ಲೆಯಲ್ಲಿ ಪ್ರಸಿದ್ಧವಾಗಿದೆ. ಸಮಗ್ರ ವರ್ಷಭವಿಷ್ಯವನ್ನು ಸಂಕ್ಷಿಪ್ತವಾಗಿ ನುಡಿಯುವ ದೈವವಾಣಿ. ಮೈಲಾರ ಗ್ರಾಮದಲ್ಲಿ ವರ್ಷಕ್ಕೊಮ್ಮೆ ಮೈಲಾರಲಿಂಗ ದೈವದ ಕಾರಣಿಕೋತ್ಸವದಲ್ಲಿ ದೈವವಾಣಿ ನುಡಿಯಲಾಗುತ್ತದೆ. ಒಂದೇ ವಾಕ್ಯದ ದೈವವಾಣಿಯನ್ನು ಮಳೆ-ಬೆಳೆ, ರೋಗ-ರುಜಿನ, ಸುಭೀಕ್ಷೆ-ದುರ್ಭಿಕ್ಷೆ, ಅತೀವೃಷ್ಟಿ-ಅನಾವೃಷ್ಟಿ ಹೀಗೆ ಹಲವಾರು ನೆಲೆಯಲ್ಲಿ ಜನಪದರು ಅರ್ಥೈಸಿಕೊಳ್ಳುತ್ತಾರೆ.

ಕಿಚಡಿ

ಜೋಳ, ಅವರೆ, ಅಕ್ಕಿ ತೊಗರಿಯಿಂದ ತಯಾರಿಸಿದ ಆಹಾರ ಪದಾರ್ಥ. ಎಳ್ಳಮವಾಸ್ಯೆಯಂದು ರೈತರು ನಸುಕಿನಲ್ಲಿ ಯಾರೊಂದಿಗೂ ಮಾತನಾಡದೆ, ಕಿಚಡಿಯ ಗಡಿಗೆಯನ್ನು ಹೊಲಕ್ಕೆ ತಂದು ಪೂಜಿಸಿ ಪೈರಿಗೆ ಚರಗ ರೂಪದಲ್ಲಿ ಚೆಲ್ಲುತ್ತಾರೆ. ಬೆಳೆ ಕಟಾವು ಹಂತಕ್ಕೆ ಬರುವ ಮುನ್ನ ಕಿಚಡಿ ರೂಪದ ಚರಗ ಚೆಲ್ಲಲಾಗುತ್ತದೆ. ಇದು ದೊಡ್ಡ ಅಗುಳುಗಳಿಂದ ಕೂಡಿದ್ದು, ಉದುರು ಉದುರಾಗಿರುತ್ತದೆ.

ಕಿಲಾರಿ

ದೇವರೆತ್ತುಗಳನ್ನು ಕಾಯಲು ದೀಕ್ಷೆ ಪಡೆದವನ ಹೆಸರನ್ನು ಸೂಚಿಸುತ್ತದೆ. ಆತ ಅರಣ್ಯದಲ್ಲಿ ದನಕರುಗಳ ಪಾಲಕನಾಗಿದ್ದು, ಆಗಾಗ್ಗೆ ಮಾತ್ರ ಸಂಸಾರ ವಾಸಿಸುವ ಹಟ್ಟಿಗೆ ಬರಲು ಅವಕಾಶವಿದೆ. ಈತನಿಗೆ ಹಟ್ಟಿಯವರು ದವಸ, ಧಾನ್ಯ ನೀಡಿ ಗೌರವಿಸುತ್ತಾರೆ. ಹೀಗೆ ದೇವರಿಗೆ ಬಿಟ್ಟ ಎತ್ತುಗಳನ್ನು ಕಾಯುವವರಿಗೆ ಕಿಲಾರಿಗಳೆಂದು ಕರೆಯಲಾಗುತ್ತದೆ.

ಕುಳ್ಳು

ಬೆರಣಿ. ಸಗಣಿಯನ್ನು ಚಪ್ಪಟೆಯಾಗಿ ತಟ್ಟಿ ಒಣಗಿಸಿದ ಉರುವಲು. ಸುಟ್ಟ ಕುಳ್ಳಿನ ಬೂದಿಯನ್ನು ಭಸ್ಮ ಎನ್ನುತ್ತಾರೆ. ಅಸ್ತ್ರ ಹಾಕಿದಾಗ ಗಾಯ ಮಾಯುವಿಕೆಗೆ ಔಷಧಿ ರೂಪದಲ್ಲಿ ಬಳಸಲ್ಪಡುತ್ತದೆ.

ಕೈಪಾ

ಬಾಳೆದಿಂಡಿನಿಂದ ಮಾಡಿದ ಒಳ ಉಡುಪು. ಹಿರೇಹಡಗಲಿಯಲ್ಲಿ ನಡೆಯುವ ಮುಳ್ಳು ಗದ್ದುಗೆ ಆಚರಣೆಯಲ್ಲಿ ಕೈಪಾ ಬಳಸುತ್ತಾರೆ. ಗದ್ದುಗೆಯ ಮೇಲೆ ಕುಳಿತುಕೊಳ್ಳುವವರು ಮಾತ್ರ ಇದನ್ನು ಬಳಸುತ್ತಾರೆ.

ಕೊಂತೆಮ್ಮ ಗುಡಿದುಂಬುವಳು

ದೊಡ್ಡ ಗೌರಿ ಹುಣ್ಣಿಮೆಯಂದು ಗುಡಿಗಳಲ್ಲಿ, ಮನೆಯ ಜಗುಲಿಗಳಲ್ಲಿ ಗೌರಿಯನ್ನು ಪ್ರತಿಷ್ಠಾಪಿಸುತ್ತಾರೆ. ಆ ದಿನವನ್ನು ಕೊಂತೆಮ್ಮ ಗುಡಿದುಂಬುವ ದಿನವೆಂದು ಕರೆಯುತ್ತಾರೆ. ಅಂದಿನಿಂದ ಐದು ಅಥವಾ ಒಂಬತ್ತು ದಿನ ಗೌರಿಯನ್ನು ಪೂಜಿಸುವ ಆಚರಣೆಯಿದೆ.

ಗಗ್ಗರ

ಜಾನುವಾರುಗಳ ಕೊರಳಿಗೆ ಕಟ್ಟುವ ಗೆಜ್ಜೆಸರದ ಪಟ್ಟಿ, ಅವು ತಲೆ ಅಲುಗಾಡಿಸಿದಂತೆ ಗಿಲ್ ಗಿಲ್ ನಾದ ಹೊರಹೊಮ್ಮುತ್ತದೆ. ಜಾನುವಾರುಗಳಿಗೆ ಸಂಬಂಧಿಸಿದ ಆಚರಣೆಗಳ ಸಮಯದಲ್ಲಿ ಶೃಂಗಾರಕ್ಕಾಗಿ ಗಗ್ಗರ ಕಟ್ಟಲಾಗುತ್ತದೆ.

ಗಂಡಾರತಿ

ಗೋಧಿಗೆ ನೀರು ಚುಮುಕಿಸಿ ನೆರಳಲ್ಲಿ ಒಣಗಿಸಿ, ಸ್ವಲ್ಪ ಹಸಿ ಇರುವಾಗ ಬೀಸಿದ ಹಿಟ್ಟಿನಿಂದ ಪ್ರಣತಿ ಆಕಾರ ಮಾಡುತ್ತಾರೆ. ಅದನ್ನು ಕಂಚಿನ ತಟ್ಟೆಯಲ್ಲಿಟ್ಟು ಎಣ್ಣೆಬತ್ತಿ ಹಾಕಿ ಉರಿಸಲಾಗುತ್ತದೆ. ಇದನ್ನು ಗಂಡಾದೀಪವೆಂತಲೂ ಕರೆಯುತ್ತಾರೆ.

ಗಳೇವು

ರೆಂಟೆ, ಕುಂಟೆ, ಮಡಿಕೆ ಇತ್ಯಾದಿಗಳನ್ನು ಎತ್ತಿನ ನೊಗಕ್ಕೆ ಹಾಕಿ ಹೊಲಕ್ಕೆ ಹೊರಡುವುದು. ಉಳುಮೆಗೆ ಸಂಬಂಧಿಸಿದ ಎಲ್ಲಾ ಸಾಮಗ್ರಿಗಳು ಇದರಲ್ಲಿರುತ್ತವೆ.

ಗಾವು ಜಿಗಿಯುವುದು

ಹೆಣ್ಣುದೇವತೆಗಳ ಜಾತ್ರೆ, ಉತ್ಸವಗಳಲ್ಲಿ ಮೇಕೆಮರಿಯ ಕತ್ತಿನ ಭಾಗಕ್ಕೆ ಬಾಯಿ ಹಾಕಿ ಅದು ಜೀವ ಬಿಡುವವರೆಗೂ ರಕ್ತಹೀರುವ ಸಂಪ್ರದಾಯವನ್ನು ಗಾವು ಜಿಗಿಯುವುದೆಂದು ಕರೆಯುತ್ತಾರೆ.

ಗಿಂಡಿ

ಚಿಕ್ಕ ತಂಬಿಗೆ. ಲೋಹದ ದುಂಡಾದ ಚಿಕ್ಕ ಕುಡಿಕೆ. ಆಚರಣೆಗಳಲ್ಲಿ ಶುದ್ಧನೀರು ಹಾಗೂ ತೀರ್ಥ ತುಂಬಲು ಬಳಸುತ್ತಾರೆ.

ಗುಗ್ಗರಿ

ಹುರುಳಿ, ಅವರೆ, ಹೆಸರು, ಮಡಿಕೆ, ಅಲಸಂದಿ ಹೀಗೆ ದ್ವಿದಳ ಧಾನ್ಯಗಳನ್ನು ಬೇಯಿಸಿ, ಉಪ್ಪು ಬೆರೆಸಿರುವ ಕಾಳುಗಳಿಗೆ ಗುಗ್ಗರಿ ಎನ್ನುತ್ತಾರೆ.

ಗುಗ್ಗಳ

ಬೆಂಕಿ, ಕೆಂಡದ ರಾಶಿ. ವೀರಭದ್ರದೇವರ ಆಚರಣೆಯಲ್ಲಿ ದೇವಸ್ಥಾನದ ಮುಂಭಾಗದಲ್ಲಿ ಆಳವಾದ ಅಗ್ನಿಕುಂಡ ನಿರ್ಮಿಸಲಾಗುತ್ತದೆ. ವೀರಗಾಸೆಯವರು, ಪುರವಂತಿಕೆ ಹೇಳುವವರು, ಶಸ್ತ್ರಹಾಕಿಸಿಕೊಂಡ ಭಕ್ತರು ಕೊಂಡ ಹಾಯುತ್ತಾರೆ.

ಗುಡಾಣ

ನೀರು ತುಂಬುವ ದೊಡ್ಡ ಪಾತ್ರೆ. ದುಂಡಾಗಿ, ದೊಡ್ಡ ಗಾತ್ರದಲ್ಲಿ, ಹೆಚ್ಚು ನೀರು ಹಿಡಿಯುವ ಆಕೃತಿ ಹೊಂದಿರುತ್ತದೆ. ಹಿತ್ತಾಳೆ ಅಥವಾ ಲೋಹದಿಂದ ತಯಾರಾಗಿರುತ್ತದೆ.

ಗುಲ್ಲೆಮ್ಮ

ಹೊಸಪೇಟೆ ತಾಲೂಕಿನ ಕಾಮಲಾಪುರದಲ್ಲಿ ನೀರು ತುಂಬಿಸುವ ಆಕಾರದಲ್ಲಿರುವ ಬಂಡೆಗಲ್ಲುಗಳನ್ನು ಗುಲ್ಲೆಮ್ಮ ದೇವತೆ ಎಂದು ಕರೆಯುತ್ತಾರೆ.

ಗುದ್ದಲಿ ಹಾಕುವುದು

ಮೊಹರಂ ಮೊದಲ ದಿನ ಚಂದ್ರದರ್ಶನದ ನಂತರ ಅಲಾಯಿಕುಣಿ ತೆಗೆಯಲು ಪ್ರಥಮವಾಗಿ ನಡೆಯುವ ಆಚರಣೆ ಇದಾಗಿದೆ. ದೇವರ ಮಂತ್ರ ಪಠಣದೊಂದಿಗೆ ಪಶ್ಚಿಮಾಭಿಮುಖವಾಗಿ ಸಾಂಕೇತಿಕವಾಗಿ ಗುದ್ದಲಿಯಿಂದ ಕಚ್ಚು ಹಾಕಲಾಗುತ್ತದೆ.

ಗೊಟ್ಟ

ಬಿದಿರಿನಿಂದ ಮಾಡಿದ ಕೊಳವೆ. ಜಾನುವಾರುಗಳಿಗೆ ದ್ರವರೂಪದ ಔಷಧಿ ಕುಡಿಸಲು ಬಳಸುವ ಸಾಧನ. ಜಾನುವಾರುಗಳ ಗಂಟಲಿಗೆ ಗೊಟ್ಟದ ತುದಿಯನ್ನು ಇಟ್ಟು ಕುಡಿಸಲು ಅನುಕೂಲವಾಗುವಂತೆ ಚೂಪಾಗಿ ಮಾಡಿರುತ್ತಾರೆ. ಜಾನುವಾರುಗಳ ಹಬ್ಬಗಳಲ್ಲಿ ಹಾಗೂ ಜಾನುವಾರುಗಳಿಗೆ ಕಾಯಿಲೆಯಾದಾಗ ಗಿಡಮೂಲಿಕೆಗಳಿಂದ ತಯಾರಾದ ಔಷಧಿ ಕುಡಿಸಲು ಇದು ಸಹಾಯಕವಾದುದಾಗಿದೆ.

ಚೆನ್ನಮ್ಮನ ದಂಡೆ

ಆಕಾಶದಲ್ಲಿ ಜಡೆಯಾಕಾರದಲ್ಲಿರುವ ಚುಕ್ಕಿಗಳ ಸಮೂಹಕ್ಕೆ ಜನಪದರು ಕರೆಯುವ ಪದ. ಜನಪದ ಕಥೆಯ ಪ್ರಕಾರ ಮಣ್ಣೆತ್ತನ್ನು ಪೂಜಿಸಿ ತನ್ನ ಪಾತಿವ್ರತ್ಯದ ಪ್ರಭಾವದಿಂದ ಸತ್ತ ಗಂಡನ ಪ್ರಾಣವನ್ನು ಹಿಂದಿರುಗಿ ಪಡೆದು ದೈವತ್ವಕ್ಕೆ ಏರಿದವಳು ಚೆನ್ನಮ್ಮ. ಆಕೆ ತನ್ನ ಪತಿವ್ರತಾ ಭಕ್ತಿಯಿಂದ ಆಕಾಶದಲ್ಲಿ ಇಂದಿಗೂ ದಂಡೆಯ ರೂಪದಲ್ಲಿ ಇದ್ದಾಳೆಂಬ ನಂಬಿಕೆಯಿದೆ. ಚೆನ್ನಮ್ಮನ ದಂಡೆಗೆ ರೋಹಿಣಿ ನಕ್ಷತ್ರವೆಂತಲೂ ಕರೆಯುತ್ತಾರೆ.

ಚೌರ

ದೈವಗಳ ಆಚರಣೆಗಳಲ್ಲಿ ದೈವಕ್ಕೆ ಗಾಳಿ ಬೀಸಲು ಬಳಸುವ ಬೀಸಣಿಕೆಯಾಕೃತಿ. ಬ್ಯಾಟಿಮರದ ಆಚರಣೆ ಸಮಯದಲ್ಲಿ ಹನುಮಪ್ಪನ ಉತ್ಸವದಲ್ಲಿ ದೇವದಾಸಿಯರು ಚೌರ ಬೀಸುತ್ತಾರೆ.

ಜಂಗು ಕಟ್ಟುವುದು

ಡೊಳ್ಳಿನ ಸುತ್ತಲೂ ಲೋಹದ ಪಟ್ಟಿಯನ್ನು ಕಟ್ಟುವುದಕ್ಕೆ ಜಂಗು ಕಟ್ಟುವುದು ಎಂದು ಕರೆಯುತ್ತಾರೆ.

ಜನ್ನಿಗೆ

ಕಾಡುಗೊಲ್ಲ ಸಮುದಾಯದವರು ದೇವರಿಗೆ ಮೀಸಲಿಟ್ಟ ಜಾನುವಾರುಗಳನ್ನು 'ಜನ್ನಿಗೆ' ಎಂದು ಕರೆಯುತ್ತಾರೆ. ಇವು ನೀಡುವ ಹೈನು ಪದಾರ್ಥಗಳೆಲ್ಲಾ ಪವಿತ್ರ ತೀರ್ಥವಾಗಿದ್ದು, ಹೆತ್ತ ಸೂತಕ ಕಳೆಯಲು ಹಾಗೂ ಆಚರಣೆಗಳಲ್ಲಿ ಶುದ್ಧೀಕರಣಕ್ಕಾಗಿ ಬಳಸುತ್ತಾರೆ.

ಜೀರಗಾರರು

ಹೂಗಾರ ಸಮುದಾಯದವರನ್ನು ಬಳ್ಳಾರಿ ಜಿಲ್ಲೆಯಲ್ಲಿ ಜೀರಗಾರರೆಂದು ಕರೆಯಲಾಗುತ್ತದೆ. ಹೂ ವ್ಯಾಪಾರ ಇವರ ಮೂಲ ಕಸುಬಾಗಿರುತ್ತದೆ. ತೆಪ್ಪೋತ್ಸವ ಹಾಗೂ ಹೂವಿನ ಪಲ್ಲಕ್ಕಿ ಉತ್ಸವಗಳಲ್ಲಿ ಹೂವಿನ ಅಲಂಕಾರ ಮಾಡುವ ಹಕ್ಕು ಇವರದಾಗಿರುತ್ತದೆ.

ಜೋಳದ ದಂಟು

ಫಸಲನ್ನು ತೆನೆಯಿಂದ ಬೇರ್ಪಡಿಸಿದಾಗ ಉಳಿಯುವ ಕಡಿದ ಜೋಳದ ಕಡ್ಡಿ. ತೆಪ್ಪೋತ್ಸವದಲ್ಲಿ ಜೋಳದ ದಂಟು ಬಳಸಲ್ಪಡುತ್ತದೆ. ಇದರಿಂದ ತಯಾರಿಸಿದ ದೋಣಿಯಾಕಾರದ ತೆಪ್ಪದಲ್ಲಿ ಗಂಡಾರತಿಯನ್ನಿಟ್ಟು, ಗಂಗಮ್ಮನೆಂದು ತೇಲಿ ಬಿಡುತ್ತಾರೆ.

ತಪ್ಪಡಿ

ಚರ್ಮದಿಂದ ಮಾಡಿದ ಹೆಚ್ಚು ಶಬ್ದ ಹೊರಹೊಮ್ಮುವ ಸಾಧನ, ದುಂಡಾದ ಲೋಹದ ಪಟ್ಟಿಯ ಒಳಭಾಗದಲ್ಲಿ ಚರ್ಮದ ಪರದೆಯಿರುತ್ತದೆ. ಲೋಹದ ಪಟ್ಟಿಯನ್ನು ಹೆಚ್ಚು ಕಾಯಿಸಿದಂತೆಲ್ಲಾ ಅದು ವಿಕಸನಗೊಂಡು ಹೆಚ್ಚಿನ ಶಬ್ದ ಹೊರಹೊಮ್ಮುತ್ತದೆ. ಮೊಹರಂ ಹಬ್ಬದಲ್ಲಿ, ದೈವಗಳ ಉತ್ಸವಗಳಲ್ಲಿ, ಸಾರ್ವಜನಿಕ ಮಾಹಿತಿಗಾಗಿ ಸಾರು ಹಾಕಲು ಈ ಸಾಧನ ಬಳಕೆಯಾಗುತ್ತದೆ.

ತೊಗೆ

ಬೇಯಿಸಿದ ಬೇಳೆಗೆ ಬೆಲ್ಲ ಹಾಕಿ ಮಾಡಿದ ತಿನಿಸು, ಕುಂಬಳಕಾಯಿ ತೊಗೆ, ಹೆಸರುಕಾಳು ತೊಗೆ, ತೊಗರಿಬೇಳೆ ತೊಗೆ, ಹೀಗೆ ಹಾಕಿದ ಪದಾರ್ಥಕ್ಕೆ ಅನುಸರಿಸಿ ಕರೆಯಲ್ಪಡುತ್ತದೆ. 'ತೊಗೆರೊಟ್ಟಿ ಚೆನ್ನಮ್ಮನ' ಆಚರಣೆಯಲ್ಲಿ ರೊಟ್ಟಿಯ ಜೊತೆ ತೊಗೆ ನೈವೇದ್ಯವಾಗಿರುತ್ತದೆ.

ದೀವಟಿಗೆ

ಪಂಜು. ಕೋಲಿಗೆ ಬಟ್ಟೆ ಕಟ್ಟಿ, ಎಣ್ಣೆ ಅದ್ದಿ ಉರಿಸುವ ದೀಪ. ಗ್ರಾಮಗಳಲ್ಲಿ ರಾತ್ರಿ ಸಮಯದಲ್ಲಿ ನಡೆಯುವ ಉತ್ಸವಗಳಲ್ಲಿ, ಮೆರವಣಿಗೆಗಳಲ್ಲಿ ಬೆಳಕಿಗಾಗಿ ಹಿಡಿದಿರುತ್ತಾರೆ. ಮಡಿವಾಳ ಸಮುದಾಯದವರು ದೀವಟಿಗೆ ಹಿಡಿಯುವ ಸಂಪ್ರದಾಯವಿದೆ.

ಧೂಳುಮರಿ

ದೈವದ ಆಚರಣೆಗಳಲ್ಲಿ ಬಲಿ ನೀಡಲು ತಂದ ಹಾಲು ಕುಡಿಯುವ ಮೇಕೆಮರಿ, ಕೊಂಡಮರಿ, ಇದಕ್ಕೆ ಬಾನಾಮರಿ, ದೃಷ್ಟಿಮರಿ, ಹಲ್ಮರಿ, ಬ್ಯಾಟಿಮರಿ ಎಂಬ ಹೆಸರುಗಳುಂಟು. ಗಾವು ಜಿಗಿಯಲು ಹಾಗೂ ದೈವಗಳಿಗೆ ದೃಷ್ಟಿ ತೆಗೆಯಲು ಬಳಲಾಗುತ್ತದೆ.

ನಡೆಮುಡಿ

ದೈವದ ಉತ್ಸವಗಳಲ್ಲಿ, ದೈವದ ಪಾದ ನೆಲ ಸ್ಪರ್ಶ ಮಾಡದಂತೆ, ನಡೆದು ಬರಲು ದಾರಿಯಲ್ಲಿ ಹಾಸುವ ಒದ್ದೆಬಟ್ಟೆ, ಮಡಿವಾಳ ಸಮುದಾಯದವರು ನಡೆಮುಡಿ ಹಾಸುವವರಾಗಿರುತ್ತಾರೆ.

ನೆಲುವು

ಮಾಳಿಗೆಯಲ್ಲಿ ನೇತುಬಿಡುವ ಹಗ್ಗದಿಂದ ಮಾಡಿದ ಸಾಧನ. ಹಾಲು, ಮೊಸರು ಇತರೆ ಹೈನು ಪದಾರ್ಥಗಳನ್ನು ಬೆಕ್ಕಿನಿಂದ ರಕ್ಷಿಸಲು ಹಾಗೂ ಆಹಾರ ಪದಾರ್ಥಗಳಿಗೆ ಕ್ರಿಮಿಕೀಟಗಳ ಬಾಧೆ ಆಗದಂತೆ ತಡೆಯಲು ಬಳಸುವ ಸಾಧನ.

ಫಕೀರರು

ಬಳ್ಳಾರಿ ಜಿಲ್ಲೆಯಲ್ಲಿ ಮೊಹರಂ ಆಚರಣೆಯಲ್ಲಿ ಲಾಡಿ ಹಾಕಲಾದ ಮಕ್ಕಳಿಗೆ ಫಕೀರರೆಂದು ಕರೆಯುತ್ತಾರೆ. ಹಬ್ಬ ಮುಕ್ತಾಯಗೊಳ್ಳುವವರೆಗೆ ಭಕ್ತರು ಅವರನ್ನು ದೈವೀಭಾವದಿಂದ ಕಾಣುತ್ತಾರೆ. ತಮ್ಮ ಮನೆಗಳಿಗೆ ಊಟಕ್ಕೆ ಕರೆತರುತ್ತಾರೆ.

ಭಂಡಾರ ಹಂಚುವುದು

ಗ್ರಾಮದಲ್ಲಿ ನಡೆಯುವ ಉತ್ಸವಗಳಲ್ಲಿ ಪಾಲ್ಗೊಳ್ಳಲು ಭಂಡಾರ ಹಂಚುವುದರ ಮೂಲಕ ಗ್ರಾಮಸ್ಥರನ್ನು ಹಾಗೂ ಆಯಗಾರರನ್ನು ಆಹ್ವಾನಿಸುವುದು. ಅರಿಶಿಣ, ಕುಂಕುಮ, ವೀಳ್ಯದೊಂದಿಗೆ ದಕ್ಷಿಣೆ ನೀಡಿ ಕರೆಯುವ ವಾಡಿಕೆ ಇಲ್ಲಿದೆ.

ಬಾನುಂಡೆ

ಬಾನ+ಉಂಡೆ. ಅನ್ನ ಊಟಮಾಡುವುದು, ಆಹಾರ ಸೇವಿಸುವುದು ಎಂಬ ಅರ್ಥ. ಮಳೆ ಸಂಬಂಧಿ ಆಚರಣೆಗಳಲ್ಲಿ ಈ ಶಬ್ದ ಬಳಸಲ್ಪಡುತ್ತದೆ. ಗುರ್ಜಿ ಹೊತ್ತ ಬಾಲಕರು ಗ್ರಾಮದಲ್ಲಿ ಧಾನ್ಯ ಸಂಗ್ರಹಿಸಿ, ಹೊರವಲಯದಲ್ಲಿ ಅಡುಗೆ ಮಾಡಿ ಸಾಮೂಹಿಕ ಭೋಜನ ಮಾಡಿ, ನೀರು ಕುಡಿಯದೇ ಎಲ್ಲರೂ 'ಬಾನುಂಡೆ ನೀರಿಲ್ಲ' ಎಂದು ಕೂಗುತ್ತಾ ಓಡುತ್ತಾರೆ.

ಬ್ಯಾಲ

ಬೇಲ ಆಡುಮಾತಿನಲ್ಲಿ ಬ್ಯಾಲವಾಗಿದೆ. ಬೆಳುವಲ ಎಂದು ಕರೆಯಲ್ಪಡುವ ಒಂದು ಜಾತಿಯ ಮರ. ಚೆಂಡಿನಾಕಾರ ಹೊಂದಿದ ಬ್ಯಾಲದ ಹಣ್ಣಿನ ಮೇಲಿನ ಕವಚ ಗಟ್ಟಿಯಾಗಿರುತ್ತದೆ.

ಬುಡ್ಡೆಕಲ್ಲು

ಅಗಸಿಯ ಬಾಗಿಲಲ್ಲಿ ಪ್ರತಿಷ್ಠಾಪಿಸಲಾದ ಚಿಕ್ಕಕಲ್ಲು. ಕರುಗಲ್ಲು ಎಂತಲೂ ಕರೆಯುತ್ತಾರೆ. ಇದನ್ನು ನೆಲದಲ್ಲಿ ಹುಗಿಯಲಾಗಿರುತ್ತದೆ. ದಾರಿ ಮಧ್ಯದಲ್ಲಿದ್ದರೂ ದೈವೀ ಭಾವನೆಯಿಂದ ಯಾರೂ ತುಳಿಯುವುದಿಲ್ಲ. ಹಬ್ಬ, ಆಚರಣೆ, ವಿಶೇಷ ಸಮಯದಲ್ಲಿ ಅರಿಶಿಣ, ಕುಂಕುಮ ಹಾಕಿ ಎಣ್ಣೆ ಎರೆಯುತ್ತಾರೆ. ಮಳೆ ಬಾರದ ಸಮಯದಲ್ಲಿ ಆಯಾ ಗ್ರಾಮದ ಬುಡ್ಡೆ ಕಲ್ಲುಗಳಿಗೆ ನೂರಾರು ಕೊಡ ನೀರು ಸುರಿಯುವ ಸಂಪ್ರದಾಯವಿದೆ.

ಭೂತ ಬಿಲ್ಲೆ

ಬಳ್ಳಾರಿ ದುರುಗಮ್ಮನ ಸಿಡಿ ಆಚರಣೆಯಲ್ಲಿ ಸಿಡಿಗಂಬದ ತುದಿಗೆ ಕಟ್ಟಿರುವ ಗೊಂಬೆಗೆ ಭೂತಬಿಲ್ಲೆ ಎಂದು ಕರೆಯುತ್ತಾರೆ. ಭೂತಬಿಲ್ಲೆಯು ಪುರುಷರೂಪ ಹೊಂದಿದ್ದು, ಕೈಯಲ್ಲಿ ಕತ್ತಿ, ತಲೆಗೆ ಪೇಟ, ಹೂವಿನಹಾರ, ಗುರಾಣಿ ಹಿಡಿದಿರುತ್ತದೆ.

ಭೂತಪಲ್ಲಿ

ಸಂಡೂರು ಭಾಗದಲ್ಲಿ ಈ ಪದ ಬಳಕೆಯಲ್ಲಿದೆ. ಅಮ್ಮನ ಜಾತ್ರೆಗಳಲ್ಲಿ ಊರ ಗಡಿಭಾಗದ ಸುತ್ತ ಚರಗ ಚೆಲ್ಲುವ ವ್ಯಕ್ತಿಯನ್ನು ಭೂತಪಲ್ಲಿ ಎಂದು ಕರೆಯುತ್ತಾರೆ. ಈ ವ್ಯಕ್ತಿ ರಾತ್ರಿಯಲ್ಲಿ ಬೆತ್ತಲೆಯಾಗಿ ಚರಗ ಚೆಲ್ಲುವ ಕಾರಣದಿಂದ 'ಭೂತ' ಶಬ್ದ ಬಂದಿರಬೇಕು.

ಮಣೇವು

ಬೇಡ ಸಮುದಾಯದವರು ತಮ್ಮ ಆಚರಣೆಗಳಲ್ಲಿ ದಾಸಯ್ಯನಿಂದ ಮಣೇವು ಆಡಿಸುವ ಸಂಪ್ರದಾಯವಿದೆ. ಕರಿಕಂಬಳಿಯನ್ನು ಮಡಚಿ ನೆಲದ ಮೇಲೆ ಹಾಕಿ, ಅದರಲ್ಲಿ ಮೂರು ಕಡೆ ಬೆಲ್ಲವನ್ನಿಟ್ಟು ಕುಣಿಯುತ್ತಾ ಬಾಯಿಕಚ್ಚಿ ತಿನ್ನುವ ಪದ್ಧತಿ ಇದು. ಹಬ್ಬ, ಉತ್ಸವಗಳಲ್ಲಿ ಹೆಚ್ಚಾಗಿ ಮಣೇವು ಹಾಕಿಸಲಾಗುತ್ತದೆ.

ಮಾದಲಿ

ಗೋಧಿರೊಟ್ಟಿಗೆ ಬೆಲ್ಲ, ಹುರಿಗಡಲೆ, ಕೊಬ್ಬರಿಯನ್ನು ಸೇರಿಸಿ ಕುಟ್ಟಿ ಪುಡಿ ಮಾಡಿದ ಸಿಹಿ ತಿನಿಸು ತಿನ್ನುವ ಮುನ್ನ ಹಾಲು, ತುಪ್ಪ ಸೇರಿಸಿಕೊಳ್ಳುತ್ತಾರೆ.

ಮಿಳ್ಳಿ ಕಣಕ

ಹೋಳಿಗೆ ತಯಾರಿಸಲು ಬಳಸುವ ಹೂರಣದ ಜೊತೆಗಿನ ಹಿಟ್ಟಿಗೆ ಕಣಕ ಎಂದು ಕರೆಯುತ್ತಾರೆ. ಬಳ್ಳಾರಿ ಜಿಲ್ಲೆಯಲ್ಲಿ ಭರತಹುಣ್ಣಿಮೆಯಂದು ಬರೀ ಹುರುಳಿಯ ಹೂರಣ ಮಾಡುತ್ತಾರೆ. ಹುರುಳಿಯ ಮೇಲುಭಾಗದ ಸಿಪ್ಪೆ ಗಟ್ಟಿಯಾಗಿದ್ದು, ಬೇಯಿಸಿದರೂ ಹಾಗೆ ಗಟ್ಟಿಯಾಗಿ ಹೂರಣದಲ್ಲಿ ಉಳಿದಿರುವ ಭಾಗವೇ ಮಿಳ್ಳಿಯಾಗಿದೆ.

ಮೇಟಿಕುಂಭ

ಬಳ್ಳಾರಿ ದುರುಗಮ್ಮನ ಸಿಡಿ ಆಚರಣೆಯಲ್ಲಿ ಕೌಲುಬಜಾರದಿಂದ ವಿಶೇಷವಾಗಿ ಉತ್ಸವದಲ್ಲಿ ಕುಂಭ ತರಲಾಗುತ್ತದೆ. ಇದನ್ನು ಮೇಟಿಕುಂಭ ಎಂದು ಕರೆಯಲಾಗುತ್ತದೆ. ಇಲ್ಲಿ ಕುಂಭ ಹೊತ್ತ ಮುತ್ತೈದೆಯನ್ನು ದುರ್ಗಿಯ ಪ್ರತಿನಿಧಿ ಎಂದು ಭಾವಿಸುತ್ತಾರೆ. ಮೇಟಿಕುಂಭವು ಅಂತಿಮವಾಗಿ ದೇವಿಯ ಮುಂಭಾಗದ ಪಾದಗಟ್ಟೆಯಲ್ಲಿ ಬೇವಿನಸೊಪ್ಪಿನ ಮೇಲೆ ಪ್ರತಿಷ್ಠಾಪನೆಗೊಂಡಿರುತ್ತದೆ.

ಯಾತದ ಮರ

ಒಂದು ಜಾತಿಯ ಮರ. ಇದು ಗಟ್ಟಿಯಾಗಿದ್ದು, ಹೆಚ್ಚು ಬಾಳಿಕೆ ಬರುವ ಗುಣ ಹೊಂದಿದೆ.

ಲಕ್ಕಲಿ ಬರಲು

ಲಕ್ಕಲಿ ಎಂಬುದೊಂದು ಸಸ್ಯ. ಇದು ಪೊದೆ ರೂಪದಲ್ಲಿ ಬೆಳೆದಿರುತ್ತದೆ. ಕೂಡ್ಲಿಗಿ ಭಾಗದ ಮ್ಯಾಸಬೇಡರ ಸಮುದಾಯದವರು ಕಾಲ್ನಡಿಗೆಯಲ್ಲಿ ಹಂಪಿಯಾತ್ರೆ ಕೈಗೊಳ್ಳುವ ಸಮಯದಲ್ಲಿ, ಹಾದಿಮಧ್ಯ ತಮ್ಮ ಪೆಟ್ಟಿಗೆ ದೇವರುಗಳಿಗೆ ಲಕ್ಕಲಿ ಬರಲುಗಳಿಂದ ಗುಡಿಸಲು ಕಟ್ಟಿ ಪೆಟ್ಟಿಗೆದೇವರನ್ನು ಪ್ರತಿಷ್ಠಾಪಿಸುತ್ತಾರೆ.

ವಲಮೇರಿ

ಗ್ರಾಮದ ಸುತ್ತಲಿನ ಗಡಿ ಭಾಗ. ಅಮ್ಮನ ಜಾತ್ರೆಗಳಲ್ಲಿ ವಲಮೇರಿ ನಿಷೇಧಕ್ಕೆ ಒಳಪಟ್ಟಿರುತ್ತದೆ. ಗಡಿ ಭಾಗದ ಸುತ್ತ ಚರಗ ಚೆಲ್ಲುವುದರ ಮೂಲಕ ಕ್ಷುದ್ರಶಕ್ತಿಗಳು, ಕೃಷಿ ರೋಗಗಳು ಗಡಿದಾಟದಂತೆ ನಿರ್ಬಂಧಿಸಲಾಗುತ್ತದೆ.

ವಲ್ಲಿ

ಹೆಗಲಿಗೆ ಹಾಕಿಕೊಳ್ಳುವ ಉದ್ದವಾದ ವಸ್ತ್ರ. ಆಚರಣೆಯಲ್ಲಿ ಪುರುಷರು ಪಾಲ್ಗೊಳ್ಳುವಾಗ ಕಡ್ಡಾಯವಾಗಿ ವಲ್ಲಿಯನ್ನು ಹೆಗಲ ಮೇಲೆ ಹಾಕಿಕೊಳ್ಳಬೇಕು ಅಥವಾ ತಲೆಗೆ ಸುತ್ತಿಕೊಳ್ಳಬೇಕೆಂಬ ಸಂಪ್ರದಾಯವಿದೆ. ಮಳೆ ಸಂಬಂಧಿ ಆಚರಣೆಗಳಲ್ಲಿ ಆಗಸದತ್ತ ವಲ್ಲಿಯನ್ನು ತೂರಿ ಶಿಳ್ಳೆ ಹಾಕುತ್ತಾರೆ. ಇದು ಮಳೆ ತರಿಸುವ ಮಾಂತ್ರಿಕ ಕ್ರಿಯೆಗಳ ಒಂದು ರೂಪ ಎಂದು ಜನಪದರು ಪರಿಭಾವಿಸುತ್ತಾರೆ.

ಧಾನ್ಯ ರೂಪದ ಬಾಗಿನ

ಕೃಷಿಕರು ಗೌರಿ ಹಬ್ಬಕ್ಕೆ ತವರಿಗೆ ಕರೆತಂದ ಹೆಣ್ಣುಮಕ್ಕಳಿಗೆ ಧಾನ್ಯರೂಪದ ಬಾಗಿನ ನೀಡುವ ಸಂಪ್ರದಾಯವಿದೆ. ತಮ್ಮ ಹೊಲದಲ್ಲಿ ಬೆಳೆದ ಹೊಸ ಧಾನ್ಯಗಳನ್ನು ಬಿದಿರಿನ ಮೊರದಲ್ಲಿಟ್ಟು ನೀಡಲಾಗುತ್ತದೆ.

ವಾಡೆ

ಮನೆಯಲ್ಲಿಯೇ ಸ್ವಲ್ಪಮಟ್ಟಿನ ಧಾನ್ಯವನ್ನು ಸಂರಕ್ಷಿಸಲು ಮಾಡಿದ ದುಂಡಾದ ಗರಸೆ. ಇದನ್ನು ಈಚಲು ಮರದ ಗರಿಗಳಿಂದ ಮಾಡಲಾಗಿರುತ್ತದೆ. ಇದಕ್ಕೆ ಧಾನ್ಯ ತುಂಬುವಾಗ ಹಾಗೂ ಧಾನ್ಯ ತೆಗೆಯುವಾಗ ಪೂಜಿಸುತ್ತಾರೆ. ಕಾಲು ತಾಗಿಸುವಂತಿಲ್ಲ. ಕಾರಣ ಧಾನ್ಯರೂಪದ ದೈವವೆಂಬ ಭಾವನೆಯಿದೆ.

ಸ್ಥಿರ ಮುತ್ತೈದೆ

ಹಗರಿಬೊಮ್ಮನಹಳ್ಳಿ ತಾಲ್ಲೂಕು ಹಂಪಸಾಗರದಲ್ಲಿ ನಡೆಯುವ ತೆಪ್ಪೋತ್ಸವದಲ್ಲಿ ಅಂಬಿಗರ ಮನೆಯ ಒಬ್ಬ ಮಹಿಳೆಯನ್ನು ಸ್ಥಿರ ಮುತ್ತೈದೆ ಎಂದು ಕರೆಯುತ್ತಾರೆ. ಉತ್ಸವಮೂರ್ತಿಯ ಜೊತೆ ದೈವ ಸ್ವರೂಪಿ ಗಂಗಾಂಬಿಕೆಯಾಗಿ ಪೂಜಿಸಲ್ಪಡುತ್ತಾಳೆ. ದೊಡ್ಡನತ್ತು ಧರಿಸಿ, ಗಾಂಭೀರ್ಯತೆಯನ್ನು ಹೊಂದಿದ್ದು, ಇತರೆ ಮುತ್ತೈದೆಯರಿಗಿಂತ ಭಿನ್ನವಾಗಿ ಗುರುತಿಸಲ್ಪಡುತ್ತಾಳೆ. ಅಂಬಿಗ ಸಮುದಾಯದ ಮಹಿಳೆಯರು ಮಾತ್ರ ಸ್ಥಿರ ಮುತ್ತೈದೆಯಾಗುವ ಹಕ್ಕನ್ನು ಪಾರಂಪರಿಕವಾಗಿ ಪಡೆದವರಾಗಿರುತ್ತಾರೆ.

ಪೈರಿಗೆ ಬಸಿರುಡುಗೆ

ಎಳ್ಳಮವಾಸ್ಯೆಯಂದು ಪೈರಿಗೆ ಬಸಿರುಡಿಗೆ ತೊಡಿಸಿ ಭೂತಾಯಿಗೆ ಸೀಮಂತದ ಊಟ ಮಾಡಿಸುವ ಸಂಪ್ರದಾಯ, ಸಿರುಗುಪ್ಪ ಮತ್ತು ಬಳ್ಳಾರಿ ತಾಲೂಕುಗಳಲ್ಲಿ ಪ್ರಚಲಿತದಲ್ಲಿದೆ. ಅಂದು ಶೃಂಗರಿಸಿದ ಎತ್ತು ಬಂಡಿಗಳೊಂದಿಗೆ ಹೊಲಗಳಿಗೆ ತೆರಳುತ್ತಾರೆ. ಹೊಲದ ಬೆಳೆಗೆ ಅರಿಶಿಣ, ಕುಂಕುಮ, ಸೀರೆ, ಕುಪ್ಪಸ, ಬಳೆ ತೊಡಿಸಿ, ಆರತಿ ಬೆಳಗಿ ಉಡಿ ತುಂಬುತ್ತಾರೆ. ವಿಧ ವಿಧದ ಅಡುಗೆಯನ್ನು ಭೂತಾಯಿಗೆ ಎಡೆ ನೀಡಿ ಸಾಮೂಹಿಕ ಭೋಜನ ಮಾಡಲಾಗುತ್ತದೆ. ಇದು ಕಾಳು ಕಟ್ಟುವ ಕಾಲವಾಗಿದ್ದು, ಬಸಿರು ಹೆಣ್ಣುಮಕ್ಕಳಿಗೆ ಮಾಡುವ ಸಂಸ್ಕಾರಗಳಿಗೆ ಭೂತಾಯಿ ಭಾಜನಳಾಗಿದ್ದಾಳೆ.

ಸೂರು ಖರ್ಜಿಕಾಯಿ

ಹಾಲು, ತುಪ್ಪ, ಗೋಧಿ, ಹಿಟ್ಟು ಹಾಕಿ ತಯಾರಿಸಿದ ಕಣಕಕ್ಕೆ ಬೆಲ್ಲದ ಪುಡಿ ತುಂಬುತ್ತಾರೆ. ಈ ರೀತಿ ತಯಾರಿಸಿದ ಖರ್ಜಿಕಾಯಿಯನ್ನು ತುಪ್ಪದಲ್ಲಿ ಕರಿಯಲಾಗುತ್ತದೆ.

ಹೆಜ್ಜೆಮೇಳ

ಲಯಬದ್ಧವಾಗಿ ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕುವ ಸಾಮೂಹಿಕ ಕುಣಿತ. ಬಳ್ಳಾರಿ ಜಿಲ್ಲೆಯಲ್ಲಿ ಮೊಹರಂ ಆಚರಣೆಯಲ್ಲಿ ತಮ್ಮ ಸಂಗಡಿಗರೊಂದಿಗೆ ಅಲಾಯಿ ಕುಣಿಯುತ್ತ ಗುಂಪುಗುಂಪಾಗಿ ಹೆಜ್ಜೆ ಹಾಕುತ್ತಾರೆ. ಒಂದೊಂದು ಗುಂಪು ಒಂದೊಂದು ಉಡುಗೆಯನ್ನು ಧರಿಸುವುದುಂಟು. ಹೆಜ್ಜೆಮೇಳದಲ್ಲಿ ಒಬ್ಬರು ತಪ್ಪಡಿ ಹೊಡೆಯುತ್ತಾ ಇಡೀ ಗುಂಪನ್ನು ನಿಯಂತ್ರಿಸುತ್ತಿರುತ್ತಾರೆ. ಹಾಕುವ ಹೆಜ್ಜೆಗಳು ತಪ್ಪಡಿ ಶಬ್ದವನ್ನು ಅನುಸರಿಸುತ್ತಿರುತ್ತವೆ. ಸಾಮೂಹಿಕವಾಗಿ ಹಾಡುಗಳನ್ನು ಹಾಡುವುದುಂಟು.

ಹೋಲಿಗ್ಯಾ

ಹೊಲಗಳಲ್ಲಿ ಕಣ ತೂರುವಾಗ, ಚರಗ ಚೆಲ್ಲುವಾಗ ಜೋರಾಗಿ ಕೂಗುವ ಶಬ್ದ. ರೈತರಿಗಿದು ಮಂತ್ರಶಕ್ತಿಯ ಪದವಿದ್ದಂತೆ. ಎಲ್ಲಿಯವರೆಗೆ ಈ ಕೂಗು ಕೇಳಿಸುತ್ತದೆಯೋ, ಅಷ್ಟು ವ್ಯಾಪ್ತಿಯವರೆಗೆ ಬೆಳೆಗಳು ಸಮೃದ್ಧವಾಗಿರುತ್ತವೆಂಬ ನಂಬಿಕೆಯಿದೆ. ಕಣದಲ್ಲಿ ತೂರುವಾಗ ಗಾಳಿ ಕಡಿಮೆಯಾದರೆ, ಈ ರೀತಿಯಾಗಿ ಕೂಗುತ್ತಾರೆ. ಇದರಿಂದ ಗಾಳಿದೇವನ ಆಗಮನವಾಗುತ್ತದೆ ಎಂಬ ಪ್ರತೀತಿ ಇದೆ.

□□□

೪. ಜನಪದ ಹಾಡುಗಳು

ಮಳೆಯ ಹಾಡು

ಕಂದನ್ನ ತಾಯಿ ಬಂದು ।
ನಿಂತಾಳಲ್ಲ ಸಿರಿ ಬಾಗಲ್ಹಾಗ ।
ಕಂದಂಗೆ ಬೆಣ್ಣೆ ಕೊಡಿರಮ್ಮ ।
ನಮ್ಮ ಬಾಲಂಗೆ ಬೆಣ್ಣೆ ಕೊಡಿರಮ್ಮ ।
ಇಂದ್ರಲೋಕದಿಂದ ಬಂದನಲ್ಲೇ ।
ನನ್ನ ಕುವರ ತಂದನ್ನ ।
ನಮಗ ಮಳೆಗಾಲ ।
ಗೌಡಂಗೆ ತಂದೆ ।
ಹೆಸರ ಒಡಿಸೆಂದ ।
ತಂದೆ ಹೆಸರ ।
ಒಡಿಸ್ಯಾರ ಅಣ್ಣಯ್ಯ ।
ಕುವರಂಗೆ ಬೆಣ್ಣೆ ಕೊಡಿರಣ್ಣ ।
ಆದೋನಿ ಕಡಲಿಂದಾ ।
ಆದಾವ ಮಳೆಮಾಡಾ ।
ಗುತ್ತಿಗಿ ಕಡಲಿಂದ ।
ಸುತ್ತಿ ಸುತ್ತಿ ಬಂದಾವಾ ।
ಅಪ್ಪಯ್ಯ ಮಳೆಯಾ ಕರುಣಿಸೋ ।
ಅಪ್ಪಯ್ಯ ಮಳಿಯ ।
ಕರುಣಿಸೋ ಜೋಕುಮಾರ ।
ಸಾಲ ಚತ್ರಿಕೆಯಂಗೆ ಸಾಲುಸಾಲಾಗಿ ।
ಯರಗುಡಿ ಬಜಾರದಾಗ ।

ಬರುತಾನ ಜೋಕುಮಾರ ।

ಬಿತ್ತಿದ ಹೊಲಗಳು ।

ಬಿಕ್ಕಿ ಬಿಕ್ಕಿ ಅತ್ತಾವಲ್ಲೋ ।

ಅಪ್ಪಯ್ಯ ಮಳೆಯ ಕರುಣಿಸೋ ।

ಸೆಟ್ಟಿ ಸೆಟ್ಯಾರೆಲ್ಲಾ ।

ಕಟ್ಟಿಮ್ಯಾಲ ಕುಂತಾರಲ್ಲೆ ।

ನಿದ್ರೆ ಹೋದ ಕಂದನ್ನ ಬೆಸಗಂಡು ।

ನಿದ್ರೆ ಹೋದ ಕಂದನ್ನ ।

ಬೆಸಗಂಡು ಕೇಳುತಾರಲ್ಲೊ ।

ಉತ್ತ್ರೀಯ ಮಳೆಯೇ ।

ಕಾಣವಲ್ಲು ಜೋಕುಮಾರ ।

ರಾಯ ರಾಯರೆಲ್ಲಾ ।

ಭಾವಡ್ಯಾಗ ಕುತಗಂಡು ।

ಬಾಲಕಂದನ್ನ ಬೆಸಗಂಡು ।

ಬಾಲಕಂದನ್ನ ಬೆಸಗಂಡು ಕೇಳುತಾರಲೋ ।

ರೋಣಿಯ ಮಳೆಯು ।

ಕಾಣವಲ್ಲು ಜೋಕುಮಾರ ।

ಜೋಕುಮಾರೆಂಬಾತ ।

ಲೋಕದಲ್ಲೇ ಪಾರಿವಾಳ ।

ಲೋಕವು ನೋಡಿ ನಗುತಾವಾ ।

ಲೋಕವು ನೋಡಿ ನಗುತಾವಾ ।

ಸಿರಿ ಮಾಣಿಕ್ಯದಂತ ಮಗನ್ನ ।

ಹಡದಿಯಲ್ಲೇ ನಿನ್ನ ಮಗ ।

ಕುವರ ಜೋಕುಮಾರ ।

ಹತ್ತು ಸಾವಿರ ಹೊನ್ನು ।

ಹೊತ್ತು ಹೊತ್ತು ತಿರುಗೇವು ।

ಅಪ್ಪಯ್ಯ ಮಳಿಯ ಕರುಣೇಸೋ ।

ಬಾಲಯ್ಯ ಮಳಿಯ ಕರುಣೇಸೋ ।

- ಮಾರೆಮ್ಮ, ವಯಸ್ಸು-೫೦, ಎರಗುಡಿ, ಬಳ್ಳಾರಿ (ತಾ), (ಜಿ)

□□□

ಬಸಿರುಡುಗೆ

ಎಳ್ಳಮಾಸಿ ಬಂದೀತಮ್ಮ ತರಾಂತುರೀ ।
ಎಳ್ಳಮಾಸಿ ಬಂದಿತಮ್ಮ ತರಾಂತುರೀ ।
ಬೆಳಗಾಮುಂಜಾಲೆದ್ದು ಬ್ಯಾಳಿಗಾಕಲೇನ, ಹಿಟ್ಟನಾದಲೇನ ।
ಬೆಳಗಾಮುಂಜಾಲೆದ್ದು ಬ್ಯಾಳಿಗಾಕಲೇನ ಹೋಳಿಗೆ ಮಾಡಲೇನ ।

ಹಪ್ಪಳ ಸಂಡಿಗೆ ಕೊರಿಲೇನ ಪುಟ್ಟಿ ತುಂಬಲೇನ ।
ಪುಟ್ಟಿ ತುಂಬಲೇನ ಹೊಲಕ ಹೊಂಡಲೇನ ।
ಜೂಲಾ ಹಾಕಿ ಗೆಜ್ಜೆಕಟ್ಟಿ ಬಸವ ಸಿಂಗಾರಾದಾನೆ
ಗಾಡಿ ಹೊಡದಾರೆ ಹೊಲಕ ಹೊಂಟಾರೇ ॥ ಎಳ್ಳ ॥

ಬನ್ನಿಮರದ ಬುಡದಾಗ ಬಂದಾರ ದೈವ ಕಂಡಾರ ।
ಪಾಂಡೋರ ಪೂಜೆ ಮಾಡ್ಯಾರ ಸರಗ ಚೆಲ್ಯಾರ ।
ಸೀರೆ ಕುಬಸ ಉಡ್ಸ್ಯಾರ ಬಳೆಯ ತೊಡಿಸ್ಯಾರ ।
ಬಸಿರಿ ಬನದೇವಿಗೆ ಉಣಿಸ್ಯಾರಾ ಬಸಿರುಡಿಗೆ ಮಾಡ್ಯಾರ ॥ ಎಳ್ಳ ॥

ಎಳ್ಳು ಹೋಳಿಗೆ ಮಿಳ್ಳೆತುಪ್ಪ, ತೊಗೆರೊಟ್ಟಿ, ಹಸಿಟ್ಟು ಮಾಡ್ಯಾರ, ಉಣ್ಣಾಕಾಕ್ಯಾರ ।
ರಾಗಿಯ ತೆನಿಯಾ, ಸಜ್ಜೀಯ ತೆನಿಯಾ ರಾಜಗಿರಿರಾಜನೇ ।
ಕಳುವ್ಯಾನೇ ಬಸಿರಿಗೆ ಊಟ ಉಣಿಸ್ಯಾನೆ ॥ ಎಳ್ಳ ॥

- ರತ್ನಮ್ಮ, ವಯಸ್ಸು-೫೫, ಗೆದ್ದಲಗಟ್ಟೆ, ಕೂಡ್ಲಿಗಿ (ತಾ)

□□□

ಬಿತ್ತಿ ಬೆಳೆಯುವ ಹಾಡು

ಸೆಡ್ಡುಗಳ ಹಾಕಿರಣ್ಣಾ । ವಡ್ಡುಗಳ ಕದೀರಣ್ಣಾ
ಗೊಬ್ಬರದ ಬಂಡಿ ಹೊಡಿರಣ್ಣ । ಬೀಜ ಬಿಡಿರಣ್ಣ ।
ಗೊಬ್ಬರದ ಬಂಡಿ ಹೊಡಿರಣ್ಣ । ಬೀಜ ಬಿಡಿರಣ್ಣ ।

ಬೀಜಗಳ ಬಿತ್ತ್ಯಾರೆ । ಬೆಳೆಗಳ ಬೆಳೆತಾರೆ ।
ಬದುವಿಗೆ ಪೂಜೆ ಮಾಡ್ಯಾರೆ । ಬೆಳೆಯ ಬೆಳೆದಾರೆ
ಬನದಾಗಿನ ಮುತ್ತೈದಾಕಿನ ಕರಿಸ್ಯಾರೆ । ತೆನಿಯ ಮುರಿಸ್ಯಾರೆ ।

ಚಟಪಟ ತೆನಿಯ ಮುರಿದಾರೆ । ಗೂಡ ಹಾಕ್ಯಾರೆ ।
ರಾಯ ಬಸವಣ್ಣನ ಕರಿಸ್ಯಾರೆ । ತೆನಿಯ ತುಳಿಸ್ಯಾರೆ ।
ತೆನಿಯ ತುಳಿಸ್ಯಾರೆ । ರಾಟೆ ಹೊಡೆಸ್ಯಾರೆ ।

ಹಂತೀಯ ಕಟ್ಯಾರೆ । ಕಂಕಿಯ ತೆಗೆದಾರೆ ।
ಗಾಳಿ ದೇವನ ಕರೆದಾರೆ । ಕಾಳ ತೂರ್ಯಾರೆ ।
ರಾಶಿಯ ಪೂಜೆಯ ಮಾಡ್ಯಾರೆ । ಸರುಗ ಚೆಲ್ಯಾರೆ ।

ಆಯಾಗಾರಗ ಹನ್ನೊಂದು । ಅಯ್ಯಗಳಿಗಿನ್ನೊಂದು ।
ಪಾಲು ತಗುದಾರೆ । ಚೀಲ ತುಂಬ್ಯಾರೆ ।
ಏನೇಳ್ಳಿ ಅದರ ಸಿಂಗಾರ । ರೈತರ ಬದುಕು ಬಂಗಾರ ।

ಕುರುಗೋಡು ಬಸವಣ್ಣ । ಕ್ಯಾಟೆಯ ಮಲ್ಲಣ್ಣ ।
ನಿಮ್ಮಗಳ ದಯೆ ನಮಗೆ ಇರಲಣ್ಣ । ಭಯ ಮರಿಲಣ್ಣ ।
ದಣಿವ ಮರಿಸ್ಯಾನ । ಉಂಡುಟ್ಟು ನಲಿಸ್ಯಾನ ।

- ಲಲಿತಮ್ಮ, ವಯಸ್ಸು-೫೦, ಕಕ್ಕುಪ್ಪೆ, ಕೂಡ್ಲಿಗಿ (ತಾ)

❑❑❑

ಬಸವಣ್ಣ

ಕಾರುಹುಣ್ಣಿಮೆ ದಿನ ಹೋರಿ ನಮ್ಮ ।
ಬಸವಣ್ಣ ಬೇಗದಿಂದಲೇ ಬೆಸಗಂಡ ।
ಬೇಗದಿಂದಲೇ ಬೆಸಗಂಡ ನಮ್ಮ ಬಸವ ।
ಸಾದ ಸಿರಿಗಂಧ ಹೋಗಿ ಹುಗ್ಗಿ ತುಪ್ಪ ।
ಬಸವನ ಪಾದದಲ್ಲಿಟ್ಟು ಶರಣೆಂದೆ ॥ ಕಾ ॥

ಅಂಗಿ ತೊಟ್ಯಾನ ಗೊಂಗಾಡಿ ಒದ್ದಾನ ।
ಬಂಗಾರ ಖಡಗ ಬಲಗೈಲಿ ।
ಬಂಗಾರ ಖಡಗ ಬಲಗೈಲಿ ನಮ್ಮ ಬಸವ ।
ಸಿಂದೇಗೇರೀಲಿ ಹೊಳದಾನ ಬಸವಣ್ಣ ॥ ಕಾ ॥

ಬಡವಾರ ಮನೆಯಾಗ ಕೊಡುವ ಕರ್ಜಿಕಾಯಿ ।
ಸಡಗರ ಸಂಪತ್ತು ನಮ್ಮ ಬಸವ ।
ಸಡಗರ ಸಂಪತ್ತು ಬಸವನ ಪಾದಕ ।
ಸಲ್ಲಿಸಲೆಂದು ಹೋಗುವಾಗ ಬಸವನು ।
ಒಡಮೂಡುತಾನ ಬೈಲಾಗ ॥ ಕಾ ॥

ಮೂಡಲದಿಕ್ಕಿಗೆ ಓಡ್ಯಾನ ತಗ್ಗಿಗೆ ।
ಕಾಡಿನ ಬನಸಿರಿಲಿ ಆಟ ಆಡ್ಯಾನ ।
ಕಾಡಿನ ಬನಸಿರಿಲಿ ಆಟ ಆಡ್ಯಾನ ।
ಭಾರಿ ಬಂಟಾನಮ್ಮ ಚನ್ನಬಸವ ॥ ಕಾ ॥

ತಾಕ ತೆಕ್ಕಲಕೋಟೆ, ಕೊನೆ ಸೆರಗು ಬಳ್ಳಾರಿ ।
ಏಕರಾಜ್ಯವು ಕುರುಗೋಡು ।
ಏಕರಾಜ್ಯವು ಕುರುಗೋಡು ಬೈಲಾಗ ।
ಬೊಪ ಮನಿಗ್ಯಾನ ಬಸವಣ್ಣ ॥ ಕಾ ॥

- ದೇವಮ್ಮ, ವಯಸ್ಸು-೭೫, ಹೊಸಯರಗುಡಿ, ಬಳ್ಳಾರಿ (ತಾ), (ಜಿ)

❑❑❑

ಗೌರಿ ಪದ

ಹುಣ್ಣಿಮೆ ಬಂತು ।
ನಮ್ಮೋರು ಬರಲಿಲ್ಲ ।
ಕಂಡುಗ ನೀರು ಉಡುಲಾಗ ।
ಕಂಡುಗ ನೀರು ಉಡುಲಾಗ ಕಟಿಕೊಂಡು ।
ಅಂಗಳದಾಗ ಕುಂತಾಳ ಗೌರಮ್ಮ ॥

ಹಿತ್ತಲಿನ ನಿಚ್ಚಣಿಕೆ ।
ಹಾಕ್ಯಾಳ ಗೌರಮ್ಮ ।
ಏರಿನೋಡ್ಯಾಳ ತವರೂರಾ ।
ಏರಿನೋಡ್ಯಾಳ ತವರೂರದಾರಿಗೆ ।
ತಂದೆ ಗಿರಿರಾಜ ಬರುತಾನ ।

ಬಂದಂತ ತಂದೆಗೆ ।
ಗಿಂಡೀಲಿ ನೀರ್‌ಕೊಟ್ಟು ।
ಕುಂದ್ರಾಕಾಕ್ಯಾಳ ಸುಖಮಂಚ ।
ಕುಂದ್ರಾಕಾಕ್ಯಾಳ ಸುಖ ಮಂಚ ಕೇಳ್ಯಾಳೆ ।
ತಾಯಿ ಬೇಸಾದಾಳ । ತಮ್ಮ ಬೇಸಾದಾನ ।
ಒಂದೀದ ಗೆಳತೇರು ಅಳುತಾರ ಗೌರಮ್ಮ ।
ಒಂದೇ ದಿನ ಇದ್ದು ಬರುವಂತೀ ॥

ಹತ್ತು ಕಾಲಿನ ಸೆಳೆಮಂಚ ಹಾಕ್ಯಾಳ ।
ಹೊಟ್ಟಿ ನೋವು ಅಂತ ಮಲಗ್ಯಾಳ ।
ಹೊಟ್ಟೆ ನೋವು ಅಂತ ಮಲಗ್ಯಾಳ ಗೌರಮ್ಮ ।
ಆಡಕೋದ ಬೆನವಣ್ಣ ಬಂದು ಕೇಳ್ಯಾನ ।
ಏನಮ್ಮ ತಾಯಿ ಮಲಗಿದ್ದಿ ।

ನಿಮ್ಮವ್ವ, ನಿಮ್ಮಜ್ಜ ಕರಿಯಾಕ ಬಂದಾರ ।
ಕಿಡಿಗೇಡಿ ಜಂಗಮ ಕಳುವಾನೆ? ॥

ನಿನ್ನನೆ ಕೊಡುವಾಗ ಯಾರ್‍ಯಾರು ಅಣೆಯಮ್ಮ
ಅವರಾನಾ ಕೇಳು ಹೋಗಮ್ಮ ।
ಕಕ್ಕಯ್ಯ ಕಾಳಯ್ಯ ।
ವಕ್ಕಲುಗಿರಿ ಮುದ್ದಯ್ಯ ।
ಲಕ್ಕಿಸೆಟ್ಟೇರು ಧರಣೀಗೆ ।
ಲಕ್ಕಿಸೆಟ್ಟೇರು ಧರಣೀಗೆ ಐದು ಮಂದಿ ।
ಮ್ಯಾಲೊಬ್ಬ ಇರುವ ಬಸವಪ್ಪ ॥

ಹಾಲು ಗೋದಿ ರೊಟ್ಟಿ ।
ದ್ವಾರದ ಬಟ್ಟಲು ।
ದ್ವಾರದ ಬಟ್ಟಲು ಕಿರಿತುಪ್ಪ ।
ಕಿರಿತುಪ್ಪ ಉಂಬಾದು ಬಿಟ್ಟು ।
ನಾರಿ ತವರೂರು ನೆನೆಸ್ಯಾಳ ।
ನಿನ ತವರಲ್ಲಿ ಕಂಬಳಿ ಹಾಸಿಲ್ಲ ।
ಹೆಂಗೆ ತವರೂರಿಗೆ ಕಳಿಸಾಲಿ ॥

ರಾಗಿ ರೊಟ್ಟಿ, ರಾಜಗಿರಿ ಪಲ್ಯ ।
ರಾಜಕ ತವರೂರ ಮನೆ ಮಗಳೊ ।
ರಾಜಕ ತವರೂರು ಮನೆಗಳಿಗೆ ನಾನು ।
ಹೋಗಿ ಬಂದೇನು ಕಳುವಯ್ಯ ॥

ಹೊಸ್ತಿಲಿಗೆ ನೀರು ।
ಒಲೆಗೆ ವಿಭೂತಿ ।
ಒಲೆಗೆ ವಿಭೂತಿ ಬೆರೆಸಿ ।
ಬರುತೇನೆ ನಾನು ಕಳುವಯ್ಯ ॥

ಅಕ್ಕಿಯ ಅನ್ನ ।
ಚೆಂಕೊಂತ ಪಲ್ಯ ।
ಇರುವಾ ದಿಕ್ಕೀಗೆ ತವರೂರು ।
ಬಡವಾನ ಮನೆಮಗಳು ।

ಬಡವಾನ ಮನೆಮಗಳು ನಾ ।
ಹೋಗಿ ಬರುವೆ ಕಳುವಯ್ಯ ॥

ಸಿರಿಗೇರಿ ಹಳ್ಳೀಲಿ ।
ಸಿರಿವಂತರ ಮಗಳು ।
ಹೇಳೆ ಗೌರಮ್ಮ ಶಿವಬಂದ ।
ಹೇಳೆ ಗೌರಮ್ಮ ಶಿವಬಂದ ಮ್ಯಾಗಳ ।
ಆನೆ ಎಕ್ಕೇಯ ಪದೆಯಲ್ಲಿ ।
ಲೆಕ್ಕವಂತರ ಮಗಳು ।
ಹೇಳೇ ಗೌರಮ್ಮ ಶಿವಬಂದ ॥

- ದೇವಮ್ಮ, ವಯಸ್ಸು-೭೫, ಹೊಸಯರಗುಡಿ, ಬಳ್ಳಾರಿ (ತಾ), (ಜಿ)

❑❑❑

ಜೋಕುಮಾರನ ಹಾಡು

ಬಾಲನ ತಾಯಿ ಬಂದು ಬಾಗಲಿಗೆ
ನಿಂತಳವ್ವ
ಬೇಗನೆ ಬೆಣ್ಣೆ ಕೊಡಿರವ್ವ
ಬೇಗನೆ ಬೆಣ್ಣೆ ಕೊಡಿರವ್ವ
ನಿಮಗುಳ್ಳೆ ಬಾಲಯ್ಯಗಾತೆಗನುವಾಗೆ
ಜೋಕುಮಾರುಟ್ಟಲಿ ಲೋಕವೆಲ್ಲ
ಬೆಳೆಯಲಿ
ಆಕಳದಾಲು ಕರೆಯಲಿs
ಆಕಳದಾಲು ಕರೆಯಲಿ ।
ಈ ಮನಿಯ ಕಾಯ್ಸಿದ ಮಸರು ಕಡಿಯಲಿ
ಅಣ್ಣ ನನ್ನ ಕೊಮರಗೆ
ಹೆಣ್ಣು ನೋಡೊಲೋದರೆ
ಹಣ್ಣಲೆ ಮಾಗಿ ಮಳೆಗಾಲ
ಹಣ್ಣಲೆ ಮಾಗಿ ಮಳೆಗಾಲs
ಗೌಡರನ ಕೂರಿಗೆ ಮ್ಯಾಲೆ ಸಿರಿ ಬರಲಿ
ಕಾಯನ್ನ ಕತ್ತರಿಸಿ ತೂಗಿ ತೂಗಿ
ಮುರಿದಾನೆ
ಜೋಗಾಗೆ ನಿಂತಾನೆ ಜ್ಯೋತಿರ್ಲಿಂಗ
ಜೋಗಾಗೆ ನಿಂತಾನೆ ಜ್ಯೋತಿರ್ಲಿಂಗ
ಮಹಶಿವನೆ ಎನ್ನ ತರುಸಯ್ಯ
ಹೊನ್ನ ಮಳಿಯ
ಮಾಡಿದ ಫಲ ಬಾಡಿ ಬಾಡಿ
ಹೊಗುತಾವೆ

ದೇಸದ ಮ್ಯಾಲೆ ಹೊರಟಾನೆ
ಅಟ್ಟ ಬೆಟ್ಟದಲ್ಲಿ ನಡೆದಿರೊ
ನನ್ನ ಕೊಮಾರ
ಬಟ್ಟಲು ಕಂಗಳ ಚೆಲುವ ನೀನು
ಬಟ್ಟಲು ಕಂಗಳ ಚೆಲುವ ನೀನು ।
ಈ ಊರು
ನಾರೆಯರ ಕಣ್ಣೆ ನಿನ್ನ ಮ್ಯಾಲೆ
ಅತ್ತಾಲ ಮಳೆ ಬಂದು
ಇತ್ತಾಲ ಕೆರೆ ತುಂಬಿ
ಗುತ್ತಿ ಮಳೆಯು ನೋಡು
ಹೊಳೆಯ ಕಟ್ಟಿ
ಗುತ್ತಿ ಮಳೆಯು ನೋಡು ।
ಹೊಳೆಯಕಟ್ಟಿ ಗೌಡರನು
ಕೂರಿಗೆ ಮ್ಯಾಲೆ ಸಿರಿಬರಲಿ
ಅರಾರೆ ಮಳೆ ಬಂದು
ಬರೋಬರಿ ಕೆರೆ ತುಂಬಿ
ಅವಾಗಳೆಲ್ಲ ಹಯನಾಗಿ
ಅವಾಗಳೆಲ್ಲ ಹಯನಾಗಿ ।
ಗೌಡರ ಕೂರಿಗೆ ಮ್ಯಾಲೆ ಸಿರಿಬರಲಿ
ಉಪ್ಪುತಾರೆ ನನ್ನ ವಕ್ಕಗಾರ
ಕೊಮರಾಗೆ
ಇಟ್ಟವನ್ನ ವಾಲೆ ಕಿವಿಯಾಳೆ
ಇಟ್ಟವನ್ನ ವಾಲೆ ಕಿವಿಯಾಳೆS ।
ಹನುಮಕ್ಕS
ಉಪ್ಪುತಾರೆ ನನ್ನ ಕುಮರಾಗೆ
ಗಾರಿಗೆ ಬೇಡಿ ಗರಗರನೆ
ಅಳುತಾನೆ
ಸಾಲ ಮಾಳಿಗೆ ಮನೆಯೊಳೆ
ಸಾಲ ಮಾಳಿಗೆ ಮನೆಯೊಳೆ ।
ಓಬಮ್ಮ! ಗಾರಿಗೆ ಕೊಡುನನ್ನ

ಕೊಮರಾಗೆ

ಮಜ್ಜಿಗೆ ತಾನನ್ನ ಗೆಜ್ಜೆ ಕಾಲ

ಕೊಮಾರಾಗೆ

ದೊಡ್ಡ ಮಾಳಿಗೆ ಮನೆಯಾಳೆ

ದೊಡ್ಡ ಮಾಳಿಗೆ ಮನೆಯಾಳೆs।

ಮಂಜಕ್ಕs

ಮಜ್ಜಿಗೆ ಕೊಡು ನನ್ನ ಕೊಮರಾಗೆ

ಹಾಲುತಾರೆ ನನ್ನ ಬಾಲಿಯ

ಕೊಮರಾಗೆ

ಸಾಲ ಮಾಳಿಗೆ ಮನೆಯಾಳೆ

ಸಾಲ ಮಾಳಿಗೆ ಮನೆಯಾಳೆ

ರತ್ನಮ್ಮ ಹಾಲು ತಾರೆ

ನನ್ನ ಕೊಮರಾಗೆ.

ಕತ್ತಿನ ಕಿವಿಯೊಳೆ ಲೆಕ್ಕ ಕೇಳೆ

ಶಾಂತಮ್ಮ ಕತ್ತಿಗೆ ಮುತ್ತು

ಬಿಗುದಾವೆ

ಕತ್ತಿಗೆ ಮುತ್ತು ಬಿಗಿದಾವೆ।

ನನ್ನ ಕೊಮರಾಗೆ

ತಂದು ನೀಡಮ್ಮ ಪಡಿಗಳ

ಗಾರಿಗೆ ಬೇಡಿ ಗರಗರನೆ

ಅಳುತಾನೆ

ಸಾಲ ಮಾಳಿಗೆ ಮನೆಯಾಳೆ

ಸಾಲ ಮಾಳಿಗೆ ಮನೆಯಾಳೆ

ಶಂಕ್ರಮ್ಮ

ಗಾರಿಗೆ ಕೊಡು ನನ್ನ ಕೊಮರಾಗೆ

ವಟೆನೊಂದು ಒಂದು ಪಟೆ ಪಂಚ

ನೀಡಿದಾಳೆ

ತಾನಿಟ್ಟ ಬಂಗಾರ ತಗುದಾಳೆ

ಇಟ್ಟ ಬಂಗಾರ ತೆಗುದಾಳೆ

ಓಬಮ್ಮ ರಾಜ ಕೊಮಾರನ ಹಡುದಾಳೆ

ಬೇಣ ಬಂದಾವೊಂದು ತೂಗು ಮಂಚ
ನೀಡಾದಳೆ
ತಾನಿಟ್ಟ ಬಂಗಾರ ತಗುದಾಳೆ
ಇಟ್ಟ ಬಂಗಾರ ತಗುದಾಳೆ
ಓಬಮ್ಮ ರಾಜಕುಮಾರನ ಹಡುದಾಳೆ
ಸಜ್ಜೆ ತರುತಾಳೆಂದು ಎತ್ತುಗಳು
ನಿಡುಸಿದಿ
ನಿಸ್ತ್ರೇರ ಮುಂದೆ ನೆಡುಸಿದ
ನಿಸ್ತ್ರೇರ ಮುಂದೆ ನಡೆಸಿದ ।
ಹನುಮವ್ವ
ಸಜ್ಜೆ ತಂದಾಳೆ ಮರದ ತುಂಬಾ
ಜೋಳ ತರುತಾಳೊಂದೆತ್ತುಗಳು
ನಡೆಸಿದ
ನಾರೇರ ಮುಂದೆ ನಡೆಸಿದ
ನಾರೇರ ಮುಂದೆ ನಡೆಸಿದ
ಮಂಜಮ್ಮ
ಜ್ವಾಳ ತಂದಾಳೆ ಮರದ ತುಂಬಾ
ಕಂದ ನೆತ್ತ್ಯಾರೆಂದು ನಿಂಬೆ
ತೊಟ್ಟಿಲಕಟ್ಟಿ
ನಿಂದ್ರಾಗಾನಿ ನೀರೆಲ್ಲ ನಿಂದ್ರದಂಗೆ
ನಿಂದ್ರಾಗಾನಿ ನೀರೆಲ್ಲ ನಿಂದ್ರದಂಗೆ
ಬಳುಪಾಡಿ
ಕಂದ ನಿನ್ನ ಮನಿಗೆ ಜಯ ಜಯ
ಬಾಲನೆತ್ತ್ಯಾಯರೆಲ್ಲ ನೆರದಾರೊ
ತೊಟ್ಟಿಲಕಟ್ಟಿ
ಬಾಲಕನ್ನೆಯರೆಲ್ಲ ನೆರದಾರೊ
ಜೊಗಳ ಪಾಡಿ
ಬಾಲ ನಿನ್ನ ಮನಿಗೆ ಜಯ ಜಯ

- ಶ್ರೀಮತಿ ಶಾರದಮ್ಮ ಹನುಮಂತಪ್ಪ, ವಯಸ್ಸು-೪೫, ಹುಲಿಕೆರೆ, ಕೂಡ್ಲಿಗಿ (ತಾ)

□□□

ತವರಿಗೆ ಹೊರಟ ಗೌರಮ್ಮ

ಹುಣ್ಣಿಮೆ ಬಂತಮ್ಮ ನಮ್ಮೋರು ಬರಲಿಲ್ಲ
ಕೋಡುಗದನ್ನನೀರ ಉಡಲಾಗೇ...
ಕೋಲು ಕೋಲೇ ಕೋಲನ್ನಾ... ||

ಕೋಡಗದನ್ನನೀರ ಉಡಲಾಗ ಕಟಿಗಂಡು
ಅಂಗಾಲ ಹಿಡಿದು ಅಳುತಾಳೇ...
ಕೋಲು ಕೋಲೇ ಕೋಲನ್ನಾ... ||

ಮಾರುತ ಬಂತಮ್ಮ ನಮ್ಮೋರು ಬರಲಿಲ್ಲ
ಕೊಂಡಗದಾ ನೀರ ಉಡಲಾಗಾ...
ಕೋಲು ಕೋಲೇ ಕೋಲನ್ನಾ... ||

ಕೊಂಡಗದನ್ನ ನೀರು ಉಡಲಾಗ ಕಟ್ಟಿಗೆಂಡು
ಅಂಗಾಲ ಹಿಡಿದು ಅಳತಾಳೆ...
ಕೋಲು ಕೋಲೇ ಕೋಲನ್ನಾ... ||

ಹತ್ತಕಾಲೀನೇಣಿ ಉಪ್ಪರಿಗೆಗೆ ನಿಲಿಹಾಕಿ
ಏರಿನೋಡ್ಯಾಳೇ ತವರೂರೇ...
ಕೋಲು ಕೋಲೇ ಕೋಲನ್ನಾ... ||

ಏರಿನೋಡ್ಯಾಳೇ ತವರೂರ ದಾರಿಲಿ
ತಂದೆ ಗಿರಿರಾಜ ಬರುತಾನೇ...
ಕೋಲು ಕೋಲೇ ಕೋಲನ್ನಾ... ||

ಬಂದಂತಾ ತಂದೆಗೆ ಗಿಂಡಿಲ್ಲೇ ನೀರ್‌ಕೊಟ್ಟು
ಕುಂದ್ರಕಾಕ್ಯಾಳ ಕುರಜೀಯಾ...
ಕೋಲು ಕೋಲೇ ಕೋಲನ್ನಾ... ||

ಕುಂದಾರಾಕಾಕ್ಯಾಳ ಕುರಜೀಯ ಗೌರಮ್ಮ
ಕುಂತು ಕೇಳ್ಯಾಳೆ ಸುಖ-ದುಃಖವೋ...
ಕೋಲು ಕೋಲೇ ಕೋಲನ್ನಾ... ||

ತಾಯಿ ಬೇಸ್ಯೆದಾಳಾ ತಮ್ಮ ಬೇಸ್ಯೆದಾನ
ಹೊಂದಿದ ಗೆಣತ್ಯೇರು ಅಳುತಾರೇ...
ಕೋಲು ಕೋಲೇ ಕೋಲನ್ನಾ... ||

ಹೊಂದೀದ ಗೆಣತ್ಯೇರು ಅಳುತಾರೆ ಗೌರಮ್ಮ
ಒಂದೀನ ಇದ್ದು ಬರುವಂತೇ...
ಕೋಲು ಕೋಲೇ ಕೋಲನ್ನಾ... ||

ಹಾರೇ ಊರು ತಿರುಗಿ ಐರಾಣಿ ತಂದಾರು
ಜೋಳಿಗುಳ್ಳವನಾ ಮಡದಿ ಮೊದಲಿಲ್ಲೇ...
ಕೋಲು ಕೋಲೇ ಕೋಲನ್ನಾ... ||

ಜೋಳಿಗುಳ್ಳೋನು ಮೊದಲಿಲ್ಲೇ ಕಿರಿಗೌರಿ
ಹೋಗ್ರಿ ಬಂದೇನೆಂಬೂದು ಧರ್ಮೇನೇ...
ಕೋಲು ಕೋಲೇ ಕೋಲನ್ನಾ... ||

ಹತ್ತಾ ಊರು ತಿರುಗಿ ಭಿಕ್ಷಾವ ತಂದಾರೆ
ಬೆತ್ತಾ ಎಳವೋರು ಮೊದಲಿಲ್ಲೇ...
ಕೋಲು ಕೋಲೇ ಕೋಲನ್ನಾ... ||

ಬೆತ್ತ ಎಳವೋರು ಮೊದಲಿಲ್ಲೇ ಸಿರಿಗೌರಿ
ಹೋದೇನೆಂಬೋದು ಧರ್ಮೇನೇ...
ಕೋಲು ಕೋಲೇ ಕೋಲನ್ನಾ... ||

ನಾಕು ಕಾಲೀನ ಮಂಚ ಗೋಡಿಗೆ ನಿಲಿಹಾಕಿ
ಹೊಟ್ಟೆ ಬ್ಯಾನೆಂದು ಮಲಿಗ್ಯಾಳೇ...
ಕೋಲು ಕೋಲೇ ಕೋಲನ್ನಾ... ||

ಆಡಾಕೋದ ಬೆನವಣ್ಣ ಓಡಿ ಒಳಗಾ ಬಂದ
ಏನೇ ಮಾತಾಯಿ ಮಲಗಿದ್ದೇ...
ಕೋಲು ಕೋಲೇ ಕೋಲನ್ನಾ... ||

ನಿಮ್ಮವ್ವ-ನಿಮ್ಮಜ್ಜ ಕರಿಯಾಲೇ ಬಂದಾರ
ದಿಟ್ಟ ಜಂಗಮು ಕಳುವ್ಯಾನೇ...
ಕೋಲು ಕೋಲೇ ಕೋಲನ್ನಾ... ॥

ದಿಟ್ಟಾನೇ ಜಂಗಮ ಕಳುವಾಲೇ ದೊರೆತಾಯಿ
ನಿನ್ನಾ ಕೊಡುವಾಗ ನಿನಗ್ಯಾರೆ...
ಕೋಲು ಕೋಲೇ ಕೋಲನ್ನಾ... ॥

ಕಗ್ಗಯ್ಯಾ ಕಾರಯ್ಯ ಒಕ್ಕಳಿಗೆ ಮಾಂತಯ್ಯ
ಲಕ್ಕೇನ ಚೆಟ್ಟಪ್ಪ ಧರಣಯ್ಯಾ...
ಕೋಲು ಕೋಲೇ ಕೋಲನ್ನಾ... ॥

ಲಕ್ಕೇನ ಚೆಟ್ಟಪ್ಪ ಧರಣಯ್ಯಾ ಐದು ಮಂದಿ
ಮ್ಯಾಲೆ ದಾಸಪ್ಪ ಅಡಿವಪ್ಪ...
ಕೋಲು ಕೋಲೇ ಕೋಲನ್ನಾ... ॥

ಚಕ್ಕಂದಿಲುಂಬೋದು ಹಾಲುಗೋಧಿರೊಟ್ಟಿ
ದಾರ ಬಟ್ಟಲದಾ ತಿಳಿತುಪ್ಪಾ...
ಕೋಲು ಕೋಲೇ ಕೋಲನ್ನಾ... ॥

ಚಕ್ಕಂದದಿ ಬಟ್ಟಲಿ ತಿಳಿತುಪ್ಪೋಂಬೋದು ಬಿಟ್ಟು
ಮತ್ತೇನು ಭ್ರಮಿಸೀಯೇ ತವರೂರಾ...
ಕೋಲು ಕೋಲೇ ಕೋಲನ್ನಾ... ॥

ಪ್ಯಾಟೀಯ ಕಡಿಯವರು ರಾಟಾನಾ ನೂಲೋರು
ರಾಟಾನಾದಾದಾಗ ಮಲಗೋರೇ....
ಕೋಲು ಕೋಲೇ ಕೋಲನ್ನಾ... ॥

ರಾಟಾನಾದಾದಾಗ ಮಲಗೋರ ಮನೆಗಳಿಗೆ
ಏನೆಂದು ಭ್ರಮಿಸಿದ್ದೆ ತವರೂರಾ...
ಕೋಲು ಕೋಲೇ ಕೋಲನ್ನಾ... ॥

ಅಂಗೀಯ ನೂಲುವರು ಗಂಜೀಯ ಕುಡಿಯುವರು
ಅಂಗಾಳಾದಾಗೇ ಮಲಗೋರೆ...
ಕೋಲು ಕೋಲೇ ಕೋಲನ್ನಾ... ॥

ಅಂಗಾವಳಾದಾಗ ವರಗೋರ ಮನೆಗಳಿಗೆ
ಏನೇ ಭ್ರಮಿಸಿದ್ದಿಯೇ ತವರೂರಾ..
ಕೋಲು ಕೋಲೇ ಕೋಲನ್ನಾ... ||

ಒಲಿಯಾ ಗಾಳಿ ಬಿತ್ತಿ ಹೊಚ್ಚಲ್ಯಾಗಳ ನೀರು
ಕಳಿಸೇ ಬಂದೇನು ಕಳುವಯ್ಯಾ...
ಕೋಲು ಕೋಲೇ ಕೋಲನ್ನಾ... ||

ಅಕ್ಕೀಯಬಾನ ಚಕ್ಕಾವಂತೀ ಪಲ್ಲೇ
ಬಿಕ್ಕೀಗೆ ತವರೂರು ಬಡವಾರೇ ಕಳುವಯ್ಯಾ...
ಕೋಲು ಕೋಲೇ ಕೋಲನ್ನಾ... ||

ಬಿಕ್ಕಿಗೆ ತವರವರು ನಿಂತಾರ ಕಳುವಯ್ಯಾ
ಹೋಗಿ ಬರುವೇನೂ ತವರೀಗೆ...
ಕೋಲು ಕೋಲೇ ಕೋಲನ್ನಾ... ||

- ಗಂಗಮ್ಮ, ವಯಸ್ಸು ೬೫, ಕೊಲ್ಲಮ್ಮ, ವಯಸ್ಸು-೬೭, ಹೊಸಯರಗುಡಿ, ಬಳ್ಳಾರಿ (ತಾ)

□□□

ಗೌರಮ್ಮನನ್ನು ಗಂಡನ ಮನೆಗೆ ಕಳಿಸುವುದು

ಕಳುವೀ ಬಂದೀವಮ್ಮ ಕಳವುಳ್ಳ ಗೌವರೀನ
ಕವಳೆಣ್ಣಿಗಿನ್ನ ಚೆಲುವೀನ
ಕೋಲು ಕೋಲೆನ್ನ ಇಳುವಿನ ಕೋಲ ಕೋಲನ್ನ ॥

ಕವಳೆಣ್ಣಿಗಿನ್ನ ಚೆಲುವೀ ಗೌರಮ್ಮನ
ಕಳುವೀ ಬಂದೀವಿ ಶಿವನ ಮಠಗಳಿಗೆ
ಕೋಲು ಕೋಲೆನ್ನ ಇಳುವಿನ ಕೋಲ ಕೋಲನ್ನ ॥

ಬಿಟ್ಟು ಬಂದೀವಮ್ಮ ಒಪ್ಪುಳ್ಳ ಗೌರೀನ
ಇಬ್ಬನ್ನಿಗಿನ್ನ ಚೆಲುವೀನಾ.
ಕೋಲು ಕೋಲೆನ್ನ ಇಳುವಿನ ಕೋಲ ಕೋಲನ್ನ ॥

ಇಪ್ಪೇ ಹಣ್ಣೀಗಿನ್ನ ಚೆಲುವಿ ಗೌರಮ್ಮನ
ಬಿಟ್ಟು ಬಂದೀವಮ್ಮ ಶಿವನ ಅರಮನೆಗೆ
ಕೋಲು ಕೋಲೆನ್ನ ಇಳುವಿನ ಕೋಲ ಕೋಲನ್ನ ॥

ತಾವತ್ತಲಾದರೆ... ನಾವಿತ್ತಲಾದೆವು
ಲೋಭಾನದಾ ಗುಡ್ಡ ಮರೆಯ್ಯಾಗೆ
ಕೋಲು ಕೋಲೆನ್ನ ಇಳುವಿನ ಕೋಲ ಕೋಲನ್ನ ॥

ಅವರತ್ತಲಾದರೇ... ನಾವಿತ್ತಲಾದೆವು
ಮಾವಿನ ತೋಪು ಮರೆಯಾಗೆ
ಕೋಲು ಕೋಲೆನ್ನ ಇಳುವಿನ ಕೋಲ ಕೋಲನ್ನ ॥

ಅಗಸ್ಯಾಗ ನಿಂತಾನ ಸೊಗಸುಳ್ಳ ತಳವಾರ
ಬೊಗಸೆಲೇ ನೀರಡಿಕೆ ಬೇಡಿಯಲ್ಲೇ
ಕೋಲು ಕೋಲೆನ್ನ ಇಳುವಿನ ಕೋಲ ಕೋಲನ್ನ ॥

ಆನೆ ಕೊಟ್ಟಾರೆ ಒಲ್ಲೆ, ಒಂಟಿ ಕೊಟ್ಟಾರೆ ಒಲ್ಲೆ
ರಾಗೀಯ ರೊಟ್ಟೀ ಕೈಯ ತುಂಬಾ
ಕೋಲು ಕೋಲೆನ್ನ ಇಳುವಿನ ಕೋಲ ಕೋಲನ್ನ ॥

ರಾಗೀಯ ರೊಟ್ಟಿ ಕೈಯ ತುಂಬ ಕೊಟ್ಟರೆ
ಓಡಿ ಬಂದಗಸೆ ತೆಗುದಾನ
ಕೋಲು ಕೋಲೆನ್ನ ಇಳುವಿನ ಕೋಲ ಕೋಲನ್ನ ॥

- ಗೌರಮ್ಮ, ವಯಸ್ಸು ೬೦, ಹುಸೇನಮ್ಮ, ವಯಸ್ಸು-೬೫, ಹೊಸಯರಗುಡಿ, ಬಳ್ಳಾರಿ (ತಾ)

❑❑❑

ಬಂಗಾರ ಬನ್ನಿ ಮುಡದೇವ

ಬನ್ನಿ ಮುಡಿಯೋಣ ಬಾರ ಕೋಲು ಕೋಲ
ಚಿನ್ನ ತರೋಣ ಬಾರ ಕೋಲು ಕೋಲ ॥

ಊರ ಸೀಮೆಯ ದಾಟಿ ಕಾಡಿಗೆಡಿಯನು ಸೇರಿ
ಕಾಡ ಸಂಪತ್ತು ತರಬನ್ನಿ
ಬೆಳದ ಬೆಳಸಿಗೆ ಬನ್ನಿ ಭೂಮಿತಾಯಿಗೆ ಬನ್ನಿ
ನಾಡ ಸಂಪತ್ತು ತರಬನ್ನಿ ॥ಬನ್ನಿ॥

ಅರಸನ ಅಂಗಳಕೆ ಸರಸರಂಗಾ ಹೋಯ್ದು
ಹೊರಸಿ ತಂದಾರ ಸಿರಿ ಬನ್ನಿ
ದೇವ ದೇವರ ಬನ್ನಿ ದೈವ ದೈವದ ಬನ್ನಿ
ನಾವು ಮುಡಿಯೋದು ನಮ್ಮ ಬನ್ನಿ ॥ಬನ್ನಿ॥

ನಡೆದ ತಾಯಿಗೆ ಬನ್ನಿ ನಡೆದ ತಂದೆಗೆ ಬನ್ನಿ
ಪಡೆದ ಗಂಡನಿಗೆ ನಮ ಬನ್ನಿ
ಚಿನ್ನದ ಕೈಕಡಗ ಚೆನ್ನೇರು ತೊಟ್ಟುಕೊಂಡು
ಚಿನ್ನದಾಭರಣ ನಡುಬಾಗಿ ॥ಬನ್ನಿ॥

ಗೆಜ್ಜೆ-ಗೆಜ್ಜೆ ಹಾಕಿ ಗೆಜ್ಜೇರು ಕುಣಿದಾರ
ನಜ್ಜಾರ ಮಾಡ್ಯಾರ ಘಿಲ ಘಿಲ
ನಾವು ಕುಣಿಯೋಣ ಬನ್ನಿ ನೋವ ಮರಿಯೋಣ
ಜೀವ ಒಂದಾಗಿ ಇರಬನ್ನಿ
ಇಂದು ಮುಡಿಯುವ ಬನ್ನಿ ಮುಂದೆ ಮನೆ ಹೊನ್ನಾಗಿ
ಕುಂದಾಣದಾರುತಿ ಬೆಳಗುದಕ ॥

- ನಾಗಮ್ಮ, ವಯಸ್ಸು ೪೦, ಹುಸೇನಮ್ಮ, ವಯಸ್ಸು-೬೫, ಮೊರಗೆರೆ, ಹಗರಿಬೊಮ್ಮನಹಳ್ಳಿ (ತಾ)

□□□

ಪಂಚಮಿ ಹಬ್ಬ

ನಾಗರ ಪಂಚಮಿ ಹಬ್ಬ ।
ಹೆಣ್ಣು ಮಕ್ಕಳಿಗೆ ಶೋಭ ।
ತವರ ಮನಿಗೆ ಹೋಗುವ ಹಬ್ಬ ।
ದೊಡ್ಡ ಹಬ್ಬ ರನ್ನದಾ ಕೋಲು ಕೋಲ ।
ಏ ಹೂವಿನ ಕೋಲು ಕೋಲ ॥ ॥೧॥

ನಾಗರ ಪಂಚಮಿ ಬಂತು ।
ಇನ್ನು ನಾಲ್ಕು ದಿನಾ ಉಳಿತು ।
ಅತ್ತಿ, ತಾಯಿ ತಂದಿಗೆ ನೋಡುವ ಪ್ರೀತಿ ।
ಹೋಗಿ ಬರುವೆ ರನ್ನದ ಕೋಲು ಕೋಲೆ ।
ಏ ಅತ್ತೆಮ್ಮ ಕೇಳ ಕೋಲು ಕೋಲೆ ॥ ॥೨॥

ನಿನ್ನ ಅಣ್ಣ ತಮ್ಮದೇರ ।
ಕರಿಲಾಕ ಬಂದಾರ ಅವರ ।
ಮನ್ನಿಸಿ ಕಳುಹುವೆ ಜರ ।
ಅನುಮಾನವಿಲ್ಲದೆ ಕೋಲು ಕೋಲೆ ।
ಏ ಸೊಸಿಯೆ ಕೇಳು ಕೋಲು ಕೋಲ ॥ ॥೩॥

ತುಂಬಿದ ಪಟ್ಟಣ ಭಾರಿ ।
ಒಂಬತ್ತು ಹರದಾರಿ ।
ದಾರ್‍ಯಾಗ ಅವ ಮೂರ ತೊರೆ ।
ಒಬ್ಬವಳೆ ಹ್ಯಾಂಗ ಹೊಯ್ತಿ ಕೋಲು ಕೋಲ ।
ಏ ಸೊಸಿಯೆ ಕೇಳು ಕೋಲು ಕೋಲು ॥ ॥೪॥

ಇಷ್ಟರೊಳಗ ಬಂದಿದ ನಮ್ಮ ।
ನಿಷ್ಠಿಲಿಂದ ನನ್ನ ತಮ್ಮ ।

ದೃಷ್ಟಿ ಕಂಡು ಪ್ರೇಮ
ನಿರಾಳ ಮನದಿ ನೀರ ಕೊಟ್ಟೆ ಕೋಲು ಕೋಲ
ಬಲು ಹಿಗ್ಗಾಯಿತು ಕೋಲು ಕೋಲ ॥ ॥೫॥

ಹಬ್ಬದ ಅಡುಗೆ ಮಾಡಿ ।
ತಮ್ಮನ ಅಗಲಾಗ ನೀಡಿ ।
ಸರ್ವರೆಲ್ಲಾ ಉಂಡು ಕೂಡಿ ।
ಏಕಭಾವ ರನ್ನದು ಕೋಲು ಕೋಲ ।
ಪದ್ಮಾಸನ ಕುಂತು ಕೋಲು ಕೋಲ ॥ ॥೬॥

ಅತ್ತಿಮಾವ ಪತಿಗೆ ।
ನಮಸ್ಕಾರ ಮಾಡಿ ಬೇಗಿ ।
ಎತ್ತಿನ ಮ್ಯಾಲ ತವರ ಊರಿಗೆ ।
ನಡದು ರನ್ನದಾ ಕೋಲು ಕೋಲ ।
ಏ ಅತ್ತೆಮ್ಮ ಕೇಳ ಕೋಲು ಕೋಲ ॥ ॥೭॥

ಅತ್ತ ಇತ್ತ ತಿರುಗಲು ಬೇಡ ।
ಸೇರಲ್ದವರ ಮನಿಗೆ ಹೋಗಬೇಡ ।
ಬುಗುಡಿ ನತ್ತು ಕಳದಾತು ನೋಡ ।
ಕಿವಿ ಜ್ಯಾಕಿ ರನ್ನದ ಕೋಲು ಕೋಲೆ ।
ಎಚ್ಚರದಿಂದ ಹೋಗಿ ಬಾ ಕೋಲು ಕೋಲ ॥ ॥೮॥

ದಾರಿಯೊಳಗ ಅವ ಮೂರ ತೊರಿಯ ।
ಚಿತ್ತಿಟ್ಟು ದಾಟಿದಳಯ್ಯ ।
ಸನಿ ಬಂತು ತವರ ಮನಿಯ ।
ಉನ್ಮನಿ ರನ್ನದ ಕೋಲು ಕೋಲ ।
ಚತುರಂಗದ ಮನಿಯ ಕೋಲು ಕೋಲ ॥ ॥೯॥

ಭಕ್ತಿ ಮುಕ್ತಿ ತಾಯಿ ತಂದಿಗೆ ।
ಇಚ್ಛಾಶಕ್ತಿ ಅಕ್ಕ ತಂಗೇರಿಗೆ ।
ಕಣ್ಣಾರ ಕಂಡು ಅವರಿಗೆ ।
ಸರ್ವರು ಹಿಗ್ಗಿದರಮ್ಮ ಕೋಲು ಕೋಲ
ಅಂತರಂಗದ ಮನಿಯು ಕೋಲು ಕೋಲ ॥ ॥೧೦॥

ಹೆಣ್ಣೆ ಬದನೆಕಾಯಿ ಜೋಳದ ರೊಟ್ಟಿ ।
ಹುರಿಗಡ್ಲೆ ಹುರಿದು ಉಂಡಿ ಮಾಡಿ ।
ಹಸಿ ಹಿಟ್ಟು ಚಿಗಳಿ ಮುಟಕಿಯ ಮಾಡಿ ।
ಹಸಿದು ಬಂದ ಮಗಳಿಗೆ ಉಣಸ್ಯಾರೆ ಕೋಲು ಕೋಲ ।
ನಾಗಣ್ಣನ ನೈವೇದ್ಯಾ ಕೋಲು ಕೋಲ ॥ ॥೧೧॥

- ರೇಣುಕಮ್ಮ, ವಯಸ್ಸು-೪೦, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ (ತಾ)

❑❑❑

ಸಿಡಿ ಆಡ್ಯಾಳೆ ದುರುಗಮ್ಮ

ಹುತ್ತ ರೂಪಿಗೆ ನಿತ್ಯಪೂಜೆ ಜಗದಂಬ ಜಗದಂಬ ।
ಆದಿಸಗಲೆ ಆನಂದಮೂರ್ತಿ ಜಗದಂಬ ಜಗದಂಬ ।

ಉಗ್ರರೂಪಿಯೇ ನೀನು । ಸಿಂಗಾರ ರೂಪಿ ನೀ ।
ತಿದ್ದಿದ ನ್ಯಾಮೆ ಬೆವರೂತ । ದುರುಗಮ್ಮ।

ತಿದ್ದಿದ ಏ ನ್ಯಾಮೆ ಬೆವರೂತ ಸಿಡಿಯಾಡಿಯಾಳ
ಒಬ್ಬಳಾಡ್ಯಾಳ ಹುಲಿಬ್ಯಾಟಿ । ದುರುಗಮ್ಮ।

ಬಯಾಡ ಬ್ಯಾಡಂದರ ಬಂದ್ರಾವ ಬೆನ್ನತ್ತಿ।
ಹೊನ್ ಬಳ್ಳಾರಿ ಬೈಲಾಗ ।

ಹೊನ್ನಾನೆ ಬಳ್ಳಾರಿ ಬೈಲಾಗ್ಹುಲುವುಮ್ಮ।
ಹೊಲಿ ಕೂಡುತೀನಿ ಬಿಡು ನನ್ನ ।

ಆಕಾಶ ಬುಟ್ಟಿ ಮಾಡಿ, ತಲೆಮ್ಯಾಲಿಟ್ಟುಕೊಂಡು ।
ನೊಲಿನ ಮಾಲೆ ಕೊರಳಲ್ಲಿ ।

ಯಾತಕ ದುರುಗಮ್ಮ ಕೋಪ್ಯಾಕ ನನಮ್ಯಾಲೆ ।
ಮಾತುನೆ ಆಡುವಲ್ಲೆ ನಗುವಲ್ಲೆ ।

ಮಾತಾನೆ ಆಡುವಲ್ಲೆ ನಗುವಲ್ಲೆ ದುರುಗಮ್ಮ ।
ತಪ್ಪಿದ ನುಡಿಯ ವಡದ್ಹೇಳ ।

ಸಿಡಿಬಂಡಿ ಹೇರುತ ಕೆಂಗಣ್ಣ ತಿರುಗೂತ ।
ಹಿಂದೆಲೆ ಬಸವನ ಎಳೆವೂತ ।

ಹಿಂದಲೆ ಬಸವನ ಎಳೆವೂತ ದುರುಗಮ್ಮ ।
ಸಿಡಿಬಂಡಿ ಗರಗರ ತಿರುಗುವಾಗ ।
ಬೇಡಿಕೊಂಡೇನೆ ಸೆರೆಗೊಡ್ಡಿ।

- ದುರಗಮ್ಮ, ವಯಸ್ಸು-೬೦, ಬಳ್ಳಾರಿ

ಪರೋಪಕಾರಿ ಬಸವ

ನನ್ನಕ್ಕ ತಂಗ್ಯೋರ‍್ಯ ನೆರೆಮಾನಿ ಗೆಳೆದೇರೆ
ನನ ಹಡದ ತಾಯಿದೇರೆ । ಕೋಲಣ್ಣ ಕೋಲೆ.

ನನ್ನಾಕಳ ಹೆಂಡಿ ಸಾರುಸಿ ಮನಿಗ್ವಾಡಿ
ದರಸೂವರಿವತಿ ಮಾಡಿ । ಕೋಲಣ್ಣ ಕೋಲೆ.

ನಾವು ನಿತ್ತೇನ ಕಾಲು ಮೇಯ್ಸಿ ನಿನ್ನಗೆ ಹುಲ್ಲು
ಹಿಂಡಿ ಉಂಡೇವ ಹಾಲ । ಕೋಲಣ್ಣ ಕೋಲೆ.

ಹಿಂಡಿ ಉಂಡೇವೆ ಹಾಲು ಮಾಡಿ ಉಂಡೇವೆ ಗಿಣ್ಣ
ನಿನ ಮಗ ಬಸವಣ್ಣ । ಕೋಲಣ್ಣ ಕೋಲೆ.

ನಿನ ಮಗ ಬಸವಣ್ಣ ನಮಗಾಗಿ ದುಡೀತಾರ
ಹೊಂಟೋಗ್ಯಾರ‍್ಯಾರು ಕೊಟ್ಟು । ಕೋಲಣ್ಣ ಕೋಲೆ.

ಹೊಡೆದ್ಯೆದು ದನಕರ ಮಾರಟಕೆ ನಿಂದುರ‍್ವ್ಯಾರ
ತಗೊಂಡಾರೆ ಖಡಕಾರ । ಕೋಲಣ್ಣ ಕೋಲೆ.

ಹಸಿದ ನಾರಿನ ದಾರ ತಂದು ಡಬ್ಬಣ ಖೂರ
ಮೂಗೀಗೆ ಪೋಣಸ್ಯಾರ । ಕೋಲಣ್ಣ ಕೋಲೆ.

ಎದ್ದಂದರ ಸವತಿಲ್ಲೆ ಹೊಳ್ಳೆಂದರೆ ಬಯವನಿಲ್ಲಲ
ಬಿಗುದಾರ ನಲಕು ಕಾಲ । ಕೋಲಣ್ಣ ಕೋಲೆ.

ಕಟ್ಟಕರಣೆಯ ಹಂಗ ಬಡಿಯುವರು ಬಿಸಿಲ್ಹಂಗ
ಕರಳಿಲ್ಲದೆಳ್ಳಷ್ಟು । ಕೋಲಣ್ಣ ಕೋಲೆ.

ಉಂಡು ಮನಿದೆ ಹಾಲ ಉಪುಕಾರ ಇಡೋಣಿಲ್ಲ
ಕೊಯದುಬಿಟ್ಟರೆ ತೋರಾಲ । ಕೋಲಣ್ಣ ಕೋಲೆ.

ನಮ್ಮತ್ತಿ ನಮ ಮಾವ ನಮಗೆ ತಟ್ಟವಗೆ ಸುರುವ
ಅವರ ಮ್ಯಾಲೆ ಕುಂತಿದನವ್ವ । ಕೋಲಣ್ಣ ಕೋಲೆ.

ನಮ್ಮ ತಾಯ ಉಪಕಾರ ಭೂಮ್‌ತಾಯಿ ಉಪಕಾರ
ನನ್ನಾಕಳುಪಕಾರ । ಕೋಲಣ್ಣ ಕೋಲೆ.

ಕಲೆಣೆಂಬ ಪಟ್ಟಣ ಧರ್ಮ ಪ್ರಕಾಶಣ್ಣ
ಆದತಾಗಿ ಕೊಟ್ಟರು ಪ್ರಾಣ । ಕೋಲಣ್ಣ ಕೋಲೆ.

ಅರ ಮೂಗರ ಕೂಡರ ಆಲ್ಯಾಚಣ ಮಾಡ್ಯಾರ
ಮುತ್ತೈದೆದ ಕೂಡ್ಯಾರ । ಕೋಲಣ್ಣ ಕೋಲೆ.

ಅಮರ ದೇವರ ಗುಡ್ಡದ ಮ್ಯಾಲ ಖಾಂಡ ಮಾಡಿದುರಲ್ಲ
ಪಲ್ಲಕ್ಕಿ ಮೆರಣೆಲ್ಲ । ಕೋಲಣ್ಣ ಕೋಲೆ.

ಬಳ್ಳಾರಿ ಕ್ಯಾಟಿ ಜೇಲಿನಾಗ ಶಾಮಲಾಲ ವಕೀಲಾಗ
ಇಸ ಕುಡಿಸ್ಯಾರ ಹಾಲಿನೊಳಗ । ಕೋಲಣ್ಣ ಕೋಲೆ.

- ಜೀವನ್‌ಸಾಬ್ ವಾಲೀಕಾರ್, ವಯಸ್ಸು-೩೦, ಹೊಸಪೇಟೆ

□□□

ಗುರ್ಜಿ ಹಾಡು

ಗುರುಜಿ ಗುರುಜಿ ಎಲ್ಲಾಡಿ ಬಂದೆ
ಹಳ್ಳಕೊಳ್ಳ ತಿರುಗಾಡಿ ಬಂದೆ
ಕಾರ್‌ಮಳೆ ಕಪ್ಪತ್ತ್ ಮಳೆ
ಸುರಿ ಸುರಿಯೋ ಮಳೆರಾಯ ‖

ಸುಣ್ಣ ಕೊಡತೀನಿ ಸುರಿಯಲೇ ಮಳೆಯೆ
ಬಣ್ಣ ಕೊಡತೀನಿ ಬಾರಲೇ ಮಳೆಯೇ
ಸುಣ್ಣ ಬಣ್ಣ ಎರಡು ಕೊಡತೀನಿ
ಸುರಿ ಸುರಿಯೋ ಮಳೆರಾಯ ‖

ಕಂದಾರಳ್ಳಿ ಕಂಬಾರವ್ವ
ಬಿಂದಾರಳ್ಳಿ ಬಡಿಗೇರವ್ವ
ಮಹದೇವನ ಹೆಂಡ್ತಿ
ಏನs ಹಡದಳು - ಗಂಡನ ಹಡದಳ
ಕಂದನ್ನ ನೆತ್ತಿಗೆ ಎಣ್ಣಿಲ್ಲ ಬೆಣ್ಣಿಲ್ಲ
ಗುಡ್ಡದ ಮೇಲೆ ಹೋಗ್ಯಾರೋ
ಕಂಬಳಿಯಾ ಬಿಸ್ಯಾರೋ
ವಿರಾಟ ಪರ್ವ ಕೂಗ್ಯಾನೋ
ಬುರ‍್ರಾಕಥೆ ಹೇಳ್ಯಾಕೋ
ಸುರಿ ಸುರಿಯೋ ಮಳೆರಾಯ ‖

- ರಾಮಕ್ಕ, ವಯಸ್ಸು-೫೦, ರಾಯಾಪುರ, ಕೂಡ್ಲಿಗಿ (ತಾ)

□□□

ಮಂಗಳಾರುತಿ

ಹರನ ಪಾರ್ವತಿ ದೇವಿ ಪರಮಸಂತೋಷದಲಿ ।
ಸರಸನಾಡಳು ತನ್ನ ಪುರುಷನೊಡನೆ ।
ಸರಸನಾಡಳು ತನ್ನ ಪುರುಷರೊಡನೆ ಹರುಷದಿಂದ ।
ಹೋಗಿ ಬರುವೆನು ಸ್ವಾಮಿ ತವರ ಮನೆಗೆ ।
ಜಯಮಂಗಳವು ನಿತ್ಯ ಶುಭಮಂಗಳೇ ||ಜಯ||

ಅಲ್ಲಿಗೆ ನೀ ಪೋದರೆ ಇಲ್ಲಿ ನನಗ್ಯಾರುಂಟು ।
ಚೆಲವಿ ಗಂಗಾ ನೀನು ತಿಳಿದು ನೋಡೇ
ಯಾರು ಯಾತಕ ಸ್ವಾಮಿ ಮೂರೆ ದಿನ ಇದ್ದು ।
ಬರುವೆ ಮುಂದೆ ನಿನಪೂಜೆಗೆ ಒದಗಿ ಬರುವೆ ||ಜಯ||

ಅತ್ತಿಯಾ ಬಾಯಾಗ ಕಣ್ಣೀಯಾಕಂಡಂಗೆ ।
ಸಣ್ಣ ಕ್ಯಾದಿಗೆ ಮುಡಿಯೊಳಾಕೀ ।
ಸಣ್ಣೇನ ಕ್ಯಾದಿಗೆ ಮುಡಿಯಾ ಶ್ರೀ ಗೌರಮ್ಮನ ।
ಮತ್ತೊಂದು ಕಾರ್ಯವಕ ಕರದು ಬರುವೆ ||ಜಯ||

ಒಪ್ಪುಳ ಬಾವ್ಯಾಗೆ ನಿತ್ರೀಯ ಕಂಡಂಗ ।
ಬಿಚ್ಚಾಕ್ಯಾದಿಗೆ ಮುಡಯೊಳಾಕೀ ।
ಬಿಚ್ಚೇನ ಕ್ಯಾದಿಗೆ ಮುಡಿಯಾ ಶ್ರೀಗೌರಮ್ಮನ ।
ಮತ್ತೊಂದು ಕಾರ್ಯವಕ ಕರದು ಬರುವೇ ||ಜಯ||

ಉರಿ ಅಕ್ಕಿ ನೆನಗಡಲೆ ಗೊನಿಯ ಬಾಳೆಹಣ್ಣು ।
ಉಡಿಯಾ ತುಂಬಿರಿ ನಮ್ಮ ಪಾರ್ವತಗೇ
ಉಡಿಯಾ ತುಂಬಿರಿ ನಮ್ಮ ಪಾರ್ವತಗೇ
ತವರಿಗೇ ಬಂದ ಸಿರಿಗೌರಿಗೆ ||ಜಯ ||

- ಕನಕಮ್ಮ, ವಯಸ್ಸು ೬೦, ಹಾಲಮ್ಮ, ವಯಸ್ಸು-೫೫, ಸುಶೀಲಮ್ಮ, ವಯಸ್ಸು-೬೫, ಹುಚ್ಚಮ್ಮ, ವಯಸ್ಸು ೬೦, ನೆಲ್ಲುಕುದರೆ-ಗ್ರಾಮ, ಹಗರಿಬೊಮ್ಮನಹಳ್ಳಿ ತಾಲೂಕು

□□□

ಚಾರಿ ದುರುಗಮ್ಮ

ಹೊನ್ನೀನ ಪಡಲೀಗೆ ಕೆನ್ನೆಮ್ಯಾಲಿಟುಗಂಡು
ಹೊನ್ನೂರ ಸೀಮೆ ಒಳಗೆಲ್ಲವ್ವಾ ಶಿವನೆ ಲಿಂಗಯ್ಯಾ ॥

ಹೊನ್ನಾರ ಏ ಸೀಮೆ ಒಳಗಲ್ಲೇ ದುರುಗಮ್ಮ
ಜೋಗಾಡಲೊರಟಾಳವ್ವಾ ಶಿವನೆ ಲಿಂಗಯ್ಯಾ
ಅಮ್ಮ ಜೋಗಾಡಲೊರಟಾಳವ್ವಾ ಶಿವನೆ ಲಿಂಗಯ್ಯಾ ॥

ಮುತ್ತೀನ ಪಡಲೀಗೆ ನೆತ್ತಿಮ್ಯಾಲಿಟುಗಂಡು
ಕೊಟ್ಟೂರಾ ಸೀಮೆ ಒಳಗಲ್ಲವ್ವ ಶಿವನೇ ಲಿಂಗಯ್ಯ ॥
ಕೊಟ್ಟೂರ ಏ ಸೀಮೆ ಒಳಗಲ್ಲೇ ದುರುಗಮ್ಮ
ಅತ್ತಾ ಜೋಗಾಡಲೊರಟಾಳವ್ವಾ ಶಿವನೆ ಲಿಂಗಯ್ಯಾ ॥

ಸೊಂದೇನೆ ಬಂದಯಾ ದೊಂದುಸಾ ಬಂದಾರೆ
ನಿಂಬೇ ಎಲಿಯಾಂಗೆ ಹೋದಾರುತ ಶಿವನೆಲಿಂಗಯ್ಯ
ನಿಂಬೇನೆ ಎಲಿಯಂಗ ಹುಡುಗ ಸುಡುಗಾಡಿಗೆ
ನಳಕೇಡಾಯನಗ ಕಾಡಾನೆಲ್ಲಾ ಶಿವನೆಲಿಂಗಯ್ಯ ॥

- ಹಾಲಮ್ಮ ವಯಸ್ಸು-೫೫, ಕನಕಮ್ಮ-೬೦, ದುರುಗಮ್ಮ, ವಯಸ್ಸು-೬೬, ಹುಲಿಗೆಮ್ಮ ೬೭,
ನೆಲ್ಲುಕುದುರೆ-ಗ್ರಾಮ, ಹಗರಿಬೊಮ್ಮನಹಳ್ಳಿ ತಾಲೂಕು

□□□

ಪಂರಂಗಿಯುವನ ಪಾಡು

ಕಾವೇನೆ ಮಳಲಕ್ಕಾ ಚೌರಿಯನಿರಲಾಕ್ಕೆ
ಹೋದನು ಪಾರಂಗೆ ತಾವಳಿಯಾಕ್ಕೆ ... ಸೋ... ॥
ಹೋದನು ಬಾರಂಗೆ ಒಳತಗದುಗಂಬಾದ
ಹಾದೆ ಬಂಗಾರ ತಾ ಸಲುದಾನೆ ಸೋ ॥
ಮುತ್ತೈದೆ ಎಂಬಾಕೆ ಕಟ್ಟೇಯ ನೆಲದಾಕ
ಹೊಕ್ಕಾನು ಪಾರಾಂಗೆ ತಾವಳಿಯಾಕ್ಕೇ ... ಸೋ... ॥
ಹೊಕ್ಕಾನು ಪಾರಾಂಗೆ ಹೊಳಕ್ಕೆ ದುರುಗಮ್ಮನಾ
ಕೊಪ್ಪೆ ಬಂಗಾರ ತಾಸುಲುದಾನೇ ... ಸೋ... ॥
ಸಂದು ಸಂದಾಗ ಆಡಿ ಬಂಡಿಯ ಸುಲುದಲ್ಲೋ
ಮಂಗನ ಕುಲದಾನೋ ನೀ ಪಾರಾಂಗೆ ಸೋ... ॥
ಮಂಗನ ಕುಲದಾನ ಪರಂಗಿನ ಸೀಮ್ಯಾನೆ
ದುಂದೇ ಮಾಡೇನವನ ಗಳಿಗ್ಯಾಗೇ .. ಸೋ ... ॥
ಹೊಟ್ಟಿ ಮುಟ್ಟಿಯ ನೋಡೇ ಪಟ್ಟಿಯ ಸುಲಿದಂಗಾ
ಕೆಟ್ಟ ಕುಲದೋನೇನೆ ಪಾರಂಗೆ ಸೋ ... ॥
ಕೆಟ್ಟೈನೆ ಕುಲದೋನ ಪಾರಂಗಿ ಸೀಮೆಯಾ
ದುಂದ ಮಾಡೇನವನು ಗಳಿಗ್ಯಾಗೇ ಸೋ ... ॥
ಲಗ್ಗಾಲಿ ಮುಳ್ಳಿಲ್ಲೇ ಸಿದ್ಧರಣ ಬಂದೆವ್ವಾ
ಬುದ್ಧಿಲ್ಲವೇನೆ ರಣದಿಂಡೇ ... ಸೋ ... ॥
ಬುದ್ಧಿಲ್ಲವೇನೆ ರಣದಿಂಡೇ ಉಬ್ಬಾಡಿ
ಸಿದ್ಧಾರ ಬತ್ತವಾ ಅಳುದಾಳೇ ಸೋ ... ॥
ಜಾಲಿಯಾ ಮುಳ್ಳಿಲೇ ಜಾಗರನಾ ಕೊಂದೆವ್ವಾ
ಜಾಣೆಲ್ಲಾವೇನೇ ರಣದಿಂಡೇ ಸೋ ... ॥

ಜಾಣೆಲ್ಲವೇನೆ ರಣದಿಂಡೆ ಮೊರಗೇರ್‍ಯಾಗ

ಜಾಣರಾ ಬತ್ತವಾ ಅಳುದಾಳೇ ಸೋ ... |

- ಹುಚ್ಚಮ್ಮ, ವಯಸ್ಸು-೬೦, ಹಾಲಮ್ಮ, ವಯಸ್ಸು-೫೫, ದುರುಗಮ್ಮ, ವಯಸ್ಸು-೬೫, ರತ್ನಮ್ಮ, ವಯಸ್ಸು-೬೪, ನೆಲ್ಲುಕುದುರೆ-ಗ್ರಾಮ, ಹಗರಿಬೊಮ್ಮನಹಳ್ಳಿ ತಾಲೂಕು

□□□

ದುರುಗಮ್ಮ ಬರುತಾಳಾ

ಸಿದ್ದಾ ಗುಡ್ಡಾದಯ್ಯಾ ದೊಡ್ಡಗ ಬಲ್ಲಿಗೆನಯ್ಯಾ
ಗುಡದಾಗೆ ನನಗೆ ಸರಿಪಾಲೇ
ಗುಡದಾಗೆ ಏ ನನಗೆ ಸರಿಪಾಲ
ಕೊಟ್ಟಾರೆ ವಡ್ಡಾರನೆಲ್ಲಾ ಉಳುವೇನೆ ... ॥
ಹೆಂಗಾಸಿಗ್ಯಾಕವ್ವಾ ರಂಗೀನ ಕಾಳಗಾ ...
ಅಂಜೀ ಹೊತಗಂಡೇ ಕೊಡನೀರ ...
ಅಂಜೀಹೊತಗಂಡೇ ಕೊಡನೀರ ತಂದಾಕಂದ ॥
ಗಂಡಾಳ ಸರಿದಿಬರಲೀರೇ ... ॥
ಅಂಗಂದಾ ಮಾತೀಗೆ ಕಿತ್ತಾಳೋ ಕಿರುಜಡೀಯಾ
ನೆತ್ತಾರಾಗಣ್ಣ ಬಿಡುತಾಳೇ ॥
ನೆತ್ತಾರಾಹಿರಿಗಣ್ಣಾ ಬಿಟ್ಟು ನೀಲಾಗೇರೆ
ಮುತ್ತಿನಸದರೇ ಹರನೆಡೆಗೆ ॥
ಆರಕೋಟೆ ಪರುಸೇ ಹಾಳಾದವಯ್ಯಯ್ಯೋ
ಹೇಳಲೇ ಗಂಗಮಾಯೇ ಉಳವಿಲ್ಲಿಲ್ಲಿ
ಹೇಳಲೇ ಗಂಗಮಾಯೇ ಉಳವಿಲ್ಲ ಬಗಲ್ಲಾಗ
ಹೇಳಿದ ಕೇಳಿಕೆಂದು ಇರುವಾನೆ ... ॥
ಹತ್ತಾಕೋಟಿ ಪರುಸೇ ಗಪ್ಪಾದವಯ್ಯಯ್ಯೋ
ಮತ್ತೇಳ ಗಂಗಮಾಯೇ ಉಳಿವಿಲಿಲ್ಲಿ
ಮತ್ತೇಳ ಗಂಗಮಾಯೇ ಉಳಿವಿಲ್ಲ ಬಗಲ್ಲಾಗ
ಹಚ್ಚಿದ ಕೇಳಿಕೆಂಡೂ ಇರುವೋನೇ ... ॥
ಅಕ್ಕ ತಂಗೇರಾಟ ಲೆಕ್ಕಾದ ಕಟ್ಟಿಮ್ಯಾಲೆ
ಜಕ್ಕವ್ವನಾಟ ಜಗಲ್ಯಾಗೇ
ಜಕ್ಕವ್ವನಾಟ ಜಗಲ್ಯಾಗೇ ಚಿಮ್ಮುನಹಳ್ಳೀ
ದುರುಗಮ್ಮನಾಟ ಹಲಿಗ್ಯಾಗೆ ॥

ಹೆತ್ತವ್ವಾ ಬರುವಾಗ ದಿಕ್ಕು ತಲ್ಲಣಿಸ್ಯಾವೇ
ಉಪನೀರ ಬಾವೇ ಕಲಿಕ್ಯಾವೇ ...
ಉಪನೀರ ಏ ಬಾವೇ ಕಲಿಕ್ಯಾವೇ ದುರುಗಮ್ಮಾ
ಹೆತ್ತವ್ವಾ ನೀ ಬರುವಾ ರಭಸಾಕೆ ... ||
ತಾಯವ್ವಾ ಬರುವಾಗಾ ಅಡವೀ ತಲ್ಲಣಿಸ್ಯಾವೇ
ಕುಡಿನೀರ ಬಾವಿ ಕಲಿಕ್ಯಾವೇ
ಕುಡಿನೀರ ಏಬಾವೀ ಕಲಿಕ್ಯಾವಾ ದುರುಗಮ್ಮಾ
ಹಡದವ್ವಾ ನೀ ಬರುವಾ ರಭಸಾಕೆ ... ||

ಹರಗೀದ ಹೊಲುದಾಗೇ | ಹರಗಾದ ಹೊಲದಾಗೆ
ಬಿರಬೀರನೆ ರಾಜನದ ಹೊಲದಾಗ
ಬೀರಬೀರನೆ ರಾಜನದ ಹೊಲುದಾಗ ದುರುಗಮ್ಮಾ
ಕುದುರೀ ಸಾಲಿಟ್ಟು ಬರುತಾಳೋ ... ||

ಬಿತ್ತೀದ ಹೊಲುದಾಗ ಬಿತ್ತಾದ ಹೊಲುದಾಗೇ
ತುಪ್ಪಾ ರಾಜನದ ಹೊಲುದಾಗ
ತುಪ್ಪೇನ ರಾಜನದಾ ಹೊಲುದಾಗ ದುರುಗಮ್ಮಾ
ಛತ್ರಿ ಸಾಲಿಟ್ಟು ಬರುತ್ತಾಳೆ.

- ಸುಶೀಲಮ್ಮ ೬೫, ಹುಚ್ಚಮ್ಮ ೬೦, ಹೂವಮ್ಮ ೬೮, ಕನಕಮ್ಮ ೬೦,
ನೆಲ್ಲುಕುದುರೆ-ಗ್ರಾಮ, ಹಗರಿಬೊಮ್ಮನಹಳ್ಳಿ ತಾಲೂಕು

❑❑❑

ಗಂಗಮ್ಮನ ಸೋಬಾನೆ ಪದ

ಒಂದೇಲೆ ಒಂದಡಿಕೆ ।
ಒಂದೀ ಬರಲಿಲ್ಲ ಗಂಡ ।
ಬಂದಾಳ ಗಂಗಮ್ಮ ।
ನಿಮ್ಮಾ ಚಾಜ ಸೋಬಾನವೇ ॥
ಬಂದಾಳೆ ಗಂಗಮ್ಮಾ ।
ನಿಮ್ಮ ಜಾಜ ಸೋಬಾನವೇ ॥
ಬಂದಾಳೆ ಗಂಗಮ್ಮ ।
ನೀವು ಚಾಜ ತಾಗಂಡೇ ।
ತುಂಬಿದ ಕೊಡ ಕೇಲಾ ।
ಕೊಡಾಗಾಳಾ ಸೋಬಾನವೇ ।

ಎರಡೇಲೆ ಎರಡಡಿಕೆ ।
ಎಲ್ಯಾಡಿ ಬರಲಿಲ್ಲ ಗಂಡ ।
ಎರಡು ಟೆಂಗೀನ ।
ಎಳೆಗಾಯಿ ಸೋಬಾನವೇ ॥
ಎರಡೇನೇ ಟೆಂಗೀನ ।
ಎಳೆಗಾಯಿ ಗಂಗಮ್ಮ ।
ಬಂದಾಳೆ ಗಂಗಮ್ಮ ನಿಮ್ಮಾ ।
ಚಾಜ ಸೋಬಾನವೇ ॥
ಬಂದಾಳೆ ಗಂಗಮ್ಮ ॥
ನಿಮ ಚಾಜ ತಾಗಂಡೇ ।
ತುಂಬಿದ ಕೊಡ ಕೇಲಾ ।
ಕೊಡಗಳಾ ಸೋಬಾನವೇ ॥
ಮೂರೇಲೆ ಮೂರಡಿಕೆ ।
ಮೂರ್‍ಯಾಗಳೆಲೆ ಗಂಡ ।
ಮೂರೇಟೆಂಗಿನ ।

ಎಳೆಗಾಯಿ ಸೋಬಾನವೇ ||
ಮುರೇನೇ ಟೆಂಗೀನ
ಎಳಗಾಯಿ ಗಂಗಮ್ಮ |
ಬಂದಾಳ ಗಂಗಮ್ಮ |
ನಿಮ್ಮ ಚಾಜ ಸೋಬಾನವೇ ||
ಬಂದಾಳೇ ಗಂಗಮ್ಮ |
ನಿಮ ಚಾಜ ತಾಗಂಡ |
ತುಂಬಿದ ಕೊಡ ಕೇಲಾ |
ಕೊಡಗಳಾ ಸೋಬಾನವೇ ||

ನಾಕೇಲೆ ನಾಕಡಿಕೆ |
ನಾಕ್ಯಾ ಬರಲಿಲ್ಲೇ ಗಂಡ |
ನಾಕಾ ಟೆಂಗೀನ ಎಳೆ |
ಗಾಯಿ ಸೋಬಾನವೇ ||
ನಾಕೇನೆ ಟೆಂಗೀನ |
ಎಳೆಗಾಯಿ ಗಂಗಮ್ಮ ||
ಬಂದಳ ಗಂಗಮ್ಮ ನಿಮ್ಮ |
ಚಾಜ ಸೋಬಾನವೇ ||
ಐದೇಲೆ ಐದಡಿಕೆ |
ಐದಾಳೆ ಬರಲಿಲ್ಲ ಗಂಡ |
ಐದ ಟೆಂಗೀನ |
ಎಳೆಗಾಯಿ ಸೋಬಾನವೇ ||
ಐದೇನೆ ಟೆಂಗೀನ |
ಎಳೆಗಾಯಿ ಗಂಗಮ್ಮ |
ಬಂದಳ ಗಂಗಮ್ಮಾ ನಿಮ್ಮ |
ಚಾಜ ಸೋಬಾನವೇ ||
ಬಂದಾಳೆ ಗಂಗಮ್ಮ |
ನಿಮ್ಮ ಚಾಜ ತಾಗಂಡ |
ತುಂಬಿದ ಕೊಡ |
ಕೇಲಾಗಳಾ ಸೋಬಾನವೇ ||

- ಹುಲಿಗೆಮ್ಮ ೬೭, ರತ್ನಮ್ಮ ೬೪, ದುರುಗಮ್ಮ ೬೬, ಹುಚ್ಚಮ್ಮ ೬೦,
ನೆಲ್ಲುಕುದುರೆ-ಗ್ರಾಮ, ಹಗರಿಬೊಮ್ಮನಹಳ್ಳಿ ತಾಲೂಕು

□□□

ವನಿತಮ್ಮನ್ನ ಹೊಳೆಗೆ ಹೊಂಡಿಸುವುದು

ಹಡದಾ ಬರುವಾಗ ಏನೇನು ಸೂಜಿಗಿ
ಕಾಲಾ ಮೇಲಾಗಿ ಎಳೆದಿದ್ದೀ ತಂದಾನಾಃ ... ||
ಕಾಲೇ ಮೇಲಾಗಿ ಎಳೆದಿದ್ದೀ ಏ ದುರಾಗಾ
ಸಾರಿ ಹೋಗ್ಯಾಳಾ ಸಲದುರುಗಿ ತಂದನಾಃ ... ||
ಹಡದವ್ವಾ ಬರುವಾಗಾ ಏನೇನು ಸೋಜಿಗಿ
ಹೊಟ್ಟೆ ಮೇಲಾಗಿ ಎಳೆಬಿದ್ದೀ ತಂದನಾಃ ... ||
ಹೊಟ್ಟೆನೆ ಮೇಲಾಗಿ ಎಳೆಬಿದ್ದೇ ಏ ದುರುಗಾ
ಸಾರಿ ಹೋಗ್ಯಾಳೇ ಸಲದುರಗೀ ... ತಂದನಾಃ ... ||
ಹೂವೇ ಹೊವೆಂದಾರೆ ಹೂವೆಲ್ಲಿ ತರಲವ್ವ
ಹೂವೇ ಉಗಲೂರ ವನುದಾಗಲೇ ತಂದನಾಃ ... ||
ಹೂವೇನೇ ಉಗಲೂರಾ ವನುದಾಗೆ ತಂದೆ ಭರಮಣ್ಣಾ
ಹೂವಿಗೊನವನವಾ ತಿರುಗ್ಯಾನಾ ... ತಂದನಾಃ ... ||
ಕಾಯಿ ಕಾಯೆಂದರೇ ಕಾಯೆಲ್ಲಿ ತರಲವ್ವಾ ||
ಕಾಯೇ ಕವಲೂರ ಬಯಲಾಗೇ ತಂದನಾ ... ||
ಕಾಯೇನೆ ಕವಲೂರಾ ಬಯಲಾಗ ಮಲ್ಲಣ್ಣಾ
ಕಾಯಿಗೊನವನವಾ ತಿರುಗ್ಯಾನಾ ತಂದನಾಃ ... ||
ಹತ್ತೂಪಡಸಲೆ ಕಂಬಾ ಹೊಸ್ತಿಲಿಗೆ ಕರಿಗಲ್ಲೇ
ಹೊತ್ತೇ ನಿಂತಾವೇ ಎರಡಾನೇ ತಂದನಾಃ ||
ಹೊತ್ತೇ ನಿಂತಾವೇ ಎರಡಾನೆ ಈ ಗುಡಿಯಾ
ಮೂಡಿಸಿದೊರೆಂತಾ ಶರಣೆರೆ ತಂದನಾಃ ... ||
ಆರು ಪಡಸಾಲಿ ಕಂಬ ಬಾಗಿಲಿಗೆ ಕರಿಗಲ್ಲೆ
ಏರಿ ನಿಂತಾವೆ ಎರಡಾನೆ ತಂದನಾಃ ||
ಏರೇನೆ ನಿಂತಾವೇ ಎರಡಾನೆ ಈ ಗುಡಿಯಾ

ಕಟ್ಟಿಸಿದೋರೆಂತಾ ಶರಣಾರೇ ತಂದನಾ ... ||
ಬಂಡೇ ಮೇಲೆ ಬಂದಾವೇ ಬಿಳಿಯಾಗಾಜಿನಗಂಬ
ಎಂಬಾಕೊಡು ಲಂಕೇ ಹನುಮಣ್ಣಾ ತಂದನಾ ||
ಎಂಬೋದು ಎಲ್ಲೈತೇ ಎಡಿಯೋವ ಎಲ್ಲೈತೇ
ಹೊಡಿಯವ್ವಾ ಬಂಡಿ ಹೊಳಿಯಾಕೆ ತಂದನಾ ... ||
ಹೊಡಿಯವ್ವ ಏ ಬಂಡೀ ಹೊಳಿಯ ಕಡಿಗೇ ದುರುಗಾ
ನೆರಳಿದ್ದಾ ಬಳ್ಳಿಯಾ ನೆನಿಯವ್ವಾ ತಂದನಾ ... ||
ಬಂಡೇ ಮೇಲೆ ಬಂದಾವಾ ಕನ್ನಡಿ ಗಾಜಿನಗಂಬ
ಎಂಬಾತ ಕೊಡು ಲಂಕೇ ಹನುಮಣ್ಣಾ ತಂದನಾ ... ||
ಎಂಬಾವಕ ಎಲ್ಲೈತೇ ... ಎಡಿಯಾವ ಎಲ್ಲೈತೇ
ಹೊಡಿಯವ್ವಾ ಬಂಡೀ ಹೊಳಿಯಾಕೆ ತಂದನಾ ... ||
ಹೊಡಿಯವ್ವ ಏ ಬಂಡಿ ಹೊಳೆಯಿದ್ದ ಕಡೆಗೇ ದುರುಗಾ
ನೆರಳಿದ್ದಾ ಬಳ್ಳಿಯ ನೆನಿಯವ್ವಾ ತಂದನಾ ... ||
ತಿಪ್ಪೇಮ್ಯಾಗಳ ಕಾಯಿ ನೆತ್ರಾ ತಾರಿದವೇನೇ
ಮತ್ತೇನ ಸೋಜಿಗೆ ಹಡದವ್ವಾ ತಂದನಾ ... ||
ಏನು ಸೋಜಿಗೆಯಿಲ್ಲಾ ಎಂತಾ ಸೋಜಿಗೆಯಲ್ಲಾ
ಸಾರಿ ಹೋಗ್ಯಾಳೆ ಸಲದುರುಗಾ ತಂದನಾ ... ||
ತಿಪ್ಪೇಮ್ಯಾಗಳ ಕಾಗೇ ನೆತ್ರಾ ತೋರಿದವೇನೇ
ಮತ್ತೆನು ಸೋಜಿಗೆ ಹಡದವ್ವಾ ತಂದನಾ ... ||
ಏನು ಸೋಜಿಗೆಯಲ್ಲಾ ಎಂಥಾ ಸೋಜಿಗೆಯಲ್ಲಾ
ಸಾರಿ ಹೋಗ್ಯಾಳೇ ಸಲದುರುಗೀ ತಂದನಾ ... ||
ಬೇಲೀ ಮ್ಯಾಗಳ ಕಾಗೆ ಹಾರಿದವೇನೇ
ಮತ್ತೇನು ಸೋಜಿಗೆ ಹಡದವ್ವಾ ತಂದನಾ ... ||
ಏನು ಸೋಜಿಗೆಯಲ್ಲಾ ಎಂಥಾ ಸೋಜಿಗೆಯಲ್ಲಾ
ಸಾರಿ ಹೋಗ್ಯಾಳೆ ಸಲದುರುಗೀ ತಂದನಾ ... ||
ಕಾರಿಯವನದಗುಲಾ ಬಾರಿಯವನದಗುಲಾ
ಆರೇ ದಿನದವ್ವಾ ಜಳಕಿಲ್ಲಾ ತಂದನಾ ... ||
ಆರೇನೆ ದಿನದವ್ವಾ ಜಳಕಿಲ್ಲ ಏದುರುಗಾ
ಸುಡುಗಾಡಗ ಸೆಂತಿ ನೆರುವ್ಯಾಳೇ ತಂದನಾ ... ||
ಸುಡುಗಾಡಗೇ ಸೆಂತೀ ನೆರುವ್ಯಾಳೇ ಏದುರುಗಾ

ಸುಡುಗಾಡನೆಲ್ಲಾ ಮನೆ ಮಾಡಿ ತಂದನಾ ... ||
ಎಕ್ಕೀಯ ವನದಗುಲಾ ಬೆಕ್ಕೀಯವನದಗುಲಾ
ಹತ್ತೇ ದಿನದವ್ವಾ ಜಳಕಿಲ್ಲಾ ತಂದನಾ ... ||
ಹತ್ತೇನೆದಿನದವ್ವಾ ಜಳಕಿಲ್ಲ ಏದುರುಗಾ
ಜಲಬಂದು ಜನರಾಗಾಬೆದ್ದೇ ತಂದನಾ ... ||
ಜಲಬಂದು ಏ ಜನರಾ ಗಾಬೆದ್ದು ಏದುರುಗಾ
ಜಲಗುಂಟೇ ಜನರು ಸತ್ತಾರೇ ... ತಂದನಾ ... ||
ಜಲಬಂದ ಏ ಜನರೂ ಸತ್ತಾರೆ ಏದುರುಗಾ
ತಂದೆ ರಾಯಣ್ಣಗಾ ಕಡಮಿಲ್ಲಾ ತಂದನಾ ... ||
ತಂದೆ ರಾಯಣ್ಣಗಾ ಕಡಮಿಲ್ಲೆ ಏ ದುರುಗಾ
ಹರದಾರಿಗೆ ದೀಪಾ ಉರಿಸ್ಯಾಳೇ ... ತಂದನಾ ... ||

- ದುರುಗಮ್ಮ ೬೫, ಸುಶೀಲಮ್ಮ ೬೫, ಹುಲಿಗೆಮ್ಮ ೬೭, ಹಾಲಮ್ಮ ೫೫,
ನೆಲ್ಲುಕುದುರೆ ಗ್ರಾಮ, ಹಗರಿಬೊಮ್ಮನಹಳ್ಳಿ ತಾಲೂಕು

□□□

೫. ಛಾಯಾಚಿತ್ರಗಳು



ಕೌಲೆತ್ತಿನ ಕಾಲಡಿ ಮಕ್ಕಳನ್ನು ನುಗ್ಗಿಸುವುದು



ಕೌಲೆತ್ತಿನವರು ಆಡಿಸುವ ರಾಮ ಸೀತೆಯ ಮದುವೆ ಪ್ರಸಂಗ



ಹೋಳಿ ಹಬ್ಬದ ಕಾಮದಹನ ಆಚರಣೆ



ಕೂಡ್ಲಿಗಿಯ ಹೊಸಹಟ್ಟಿ ಗ್ರಾಮದಲ್ಲಿನ ಕೆಂಡ ತೂರುವ ಆಚರಣೆ



ಕಾಲ್ನಡಿಗೆಯಲ್ಲಿ ಹಂಪಿಯಾತ್ರೆ




ಮಣ್ಣೆತ್ತಿನ ಅಮವಾಸ್ಯೆಯಂದು ಮಣ್ಣೆತ್ತನ್ನು ಪೂಜಿಸುವುದು



ಅಮ್ಮನ ಆಚರಣೆಯಲ್ಲಿ ಉರುಳು ಸೇವೆ



ಜೋಕುಮಾರ ಸ್ವಾಮಿ



ಮೊಹರಂ ಆಚರಣೆ



ಬ್ಯಾಟಿಮರದ ಆಚರಣೆಯಲ್ಲಿ ದೈವಕ್ಕೆ ಬಲಿಯಾದ ವ್ಯಕ್ತಿ – ಸಂಡೂರು, ಗಂಡಿನರಸಿಂಹಸ್ವಾಮಿ ಜಾತ್ರೆ



ಸಂಡೂರಿನ ಶ್ರೀ ಗಂಡಿನರಸಿಂಹಸ್ವಾಮಿ ಜಾತ್ರೆ



ಕೂಡ್ಲಿಗಿಯಲ್ಲಿ ಲಕ್ಕವ್ವನ ಜಾತ್ರೆಯಲ್ಲಿ ಗುಳೆ ಹೋಗುವುದು



ಗ್ರಾಮದ ಹೊರವಲಯದಲ್ಲಿ ಸಾಮೂಹಿಕ ಭೋಜನ



ಕಳುವಮ್ಮನ ಆಚರಣೆ – ಬಾಚಿಗೊಂಡನಹಳ್ಳಿ



ಮೈಲಾರಲಿಂಗ ದೈವಕ್ಕೆ ಗೊರವಿಯನ್ನು ಬಿಡುವುದು – ಮೈಲಾರ



ಕೂಡ್ಲಿಗಿಯಲ್ಲಿ ಹೋಳಿಗೆಮ್ಮನ ಆಚರಣೆ



ಗೌರಮ್ಮನಿಗೆ ಆರತಿ ಬೆಳಗುವುದು




ಮಾಳಿಗೆ ಮೇಲೆ ಕೊಂತಿ ಬಸಪ್ಪನ ಆಚರಣೆ – ಹೊಸಯರಗುಡಿ – ಬಳ್ಳಾರಿ



ತೈಲಾಭಿಷೇಕದಿಂದ ಮಸುಕಾದ ಶಿಖರ – ಉಜ್ಜಯನಿ



ಉತ್ಸವದಲ್ಲಿ ಸಾಮೂಹಿಕ ಕೋಲಾಟ



ಮೊಹರಂ ಆಚರಣೆಯಲ್ಲಿ ಆಲಾಯಿ ಕುಣಿಯುವುದು



ಅಮ್ಮನನ್ನು ಕಳುಹಿಸುವುದು – ಹಗರಿಬೊಮ್ಮನಹಳ್ಳಿ




ಹುಗ್ಗಿ ಪೊಡಗದ ಆಚರಣೆ – ಪಾಪಿನಾಯಕನಹಳ್ಳಿ




ದೈವದ ಉತ್ಸವದಲ್ಲಿ ಕಲಾರಾಧನೆ



ಕೂಡ್ಲಿಗಿಯ ಕಾನಾಮಡಗು ಗ್ರಾಮದಲ್ಲಿರುವ ಮಾಸ್ತಿಗಲ್ಲು



ಮೈಲಾರದ ಚಾಟಿ ಗೊರವ



ಸಂಡೂರಿನ ಧರ್ಮಾಪುರದಲ್ಲಿ ಪ್ರತಿಷ್ಠಾಪನೆಗೊಂಡ ಕಾಮಣ್ಣ



ಅಗ್ನಿಕೊಂಡ ಹಾಯುವುದು – ಹಗರಿಬೊಮ್ಮನಹಳ್ಳಿ ತಾಲೂಕು



ಇಲಿ ಪೂಜೆ



ಮುಳ್ಳುಗದ್ದುಗೆ ಉತ್ಸವದಲ್ಲಿನ ತೇಜಮ್ಮ – ಹಿರೇಹಡಗಲಿ



ಹೂವಿನ ರಥೋತ್ಸವ ಚೇಡಲಗುರ್ಕಿ



ಗೌರಿ ಆಚರಣೆ



ಮಳ್ಳುಗದ್ದುಗೆ ಉತ್ಸವ – ಹಿರೇಹಡಗಲಿ



ಬಳ್ಳಾರಿ ದುರುಗಮ್ಮನ ಸಿಡಿ ಉತ್ಸವ



ಹಂಪಿಯಲ್ಲಿ ವಿದೇಶಿಯರ ಹೋಳಿ ಆಚರಣೆ



ಜಾನುವಾರುಗಳೊಂದಿಗೆ ಹಂಪಿಯಾತ್ರೆ